START

START

START

START

START

MICRO FILMED
BY
KARNATAKA STATE
ARCHIVES
1991

MICRO FILMED
BY
KARNATAKA STATE
ARCHIVES
1991

ARS 15 APP 90

ಜೀವನ ಶಿಕ್ಷಣ - ಕನ್ನಡ ಪ್ರಾಥಮಿಕ ಶಿಕ್ಷಣ - 1952-53 ರ ಸಂಚಿಕೆ ಮುಂದುವರಿಸಲಾಗಿದೆ.

- - - -

ARS 15 APP 90

ಜೀವನ ಶಿಕ್ಷಣ - ಕನ್ನಡ ಪ್ರಾಥಮಿಕ ಶಿಕ್ಷಣ - 1952 -53 ರ ಸಂಚಿಕೆ ಮುಂದುವರಿಸ- -ಲಾಗಿದೆ.

- - - -

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಮ. ಗು. ಹಂದ್ರಾಳ

ವಾ. ವ. ೪ ರೂ. ★ ಬಿಡಿ ಪ್ರತಿ ೬ ಆ.

ಜನೇವರಿ ೧೯೬೨

ಹೊಸ ಪುಸ್ತಕವು! ತಯಾರಾಗಿ ಬಂದಿದೆ! ತ್ವರೆ ಮಾಡಿರಿ!

—ಕನ್ನಡ ಕನ್ನಡ ಶಬ್ದಕೋಶ—

ಬರೆಹಗಾರರು:—H. V. ರಮಾಕಾಂತರಾವ್. B. A. (Hons).

ಬೆಲೆ:—ಆರು ರೂಪಾಯಿಗಳು ಮಾತ್ರ.

ಈ ಪುಸ್ತಕದಲ್ಲಿ ೩೫ ಸಾವಿರ ಶಬ್ದಗಳ ಸಂಗ್ರಹವು, ಒಂದುವರೆಲಕ್ಷ ಅರ್ಥ ವಿವರಣೆಯೊಳಗೊಂ ತಯಾರಾಗಿದೆ. ಮಂಗಳೂರಿನ ಅಂದವಾದ ಮುದ್ರಣದ ೭೭೫ ಪುಟಗಳ ಈ ಪುಸ್ತಕವು ಮೇಲ್ತರ ಕೋಶ ಗ್ರಂಥವಾಗಿದೆ. ಇದರಷ್ಟು ದೊಡ್ಡ ಕೋಶಗ್ರಂಥವು ಇನ್ನೊಂದಿಲ್ಲವೆಂದರೂ ಅತಿಶಯೋಕ್ತಿ ಯಾಗಲಾರದು. V. P. ಯಿಂದ ಬೇಡುವವರು ೧ ಹಣವನ್ನು ಮುಂಗಡ ಕಳಿಸಬೇಕು.

ಇದಲ್ಲದೆ ನಮ್ಮಲ್ಲಿ ಶಾಲೋಪಯೋಗದ ಎಲ್ಲ ಬಗೆಯ ಪುಸ್ತಕಗಳು,
ಕಥೆಯ ಪುಸ್ತಕಗಳು, ಶಾಲೆಯ-ಹಾಜರಿ ಪುಸ್ತಕಗಳು ಸಿಗುತ್ತವೆ.

ಪ್ರಕಾಶಕರು:— ಕೇ. ಎಸ್. ಕುಲಕರ್ಣಿ ಬುಕ್‌ಡಿಪ್ಪೋ
ಸ್ಟೇಶನ್‌ರೋಡ್, ಹುಬ್ಬಳ್ಳಿ.

ಪುಟ ೨೮೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು:— ಶ್ರೀ. ವಾ. ಗು. ಹಂದ್ರಾಳ, ಬಿ. ಎ. (ಆನರ್ಸ), ಬಿ. ಟಿ.
(ಪ್ರಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ **ಶಿಕ್ಷಣ**ಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ, ಕೈಗನ್ನಡಿ ಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪ್ಪೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ



ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ವ್ಹಿ. ಚಿಕ್ಕರಮಣಿ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ) ಬಿ. ಟಿ., ಡಿ. ಪಿ. ಇಡಿ;
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀ. ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೬೩ | ಜನೇವರಿ ೧೯೫೩ | ಸಂಚಿಕೆ ೮

ಅ. ನಂ. ವಿಷಯ

ಪರಿವಿಡಿ

ಪುಟ

ಸಂಪಾದಕೀಯ ೩
ಮಕ್ಕಳ ಶಿಕ್ಷಣ ಮನೆಯಲ್ಲಿ ಅಲ್ಲವೆ? .... ಶ್ರೀ. ತಟ್ಟಿ ಶ್ಯಾಮರಾಯರು ೫
ಜನರಲ್ ಕೆ. ಎಂ. ಕರಿಯಪ್ಪನವರು .... ಶ್ರೀ. ಶಿಂತ್ರಿ ಬಸಪ್ಪನವರು ೮
ಅಮೇರಿಕೆಯಲ್ಲಿಯ ಶಿಕ್ಷಣವು .... ಶ್ರೀ. ಎಸ್. ವ್ಹಿ. ಹಂಜಿ ... ೧೦
ಗ್ರಾಮ ಸಂಪರ್ಕ .... ಶ್ರೀ. ಆಯ್. ಎಸ್. ಬಿದರಿ ೧೩
ಶಿಕ್ಷಕರ ಹೊಣೆ .... ಸಂಗ್ರಾಹಕರು:—ಶ್ರೀ. ರಾ. ರು. ಕುಪ್ಪಸದ ೧೫
ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ ...., ... ೨೦—೨೪
ಜಿಲ್ಲಾ ಸ್ಕೂಲಬೋರ್ಡ ಧಾರವಾಡ, ಪ್ರಾ. ಪ್ರ. ಪರೀಕ್ಷೆ ಪಾರಿತೋಷಕ ವಿತರಣ ಸಮಾರಂಭ ೧೬
ಪುಸ್ತಕ ನಿಮರ್ಶೆ—೧೮ ಪ್ರಾಥಮಿಕ ಶಿಕ್ಷಕರ ಪ್ರ. ಪ. ಪರೀಕ್ಷೆಯಲ್ಲಿ ಇನಾಮುಗಳನ್ನು ಪಡೆದ
ಶಿಕ್ಷಕ ವಿದ್ಯಾರ್ಥಿಗಳ ಹೆಸರು—೧೯

ಮುಖಪೃಷ್ಠದ ಹಡಿಯಚ್ಚು:- ಟ್ರೇನಿಂಗ ಕಾಲೇಜದ ಶಿಕ್ಷಕ ವಿದ್ಯಾರ್ಥಿಗಳ ಸಾಮಾಜಿಕ ಚಟುವಟಿಕೆಗಳ ದೃಶ್ಯಗಳು.

ಸಂಪಾದಕೀಯ

ಕಣ್ಮರೆಯಾದ ೧೯೫೨ :

ಅವಿರತವಾದ ಕಾಲಚಕ್ರದ ಉರುಳಾಟದ ವಂಪ್ರದಲ್ಲಿ ಸಿಕ್ಕು ಕ್ರಿಸ್ತಶಕದ ೧೯೫೨ನೆಯ ವರುಷವು ವಿಶ್ವವಿತರಣದಲ್ಲಿ ವಿಲೀನವಾಗಿ ಹೋಯಿತು; ''ನೂರ್ಕೋಟಿ ನಿನ್ನೆಗಳ ಜೊತೆಗೆ'' ಪವಣಿಸಲ್ಪಟ್ಟಿತು. ಆದರೇನು? ಅನಾದಿಯಿಂದ ಅನಂತದವರೆಗೆ ಸಾಗಿದ ಕಾಲಪುರುಷನ ಮುಗಿಯದ ಹೆದ್ದಾರಿಯಲ್ಲಿ ತನ್ನದೇ ಆದ ಹೆಜ್ಜೆಯನ್ನು ಮೂಡಿಸಿದೆ. ವರುಷವು ವಿಲೀನವಾದರೂ ಈ ಹೆಜ್ಜೆಯ ಗುರುತುಗಳು ಮಾತ್ರ ವಿಶ್ವದಲ್ಲಿ ಮಸಮಸಕಾಗಿಯಾದರೂ ಉಳಿಯುವದರಲ್ಲಿ ಸಂದೇಹವಿಲ್ಲ. ಸ್ವಾತಂತ್ರ್ಯದನಂತರದ ಈ ಐದನೆಯ ವರ್ಷದಲ್ಲಿ ಭಾರತವು ಪ್ರೌಢ ಮತದಾನ ಪದ್ಧತಿಯಿಂದ ಚುನಾಯಿತರಾದ ಪ್ರತಿನಿಧಿಗಳಿಂದ ರಾಜ್ಯ ಹಾಗೂ ಕೇಂದ್ರ ಶಾಸನ ಸಭೆಗಳನ್ನೂ ಮಂತ್ರಿಮಂಡಳಗಳನ್ನೂ ನಿರ್ಮಿಸಿಕೊಂಡು ನಿಜವಾದ ಲೋಕರಾಜ್ಯವಾಗಿ ತನ್ನ ಬಹುಮುಖ ಉನ್ನತಿಯನ್ನು ಮಾಡಿಕೊಳ್ಳುವ ಮಾರ್ಗದ ಮುನ್ನಡೆಯಲ್ಲಿ ಸಾಗಿತು. ಇತರ ಕ್ಷೇತ್ರಗಳಲ್ಲಿಯಂತೆ ಶಿಕ್ಷಣಕ್ಷೇತ್ರದಲ್ಲಿಯೂ ಸುಧಾರಣೆಗಳಾಗಬೇಕೆಂಬ ಯೋಜನೆಯೂ ನಡೆಯಿತು. ಅಲ್ಲಲ್ಲಿ ಶಿಕ್ಷಣ ತಜ್ಞರು ಕೂಡಿ ಶಿಕ್ಷಣದಲ್ಲಿ ಮಾಡಬೇಕಾದ ಮಾರ್ಪಾಟುಗಳನ್ನು ಕುರಿತು ಚರ್ಚಿಸಿದ್ದೂ ಕಂಡು ಬರುತ್ತದೆ. ಇಂತು ೧೯೫೨ ಕಣ್ಮರೆಯಾಯಿತು; ಕ್ಷಿತಿಜದಾಚೆಗೆ ಸರಿಯಿತು.

ದೃಗ್ಗೋಚರವಾಗಿರುವ ೧೯೫೩ :

ಹಳೆಯದು ಹೋಗಿ ಹೊಸತು ಬರುವ ನಿಸರ್ಗ ನಿಯಮದಂತೆ ೧೯೫೩ನೆಯ ವರ್ಷವು ಪ್ರಪಂಚದಲ್ಲಿ ಇದೀಗ ಕಾಲಿಟ್ಟಿದೆ. ''ವರುಷ ಹೋಯಿತು;'' ಆದರೆ "ವರುಷ ಬಂದಿತು" ಎಂಬ ಸ್ಮೃತಿ ಉಳಿಯಬೇಕಾದರೆ ೧೯೫೩ನೆಯ ವರ್ಷವು ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿ ಸುಖಶಾಂತಿಯನ್ನು ಹೆಚ್ಚಾಗಿ ನೆಲೆಸುವ ದಿನಗಳನ್ನು ತರುವಂತಾಗಬೇಕು. ಈ ಸಂಧಿಸಮಯದಲ್ಲಿ, ಕ್ರಿಸ್‌ಮಸ್‌ದ ಸಂದೇಶವನ್ನು ಕೊಡುತ್ತ ಹನ್ನೆರಡನೆಯ ಪೋಪರು 'ದಲಿತೋದ್ಧಾರ ಮೊದಲಾಗಬೇಕು: ದೀನ-ದರಿದ್ರರಿಗೆ ಸಹಾಯ ಸಲ್ಲಿಸಬೇಕೆ'ಂದು ಹೇಳಿದ್ದು ಗಮನಾರ್ಹವಿದೆ. 'ಯಂತ್ರ ಯುಗದ ಪ್ರಭಾವದಿಂದ ಯಾಂತ್ರಿಕ ಸಮಾಜವೂ, ಯಾಂತ್ರಿಕ ಸಂಸ್ಕೃತಿಯೂ' ನಿರ್ಮಿತವಾಗದಂತೆ ನೋಡಿಕೊಂಡು, 'ಸಮಾಜದ ಭೋಗಸಾಧನದ ವಸ್ತುವು' ತಾನಾಗದೆ ಮಾನವನು ತನ್ನ ಚೇತನ, ವರ್ಚಸ್ಸು, ವ್ಯಕ್ತಿತ್ವ ಇವುಗಳ ವಿಕಸನ ಮಾಡಿಕೊಂಡು ತನ್ಮೂಲಕ ರಾಷ್ಟ್ರದ ಉನ್ನತಿಯನ್ನೂ, ಘನತೆಯನ್ನೂ ಸಾಧಿಸುವಂತಾಗಲಿ. ಹೀಗೆ ತನ್ನ ಹಾಗೂ ಸುತ್ತಲಿನ ಸಮಾಜದ ಮತ್ತು ರಾಷ್ಟ್ರದ ಸಂಸ್ಕೃತಿಯ ವಿಕಸನವಾಗಬೇಕಾದರೆ ಪ್ರತಿಯೊಬ್ಬನೂ ಶಿಕ್ಷಣವನ್ನು ಪಡೆಯಬೇಕು; ರಾಷ್ಟ್ರೀಯ ಶಿಕ್ಷಣವು ಕ್ರಮವಾಗಿ ಎಲ್ಲೆಡೆಗೆ ವ್ಯಾಪಿಸಿ ನಾಡಿನ ಜನತೆಯನ್ನು ಹೆಚ್ಚಿಸುವಂತಾಗಲಿ. ಕ್ರಿ. ಶ. ೧೯೫೩ನೆಯ ವರುಷವು ಈ ದಿಶೆ

ಯಲ್ಲಿ ಮುನ್ನಡೆಯುವದೆಂದು ಆಶಿಸಿ ಅದಕ್ಕೆ 'ಪ್ರಾಥಮಿಕ ಶಿಕ್ಷಣ'ವು ಹಾರ್ದಿಕ ಸ್ವಾಗತವನ್ನು ಕೋರುತ್ತದೆ. ತನ್ನ ಬಾಳ ಬಟ್ಟೆಯು ಎಂದಿನಂತೆ ಸುಲಭವಾದ ಸುಮಾರ್ಗವಾಗಿ ಉಳಿಯಲೆಂದೂ ಅಪೇಕ್ಷಿಸುತ್ತದೆ. ತನ್ನ ಎಲ್ಲ ಹಿತಚಿಂತಕರಿಗೆ ಚಂದಾದಾರರಿಗೆ ಹಾಗೂ ಶಿಕ್ಷಣಾಭಿಮಾನಿಗಳಿಗೆ ಹೊಸ ವರುಷವು ಹರುಷದಾಯಕವಾಗಲೆಂದು ಹಾರೈಸುತ್ತದೆ.

ಯುನೆಸ್ಕೊ ಪ್ರಾದೇಶಿಕ ಪರಿಷತ್ತು :

೧೯೫೨ನೆಯ ಡಿಸೆಂಬರ ೧೨ನೆಯ ದಿನಾಂಕದಿಂದ ಹನ್ನೆರಡು ದಿನಗಳವರೆಗೆ ಮುಂಬಯಿಯಲ್ಲಿ ಯುನೆಸ್ಕೋದ, ದಕ್ಷಿಣ ಏಶಿಯಾ ಹಾಗೂ ಪ್ಯಾಸಿಫಿಕ್ ರಾಷ್ಟ್ರಗಳಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಸಮ್ಮೇಲನವು ನಡೆಯಿತು. ಈ ಸಮ್ಮೇಲನಕ್ಕೆ ದಕ್ಷಿಣ ಏಶಿಯಾ ಹಾಗೂ ಪ್ಯಾಸಿಫಿಕ್‌ಗಳಲ್ಲಿಯ ೧೪ ಸ್ವತಂತ್ರ ರಾಷ್ಟ್ರಗಳ ಪ್ರತಿನಿಧಿಗಳು ಹಾಗೂ ಇಂಗ್ಲಂಡ, ಪ್ರಾನ್ಸ, ಅಮೇರಿಕೆ ಹಾಗೂ ನೆದರಲಂಡ್ಸ ಆಡಳಿತ ತಂತ್ರಕ್ಕೊಳಗಾದ ನಾಲ್ಕು ದೇಶಗಳ ಪ್ರತಿನಿಧಿಗಳು ಬಂದಿದ್ದರು. ಈ ಸಮ್ಮೇಲನದ ಉದ್ಘಾಟಕರಾದ ಮುಂಬಯಿ ರಾಜ್ಯಪಾಲರಾದ ಶ್ರೀ ಗಿರಿಜಾ ಶಂಕರ ವಾಜಪೇಯರವರು ನಮ್ಮ ದೇಶದಲ್ಲಿ ಒತ್ತಾಯ ಶಿಕ್ಷಣವು ೬ರಿಂದ ೧೧ ವಯಸ್ಸಿನ ಮಕ್ಕಳಿಗೆ ಅನ್ವಯಿಸಿ ಅಮಲಿನಲ್ಲಿ ಬಂದದ್ದಾದರೆ ೮ ಕೋಟಿ ೪೦ ಲಕ್ಷ ಬಾಲಕರು ಇದರ ಕಕ್ಷೆಯಲ್ಲಿ ಬರುವರೆಂದೂ ಪ್ರತಿವರ್ಷ ೩೬೬ ಕೋಟಿ ರೂಪಾಯಿ ವೆಚ್ಚವು ತಗಲುವದೆಂದೂ ಹೇಳಿ ಸಮಸ್ಯೆಯ ಬೃಹದಾಕಾರವನ್ನು ಸೂಚಿಸಿದರು. ಸುಮಾರು ನೂರಕ್ಕೆ ೬೦ರಷ್ಟು ಬಾಲಕರು ೪ನೆಯ ಇಯತ್ತೆಯ ನಂತರ ಶಿಕ್ಷಣವನ್ನು ಮುಂದುವರಿಸುವದಿಲ್ಲ. ಇದಕ್ಕೆ ಮನೆತನದ ಹೀನ ಆರ್ಥಿಕ ಸ್ಥಿತಿಯೇ ಕಾರಣ. ಭಾರತ ದೇಶದ ಪ್ರತಿನಿಧಿ ಹಾಗೂ ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ದಿನಕರರಾವ ದೇಸಾಯಿ ಅವರು ರಾಜ್ಯ ಘಟನೆಯಲ್ಲಿ ಕಡ್ಡಾಯ ಶಿಕ್ಷಣಕ್ಕೆ ಕೊಟ್ಟ ಮಹತ್ವವನ್ನೂ, ಮುಂಬಯಿ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣದಿಂದಾದ ಪ್ರಗತಿಯನ್ನು ವಿವರಿಸಿದರು. ೧೯೪೭–೪೮ರಲ್ಲಿ ೨೧ಲಕ್ಷ ಇದ್ದ ವಿದ್ಯಾರ್ಥಿಗಳ ಸಂಖ್ಯೆ ೧೯೫೧-೫೨ ರಲ್ಲಿ ೩೫ ಲಕ್ಷಕ್ಕೇರಿತು ಮತ್ತು ರಾಜ್ಯದ ವೆಚ್ಚವು ೩॥ ಕೋಟಿಯಿಂದ ೭ ಕೋಟಿಗೇರಿತು. ಒತ್ತಾಯ ಶಿಕ್ಷಣದ ಜೊತೆಗೆ ಮೂಲ ಶಿಕ್ಷಣಕ್ಕೂ ಮಹತ್ವಕೊಟ್ಟದ್ದನ್ನು ವಿವರಿಸಿದರು. ಈ ಪರಿಷತ್ತನ್ನು ಜರುಗಿಸಿ ಯುನೆಸ್ಕೊ ಸಮಿತಿಯು ದಕ್ಷಿಣ ಏಸಿಯಾ ಹಾಗೂ ಪಾಸಿಫಿಕ್ ರಾಷ್ಟ್ರಗಳಲ್ಲಿ ಶಿಕ್ಷಣ ಪ್ರಸಾರದ ವಿಷಯವನ್ನು ಕುರಿತು ಚರ್ಚಿಸಿ ಕೆಲವು ನಿರ್ಣಯಗಳಿಗೆ ಬಂದು ಈ ರಾಷ್ಟ್ರಗಳಲ್ಲಿ ಶಿಕ್ಷಣ ಪ್ರಸಾರಕ್ಕೆ ಮಾರ್ಗದರ್ಶನ ಮಾಡಿದ್ದು ಸಂತಸದ ಸಂಗತಿಯೆಂದು ಹೇಳದಿರೆವು.

ಸಮಾಜ ಶಿಕ್ಷಣ ಕಾರ್ಯಕರ್ತರಿಗೆ ಯೋಗ್ಯತೆಯ ಪ್ರಮಾಣ ಪತ್ರಗಳು

ಸಮಾಜ ಶಿಕ್ಷಣ ಕಾರ್ಯಕರ್ತರು ಎರಡು ಬಗೆಯವರಿರುತ್ತಾರೆ. ಒಂದನೆಯ ಪ್ರಕಾರದವರು ಗೌರವ ಕಾರ್ಯಕರ್ತರಿದ್ದು ಸಮಾಜ ಶಿಕ್ಷಣ ಕಾರ್ಯವನ್ನು ಸಾಮಾಜಿಕ ಸೇವೆಯೆಂಬ ಭಾವನೆಯಿಂದ, ಸ್ವಾರ್ಥತ್ಯಾಗಿಗಳಾಗಿ ಆರ್ಥಿಕ ಸಹಾಯವನ್ನು ಅಪೇಕ್ಷಿಸದೆ ಮಾಡುವರು. ಅವರು ತಾವು ಮಾಡಿದ ಸಮಾಜ ಶಿಕ್ಷಣದ ಸಲುವಾಗಿ ಹಣ ಇಚ್ಛಿಸುವದಿಲ್ಲ; ನಿರಪೇಕ್ಷೆಯಿಂದ ಇವರು ಕಾರ್ಯ ಮಾಡುವರು. ತಮಗೆ ಸಾಧ್ಯವಿದ್ದಷ್ಟು ದೇಶ ಸೇವೆ ಮಾಡಿದ ತೃಪ್ತಿಯೇ ತಮಗೆ ದೊರೆತ ಪ್ರತಿಫಲವೆಂದು ಇವರು ಭಾವಿಸುವರು. ಹಣ ಪಡೆದು ದುಡಿಯುತಕ್ಕ ಕಾರ್ಯಕರ್ತರು ಎರಡನೆಯ ಪ್ರಕಾರದವರು. ತಾವು ಕಲಿಸಿ ಸಾಕ್ಷರರನ್ನಾಗಿ ಮಾಡಿದ ಪ್ರಬುದ್ಧರ ಸಂಖ್ಯೆಯನ್ನು ಗಮನಿಸಿ ಸರಕಾರೀ ನಿಯಮದಂತೆ ನಿಗತವಾದ ಸಹಾಯಧನವನ್ನು ಈ ಎರಡನೆಯ ಪ್ರಕಾರದ ಕಾರ್ಯಕರ್ತರು ಪಡೆಯುವರು. ಸಮಾಜ ಶಿಕ್ಷಣವನ್ನು ಹೆಚ್ಚು ಪ್ರಸಾರಗೊಳಿಸುವ ಉದ್ದಿಶ್ಯದಿಂದ ಮತ್ತು ಈ ಎರಡು ಪ್ರಕಾರದ ಕಾರ್ಯಕರ್ತರ ಸೇವೆಯನ್ನು ಶ್ಲಾಘಿಸುವ ವಿಚಾರದಿಂದ ಸರಕಾರದವರು ಈ

ಕಾರ್ಯಕರ್ತರಿಗೆ ಯೋಗ್ಯತೆಯ ಪ್ರಮಾಣ ಪತ್ರಗಳನ್ನು ಕೊಡುವ **ಯೋಜನೆ ಮಾಡಿದ್ದಾರೆ.** **ಇಲ್ಲಿಯವರೆಗೆ** ಗೌರವ ಕಾರ್ಯಕರ್ತರು ೨೫ ನಿರಕ್ಷರಿ ಪ್ರೌಢರನ್ನು **ಸಾಕ್ಷರರನ್ನಾಗಿ ಮಾಡಿದರೆ ಈ ಯೋಗ್ಯತಾ** ಪ್ರಮಾಣ ಪತ್ರಗಳಿಗೆ ಅರ್ಹರಾಗುತ್ತಿದ್ದರು; ಸಹಾಯ ಧನ ಪಡೆದು **ದುಡಿಯತಕ್ಕ ಕಾರ್ಯಕರ್ತರು ಈ ಸರ್ಟಿ**ಫಿಕೇಟನ್ನು ಪಡೆಯಬೇಕಾದರೆ ೧೦೦ ನಿರಕ್ಷರಿಗಳನ್ನು ಸಾಕ್ಷರರನ್ನಾಗಿ **ಮಾಡಬೇಕಾಗುತ್ತಿತ್ತು.** ಆದರೆ ಈಗ ಸರಕಾರದವರು ಅರ್ಹತೆಗೆ ಬೇಕಾಗುವ ಸಾಕ್ಷರರ ಸಂಖ್ಯೆಯನ್ನು ಕಳಗಿಳಿಸಿದ್ದಾರೆ. ಇನ್ನು ಮುಂದೆ ಗೌರವ ಕಾರ್ಯಕರ್ತರು ೧೫ ನಿರಕ್ಷರಿಗಳನ್ನು ಸಾಕ್ಷರರನ್ನಾಗಿ ಮಾಡಿದರೆ, ಮತ್ತು ಧನಸಹಾಯ ಪಡೆಯುವ ಕಾರ್ಯಕರ್ತನು ೫೦ ನಿರಕ್ಷರಿಗಳನ್ನು ಸಾಕ್ಷರರನ್ನಾಗಿ ಮಾಡಿದರೆ ಈ **ಯೋಗ್ಯತಾ** ಪ್ರಮಾಣ ಪತ್ರಕ್ಕೆ ಅರ್ಹರಾಗುವರು.

ಸಮಾಜ ಶಿಕ್ಷಣಕ್ಕೂ ಪ್ರಾಥಮಿಕ ಶಿಕ್ಷಣಕ್ಕೂ ನಿಕಟ ಸಂಬಂಧವಿದೆ. ಸುಶಿಕ್ಷಿತ ತಂದೆ-ತಾಯಂದಿರು ತಮ್ಮ ಮಕ್ಕಳನ್ನು ಸಾಲೆಗೆ ತಪ್ಪದೆ ಕಳಿಸಿ ಸಾಲೆಯೊಡನೆ ಸಹಕರಿಸುವರೆಂಬುದೂ ಮತ್ತು ಹಳ್ಳಿಯ ಸಾಲೆಗಳ ಹಾಜರಿ ಸಮಸ್ಯೆಯನ್ನು ಬಿಡಿಸುವರೆಂಬುದೂ ನಿರ್ವಿವಾದ ಮಾತಾಗಿದೆ. **ಹಳ್ಳಿಗಳಲ್ಲಿ ಸಮಾಜ ಶಿಕ್ಷಣ ಕೇಂದ್ರ**ಗಳನ್ನು ಸಾಂಘಿಕ ಸಹಕಾರಿ ಯತ್ನವೆಂದು ಶಿಕ್ಷಕರೂ ವಿದ್ಯಾರ್ಥಿಗಳೂ **ಕೂಡಿಯೇ ನಡೆಸುವದು ಉಚಿತವೆಂದು** ಸೂಚಿಸಲಾಗಿದೆ. ಹೀಗೆ ಸಾಲೆಯ ಸಾಮುದಾಯಿಕ ಸಹಕಾರೀ ಯತ್ನದಿಂದ **ಪ್ರಾರಂಭಿಸಲ್ಪಟ್ಟಿರುವ ಇಂತಹ** ಸಮಾಜ ಶಿಕ್ಷಣ ಕೇಂದ್ರಗಳಿಗೆ ಹಳ್ಳಿಗರಿಂದ ದೊರೆತ ಪ್ರತಿಕ್ರಿಯೆಯು ಒಳ್ಳೆಯ **ಉತ್ತೇಜನಕರವೂ, ಪ್ರೋತ್ಸಾ**ಹಯುತವೂ ಆಗಿರುವದೆಂದು ತಿಳಿದುಬಂದಿದೆಯೆಂಬುದು ಸಂತೋಷದ **ಸಂಗತಿ. ಇಂತಹ ಕೇಂದ್ರಗಳಲ್ಲಿ ಶಿಕ್ಷಕರು** ಮತ್ತು ವಿದ್ಯಾರ್ಥಿಗಳು ಸರತಿಯಂತೆ ಕೆಲಸ ಮಾಡುವರು. **ಸಾಲೆಯಲ್ಲಿರುವ ಕಲಿಸುವ ಸಾಧನೆ ಸಲಕರಣೆಗಳು ಆ** ಹಳ್ಳಿಯ ಪ್ರಬುದ್ಧ ಶಿಕ್ಷಣಕ್ಕಾಗಿ ಉಪಯೋಗಿಸಲ್ಪಡುವವು. **ಈ ರೀತಿಯಾಗಿ ಸಾಲೆಯು** ಸಾಮಾಜಿಕ ಕೇಂದ್ರವಾಗುವದು. ಆದ್ದರಿಂದ ಇಂತಹ ಕೇಂದ್ರಗಳು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಪ್ರಾರಂಭವಾಗುವವೆಂದು ಆಶಿಸುತ್ತೇವೆ.

—ಪ್ರಧಾನ ಸಂಪಾದಕ

ಕಣ್ಣೀರು

ದಿನಾಂಕ ೧೫-೧೨-೧೯೫೨ ರಂದು ಆಂಧ್ರ ಪ್ರಾಂತದ ಶ್ರೇಷ್ಠ **ಧುರೀಣರೂ,** ಗಾಂಧೀಜಿಯ ಅಚ್ಚುಮೆಚ್ಚಿನ ಅನುಯಾಯಿಗಳು ರಾಷ್ಟ್ರದ ಸ್ವಾತಂತ್ರ್ಯ **ಸಮರದಲ್ಲಿ** ತ್ಯಾಗ ಜೀವಿಯಾಗಿ ದುಡಿದವರೂ, ಅಚಲವಾದ ಮನೋನಿರ್ಧಾರವುಳ್ಳವರೂ, **ಅಜಿಂಕ್ಯವಾದ** ಧೈರ್ಯವುಳ್ಳವರೂ ಆದ ಶ್ರೀ. ಪೊಟ್ಟಿ ಶ್ರೀರಾಮುಲು ಅವರು ಪ್ರತ್ಯೇಕ **ಆಂಧ್ರಪ್ರಾಂತ** ರಚನೆಗಾಗಿ ೫೮ ದಿನಗಳವರೆಗೆ ಅನಶನ ವ್ರತವನ್ನು ಆಚರಿಸಿ ನಿಧನ ಹೊಂದಿದ **ಸಂಗತಿಯು ಭಾರತೀಯರೆಲ್ಲ**ರಿಗೆ ಅಪಾರವಾದ ದುಃಖವನ್ನುಂಟು ಮಾಡಿದೆ. ಶ್ರೀರಾಮುಲು **ಅವರು ದೇಶಕಾರ್ಯಕ್ಕಾಗಿ** ಸಾಬರಮತಿಯಲ್ಲಿಯ ಸತ್ಯಾಗ್ರಹ ಆಶ್ರಮವನ್ನು ಸೇರಿ ಗಾಂಧೀಜಿಯವರ **ನಾಯಕತ್ವದಲ್ಲಿ** ರಾಷ್ಟ್ರದ ಬಂಧವಿಮೋಚನೆಯ ಕಾರ್ಯದಲ್ಲಿ ದುಡಿದರು. ೧೯೩೦ **ರಲ್ಲಿ ದಾಂಡಿಯ ಯಾತ್ರೆ**ಯಲ್ಲಿ ಮತ್ತು ೧೯೩೪ ರಲ್ಲಿ ಬಿಹಾರದಲ್ಲಿ ಭೂಕಂಪದಿಂದ ಬಳಲಿದ **ಸಂತ್ರಸ್ತರ ಸಂಕಟ** ನಿವಾರಣೆಯ ಕಾರ್ಯದಲ್ಲಿ ಭಾಗವಹಿಸಿದ್ದರು. ಇವರ ಮರಣದಿಂದ **ದೇಶವು ಓರ್ವ** ಉಜ್ವಲ ಸತ್ಯಾಗ್ರಹಿಯನ್ನು ಕಳೆದುಕೊಂಡಂತಾಗಿದೆ. ಮೃತರ ಆತ್ಮಕ್ಕೆ **ದೇವರು ಚಿರಶಾಂತಿಯನ್ನು** ದಯಪಾಲಿಸಲಿ.

ಮಕ್ಕಳ ಶಿಕ್ಷಣ ಮನೆಯಲ್ಲಿ ಅಲ್ಲವೇ ?

ಲೇ: ತಟ್ಟಿ ಶ್ಯಾಮರಾಯರು.
ನಿವೃತ್ತ ಪ್ರಿನ್ಸಿಪಾಲರು, ಧಾರವಾಡ

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ಹೊಸ ಆದರ್ಶಗಳನ್ನು ಹುಟ್ಟಿಸುವ ಪ್ರಯತ್ನಕ್ಕಿಂತಲೂ ಇದ್ದುದನ್ನು ಸಂರಕ್ಷಣೆ ಮಾಡುವ ಬುದ್ಧಿಯು ಸದ್ಯಕ್ಕೆ ಮಾನವನಲ್ಲಿ ಹೆಚ್ಚು ಬಲವತ್ತರವಾಗಿದೆ. ಆದರೆ ಅಂತಹ ಪ್ರಯತ್ನವು ಬಹು ಮೂಲ್ಯವಾದದ್ದು. ಎಲ್ಲರೂ ಮಾಡುವದನ್ನೇ ನೀನು ಮಾಡು ಎಂದು ಮಾತ್ರ ಪಾಲಕರು ಮಗುವಿಗೆ ಸರ್ವಥಾ ಹೇಳಿಕೊಡಬಾರದು. ತುಳಿದ ಹಾದಿಯನ್ನು ಬಿಟ್ಟು ಮಗುವಿನಲ್ಲಿ ಸ್ವಲ್ಪ ಆಚೆ ಹೋಗುವ ಪ್ರವೃತ್ತಿಗಳನ್ನು ಕಂಡಾಗ ಪಾಲಕ, ಶಿಕ್ಷಕರಿಗೆ ಆನಂದವಾಗಬೇಕು. ಪರರ ಅಭಿಪ್ರಾಯವನ್ನೇ ಸದಾ ಅಳತೆಗೋಲೆಂದು ಹಿಡಿಯುವದರಿಂದ ನಮ್ಮನ್ನು ನಾವು ಇನ್ನೊಬ್ಬರ ಇಚ್ಛೆಗೆ ಅಧೀನಗೊಳಿಸಿದಂತಾಗುತ್ತದೆ. ಇಂಗ್ಲಂಡದ ಜನರು ಇನ್ನೆಷ್ಟೋ ದೇಶಗಳ ಜನರಿಗಿಂತಲೂ ಹೆಚ್ಚಿನ ರಾಜಕೀಯ ಹಾಗು ಸಾಮಾಜಿಕ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವದಕ್ಕೆ ಕಾರಣವೇನು ? ಕಾಯಿದೆಯ ಅರ್ಥದ ಸ್ವಾತಂತ್ರ್ಯಕ್ಕಿಂತ ವ್ಯಕ್ತಿ ಸ್ವಾತಂತ್ರ್ಯದ ಭಾವನೆಯು ಅವರಲ್ಲಿ ಬಹು ತೀವ್ರವಾಗಿದೆ. ಅದಕ್ಕನುಗುಣವಾಗಿ ಅಲ್ಲಿ ಕಾಯಿದೆಯ ದೃಷ್ಟಿಯ ಸ್ವಾತಂತ್ರ್ಯವು ಏಕಪ್ರಕಾರವಾಗಿ ವಿಶಾಲವಾಗುತ್ತ ನಡೆದಿದೆ.

ಮಾನವ ಜಾತಿಯ ಹಿತಕ್ಕಾಗಿಯೂ ಸಮಾಜಗಳ ಹಿತಕ್ಕಾಗಿಯೂ ವಿದ್ಯಾಭ್ಯಾಸಪದ್ಧತಿಯು ಸ್ವಾತಂತ್ರ್ಯದ ಭಾವನೆಯನ್ನು ಜಾಗ್ರತಗೊಳಿಸಬೇಕ. ಎಲ್ಲಿ ಇತರರ ಹಕ್ಕುಗಳಿಗೆ ಬಾಧಕವಿಲ್ಲವೋ ಅಥವಾ ಎಲ್ಲಿ ತುಳಿದ ಹಾದಿಯಿಂದ ಒಡೆದು ಹೋಗುವ ಪ್ರವೃತ್ತಿಯು ಕೇವಲ ತನ್ನ ಕಡೆಗೆ ಜನರ ಲಕ್ಷವನ್ನು ಎಳೆದು ಕೊಳ್ಳುವದಕ್ಕಾಗಿ ಇರುವದಿಲ್ಲವೋ ಅಲ್ಲಿ ನವೀನ ಹಾದಿಯನ್ನು ಹಿಡಿಯಬೇಕೆನ್ನುವ ಪ್ರವೃತ್ತಿಗೆ ಪ್ರೋತ್ಸಾಹಕೊಟ್ಟು ಅದನ್ನು ಪೋಷಿಸಬೇಕು. ಒಂದು ಸಾಂಪ್ರದಾಯಿಕ ರೀತಿ, ಒಂದು ಸಾಮಾನ್ಯಭಾವನೆ ಇವುಗಳಿಗೆ ನಾನು ಕಟ್ಟಿ ಬಿದ್ದವನಲ್ಲ, ಗುಲಾಮನಲ್ಲ ಎಂದು ಚೆನ್ನಾಗಿ ಅಂತರಾತ್ಮನನ್ನು ಸ್ಮರಿಸಿ ಸಾರಿ ಹೇಳುವದಕ್ಕೆ ಹುಡುಗರಿಗೆ ಅವಕಾಶವನ್ನು ಕೊಡಬೇಕು. ಇವೇ ವ್ಯಕ್ತಿಯ ಶಿಕ್ಷಣದ ಅಡಿಗಲ್ಲು; ಮತ್ತು ಇದರಿಂದಲೇ ಸಮುದಾಯದ ಸಾಮಾಜಿಕ ಮನಃ ಸಾಕ್ಷಿಯು ರೂಪಿಸಲ್ಪಡುವದು. ವೈಯಕ್ತಿಕ ಮನಃ ಸಾಕ್ಷಿ ಎಂಬದರ ಅರ್ಥವೇನು ?

ತನ್ನ ಸದಸದ್ವಿವೇಕಕ್ಕೆ ಒಪ್ಪಿತವಾದ ಮತ್ತು ತನ್ನ ಅನುಭವದಿಂದ ಒಳ್ಳೆಯದೆಂದು ಪರಿಗಣಿಸಿದ, ಬಾಹ್ಯವಾದೊಂದು ನಿಯಮಕ್ಕೆ, ತಾನಾಗಿ, ಒಬ್ಬರ ಒತ್ತಾಯವಿಲ್ಲದೆ ತಲೆಬಾಗುವದೆಂದು ಅದರ ಅರ್ಥ—ಯಾವ ಶರ್ತನ್ನು ಹಾಕದೆ ಅಲಿಖಿತ ಶಾಸನವೊಂದನ್ನು ಮನ್ನಿಸುವದು, ಆ ಶಾಸನದ ವಿನಿಯೋಗವನ್ನು ತನ್ನಲ್ಲಿ ಸಮನ್ವಯಿಸಿಕೊಳ್ಳುವದು, ಇಡಿಯ ಪ್ರಪಂಚದ ವಿರೋಧವನ್ನು ಸಹ ಲೆಕ್ಕಿಸದೆ ಆ ಒಳಗಿನ ಮನಃಸಾಕ್ಷಿಯದನ್ನು ಅನುಸರಿಸುವದು ಎಂದರ್ಥ. ಆದರೆ ತಮ್ಮದೇ ಆದ ಒಂದು ವ್ಯಕ್ತಿತ್ವವುಳ್ಳ, ವಿಶೇಷವಾಗಿ ಪ್ರತಿಭಾ ಸಂಪನ್ನರಾದವರನ್ನೇ ಮನೆಯಲ್ಲಿಯೂ ಶಾಲೆಯಲ್ಲಿಯೂ ನಿರ್ದಯತೆಯಿಂದ ನಡೆಸಿಕೊಳ್ಳಲಾಗುತ್ತಿರುವದು ಸಾಮಾನ್ಯವಾಗಿ ಕಂಡು ಬರುತ್ತಿದೆ. ಬಾಲ್ಯ ಜೀವನದ ಮೊದಲಿನ ಕೆಲವು ವರ್ಷ ಮಾತ್ರ ಒಂದು ಬಗೆಯ ತಾಲೀಮು ಬೇಕಾಗುತ್ತಿದೆ. ಅದು ಹೆಚ್ಚಿನ ತರಬೇತಿಗೆ ಪೂರ್ವ ಭಾವಿಯಾದ ಸಂಗತಿ. ಆಗ ಮಗುವಿನ ಜೀವನದಲ್ಲಿ ಸಂವೇದನಗಳಿಗೆ ಅತ್ಯಧಿಕವಾದ ಸ್ಥಾನವಿರುವದರಿಂದ ಖೇದಮೋದರೂಪವಾದ ಅಲ್ಪ

ಪ್ರಮಾಣದ ಒಂದಿಷ್ಟು ಶಾರೀರಿಕ ವೇದನೆಯು ಮಾತ್ರ ಅವನಿಗೆ ಅರ್ಥವಾಗುತ್ತದೆ. ಆದ್ದರಿಂದ ಕೆಲವು ಮಕ್ಕಳಿಗೆ ಹಲವಾರು ನಿತ್ಯದ ರೂಢಿಗಳನ್ನು ಹಚ್ಚುವದಕ್ಕಾಗಿ ತರಬೇತಿಯು ಅವಶ್ಯವಾಗಿದೆ. ಆದರೆ ಮಗುವಿಗೆ ತಾನು ಹೊಡೆತ ತಿಂದಿದ್ದೆನು ಎಂದು ನೆನಪಾಗುವ ವಯಸ್ಸು ಪ್ರಾಪ್ತವಾದಕೂಡಲೇ ಅವನನ್ನು ಹಾಗೆ ದಂಡಿಸುವ ದಿನಗಳು ಮೀರಿವೆ ಎಂದು ತಿಳಿಯಬೇಕು. ಮಗುವು ವಿಧೇಯತೆಯನ್ನು ಖಂಡಿತವಾಗಿ ಕಲಿಯಬೇಕು; ಅಷ್ಟು ಮಾತ್ರವಲ್ಲ, ಈ ವಿಧೇಯತೆಯು ನಿಷ್ಠುರವಾಗಿ ಯಾವ ಕರಾರುಗಳಿಲ್ಲದೆ ಪಾಲಿಸಲ್ಪಡಬೇಕು. ಈ ವಿಧೇಯತೆಯು ಎಳೆಯ ವಯಸ್ಸಿನಿಂದಲೂ ಬೇರು ಬಿಟ್ಟಿದ್ದಾದರೆ ಒಂದು ಕಣ್ಸನ್ನೆ, ಒಂದು ಮಾತು, ಒಂದು ಉದ್ಗಾರ ಸಾಕು ಮಗುವನ್ನು ಹಾದಿಯಲ್ಲಿರಿಸಲಿಕ್ಕೆ.

ಬಹಳ ಸಣ್ಣ ವಯಸ್ಸಿನ ಮಗುವಿನೊಡನೆ ವಾದಕ್ಕೆ ಹೋಗಬಾರದು; ಅದರ ಬದಲಾಗಿ ಕೂಡಲೇ ಯುಕ್ತವಾದಂತೆ ಕಾರ್ಯದಲ್ಲಿ ಪ್ರವೃತ್ತರಾಗಬೇಕು. ಹೀಗೆ ಮಾಡಿದರೆ ಮಗುವಿನ ಮೈಯಲ್ಲಿ, ರಕ್ತದಲ್ಲಿ ಹಲವು ಒಳ್ಳೆಯ ಅಭ್ಯಾಸಗಳು ಸ್ಥಿರವಾಗಿ ನೆಲಸುವವು.

ಅಳುವುದಕ್ಕೆ ದೇಹದ ಅಸ್ವಾಸ್ಥ್ಯವು ಅಥವಾ ಮತ್ತಾವುದಾದರೂ ವ್ಯಥೆಯು ಕಾರಣವಾಗಿಲ್ಲ ಎಂದು ಖಚಿತವಾದಾಗ, ಸಣ್ಣ ಮಕ್ಕಳು ಸದಾ ಅಳುವ ಚಾಳಿಯನ್ನು ಬಿಡಿಸಬೇಕು. ಅಸುಖ ಅಸ್ವಾಸ್ಥ್ಯಗಳಿಗೆ ಅಳುವದೊಂದೇ ಮಗುವಿಗೆ ಶಸ್ತ್ರವಾಗಿದೆ. ಹಾಗಿಲ್ಲದೆ ಸುಮ್ಮಸುಮ್ಮನೆ ಅಳುವ ಪರಿಪಾಟಿಯನ್ನು ಕೂಡಲೇ ತಿದ್ದಬೇಕು. ಸಾಧಾರಣವಾಗಿ ಈಗ ಅಳವುದನ್ನು ಬಡಿತದಿಂದಲೇ ತಿದ್ದಲಾಗುತ್ತಿದೆ. ಆದರೆ ಇದರಿಂದ ಆ ಮಗುವಿನ ಚಿತ್ತವೃತ್ತಿಗೆ ಯಾವ ಶಿಕ್ಷಣವೂ ಸಿಕ್ಕದೆ ಒಂದು ಕಲ್ಪನೆಯು ಮಾತ್ರ ಅದರ ಮನಸ್ಸಿನಲ್ಲಿ ಮೂಡುವದು— ಸಣ್ಣ ಮಕ್ಕಳು ಅತ್ತಾಗ ದೊಡ್ಡವರು ಅವರನ್ನು ಹೊಡೆಯುವರು ಎಂದು ಮಾತ್ರ. ಇದು ನೀತಿಯ ಅನುಭವವಲ್ಲ. ಆದರೆ ಅಳುವ ಹುಡುಗನನ್ನು ಇಲ್ಲವೆ ಹುಡಿಗೆಯನ್ನು ಕೂಡಲೇ ಪ್ರತ್ಯೇಕಿಸಿ, ಯಾರು ಇತರರ ಮನಸ್ಸಿಗೆ ನಿಷ್ಕಾರಣವಾಗಿ ನೋವನ್ನುಂಟು ಮಾಡುವರೋ ಅವರು ಆ ಇತರರೊಡನೆ ಇರತಕ್ಕದ್ದಲ್ಲ ಎಂದು ತತ್ಕಾಲಕ್ಕೆ ಅವರಿಗೆ ತಿಳಿಸಿಹೇಳಬೇಕು. ಈ ಬೇರೆ ಉಳಿಯಬೇಕಾಗುವದು ಕಟ್ಟಿಟ್ಟಂತೆ ಒದಗುತ್ತಿದ್ದರೆ ಮತ್ತು ತಪ್ಪಿಸಲಾಗದಂತಿದ್ದರೆ ಮಗುವಿನ ಮನಸ್ಸಿನಲ್ಲಿ ಒಂದು ಅನುಭವದ ಥರವು ಕೂತು, ಒಳಿಯಲ್ಲಿರುವವರಿಗೆ ತ್ರಾಸವಾಗುವಂತೆ, ಮನೋವ್ಯಥೆಯಾಗುವಂತೆ ತಾವು ವರ್ತಿಸಿದ್ದಾದರೆ ಅವರ ಸಹವಾಸದಿಂದ ನಾವು ಪ್ರತ್ಯೇಕಿಸಲ್ಪಡುವೆವು ಎಂಬ ಭಾವನೆಯು ಬೇರೂರುವದು. ಬಡಿಯುವ, ಬಡಿಯದಿರುವ ಈ ಎರಡೂ ಪ್ರಕಾರದ ತರಬೇತಿಯಲ್ಲಿ ಮಗುವಿನ ಸುಖಕ್ಕೆ ಅಡ್ಡ ಬಂದುದನ್ನು ಸುಮ್ಮನೆ ಮಾಡಲಾಗುವದು ನಿಜ. ಆದರೆ ಮೊದಲನೆಯ ಪ್ರಕಾರದ – ಬಡಿತದಿಂದ – ಹುಡುಗನ ಸ್ವತಂತ್ರೇಚ್ಛೆಯಮೇಲೆ ಬಲಾತ್ಕಾರವಾಗುವದು. ಎರಡನೆಯ ಪ್ರಕಾರದಿಂದ ಅವನ ಪ್ರವೃತ್ತಿಯಮೇಲೆ ಸ್ವಯಂಪ್ರಭುತ್ವವು ಕ್ರಮವಾಗಿ ಉಂಟಾಗುವದು. ಒಂದು ಪದ್ಧತಿಯು ನೀಚವಾದ ಒಂದು ಭಾವನೆಯನ್ನು ಕೆರಳಿಸುವದು—ಭಯವನ್ನು. ಇನ್ನೊಂದು ಜೀವನದ ಅತ್ಯಂತ ಮಹತ್ವದ ಅನುಭವಗಳಲ್ಲಿ ಒಂದರೊಡನೆ ಮಗುವಿನ ಚಿತ್ತವೃತ್ತಿಯನ್ನು ತಳಕು ಹಾಕಿ ಆ ಚಿತ್ತವೃತ್ತಿಯನ್ನು ತಿದ್ದುವದು. ಒಂದು ದಂಡನೆಯು ಮಗುವನ್ನು ಪಶುವಿನ ಘಟ್ಟದಲ್ಲಿರಿಸುವದು. ಇನ್ನೊಂದು ಮಾನವನ ಸಾಮಾಜಿಕ ಜೀವನನ ಒಂದು ಶ್ರೇಷ್ಠ ತತ್ವವನ್ನು ಅದರ ಮನಸ್ಸಿನ ಮೇಲೆ ಅಚ್ಚೊತ್ತುವದು— ಅದಾವುದೆಂದರೆ, ನಮ್ಮ ಸುಖವು ಇತರರಿಗೆ ಕಷ್ಟವನ್ನುಂಟುಮಾಡಿದಾಗ ಇತರರು ನಮ್ಮ ಸುಖದ ಮಾರ್ಗವನ್ನು ಪ್ರತಿಬಂಧಿಸುವರು; ಅಥವಾ ನಮ್ಮ ಸ್ವಚ್ಛಂದದ ವ್ಯಾಪಾರದಿಂದ ಅವರು ತಮ್ಮನ್ನು ದೂರ ಇರಿಸಿಕೊಳ್ಳುವರು.

ಸಣ್ಣ ಮಕ್ಕಳು ಪರರ ವಸ್ತುಗಳನ್ನು ಮುಟ್ಟದಿರುವದಕ್ಕೆ ಕಲಿಯಬೇಕು. ಅಪ್ಪಣೆಯಿಲ್ಲದೆ ಏನನ್ನಾದರೂ ಮುಟ್ಟಿದೆ ಸರತಿಗೊಮ್ಮೆ ಒಂದಿಲ್ಲೊಂದು ರೀತಿಯಿಂದ ಮಕ್ಕಳು ತಮ್ಮ ಕ್ರಿಯಾಸ್ವಾತಂತ್ರ್ಯವನ್ನು ಕಳೆದುಕೊಳ್ಳುವಂತಾದರೆ ಅವರು ಶೀಘ್ರದಲ್ಲಿಯೇ, ಪರರಿಗೆ ಹಾನಿಯನ್ನು ಉಂಟುಮಾಡದೆ ಇರುವದು ತಮ್ಮ ಸ್ವಾತಂತ್ರ್ಯದ ಉಪಯೋಗಕ್ಕೆ ಅವಶ್ಯವಾದ ಒಂದು ಮಾತು ಎಂಬುದನ್ನು ಕಲಿತುಕೊಳ್ಳುವರು.

ಹೊಡೆತದಿಂದಲೇ ಕೆಲವು ತಪ್ಪುಗಳನ್ನು ತಿದ್ದುವದು

ಸಾಧ್ಯವೆಂದೂ ದೇಹದಂಡನೆಯು ಶಿಕ್ಷಣದ ಒಂದು ಅನಿವಾರ್ಯ ಸಾಧನವೆಂದೂ ಕೆಲವರು ವಾದಿಸುವರು. ಮೊಂಡತನ, ಸುಳ್ಳಾಡುವದು ಮುಂತಾದ್ದನ್ನು ಬಿಡಿಸಲಿಕ್ಕೆ ಅದೇ ಉತ್ತಮ ಉಪಾಯವೆಂದು ಹೇಳುವರು. ಆದರೆ ಅದರಿಂದ ಹುಡುಗರು ತಮ್ಮ ದುಷ್ಟ ಪ್ರವೃತ್ತಿಯನ್ನು ಹೊರಗೆ ತೋರಗಂತೆ ಹತ್ತಿಕ್ಕಲಿಕ್ಕೆ ಹಚ್ಚುವದರಲ್ಲಿ ಮಾತ್ರ ಪಾಲಕರಿಗೆ ಯಶಸ್ಸು ದೊರಕಿದಂತಾಯಿತೇ ವಿನಾ ಆ ಪ್ರವೃತ್ತಿಯ ಶುದ್ಧೀಕರಣದಲ್ಲಿ ಅವರು ಜಯವನ್ನು ಸಂಪಾದಿಸಿದಂತಾಗಲಿಲ್ಲ. ಹೀಗಾಗಿ ಶಾರೀರಿಕ ಶಿಕ್ಷೆಯು ಮೋಸವನ್ನು ಮಾತ್ರ ಹೆಚ್ಚಿಸುವದು, ನೀತಿಯನ್ನೆಲ್ಲ ಮಾನವನ ಇತಿಹಾಸದಲ್ಲಿ ನರಕ ಮತ್ತು ನರಕದ ಭಯವನ್ನು ಕುರಿತು ಕಲಿಸಿದುದರ ಪರಿಣಾಮವನ್ನು ನೆನೆದರೆ ಮಕ್ಕಳಿಗೆ ಯಮಯಾತನೆಯಂತೆನಿಸುವ ಕ್ರೂರವಾದ ದೇಹ ದಂಡನೆಯಿಂದ ಅವರ ಅಂತರಾತ್ಮದಲ್ಲಿ ಯಾವ ಬಗೆಯ ನೀತಿ ಮುಕ್ತಿ ನೆಲಿಸುವವೆಂಬದಕ್ಕೆ ತಕ್ಕ ಉದಾಹರಣೆಯು ದೊರೆಯುವದು. ಸುಳ್ಳಾಡಿದ್ದಕ್ಕೆ ಹೊಡೆಸಿಕೊಂಡವರಾರೂ ಅದರಿಂದ ಸತ್ಯವನ್ನು ಪ್ರೀತಿಸಲಿಕ್ಕೆ ಕಲಿಯುವದಿಲ್ಲ. ತಮ್ಮ ಬಾಲ್ಯದಲ್ಲಿ ದೇಹ ದಂಡನೆಯನ್ನು ತಿರಸ್ಕರಿಸುವ ವಯಸ್ಕರು ಮಾತಿನಿಂದಲೂ ಕೃತಿಯಿಂದಲೂ ಸುಳ್ಳನ್ನಾಡುತ್ತಲೇ ಹೋಗುವರು. ಭೀತಿಯಿಂದ 'ಸುಳ್ಳು' ಎಂದು ಸುಲಭವಾಗಿ ತಿಳಿಯುವಂತಹ ಸುಳ್ಳನ್ನು ಆಡಲಿಕ್ಕಿಲ್ಲ ಆದರೆ ಆತನು ವಿಶ್ವಾಸಕ್ಕೆ ಅರ್ಹನಾಗುವದಿಲ್ಲ.

ಶಿಕ್ಷಣದಲ್ಲಿ ತಾವು ಮಾಡುವ ಇನ್ನೂ ಎಷ್ಟೋ ತಪ್ಪುಗಳಲ್ಲಿ ಇದೊಂದು—ಯಾವ ದೋಷವು ತನ್ನಷ್ಟಕ್ಕೆ ತಾನೇ ಹೋಗುವದೋ ಅದನ್ನು ತೆಗದು ಹಾಕಲಿಕ್ಕೆಂದು ವಿಪರೀತ ಶ್ರಮ ಪಡುವದು. ಸಣ್ಣ ಮಕ್ಕಳಿಗೆ ಸ್ಪಷ್ಟವಾಗಿ ಮಾತಾಡಲಿಕ್ಕೆ ಕಲಿಸಬೆಕೆಂದು ಕೆಲವರು ಭಾರೀಶ್ರಮ ವಹಿಸುವರು. ಅವರೊಡನೆ ನಾವು ಯಾವಾಗಲೂ ಸ್ಪಷ್ಟವಾಗಿಯೇ ಮಾತಾಡುತ್ತಿದ್ದರೆ ತನ್ಮಷ್ಟಕ್ಕೆ ತಾವೇ ಅವರು ಚೆನ್ನಾಗಿ ಮಾತಾಡಹತ್ತುವರು. ಮಕ್ಕಳ ನಿಲುಮೆ, ನಡತೆಗಳಿಗೆ ಸಂಬಂಧಿಸಿದ ಇನ್ನೂ ಎಷ್ಟೋ ವಿಷಯಗಳಿಗೆ ಈ ತತ್ವವು ಅನ್ವಯಿಸುವದು. ಇಂತಹ ವಿಷಯಗಳನ್ನು ಒಳ್ಳೆಯ ಉದಾಹರಣೆಗೂ ಕಾಲಾವಧಿಗೂ ಬಿಟ್ಟುಬಿಡಬೇಕಾಗುವದು. ಯಾವ ರೂಢಿ ಅಭ್ಯಾಸಗಳಿಗೆ ಮಕ್ಕಳ ಜೀವನದ ಆರಂಭದಲ್ಲಿಯೇ ನೆಲಗಟ್ಟನ್ನು ಹಾಕುವದು ಒಳಿತೋ ಅಂತಹ ಅಭ್ಯಾಸಗಳನ್ನು ಮಕ್ಕಳಲ್ಲಿ ನೆಲೆಮಾಡುವದಕ್ಕೆ ಸ್ವಂತದ ಉದಾಹರಣೆಯನ್ನು ಉಪಯೋಗಿಸುವಕ್ಕಿಂತ ಉತ್ತಮ ಉಪಾಯವು ಬೇರೊಂದಿರದು.

(ಮುಂದುವರಿಯುವದು)

ವಿಶೇಷ ಪ್ರಕಟನೆ!!

ಇಂದೇ ಸಂಗ್ರಹಿಸಿರಿ! ವಿದ್ಯಾರ್ಥಿ, ಶಿಕ್ಷಕರಿಗೆ ಅತ್ಯುಪಯುಕ್ತ!

೧. ಮೂಲ ಶಿಕ್ಷಣ ಮೀಮಾಂಸೆ ಲೇಖಕರು:-ಶ್ರೀ. ಹ. ಗ. ಜೋಶಿ. ಬೆಲೆ ೧-೧೨-೦

(ಮಾನ್ಯ ದಿವಾಕರರ ಮುನ್ನುಡಿ; ಮೂಲ ಶಿಕ್ಷಣದ ಪ್ರೇಮಿಗಳು ಇದನ್ನು ಅವಶ್ಯ ಸಂಗ್ರಹಿಸಲೇ ಬೇಕು)

೨. ಹಿಂದೀ ಶಿಕ್ಷಣ ಮಾಲೆ-೧ ಲೇಖಕರು:-ಶ್ರೀ. ಗುರುನಾಥ ಜೋಶಿ. ಬೆಲೆ ೦-೧೪-೦

(ಮನೆಯಲ್ಲಿಯೇ ಶಿಕ್ಷಕರ ಸಹಾಯವಿಲ್ಲದೆ ಹಿಂದೀ ಕಲಿಯಲಿಕ್ಕೆ ಉತ್ತಮ)

ಇವಲ್ಲದೆ ಕಾದಂಬರಿಗಳು ಎನ್ಕೆ ಏಕಾಂಕ (೨—೦—೦) ಭೂಮಿಗಿಳಿದ ತಾರೆ (೧—೮—೦)

ಮಕ್ಕಳಿಗೆ:—ಚುಟುಕ (೦—೮—೦) ದಿವ್ಯ ಕಥೆಗಳು (೦—೮—೦)

ಪ್ರ. ಮತ್ತು ಮಾರಾಟಗಾರರು:-ಹಿಂದಮಾತಾ ಮುದ್ರಣಾಲಯ, ಗಾಂಧಿಚೌಕ, ಧಾರವಾಡ.

ಕೊಡಿಂಗದ ಮಾಗಿಪ್ಪ ಕರಿಯಪ್ಪನವರು

ಸೇನಾ ನಿವೃತ್ತರಾದ

ಜನರಲ್ ಕೆ. ಎಮ್. ಕರಿಯಪ್ಪನವರು

(ಭಾರತದ ಮುಖ್ಯ ಸೈನ್ಯಾಧಿಕಾರಿ)

ಲೇಖಕರು:— ಶ್ರೀಯುತ ಬ. ಮು. ಶಿಂತ್ರಿ. ಬಿ. ಎ. ಬಿ. ಟಿ.
ನಿವೃತ್ತ ಆಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಬಾಲ್ಯ ಮತ್ತು ಶಿಕ್ಷಣ.

ಇವರು ಕನ್ನಡ ನಾಡಿನವರು; ಹರಿದು ಹಂಚಿಹೋದ ಕರ್ನಾಟಕದೊಂದು ಭಾಗವಾದ ಕೊಡಗಿನವರು. ದಿನಾಂಕ ೨೮-೧-೧೮೯೯ರಲ್ಲಿ ಇವರು ಜನಿಸಿದರು. ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಮಡಿಕೇರಿಯ ಸೆಂಟ್ರಲ್ ಹಾಯಸ್ಕೂಲಿನಲ್ಲಿಯೂ ಮತ್ತು ಉಚ್ಚ ಶಿಕ್ಷಣವನ್ನು ಮದ್ರಾಸ ಪ್ರೆಸಿಡೆನ್ಸಿ ಕಾಲೇಜದಲ್ಲಿಯೂ ಪಡೆದಿದ್ದಾರೆ. ಟೆನಿಸ್, ಕ್ರಿಕೆಟ್ ಮತ್ತು ಹಾಕಿ ಇವು ಇವರ ಪ್ರೀತಿಯ ಆಟಗಳು. ಶಾಲೆ-ಕಾಲೇಜುಗಳಲ್ಲಿ ಉತ್ತಮ ಆಟಗಾರರೆಂದು ಪ್ರಖ್ಯಾತಿಯನ್ನು ಪಡೆದಿದ್ದರು ಇಂದೂರಲ್ಲಿಯ ಡ್ಯಾಲಿ ಕಾಲೇಜದಲ್ಲಿ ಸೈನಿಕ ಶಿಕ್ಷಣವನ್ನು ಹೊಂದಿದರು.

ಸೈನ್ಯದಲ್ಲಿ ಸೇರ್ಪಡೆ ಮತ್ತು ಪರದೇಶ ಸಂಚಾರ.

ಇವರು ೧೯೨೦ರಲ್ಲಿ ಸೈನ್ಯಖಾತೆಯಲ್ಲಿ ಸೇರಿ ಒಂದು ದಳದ ಅಧಿಕಾರಿಯಾಗಿ ನೇಮಕ ಹೊಂದಿ ಮೆಸೊಪೊಟೇಮಿಯಾ (ಈಗಿನ ಇರಾಕ್) ದಲ್ಲಿಯೂ ವಜೀರಿಸ್ತಾನದಲ್ಲಿಯೂ ಎರಡು ವರುಷಗಳ ವರೆಗೆ ಕೆಲಸ ಮಾಡಿದರು. ಚೀನ, ಜಪಾನ, ಯುನಾಯಿಟೆಡ್ ಸ್ಟೇಟ್ಸ್, ಕ್ಯಾನಡಾ, ಗ್ರೇಟ ಬ್ರಿಟನ್, ಫ್ರಾನ್ಸ, ಬೆಲ್ಜಿಯಮ್, ಜರ್ಮನಿ, ಸ್ವಿತ್ಸರ್ಲಂಡ, ಇಟಲಿ, ಇವುಗಳಿಗೆಲ್ಲ ಸಂದರ್ಶನವಿತ್ತು ಅಲ್ಲಿಯ ಸೈನ್ಯಾಧಿಕಾರಿಗಳನ್ನೂ ಅವರ ಶಿಕ್ಷಣ ಮತ್ತು ಜೀವನ ಕ್ರಮಗಳನ್ನೂ ಅಭ್ಯಸಿಸಿದರು. ಈ ಸಂಚಾರವನ್ನು ೧೯೨೪ರಲ್ಲಿ ಕೈಕೊಂಡು ೧೯೨೫ರಲ್ಲಿ ಮರಳಿ ಸ್ವದೇಶಕ್ಕೆ ಬಂದರು. ೧೯೩೩ರಲ್ಲಿ ಕ್ವೇಟಾದಲ್ಲಿಯ ಸ್ಟಾಫ್ ಕಾಲೇಜವನ್ನು ಸೇರಿದ ಪ್ರಥಮ ಹಿಂದೀ ಅಧಿಕಾರಿಗಳೆಂದರೆ ಇವರೇ. ೧೯೩೫ರಲ್ಲಿ ಸಿಂಗಾಪೂರದಲ್ಲಿಯ ನೌಕಾ-ವಿಮಾನ ಠಾಣ್ಯಗಳಿಗೆ ಭೆಟ್ಟೀ ಕೊಟ್ಟು ಅವುಗಳ ನಿರೀಕ್ಷಣೆಯನ್ನು ಚನ್ನಾಗಿ ಮಾಡಿಕೊಂಡು ಬಂದರು. ೧೯೩೮ರಲ್ಲಿ ಡೆಕ್ಕನ್ನದ ಡೆಪ್ಯೂಟಿ ಅಸಿಸ್ಟಂಟ ಕ್ವಾರ್ಟರ ಮಾಸ್ಟರ ಜನರಲ್‌ರೆಂಬ ದ್ವಿತೀಯ ಶ್ರೇಣಿಯ ಅಧಿಕಾರಸ್ಥರಾದರು. ೧೯೪೨ರಲ್ಲಿ ೨ನೆಯ ಹಿಂದೀ ಕಾಲ್ದಳದ ಬ್ರಿಗೇಡಿಯರರಾದರು. ೧೯೪೧ರಲ್ಲಿ ಇರಾಕದಲ್ಲಿದ್ದಾಗ ಮೇಜರ ಜನರಲ್ ಸ್ಲಿಮ್ (ಈಗ ಫೀಲ್ಡ ~~[illegible]~~ * ಸರ್ ವಿಲಿಯಮ್ ಸ್ಲಿಮ್ ಇಂಗ್ಲಂಡದ ಮುಖ್ಯ ಸೈನ್ಯಾಧಿಕಾರಿ) ಇವರ ಕೈಕೆಳಗೆ ಕೆಲಸ ಮಾಡಿ ಹೆಚ್ಚಿನ ಅನುಭವ ಪಡೆದ ಸುಸಂದರ್ಭವೊಂದು ಒದಗಿದ್ದುದು ಇವರ ಸುದೈವವು. ಈ ಅಮೌಲ್ಯವಾದ ಅನುಭವದ ಫಲವಾಗಿ, ೧೯೪೨ರಲ್ಲಿ ೭ನೆಯ ರಜಪೂತ ಮಶಿನ್ ಗನ್ ದಳದ ಪ್ರಥಮ ಹಿಂದೀ ಕಮಾಂಡರರಾದರು; ೧೯೪೬ರಲ್ಲಿ ವೆಸ್ಟ ಪಾಯಿಂಟ (West Point)ದಲ್ಲಿಯ ಅಮೇರಿಕನ್ ಸೈನಿಕ ಶಿಕ್ಷಣ ಸಂಸ್ಥೆಗೆ ಸಂದರ್ಶನವಿತ್ತು ಅಲ್ಲಿಯ ಶಿಕ್ಷಣ ಕ್ರಮಗಳನ್ನೂ ಕಾರ್ಯಕಲಾಪಗಳನ್ನೂ ಅಭ್ಯಾಸ ಮಾಡಿಕೊಂಡು ಬಂದರು. ೧೯೪೭ರಲ್ಲಿ ಇಂಗ್ಲಂಡದಲ್ಲಿಯ ಇಂಪೀರಿಯಲ್ ಡಿಫೆನ್ಸ ಕಾಲೇಜ (Imperial Defence College) ಕ್ಕೆ ತರಬೇತಿಗಾಗಿ ಸರಕಾರದಿಂದ ಕಳಿಸಲ್ಪಟ್ಟರು. ೧೯೪೭ರಲ್ಲಿ ಲೆಫ್ಟಿನಂಟ ಜನರಲ್ ಹುದ್ದೆಗೆ ಏರಿಸಲ್ಪಟ್ಟು ಪೂರ್ವ ವಿಭಾಗ (Eastern Command)ದ ಮುಖ್ಯಾಧಿ-

* ಮಾರ್ಶಲ್

ಕಾರಿಯಾಗಿ ನೇಮಿಸಲ್ಪಟ್ಟರು. ಮುಂದಿನ ವರುಷ ಪಶ್ಚಿಮ ವಿಭಾಗ (Western Command)ದ ಮುಖ್ಯಾಧಿಕಾರಿಯಾದರು. ಕೊನೆಗೆ ೧೯೪೯ರ ಜನವರಿ ತಿಂಗಳ ದಿನಾಂಕ ೧೫ ರಂದು ಇಡಿಯ ಭಾರತದ ಸೈನ್ಯದ ಮುಖ್ಯಾಧಿಕಾರಿ (Commander-in-Chief)ಗಳಾಗಿ ನೇಮಕ ಹೊಂದಿ ೧೯೫೩ರ ಜನವರಿ ತಿಂಗಳ ದಿನಾಂಕ ೧೫ರಂದು ಆ ಹುದ್ದೆಯಿಂದಲೇ ನಿವೃತ್ತರಾದರು. ಈ ಹುದ್ದೆಯನ್ನಲಂಕರಿಸಿದ ಪ್ರಥಮ ಭಾರತೀಯ ಅಧಿಕಾರಸ್ಥರೆಂದರೆ ಇವರೇ. ಜನರಲ್ ಕರಿಯಪ್ಪನವರು ಸೈನ್ಯಖಾತೆಯಲ್ಲಿ ಸುಮಾರು ೩೩ ವರುಷಗಳ ವರೆಗೆ ದುಡಿದಂತಾಯಿತು. ನಿವೃತ್ತಿಯನ್ನು ಹೊಂದಿದಾಗ ಅವರಿಗೆ ೫೩ ವರುಷಗಳಾಗಿದ್ದವು.

ಮುಖ್ಯ ಸೇನಾಪತಿಯಾಗಿ ಸಲ್ಲಿಸಿದ ಸೇವೆ.

ಕಳೆದ ನಾಲ್ಕು ವರುಷಗಳ ಅವಧಿಯಲ್ಲಿ ಭಾರತದ ಸೈನ್ಯದ ಮುಖ್ಯಾಧಿಕಾರಿಯ ಹುದ್ದೆಯಲ್ಲಿದ್ದುಕೊಂಡು ನಮ್ಮ ರಾಷ್ಟ್ರಕ್ಕೆ ಅಮೌಲ್ಯವಾದ ಸೇವೆಯನ್ನು ಇವರು ಸಲ್ಲಿಸಿದುದು ಸರ್ವಶ್ರುತವಿದೆಯಷ್ಟೆ. ಪಾಕಿಸ್ತಾನವು ನಮ್ಮ ರಾಷ್ಟ್ರದಿಂದ ಸಿಡಿದು ಹೋದಂದಿನಿಂದುಂಟಾದ ಗಂಭೀರವಾದ ಸಂಕ್ರಾಂತ ಸಮಯದಲ್ಲಿ ಭಾರತದ ಸೈನ್ಯದ ಪುನರ್ಘಟನೆಯನ್ನು ಮಾಡಿ ಅದಕ್ಕೊಂದು ಉತ್ತಮ ವ್ಯವಸ್ಥಿತ ಸ್ವರೂಪವನ್ನು ಕೊಟ್ಟರು. ಸಂಸ್ಥಾನಗಳೆಲ್ಲ ವಿಲೀನವಾದಮೇಲೆ ಆಯಾ ಸಂಸ್ಥಾನಗಳಲ್ಲಿಯ ಸೈನ್ಯಗಳನ್ನು ನಮ್ಮ ರಾಷ್ಟ್ರದ ಸೈನ್ಯದಲ್ಲಿ ಸಮಾವೇಶಗೊಳಿಸುವ ಭಾರವು ಇವರ ಮೇಲೆಯೇ ಬಿದ್ದಿತು. ಆ ಸೈನ್ಯಗಳೊಳಗಿನ ಕುಂದು-ಕೊರತೆಗಳನ್ನೂ ಲೋಪ-ದೋಷಗಳನ್ನೂ ಕಿತ್ತೊಗೆದು ಅವುಗಳನ್ನು ನಮ್ಮ ಸೈನ್ಯದ ಮಟ್ಟಕ್ಕೆ ಸ್ವಲ್ಪೇ ದಿನಗಳಲ್ಲಿ ಏರಿಸಿದರು. ಬ್ರಿಟಿಶ್ ಸೈನ್ಯಾಧಿಕಾರಿಗಳು ಬಿಟ್ಟು ಹೋದ ಮೇಲೆ ನಮ್ಮ ಸೈನ್ಯದ ಆಡಳಿತೆಯು ಕಳೆಗುಂದಲು ಇವರು ಎಳ್ಳಷ್ಟು ಆಸ್ಪದ ಕೊಡಲಿಲ್ಲ; ಮಾತ್ರವಲ್ಲದೆ, ಹೆಚ್ಚಿನ ಶಿಸ್ತು, ಯೋಗ್ಯತೆ ಮತ್ತು ಕರ್ತವ್ಯದಕ್ಷತೆ ಇವು ಸೈನಿಕರಲ್ಲಿ ಹೊರಸೂಸುವಂತೆ ಮಾರ್ಪಾಟುಗಳನ್ನು ಮಾಡಿದ್ದಾರೆ. ಹಿಂದೆ ಎಂದೂ ಕಾಣದ ಉತ್ತಮೋತ್ತಮವಾದ ಸುಧಾರಣೆಯೊಂದನ್ನು ಜಾರಿಯಲ್ಲಿ ತಂದಿದ್ದಾರೆ. ಅದೇನಂದರೆ, ಸೈನಿಕರ ಮತ್ತು ನಾಗರಿಕರ ನಡುವೆ ಬೆಳೆದ ಮತ್ತು ಇನ್ನೂ ದಿನದಿನಕ್ಕೆ ಬೆಳೆಯುತ್ತಲಿರುವ ನಿಕಟ ಸಂಪರ್ಕ. ಇಲ್ಲಿಯವರೆಗೆ ಸೈನಿಕರನ್ನು ನೋಡಿದ ಕೂಡಲೆ ಸಿಡಿದು ನಿಲ್ಲುತ್ತಿದ್ದ ಜನತೆಯು ಈಗ ಅವರನ್ನು ಆತ್ಮೀಯ ಭಾವನೆಯಿಂದ ನೋಡತೊಡಗಿದೆ; ರಾಷ್ಟ್ರದ ನಿಜವಾದ ಸಂರಕ್ಷಕರೆಂದು ಭಾವಿಸಹತ್ತಿದೆ. ಸೈನಿಕರಾದರೂ ಜನತೆಯಲ್ಲಿ ಬೆರೆತು ಅವರ ಮಿತ್ರರಂತೆಯೂ ಬಂಧು-ಬಳಗದವರಂತೆಯೂ ವರ್ತಿಸಲುಪಕ್ರಮಿಸಿದ್ದಾರೆ. ಜನರಲ್ ಕರಿಯಪ್ಪನವರು ಜರುಗಿಸಿದ ಈ ಸುಧಾರಣೆಯು ನಿಜಕ್ಕೂ ಹೊಗಳತಕ್ಕಂಥದಿದೆ.

ಉಪಸಂಹಾರ.

ಜನರಲ್ ಕರಿಯಪ್ಪನವರು ಆದರ್ಶ ಸೇನಾಪತಿಗಳೆಂಬುದರಲ್ಲಿ ಸಂದೇಹವಿದೆಯೇ? ಅವರಿಗೆ ಸೈನ್ಯಖಾತೆಯಲ್ಲಿ ೩೩ ವರುಷಗಳ ಅನುಭವವಿದೆ. ನಾಲ್ಕು ವರುಷಗಳ ವರೆಗೆ ನಮ್ಮ ರಾಷ್ಟ್ರದ ಮುಖ್ಯ ಸೈನ್ಯಾಧಿಕಾರಿಯಾಗಿ ತಮ್ಮ ಅನುಭವದ ಫಲವನ್ನೆಲ್ಲ ರಾಷ್ಟ್ರಕ್ಕೆ ನೀಡಿದ್ದಾರೆ. ದೇಶದ ತುಂಬೆಲ್ಲ ಸಂಚಾರ ಮಾಡಿ ಜನತೆಯಲ್ಲಿ ಬೆರೆತು ಕೆಲಸ ಮಾಡಿದ್ದಾರೆ. ಅವರು ಮಾಂಸಾಹಾರಿಗಳಾದರೂ, ಪ್ರತಿ ಮಂಗಳವಾರಕ್ಕೊಮ್ಮೆ ಶಾಕಾಹಾರವನ್ನೇ ಊಟ ಮಾಡುತ್ತಿದ್ದರೆಂದು ಪ್ರತೀತಿಯಿದೆ; ಮಾತ್ರವಲ್ಲದೆ, ಆ ದಿನ ತಮ್ಮೆಡೆಗೆ ಬಂದ ಅತಿಥಿಗಳಿಗೆಲ್ಲ ಕೊಡಗು-ಮೈಸೂರ ಕಡೆಯ ಶಾಕಾಹಾರದ ಪಕ್ವಾನ್ನಗಳನ್ನೇ ಊಟ ಮಾಡಿಸುವದೊಂದು ಅವರ ವೈಶಿಷ್ಟ್ಯವಿತ್ತು. ತಿಕಿಟುಗಳನ್ನು ಶೇಖರಿಸುವ ಚಟವೊಂದನ್ನಿಟ್ಟುಕೊಂಡಂತೆ ತೋರುತ್ತಿದೆ. ಇಂತಪ್ಪ ಕರಿಯಪ್ಪನವರಿಗೆ ದೇವರು ಆಯುರಾರೋಗ್ಯವನ್ನು ದಯಪಾಲಿಸಲಿ ಮತ್ತು ಅವರಿಂದ ರಾಷ್ಟ್ರಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತೆ ಮಾಡಲಿ!

(೩೦-೮-೫೩ ದಿನಾಂಕದ ‘ಟಾಯಿಮ್ಸ ಆಫ್ ಇಂಡಿಯಾ’ ಮತ್ತು ೨೪-೮-೫೩ ದಿನಾಂಕ ‘ನವಯುಗ’ ಇವುಗಳಲ್ಲಿ ದೊರೆತ ವಿವರಗಳಿಂದ ಈ ಲೇಖನವನ್ನು ಬರೆಯಲಾಗಿದೆ)

ಅಮೇರಿಕೆಯಲ್ಲಿಯ ಶಿಕ್ಷಣವು

• ಲೇಖಕರು:—ಶ್ರೀ. ಎಸ್. ವ್ಹಿ. ಹಂಜಿ.
ಎಂ. ಎ., ಬಿ. ಟಿ., ಡಿ. ಬಿ. ಈ.

ಮುನ್ನುಡಿ.

ಯುನೈಟೆಡ್ ಸ್ಟೇಟ್ಸನಲ್ಲಿ ೧೩ ವಯಸ್ಸಿನ ಮೇಲಿನ, ೧೦೦ಕ್ಕೆ ೯೭ಕ್ಕಿಂತ ಹೆಚ್ಚು ಜನರು ಓದು ಬರೆಹವನ್ನು ಬಲ್ಲವರಿದ್ದಾರೆ. ಸಾರ್ವಜನಿಕ ಸುಂಕದ ಹಣದ ಸಹಾಯ ಪಡೆದ ಉಚಿತ ಸಾರ್ವಜನಿಕ ಶಾಲೆಗಳಿಂದ ಹಾಗೂ ಒತ್ತಾಯದ ಶಿಕ್ಷಣದಿಂದ ನಿರಕ್ಷರತೆಯು ಪೂರ್ಣ ವಾಗಿ ಕಡಮೆ ಮಾಡಲಾಗಿದೆ

ಯುನೈಟೆಡ್ ಸ್ಟೇಟ್ಸನ ಎಲ್ಲ ಭಾಗಗಳಲ್ಲಿ ಕೆಲವೊಂದೇ ವಿಧದ ಉಚಿತ ಶಾಲೆಗಳು ಇದ್ದೆ ಇದ್ದು, ಅಲ್ಲಿ ಬಾಲ ಬಾಲಿಕೆಯರು ಶಿಕ್ಷಣದ ಲಾಭವನ್ನು ಪಡೆಯುವರು. ಸರಕಾರವು ನಿರ್ಧರಿಸಿದ ೧೬ ವಯಸ್ಸಿನ ವರೆಗೆ ಎಲ್ಲರೂ ಶಾಲೆಗೆ ಹೋಗಲೇಬೇಕು. ಅಮೇರಿಕೆಯ ತರುಣರಲ್ಲಿ ¾ ಜನರು ೧೭ ವಯಸ್ಸಿನ ವರೆಗೆ ಅವಶ್ಯವಾಗಿ ಶಾಲೆಯಲ್ಲಿ ಉಳಿಯುವರು.

ಒಕ್ಕಲಿಗನ ಮಗನು ಪದಾರ್ಥವಿಜ್ಞಾನ ಶಾಸ್ತ್ರವನ್ನು ಕಲಿಯಲಿಚ್ಛಿಸಿ ಕೆಲವು ವರ್ಷಗಳ ಸತತ ಅಭ್ಯಾಸದಿಂದ ದಿಂದ ಅವರಲ್ಲಿ ಪಾರಂಗತರಾಗಬಹುದು. ಕೂಲಿಕಾರಣ ಮಗಳು ಶಾಸ್ತ್ರೀಯ ವಿಷಯದಲ್ಲಿ ಪ್ರಾವೀಣ್ಯತೆಯನ್ನು ಪಡೆಯಬಹುದು. ಮಾರ್ಗವು ಸುಗಮವಲ್ಲದಿದ್ದರೂ ಸುಸಂಧಿ, ಸನ್ನಿವೇಶಗಳು ಇದ್ದೇ ಇರುವವು.

ಯುನೈಟೆಡ್ ಸ್ಟೇಟ್ಸನಲ್ಲಿ ಶಿಕ್ಷಣ ಪದ್ಧತಿಗಳು, ಅಲ್ಲಿಯ ಜೀವನದಷ್ಟೇ. ವಿವಿಧ ತರದವಿರುವವು. ಸಾರ್ವಜನಿಕ ಶಾಲೆಗಳು, ಬೇಗನೆ ಅಳಿದು ಹೋಗುವ ಹಳ್ಳಿಯ ಒಂದು ಕೋಣೆಯ ಶಾಲಿಗಳಿಂದ ಹಿಡಿದು ೯೦೦೦ ವಿದ್ಯಾರ್ಥಿಗಳುಳ್ಳ ಪಟ್ಟಣದ ದೊಡ್ಡ ಶಾಲೆಗಳ ವರೆಗೂ ಇರುತ್ತವೆ, ಮತ್ತು ಅಭ್ಯಾಸ ಪದ್ಧತಿಗಳೂ ಪ್ರಾಂತ ಪ್ರಾಂತಗಳಿಂದ ಭಿನ್ನವಾಗಿರುತ್ತವೆ.

ಯುನೈಟೆಡ್ ಸ್ಟೇಟ್ಸನಲ್ಲಿ ಉಚಿತ ಸಾರ್ವಜನಿಕ ಶಾಲಾ ಶಿಕ್ಷಣವು ಪ್ರತ್ಯೇಕ ಪ್ರಾಂತದ ಹಾಗೂ ಸ್ಥಳಿಕ ಸಂಸ್ಥೆಗಳ ವೈಶಿಷ್ಟ್ಯವು ಎಂದಿನಿಂದಲೂ ಇರುವದು. ತರುಣರ ಶಿಕ್ಷಣದ ಸಂಬಂಧ ಕಲಿಯುವ ವಿಷಯಗಳ ಹಾಗೂ ಕಲಿಸುವ ಪದ್ಧತಿಗಳ ಮೇಲೆ ಅಲ್ಲಿಯ ರಾಷ್ಟ್ರೀಯ ಸರಕಾರವು ಪರಂಪರೆಯ ತನ್ನ ಅಧಿಕಾರವನ್ನು ನಡೆಸಿಲ್ಲ.

ಅಮೇರಿಕೆಯ ಸಾರ್ವಜನಿಕ ಶಾಲೆಗಳು ತರುಣ ಬಾಲ ಬಾಲಿಕೆಯರಿಗೆ ಎಲ್ಲ ವಿಧದ ಶಿಕ್ಷಣವನ್ನು ಉತ್ತಮ ಸ್ವಭಾವ, ಉಚ್ಚ ಧ್ಯೇಯ ಮತ್ತು ಸಾರ್ವಜನಿಕ ಹೊಣೆಗಾರಿಕೆ ಇವುಗಳಿಂದ ಒಡಗೂಡಿದ ಶಿಕ್ಷಣವನ್ನು ಕೊಡಲು ಯತ್ನಿಸುತ್ತವೆ. ಭಾವೀ ನಾಗರಿಕರು ತುಂಬು ಜೀವನವನ್ನು ನಡೆಸಲೂ, ಮಕ್ಕಳ ವೈಯಕ್ತಿಕ ವ್ಯಕ್ತಿತ್ವವನ್ನು ಬೆಳಸಿ ಪರಿಪೂರ್ಣಗೊಳಿಸಲೂ. ಇಲ್ಲಿಯ ಶಿಕ್ಷಣ ಸಂಸ್ಥೆಗಳು ಯಾವಾಗಲೂ ಪ್ರಯತ್ನಿಸುತ್ತವೆ. ಇಲ್ಲಿಯ ಶಿಕ್ಷಣದ ಧ್ಯೇಯವು ಹೊಣೆಗಾರಿಕೆಯ ನಾಗರಿಕತನವನ್ನು ವಹಿಸಲು ಅಣಿಮಾಡಲೂ, ಉತ್ತಮ ಮೇಧಾವಿಗಳನ್ನೂ ಸಿದ್ಧಗೊಳಿಸುವಂಥದೂ ಆಗಿರುವದು.

ಪ್ರಾಥಮಿಕ ಶಾಲೆಗಳು

ಯುನೈಟೆಡ್ ಸ್ಟೇಟ್ಸನಲ್ಲಿ ಸುಮಾರು ೧೫೫,೦೦೦ ಪ್ರಾಥಮಿಕ ಶಾಲೆಗಳೂ ೨೩,೭೦೦,೦೦ ವಿದ್ಯಾರ್ಥಿಗಳೂ ಇರುವರು. ಸುಮಾರು ೧೦೦ಕ್ಕೆ ೯೦ರಷ್ಟು ವಿದ್ಯಾರ್ಥಿಗಳು ಸರಕಾರದ ಇಲ್ಲವೆ ಸ್ಥಳಿಕ ಆಡಳಿತಕ್ಕೆ ಒಳಪಟ್ಟ ಉಚಿತ ಸಾರ್ವಜನಿಕ ಶಾಲೆಗಳಲ್ಲಿ ಇರುವರು.

ಅಮೇರಿಕೆಯ ಬಾಲಬಾಲಿಕೆಯರು ತೀರ ಚಿಕ್ಕ ವಯಸ್ಸಿನಲ್ಲಿಯೇ ಶಾಲೆಗೆ ಹೋಗುತ್ತಾರೆ. ೩-೪ ವರ್ಷದ ಬಾಲಬಾಲಿಕೆಯರು ಅನೇಕರು, ಪ್ರತಿದಿನ ಕೆಲವು ತಾಸುಗಳ ವರೆಗೆ ಸಾರ್ವಜನಿಕ ಇಲ್ಲವೆ ಖಾಸಗಿ ಶಿಶು ಶಾಲೆ-

ಗಳಿಗೆ ಹೋಗುತ್ತಾರೆ. ಅಲ್ಲಿ ಅವರು ಗುಂಪುಗಳಲ್ಲಿ ಆಡಲು ಕಲಿಯುತ್ತಾರೆ. ೪-೫ ವರ್ಷದ ಅನೇಕ ಬಾಲ ಬಾಲಕಿಯರು ಕಿಂಡರಗಾರ್ಟನ ಸಾರ್ವಜನಿಕ ಶಾಲೆಗಳಿಗೆ ಹೋಗುತ್ತಾರೆ. ಅಲ್ಲಿ ಅವರ ಸಾಮಾಜಿಕ ದೈಹಿಕ ಬೆಳವಣಿಗೆಯನ್ನು ಹೊಂದಲೂ, ಅದೇ ಸಮಯಕ್ಕೆ ಬುದ್ಧಿ ಶಕ್ತಿಯನ್ನು ಬೆಳಿಸಲೂ ಆಸ್ಪದವಿರುತ್ತದೆ. ಕಿಂಡರಗಾರ್ಟನ ಪದ್ಧತಿಯು ಸಾಮಾನ್ಯವಾಗಿ ಅಮೇರಿಕೆಯ ಕೂಸಿನ ಪ್ರಾರಂಭದ ಶಾಲಾ ಶಿಕ್ಷಣವು. ನಿಶ್ಚಿತ ಅಭ್ಯಾಸ ಪತ್ರಿಕೆಯಲ್ಲದೆ ಅದು ನಿಜವಾಗಿ, ಭಾವೀ ಶಾಲೆಯ ಶಿಕ್ಷಣದ ಅನುಭವದಂತೆ ಸ್ವಾಭಾವಿಕ ಶಿಕ್ಷಣವಾಗಿರುತ್ತದೆ.

ಸಾಮಾನ್ಯವಾಗಿ ಆಧುನಿಕ ಸಾರ್ವಜನಿಕ ಪ್ರಾಥಮಿಕ ಶಾಲೆಯು ಒಂದು ಇಲ್ಲವೆ ಎರಡು ಅಂತಸ್ತಿನ ಇಟ್ಟಂಗಿಯ ಇಮಾರತು ಇದ್ದು ಅಲ್ಲಿ ೪-೫ ವಯಸ್ಸಿನಿಂದ ೧೨-೧೩-೧೪ ವಯಸ್ಸಿನ ವರೆಗಿನ ಬಾಲಬಾಲಿಕೆಯರು ಕಲಿಯುತ್ತಾರೆ. ಅವರೆಲ್ಲರೂ ಸ್ಥಳಿಕ ಆಡಳಿತಕ್ಕೆ ಒಳಗೊಂಡಿರುತ್ತಾರೆ. ವರ್ಗದ ಕೋಣೆಗಳು ದೊಡ್ಡವೂ ಹವೆಯಾಡುವಂಥವೂ ಆಗಿರುತ್ತವೆ. ಮೇಜು ಕುರ್ಚಿ ಡೆಸ್ಕ ಮೊದಲಾದವು ಸ್ಥಳಾಂತರಿಸಲು ಬರುವಹಾಗೆ ಇರುವವು. ಸ್ವಾಭಾವಿಕ ಹಾಗೂ ಕೃತ್ರಿಮ ಬೆಳಕಿನ ವ್ಯವಸ್ಥೆಯು ಆರೋಗ್ಯಕರವಾಗುವಂತೆ ಇರುವದು. ಗೋಡೆಗಳಿಗೆ ಸಾಧಾರಣ ಹೊಳಪುಳ್ಳ ಬಣ್ಣವನ್ನು ಬಳೆದಿರುತ್ತಾರೆ. ಅವು ವಿದ್ಯಾರ್ಥಿಗಳಿಂದ ಸಿದ್ಧವಾದ ಬಣ್ಣಗಳಲ್ಲಿ ಚಿತ್ರಿತವಾದ ಕಲಾಕೃತಿ ಪಟಗಳಿಂದ ಅಲಂಕೃತವಾಗಿರುತ್ತವೆ. ಪ್ರತಿಯೊಂದು ಕೋಣೆಯಲ್ಲಿ ಬಾಲಕರಿಗೆ ಓದಲು ಮನೋರಂಜಕವಾದ ಪುಸ್ತಕಗಳಿರುತ್ತವೆ. ಕೃತಿಗಳನ್ನು ಜರುಗಿಸಲು ವಿಜ್ಞಾನದ ಉಪಕರಣಗಳಿರುವವು. ಚಿತ್ರ ತೆಗೆಯಲು ಕಾಗದ ಬಣ್ಣ ಹಾಗೂ ಕುಂಚಗಳಿರುವವು. ಬೆಳೆಯುವ ಹಾಗೂ ಜೀವಂತ ವಸ್ತುಗಳಾದ ಹೂವುಗಳೂ, ಪ್ರೀತಿ ಬರುವ ಚಿಕ್ಕ ಚಿಕ್ಕ ಪ್ರಾಣಿಗಳೂ ಇರುವವು. ಮಳೆ ಛಳಿಗಳಿಲ್ಲದಾಗ ವರ್ಗಗಳು ಹೊರಗೆ ಬಯಲಲ್ಲಿಯೇ ನಡೆಯುತ್ತವೆ. ಇದರಿಂದ ಬಾಲಬಾಲಿಕೆಯವರಿಗೆ ಸೂರ್ಯನ ಬೆಳಕು, ಶುದ್ಧವಾದ ಹವೆ, ಶಾರೀರಿಕ ಚಟುವಟಿಕೆಗಳ ಲಾಭಗಳು ದೊರೆಯುತ್ತವೆ.

ಒಟ್ಟಿಗೆ ಅವರಿಗೆ ಓದು, ಬರೆಹ, ಗಣಿತ ಇವುಗಳ ಮೂಲ ಜ್ಞಾನ ಒದಗಿಸಿ ಕೊಡುತ್ತವೆ. ಇತಿಹಾಸ, ಭೂಗೋಲ, ಕೆಳಗಿನ ಈಯತ್ತೆಗಳಲ್ಲಿ ಪ್ರಾರಂಭದ ವಿಜ್ಞಾನದ ಶಾಖೆಗಳು, ಸೃಷ್ಟಿ ನಿರೀಕ್ಷಣೆ, ರಾಷ್ಟ್ರದಲ್ಲಿ ನಡೆದ ಸದ್ಯದ ಸಂಗತಿಗಳು ಇವುಗಳ ಬಗೆಗೂ ಜ್ಞಾನವೂ ಲಭಿಸುತ್ತದೆ. ಬಾಲಬಾಲಿಕೆಯರ ಸ್ವಂತ ನಿರೀಕ್ಷಣೆ ಮತ್ತು ಲಕ್ಷ್ಯಪೂರಿತ ಕೇಳುವಿಕೆ ಇವುಗಳ ಶಕ್ತಿಗಳು ಚನ್ನಾಗಿ ಪೋಷಿಸಲ್ಪಡುವವು. ಅವರ ಪ್ರತಿ ದಿನದ ಅನುಭವಗಳನ್ನು ಸಂಗ್ರಹಿಸಲೂ ಚರ್ಚಿಸಲೂ ಎರಡನೆಯವರಿಗೆ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸಲು ಅವರ ಸಾಮರ್ಥ್ಯವನ್ನು ಬೆಳಿಸಿಕೊಳ್ಳಲೂ ಸಹಾಯವನ್ನು ಒದಗಿಸಿ ಕೊಡಲಾಗುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ಬಾಲಕರೂ ಬಾಲಿಕೆಯರೂ ಕೂಡಿಯೇ ಕೆಲಸಮಾಡುವರು ಮತ್ತು ಆಡುವರು. ಇದರಿಂದ ಸುಸಂಧಿಗಳು ದೊರೆತು ಅವರು ಉತ್ತಮ ಸಾಮಾಜಿಕ ಸಂಬಂಧಗಳನ್ನು ಬೆಳಿಸಿಕೊಳ್ಳುವರು. ಅವರು ಸಮಾಜವನ್ನು ಬಿಟ್ಟು ಅಭ್ಯಾಸವನ್ನು ಮಾಡುವದಿಲ್ಲ. ಅವರ ಶಾಲೆಯು ಕುಟುಂಬ, ಪಟ್ಟಣ, ರಾಜ್ಯ ಜನಾಂಗ ಹಾಗೂ ಜಗತ್ತುಗಳ ಒಂದು ಅಂಗವಾಗಿರುವದು. ಬಾಲಕರು ವಿಶಾಲವಾದ ಬಾಹ್ಯ ಜಗತ್ತಿನ ಸಾಮಾಜಿಕ ಪರಿಸ್ಥಿತಿಯು ಒಂದು ಸಣ್ಣ ಅಂಶವೆಂದು ತಿಳಿದುಕೊಳ್ಳಲು ಸಹಾಯಮಾಡುತ್ತಾರೆ. ಸಮಾಜದಲ್ಲಿಯ ತಮ್ಮ ಸ್ಥಾನಮಾನಗಳನ್ನು ತಳಕೊಳ್ಳಲು ಅವರು ಪ್ರಾರಂಭಿಸುತ್ತಾರೆ. ತಮಗೆ ದೊರೆತು ಸನ್ನಿವೇಶಗಳನ್ನು ಉಪಯೋಗಿಸಿಕೊಳ್ಳಲೂ ತಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳಲೂ ಅವರು ಯತ್ನಿಸುತ್ತಾರೆ. ಅವರಲ್ಲಿ ಹುದುಗಿದ ಕ್ರಿಯಾತ್ಮಕ ಅಭಿರುಚಿಗಳು ಅವರಿಗೂ ಇವರ ಗೆಳೆಯರಿಗೂ ಆನಂದ ಹಾಗೂ ಸಮಾಧಾನಗಳನ್ನು ಕೊಡುವ ಶಾಶ್ವತ ಉಗಮಸ್ಥಾನದಂತೆ ಪೋಷಿಸಲ್ಪಡುತ್ತವೆ.

ಪ್ರಾಥಮಿಕ ಶಾಲೆಯ ಅಭ್ಯಾಸ ಪತ್ರಿಕೆ ವಿಷಯಗಳು

೧ ಗಣಿತ, ೨ ಕಲೆಗಳು, ಕೈಗಾರಿಕೆಗಳು, ೩ ಔದ್ಯೋಗಿಕ ಕಲೆಗಳು, ೪ ಆರೋಗ್ಯ, ೫ ಮನೆತನದ ವ್ಯವಹಾರ ಹಾಗೂ ಅರ್ಥಶಾಸ್ತ್ರ, ೬ ಭಾಷಾ ಕಲೆಗಳು ಕೇಳುವದು

೭ ಓದುವದು ಮತ್ತು ಸಾಹಿತ್ಯ, ೮ ಮಾತನಾಡುವದು ೯ ಅಕ್ಷರಗಳನ್ನು ಹೊಂದಿಸುವದು. (Spellings) ೧೦ ಬರೆಯುವದು ೧೧ ಗಾಯನ ೧೨ ಶಾರೀರಿಕ ಶಿಕ್ಷಣ ೧೩ ವಿಜ್ಞಾನ ೧೪ ಸಮಾಜ ವಿಜ್ಞಾನ, ಭೂಗೋಲ, ಇತಿಹಾಸ ಮತ್ತು ಪೌರನೀತಿ

೧ರಿಂದ ೮ ತರಗತಿಗಳಲ್ಲಿದ್ದು ಔದ್ಯೋಗಿಕ ಕಲೆಗಳು ಮತ್ತು ಮನೆತನದ ವ್ಯವಹಾರ ಹಾಗೂ ಅರ್ಥಶಾಸ್ತ್ರಗಳು ೭-೮ ತರಗತಿಗಳಲ್ಲಿ ಮಾತ್ರ ಕಲಿಸಲ್ಪಟ್ಟು, ಉಳಿದ ಎಲ್ಲ ವಿಷಯಗಳು ಎಲ್ಲ ತರಗತಿಗಳಲ್ಲಿ ಕಲಿಸಲ್ಪಡುತ್ತವೆ.

ಅಮೇರಿಕನ್ನರ ಮುಖ್ಯ ಧ್ಯೇಯವು ಈ ಎಲ್ಲ ಸನ್ನಿವೇಶಗಳನ್ನು ಎಲ್ಲರಿಗೂ ಒದಗಿಸಿ ಕೊಡುವದಾಗಿರುವದು ಹಳ್ಳಿಯ ಪ್ರದೇಶಗಳಲ್ಲಿ ವಾತಾವರಣವು ಪಟ್ಟಣಗಳನ್ನು ವಿವಿಧ ಪ್ರಕಾರದ್ದಿರುವದಿಲ್ಲ. ಒಂದೇ ಕೋಣೆಯ ಹಳ್ಳಿಯ ಶಾಲೆಗಳು ಪ್ರತಿವರ್ಷ ೫೦೦೦ ದಂತೆ ಕಡಿಮೆಯಾಗಿ ಅವುಗಳ ಬದಲು ದೊಡ್ಡ ಪ್ರಮಾಣದ ವ್ಯವಸ್ಥೆಯುಳ್ಳ ಶಾಲೆಗಳು ಅಸ್ತಿತ್ವದಲ್ಲಿ ಬರುತ್ತವೆ. ೬-೭ ಸಣ್ಣ ಸಣ್ಣ ಶಾಲೆಗಳನ್ನು ಕೂಡಿಸಿ ಒಂದು ಮಧ್ಯವರ್ತಿ ಶಾಲೆಯನ್ನಾಗಿ ಮಾರ್ಪಡಿಸುವರು. ಅಲ್ಲಿ ಹೆಚ್ಚು ಶಿಕ್ಷಕರನ್ನು ನೇಮಿಸಿ ಉತ್ತಮ ಇಮಾರತುಗಳಲ್ಲಿ ವರ್ಗಗಳ ವ್ಯವಸ್ಥೆ ಮಾಡುತ್ತಾರೆ. ಇದಲ್ಲದೆ ಪ್ರಯೋಗ ಶಾಲೆಗೆ ಬೇಕಾಗುವ ಎಲ್ಲ ಸೌಕರ್ಯಗಳನ್ನು ಹೆಚ್ಚು ಆನಂದ ಕೊಡುವ ಮನೋರಂಜಕ ವಸ್ತುಗಳನ್ನು ಒದಗಿಸಿಕೊಡುತ್ತಾರೆ.

ಮೇಧಾವಿಯಾದ ಬಾಲಕನಿಗೆ ಯಾವಾಗಲೂ ವಿಶಿಷ್ಟ ಲಕ್ಷವನ್ನು ಪೂರೈಸಲಾಗುವದು. ಉದಾಹರಣೆಗೆ ಒಬ್ಬ ಹುಡುಗನು ಗಾಯನದಲ್ಲಿ ವಿಶೇಷವಾದ ಜಾಣತನವನ್ನು ತೋರಿಸಿದರೆ ಆ ಕಲೆಯಲ್ಲಿ ನಿಷ್ಣಾತನಾಗಲು ವಿಶೇಷ ಪ್ರೋತ್ಸಾಹವನ್ನು ಕೊಡಲಾಗುವದು. ಹಿಂದುಳಿದ ಬಾಲಕರಿಗೆ ವಿಶೇಷ ವರ್ಗಗಳು ಇಲ್ಲವೆ ಶಾಲೆಗಳನ್ನಿಟ್ಟು ಅವರಿಗೆ ಹೆಚ್ಚು ಲಕ್ಷ ಪೂರೈಸುವರು.

ಇಲ್ಲಿ ಶಿಕ್ಷಣವು ಕೃತ್ರಿಮವಲ್ಲ. ಅದು ನೈಜವಾದುದು. ಮತ್ತು ಬಾಲಕರ ಅಭಿರುಚಿ ಹಾಗೂ ಅವಶ್ಯಕತೆಗಳ ಪ್ರಕಾರ ಶಿಕ್ಷಣವು ಉಪಯುಕ್ತವೂ ಸ್ವಾಭಾವಿಕವಾಗುವಂತೆಯೂ ವಿಶೇಷ ಪ್ರಯತ್ನ ಮಾಡಲಾಗುತ್ತದೆ. ಐತಿಹಾಸಿಕ ಚಲನ ಚಿತ್ರಗಳು, ಚಿತ್ರಪಟ (Slides) ಇತರ ಚಿತ್ರಗಳು ಫೋಟೋ ಬಾನುಲಿ ಕಾರ್ಯಕ್ರಮಗಳು ವೃತ್ತ ಪತ್ರಿಕೆಗಳು ಶಾಲೆಯ ಮಾಸಿಕ ಪತ್ರಿಕೆಗಳು ಇವು ಅವರ ಪೂರಕ ವಾಚನಗಳು ವಸ್ತುಸಂಗ್ರಲಯಗಳು, ಕಲಾಮಂದಿರಗಳು, ವಾಚನಾಲಯಗಳು, ಫ್ಯಾಕ್ಟರಿಗಳು, ಔದ್ಯೋಗಿಕ ಮನೆಗಳು ಇವು ಶಾಲೆಯ ಅಂಗಗಳೆಂದು ತಿಳಿದು ಬಾಲಕರು ಆಗಾಗ್ಗೆ ಅವುಗಳಿಗೆ ಸಂದರ್ಶನವೀಯುವರು. ಸಾಧ್ಯವಿದ್ದಾಗ ಪರದೇಶದ ಪ್ರವಾಸಿಕರು, ಸಮಾಜದ ಮುಖಂಡರು ಆಮಂತ್ರಿತರಾಗಿ ಬಾಲಕರಿಗೆ ಹೊಸ ಸಂಗತಿಗಳನ್ನು ಹೇಳಿಕೊಡುತ್ತಾರೆ. ಇದರಿಂದ ಅವರ ಶಾಲಾ ಕಾರ್ಯವು ಸ್ವಾಭಾವಿಕವಾಗಿ ಹೆಚ್ಚು ಬೆಳವಣಿಗೆಯನ್ನು ಹೊಂದುವದು.

ಪ್ರಾಥಮಿಕ ಶಿಕ್ಷಣದ ಗುರಿಯು ಪ್ರತಿಯೊಬ್ಬ ಬಾಲಕನಿಗೆ ಅವನು ವಾಸಿಸುವ ಜಗತ್ತಿನ ಸಂಬಂಧ ಮೂಲಜ್ಞಾನವನ್ನು ಮಾಡಿಕೊಡುವದು. ವೈಯಕ್ತಿಕ ಶಕ್ತಿ ಸಾಮರ್ಥ್ಯಗಳನ್ನು ಬೆಳಸಿಕೊಳ್ಳುವದೂ ಎರಡನೆಯವರ ಹಕ್ಕು ಬಾಧ್ಯತೆಗಳಿಗೆ ಮರ್ಯಾದೆಕೊಡಲು ಕಲಿಸುವದೂ, ತಾನಿದ್ದ ಸಮಾಜದಲ್ಲಿ ತನ್ನ ಜವಾಬ್ದಾರಿಯನ್ನು ತಿಳಿದುಕೊಳ್ಳಲು ಸಹಾಯಮಾಡುವದೂ ಆಗಿರುವದು.

—ಗ್ರಾಮ ಸಂಪರ್ಕ—

ಲೇಖಕರು:—ಶ್ರೀ. ಆಯ್. ಎಸ್. ಬಿದರಿ, ಧಾರವಾಡ

ಹಿಂದುಸ್ಥಾನವು ಹಳ್ಳಿಗಳ ಬೀಡು; ಬಹು ಸಂಖ್ಯಾಕ ಜನಸಾಮಾನ್ಯರು ಹಳ್ಳಿಯಲ್ಲಿಯೇ ವಾಸಿಸುವರು. ಶಿಕ್ಷಣವು ಜನಸಾಮಾನ್ಯರ ಜೀವನಕ್ಕೆ ನಿಕಟವರ್ತಿಯಾಗಿರಬೇಕಾಗುವದು ಸಹಜ. ಅದರಂತೆ ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ ಕೊಡಿಸಲು ಸಾಧ್ಯವಿಲ್ಲದ ಅನೇಕ ಹಳ್ಳಿಗರಿಗೆ ಪ್ರಾಥಮಿಕ ಶಿಕ್ಷಣವಂತೂ ಅತ್ಯವಶ್ಯ. ಇದೇ ಉದ್ದೇಶದಿಂದ ಉಚಿತ-ಸಕ್ತಿ ಶಿಕ್ಷಣವು ಮುಂಬಯಿ ರಾಜ್ಯದಲ್ಲೆಲ್ಲ ಅಮಲಿನಲ್ಲಿ ಬಂದು ಬಾಯಿತು; ರಾಜ್ಯದ ಹಲವು ಸಾಲೆಗಳು ಜೀವನಕೆ ನಿಕಟವರ್ತಿಯಾದ ಜೀವನ ಶಿಕ್ಷಣವನ್ನು ಕೊಡುವ ಸಾಲೆಗಳಾಗಿ ಪರಿವರ್ತನ ಹೊಂದಿದವು. ಪರಂಪರಾಗತವಾದ ಹಳೆಯ ಪುಸ್ತಕೀಯ ಶಿಕ್ಷಣ ಕ್ರಮವನ್ನು ಬದಿಗಿರಿಸಿ ಜೀವನ ಶಿಕ್ಷಣದಲ್ಲಿ ತರಬೇತಿಗೊಳಿಸುವದಕ್ಕಾಗಿ ಪ್ರಾಥಮಿಕ ಟ್ರೇನಿಂಗ ಕಾಲೇಜುಗಳು ಜೀವನ ಶಿಕ್ಷಣ ಕೇಂದ್ರಗಳಾಗಿ ಮಾರ್ಪಾಟು ಹೊಂದಿದವು. ಜೀವನ ಶಿಕ್ಷಣದ ವಿವಿಧ ಅಂಗಗಳಾದ ಮೂಲೋದ್ಯೋಗ, ಸಾಂಘಿಕ ಜೀವನ, ಸಾಮಾಜಿಕ ಸೇವೆ, ಗ್ರಾಮವಾಸ್ತವ್ಯ ಮೊದಲಾದವುಗಳ ಮುಖಾಂತರ ಶಿಕ್ಷಣವೀಯುವ ತರಬೇತಿಯು ಆರಂಭವಾಯಿತು. ಟ್ರೇನಿಂಗ ಕಾಲೇಜುಗಳ ಹೊಸ ಅಭ್ಯಾಸ ಪತ್ರಿಕೆಗಳಲ್ಲಿ ಮೇಲ್ಕಾಣಿಸಿದ ಎಲ್ಲ ಅಂಗಗಳಲ್ಲಿ ಪ್ರಾಥಮಿಕ ಶಿಕ್ಷಕರನ್ನು ತರಬೇತುಗೊಳಿಸುವದು ಅವಶ್ಯವೆಂದು ನಿರೂಪಿಸಲಾಯಿತು.

ಈ ಹೊಸ ಯೋಜನೆಯನ್ವಯ ವರ್ಷದಲ್ಲಿ ಒಂದು ವಾರದ ವರೆಗೆ ಟ್ರೇನಿಂಗ ಕಾಲೇಜುಗಳ ಎಲ್ಲ ಶಿಕ್ಷಕ ವಿದ್ಯಾರ್ಥಿಗಳು ತಮ್ಮೊಳಗೆ ಗುಂಪುಗಳನ್ನಾಗಿ ಮಾಡಿಕೊಂಡು ತಮ್ಮ ಅಧ್ಯಾಪಕರ ಮಾರ್ಗದರ್ಶನದಲ್ಲಿ ಮೊದಲೇ ಆರಿಸಿದ, ಕಾಲೇಜದಿಂದ ಅನತಿ ದೂರದಲ್ಲಿರುವ ಹಳ್ಳಿಗಳಿಗೆ ಹೋಗಿ ಅಲ್ಲಿ ವಾಸಮಾಡಿ ಸಾಮಾಜಿಕ ಸೇವೆಯನ್ನು ಮಾಡುವದಲ್ಲದೆ ಗ್ರಾಮ ಪರಿಚಯದ ಕೆಲಸವನ್ನೂ ಮಾಡುವ ವಿಧಾನವನ್ನು ಕೈಕೊಂಡರು. ಗ್ರಾಮವಾಸ್ತವ್ಯದ ಮಹತಿಯು ಹೊಸ ಶಿಕ್ಷಣದಲ್ಲಿ ಉಚ್ಚತಮವಾದುದೂ ಎಂದು ಹೇಳಲ್ಪಟ್ಟ ಮಾತು ಪ್ರತ್ಯಕ್ಷ ಅನುಭವದಿಂದ ಹಳ್ಳಿಯ ವಾಸ್ತವ್ಯದ ಯೋಜನೆಯನು ಕೈಕೊಂಡ ಕಾಲೇಜುಗಳ ಶಿಕ್ಷಕ-ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಮನದಟ್ಟಾಗಿರಲು ಸಾಕು.

ಹಳ್ಳಿಗರಿಗೆ ಹೆಚ್ಚಾಗಿ ಸ್ವಚ್ಛತೆಯ ಕಲ್ಪನೆ ಮಾಡಿಕೊಡುವದು, ಗೊಬ್ಬರ ತಯಾರಿಸುವ ನಿಜ ವಿಧಾನವನ್ನು ತೋರಿಸುವದು, ಗಿಡಗಳ ಮಹತ್ವವನ್ನು ಅರುಹುವದು, ಸ್ವದೇಶಿ ವಸ್ತುಗಳ ಲಾಭವನ್ನು ತಿಳಿಸುವದು, ಸ್ವಾವಲಂಬನದ ಶ್ರೇಷ್ಠತೆಯನ್ನು ಬೀರುವದು ಒಟ್ಟಾರೆ ಹಳ್ಳಿಗಳ ಉದ್ಧಾರದ ಮಾರ್ಗವಾವುದೆಂಬುದನ್ನು ದರ್ಶನಿಸುವದು ಹಳ್ಳಿಯ ವಾಸ್ತವ್ಯದ ಮೂಲಭೂತ ಮಾತಾಗಿರುವದೆಂದರೆ ತಪ್ಪಾಗಲಿಕ್ಕಿಲ್ಲ. ಮೇಲ್ಕಾಣಿಸಿದ ಈ ಮಾತುಗಳು ಹಳ್ಳಿಗರಿಗೆ ಹೃದ್ಗತವಾಗಬೇಕಾದರೆ ಕೇವಲ ಬಾಯಿಮಾತಿನಿಂದಾಗಲಿ, ಉದ್ದುದ್ದ ಭಾಷಣಗಳಿಂದಾಗಲಿ, ತತ್ವ ಬೋಧನೆಯಿಂದಾಗಲಿ, ಸಾಧ್ಯವಿಲ್ಲ ಈ ಎಲ್ಲ ಕೃತಿಗಳನ್ನು ಅವರ ಮಧ್ಯದಲ್ಲಿಯೇ ವಾಸವಾಗಿ ಅವರ ನೆರವಿನಿಂದ ಪ್ರತ್ಯಕ್ಷ ಮಾಡುತ್ತಾ ಸಾಗಿದರೆ ಆ ಕೆಲಸಗಳ ಮಹತ್ವವೂ ಮತ್ತು ತಮ್ಮತನದ ಅರಿವೂ ಅವರಿಗೆ ಗೊತ್ತಾಗಿ ಅವರೂ ಸಹ ಕಾರ್ಯಪ್ರವೃತ್ತರಾಗುವದರಲ್ಲಿ ಸಂದೇಹವಿಲ್ಲ. ಉದಾಹರಣೆಗಾಗಿ ಈ ಸಲ ಹೊಸರಿತ್ತಿ ಹೊಂದಿಕೆಯ ಕ್ಷೇತ್ರದ ಕರ್ಜಗಿ, ಗುತ್ತಲ, ಅಗಡಿ, ಹೊಸರಿತ್ತಿ ಗ್ರಾಮಗಳಲ್ಲಿ ವಾಸಮಾಡಿದ ಧಾರವಾಡ ಸರಕಾರೀ ಟ್ರೇನಿಂಗ ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳು ತೋಡಿದ ಗೊಬ್ಬರ ಕುಣಿಗಳು, ನೆಟ್ಟ ಗಿಡಗಳು, ರಚಿಸಿದ ರಸ್ತೆಗಳು, ಕಟ್ಟಿದ ಗೋಡೆಗಳು, ಕೈಕೊಂಡ ಪ್ರವಾಸ-

ಗಳು, ಗ್ರೈದ ಸಫಾಯಿ ಕೆಲಸ, ಬೀರಿದ ಹರಿಜನೋದ್ಧಾರದ ಮಹತ್ವ, ಮಾಡಿದ ಸ್ವದೇಶೀ ವಸ್ತ್ರದ ಕಾರ್ಯ ಇವೆಲ್ಲ ಸಾಕ್ಷಿ ಎಂದು ಹೇಳಬಹುದು.

ಸಾಮಾಜಿಕ ಕಾರ್ಯಗಳಿಂದ ಶಿಕ್ಷಕರಿಗೂ ಹಾಗೂ ಕಾರ್ಯರಂಗಗಳಾದ ಹಳ್ಳಿಗಳಿಗೂ ಕೂಡಿಯೇ ಲಾಭವಾಗುವದು. ಶಿಕ್ಷಕರಿಗೆ ಈ ಕೆಲಸಗಳ ಬಗೆಗೆ ತಾತ್ವಿಕ ಮಾತುಗಳನ್ನು ಎಷ್ಟೇ ಹೇಳಿದರೂ ತಕ್ಕಷ್ಟು ಪರಿಣಾಮವಾಗದು. ಪ್ರತ್ಯಕ್ಷ ಮಾಡುವದರಿಂದ ಆ ಕೆಲಸದ ಎಲ್ಲ ಬಗೆಯ ಅನುಭವವು ಆಗುವುದಲ್ಲದೆ ಅವರ ಜ್ಞಾನವು ಅವಿನಾಶಿಯಾಗಿ ಅವರಲ್ಲಿ ಉಳಿಯುವದು. ''ಮಾಡುತ್ತ ಕಲಿ'' ಎಂಬ ತತ್ವವಾದರೂ ಇದೇ ಮಾತನ್ನು ಸಾರುವದು. ಇದಲ್ಲದೆ 'ಸಫಾಯಿ' ಮೊದಲಾದ ಕೆಲಸಗಳನ್ನು ಮಾಡುವದರಿಂದ ಬಾಹ್ಯ ಕಣ್ಣಿಗೆ ಕಾಣಿಸುವ ಕೆಲಸವು ಆಗುವದಲ್ಲದೆ ಶಿಕ್ಷಕರ ಮನಸ್ಸಿನಲ್ಲಿ ಕೆಲಸದ ಬಗೆಗೆ ಗೌರವವೂ ಜನಿಸಿ ಮೇಲು ಕೀಳುಗಳೆಂಬ ತಾರತಮ್ಯ ಭಾವವೂ ಮಾಯವಾಗುವದು. ಸಂಘಟನೆಯ ಜಾಣ್ಮೆ, ಕೂಡಿ ಕೆಲಸ ಮಾಡುವ ಪ್ರವೃತ್ತಿ, ಸ್ನೇಹ. ಸೌಹಾರ್ದ್ರತೆತೆಗಳು ಬೆಳೆದುಬರುವಲ್ಲಿ ಸಂದೇಹವಿಲ್ಲ. ಸ್ವಾವಲಂಬನ ಪ್ರವೃತ್ತಿ ಹಾಗೂ ಸ್ವಕೀಯ ಭಾವನೆ ಇವು ತಾವೇ ತಾವಾಗಿ ಒಡ ಮೂಡುವವು.

ಇನ್ನು ಕಾರ್ಯಭೂಮಿಗಳಾದ ಹಳ್ಳಿಗಳಿಗೆ ಹಾಗೂ ಹಳ್ಳಿಗರಿಗೆ ಗೋಚರ ಹಾಗೂ ಅಗೋಚರ ಲಾಭವಾಗುವ ಪರಿಮಿತಿಯು ಅಷ್ಟಿಷ್ಟೆಂದು ಹೇಳಲಸದಳ. ಬಾಹ್ಯ ಕಣ್ಣಿಗೆ ಕಾಣುವ ಕಾರ್ಯಗಳ ಪರಿಶೀಲನೆಯಂತೂ ಇದ್ದೇ ಇದೆ. ಹಳ್ಳಿಗರಲ್ಲಿ ತಮ್ಮ ಹಾಗೂ ನೆರೆಹೊರೆಯ ಸ್ವಚ್ಛತೆ,ರಸ್ತೆಗಳ ಸ್ವಚ್ಛತೆ ಮಲ ಮೂತ್ರಾದಿಗಳ ವಿಸರ್ಜನೆಯ ಸ್ಥಳ, ಗೊಬ್ಬರ, ಗಿಡಗಳು, ಸಾಲೆ, ಸಮಾಜ ಶಿಕ್ಷಣ ಇವೇ ಮೊದಲಾದವುಗಳ ಮಹತ್ವವು ಪರಸ್ಥಳದವರು ಬಂದು ತಮ್ಮಲ್ಲಿ ಮಾಡಲುಜ್ಜುಗಿಸುವದ್ದರಿಂದ ಅವರಲ್ಲಿ ಹೃದಯ ಮನಸ್ಸುಗಳ ಮಂಥನವೇ ಆರಂಭವಾಗುವದು. ತಮ್ಮ ಸ್ವಂತ ಗ್ರಾಮ ಹಾಗೂ ಸಮಾಜ ಇವುಗಳ ಬಗೆಗೆ ತಾವು ಕರ್ತವ್ಯಚ್ಯುತರಾದೆವೆಂದೂ ಸಮಾಜ ಮತ್ತು ಹಳ್ಳಿಗಾಗಿ ಮಾಡತಕ್ಕ ಕೆಲಸ ಬಹಳವಿದೆಯೆಂದೂ ಆ ಕಾರ್ಯವನ್ನು ಮಾಡಿದರೆ ತಮ್ಮ ಹಳ್ಳಿಯು ಸ್ವಚ್ಛತೆಯು ಆಗರ, ಸೌಂದರ್ಯದ ಬೀಡು, ಸಿರಿಯ ತವರ್ಮನೆಯಾಗುವದೆಂದು ಅವರು ಭಾವಿಸಿಕೊಳ್ಳುವರು. ಹೀಗೆ ಸ್ವಕೀಯ ಭಾವನೆಯು ಜಾಗ್ರತವಾಗಿ ಅವರು ತಮ್ಮಲ್ಲಿಗೆ ಆಗಮಿಸಿದ ಜನರಿಗೆ ಎಲ್ಲ ಬಗೆಯ ಸಹಾಯ-ಸಹಕಾರ ನೀಡುವದಲ್ಲದೆ ಅವರು ಮಾಡುವ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಭಾಗ ವಹಿಸುವರು ಇದಕ್ಕೆ ಉದಾಹರಣೆಗಾಗಿ ಹಿಂದೆ ಹೇಳಿದ ಧಾರವಾಡ ಟ್ರೇನಿಂಗ ಕಾಲೇಜದ ಶಿಕ್ಷಕವಿದ್ಯಾರ್ಥಿಗಳ ಹಳ್ಳಿಯ ವಾಸ್ತವ್ಯವನ್ನೇ ಹೇಳಬಹುದು. ವಾಸಮಾಡಿದ ಹಳ್ಳಿಗಳಲ್ಲಿ ಅವರಿಗೆ ಹಳ್ಳಿಗರು ಬೇಕಾದ ಸಕಲ ಸಲಕರಣೆಗಳನ್ನು ಒದಗಿಸಿ ಕೊಟ್ಟರಲ್ಲದೆ ಅವರು ಮಾಡಿದ ಹಲವಾರು ಕೆಲಸಗಳಲ್ಲಿ ಪ್ರತ್ಯಕ್ಷ ಭಾಗ ವಹಿಸಿದರು. ಜಾತಿ, ಮತ, ಪಂಥವೆನ್ನದೆ, ಪಕ್ಷ ಪಂಗಡಗಳನ್ನು ಬದಿಗಿರಿಸಿ ಎಲ್ಲರೂ ಆ ಶಿಕ್ಷಕ-ವಿದ್ಯಾರ್ಥಿಗಳ ಗುಂಪಿನಲ್ಲಿ ಸೇರಿ ಅವರೊಡನೆ ಕಾರ್ಯಮಾಡಿ ಅವರಿಗೆ ಆದರ ಸತ್ಕಾರಗಳನ್ನು ನೀಡಿದರಲ್ಲದೆ ಅವರು ಕೈಕೊಂಡಿರುವ ಕಾರ್ಯದಘನತೆಯನ್ನು ಶಿಕ್ಷಣದಲ್ಲಿ ಪರಿವರ್ತನೆಯಾದ ಈ ರೀತಿ ನೀತಿಗಳನ್ನು ಮನವಾರೆ ಮೆಚ್ಚಿದರು. ಹಳ್ಳಿಗಳ ಪುನರುತ್ಥಾನ ತನ್ಮೂಲಕ ರಾಷ್ಟ್ರದ ಉನ್ನತಿ ಈ ಹೊಸ ಶಿಕ್ಷಣದಿಂದ ಸಾಧಿಸುವಲ್ಲಿ ಸಂದೇಹವಿಲ್ಲೆಂಬ ಮನವರಿಕೆಯು ಅವರಿಗೆ ಆಗಿರಲು ಸಾಕು. ಹೀಗೆ ಹಳ್ಳಿಗರಲ್ಲಿ ಸ್ವಚ್ಛತೆ, ಸೇವಾ ಭಾವನೆ, ಮೈತ್ರಿ, ಸಹಕಾರ, ಸಹಾನುಭೂತಿ, ಐಕ್ಯ, ಸ್ವಾವಲಂಬನ, ಸ್ವಕೀಯತೆ ಇವೇ ಮೊದಲಾದ ಅದ್ವಿತೀಯ ಗುಣಗಳು ಒಡಮೂಡಿ ಬೆಳೆದು ಬಂದ್ರು ತಮ್ಮ ಹಳ್ಳಿಗಾಗಿ ತಾವು, ತಮ್ಮಿಂದಲೇ ತಮ್ಮ ಹಳ್ಳಿ ಎಂಬ ವಿಶಾಲ ಮನೋ ಭಾವನೆಯು ಜಾಗ್ರತವಾಗಿ ಅವರು ಕಾರ್ಯಕ್ಕೆ ಇಳಿಯುವರೆಂದು ಬೇರೆ ಹೇಳಬೇಕಿಲ್ಲ.

ಇನ್ನು ಗ್ರಾಮ ಪರಿಚಯದ ವಿಷಯ. ಶಿಕ್ಷಕರಿಗೆ ತಾವು ಕೆಲಸ ಮಾಡುವ ಹಳ್ಳಿಯ ಇಲ್ಲವೆ ಪಟ್ಟಣದ ಜನಸಂಖ್ಯೆ, ಉದ್ಯೋಗಗಳು, ಭೂಮಿ, ಗುಡಿ ಗುಂಡಾರ, ಮಸೀದೆ, ಚರ್ಚ ದವಾಖಾನೆ ಊರಚರಿತ್ರೆ, ಸುತ್ತು ಮುತ್ತಲಿನ ಭೌಗೋಲಿಕ ಜ್ಞಾನ, ಸಾಮಾಜಿಕ ಸಮಸ್ಯೆಗಳು ಮೊದಲಾದ ಸಂಪೂರ್ಣ ಜ್ಞಾನವಿರುವದು ಅವಶ್ಯವಿದೆ. ಶಿಕ್ಷಕನ ಕಾರ್ಯಕ್ಷೇತ್ರವು ಕೇವಲ ನಾಲ್ಕು ಗೋಡೆಗಳಿಂದ ಆವೃತವಾದ ಸಾಲೆಯ ಆವರಣಕ್ಕಷ್ಟೇ ಪರಿಮಿತಿಯಾಗಿಲ್ಲ. ಅವನ ಕಾರ್ಯ ರಂಗವು ಇಡಿಯ ಹಳ್ಳಿ-

ಯೆಂದೇ ಹೇಳಬಹುದು. ಎಳೆಯರ ಶಿಕ್ಷಣದ ಜೊತೆಗೆ ಅವನು ಪ್ರೌಢರ ಶಿಕ್ಷಣವನ್ನೂ ಸಾಗಿಸಬೇಕು. ಹಳ್ಳಿಗರೊಡನೆ ಬೆರೆತು ತನ್ನ ಸಚ್ಛೀಲ ವೃತ್ತಿಯಿಂದ, ಸ್ವಾವಲಂಬನ ನಿಯಮದಿಂದ ಕ್ರಿಯಾಸಕ್ತಿಯಿಂದ ಹಳ್ಳಿಗರ ಮನೋವಿಕಾರಗಳನ್ನು ಸನ್ಮಾರ್ಗದತ್ತ ತಿರುಗಿಸಿ ಅವರಿಗೆ ಒಂದು ಜ್ಯೋತಿಯಾಗಿ ನಿಲ್ಲಬೇಕು. ಇದು ಸಾಧ್ಯವಾಗಬೇಕಾದರೆ ಆ ಹಳ್ಳಿಯ ಜನರು ಅವರ ಉದ್ಯೋಗ ಧಂದೆಗಳು, ಆಹಾರ ವಿಹಾರಗಳು, ಆರೋಗ್ಯ ವಿಷಯಗಳು, ಧಾರ್ಮಿಕ ಸಂಗತಿಗಳು ಇವೆಲ್ಲವುಗಳನ್ನು ಅವನು ಅರಿತುಕೊಳ್ಳುವದು ಅತಿ ಅವಶ್ಯವಾಗಿದೆ.

ಹಳ್ಳಿಯ ಈ ಶೈಕ್ಷಣಿಕ ಸಿಂಹಾವಲೋಕನದಿಂದ ಹಳ್ಳಿಗರಿಗೂ ಪ್ರಯೋಜನವುಂಟು. ಅನೇಕ ಹಳ್ಳಿಗರಿಗೆ ತಮ್ಮ ಗ್ರಾಮದ ಅನೇಕ ಸಂಗತಿಗಳ ಪೂರ್ಣ ಮಾಹಿತಿಯು ಇರುವದಿಲ್ಲ. ಪರಿಶ್ರಮವಹಿಸಿ ಸಂಗ್ರಹಿಸಿದ ಈ ವಿವರಗಳನ್ನು ಗ್ರಾಮದ ಚಾವಡಿಯಲ್ಲಿ, ಸಾಲೆಯಲ್ಲಿ ಪಂಚಾಯತಿ ಕಚೇರಿಯಲ್ಲಿ ಅಂಟಿಸಿದರೆ ಇದರಿಂದ ಹಳ್ಳಿಗರಿಗೆ ಒಳ್ಳೆಯ ಉಪಯುಕ್ತವಾಗುವದು. ತನ್ನ ತಾನರಿದುಕೊಂಡು ಮುಂದೆ ಸಾಗುವದು ವಿಹಿತವೆಂಬ ವಿಚಾರವು ಪ್ರತಿಯೊಬ್ಬನ ತಡೆಯಲ್ಲಿ ಸುಳಿಯುವದರಲ್ಲಿ ಸಂದೇಹವಿಲ್ಲ.

'ನಾಡಿನ ನರ ನಾಡಿಗಳಾದ ಹಳ್ಳಿಗಳಲ್ಲಿ ವಾಸ ಮಾಡಿ ಸಾಮಾಜಿಕ ಸೇವೆ, ಸಾಂಘಿಕ ಜೀವನ, ಗ್ರಾಮ ಪರಿಚಯದ ಕೆಲಸ ಮಾಡುವ ತರಬೇತಿಯನ್ನು ಪಡೆದ ಶಿಕ್ಷಕರು ತರಬೇತಿಯು ಕೊನೆಗೊಂಡು ಮರಳಿ ಹಳ್ಳಿಗಳಿಗೆ ಹೋದ ಬಳಿಕ ಅಲ್ಲಿಯ ಆಬಾಲವೃದ್ಧರ ನಿಜ ಶಿಕ್ಷಣದತ್ತ ಮನಸ್ಸು ಹಾಕಿ ಹಳ್ಳಿಗಳಿಗೆ ದೀವಿಗೆಗಳಾಗಿ ನಿಲ್ಲುವರೆಂದು ಹೇಳಬಹುದಲ್ಲವೇ ?

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸುಸಂಧಿ!

೧೯೫೧ ಮತ್ತು ೧೯೫೨ನೆಯ ವರ್ಷಗಳ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೆಗಳನ್ನು ಬಿಡಿಸಿದ

"ಪ್ರಶ್ನೋತ್ತರ ದರ್ಪಣ"ವು

ಲೆ: **ಆಯ್. ಎಸ್. ಅರಳಗುಪ್ಪಿ**
ಬಿ. ಜಿ. ಸಿದ್ದನಗೌಡರ
ಎನ್. ಎಸ್. ಸವದಿ

ಸಿದ್ಧವಾಗಿದೆ. ಅನುಭವಿಕ ಶಿಕ್ಷಕರಿಂದ ಬರೆದು, ಶಿಕ್ಷಣ ತಜ್ಞರಿಂದ ಪರಿಶೋಧಿಸಿದೆ.
ತ್ವರೆ ಮಾಡಿರಿ.

ವಿಳಾಸ : ಎಲ್. ಜಿ. ಹೊಸಮನಿ
ದೀಕ್ಷಿತವಾಡೆ, ಲೈನಬಜಾರ, ಧಾರವಾಡ.

ಬೆಲೆ : ೧—೧೨—೦

ಒನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ
ಫೆಬ್ರುವರಿ ೧೯೫೨

ಲೇಖಕರು:— **ವಿ. ಕ. ನಂದಗಾಂವ**

ಬೆಲೆ ೦—೧೨—೦

ಮಾನ್ಯರಾದ ಎನ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟೆ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: **ನಿ. ವಿ. ನಂದಗಾಂವ**
೬೧೯ ಮಠಗಲ್ಲಿ, ಬೆಳಗಾಂವ

ಜಿಲ್ಲಾ ಸ್ಕೂಲಬೋರ್ಡ, ಧಾರವಾಡ

ಪಾರಿತೋಷಕ ವಿತರಣ ಸಮಾರಂಭ

ದಿನಾಂಕ ೭—೧೨—೧೯೫೨

ಪ್ರಾ. ಪ್ರ. ಪರೀಕ್ಷೆ ೧೯೫೨ ರಲ್ಲಿ ಇನಾಮು ಪಡೆದವರು



ಹಿಂದಿನ ಸಾಲು:–(೧) ಶ್ರೀ. ಸಿ. ಬಿ. ಕೋಟಿ, ಹೆ. ಮಾ. ಕುರಬಗೊಂಡ (೨) **ಶ್ರೀ. ಟಿ. ವಾಯ್**
ಕುಂಬಾರ ಅ. ಮಾ. ಅಳಗವಾಡಿ (೩) ಶ್ರೀ. ಎಸ್. ಟಿ. ಜಾಲಣ್ಣವರ, **ಅ.ಮಾ.ಡ.ಸ.**
ಹಡಗಲಿ (೪) ಶ್ರೀ. ಎಚ್. ಎಚ್. ಹಲರ್ಾಪೂರ ಅ. ಮಾ. **ಹಲರ್ಾಪೂರ (ಗದಗ)**

ಮುಂದಿನ ಸಾಲು:–ವಿದ್ಯಾರ್ಥಿಗಳು– (೧) ಕು. ಎಸ್. ಟಿ. ಪಾಟೀಲ, ಕುರಬಗೊಂಡ (೨) ಕು. **ಎಫ್. ಯು**
ಗಡ್ಡದವರ, ಕುರಬಗೊಂಡ (೩) ಕು. ಎಸ್. ಎಮ್. ಈರೇಶನವರ, **ಅಳಗವಾಡಿ**
(೪) ಎಸ್. ಎಲ್. ಕಾತರಕಿ ಹಲರ್ಾಪೂರ, (ಗದಗ).

ಶಿಕ್ಷಕರ ಹೊಣೆ

[ಧಾರವಾಡ ಜಿಲ್ಹಾ ಸ್ಕೂಲ ಬೋರ್ಡಿನವರು ತಮ್ಮ ಬೋರ್ಡಿನ ಆಡಳಿತೆಗೊಳಪಟ್ಟ ಪ್ರಾಥಮಿಕ ಸಾಲೆಗಳಿಂದ ಪ್ರತಿವರ್ಷ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯಲ್ಲಿ ಮೇಲ್ಪಂಕ್ತಿಯನ್ನು ಪಡೆದ ವಿದ್ಯಾರ್ಥಿಗಳಿಗೆ ಹಾಗು ಕಲಿಸಿದ ಶಿಕ್ಷಕರಿಗೆ ಪಾರಿತೋಷಕಗಳನ್ನು ಕೊಡುವ ಹೊಸ ಉಪಕ್ರಮವನ್ನು ಪ್ರಾರಂಭಿಸಿದ್ದು ಇದಕ್ಕಾಗಿ ಜಿಲ್ಹೆಯ ಸಾರ್ವಜನಿಕರಿಂದ ಸುಮಾರು ೫೭೦೦ ರೂಪಾಯಿಗಳನ್ನು ಕೂಡಿಸಿದ್ದಾರೆ. ೧೯೫೭ನೆಯ ಪ್ರಾ. ಶಾ, ಪ್ರ. ಪ. ಪರೀಕ್ಷೆಯಲ್ಲಿ ಮೇಲ್ಪಂಕ್ತಿಯನ್ನು ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಅವರಿಗೆ ಕಲಿಸಿದ ಶಿಕ್ಷಕರಿಗೆ ಪಾರಿತೋಷಕ ಕೊಡುವ ಸಮಾರಂಭವು ಜಿಲ್ಹಾ ಸ್ಕೂಲ ಬೋರ್ಡ ಚೇರಮನ್ನರಾದ-ಶ್ರೀ ಸಿ. ಕೆ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಕ. ಗಂ. ಸರಕಾರೀ ಟ್ರೇ. ಕಾಲೇಜದಲ್ಲಿ ದಿನಾಂಕ ೭-೧೨-೧೯೫೭ರಂದು ಜರುಗಿತು. ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ವ್ಹಿ. ಕೆ. ಗೋಕಾಕ, ಪ್ರಿನ್ಸಿಪಾಲ ಕರ್ನಾಟಕ ಕಾಲೇಜ, ಧಾರವಾಡ ಅವರು ಪಾರಿತೋಷಕಗಳನ್ನು ಹಂಚಿ, ಕೆಳಗಿನ ಆಶಯದ ಭಾಷಣ ಮಾಡಿದರು—ಪ್ರ. ಸಂ.]

ಸಂಗ್ರಾಹಕರು:— ಶ್ರೀ ರಾ. ರು. ಕುಪ್ಪಸದ ಎಂ. ಎ. ಬಿ. ಟಿ.

ಸ್ಕೂಲ ಬೋರ್ಡಿನ ಅಧಿಕಾರಸ್ಥರೇ ಹಾಗೂ ಬಂಧು-ಭಗಿನಿಯರೇ,

ಪ್ರಾಥಮಿಕ ಶಿಕ್ಷಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಒಂದು ನವ ಚೈತನ್ಯವನ್ನು ತುಂಬಿ ಉತ್ಸಾಹದಿಂದಲೂ ಹುಮ್ಮಸ್ಸಿನಿಂದಲೂ ಅವರು ಕಾರ್ಯೋನ್ಮುಖರಾಗುವಂತೆ ಮಾಡಲು ಪಾರಿತೋಷಕಗಳನ್ನು ಕೊಡಬೇಕೆಂಬ ನಿಮ್ಮ ಯೋಜನೆಯು ಸ್ತೋತ್ರಾರ್ಹವಾದುದೂ, ಉಳಿದ ಬೋರ್ಡಿನವರಿಗೆ ಆದರ್ಶಪ್ರಾಯವಾದುದೂ ಇದ್ದು ಇದರಿಂದ ಪ್ರಾಥಮಿಕ ಶಿಕ್ಷಣದ ಮಟ್ಟವು ಬೆಳೆಯಲು ಅನುಕೂಲವಾಗುವದು. ಇಂದಿನ ಈ ಸಮಾರಂಭವು ಇದರ ಸಾಂಕೇತಿಕ ಸಮಾರಂಭವೆಂದು ಹೇಳಬಹುದು. ಗುಣವು ಎಲ್ಲಿಯೇ ಇರಲಿ ಅದನ್ನು ರಸಿಕತೆಯಿಂದ ಸುಹೃದಯದಿಂದ ಕಂಡು ಕೊಂಡಾಡುವದು ಸಜೀವ ಸಮಾಜದ ಲಕ್ಷಣವಾಗಿದೆಯೆಂದು ತಿಳಿದುಕೊಳ್ಳಬೇಕು. ದೇಶದ ಮಹಾಜೀವನದ ಉಗಮವು ಪ್ರಾಥಮಿಕ ಶಿಕ್ಷಣದಲ್ಲಿದೆ.

"ಹೀಚಿನಲ್ಲಿಯ ಗುಣ ಹಣ್ಣಿನಲ್ಲಿ ಕಂಡಿತು" ಎಂಬುದು ವಾಡಿಕೆಯ ನುಡಿ. ಹಾಗೆಯೇ ಎಳೆಯ ಮಕ್ಕಳ ಮನಸ್ಸು ಎಳೆಯರ ಶಿಕ್ಷಣಕಾರ್ಯದಲ್ಲಿ ತೊಡಗಿದ ಪ್ರಾಥಮಿಕ ಶಿಕ್ಷಕರು ನವಭಾರತದಲ್ಲಿ ದೊಡ್ಡ ಕಾರ್ಯ ಮಾಡಬೇಕಾಗಿದೆ. ಇಂತಹ ಗುರುತರವಾದ ಭಾರವನ್ನು ಹೊತ್ತ ಗುರುಗಳಿಗೆ ಇಂತಹ ಪಾರಿತೋಷಕಗಳನ್ನು ಗೌರವಿಸುವದು ಅತ್ಯಂತ ಅಭಿಮಾನದ ಸಂಗತಿಯಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ದೇಶಕ್ಕಾಗಿ ಮಡಿದು ಗೊತ್ತಾಗದೆ ಉಳಿದ ಸೈನಿಕರ ಗೌರವಾರ್ಥವಾಗಿ (To The Unknown Warriors) ಸ್ಮಾರಕ ಸ್ತಂಭಗಳನ್ನು ನಿಲ್ಲಿಸುವದನ್ನು ನಾನು ಕಂಡಿದ್ದೇನೆ. ಪ್ರಾಥಮಿಕ ಶಿಕ್ಷಕರು ಹಳ್ಳಿಗಳಲ್ಲಿ ಅನೇಕ ಬಗೆಯ ಅನಾನುಕೂಲತೆಗಳನ್ನು ಕಟ್ಟಿಕೊಂಡು ಯಾರೂ ಅರಿಯದಂತೆ ಎಳೆಯ ಮಕ್ಕಳ ಶಿಕ್ಷಣಕ್ಕಾಗಿ ದುಡಿಯುವ ಇವರಿಗೆ ೫೦ ರೂಪಾಯಿಯೇ ಏಕೆ ೧೦೦ ರೂಪಾಯಿಗಳ ಪಾರಿತೋಷಕವೂ ಕಡಿಮೆಯೇ ಸರಿ. ನೀವು ಕೊಡುವ ಪಾರಿತೋಷಕಗಳು ಉಳಿದ ವಿಷಯಗಳಲ್ಲಿಯೂ ದೊರೆಯುವಂತಾಗಲೆಂದು ಹಾರೈಸುತ್ತೇನೆ.

ವಿದ್ಯಾರ್ಥಿಗಳಿಗೆ ಅಭ್ಯಾಸವು ಒಂದು ವ್ರತ. ಅದನ್ನು ಸರಿಯಾಗಿ ಯಶಸ್ವಿಯಾಗಿ ಕೊನೆಗಾಣಿಸಲು ಮಕ್ಕಳು ಕಲಿತುಕೊಳ್ಳಬೇಕು. ವ್ರತವೆಂದರೆ ಕೈಯಲ್ಲಿ ಹಾವನ್ನು ಹಿಡಿದಂತೆ. ಹಿಡಿದ ಮುಷ್ಟಿಯನ್ನು ಸಡಲಿಸಿದರೆ ಘಾತವಾದೀತು. ಹಾಗೆಯೇ ಹಿಡಿದ ವ್ರತವೆಂದು ಭಾವಿಸಿ ಮಕ್ಕಳು ಅವ್ಯಾಹತವಾಗಿ ದುಡಿದು ಹಿಡಿದ ಕಾರ್ಯ

ಕೊನೆಗಾಣಿಸುವ ರೊಢಿಯನ್ನು ಈಗಿನಿಂದಲೇ ಮಾಡ ಬೇಕು. ಇಂತಹ ಪೀಳಿಗೆಯನ್ನೇ ನಮ್ಮ ದೇಶದಲ್ಲಿ ಬೆಳೆಸಬೇಕಾಗಿದೆ.

ಶಿಕ್ಷಕರೆಂದರೆ ಹಳ್ಳಿಗೆ ಸಂಸ್ಕೃತಿಯ ಕೇಂದ್ರವಿದ್ದಂತೆ. ಅವರು ಹಳ್ಳಿಯ ಕಣ್ಣು ಕಿವಿಗಳಿದ್ದಂತೆ. ಅದ್ದರಿಂದ ಅವರು ತಮ್ಮ ಶೀಲ, ಸ್ವಭಾವ, ಪಾಂಡಿತ್ಯಗಳನ್ನು ಬೆಳಿಸಿಕೊಳ್ಳಬೇಕು. ಮುಂದೆ ಮಹಾನಾಯಕರಾಗಬಹುದಾದ ಇಂದಿನ ವಿದ್ಯಾರ್ಥಿಗಳ ಎಳೆ ಮನಸ್ಸಿನ ಮೇಲೆ ಒಳ್ಳೇ ಸಂಸ್ಕಾರವಾಗುವಂತೆ ಶಿಕ್ಷಕರು ಯತ್ನಿಸಬೇಕು.

ಕೇವಲ ಶುಷ್ಕ ಪಾಂಡಿತ್ಯ ಅಥವಾ ಪರೀಕ್ಷೆಗಳಲ್ಲಿ ಯಶಸ್ಸು ನಮ್ಮ ಮಕ್ಕಳಿಗೆ ಬೇಕಾಗಿಲ್ಲ. ಹಾಗೆಯೇ ಪಾಂಡಿತ್ಯ ವಿದ್ಯೆಯಿಲ್ಲದ ಕೇವಲ ಒಳ್ಳೆಯ ವರ್ತನವೂ ನಮಗೆ ಬೇಡಾಗಿದೆ. ಆದರೆ ಇವರೆಡರ ಸುಂದರ ಸಮನ್ವಯವನ್ನು ನಮ್ಮ ಮಕ್ಕಳಲ್ಲಿ ಮೂಡಿಸಬೇಕು. ಕನ್ನಡದ ಪ್ರಸಿದ್ಧ ನಾಟಕಕಾರರಾದ ಶ್ರೀ ಟಿ. ಪಿ. ಕೈಲಾಸಂರವರು ತಮ್ಮ "ಟೊಳ್ಳುಗಟ್ಟಿ'' ನಾಟಕದಲ್ಲಿ ಶಿಕ್ಷಣದಲ್ಲಿ ನಾವು ಸಾಧಿಸಬೇಕಾದ ಗುರಿಯನ್ನೇ ನಮ್ಮ ಮುಂದೆ ಒಳ್ಳೇ ಕಲಾತ್ಮಕವಾಗಿ ಇಟ್ಟಿದ್ದಾರೆ. ನೀವು ಆರಂಭಿಸಿದ ಈ ಹೊಸ ಉಪಕ್ರಮವನ್ನು ಉಳಿದ ಸಂಸ್ಥೆಗಳೂ ಅನುಸರಿಸುವವೆಂದು ನಾನು ಹಾರೈಸುತ್ತೇನೆ."

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು :— **ಕಿರಣಕುಂಜ**

ಪುಟಗಳು:— ೧೨ ಬೆಲೆ:— ೦-೨-೦

ಸಂಪಾದಕರು:— ಬಿ. ಎಸ್. ಜಮುಖಂಡಿ

ಮತ್ತು

ಡಿ. ಡಿ. ಕಠಾರಿ.

ಮಕ್ಕಳಿಗಾಗಿ ರಚಿಸಿದ ಕೆಲವು ಕವನಗಳ ಸಂಗ್ರಹವಿದು. ಕೇವಲ ಆರು ಕವನಗಳಿದ್ದರೂ ಮಕ್ಕಳ ಮನವನ್ನು ಹಿಡಿಯತಕ್ಕ, ಅವರಲ್ಲಿ ದೇಶಪ್ರೇಮವನ್ನು ಹುಟ್ಟಿಸತಕ್ಕ ಗುಣಗಳಿಂದ ಕೂಡಿವೆ. ಬಾಲಕರು ಈ ಕವನಗಳನ್ನು ಹಾಡಿ, ನಲಿಯುವದರಲ್ಲಿ ಸಂದೇಹವಿಲ್ಲ.

—ಪ್ರ. ಸಂಪಾದಕರು.

ಪುಸ್ತಕದ ಹೆಸರು:— **ಹೊಸಬೆಳಕು**

ಪುಟಗಳು:— ೧೧೮ ಬೆಲೆ:— ೧-೮-೦

ಲೇಖಕರು:— ವೆಂ. ಮು. ಜೋಶಿ

ಪ್ರಕಾಶಕರು:— ಪ್ರತಿಭಾ ಗ್ರಂಥಮಾಲೆ, ಧಾರವಾಡ.

ಒಂಬತ್ತು ಕತೆಗಳ ಸಂಗ್ರಹವಿದು. ತರುಣ ಬರೆಹಗಾರರಾದ ಶ್ರೀ ಜೋಶಿಯವರು ಕಳೆದ ಮಹಾಯುದ್ಧದಲ್ಲಿ ಸೈನಿಕರಾಗಿ ದೇಶದ ಅನೇಕ ಭಾಗಗಳನ್ನು ಸುತ್ತಾಡಿ ಅನುಭವಪಡೆದರು. ವಾಸ್ತವವಾದಿಗಳಾಗಿ ಈ ಕತೆಗಳನ್ನು ಬರೆದಂತೆ ತೋರುತ್ತದೆ. ಕಲ್ಪನೆಯ ಕನಸಿನ ಸಾಮ್ರಾಜ್ಯದಲ್ಲಿ ಲೋಲಾಡದೆ ವಾಸ್ತವದ ನೆನಸಿನ ಲೋಕಕ್ಕೆ ಇಳಿದು ಜೀವನದಲ್ಲಿ ಕಂಡುಬರಬಹುದಾದ ವಸ್ತುವಿಶೇಷಗಳನ್ನೇ ಹಿನ್ನೆಲೆಯಾಗಿಟ್ಟುಕೊಂಡು ಕತೆಗಳನ್ನು ಪವಣಿಸಿದಂತೆ ತೋರುತ್ತದೆ. ಶ್ರೀ ಜೋಶಿಯವರ 'ಘಟನಾಚಮತ್ಕೃತಿ' 'ಸೌಂದರ್ಯಯುತ ಭಾವ-ಭಾವನೆಗಳು' 'ಪ್ರಚಾರ ಚಾತುರ್ಯ' ಇವು ಅವರ ಈ ಕತೆಗಳಲ್ಲಿ ಸ್ಫುಟವಾಗಿ ಮೂಡಿಬಂದಿವೆ. ಮನೋವಿಭಜನೆ, ಬಡತನ-ಸಿರಿವಂತಿಕೆ, ಗಂಡು-ಹೆಣ್ಣು ಈ ತ್ರಿವಿಧ ತೊಡಕಿನ ಸೂತ್ರಗಳಲ್ಲಿ ಕಥಾವಸ್ತುಗಳ ಘಟನೆಗಳೂ ಪವಣಿಸಲ್ಪಟ್ಟು ಶ್ರೀ ಜೋಶಿಯವರ ಕಥನಕಲೆಗೆ ಶೋಭೆಯನ್ನು ತಂದಿವೆ. ಸುಲಭಶೈಲಿ, ಕುತೂಹಲವನ್ನು ಅಚ್ಚಳಿಯದೆ ಉಳಿಯುವಂತೆ ಕಥೆಯನ್ನು ಸಾಗಿಸಿಕೊಂಡು ಹೋಗುವ ಶಕ್ತಿ ಇವು ಕತೆಗಾರರಲ್ಲಿ ಸಹಜವಾಗಿ ಬಂದಿವೆ. ಶ್ರೀ ಜೋಶಿಯವರ ಕೈ ಪಳಗಲಿ, ಅವರಿಂದ ಉದ್ಗ್ರಂಥಗಳು ಹೊರಬರಲಿ.

—ಪ್ರ. ಸಂಪಾದಕರು

೧೯೫೨ನೆಯ ಎಪ್ರಿಲ ತಿಂಗಳಲ್ಲಿ ಧಾರವಾಡ ಕೇಂದ್ರದಲ್ಲಿ ಜರುಗಿದ ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಯಲ್ಲಿ

ಕನ್ನಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಿಂದ

ಇನಾಮುಗಳನ್ನು ಪಡೆದ ಶಿಕ್ಷಕ-ವಿದ್ಯಾರ್ಥಿಗಳ ಹೆಸರುಗಳು.

ಅ. ನಂ.	ಇನಾಮಿನ ಹೆಸರು	ರಕಮು ರೂ. ಆ. ಪೈ.	ಇನಾಮು ಪಡೆಯಬೇಕಾದ ಅರ್ಹತೆ	ಇನಾಮು ಪಡೆದ ಶಿಕ್ಷಕ-ವಿದ್ಯಾರ್ಥಿಗಳ ಹೆಸರು	ಇನಾಮು ಪಡೆದ ಶಿ. ವಿ. ಯ ಸಂಸ್ಥೆಯ ಹೆಸರು
೧	ಗಾಯಿಲ್ಸ ಪ್ರಾಯಿಜ	೧೬—೮—೦	ಶಿಕ್ಷಣಶಾಸ್ತ್ರ ಹಾಗು ಪಾಠ ಕೊಡುವದರಲ್ಲಿ ಒಂದನೆಯ ನಂಬರು.	ಶ್ರೀ ಹೊನ್ನೂರಸಾ ಫತ್ತೇಸಾ ತುಮ್ಮಿನಕಟ್ಟಿ	ಡಿ.ಎಸ್.ಬಿ. ಧಾರವಾಡ
೨	ಜನರಲ್ ಪ್ರಾಯಿಜ್ ನಂ. ೧	೧೨—೦—೦	ಶಿಕ್ಷಣಶಾಸ್ತ್ರ ಹಾಗು ಪಾಠ ಕೊಡುವದರಲ್ಲಿ ೨ನೆಯ ನಂಬರು.	ಶ್ರೀ ಉಳವಯ್ಯ ವೀರಯ್ಯ ಹುಲೆಪ್ಪನವರ	ಡಿ.ಎಸ್.ಬಿ. ಬೆಳಗಾಂವಿ
೩	ಸರ್ ಜೇಮ್ಸ ಮಾಂಟೇಥ ಪ್ರಾಯಿಜ ನಂ. ೧	೧೫—೦—೦	ಕನ್ನಡದಲ್ಲಿ ೧ನೆಯ ನಂಬರು.	ಶ್ರೀ ಉಳವ್ವಯ ವೀರಯ್ಯ ಹುಲೆಪ್ಪನವರ	,,
೪	ಸರ್ ಜೇಮ್ಸ ಮಾಂಟೇಥ ಪ್ರಾಯಿಜ ನಂ. ೨	೧೩—೦—೦	ಕನ್ನಡದಲ್ಲಿ ೨ನೆಯ ನಂಬರು.	ಶ್ರೀ ಡ್ಯಾನಿಯಲ್ ಆರೋನಪ್ಪ ದೊಡ್ಡಮುನಿ	ಡಿ.ಎಸ್.ಬಿ. ಧಾರವಾಡ
೫	ಜನರಲ್ ಪ್ರಾಯಿಜ ನಂ. ೨	೧೨—೦—೦	ಗಣಿತ ಮತ್ತು ಸಾಯಿನ್ಸದಲ್ಲಿ ೧ನೆಯ ನಂಬರು.	ಶ್ರೀ ಹೊನ್ನೂರಸಾ ಫತ್ತೇಸಾ ತುಮ್ಮಿನಕಟ್ಟಿ	,,
೬	ಜನರಲ್ ಪ್ರಾಯಿಜ ನಂ. ೩	೧೨—೦—೦	ಚಿತ್ರಕಲೆ ಮತ್ತು ಕೈಕೆಲಸದಲ್ಲಿ ೧ನೆಯ ನಂಬರು.	ಶ್ರೀ ಗುಡ್ಡಪ್ಪ ಜಟೆಂಗಪ್ಪ ಕಟಗಿ	,,
೭	ಚ್ಯಾಟ್‌ಫೀಲ್ಡ ಮೆಮೋರಿಯಲ್ ಪ್ರಾಯಿಜ	೧೬—೦—೦	ಒಟ್ಟಿನಲ್ಲಿ ೧ನೆಯ ನಂಬರು.	ಶ್ರೀ ಹೊನ್ನೂರಸಾ ಫತ್ತೇಸಾ ತುಮ್ಮಿನಕಟ್ಟಿ	,,

ಧಾರವಾಡ
೨೯—೧೨—೧೯೫೨

ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ ಇವರ
ನಂ. P (PTC)-1919 of 27-10-1952ನೇದರ ಪ್ರಕಾರ ಮಂಜೂರಾಗಿದೆ.

M. G. Handral
ಪ್ರಿನ್ಸಿಪಾಲರು
ಕ. ಗಂ. ಸ. ಟ್ರೇ. ಕಾ. ಧಾರವಾಡ

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

೧೯೫೧ ಡಿಸೆಂಬರದಿಂದ ೧೯೫೨ ಜನವರಿ ೧೫ ರ ವರೆಗೆ

❖ ಶೈಕ್ಷಣಿಕ ಸಭಾಸಮ್ಮೇಲನಗಳು ❖

ಕೆಳಗೆ ಕಾಣಿಸಿದ ಊರುಗಳಲ್ಲಿ ನಡೆದವು. ಮನರಂಜನೆಯ ಕಾರ್ಯಕ್ರಮಗಳು, ಮಾದರಿಯ ಪಾಠಗಳು, ಶೈಕ್ಷಣಿಕ ವಿಷಯಗಳನ್ನು ಕುರಿತು ಚರ್ಚೆಗಳು, ಸತ್ಕಾರ ಮುಂತಾದ ಕಾರ್ಯಕ್ರಮಗಳು ಜರುಗಿದವು. ಅನೇಕ ಶಿಕ್ಷಕರು ಇವುಗಳಿಂದ ಲಾಭ ಪಡೆದುಕೊಂಡರು.

ಊರು— ತಾ. ಡಿಸೆಂಬರ	ಅಧ್ಯಕ್ಷರು
ಹಾವೇರಿ— ೨೧	ಶ್ರೀ ಉಣಕಲ್, ಅ. ಎ. ಓ.
ಕನ್ನೂರ— ೧೪	ಶ್ರೀ ಖೋಡಾನಪೂರ ಅ. ಡೆ. ಎ. ಇ.
ಅಮರಗೋಳ— ೨೧	ಶ್ರೀ ಗುಂಜೀಕರ ಎ. ಓ.
ಮಾಜಾಳಿ— ೨೦	ಶ್ರೀ ಆರ್. ವ್ಹಿ. ನಾಯಕ ಕ್ಯಾಪ್ಟನ್.
ಗೋಕಿ— ೨೫	ಶ್ರೀ ಚನ್ನಪ್ಪ ಪಾವಟೆ ಅ. ಡೆ. ಎ. ಇ.
ಹಿರೇಹಾಳ— ೨೨	ಶ್ರೀ ಎಸ್. ವಾಯ್. ಶೀಲವಂತ (ಧಾರವಾಡ ಟ್ರೇ. ಕಾಲೇಜದ ಶಿಕ್ಷಕರು)
ಬೆಳವಣಿಕಿ— ೨೧	,,
ಕುಲಗೋಡ— ೨೮	ಶ್ರೀ ಆರ್. ಎಸ್. ಹೆಗಡೆ ಎ. ಓ.
ಕುಂಜನೂರ— ೨೮	ಶ್ರೀ ಎಚ್. ಎ. ವಾಲಗದ ಅ. ಡೆ. ಎ. ಇ.
ನಾಗಠಾಣಾ— ೧೪	ಪ್ರೊ. ಬಿ. ಟಿ. ಸಾಸನೂರ
ಯಲವಾಗಿ— ೨೧	ಶ್ರೀ. ಜಕಾತಿ ಅ. ಡೆ. ಎ. ಇ.
ಹಿಪ್ಪರಗಿ— ೨೧	ಶ್ರೀ. ಯಾರಗಲ್ಲ ಡೆ. ಎ. ಇ.
ಮುಂಡರಗಿ— ೧೩	ಶ್ರೀ. ಕುಪ್ಪಸದ ಎ. ಓ.
ಹತ್ತಿಮತ್ತೂರು— ೧೬	ಶ್ರೀ. ರಂ. ರಾ. ಶೀಲಾರ

ಊರು— ತಾ. ಡಿಸೆಂಬರ	ಅಧ್ಯಕ್ಷರು
ಮುಧೋಳ— ೧೯	ಶ್ರೀ. ಜಿ. ಎಂ. ತುಪ್ಪದ
ಹೊಸರಿತ್ತಿ— ೨೬	ಶ್ರೀ. ಮಾನೇಶ್ವರ ನಾಯಕ ಕ್ರಾಪ್ಟ ಆರ್ಗನಾಯಿಜರ
ಹಳ್ಳಿಯಾಳ— ೧೫	ಶ್ರೀ. ವ್ಹಿ. ಆರ್. ನಾಯಕ ಅ. ಎ. ಓ.
ಗದಗ-ಬೆಟಗೇರಿ— ೧೦	ಶ್ರೀ. ಟಿ. ವ್ಹಿ. ಕೋಟಿ
ತಾಳಿಕೋಟಿ— ೬	ಶ್ರೀ. ವಾಯ್. ಬಿ. ಯಾರಗಲ್ಲ ಡೆ. ಎ. ಇ.
ಕುಂದಗೋಳ— ೨೦	ಶ್ರೀ. ಎ. ಎಚ್. ದಳವಾಯಿ ಡೆ. ಎ. ಇ.
ಬೆಳಗಾಂವಿ— ೧೧	ಮಾನ್ಯಶ್ರೀ. ಕೆ. ಎಫ್. ಪಾಟೀಲ ಉಪಮಂತ್ರಿ
ನಿಡೋಣಿ— ೬	ಶ್ರೀ. ಪಾವಟೆ ಚನ್ನಪ್ಪನವರು
ಮುಳಗಾಡ— ೧೩	ಶ್ರೀ. ಶಿರಹಟ್ಟಿ ಅ. ಡೆ. ಎ. ಇ.
ಹಲಗೇರಿ— ೬	ಶ್ರೀ. ಬಿ. ಎಸ್. ಎಲಿ ಅ. ಎ. ಓ.
ಪಾಚ್ಛಾಪೂರ— ೨೧	ಶ್ರೀ. ಎಲ್. ಜಿ. ಕೊಪ್ಪರ
ನವಲೂರು— ೨೯	ಶ್ರೀ. ಇಂಚಲ ಪ್ರಿನ್ಸಿಪಾಲ
ಹಾಕುನೂಲೆ— ೭	ಶ್ರೀ. ಟಿ. ಯು. ಕಲಾದಗಿ ಡೆ. ಎ. ಇ.

ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ತಮ್ಮ ತಮ್ಮ ಶಾಲೆಗಳ ಶಿಕ್ಷಕ ಶಿಕ್ಷಕಿಯರ ಹಿರಿಯತನದಲ್ಲಿ ಕೆಳಗೆ ಕಾಣಿಸಿದ ಶೈಕ್ಷಣಿಕ ಪ್ರವಾಸಗಳನ್ನು ಕೈಕೊಂಡ ಪ್ರತ್ಯಕ್ಷ ಜ್ಞಾನವನ್ನು ಸಂಪಾದಿಸಿದ್ದರು.

ಊರು— ತಾ. ಡಿಸೆಂಬರ	ಪ್ರವಾಸದ ಸ್ಥಳ
ಬೀಡಿ—೨೯	ಅರಭಾವಿಫಾರ್ಮ್, ಗೋಕಾಕಫಾಲ್ಸ್
ಹಳ್ಳಿಯಾಳ—೨೬	ಆಳಣಾವರ
ಯಲಗೂರು—೨	ಬಾದಾಮಿ, ಶಿವಯೋಗಿಮಂದಿರ, ನೀರಾವರಿ-ಯೋಜನೆ 'ಹವೇಲಿ'
ಅಣ್ಣಿಗೇರಿ—೨೪	ಹಂಪಿ, ಹೊಸಪೇಟೆ ಸಕ್ಕರೆ ಕಾರಖಾನೆ, ತುಂಗಭದ್ರಾ ಅಣೆಕಟ್ಟು,
ಜಮಖಂಡಿ—೨೪	ಬಾದಾಮಿ, ಶಿವಯೋಗಮಂದಿರ

ಊರು— ತಾ. ಡಿಸೆಂಬರ	ಪ್ರವಾಸದ ಸ್ಥಳ
ಕಟಗೇರಿ—೨೧	ಸೀತೀಮನಿ. ಹಂಪಿ, ಹೊಸಪೇಟೆ ತುಂಗಭದ್ರಾ ಅಣೆಕಟ್ಟು
ಹಳ್ಳಿಯಾಳ—೭	ಧಾರವಾಡ, ಶೈಕ್ಷಣಿಕ ಸಂಸ್ಥೆಗಳು
ಖಿವಗಾಂವ—೧೯	ಬೆಳಗಾಂವಿ ಶೈಕ್ಷಣಿಕ ಸಂಸ್ಥೆಗಳು
ಕೋರವಾರ—೨೧	ಸಿಂದಗಿ ಮತ್ತು ಗೋಲಗೇರಿ
ಅಕ್ಕಿ ಆಲೂರ—೨೯	ಗೆರಸಪ್ಪಾಜೋಗ, ಭದ್ರಾವತಿ, ಮಡೇನೂರ ಅಣೆಕಟ್ಟು, ದಾವಣಗೆರೆ

※ ಪಾಲಕರ ದಿನಾಚರಣೆ ※

ಊರು – ತಾ. ಡಿಸೆಂಬರ	ಅಧ್ಯಕ್ಷರು
ಸಾಲೋಟಗಿ—೧೫	ಶ್ರೀ. ಬಾಳಪ್ಪ ಖೋಂದರಡಿ
ತಳಕವಾಡ—೧೯	ಶ್ರೀ. ಬಿ. ಬಿ. ತಿಮ್ಮಾಪೂರ

ಊರು— ತಾ. ಡಿಸೆಂಬರ	ಅಧ್ಯಕ್ಷರು
ಬಾಗಲಕೋಟ—೧೨	ಮಾನ್ಯ ಶ್ರೀ. ಎಸ್. ಆರ್. ಕಂಠಿ
ಅಸುಂದಿ—೫	ಶ್ರೀ. ಎಂ. ಬಿ. ಅರಬಟ್ಟಿ ಎ. ಓ.

ವಿವಿಧ ಶೈಕ್ಷಣಿಕ ಸುದ್ದಿಗಳು

ಗದಗ—೧೬ ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ. ಮೋರಾರಜಿ ದೇಸಾಯಿ ಅವರು ಉರ್ದು ಗಂಡು ಮಕ್ಕಳ ಶಾಲೆಯನ್ನು ಸಂದರ್ಶಿಸಿದರು.

ದೇವಗಿರಿ—೧೯ ಪ್ರೊ. ಫೇವಳಿ ಅವರ ಅಧ್ಯಕ್ಷತೆಯಲ್ಲಿ ಮನೋರಂಜನ ಕಾರ್ಯಗಳು ಪ್ರೌಢರಿಂದ ಸಾಂಗವಾದವು.

ಹಾವೇರಿ—೨೫ ಶ್ರೀ. ಉಣಕಲ್ಲ ಅ. ಎ. ಓ. ಅವರ ಅಧ್ಯಕ್ಷತೆಯಲ್ಲಿ ಪಿ. ಎಸ್. ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಣಿತದ ಬಗ್ಗೆ ಮೇಲು ನಂಬರು ಪಡೆದದ್ದಕ್ಕಾಗಿ ಶ್ರೀ. ಚನ್ನಪ್ಪ ಕೋಟಿ ಗುರುಗಳನ್ನು ಅಭಿನಂದಿಸಲಾಯಿತು.

ಕೌಜಗೇರಿ—೧೧ ಶ್ರೀ. ತೊರಗಲ್ ಪಟ್ಟದ ಸ್ವಾಮಿಗಳ ಅಧ್ಯಕ್ಷತೆಯಲ್ಲಿ 'ಬಾಲಚಂದ್ರ' ಎಂಬ ಕೈ ಬರೆಹದ ವಾರಪತ್ರಿಕೆಯನ್ನು ಹೊರಡಿಸಲಾಯಿತು.

ಕಲಹಾಳ—೨೮ ಮುಂಬಯಿ ವಿಧಾನ ಸಭೆಯ ಅಧ್ಯಕ್ಷರಾದ ಮಾನ್ಯ ಶ್ರೀ. ದಾ. ಶ್ರೀ. ಹುಕ್ಕೇರಿಕರ ಅವರ ಅಧ್ಯಕ್ಷತೆಯಲ್ಲಿ ಹಿಂದೀ ಪ್ರಮಾಣಪತ್ರಗಳನ್ನು ಹಂಚಲಾಯಿತು.

ಅಮರಗೋಳ (ನವಲಗುಂಡ)—೨೦ ನವಲಗುಂದ ಟ್ರೇ. ಕಾಲೇಜದ ಪ್ರಿನ್ಸಿಪಾಲರು ಪ್ರತ್ಯಕ್ಷ ಪಾಠಗಳನ್ನು ನಿರೀಕ್ಷಿಸಿ ವಿದ್ಯಾರ್ಥಿ ಸಂಘಕ್ಕೆ ೫ ರೂ. ಕಾಣಿಕೆ ಕೊಟ್ಟರು.

ಮುಗಟಖಾನ ಹುಬ್ಬಳ್ಳಿ—೨೪ ಉರ್ದು ಶಾಲೆಯ ಹುಡುಗರು 'ಅಂಧೇರ ನಗರಿ ಚೌಪಟರಾಜಾ' ನಾಟಕವನ್ನು ಅಭಿನಯಿಸಿದರು. ಶ್ರೀ. ಎಂ. ಘುಡ್ ಖಾನ ಅವರು ಅಧ್ಯಕ್ಷತೆ ವಹಿಸಿದ್ದರು.

ವಿಜಾಪುರ—೨೬ ಶ್ರೀ. ಸಿ. ಜೆ. ಅಂಬಗಿ ಅವರ ಅಧ್ಯಕ್ಷತೆಯಲ್ಲಿ ಶಾರೀರಿಕ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭವಾಯಿತು.

ಜಾಲಿಹಾಳ—೧೬ ಶ್ರೀ. ಮೇಗೂರ ಅವರ ಹಿರಿಯತನದಲ್ಲಿ ಮೂಲೋದ್ಯೋಗದ ಬಗ್ಗೆ ಶ್ರೀ. ಕುಲಕರ್ಣಿ ಅವರು ಭಾಷಣಮಾಡಿದರು.

ತೇದಿ—೧೪ ಶ್ರೀ. ಕುಪ್ಪಸದ ಎ. ಓ. ಮತ್ತು ಶ್ರೀಮತಿ ಸಿದ್ದಮ್ಮ ಧವಳಗಿ ಅ. ಎ. ಓ. ಅವರು ಲೆಯನ್ನು ಸಂದರ್ಶಿಸಿ ಚಟುವಟಿಕೆ ನೋಡಿ ಆನಂದ ವ್ಯಕ್ತಮಾಡಿದರು.

ತಾಳೀಕೋಟಿ—೧೬ ಶ್ರೀಮತಿ ಮುಳಸ್ಕೂರ ಅವರು ಹೆಣ್ಣು ಮಕ್ಕಳ ಶಾಲೆಯನ್ನು ಸಂದರ್ಶಿಸಿ ಪ್ರೌಢಶಿಕ್ಷಣದ ಬಗ್ಗೆ ಭಾಷಣ ಮಾಡಿದರು.

ಖಾನಾಪೂರ—೧೧ ಮುಂಬಯಿ ಸರಕಾರದ ಆರೋಗ್ಯ ಖಾತೆಯ ಉಪಮಂತ್ರಿಗಳಾದ ಮಾನ್ಯ ಶ್ರೀ. ಬಿ.ಡಿ. ಜತ್ತಿ ಅವರ ಹಸ್ತದಿಂದ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯಾಯಿತು.

ಮುಧೋಳ—೧೭ ಶ್ರೀ. ಆರ್. ಪಿ. ಸಾಲೀಮಠ ವಕೀಲರ ಅಧ್ಯಕ್ಷತೆಯಲ್ಲಿ ಶ್ರೀ. ಶೀವೂರ ೧ನೆಯ ಅ. ಎ. ಇ. ಅವರಿಂದ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ಪಾಸಾದವರಿಗೆ ಪ್ರಮಾಣ ಪತ್ರಗಳನ್ನು ಕೊಡಿಸಲಾಯಿತು.

ಹುಲಕೋಟಿ—೨೭ ೕ. ಆರ್. ವಾಯ್. ಹುಲಕೋಟಿ ಅವರ ಅಧ್ಯಕ್ಷತೆಯಲ್ಲಿ ಶಾರೀರಿಕ ಶಿಕ್ಷಣದ ದಿನಾಚರಣೆ ಆಚರಿಸಲಾಯಿತು.

ಮಾಕನೂರ—೨೭ ಶ್ರೀ. ಕೃಷ್ಣರಾವ ಜಾಲೀಹಾಳ ಅವರ ಅಧ್ಯಕ್ಷತೆಯಲ್ಲಿ ಶಾ. ಶಿ. ದಿನಾಚರಣೆಯಾಯಿತು.

ವಿವಿಧ ಶೈಕ್ಷಣಿಕ ಸುದ್ದಿಗಳು

ಮರೇವಾಡ—೬ ಡಾ| ಚಿಕ್ಕರಮನೆಯವರ ಅಧ್ಯಕ್ಷತೆಯಲ್ಲಿ ಶಾರೀರಿಕ ಪಂದ್ಯಾಟಗಳಲ್ಲಿ ಈ ಊರ ಶಾಲೆಗೆ ಶ್ರೀ. ಹಂಗರಕಿ ದೇಸಾಯಿ ಅವರ ಚಾಂಪಿಯನ್‌ಶೀಲ್ಡ ಕೊಡಲ್ಪಟ್ಟಿತು.

ರೋಣ—೧೩ ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯವರು ಕುರಹಟ್ಟಿ, ಕೇತಬಾಳ, ಹಿರೇಹಾಳ ರೋಣ ಊರುಗಳಲ್ಲಿ ಶೈಕ್ಷಣಿಕ ಚಲಚಿತ್ರಗಳನನ್ನು ತೋರಿಸಿದರು.

ಸೊರಟೂರ—೧೫ ಸಮಾಜ ಶಿಕ್ಷಣ ವರ್ಗದ ಪರೀಕ್ಷೆಯನ್ನು ಶ್ರೀ. ಟಿ. ಎಫ್. ದೇಸಾಯಿ ಅವರು ತೆಗೆದುಕೊಂಡರು.

ವಿಜಾಪುರ—೨೯ ಶ್ರೀ. ಎಸ್. ವಿ. ಜೇವೂರ ಗನೆಯ ಅ. ಸಿ. ಎಜ್ಯು. ಇನಸ್ಪೆಕ್ಟರ ಅವರು ಜಿಲ್ಲಾ ಶಿಕ್ಷಣ ಸಮ್ಮೇಲನವು ನಡೆಯಬೇಕೆಂದು ಮಾಡಿದ ಸೂಚನೆಯು ೧೯೫೭ ನವಂಬರ ೩೦ ರಂದು ಕಾರ್ಯರೂಪದಲ್ಲಿಳಿಯಿತು. ಜಿಲ್ಲೆಯ ಶಿಕ್ಷಣಾಧಿಕಾರಿಗಳೆಲ್ಲರೂ ನೆರವಾದರು. ಸ್ವಾಗತ ಸಮಿತಿಯು ಏರ್ಪಟ್ಟು ಡಿ. ಇ. ಆಯ್ ಅವರು ಸಮ್ಮೇಲನ ಸಮಿತಿಯ ಅಧ್ಯಕ್ಷರಾಗಿ, ಏ. ಓ. ಅವರು ಉಪಾಧ್ಯಕ್ಷರಾಗಿ, ಶ್ರೀ. ದಿವಾಣ ಬಹಾದುರ ಸರದಾರ ಶ್ರೀ. ದೇಶಮುಖ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಶ್ರೀ. ಎಸ್. ಆಯ್. ಪಾಟೀಲರು ಉಪಾಧ್ಯಕ್ಷರಾಗಿ ಆಯ್ಕೆ ಹೊಂದಿದರು.

ಮುಂಬಯಿ ಸರಕಾರದ ಮಾನ್ಯ ಬಿ. ಡಿ. ಜತ್ತಿ, ವಿದ್ಯಾ ಖಾತೆಯ ಡೈರೆಕ್ಟರ ಶ್ರೀ. ಪಾವಟೆ, ಡಾ| ನಂದೀಮಠ, ಶ್ರೀ. ಜೇವೂರ ಎಸ್. ವ್ಹಿ. ಅವರು ಬಂದು ಸಮ್ಮೇಲನದ ಶೋಭೆಯನ್ನು ಹೆಚ್ಚಿಸಿದರು.

ಧ್ವಜವಂದನೆ, ಶೈಕ್ಷಣಿಕ ಪ್ರದರ್ಶನ, ಶಾರೀರಿಕ ಶಿಕ್ಷಣದ ಚಟುವಟಿಕೆಗಳು ಡೈರೆಕ್ಟರ ಶ್ರೀ. ಪಾವಟೆಯವರ ಉದ್ಬೋಧಕ ಭಾಷಣ, ಮಾನ್ಯ ಜತ್ತಿ ಅವರ ವಿಚಾರಪ್ರಚೋದಕ ಭಾಷಣ, ಸಮವಾಯ ಪಾಠಗಳು, ಚರ್ಚೆಗಳು, ಮನೋರಂಜನ ಚಟುವಟಿಕೆಗಳು, ಡಾ| ನಂದಿಮಠರ ವಿದ್ವತ್ಪೂರ್ಣ ಭಾಷಣ, ಸ್ವಾಗತಾಧ್ಯಕ್ಷರ ಭಾಷಣ ಇವುಗಳಿಂದ ಪ್ರಾಥಮಿಕ ಶಿಕ್ಷಕರು ಸ್ಫೂರ್ತಿ, ಹಾಗು ಹೊಸ ಬೆಳಕನ್ನು ಹೊಂದಿದರು.

ಶ್ರೀ. ಎಂ. ಕೆ. ಸುರಪೂರ, ಶ್ರೀ. ಎಚ್.ಟಿ. ಸಾಸನೂರ, ಪಬ್ಲಿಸಿಟಿ ಆಫೀಸರರು ಕೊಟ್ಟ ನೆರವು ಪ್ರಶಂಸನೀಯವಾಗಿದೆ. ಶ್ರೀ. ಎಸ್. ವಿ. ಜೇವೂರ ಅವರ ಹಿರಿಯತನದಲ್ಲಿ ನಡೆದ ಮನರಂಜನೆಯ ಕಾರ್ಯಕ್ರಮಗಳು ಎಲ್ಲರ ಮನಗಳನ್ನು ರಂಜಿಸಿದವು.

ಕೊಟಬಾಗಿ—೭ ಧಾರವಾಡ ಪ್ರಾಯೋಗಿಕ ಜೀವನ ಶಿಕ್ಷಣ ಶಾಲೆಗಳ ವಿವಿಧ ಪಂದ್ಯಾಟಗಳು ಡಾ|| ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ ಅವರ ಅಧ್ಯಕ್ಷತೆಯಲ್ಲಿ ಜರುಗಿದವು. ಪ್ರಿ. ತೇರಗಾಂವಕರ, ಪ್ರಿ. ಹೆಂದ್ರಾಳ. ಶ್ರೀ. ಕುಪ್ಪಸದ ಏ. ಓ. ಅವರೂ ಆಗಮಿಸಿದ್ದರು. ಪ್ರಶಸ್ತಿ ಪತ್ರಿಕೆಗಳು, ಪದಕಗಳು ಗೆದ್ದವರಿಗೆ ಹಂಚಲ್ಪಟ್ಟವು.

ತಿಗಡೊಳ್ಳಿ—೨೯ ಶಿಕ್ಷಕರೂ ವಿದ್ಯಾರ್ಥಿಗಳೂ ಹಲಸಿಗಿ ಮತ್ತು ರಾಮತೀರ್ಥದ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡಿದ್ದರು.

ಧಾರವಾಡ—೧೨ ೧೦ನೇ ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಮಾನವನ ಮೂಲಭೂತ ಹಕ್ಕುಗಳ ದಿನಾಚರಣೆಯ ದಿನ ಶ್ರೀ. ಕರಡಿ ಗುರುಗಳ ವ್ಯಾಖ್ಯಾನವಾಯಿತು, ೧೫ನೆಯ ತಾರೀಖಿನ ದಿನ ಸರದಾರ ವಲ್ಲಭಭಾಯಿ ಅವರ ಪುಣ್ಯ ತಿಥಿಯು ಆಚರಿಸಲ್ಪಟ್ಟಿತು, ಶ್ರೀ. ಎಸ್. ಎಮ್. ಹಳ್ಳಿಕೇರಿ ಗುರುಗಳು ವಲ್ಲಭಭಾಯಿಯವರ ಜೀವನವನ್ನು ಕುರಿತು ವ್ಯಾಖ್ಯಾನ ಮಾಡಿದರು, ೧೬ನೆಯ ತಾರೀಖಿನ ದಿನ ರೆಡ್‌ಕ್ರಾಸ್ ಡೇ ದಿನವನ್ನು ಆಚರಿಸಲಾಯಿತು. ಶ್ರೀ. ಆಯ್. ಎಸ್. ಬಿದರಿ ಗುರುಗಳು ಭಾಷಣ ಮಾಡಿದರು. ಈ ಮೂರೂ ಕಾರ್ಯಕ್ರಮಗಳಲ್ಲಿ ಪ್ರಿ. ಮ. ಗು. ಹಂದ್ರಾಳ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ೨೫ನೆಯ ತಾರೀಖಿನ ದಿನ ಕ್ರಿಸ್‌ಮಸ್ ದಿನವನ್ನು ಆಚರಿಸಲಾಯಿತು. ಬಾಸೆಲ್ ಮಿಶನ್ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ. ಎಸ್. ಸಿ. ಗೋಕಾವಿ ಅವರು ಮುಖ್ಯ ಅತಿಥಿಗಳಾಗಿ ಬಂದು ಏಸುಕ್ರಿಸ್ತನ ಸಂದೇಶವನ್ನು ಉದ್ಬೋಧಕವಾಗಿ ಹೇಳಿದರು.

ಗಜೇಂದ್ರಗಡ—೨೭ ಶ್ರೀ. ಜಿ. ಮ. ಕುಲಕರ್ಣಿ, ಅಸಿ. ಡೆ. ಎ. ಇ. ಅವರ ಹಿರಿಯತನದಲ್ಲಿ ಶಾರೀರಿಕ ಶಿಕ್ಷಣ ದಿನಾಚರಣೆಯು ಆಚರಿಸಲ್ಪಟ್ಟಿತು.

ಹುಲಕೋಟಿ—೧೮ ಹುಲಕೋಟಿ ಗ್ರುಪ್ ಶಿಕ್ಷಕರ ಸಮ್ಮೇಲನವು ಶ್ರೀ. ರು. ರಾ. ಕುಪ್ಪಸದ ಏ. ಓ. ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಕುಂದಗೋಳ—೨೦ ಶ್ರೀ. ಸಿ. ಕೆ. ಕುಲಕರ್ಣಿ, ಚೇಅರಮನ್ ಡಿ. ಎಸ್. ಬಿ. ಧಾರವಾಡ ಮತ್ತು ಶ್ರೀ. ಟಿ. ಕೆ. ಕಂಬಳಿ ವ್ಹಾಯಿಸ ಚೇಅರಮನ್, ಡಿ. ಎಸ್. ಬಿ. ಧಾರವಾಡ ಇವರೀರ್ವರಿಗೂ ಶ್ರೀ. ಗುದ್ಲೆಪ್ಪ ಹಳ್ಳಿಕೇರಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸತ್ಕಾರವನ್ನು ಮಾಡಲಾಯಿತು.

ಚಿಕ್ಕಯಡಚಿ—೧೦ ಸಮಾಜ ಶಿಕ್ಷಣ ವರ್ಗದ ಸಭೆಯು ಶ್ರೀ. ಕೆ. ಎಸ್. ವರಾಹಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಕೋಡ—೧೪ ಗಾವಠಿ ಶಾಲಾ ಶಿಕ್ಷಕರ ಹಾಗೂ ಸಾಮಾಜಿಕ ಶಿಕ್ಷಣ ಕಾರ್ಯಕರ್ತರ ಸಮ್ಮೇಲನವು ಶ್ರೀ. ಕೆ. ಎರ್. ವರಾಹಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಗುಣಕಲ್ಲ ಬಿದರಿ—೨೩ ಸಮಾಜ ಶಿಕ್ಷಣ ವರ್ಗದ ಪ್ರೌಢರಿಗೆ ಬೀಟ ಆಫೀಸರರು ಪಾನನಿರೋಧದ ಬಗ್ಗೆ ತಿಳಿ ಹೇಳಿದರು.

ಗುಡ್ಡದ ಬೇವಿನಹಳ್ಳಿ—೨೫ ಹರಿಜನಕೇರಿಯಲ್ಲಿ ಪಾನಪ್ರತಿಬಂಧದ ಬಗ್ಗೆ ಬೀಟ ಆಫೀಸರರು ಭಾಷಣ ಮಾಡಿದರು.

ರಾಣೇಬೆನ್ನೂರ—೧೪ ಪ್ರತಿಸಾರೆಯಂತೆ ನಗರದ ಎಲ್ಲ ಸಾಲೆಗಳ ಮಾಸಿಕ ಸಮ್ಮೇಲನವು ಜರುಗಿತು. ಶ್ರೀ. ಬಿ. ಎಸ್. ಕುಲಕರ್ಣಿ ಅವರು ಅಧ್ಯಕ್ಷರಾಗಿದ್ದರು.

ಹೊಸರಿತ್ತಿ—೨೬ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವಾಯಿತು. ಶ್ರೀ. ಮಾ. ಹೋ. ನಾಯಕ ಅವರು ಅಧ್ಯಕ್ಷರಾಗಿದ್ದರು.

ಎಲಗಚ್ಚು—೨೮ ಶ್ರೀ. ಎಂ. ರಮಾನಂದರ ಅಧ್ಯಕ್ಷತೆಯಲ್ಲಿ ಪಾಲಕರ ದಿನಾಚರಣೆ ಆಯಿತು.

ಬೆಳವಿಗಿ, ಹೊಸರಿತ್ತಿ—೩೧ ವಸ್ತ್ರಸ್ವಾವಲಂಬನದ ಚಟುವಟಿಕೆಗಳು ನಡೆದವು.

ಬೆಳಘಟ್ಟಿ—೨೬ ಶ್ರೀ. ಟಿ. ಎಫ್. ದೇಸಾಯರ ಹಿರಿಯತನದಲ್ಲಿ ಪಾಲಕರ ದಿನಾಚರಣೆಯು ಆಚರಿಸಲ್ಪಟ್ಟಿತು.

ಕುಂದಗೋಳ—೨೦ ಶ್ರೀ. ಎ. ಎಚ್. ದಳವಾಯಿ ಡಿ. ಇ. ಆಯ್. ಅವರ ಅಧ್ಯಕ್ಷತೆಯಲ್ಲಿ ಪ್ರಾ. ಶಿ. ಸಮ್ಮೇಲನ ಹಾಗು ಸಾಮಾಜಿಕ ಶಿಕ್ಷಣ ಸಮ್ಮೇಲನಗಳು ವಿಜೃಂಭಣೆಯಿಂದ ಜರುಗಿದವು.

ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳಿಗೆ
ಅತ್ಯುಪಯುಕ್ತವಾದ ಹೊಸ ಪುಸ್ತಕಗಳು

೧. ಹೊಸ ಪ್ರಶ್ನೋತ್ತರ ಇತಿಹಾಸ

ಬರೆದವರು:— ಶ್ರೀ. ಭೀ. ಶಂ. ಪೂಜಾರ ಮಾಸ್ತರ, **ಬೆಲೆ: ೧—೪—೦**

ವಿದ್ಯಾರ್ಥಿಗಳು ಇತಿಹಾಸ ಪರೀಕ್ಷೆಯಲ್ಲಿ ಸಂಪೂರ್ಣ ಯಶಸ್ವಿಯಾಗುವಷ್ಟು ವಿಷಯವನ್ನು ಪ್ರಶ್ನೋತ್ತರ ರೂಪದಿಂದ ಬರೆದಿರುವರು. ೩೦೦-೪೦೦ ಪುಟದ ಇತಿಹಾಸ ಪಠ್ಯಪುಸ್ತಕ ಓದುವದಕ್ಕಿಂತಲೂ ಈ ಪುಸ್ತಕವನ್ನು ಓದಿದರೆ ವಿಶೇಷ ಸಹಾಯವಾಗುವದು.

ಈ ಪುಸ್ತಕದ ಕೊನೆಗೆ ರಾಜಕೀಯ ಮುಂದಾಳುಗಳ ಸಂಕ್ಷಿಪ್ತ ಚರಿತ್ರೆಯೂ ರಾಜ್ಯಘಟನೆಯ ಸಂಪೂರ್ಣ ವಿವರಣೆಯೂ ವಿವರಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಡಲು ಸಮರ್ಥರಾಗುವಂತೆಯೂ ಪ್ರಶ್ನೆಗಳ ನಿಶ್ಚಿತ ಸ್ವರೂಪವನ್ನು ಚನ್ನಾಗಿ ತಿಳಿದುಕೊಳ್ಳುವಂತೆಯೂ ಬರೆಯಲ್ಪಟ್ಟಿದೆ. ಇಂದಿನ ವರೆಗೆ (ಐದು ವರ್ಷಗಳ) ಪರೀಕ್ಷೆಯ ಪ್ರಶ್ನೆಗಳನ್ನು ಬಿಡಿಸಿದ್ದಾರೆ. ಎಲ್ಲ ಪ್ರಶ್ನೋತ್ತರ ಇತಿಹಾಸ ಪುಸ್ತಕಗಳಿಗಿಂತಲೂ ಇದು ಹೊಸ ಪುಸ್ತಕವಾಗಿದೆ.

೨. ಹೊಸ ಪ್ರಶ್ನೋತ್ತರ ಜಮಾಖರ್ಚು

ಬರೆದವರು:— **ಶ್ರೀ. ಭೀ. ಬಂ. ರಾಜಪುರೋಹಿತ ಮಾಸ್ತರ,** **ಬೆಲೆ ೧—೦—೦**

'ಜಮಾಖರ್ಚು' ಈ ವಿಷಯವು ಬಹು ನೀರಸವಾದುದು. ಆದುದರಿಂದ ವಿದ್ಯಾರ್ಥಿಗಳು ಬಹಳ ತೊಂದರೆಗೊಳಗಾಗುವರು. ಈ ತೊಂದರೆ ನೀಗಿಸಲು ಈ ಪುಸ್ತಕವು ರಚಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಇದೊಂದೆ ಪುಸ್ತಕ ಅಭ್ಯಸಿಸುವದರಿಂದ ಈ ವಿಷಯದ ಪರೀಕ್ಷೆಯಲ್ಲಿ ಅವರು ನಿಶ್ಚಿತವಾಗಿ ಯಶಸ್ವಿಯಾಗುವರು. ಇಂದಿನ ವರೆಗೆ ೫ ವರ್ಷಗಳ ಪರೀಕ್ಷೆಯ ಪ್ರಶ್ನೆಗಳ ಉತ್ತರಗಳನ್ನೂ ಕೆಲವು ಹೊಸ ಮಾದರಿಯ ಪ್ರಶ್ನೆಗಳನ್ನೂ ಈ ಪುಸ್ತಕದಲ್ಲಿ ನೋಡಬಹುದು.

ಪುಸ್ತಕ ಬೇಕಾದವರು ಕೂಡಲೇ ತರಿಸಿಕೊಳ್ಳಿರಿ.

ಪಿ. ಸಿ. ಶಾಬಾದಿಮಠ ಬುಕ್ಕಡಿಪೊ, ಗದಗ

ನಿಮ್ಮ ಸ್ಥಳಿಕ ಪುಸ್ತಕದ ಅಂಗಡಿಯಲ್ಲಿ ವಿಚಾರಿಸಿರಿ.

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ—ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ–೧ ಇತಿಹಾಸ ಬೆಲೆ ೦-೬–೦

,, ೨ ಭೂಗೋಲ ಬೆಲೆ ೦-೬-೦

,, ೩ ಭೂಮಿತಿ-ಜಮಾಖರ್ಚು ೧–೬–೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫–೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ–

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧–೧೨–೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ **ಬೋಕೆಯವರ** "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ ಪಿ. ಎಸ್. **ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ವ್ಹಿ. ಬೋಕೆ ಫುಲಬಾಗ ೨೨೪/೮೭ ಬೆಳಗಾವಿ

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.

ಇಂದೇ ತರಿಸಿರಿ! ಮರೆಯಬೇಡಿರಿ!

ಮಾ। ಗ. ಜ. ಗುಂಜೀಕರ, ಎ. ಓ. ಜಿಲ್ಲಾ ಸ್ಕೂಲ್‌ಬೋರ್ಡ್, ವಿಜಾಪುರ

ಮಾ। ಎ. ಎಚ್. ದಳವಾಯಿ, ಡಿ. ಎ. ಇ. ಜಿಲ್ಲಾ, ವಿಜಾಪುರ

ಇವರುಗಳ ಮುನ್ನಡಿ ಮತ್ತು ಪ್ರೋತ್ಸಾಹಗಳಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಮೂಲ ಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳದ್ದು ಬೆಲೆ ೮ ಆಣೆ.

೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೦೨ ಪುಟಗಳುಳ್ಳದ್ದು ಬೆಲೆ ೧೨ ಆಣೆ

ಬ. ದು. ಹಿರೇಮಠ ಮಾಸ್ತರ, ವಿಜಾಪುರ

ಚಿಂತೆ! ಚಿಂತೆ!! ಚಿಂತೆ!!!

ಶಿಕ್ಷಕರಿಗೂ ಚಿಂತೆ!
ಪಾಲಕರಿಗೂ ಚಿಂತೆ!!
ಮಕ್ಕಳಿಗೂ ಚಿಂತೆ!!! ?

ಶಿಕ್ಷಕರ ಶ್ರಮ ಹಾಳು! ಮಕ್ಕಳ ಓದು ಹಾಳು!! ಪಾಲಕರ ಹಣ ಹಾಳು!!!

ಇವುಗಳ ನಿವಾರಣೋಪಾಯ ಬೇಕೆ? ಹಾಗಿದ್ದರೆ,

ಪರೀಕ್ಷೆಯ

ಸ್ಕಾಲರ್‌ಶಿಪ್ ಮತ್ತು ಮುಲ್ಕೀ ವಿದ್ಯಾರ್ಥಿಗಳಿಗಾಗಿ

ಹೊಸ ಅಭ್ಯಾಸ ಪತ್ರಿಕೆಯಂತೆ ಬರೆದ

ಪ್ರಶ್ನೋತ್ತರ ದೀಪಿಕೆ

ಇತಿಹಾಸ

ಬೆಲೆ ೦-೧೪-೦ (ಪೌರನೀತಿ ಸಹಿತ) (ಅಂಚೆ ವೆಚ್ಚ ಪ್ರತ್ಯೇಕ)

ಇದನ್ನು ತಪ್ಪದೇ ಓದಿರಿ. ಭಾರತದ ನಿರ್ಮಾತೃಗಳ ಜೀವನ ಚರಿತ್ರೆ, ರಾಜ್ಯಘಟನೆ, ಮಂತ್ರಿಮಂಡಲಗಳ ವಿವರಣೆಯನ್ನೊಳಗೊಂಡಿರುವ ಏಕೈಕ ಹೊತ್ತಿಗೆ.

ಇಂದೇ ಬರೆಯಿರಿ ಅಥವಾ ಭೆಟ್ಟಿಯಾಗಿರಿ.

ವೀಣಾ ಬುಕ್ ಡಿಪೋ, ಮಾರುತಿ ಬೀದಿ, ಬೆಳಗಾವಿ

೫ ನೇ ಆವೃತ್ತಿ) **ಶೈಕ್ಷಣಿಕ ಮನೋವಿಜ್ಞಾನ** (ಪುಟ ೨೫೦

ಬರೆದವರು: ಡಾ| ವಿ. ಕೊ. ಜವಳಿ M. Ed. Ph. D. M.A. (ಕೋಲಂಬಿಯಾ)

ಬೆಲೆ ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಇತ್ತೀಚಿಗೆ ಹೊಸ ಹೊಸ ಸಂಶೋಧನೆಗಳು ಆಗಿವೆ. ಅವುಗಳ ಪರಿಚಯವನ್ನು ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಮಾಡಿ-ಕೊಡುವುದಕ್ಕಾಗಿ ಈ ಪುಸ್ತಕವು ಬರೆಯಲ್ಪಟ್ಟಿದೆ. ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಅವಶ್ಯವಾದ ಶೈಕ್ಷಣಿಕ ಅಭ್ಯಾಸ ಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ಶೈಲಿಯು ಎಲ್ಲರಿಗೂ ತಿಳಿಯು-ವಂತೆ ಬಹಳ ಸುಲಭವಾಗಿದೆ. ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ಪುಸ್ತಕ ಕನ್ನಡದಲ್ಲಿ ಇದೋಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು:

ಆಕಳವಾಡಿ ಬುಕ್ ಡಿಪೋ ಧಾರವಾಡ.

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ನಿಮಗೆ ದೊರೆತಿವೆಯೆ ?

೧೯೫೨ರ ಸುಧಾರಿಸಿದ ಆವೃತ್ತಿಗಳ

★ ನೂತನ ಗಣಿತ ★

● ೧ನೆಯ ವರ್ಗಕ್ಕಾಗಿ	೦—೬—೦	(ಭೂಮಿತಿ, ಜಮಾಖರ್ಚು ಆಲೇಖ ಸಹ)	
● ೨ನೆಯ ,,	೦—೮—೦	● ೫ನೆಯ ವರ್ಗಕ್ಕಾಗಿ	೦–೧೪–೦
● ೩ನೆಯ ,,	೦–೧೦–೦	● ೬ನೆಯ ,,	೧—೦—೦
● ೪ನೆಯ ,,	೦–೧೨–೦	● ೭ನೆಯ ,,	೧–೧೨–೦

ಸುಧಾರಿಸಿದ ಕೃತಿಗಳನ್ನು ತಮಗೆ ನೀಡಲು ಸಂತೋಷವೆನಿಸುತ್ತದೆ. ಪ್ರಾ. ಶಾ. ಪ್ರ. ಪ ಪರೀಕ್ಷೆಗೆ ಬೀಜಗಣಿತ ವಿಷಯ ಇದ್ದುದು ಗೊತ್ತಿದೆಯೆ ? ೭ನೆಯ ಗಣಿತ ಎಲ್ಲ ವಿಭಾಗಗಳನ್ನು ಒಳಗೊಂಡು ಹೊರಡಿಸಲಾಗಿದೆ. ಸಂಗ್ರಹದಿಂದ ಈಗಲೇ ಪಡೆಯಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ನೇಯಿಗೆಯ ಶಾಲೆಗಳಿಗೆ ಅತ್ಯುಪಯುಕ್ತವಾದ ಪುಸ್ತಕಗಳು.

ಶ್ರೀ. ಎಸ್. ಡಿ. ನೀಲಗಿರಿ ಕೃತ

೧. ಕೈನೂಲು ೨—೪—೦
೨. ಕೈನೇಯಿಗೆಯ ಮಾರ್ಗದರ್ಶಿಕೆ ೨-೧೨—೦

ಶೇತಕಿ ಶಾಲೆಗಳಿಗೆ ಉಪಯುಕ್ತವಾದ ಪುಸ್ತಕಗಳು.

ಲೇ:—ನಾರಾಯಣ ಶರ್ಮರು

೧. ಆಧುನಿಕ ರೈತ ಭಾಗ-೧ ೦-೧೨—೦
೨. ಆಧುನಿಕ ರೈತ ಭಾಗ-೨ ೦-೧೨—೦
೩. ಆಧುನಿಕ ರೈತ ಭಾಗ-೩ ೧—೨—೦

ಯಾವತ್ತೂ ಶಾಲೆಯ ಲಾಯಬ್ರರಿಗಳಲ್ಲಿ ಅವಶ್ಯ ಸಂಗ್ರಹಿಸಬೇಕಾದ ಚಿಕ್ಕ ಚಿಕ್ಕ ಹೊತ್ತಗೆಗಳು.

ಮುದ್ದಾದ ದೊಡ್ಡ ಅಕ್ಷರ — ಸುಲಭ ಭಾಷೆ

(ಜೀವನ ಚರಿತ್ರೆಗಳು)

೧. ಮಹಾತ್ಮಾ ಗಾಂಧಿ ೦—೪—೦
೨. ಜವಾಹಿರಲಾಲ ನೆಹರು ೦—೪—೦
೩. ಈಶ್ವರಚಂದ್ರ ವಿದ್ಯಾಸಾಗರ ೦—೪—೦
೪. ಭಗವಾನ್ ಬುದ್ಧದೇವ ೦—೪—೦
೫. ಸ್ವಾಮಿ ವಿವೇಕಾನಂದ ೦—೬—೦
೬. ಮಹಾವೀರ ಮಾರುತಿರಾಯ ೦—೬—೦
೭. ರಾಜಾ ರಾಮ ಮೋಹನರಾಯ ೦—೬—೦
೮. ರಾಷ್ಟ್ರಮಾತಾ ಕಸ್ತೂರಬಾ ೦—೬—೦
೯. ರವೀಂದ್ರನಾಥ ಠಾಕೂರ ೦—೩—೦
೧೦. ಮೌಲಾನಾ ಅಬುಲ್‌ಕಲಂ ಅಝಾದ ೦—೨—೬
೧೧. ಬಲಶಾಲಿ ಭೀಮಸೇನ ೦—೬—೦
೧೨. ರಾಮಕೃಷ್ಣ ಪರಮಹಂಸರ ದಿವ್ಯಜೀವನ ೦—೧೨—೦
೧೩. ಝಾಂಸಿಯ ಮರೆಯದ ಮಹಾರಾಣಿ ೦—೬—೦
೧೪. ಸರ್ ಸರ್ವೆಪಲ್ಲಿ ರಾಧಾಕೃಷ್ಣನ್ ೦—೬—೦

ಉಪಯುಕ್ತ ವ್ಯಾಕರಣಗಳು

ಲೇ:—ಪಂಡಿತ ಕವಲಿ.

೧. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ—೮ನೇ ಇಯತ್ತೆಗೆ ೧—೦—೦
ಕನ್ನಡವ್ಯಾಕರಣ ವಿವಿಧ ಸಾಹಿತ್ಯ ಮಾಲೆ —೯ನೇಇಯತ್ತೆಗೆ ೧—೪—೦
೩. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ ೧೦-೧೧ನೇ ಇ. ೧—೧೨—೦

ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳಿಗೆ ಉಪಯುಕ್ತ ಪುಸ್ತಕಗಳು.

೧. ಮೂಲಶಿಕ್ಷಣ ಲೇ:—ಹೆಂದ್ರಾಳ ೩-೦-೦
೨. ಐವರು ಶಿಕ್ಷಣ ಸುಧಾರಕರು ೦-೧೦-೦
೩. ಗದಾಯುದ್ಧ ದರ್ಪಣ (೪-೫ನೆಯ ಆಶ್ವಾಸಗಳು) ೧-೬-೦
೪. ರಾಮಾಶ್ವಮೇಧಸಾರ ಸಂಗ್ರಹ ಪ್ರಕಾಶ ೧-೦-೦
೫. ಗಣಿತ ಮಿತ್ರ ೧-೮-೦

ಇವಲ್ಲದೆ ಎಲ್ಲ ಬಗೆಯ ಕನ್ನಡ, ಹಿಂದಿ, ಇಂಗ್ಲಿಷ ಶಾಲೋಪಯೋಗಿ ಪುಸ್ತಕಗಳೂ, ಕಥೆಕಾದಂಬರಿಗಳೂ ದೊರೆಯುತ್ತವೆ. ಮಾಸ್ತರ ಜನರ ಹಾಜರಿ ಫಾರ್ಮ, ವಿದ್ಯಾರ್ಥಿ ಹಾಜರಿ ಫಾರ್ಮು ವಗೈರೆ ಶಾಲೋಪಯೋಗೀ ಎಲ್ಲ ಬಗೆಯ ಫಾರ್ಮು ಹಾಗೂ ಪುಸ್ತಕಗಳೂ ದೊರೆಯುತ್ತವೆ. ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ.

Regd. No. B. 8878

ಗೌರೀಶ ಗ್ರಂಥ ಪ್ರಕಟನಾಲಯ, ಧಾರವಾಡ.

ಹೊಸ ಅಭ್ಯಾಸ ಪತ್ರಿಕೆಯನ್ನನುಸರಿಸಿ

ವಿದ್ಯಾರ್ಥಿಗಳ ಮನಂಬುಗುವಂತೆ ಬರೆಯಲಾದ

ಸಚಿತ್ರ

ನಾಗರಿಕನೀತಿ ಅಥವಾ ಪೌರನೀತಿ (ಸಿವ್ಹಿಕ್ಸ)

(ಶಾಲೆಯ ಶಿಕ್ಷಕರು ಹಾಗು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಹೊತ್ತಿಗೆಗಳು)

ಇಂದಿನ ಬಾಲಕರು ನಾಳಿನ ನಾಗರಿಕರು. ಸ್ವತಂತ್ರ ಭಾರತದ ಪ್ರಜಾಸತ್ತಾಕ ಸಾರ್ವಭೌಮ ರಾಜ್ಯದಲ್ಲಿ ಪ್ರತಿಯೊಬ್ಬ ಬಾಲಕನೂ ಉತ್ತಮ ನಾಗರಿಕನಾಗಿ ನಡೆಯಬೇಕೆಂಬುದು ಭಾರತದ ಭಾವೀ ಜೀವಿತದ ಚಿಹ್ನವೆಂದು ಭಾವಿಸಬೇಕು. ಅಂತೆಯೇ ಇಂದಿನ ಸ್ವತಂತ್ರ ಬಾಲಕರಿಗೆ **ಪೌರನೀತಿ ಅಥವಾ ನಾಗರಿಕ** ನೀತಿಯನ್ನು ಚಿಕ್ಕಂದಿನಿಂದಲೇ ಕಲಿಸಬೇಕೆಂಬ [illegible] ಇದನ್ನು ಗಮನಿಸಿಯೇ ಅನುಭವಿಕ ವಿದ್ವಾಂಸರಿಂದ ಕತೆ, ಸಂಭಾಷಣೆ, ಉಪನ್ಯಾಸ ಮೂಲಕವಾಗಿ ಬಾಲಕರಿಗೆ ರುಚಿಸುವಂತೆ ರಸವತ್ತಾಗಿ ನಾಗರಿಕ ನೀತಿಯ ಗ್ರಂಥಗಳನ್ನು [illegible] ತರಗತಿಯವರೆಗೆ ಹೊಸ ಅಭ್ಯಾಸಪತ್ರಿಕೆಯನ್ನನುಸರಿಸಿ ಸಿದ್ಧಗೊಳಿಸಲಾಗಿದೆ. ವಿದ್ಯಾರ್ಥಿಗಳು ಇದರ ತುಂಬಾ ಪ್ರಯೋಜನವನ್ನು ಹೊಂದಲೆಂದು ಆಶಿಸುತ್ತೇವೆ.

ಸಚಿತ್ರ

ನಾಗರಿಕ ನೀತಿ ೧ನೆಯ ತರಗತಿ ಬೆಲೆ ೫ ಆಣೆ   ನಾಗರಿಕ ನೀತಿ ೨ನೆಯ ತರಗತಿ ಬೆಲೆ ೬ ಆಣೆ

ನಾಗರಿಕ ನೀತಿ ೩ನೆಯ ತರಗತಿ ಬೆಲೆ ೬ ಆಣೆ   ನಾಗರಿಕ ನೀತಿ ೪ನೆಯ ತರಗತಿ ಬೆಲೆ ೬ ಆಣೆ

ಬಾಲಕರು ವಿಷಯವನ್ನು ಸಹಜವಾಗಿ ಗ್ರಹಿಸುವಂತೆ ಪಾಠಕ್ಕನುಸರಿಸಿ ಚಿತ್ರಗಳನ್ನು ಎರಡು ಬಣ್ಣದಿಂದ ತೋರಿಸಿದೆ

೧ನೆಯ ೨ನೆಯ ತರಗತಿಯ ಬಾಲಕರಿಗೆ ಶಿಸ್ತು, ಸ್ವಚ್ಛತೆ, ನೆರೆಹೊರೆಯವರ ಸಹಕಾರ, ಬಂಧುಬಳಗದವರಲ್ಲಿ ಪ್ರೀತಿ, ಪ್ರಾಣಿಗಳಲ್ಲಿ ದಯೆ ಮೊದಲಾದವನ್ನು ಬೋಧಿಸುವ ಪಾಠಗಳನ್ನು ಸೇರಿಸಲಾಗಿದೆ.

೩ನೆಯ ತರಗತಿಯವರಿಗೆ ವಿವಿಧ ಜನರ ಉದ್ಯೋಗ, ಆಹಾರ, ಗ್ರಾಮಕ್ಕೆ ನೀರಿನ ಪೂರೈಕೆ, ಗುಡಿ, ಉತ್ಸವ ಜಾತ್ರೆ, ಸಾರ್ವಜನಿಕ ಮನರಂಜನೆ ಮುಂತಾದವನ್ನು ಕೊಡಲಾಗಿದೆ.

೪ನೆಯ ತರಗತಿಗೆ ಹಳ್ಳಿಯ ಪಂಚಾಯತಿ, ಅದರ ಕರ್ತವ್ಯ, [illegible] ಸ್ಥಾನಿಕ ಸ್ವರಾಜ್ಯ ಸಂಸ್ಥೆ, ರಾಷ್ಟ್ರೀಯ ಹಬ್ಬ, ಸಾರ್ವಜನಿಕ ಸಮಾರಂಭ ಹಾಗು ಭಾರತದ ಮುಂದಿನ ಅವಶ್ಯ ವಿಷಯಗಳನ್ನು ಕೊಡಲಾಗಿದೆ.

ಎರಡು ಬಣ್ಣಗಳಿಂದ [illegible] ಎಲ್ಲ ಪುಸ್ತಕಗಳು ಅಂತರಂಗ, ಬಹಿರಂಗದಲ್ಲಿ ಸೌಂದರ‍್ಯದಿಂದೊಡಗೂಡಿದ್ದು ಮಕ್ಕಳ ಮನ ಸೆಳೆಯುವಂತಿವೆ.

೫ನೆಯ ತರಗತಿಗೆ ಆರೋಗ್ಯ, ಆಹಾರ, ನೀರಿನ ಸರಬರಾಜು, [illegible] ನಗರ ಪಂಚಾಯತಿ, ನಾಗರಿಕರ [illegible] ಬಗ್ಗೆ ಬರೆಯಲಾಗಿದೆ. ಒಟ್ಟಿಗೆ ಪೌರನೀತಿಯ ಹೆಚ್ಚಿನ ಜ್ಞಾನಕ್ಕೆ ದಾರಿ ಮಾಡಿಕೊಟ್ಟಿದೆ. [illegible] ಚಿತ್ರಗಳ ಜೋಡಣೆ ಇದೆ.

೬ನೆಯ ತರಗತಿಗೆ ಶಾಲೆಯ ಸ್ವಚ್ಛತೆ, ಶಿಸ್ತು, ಸಂಪ್ರದಾಯ, ದಿನ ಪತ್ರಿಕೆಗಳ ಪ್ರಕಟಣೆ; ಕಲೆಕ್ಟರ ಹಾಗು ಇತರ ಅಧಿಕಾರಿಗಳ ಕಾರ್ಯ, ಗ್ರಾಮಿಕ ಸ್ವರಾಜ್ಯಸಂಸ್ಥೆ, ಸಾರ್ವಜನಿಕ ಶಿಕ್ಷಣ, ಸಮಾಜ ಸೇವೆ ಇತ್ಯಾದಿ ವಿಷಯಗಳನ್ನು [illegible] ವಿವರಿಸಲಾಗಿದೆ.

ಒಟ್ಟಿಗೆ ವರ್ಗಾನುಕ್ರಮದಿಂದ ಮಕ್ಕಳಲ್ಲಿ ನಾಗರಿಕ ನೀತಿಯು ಹೆಚ್ಚೆಚ್ಚಾಗಿ ಬೆಳೆಯುವಂತೆ ಪಾಠಗಳ ಜೋಡಣೆಯಿದೆ.

ಇಂದೇ ಓದಿ ಉತ್ತಮ ನಾಗರಿಕರಾಗಿರಿ.

ಪ್ರಕಾಶಕರು :

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಅಡಕೀ ಓಣಿ, ಧಾರವಾಡ.

Prined by M. A. Kamat. B. sc. at Jai Hind Art Press, Javlineth, Dharwar. Edited and Published by M. G. Handral, B. M. Shintri, S. R. Tatti, & P. A Bhaskar Jointly at the KannadarintPrathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು:—ಎಮ್. ಜಿ. ಹಂದ್ರಾಳ

16/2/53



("ಜಯ ಕರ್ನಾಟಕ"ದ ಕೃಪೆಯಿಂದ)

ಪ್ರತಿ ೬ ಆಣೆ

ಫೆಬ್ರುವರಿ ೧೯೫೩

ಹೊಸ ಪುಸ್ತಕವು! ತಯಾರಾಗಿ ಬಂದಿದೆ! ತ್ವರೆ ಮಾಡಿರಿ!

—ಕನ್ನಡ ಕನ್ನಡ ಶಬ್ದಕೋಶ—

ಬರೆಹಗಾರರು:—H. V. ರಮಾಕಾಂತರಾವ್. B. A. (Hons)

ಬೆಲೆ:—ಆರು ರೂಪಾಯಿಗಳು ಮಾತ್ರ.

ಈ ಪುಸ್ತಕದಲ್ಲಿ ೩೫ ಸಾವಿರ ಶಬ್ದಗಳ ಸಂಗ್ರಹವು, ಒಂದುವರೆಲಕ್ಷ ಅರ್ಥ ವಿವರಣೆಯೊಳಗೂಡಿ ತಯಾರಾಗಿದೆ. ಮಂಗಳೂರಿನ ಅಂದವಾದ ಮುದ್ರಣದ ೬೬೫ ಪುಟಗಳ ಈ ಪುಸ್ತಕವು **ಮೇಲ್ತರದ** ಕೋಶ ಗ್ರಂಥವಾಗಿದೆ. ಇದರಷ್ಟು ದೊಡ್ಡ ಕೋಶಗ್ರಂಥವು ಇನ್ನೊಂದಿಲ್ಲವೆಂದರೂ **ಅತಿಶಯೋಕ್ತಿ** ಯಾಗಲಾರದು. V. P. ಯಿಂದ ಬೇಡುವವರು ೧ ಹಣವನ್ನು ಮುಂಗಡ ಕಳಿಸಬೇಕು.

ಇದಲ್ಲದೆ ನಮ್ಮಲ್ಲಿ ಶಾಲೋಪಯೋಗದ ಎಲ್ಲ ಬಗೆಯ ಪುಸ್ತಕಗಳು,
ಕಥೆಯ ಪುಸ್ತಕಗಳು, ಶಾಲೆಯ ಹಾಜರಿ ಪುಸ್ತಕಗಳು ಸಿಗುತ್ತವೆ.

ಪ್ರಕಾಶಕರು:— ಕೇ. ಎಸ್. ಕುಲಕರ್ಣಿ ಬುಕ್‌ಡಿಪೋ
ಸ್ಟೇಶನ್‌ರೋಡ್, ಹುಬ್ಬಳ್ಳಿ.

ಪುಟ ೧೮೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು:— ಶ್ರೀ. ಮ. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.
(ಪ್ರಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿ ಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.
ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು
ಸವಿಯಲು ಸಜ್ಜಾಗಿರಿ.

ಅಕ್ಷರಶಿಕ್ಷಣ ಬುಕ್ ಡಿಪೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

16/2/53

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಬಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ. ಎಂ. ಜಿ. ಹಂಪ್ರಾಳ** ಬಿ.ಎ. (ಆನರ್ಸ) ಬಿ. ಟಿ., ಡಿ. ಪಿ. ಇಡಿ; ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀ. ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೨	ಫೆಬ್ರುವರಿ ೧೯೫೩	ಸಂಚಿಕೆ ೯

ಪರಿವಿಡಿ

ಅ. ನಂ. ವಿಷಯ		ಪುಟ
ಸಂಪಾದಕೀಯ	....	೩
ಮಕ್ಕಳ ಶಿಕ್ಷಣ ಮನೆಯಲ್ಲಿ ಅಲ್ಲವೆ?	ಶ್ರೀ. ತಟ್ಟಿ ಶ್ಯಾಮರಾಯರು	೫
ಪಂಡಿತ ಜವಾಹರಲಾಲ ನೆಹರು	ಶ್ರೀ. ಶಿಂತ್ರಿ ಬಸಪ್ಪನವರು	೯
ರನ್ನನೂ ಗದಾಯುದ್ಧವೂ	ಶ್ರೀ. ಆಯ್. ಎಸ್. ಬಿದರಿ	೧೨
ಪ್ರಜಾರಾಜ್ಯ ದಿನ (ಭಾಷಣ)	ಶ್ರೀ. ವ್ಹಿ. ಸಿ. ಪಾವಟೆ	೧೬
ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ	....	೨೩

ಪುಸ್ತಕ ವಿಮರ್ಶೆ—೧೯ ಪ್ರಕಟನೆ ೨೦

ಸಾರ್ವಜನಿಕ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಕಾರ್ಯಕ್ರಮ ೨೧

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ೧೯೫೩

ತಿದ್ದುಪಡಿ

ಮಂಗಳವಾರ ೭-೪-೫೩ರಂದು ೩ರಿಂದ ೬ರ ವರೆಗೆ ನಡೆಯುವ ಇತಿಹಾಸ, ಭೂಗೋಲ ಮತ್ತು ಪೌರ ನೀತಿಯ ವಿಷಯವು ೩ನೆಯ ಸದರಿನ ವಿಷಯವೆಂದು ಗ್ರಹಿಸಬೇಕೆಂದೂ ೨ನೆಯ ಸದರಿನ ವಿಷಯವು ಅದಲ್ಲವೆಂದು ತಿಳಿಯಬೇಕೆಂದೂ ವಿದ್ಯಾಧಿಕಾರಿಗಳು ತಿಳಿಸುತ್ತಾರೆ.

ಪರಿಣಾಮ ಪ್ರಕಟನೆ

ಈ ಪರೀಕ್ಷೆಯ ಪರಿಣಾಮವು ಮೇ ೨೫ನೆಯ ತಾರೀಖಿಗೆ ಪ್ರಕಟವಾಗುವುದು.

ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳಾದ ಮಾನ್ಯ **ಶ್ರೀ ದಿನಕರರಾವ ದೇಸಾಯಿ** ಅವರು ಧಾರವಾಡದಲ್ಲಿ ಕೆಲವು ಶಿಕ್ಷಣ ಸಂಸ್ಥೆಗಳಿಗೆ ೧೯೫೩ ಜನೇವರಿ ೧೦ರಂದು ಸಂದರ್ಶನವಿತ್ತರು. ಪವನೀಧರರ ಜೀವನ ಶಿಕ್ಷಣ ಕೇಂದ್ರವನ್ನು ಸಂದರ್ಶಿಸಿದಾಗ ಜೀವನ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆ ಪ್ರೇರಣೆ ದೊರೆಯು-ವಂತೆ ಬೋಧಪರ ಭಾಷಣ ಮಾಡಿದರು.

ಧಾರವಾಡ ಅಗ್ರಿಕಲ್ಚರಲ್ ಕಾಲೇಜಿನ ಸೇವಾನಿವೃತ್ತ ಪ್ರಿನ್ಸಿಪಾಲರೂ ಕ. ವಿಶ್ವವಿದ್ಯಾಲಯದ ಸಿನೇಟರರೂ ಸಿಂಡಿಕೇಟದ ಸದಸ್ಯರೂ ಆದ **ಶ್ರೀ ವ್ಹಿ. ಸಿ. ಪಾವಟೆ** ಅವರು ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನಲ್ಲಿ ಜನೇವರಿ ೨೬ರಂದು ಪ್ರಜಾರಾಜ್ಯ ದಿನಾಚರಣೆಯ ಮುಖ್ಯ ಅತಿಥಿಗಳಾಗಿದ್ದರು. ರಾಷ್ಟ್ರಧ್ವಜವನ್ನು ಹಾರಿಸಿ, ವಿದ್ಯಾರ್ಥಿಗಳನ್ನು ಕುರಿತು ಮನನೀಯ ಭಾಷಣ ಮಾಡಿದರು.

ಡಾ. **ಎಸ್. ಸಿ. ನಂದೀಮಠ** ಅವರು ಕರ್ನಾಟಕ ವಿಶ್ವ-ವಿದ್ಯಾಲಯದ ರಜಿಸ್ಟ್ರಾರರಾಗಿ ಬಂದಂದಿನಿಂದ ವಿಶ್ವವಿದ್ಯಾ-ನಿಲಯದ ನಿಧಿಸಂಗ್ರಹದ ಕಾರ್ಯವು ಭರದಿಂದ ಸಾಗಿರುವದು. ಪ್ರಾಥಮಿಕ ಶಿಕ್ಷಣದಿಂದ ಉಚ್ಚ ಶಿಕ್ಷಣದ ವರೆಗಿನ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಅನುಭವಗಳಿಸಿದಂತಹ ಇವರು ವಿಶ್ವ-ವಿದ್ಯಾಲಯವನ್ನು ಭದ್ರ ತಳಹದಿಯ ಮೇಲೆ ಕಟ್ಟುವ ಯತ್ನ-ದಲ್ಲಿರುವರು.

ಸಂಪಾದಕೀಯ

ಪ್ರಜಾರಾಜ್ಯ ದಿನ.

೧೯೫೩ನೆಯ ಜನೆವರಿ ೨೬. ಭಾರತ ಪ್ರಜಾರಾಜ್ಯದ ತೃತೀಯ ವರ್ಧಂತ್ಯೋತ್ಸವದ ದಿನ. ೧೯೪೭ನೆಯ ಆಗಸ್ಟ ೧೫ನೆಯ ದಿನಾಂಕ ಸ್ವತಂತ್ರವಾದ ಭಾರತವು ತನ್ನದೇ ಆದ ರಾಜ್ಯಘಟನೆಯನ್ನು ನಿರ್ಮಿಸಿಕೊಂಡು ಸಾರ್ವಭೌಮ ಪ್ರಜಾರಾಜ್ಯವನ್ನು ಘೋಷಿಸಿತು. ೧೯೫೦ನೆಯ ಜನೆವರಿ ೨೬ರಂದು ರಾಜ್ಯಘಟನೆಯಂತೆ ೧೯೫೨ನೆಯ ಇಸ್ವಿಯಲ್ಲಿ ಪ್ರೌಢಮತದಾನ ಪದ್ಧತಿಯ ಮೇಲೆ ಸಮಗ್ರ ಭಾರತವಲ್ಲೆಲ್ಲ ರಾಜ್ಯವಿಧಿ ಮಂಡಲಗಳ ಹಾಗೂ ಲೋಕಸಭೆಯ ಚುನಾವಣೆಗಳನ್ನು ನಡೆಯಿಸಿ ನೈಜ ಪ್ರಜಾರಾಜ್ಯವು ಎಲ್ಲ ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿ ಸ್ಥಾಪಿತವಾಯಿತು. ಜನತೆಯಿಂದ ಜನತೆಗಾಗಿ ಜನತೆಯ ಜನರೇ ರಾಜ್ಯ ಮತ್ತು ಕೇಂದ್ರ ಶಾಸನಸಭೆ ಮೊದಲಾದವುಗಳಿಗೆ ಆರಿಸಿ ಹೋಗಿ ರಾಜ್ಯಭಾರ ನಡೆಸುತ್ತಿದ್ದಾರೆ. ಬಾಪೂಜಿಯವರ ಪಟ್ಟಶಿಷ್ಯದ್ವಯರಾದ ರಾಜೇಂದ್ರಬಾಬುಗಳು ಭಾರತ ಪ್ರಜಾರಾಜ್ಯದ ಆಧ್ಯಕ್ಷರಾಗಿಯೂ, ಪಂಡಿತ ಜವಾಹರಲಾಲ ನೆಹರೂರವರು ಪ್ರಧಾನ ಮಂತ್ರಿಗಳಾಗಿಯೂ ರಾಷ್ಟ್ರ ನೌಕೆಯನ್ನು ರಾಜಕೀಯದ ಜರ್ಜರ ಜಲಧಿಯಲ್ಲಿ ಯಶಸ್ವಿಯಾಗಿ ಸಾಗಿಸುತ್ತಿದ್ದುದು ಹೆಮ್ಮೆಯ ಸಂಗತಿ. ಸಮಾಜ ವಿಕಾಸಯೋಜನೆ, ಪಂಚವಾರ್ಷಿಕ ಯೋಜನೆ ಮೊದಲಾದ ಅಭಿವೃದ್ಧಿಕ ಯೋಜನೆಗಳನ್ನು ಅಮಲಿನಲ್ಲಿ ತಂದು ರಾಷ್ಟ್ರದ ಸರ್ವಾಂಗೀನ ಉನ್ನತಿಯನ್ನು ಸಾಧಿಸಲು ನಮ್ಮ ರಾಷ್ಟ್ರದ ಮುಖಂಡರು ಶ್ರಮಿಸುತ್ತಿರುವರು. ಪ್ರಜಾರಾಜ್ಯವು ತನ್ನ ಮೂರು ವರ್ಷಗಳಲ್ಲಿ ರಾಷ್ಟ್ರವನ್ನು ಉತ್ಥಾನದ ಮಾರ್ಗದತ್ತ ಸಾಗಿಸಿದಂತೆ ಮುಂಬರುವ ವರ್ಷವು ಸಹ ಅದನ್ನು ಸೌಖ್ಯ ಹಾಗೂ ಔನ್ನತ್ಯದ ದಾರಿಯಲ್ಲಿ ನಡೆಯಿಸಿಕೊಂಡು ಹೋಗುವನೆಂದು ವಿದೇಶಗಳಲ್ಲಿ ಅದರ ಕೀರ್ತಿಪರಂಪರೆಯನ್ನು ಬೆಳಗಿಸುವದೆಂದು ಹಾರೈಸುವೆವು.

ಪೂಜ್ಯ ಬಾಪೂಜಿಯ ಪುಣ್ಯದಿನ:

ಶುಕ್ರವಾರ ದಿನಾಂಕ ೩೦ನೆಯ ಜನೆವರಿ ೧೯೪೮, ಭಾರತದಲ್ಲಿ ರಕ್ತದಿನವದು; ಕರಾಳ ಕಗ್ಗತ್ತಲೆಯ ದಿನವದು; ಕ್ರಿಸ್ತ, ಬುದ್ಧ, ಬಸವಣ್ಣನವರಂಥ ಮಹಾವಿಭೂತಿಗಳ ಮಾಲಿಕೆಯಲ್ಲಿ ಸೇರಿದ ಪೂಜ್ಯ ಗಾಂಧೀಜಿಯ ಅಸ್ತಮಿತ ದಿನವದು. ರಾಷ್ಟ್ರಕ್ಕಾಗಿ ನವೆದು, ಕೊನೆಗೆ ಅದಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟು ರಾಷ್ಟ್ರಪಿತನೆಂದೆನಿಸಿಕೊಂಡ ಮಹಾತ್ಮ ಗಾಂಧೀಜಿಯು ಸಾಯಂ ಪ್ರಾರ್ಥನೆಯ ಸಮಯದಲ್ಲಿ ಗುಂಡಿಗಾಹುತಿಯಾಗಿ ಸ್ವರ್ಗವಾಸಿಯಾದ ದಿನ; ಅಂದು ಅರ್ಕನೊಡನೆ ಭಾರತಾರ್ಕನೂ ಅಸ್ತಂಗತನಾದನು. ೧೯೫೩ ಜನೆವರಿ ೩೦. ಅದೇ ಶುಕ್ರವಾರ. ಬಾಪೂಜಿಯು ಸ್ವರ್ಗವಾಸಿಯಾಗಿ ಐದು ವರ್ಷಗಳು ಮುಗಿದು ಆರನೆಯ ವರ್ಷವು ಆರಂಭವಾಗುವ ಸಮಯವಿದು. ಬಾಪೂಜಿಯು ಮಾಡಿದ ಅದ್ಭುತ ಕೆಲಸಗಳನ್ನು, ಅವರ ಉದಾತ್ತ ತತ್ವಗಳನ್ನು ನೆನೆದುಕೊಂಡು ಆತ್ಮನಿರೀಕ್ಷಣೆಮಾಡಿಕೊಂಡು ಅವರು ಹಾಕಿಕೊಟ್ಟ ದಾರಿಯಲ್ಲಿ ಕ್ರಮಿಸುವ ಉಪಕ್ರಮವನ್ನಿಟ್ಟುಕೊಂಡು ಮುಂದೆ ಸಾಗುವದು ಪ್ರತಿಯೊಬ್ಬ ಭಾರತೀಯನ ಆದ್ಯಕರ್ತವ್ಯವಾಗಿದೆ. ರಾಜಕೀಯ ಸ್ವತಂತ್ರ್ಯದೊಂದಿಗೆ ಆರ್ಥಿಕ ಹಾಗೂ ಆಹಾರ ಸ್ವಾತಂತ್ರ್ಯಗಳನ್ನು ಗಳಿಸಲು ಗಾಂಧೀಜಿಯವರ ಮಾರ್ಗವು ರಾಜಮಾರ್ಗವಾಗಿದೆ. ಶರೀರ ಮಾತ್ರದಿಂದ ಮರೆಯಾದ ಗಾಂಧೀಜಿಯವರು ಭಾರತೀಯರಿಗೆ ತತ್ವಮಾತ್ರದಿಂದ, ಚೈತನ್ಯಮಾತ್ರದಿಂದ ಆವ ಕಾಲವೂ ಮೂರ್ತಿಮಂತಾಗಿ ಎಲ್ಲರಹೃನ್ಮಂದಿರದಲ್ಲಿ ನಿಲ್ಲುವದರಲ್ಲಿ ಸಂದೇಹವಿಲ್ಲ. ಅವರು ಆಚರಿಸಿದ ತತ್ವಗಳು, ಹಾಕಿದ ದಾರಿಗಂಬಗಳು, ಹಚ್ಚಿದ ದೀಪಗಳು, ಬೋಧಿಸಿದ ಬೋಧನೆಗಳು, ಅನುಭವಿಸಿದ ಅನುಭವಗಳು ರಾಷ್ಟ್ರದ ಉನ್ನತಿಯನ್ನು ಸಾಧಿಸುವ ಸಾಧಕರೆಲ್ಲರಿಗೆ ದಾರಿಯ ಬುತ್ತಿಯಾಗಿ, ಊರೊಂಗೋಲಾಗಿ, ಪ್ರಕಾಶವಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ.

ಶಾರೀರಿಕ ಶಿಕ್ಷಣದಲ್ಲಿ ಅಲ್ಪಾವಧಿ ತರಬೇತಿ ವರ್ಗಗಳು.

ಶಾರೀರಿಕ ಶಿಕ್ಷಣವು ನಮ್ಮ ಶಿಕ್ಷಣದಲ್ಲಿ ಮಹತ್ವದ ಫಲಕವಾಗಿದೆ. ಸಬಲವಾದ ದೇಹ–ಮನಸ್ಸು ಇವುಗಳನ್ನು ಕಟ್ಟುವದರತ್ತ ಲಕ್ಷ್ಯಪೂರೈಸದಿದ್ದರೆ ಯಾವ ಶಿಕ್ಷಣ ಪದ್ಧತಿಯೂ ಸರಿಪೂರ್ಣವಾಗದು.

ಸಂಪಾದಕೀಯ

ಶಾರೀರಿಕ ಶಿಕ್ಷಣ ಮನಸ್ಸಿರಾಗುವದು ಅವಶ್ಯವಿದೆಯೆಂದು ನಮ್ಮ ಪ್ರಾಥಮಿಕ ಶಿಕ್ಷಕರಿಗೆ ತಿಳಿಸಿಕೊಡಬೇಕಾಗಿದೆ. ಈ ಉದ್ದೇಶವನ್ನು ಎದುರಿನಲ್ಲಿಟ್ಟುಕೊಂಡು ಶಿಕ್ಷಣ ಖಾತೆಯವರು ಪ್ರಾಥಮಿಕ ಶಿಕ್ಷಕರ ಸಲುವಾಗಿ ಅಲ್ಪಾವಧಿ ತರಬೇತಿ ವರ್ಗಗಳನ್ನು ಸಂಘಟಿಸುತ್ತಿರುತ್ತಾರೆ. ಈ ವರ್ಷದಲ್ಲಿ ದಕ್ಷಿಣ ವಿಭಾಗದ ನಾಲ್ಕೂ ಜಿಲ್ಲೆಗಳ ಮುಖ್ಯ ಪಟ್ಟಣಗಳಾದ ಧಾರವಾಡ, ಬೆಳಗಾಂವ, ವಿಜಾಪುರ ಮತ್ತು ಕಾರವಾರಗಳಲ್ಲಿ ಇಂತಹ ನಾಲ್ಕು ತರಬೇತಿ ವರ್ಗಗಳು ನಡೆಯುತ್ತಿವೆ; ಪ್ರತಿಯೊಂದು ವರ್ಗದಲ್ಲಿ ೫೦ ಜನ ಶಿಕ್ಷಕರು ತರಬೇತಿಯನ್ನು ಪಡೆಯುತ್ತಲಿದ್ದಾರೆ. ಈ ವರ್ಗಗಳು ಸಾಮೂಹಿಕ ಕವಾಯಿತು, ಅಂಗಸಾಧನೆಯ ವ್ಯಾಯಮ ಮತ್ತು ಶಾರೀರಿಕ ಚಟುವಟಿಕೆಗಳ ಬಗೆಗೆ ಜ್ಞಾನವಮಾಡಿಕೊಡುತ್ತಿರುವವಲ್ಲದೆ ಕಲಿಯಲಿಕ್ಕೆ ಬಂದ ಶಿಕ್ಷಕರಿಗೆ, ವಿವಿಧ ಆಟಗಳ ಮುಖಾಂತರ, ತಾಳಬದ್ಧ ಗೀತೆಗಳನ್ವಯ ಶಾರೀರಿಕ ಶಿಕ್ಷಣವು ಹೇಗೆ ಮನರಂಜಕವಾಗಿ ಪರಿಣಮಿಸುವದೆಂಬುದನ್ನು ತೋರಿಸುತ್ತಿವೆ. ಕೇವಲ ಶರೀರ ಸಂವರ್ಧನೆಯೇ ಶಾರೀರಿಕ ಶಿಕ್ಷಣದ ಗುರಿಯಾಗಿರದೆ, ಶರೀರದೊಂದಿಗೆ ಬೌದ್ಧಿಕ ಮತ್ತು ಮಾನಸಿಕ ವಿಕಾಸವನ್ನು ಸಹ ಮಾಡುವದೇ ಶಾರೀರಿಕ ಶಿಕ್ಷಣದ ಧ್ಯೇಯವಾಗಿದೆ. ಶಾರೀರಿಕ ಶಿಕ್ಷಣವು ಸಾಮಾನ್ಯ ಶಿಕ್ಷಣದಿಂದ ಬೇರೆಯಾಗಿರದೆ ಅದರ ಒಂದು ಮೂಲಭೂತ ಅಂಗವಾಗಿದೆ. ಶಾರೀರಿಕ ಶಿಕ್ಷಣದಿಂದ ವ್ಯಕ್ತಿಯ ಸರ್ವಾಂಗೀಣ ಉನ್ನತಿಯಾಗಬೇಕೆಂದು ಇಂದಿನ ಅದರ ಗುರಿಯಾಗಿದೆ. ಶಾರೀರಿಕ ಶಿಕ್ಷಣ ಪಡೆದ ವ್ಯಕ್ತಿಯು ಶಿಕ್ಷಿತ ವ್ಯಕ್ತಿಯಾಗಿ ಮಕ್ಕಳೆದುರಿಗೆ, ಸಮಾಜದೆದುರಿಗೆ ನಿಲ್ಲಬೇಕಾಗಿದೆ. ಶಾರೀರಿಕ ಶಿಕ್ಷಣದ ಈ ಅಂತಿಮ ಗುರಿಯನ್ನೂ ಅದರ ಹೊಸ ದೃಷ್ಟಿಯನ್ನೂ ನಾಡಿನ ಮೂಲೆ ಮೂಲೆಗಳಲ್ಲಿ ತರಬೇತಿ ಹೊಂದಿದ ಶಿಕ್ಷಕರು ಬೀರುವರೆಂದು ಆಶಿಸುವೆವು.

ಶೈಕ್ಷಣಿಕ ಪ್ರವಾಸಗಳು.

ಶಿಕ್ಷಣ ರಂಗದಲ್ಲಿ ಪ್ರವಾಸಗಳು ಮಹತ್ವದ ಪಾತ್ರಧಾರಿಗಳಾಗಿವೆ. ಅವುಗಳಿಂದ ಮೂರು ಪ್ರಕಾರದ ಲಾಭವಿದೆ. ಶಾಲೆಯ ನಿತ್ಯದ ಕೆಲಸದಿಂದ ಈ ಪ್ರವಾಸಗಳು ಸ್ವಾಗತಾರ್ಹವಾದ ಬಿಡುವುಗಳಾಗಿ ಬರುತ್ತವೆ. ಐತಿಹಾಸಿಕ ಸ್ಥಳಗಳಿಗೆ ಇಲ್ಲವೆ ಔದ್ಯೋಗಿಕ ಕೇಂದ್ರಗಳಿಗೆ ಪ್ರವಾಸ ಕೈಕೊಂಡರೆ ಈ ಪ್ರವಾಸಗಳಿಗೆ ಶೈಕ್ಷಣಿಕ ಮಹತ್ವವೂ ಪ್ರಾಪ್ತವಾಗುತ್ತದೆ. ಇದಲ್ಲದೆ ಈ ಪ್ರವಾಸಗಳು ಸಾಮಾಜಿಕ ಮತ್ತು ಸಾಂಘಿಕ ಜೀವನವನ್ನು ಸಾಗಿಸುವದಕ್ಕೆ ಸುಸಂದರ್ಭಗಳನ್ನು ಒದಗಿಸಿಕೊಡುವವು. ಪ್ರತಿಯೊಂದು ಪ್ರವಾಸಕ್ಕೂ ತನ್ನದೇ ಆದ ಸಂತೋಷ ಮತ್ತು ಶೈಕ್ಷಣಿಕ ಮಹತ್ವ ಇವೆರಡರ ಹಿತ-ಮಿತಕರವಾದ ಮಿಶ್ರಣ ಇಲ್ಲವೆ ಮಿಲನವಿಡುವದರಿಂದ ಪ್ರವಾಸ ಕೈಕೊಂಡವರಿಗೆ ಸಂತೋಷವೂ ಶಿಕ್ಷಣವೂ ಏಕಕಾಲಕ್ಕೆ ಲಭಿಸುವವು. ಬೇಸರದಿಂದ ಮಾಡಿದ ಇಲ್ಲವೆ ಮಾಡಲೇಬೇಕಾದ ಪ್ರವಾಸಗಳು ಪ್ರವಾಸಗಳಲ್ಲ. ಪ್ರವಾಸಗಳು ವಿದ್ಯಾರ್ಥಿಗಳ ಜೇಬುಗಳಿಗೆ ಭಾರವಾಗಬಾರದು; ಅಲ್ಪ ವೆಚ್ಚಿನಲ್ಲಿಯೇ ಪ್ರವಾಸಗಳು ಸಂಘಟಿಸಲ್ಪಡಬೇಕು.

ನಮ್ಮ ಟ್ರೇನಿಂಗ ಕಾಲೇಜುಗಳಲ್ಲಿ ಪ್ರವಾಸಗಳನ್ನು ಸಂಘಟಿಸುವಾಗ ಮೇಲಿನ ವಿಚಾರಾಂಶಗಳಿಗೆ ಗಮನಕೊಡದಿರುವದು ಕಂಡುಬಂದಿದೆ. ಕರ್ನಾಟಕದಲ್ಲಿ ಅದರಲ್ಲಿಯೂ ನಮ್ಮ ನೆರೆಯಲ್ಲಿಯೇ ಐತಿಹಾಸಿಕ ಮತ್ತು ಔದ್ಯೋಗಿಕ ದೃಷ್ಟಿಯಿಂದ ಮಹತ್ವವುಳ್ಳ ಅಸಂಖ್ಯಾತ ಸ್ಥಳಗಳಿವೆ ಎಂಬ ಸಂಗತಿಯನ್ನು ಮರೆತು ವಿದ್ಯಾರ್ಥಿಗಳು ದೂರಿನ ಸ್ಥಳಗಳಾದ ದಿಲ್ಲಿ, ಆಗ್ರಾ, ಮುಂಬಯಿ, ಗೋವಾ ಮೊದಲಾದವುಗಳಿಗೆ ಹೋಗಲು ಹಾತೊರೆಯುವದನ್ನು ಕೇಳುತ್ತೇವೆ. ಪ್ರವಾಸವು ಒಂದು ಸಾಂಸ್ಕಾರಿಕ ಚಟುವಟಿಕೆಯಿದ್ದು ಪೂರ್ವಭಾವಿಯಾಗಿ ಹೊಂದಿಸುವದರಲ್ಲಿ, ಸಂಘಟಿಸುವದರಲ್ಲಿ ಮತ್ತು ಪ್ರತ್ಯಕ್ಷ ನೆರವೇರಿಸುವದರಲ್ಲಿ ವಿದ್ಯಾರ್ಥಿಗಳಿಗೆ ತರಬೇತಿಯನ್ನೂ ಶೈಕ್ಷಣಿಕ ಲಾಭವನ್ನೂ ಒದಗಿಸುತ್ತದೆ. ಈ ಮಹತ್ವದ ಅಂಶಗಳನ್ನು ಮರೆತು ಕೇವಲ ಮನರಂಜನೆಯ ಸಲುವಾಗಿ ಅತಿ ದೂರದ ಸ್ಥಳಗಳಿಗೆ ವೆಚ್ಚದಾಯಕ ಪ್ರವಾಸಗಳನ್ನು ಕೈಕೊಳ್ಳದಿರುವದು ಲೇಸು. ಪ್ರವಾಸಗಳನ್ನು ಕೈಕೊಳ್ಳುವಾಗ ಪೂರ್ವ ಸಂಘಟನೆಯು ಮಹತ್ವದಿದ್ದು ಬೇರೆ ಬೇರೆ ಖಾತೆಗಳನ್ನಾಗಿ ಮಾಡಿ ಒಂದೊಂದು ಖಾತೆಯನ್ನು ಹಿರ್ಯ ವಿದ್ಯಾರ್ಥಿ ಮುಖಂಡನಿಗೆ ಒಪ್ಪಿಸಬೇಕು. ಸಾಮಾನುಗಳನ್ನು ಸಾಗಿಸುವ ಶಾಖೆ, ಆಹಾರ ಶಾಖೆ, ಹಣಕಾಸಿನ ಶಾಖೆ ಹೀಗೆ ವಿಂಗಡಿಸಿ ಒಂದೊಂದು ಶಾಖೆಗೆ ಒಬ್ಬೊಬ್ಬ ವಿದ್ಯಾರ್ಥಿ-ನಾಯಕನನ್ನು ನೇಮಿಸಬೇಕು. ಅವನಿಗೆ ಕೆಲವು ಸಹಾಯಕರನ್ನು ಕೊಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಹೊಣೆಗಾರಿಕೆಯೂ, ಸಂಘಟನೆಯ ಜಾಣ್ಮೆಯೂ ಲಭಿಸುವದಲ್ಲದೆ ಪ್ರವಾಸದ ಕೆಲಸವೂ ಸುಲಭವಾಗುವದು.

ಮಕ್ಕಳ ಶಿಕ್ಷಣ ಮನೆಯಲ್ಲಿ ಅಲ್ಲವೇ ?

ಪ್ರೊ. ತಟ್ಟಿ ಶ್ಯಾಮರಾಯರು,
ನಿವೃತ್ತ ಪ್ರಿನ್ಸಿಪಾಲರು, ಧಾರವಾಡ

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ತೀರ ಎಳೆಯ ವಯಸ್ಸಿನಲ್ಲಿಯೇ ಮಕ್ಕಳಲ್ಲಿ ಸೃಷ್ಟಿಯ ಸಾನ್ನಿಧ್ಯದ ಪ್ರೀತಿಗೆ, ಸೃಷ್ಟಿಯ ಕೌತುಕಗಳ, ಸೃಷ್ಟಿಯ ವಿವಿಧತೆಯ ಪರಿಚಯಕ್ಕೆ ಎಡೆಮಾಡಿಕೊಡಲು ಉಪಕ್ರಮಿಸಬೇಕು. ಗ್ರಾಮಾಂತರದ ಸನ್ನಿವೇಶದಲ್ಲಿಯೇ ಮಗುವು ಬೆಳೆದು ದೊಡ್ಡದಾಗಬೇಕು; ಮಕ್ಕಳ-ಬೆಳವಣಿಗೆಯಲ್ಲಿ, ಅವರ ಶಿಕ್ಷಣದಲ್ಲಿ ಅತ್ಯಂತ ಪ್ರಭಾವಿಯಾದ ಅಂಗಗಳಲ್ಲಿ ಇದೊಂದಾಗಿದೆ. ಈಗ ಕಡಿಮೆಯಾಗುತ್ತ ಬಂದ ಈ ಪರಿಪಾಠಕ್ಕೆ ನಾವು ಅಂಟಿಕೊಳ್ಳಬೇಕು.

ಮಕ್ಕಳ ಪುಸ್ತಕಗಳ ಸಂಗ್ರಹ ಮಾಡುವದಕ್ಕೂ ಈ ಮಾತು ಅನ್ವಯಿಸುವದು; ಎಂದರೆ ಹುಡುಗರ ಬೆಳೆಯುತ್ತಿರುವ ವಯೋಮಾನಕ್ಕನುಸರಿಸಿ ತಕ್ಕ ಪುಸ್ತಕಗಳು ಅವರಿಗೆ ಸಿಕ್ಕಬೇಕು. ಮಕ್ಕಳಿಗೆಂದು ಕೃತ್ರಿಮವಾಗಿ ಬಂದ ''ಮಕ್ಕಳ ಪುಸ್ತಕ'' ಗಳನ್ನೂ ವಿಶೇಷ ಖರ್ಚಿನ ಆಟಿಗೆಗಳನ್ನೂ ಒದಗಿಸಿ ಹುಡುಗರ ಸ್ವಭಾವವನ್ನು ಅಸಹಜವಾಗಿ ಮಾಡಬಾರದು. ಸಹಜವಾದ, ಸಾಮಾನ್ಯವಾಗಿ ಆಕರ್ಷಕವಿರುವ ಪುಸ್ತಕಗಳನ್ನೇ ಅವರಿಗೆ ಕೊಡಬೇಕು—ಮಾನವನ ಸಹಜಸುಂದರ ಭಾವ-ವನ್ನು ವ್ಯಕ್ತಮಾಡುವಂತಹವುಗಳನ್ನು ತಮ್ಮ ಆಟಿಗೆಗಳನ್ನು ತಾವೇ ಮಾಡಿಕೊಳ್ಳಲಿಕ್ಕೆ ಬರುವಂತಹ ಶಕ್ಯವಷ್ಟು ವಿಪುಲವಾದ ಸಾಧನಗಳನ್ನು ಅವರಿಗೆ ಒದಗಿಸ ಶಕ್ಯದ್ದು. ದೊಡ್ಡವರ ವಿಲಾಸ ಜೀವನವನ್ನು ಅನು-ಕರಿಸುವ ಆಟಿಗೆಗಳಂತೂ ನಮ್ಮ ಶಿಕ್ಷಣಪದ್ಧತಿಯ ಅಸಾಧುಸಂಪ್ರದಾಯಕ್ಕೆ ಸೇರಿದವಾಗಿವೆ. ಇಂತಹ ವಸ್ತುಗಳಿಂದ ಹುಡುಗರ ಸಂಗ್ರಹ ಬುದ್ಧಿಯ ತೃಷ್ಣಾಮಯಪ್ರವೃತ್ತಿಯು ಹೆಚ್ಚುವದು; ಅವರ ಶೋಧನೆಯ, ಕಲ್ಪನೆಯ ಶಕ್ತಿಯು ಮರ್ಯಾದಿತವಾಗುವದು. ಹೀಗೆ ಅವರ ನಿರ್ಮಾಣಶೀಲತೆಗೆ ಇವು ಅವಕಾಶವನ್ನು ಕೊಡದಿರುವದರಿಂದ ಸುದೈವದಿಂದ ಮಕ್ಕಳು ಅವುಗಳನ್ನು ಒಡೆದು ಹಾಕಿ ತಮಗೆ ಸಿಕ್ಕ ಬಿದಿರು, ಕಟ್ಟಿಗೆ ಹಂಚುಗಳ ಚೂರುಗಳಿಂದ ಹೊಸ ಆಟಿಗೆಗಳನ್ನು ತಾವೇ ಮಾಡಿಕೊಳ್ಳುವರು.

ಮಕ್ಕಳೊಡನೆ ಸರಿಯಾದ ರೀತಿಯಲ್ಲಿ ಆಡುವದೂ ಒಂದು ದೊಡ್ಡ ಕಲೆ. ನಾವು ಏನು ಮಾಡಲಿದ್ದೇವೆ ಎಂಬುದೇ ಅವರಿಗೆ ಮೊದಲು ಅರ್ಥವಾಗದಂತಹ ಆಟವನ್ನೂ ಎತ್ತಿಕೊಳ್ಳಬಾರದು. ಅವರಿಗೂ ಅವರೊಡನಾಡುವ ಹಿರಿಯರಿಗೂ ಅದು ಯಾವಾಗಲೂ ವಿಶೇಷ ಮನರಂಜನೆಯದಾಗಿರಬೇಕು. ಇಂತಹ ಪ್ರಸಂಗಗಳಲ್ಲಿ ದೊಡ್ಡವರು ಮಾತ್ರ ಯಾವದೂ ಬೋಧಪರವಾದ ವಿಚಾರವನ್ನು ಪ್ರಕಟವಾಗಿ ಇಟ್ಟುಕೊಳ್ಳದೆ ಹುಡುಗರ ವಿಚಾರದ ಮತ್ತು ಕಲ್ಪನೆಯ ಪ್ರಪಂಚದಲ್ಲಿ ಸಂಪೂರ್ಣವಾಗಿ ಲೀನವಾಗಿ ಹೋಗಬೇಕು. ಹಿಂದಿನ ತೃಪ್ತಿಕರವಾದ ಆಟಗಳನ್ನಲ್ಲದೆ ಬೇರೆ ಯಾವ ಮಾತನ್ನೂ ಈ ಪ್ರಸಂಗಗಳಲ್ಲಿ ಕಲಿಸಲು ಪ್ರಯತ್ನಿಸಬಾರದು. ಆಟದಿಂದ ಹುಡುಗರು ಒಂದಿಲ್ಲೊಂದು ದಿಶೆಯಲ್ಲಿ ಚುರುಕಾಗುವರು; ಹುಡುಗರ ಸ್ವಭಾವದ ಈ ಅನುಭವಗಳನ್ನು ಮುಂದೊಂದು ಕಾಲದಲ್ಲಿ ಉಪಯೋಗಕ್ಕಾಗಿ ಕಾದಿರಿಸಬೇಕು. ಈ ರೀತಿಯಾಗಿ ಆಟಗಳು ಹುಡುಗರಲ್ಲಿ ಹಿರಿಯರಲ್ಲಿ ಪರಸ್ಪರ ವಿಶ್ವಾಸವನ್ನು ಹುಟ್ಟಿಸುವವು ಇದರಿಂದ ಅವರು ಹಿರಿಯರನ್ನು ಹೆಚ್ಚು ಚೆನ್ನಾಗಿ ತಿಳಿದುಕೊಳ್ಳುವರು. ಆದರೆ ಮನೆಯೆಲ್ಲವನ್ನೂ ಮಕ್ಕಳಿಗೆ ಆಟದ ಜಾಗದಂತೆ ಬಳಸಿಗೊಡುವದೂ ಮತ್ತು ಹಿರಿಯರು ತಮ್ಮ ಆಟಗಳಲ್ಲಿಯೇ ಮನಸ್ಸು ಹಾಕಬೇಕೆಂದು ಸದಾ ಬೇಡುವದೂ ಹುಡುಗ

ರಿಗೆ ಇಲ್ಲದ ಅಚ್ಚು ಕಲಿಸುವ ಈ ಕಾಲದ ಒಂದು ಘಾತುಕ ಪ್ರಕಾರವಾಗಿದೆ.

ಇದರಿಂದ ಸ್ವಾರ್ಥವೂ ಮಾನಸಿಕ ಪರಾವಲಂಬನವೂ ಹುಡುಗರಲ್ಲಿ ಮನೆಮಾಡುವದಲ್ಲದೆ ಈ ಅವಿರತವಾದ ಆಚ್ಛದ ಪ್ರಯತ್ನದಿಂದ ಮಗುವಿನ ವ್ಯಕ್ತಿತ್ವವು ಮುಸಣಿಸುವದು. ತಮ್ಮಷ್ಟೇ ಪ್ರಪಂಚವಾಗ ಆಟಕ್ಕೆ ಗೊತ್ತು ಮಾಡಿಕೊಟ್ಟ ಸ್ಥಳದಲ್ಲಿ ಮಕ್ಕಳು ಸ್ವತಂತ್ರರಾಗಿದ್ದು ಅದರ ಹೊರಗೆ ಅವರು ತಮಗೆ ಹಾಕಿದ ಇತಿಮಿತಿಗಳಿಗೆ ಹಾಗು ತಂದೆ ತಾಯ್ಗಳ ರೂಢಿಗಳು, ಮನಃ ಸಂಕಲ್ಪ, ಕೆಲಸ, ವಿಶ್ರಾಂತಿ, ಅವರ ಆಗತ್ಯದ ಬೇಡಿಕೆಗಳು ಇವೆಲ್ಲವುಗಳ ಕಟುವಾದ ಇತಿಮಿತಿಗಳಿಗೆ ಅಧೀನರಾಗಿದ್ದ ಪಕ್ಷದಲ್ಲಿ ಅವರು ಈ ಕಾಲದ ಯುವಕರಿಗಿಂತಲೂ ಹೆಚ್ಚು ಸಮರ್ಥರೂ ಪರಹಿತಾನುಕೂಲವರ್ತಿಗಳೂ ಆಗುವದರಲ್ಲಿ ಸಂಶಯವಿಲ್ಲ. ಇತರರ ಯೋಗಕ್ಷೇಮವನ್ನು ಅನುಕೂಲ ಪ್ರತಿಕೂಲಗಳನ್ನು ನೋಡಬೇಕೆಂದು ಬರಿಯ ಬಾಯಮಾತಿನಿಂದ ಹೇಳುವದಲ್ಲ, ಆದರೆ ಮಂದಿಯ ಸುಖದುಃಖವನ್ನು ನೋಡಬೇಕಾಗುವ ಸಂದರ್ಭಗಳು, ತಮಗೆ ಬೇಕಾದ್ದನ್ನು ತಾವು ಮಾಡಿಕೊಂಡು ಮಂದಿಗೂ ನೆರವಾಗುವ ಸಂದರ್ಭಗಳು—ಇವಕ್ಕೆ ಶೈಕ್ಷಣಿಕ ದೃಷ್ಟಿಯಿಂದ ಮಹತ್ವವಿದೆ. ಹಿಂದಿನ ಕಾಲದಲ್ಲಿ ಹಿರಿಯರೆದುರಿನಲ್ಲಿ ಹುಡುಗರು ಇಲಿಗಳಂತೆ ಮೆತ್ತಗಿರುತ್ತಿದ್ದರು. ಮನೆಗೆ ಬಂದ ಅತಿಥಿಯು ಮಾತಾಡುತ್ತಿರುವಾಗ ಈಗಿನಂತೆ ಫಕ್ಕನೆ ಅಡ್ಡ ಬಾರದೆ ಅತಿಥಿಯ ಮಾತನ್ನು ಸುಮ್ಮನೆ ಕೇಳುವದರಲ್ಲಿ ತತ್ಪರರಾಗುತ್ತಿದ್ದರು. ದೊಡ್ಡವರ ಸಂಭಾಷಣೆಯು ಬಹುಮುಖವಾದದ್ದಿರುವದು; ಮಕ್ಕಳ ಶಿಕ್ಷಣ ಪ್ರಕಾರಗಳಲ್ಲಿ ಅದೂ ಒಂದಾಗಿರುವದೆಂದು ಹೇಳಬಹುದು.

ಒಂದು ಶಿಸ್ತಿನಿಂದ ನಡೆದುಕೊಳ್ಳುವದು, ಊಟ, ನಿದ್ರೆ, ಸ್ವಚ್ಛ ಹವೆಯ ಸ್ವಚ್ಛನೀರಿನ ಬಳಕೆ, ಬಟ್ಟೆಬರೆಗಳನ್ನು ಹಾಕಿಕೊಳ್ಳುವದು, ಆಂಗಿಕ ಚಲನವಲನಗಳು —ಇಂತಹ ಆಕೃತಿಮವಾದ ಕೆಲವು ಚಟಗಳನ್ನು ಹುಡುಗರಲ್ಲಿ ಬೆಳೆಯುವ ನೀತಿಯ ಕಲ್ಪನೆಗೆ ನೆಲಗಟ್ಟಾಗಿ ಇಟ್ಟುಕೊಳ್ಳಬೇಕು. ದೇಹದ ಆರೋಗ್ಯ ಸೌಷ್ಠವಗಳನ್ನು ಶ್ರೇಷ್ಠವಾದ ನೀತಿಯ ಲಕ್ಷಣವಾಗಿ ಎಣಿಸಬೇಕೆಂದೂ ಶಾರೀರಿಕ ಬಲಕ್ಕೆ, ಅಂಗ ಸೌಷ್ಠವ ಸಲಕ್ಷಣತೆಗಳಿಗೆ ಹ್ರಾಸವನ್ನು ಉಂಟುಮಾಡುವ ಕೃತಿಯನ್ನು ಹೇಯವಾಗಿ ಎಣಿಸಬೇಕೆಂದೂ ಮಕ್ಕಳು ಎಷ್ಟು ಬೇಗನೆ ತಿಳಿದುಕೊಂಡಾರು ಅಷ್ಟು ಉತ್ತಮ. ಈ ವಿಷಯದಲ್ಲಿ ಮಕ್ಕಳನ್ನು ಕೇವಲ ಹಳೆಯ ಸಂಪ್ರದಾಯಕ್ಕೆ ಕಟ್ಟು ಬೀಳದಂತೆ ಮಾತ್ರ ಇರಗೊಡಬೇಕು. ನಿಯಮಗಳಿಗೆ ಅಪವಾದವೂ ಇರುವವೆಂಬ ತತ್ತ್ವವನ್ನು ಹಿರಿಯರು ಒಪ್ಪಿಕೊಳ್ಳಬೇಕು.

ಗಂಟೆಯು ಹೊಡೆತಕ್ಕೆ ಸರಿಯಾಗಿ ಊಟಕ್ಕೇಳಬೇಕು, ಆಯಾ ಊಟಗಳಲ್ಲಿ ಇಂಥಿಂಥದನ್ನೇ ತಿನ್ನಬೇಕು, ಉಷ್ಣತಾಮಾನಕ್ಕೆ ಹೊಂದುವಂತೆ ಬಟ್ಟೆಬರೆಯನ್ನು ಹಾಕಿಕೊಳ್ಳಬೇಕು, ಗಡಿಯಾರವು 'ಢಣ್' ಎಂದು ಇಂತಿಷ್ಟು ಹೊಡೆದ ಕೂಡಲೆ ಮಲಗಿಕೊಳ್ಳಬೇಕು, ಕಾಸದೆ ಇದ್ದ ಒಂದು ನೀರಿನಹನಿಯೂ ಅವರ ಹೊಟ್ಟೆಯಲ್ಲಿ ಹೋಗಬಾರದು, ಪ್ರಮಾಣಕ್ಕಿಂತ ಒಂದು ಸಕ್ಕರೆಯ ಹರಳು ಹೆಚ್ಚು ಅವರ ಬಾಯಲ್ಲಿ ಬೀಳಕೂಡದು —ಇತ್ಯಾದಿ ಮಾತುಗಳ ಬಗೆಗೆ ಹಿರಿಯರ ಸೂಕ್ಷ್ಮ ಸಚಿಂತವೃತ್ತಿಯಿಂದ ಹುಡುಗರ ಪ್ರಕೃತಿಯು ಸೂಕ್ಷ್ಮವಾಗುವದು, ಅವರಲ್ಲಿ ಸಿಡುಕತನವು ಬರುವದು, ಅವರು ರೂಢಿಗಳಿಗೆ ದಾಸರಾಗುವರು. ಜೀವನದ ವಿಷಮತೆ, ಅಸುಖಸಂದರ್ಭಗಳು—ಇವುಗಳಿಗೆ ಎದೆಯನ್ನು ಸಾಕಷ್ಟು ಗಟ್ಟಿಮಾಡುವ ಕ್ರಮವು ಬಾಳಿನ ಆನಂದಕ್ಕೆ, ಸ್ವಭಾವದ ಕೆಚ್ಚಿಗೆ ಒಳ್ಳೆಯ ಶ್ರೇಷ್ಠ ಭೂಮಿಯಾಗಿರುವದು. ಈ ವಿಷಯದಲ್ಲಿಯೂ ಹಿರಿಯರ ಆಚರಿಸುವ ರೀತಿಯು ಮಕ್ಕಳ ಶಿಕ್ಷಣದ ಒಂದು ಅಂಗವಾಗಿರುವದು.

ಸಣ್ಣಪುಟ್ಟ ಅನಿರೀಕ್ಷಿತ ಸಂಗತಿಗಳನ್ನು ನಗೆಮೊಗದಿಂದ ಎದುರಿಸಲಿಕ್ಕೆ ಕಲಿಯಬೇಕು. ಅವಕ್ಕೆ ಮಿತಿ ಮೀರಿದ ಮಹತ್ವವನ್ನು ಕೊಟ್ಟರೆ ಬಾಳಿನ ಬಾನದನಿಯ ಮೇಲೆ ಮೋಡವು ಮುಸುಕಿದಂತಾಗದೇ? ನಿರ್ವಾಹವಿಲ್ಲದೇ ಮಾಡಬೇಕಾದುದೆಂದು ತಿಳಿದಿದ್ದ ಕರ್ತವ್ಯವನ್ನು ತಂದೆಯು ತತ್ಕ್ಷಣ ಮಾಡಲು ಸಿದ್ಧನಾದರೆ, ಆಕಸ್ಮಿಕವಾಗಿ ಬಂದ ಒಂದು ಕಷ್ಟವನ್ನು ತಂದೆಯು ಸಹಜವಾಗಿ ಸಹಿಸುತ್ತಿರುವದನ್ನು ಮಗನು ನೋಡಿದರೆ ತಾನೂ ಹಾಗೆ ಮಾಡುವದರಲ್ಲಿ ತನ್ನ ಗೌರವವನ್ನು ಕಂಡುಕೊಳ್ಳುವನು. ತಮ್ಮ ಸುತ್ತಲೂ ಜನರು

ಒಳ್ಳೆಯ ಕೆಲಸಗಳನ್ನು ಮಾಡುತ್ತಿರುವದನ್ನು ನೋಡಿದ ಹುಡುಗರು ಬಹಳ ಹೇಳಿಸಿಕೊಳ್ಳದೆ ತಾವೂ ಮಾಡಲು ಕಲಿಯುವದರಿಂದ, ದೊಡ್ಡವರು ಆನಂದಿಸುತ್ತಿರುವದನ್ನು ನೋಡಿ ಹುಡುಗರೂ ನಿಸರ್ಗಸೃಷ್ಟಿಯ ಮತ್ತು ಕಲಾಸೃಷ್ಟಿಯ ಸೌಂದರ್ಯವನ್ನು ಅನುಭವಿಸಲಿಕ್ಕೆ ಕಲಿಯುವದರಿಂದ ನಾವು ಹೆಚ್ಚು ಸ್ಫೂರ್ತಿಯುತವಾಗಿ ಹೆಚ್ಚು ಉದಾತ್ತವಾಗಿ ಹೆಚ್ಚು ಹಿತಮಿತವಾಗಿ ಬಾಳುವದೇ ಮಕ್ಕಳಿಗೆ ನಾವು ಮಾಡುವ ಅತ್ಯುತ್ತಮ ಉಪದೇಶವಾಗಿದೆ.

ತಮಗಾಗಿಯೇ—ತಮ್ಮ ಸುಖಕ್ಕಾಗಿಯೇ ಮಕ್ಕಳಿರುವರೆಂದು ತಂದೆ ತಾಯಿಗಳು ನಡೆದರೂ ಸರಿ ಅಥವಾ ತಮ್ಮ ಜೀವನ ಸರ್ವಸ್ವವನ್ನೂ ಮಕ್ಕಳಿಗಾಗಿ ಮುಡಿಪಿಟ್ಟರೂ ಸರಿ ಪರಿಣಾಮವು ಅತೃಪ್ತಿಕರವೇ. ಈ ಎರಡು ವರ್ಗದವರಿಗೂ ತಮ್ಮ ಮಕ್ಕಳಿಗೆ ಏನೆನಿಸುವದೆಂದಾಗಲಿ ತಮ್ಮ ಮಕ್ಕಳಿಗೆ ಏನು ಬೇಕಾದುದೆಂದಾಗಲಿ ತಿಳಿದಿಲ್ಲವೆಂದು ಸಾಮಾನ್ಯವಾಗಿ ಹೇಳಬಹುದು. ಮೊದಲನೆಯ ವರ್ಗದವರಿಗೆ ಮಕ್ಕಳು ತಮ್ಮಂತೆ ಆದರೆ ತೀರಿತು—ಪರಮಸಂತೋಷ. ಇವರ ಅತ್ಯುನ್ನತ ಆಕಾಂಕ್ಷೆಯೆಂದರೆ ತಮ್ಮ ಮಕ್ಕಳಲ್ಲಿ ತಮ್ಮ ವಿಚಾರಗಳ, ತಮ್ಮ ಅಭಿಪ್ರಾಯಗಳ, ತಮ್ಮ ಆದರ್ಶಗಳ ಉತ್ತಮ ಪಡಿಯಚ್ಚನ್ನು ಸೃಷ್ಟಿಸಿದರಾಯಿತು. ತಮ್ಮನ್ನು ಚಾಚೂ ತಪ್ಪದೆ ಇಷ್ಟು ಸೂಕ್ಷ್ಮವಾಗಿ ನಕಲು ತೆಗೆದದ್ದನ್ನು ನೋಡಿ ನಿಜವಾಗಿ ಅವರಿಗೆ ವ್ಯಸನವಾಗಬೇಕು. ಸೃಷ್ಟಿದೇವಿಯು ಅವರಿಂದ ಅಪೇಕ್ಷಿಸಿದ್ದು ಇದಲ್ಲ—ಇದಕ್ಕೆ ವ್ಯತಿರಿಕ್ತವಾದದ್ದು—ಹೆಚ್ಚು ಸಮೃದ್ಧವಾದ ಹೊಸ ಸಂಯೋಜನೆ, ಸುಧಾರಿಸಿದ ಆವೃತ್ತಿ, ಒಂದು ಹೊಸ ಮಾದರಿಯಲ್ಲದೆ ಅವತಾರ ಮುಗಿದು ಹೋದುದರ ಒಂದು ಪ್ರತಿಕೃತಿಯಲ್ಲ. ಎರಡನೆಯ ವರ್ಗದವರು ತಮ್ಮ ನಮೂನೆಯ ಮೇಲೆ ಮಕ್ಕಳನ್ನು ತಯಾರು ಮಾಡಲು ಬಯಸದೆ ತಮ್ಮ ಸಾತ್ವಿಕತೆಯ ಪರಮಾದರ್ಶಕ್ಕೆ ಅನುಗುಣವಾಗಿ ರೂಪಿಸಲು ಬಯಸುವರು. ತಮ್ಮ ಮಕ್ಕಳಿಗಾಗಿ ತಮ್ಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಲೀನಗೊಳಿಸಿಬಿಡುವದಕ್ಕೆ ಸಮ್ಮತಿಸಿ ಅವರು ತಮ್ಮ ವ್ಯಕ್ತ ಮಾಡನೋಡುವರು. ಮಕ್ಕಳಿಗೆ ಸಂಬಂಧಿಸಿದ ಮಾತೆಲ್ಲ ತಮ್ಮ ಕಣ್ಣಮುಂದೆ ಇರುವ ಒಂದೇ ವಿಷಯವೆಂದು ಅವರಿಗೆ ಎನಿಸುವಂತೆ ಸದಾ ನಡೆದುಕೊಳ್ಳುವರು. ಹೀಗಿರಬೇಕಾದ್ದೇನೋ ವಾಸ್ತವ ಆದರೆ ಅದು ಅಪ್ರತ್ಯಕ್ಷವಾಗಿರಬೇಕು.

ಈ ಎರಡೂ ವಿಧದ ತಂದೆತಾಯ್ಗಳಿಗೆ, ಮಕ್ಕಳು ತಂದೆತಾಯಿಗಳ ಸಲುವಾಗಿ ಇರುವದು ಸ್ವಲ್ಪವೇ, ಹಾಗೆಯೇ ತಂದೆತಾಯಿಗಳು ಮಕ್ಕಳ ಸಲುವಾಗಿ ಇರುವದೂ ಸ್ವಲ್ಪವೇ ಎಂಬ ಮಾತು ತಿಳಿಯುವದಿಲ್ಲ. ಪ್ರತಿಯೊಬ್ಬನೂ ತನ್ನದೇ ವಿಶಿಷ್ಟವಾದ ಬಾಳನ್ನು ಪೂರ್ತಿಯಾಗಿ, ಸಮಗ್ರವಾಗಿ ಬಾಳಿ ಇತರರಿಗೂ ಹಾಗೆ ಬಾಳಗೊಟ್ಟರೆ ಕೌಟುಂಬಿಕ ಜೀವನವು ಶ್ರೇಷ್ಠ ತರಗತಿಯದೂ ಸುಸಂಗತವೂ ಆಗುವದು.

ಎಷ್ಟೋ ತಾಯಂದಿರು ತಮ್ಮ ಮಕ್ಕಳ ಪ್ರಕ್ಷುಬ್ಧ ಸ್ಥಿತಿಯಲ್ಲಿ ಉಳಿಯುವದಕ್ಕಾಗಿಯೇ ಅಖಂಡದಿನ ಪ್ರಯತ್ನಿಸುವಂತೆ ಕಾಣುವದು. ಕೆಲಸದಲ್ಲಿ ಬಿಕ್ಕಟ್ಟು ತೋರುವ ಹಾಗೆಯೂ ಆಟದಲ್ಲಿ ಸೊಗಸಿಲ್ಲದ ಹಾಗೆಯೂ ಆ ಆಟಕೆಲಸಗಳಲ್ಲಿ ತಾವೂ ಪಾಲುಗಾರರಾದಾಗ ಮಾಡಿಬಿಡುವರು.

ಇದೂ ಅಲ್ಲದೆ ಈಗಿನ ಕಾಲದಲ್ಲಿ ಶಾಲೆಯು ಮಗುವನ್ನು ವಶಪಡಿಸಿಕೊಳ್ಳುವದರಿಂದ ಮಗುವಿನ ಆತ್ಮಜೀವನವನ್ನು ರೂಪಿಸಿ ಮನೆತನದ ಬಾಳನ್ನು ಉನ್ನತ ಮಟ್ಟದ್ದಾಗುವಂತೆ ಮಾಡಲು ಅವರಿಗೆ ಹಿಂದಿನ ಕಾಲದಲ್ಲಿರುವ ಎಲ್ಲ ಸಾಧನಗಳನ್ನು ಮನೆಯವರು ಈಗ ಕಳೆದುಕೊಳ್ಳಹತ್ತಿರುವರು. ಶಾಲೆಯು ಮಕ್ಕಳಿಗೆ ಆಡಲಿಕ್ಕೆ ಕಲಿಸುತ್ತದೆ—ತಂದೆ ತಾಯಿಗಳಲ್ಲ; ಶಾಲೆಯೇ ಅವರಿಗೆ ಹಸ್ತಶಿಕ್ಷಣವನ್ನು ಕೊಡುವದು; ಶಾಲೆಯೇ ಹಾಡಲಿಕ್ಕೆ, ಚಿತ್ರಗಳನ್ನು ನೋಡಲಿಕ್ಕೆ, ಗಟ್ಟಿಯಾಗಿ ಓದಲಿಕ್ಕೆ, ಮನೆಯ ಹೊರಗೆ ಸುತ್ತಾಡಿ ಬರುವದಕ್ಕೆ ಕಲಿಸುತ್ತದೆ. ಶಾಲೆಗಳು, ಸಂಘಗಳು, ಕ್ರೀಡಾಮಂದಿರಗಳು, ಇನ್ನಿತರ ಮನರಂಜನೆಯ ಸಾಧನೆಗಳು ಶಹರವಾಸದ ಹುಡುಗರನ್ನು ಹೆಚ್ಚು ಹೆಚ್ಚಾಗಿ ಮನೆಯ ಹೊರಗೆ ಇರುವದಕ್ಕೆ ಪ್ರೈಯುಣಿಸುವವು; ಅಲ್ಲದೆ, ಈ ವಿಧದ ದೈನಂದಿನ ಸುಖದ ಕಾಲಯಾಪನೆಯಿಂದ ರಜೆಯ ದಿನಗಳ ಸ್ವಚ್ಛಂದ ಸ್ವಾತಂತ್ರ್ಯಗಳ ಉತ್ಕಟವಾದ ಹಸಿವು ಹಿಂದೆ ಬೀಳುವದು. ಹೀಗಾಗಿ ಅನೇಕ ಸಾರೆ ಯುವಕ ಯುವತಿಯರಿಗೆ, ತಮಗೆ ಬೇಸರವ

ಘ್ನಂಟುಮಾಡುವ ಜನರ ಸಹವಾಸದ ಸ್ಥಳವೆಂದು ಗುರುತಿಸುವದಕ್ಕಿಂತ ಮನೆಯ ಬಗೆಗೆ ಅವರಿಗೆ ಬೇರೆ ಅರ್ಥವೇ ಹೊಳೆಯುವಂತಾಗುವದು. ಇದನ್ನೆಲ್ಲ ನೋಡಿದರೆ ಸಾರ್ವಜನಿಕರು ಮಾಡಬೇಕಾದ ಕೆಲಸಗಳನ್ನೆಲ್ಲ ಸರಕಾರವು ತನ್ನಲ್ಲಿ ಕೇಂದ್ರೀಕರಿಸಿಕೊಂಡಂತೆ ಆಗಿದೆ, ಎನಿಸುವದು.

ಯಾವ ವಯಸ್ಸಿನಲ್ಲಿ ಅವರು ಹುಡುಗರ ಮನಸ್ಸಿನ ಮೇಲೆ ತಮ್ಮ ಪ್ರಭಾವವನ್ನು ಬೀರಬೇಕೋ ಆ ವಯಸ್ಸಿನಲ್ಲಿ ಅವರನ್ನು ತಂದೆತಾಯ್ಗಳು ಸಾಲೆಗೆ ಒಪ್ಪಿಸಿ ಬಿಡುವರು. ಸಾಲೆಯು ಮಕ್ಕಳನ್ನು ತಿರಿಗಿ ಒಪ್ಪಿಸಿದಾಗ ಹುಡುಗರೊಡನೆ ಹೇಗೆ ನಡೆಯಬೇಕೆಂಬದನ್ನು ಅವರು ಮರೆತುಬಿಟ್ಟಿರುವರು— ತಮ್ಮ ಪ್ರಾಯದ ಪ್ರಸರಣಶೀಲತೆಯನ್ನು ಕಳೆದುಕೊಂಡಿರುವರು.

ಆದರೆ ಪ್ರಾಯದ ಹುರುಪನ್ನು ಕಳೆದುಕೊಳ್ಳಲೇಬೇಕೆಂದು ಸೃಷ್ಟಿಯು ವಿಧಿಸುವದಿಲ್ಲ.— ಅದೊಂದು ನಮಗೆ ಬಿದ್ದಿರುವ ಕಟ್ಟರೂಢಿ. ಮುಪ್ಪಿನ ಲಕ್ಷಣಗಳನ್ನು ತೋರಿಸುತ್ತಿರುವ ಮುಖವನ್ನು ನೋಡಬೇಕು—ಬಹು ಕೌತುಕ. ಮನುಷ್ಯನು ಆಯುಷ್ಯದ ಲಾಭವನ್ನು ಯಾವ ರೀತಿಯಿಂದ ಮಾಡಿಕೊಂಡಿರುವನೆಂಬುದು ಕಾಲವು ಆ ಮುಖದಿಂದ ಯಾವ ಚರ್ಯೆಯನ್ನು ಮಾಡಿರುವದು ಎಂಬದರಿಂದ ಸ್ಪಷ್ಟವಾಗಿ ತಿಳಿಯುವಷ್ಟು ಇನ್ನಾವುದರಿಂದಲೂ ತಿಳಿಯುವದಿಲ್ಲ. ಮಧ್ಯ ವಯಸ್ಸಿನ ಆರಂಭದ ಅವಧಿಯಲ್ಲಿ ಮನುಷ್ಯರು ತಮ್ಮ ಹುಟ್ಟಿನಿಂದ ಬಂದ ಹೆಚ್ಚುಕಡಿಮೆಯಾದ ಜೀವಶಕ್ತಿಯಿಂದ ಪರಿಪುಷ್ಟರಾಗಲಿ ನಾಜೂಕಾಗಲಿ ಇರದೆ ನೀರಿಲ್ಲದೆ ಒಣಗಿಹೋಗಿ ಹೊಸ ಎಲೆಗಳು ಅಂಕುರಿಸದ ವನಸ್ಪತಿಯಂತೆ ಆಗಿರುವರು. ಆದ್ದರಿಂದ ಸ್ವಾಭಾವಿಕವಾಗಿ ಯುವಕರು ಅವರನ್ನು ಉದಾಸೀನ ದೃಷ್ಟಿಯಿಂದ ನೋಡುವರು; ಅಜರಾಮರವಾದ ಪ್ರಾಯವೊಂದು ಇರುವದೆಂದು ಯುವಕರಿಗೆ ಯಾವದೋ ಒಂದು ಅಂತರಾತ್ಮವು ಹೇಳುವದು. ಆತ್ಮವು ತನ್ನ ಆಂತರಿಕ ವಿಕಾಸದ ಅಖಂಡವಾದ ಕಾರ್ಯವನ್ನು ಎಸಗಿದ್ದರೆ ಅದರ ಪ್ರತಿಫಲವೆಂದು ಈ ಅಮರವಾದ ಯೌವನವನ್ನು ಪಡೆಯಬಹುದು. ಆದರೆ ಸಾಮಾನ್ಯ ವಯೋವೃದ್ಧರ ಮನಸ್ಸು ಪ್ರಪಂಚದ ಕ್ಷುದ್ರ ತಾತ್ಕಾಲಿಕ ಮಹತ್ವ ಸಂಗತಿಗಳಿಂದಲೇ ತುಂಬಿಹೋಗಿರುವದರಿಂದ ಅವರಲ್ಲಿ ಆ ಅಜರಾಮರ ಯುವಕರಿಗೆ ಹೇಗೆ ಕಾಣಬೇಕು? ಆದ್ದರಿಂದ ತಮ್ಮ ಮುಂದಿನ ಯೋಜನೆಗಳಲ್ಲಿ ಅವರು "ವೃದ್ಧ"ರನ್ನು ಹೊರತುಪಡಿಸಿ ಎಷ್ಟೋಸಾರೆ ತಮ್ಮ ನಿಜವಾದ ತಂದೆತಾಯಿಗಳಾದ ವಿದ್ಯಾಗುರುಗಳನ್ನು ಕಾಣುವದಕ್ಕೆಂದು ಸಾಹಸದ ಲೋಕಯಾತ್ರೆಯನ್ನು ಕೈಕೊಳ್ಳುವರು. ಒಬ್ಬ ಕವಿಯು ಹೀಗೆ ಬರೆದಿದ್ದಾನೆ; "ಶಿಶುಗಳ ಅದ್ಭುತ ರಮ್ಯದರ್ಶನವನ್ನು ಮಾಡಿದಾಗ ಇವರು ಯುವರಾಜರೆಂಬ ಒಂದು ಭಾವವು ಹೃದಯದಲ್ಲಿ ಮೂಡಿತು; ಆದರೆ ಮುಂದೆ ರಾಜರನ್ನು ಹುಡುಕಿದಾಗ ಅವರೆಲ್ಲಿದ್ದಾರೆ!" ಜೀವನದ ಅನೇಕ ಸಹಜ ಸಂಕಟಗಳಿಂದಲೂ ಮಾತಾಪಿತೃಗಳ ಅದೂರದರ್ಶಿ ಶಿಕ್ಷಣದಿಂದಲೂ ಕೂಸಿನಲ್ಲಿದ್ದ ಸುಪ್ತವೈಭವವು ಮಾಯವಾದದ್ದರಲ್ಲಿ ಏನಾಶ್ಚರ್ಯ? ಕೂಸಿನ ಮಹೋನ್ನತ ಸ್ವಭಾವದ ಮುಂದೆ ಮಾತಾಪಿತೃಗಳು ಭಕ್ತಿನಮ್ರಾಂಗರಾಗಬೇಕು; ಮಹಾಮಹಿಮತೆಯ ಮಂತ್ರಕ್ಕೆ 'ಕೂಸು' ಆರಾಧ್ಯದೇವತೆಯಾಗಬೇಕು. ತಮ್ಮ ತೋಳಿನ ತೊಟ್ಟಿಲಲ್ಲಿ ಪವಡಿಸಿರುವ ಕೂಸು ಭವಿಷ್ಯತ್ತಿನ ಭದ್ರಮೂರ್ತಿಯಲ್ಲವೇ? ತಮ್ಮ ಅಡಿಯಲ್ಲಿ ಆಡುತ್ತಿರುವ ಕೂಸು ಮುಂದೆ ಚಿತ್ರಿಸುವ ಚರಿತ್ರೆಯೇ ಅಲ್ಲವೇ?

ಪಂಡಿತ ಜವಾಹರಲಾಲ ನೆಹರು.

ಲೇಖಕರು :- ಶ್ರೀಯುತ ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ
ದಕ್ಷಿಣ ಭಾಗ, ಧಾರವಾಡ

ನೆಹರು ಮನೆತನದ ಪೂರ್ವವೃತ್ತಾಂತ

ಕಾಶ್ಮೀರವು ಭಾರತದ ನಂದನವನವೆಂದು ಕರೆಯಲ್ಪಡುತ್ತಿದೆಯಷ್ಟೆ. ಅಲ್ಲಿಯ ಸೃಷ್ಟಿಸೌಂದರ್ಯವನ್ನು ಕವಿ-ಕಾದಂಬರಿಕಾರರು ಮನಸಾರೆ ಬಣ್ಣಿಸಿರುವರು. ಅಲ್ಲಿಯ ಜನರಿಗೆ ಕಾಶ್ಮೀರಿಗಳೆಂದು ಕರೆಯುತ್ತಾರೆ. ನೆಹರು ಮನೆತನದವರು ಮೊದಲು ಕಾಶ್ಮೀರಿಗಳು. ಆಗ ಆ ಮನೆತನದ ಹೆಸರು 'ಕೌಲ' ಎಂದು ಇತ್ತು. ಫರುಕ್‌ಶಿಯಾರ ಎಂಬ ಮೊಗಲ ಬಾದಶಹನು ಒಮ್ಮೆ ಕಾಶ್ಮೀರಕ್ಕೆ ಸಂದರ್ಶನವಿತ್ತಾಗ ಈ 'ಕೌಲ' ಮನೆತನದ ಮುಖ್ಯಸ್ಥರಾದ ರಾಜಕೌಲರೆಂಬವರು ಅವರ ಭೆಟ್ಟಿಗೆ ಹೋಗಿದ್ದರು. ಆಗ ರಾಜಕೌಲರ ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳಲ್ಲಿಯ ಪಾಂಡಿತ್ಯಕ್ಕೆ ಮೆಚ್ಚಿ ಅವರಿಗೆ ದಿಲ್ಲಿಗೆ ಬರಲು ಹೇಳಿದರು. ಆ ಮನೆತನದವರೆಲ್ಲ ಕಾಶ್ಮೀರವನ್ನು ೧೭೧೬ನೆಯ ಇಸವಿಯಲ್ಲಿ ಬಿಟ್ಟು ದಿಲ್ಲಿಗೆ ತೆರಳಿದರು. ಬಾದಶಹನು ಅವರಿಗೊಂದು ಜಹಾಗೀರನ್ನೂ ವಾಸಿಸಲು ನಹರ (ಕಾಲುವೆ)ದ ದಂಡೆಯ ಮೇಲಿದ್ದ ಮನೆಯೊಂದನ್ನೂ ದಯಪಾಲಿಸಿದನು. ನಹರ (ಕಾಲುವೆ)ದ ಹತ್ತರ ಇರುತ್ತಿದ್ದದರಿಂದ ಆ ಮನೆತನದವರಿಗೆ 'ನೆಹರು' ಎಂದು ಎಲ್ಲರು ಕರೆಯಹತ್ತಿದರು. ಅಂದಿನಿಂದ 'ನೆಹರು' ಎಂಬ ಅಡ್ಡ ಹೆಸರು ಅವರಿಗೆ ಪ್ರಾಪ್ತವಾಯಿತು. ೧೮೫೭ರಲ್ಲಾದ ಮೊದಲನೆಯ ಸ್ವಾತಂತ್ರ್ಯ ಯುದ್ಧದಲ್ಲಿ ದಿಲ್ಲಿಯ ನಿವಾಸಿಗಳಲ್ಲನೇಕರು ದಿಲ್ಲಿಯನ್ನು ಬಿಟ್ಟು ಬೇರೆಡೆಗಳಲ್ಲಿ ಹೋಗಿ ನೆಲಿಸಬೇಕಾಯಿತು. ನೆಹರು ಮನೆತನದವರೂ ಸಹ ಅಲ್ಲಿಂದ ಪಲಾಯನ ಮಾಡಿ ಆಗ್ರಾ ಪಟ್ಟಣಕ್ಕೆ ಹೋಗಿ ಅಲ್ಲಿ ಕೆಲವು ವರುಷಗಳ ವರೆಗೆ ವಾಸಿಸಿದರು; ಅದನ್ನೂ ಬಿಟ್ಟುಗೊಟ್ಟು ಕೊನೆಗೆ ಅಲಹಾಬಾದ (ದೇವರ ಮನೆ)ಕ್ಕೆ ಬಂದು ಅಲ್ಲಿ ತಳವೂರಿ ನಿಂತರು- ಜವಾಹರಲಾಲರ ತಾಯಿಯವರ ಹೆಸರು ಸ್ವರೂಪರಾಣಿಯವರು, ತಂದೆಯವರ ಹೆಸರು ಮೋತಿಲಾಲರು. ಮೋತಿಲಾಲರು ಅಲಹಾಬಾದದಲ್ಲಿ ವಕೀಲಿ ವೃತ್ತಿಯನ್ನು ಕೈಕೊಂಡಿದ್ದರು. ಅವರು ಉತ್ತಮ ವಕೀಲರೂ ವಾಗ್ಮಿಗಳೂ ಎಂಬ ಕೀರ್ತಿಯನ್ನು ಪಡೆದು ಹೇರಳವಾದ ಸಂಪತ್ತನ್ನು ತಮ್ಮ ಸ್ವಂತ ಯೋಗ್ಯತೆಯಿಂದ ಗಳಿಸಿದ್ದರು.

ಬಾಲ್ಯ ಮತ್ತು ಪ್ರಾಥಮಿಕ ಶಿಕ್ಷಣ

೧೮೮೯ನೆಯ ಇಸವಿಯ ನವಂಬರ ತಿಂಗಳ ೧೪ನೆಯ ತಾರೀಖಿನ ದಿವಸ ಮೋತಿಲಾಲರಿಗೊಂದು ಗಂಡು ಕೂಸು ಹುಟ್ಟಿತು. ಆ ಕೂಸಿಗೆ 'ಜವಾಹರಲಾಲ' (ಅಮೌಲ್ಯ ರತ್ನ) ಎಂಬ ಹೆಸರನ್ನಿಟ್ಟರು. ಒಬ್ಬನೇ ಒಬ್ಬ ಮಗನು, ಪೆಗ್ಗಳ ಸಿರಿವಂತಿಕೆ, ಕೇಳುವದೇನಿದೆ? ತಂದೆ-ತಾಯಿಗಳ ಹಿಗ್ಗಿಗೆ ಇತಿಮಿತಿಯಿರಲಿಲ್ಲ. ಆ ಮಗುವನ್ನು ಎಷ್ಟು ಕಕ್ಕುಲತೆಯಿಂದ ಜೋಪಾನ ಮಾಡಿರಬಹುದೆಂಬುದನ್ನು ಹೇಳುವದಕ್ಕಿಂತ ಊಹಿಸುವದೇ ಲೇಸು. ಐಶ್ವರ್ಯದ ಸಡಗರದಲ್ಲಿ ದಿನದಿನಕ್ಕೆ ಬಿದಿಗೆಯ ಚಂದ್ರನಂತೆ ಬೆಳೆಯುತ್ತ ಆ ಕೂಸು ಐದಾರು ವರುಷದ ಹುಡುಗನಾದನು. ಆತನ ಮೇಲ್ವಿಚಾರಕ್ಕಾಗಿ ಆಂಗ್ಲ

ದಾಯಿ (Governess) ಯೊಬ್ಬಳನ್ನೂ ಪ್ರಾಥಮಿಕ ಶಿಕ್ಷಣಕ್ಕಾಗಿ ಹಿಂದೀ ಮತ್ತು ಪರ್ಶಿಯನ್ ಕಲಿಸಲು ಪಂಡಿತನೊಬ್ಬನನ್ನೂ ಇಂಗ್ಲೀಷ ಕಲಿಸಲು ಮಿ. ಎಫ್. ಟಿ. ಬ್ರುಕ್ಸ ಎಂಬ ಹೆಸರಿನ ಆಂಗ್ಲ ಶಿಕ್ಷಕ (tutor) ನೊಬ್ಬನನ್ನೂ ನಿಯಮಿಸಿದ್ದರು. ಮಿ. ಬ್ರುಕ್ಸ ರವರು ಇಂಗ್ಲೀಷ ಭಾಷೆಯನ್ನೂ ಸತ್ಯಾನ್ವೇಷಣೆ (theosophy) ಯನ್ನೂ ಚನ್ನಾಗಿ ಕಲಿಸಿದರು. ಅವರಿಗೆ ಹತ್ತು ವರುಷಗಳಾದಾಗ ಅಂದರೆ ೧೯೦೦ನೆಯ ಇಸವಿಯಲ್ಲಿ ಅವರಿಗೊಬ್ಬ ತಂಗಿಯಂದಿರು ಹುಟ್ಟಿದರು. ಅವರ ಹೆಸರು ವಿಜಯಲಕ್ಷ್ಮಿ. ರಶಿಯದಲ್ಲಿಯೂ ಯುನಾಯಿಟೆಡ್ ಸ್ಟೇಟ್ಸದಲ್ಲಿಯೂ ಭಾರತದ ರಾಯಭಾರಿಗಳಾಗಿದ್ದವರು ಇವರೇ ಎಂಬ ಮಾತನ್ನು ಇಲ್ಲಿ ಹೇಳುವದು ಅನವಶ್ಯಕ.

ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ.

ತಮ್ಮ ಮಗನಿಗೆ ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣವನ್ನು ವಿಲಾಯತಿಯಲ್ಲಿಯೇ ಕೊಡಿಸಬೇಕೆಂಬ ಉದ್ದೇಶದಿಂದ ೧೯೦೫ನೆಯ ಇಸವಿಯ ಮೇ ತಿಂಗಳ ಮೊದಲನೆಯ ವಾರದಲ್ಲಿ ಕುಟುಂಬಸಮೇತ (ಹೆಂಡತಿ, ಇಬ್ಬರು ಮಕ್ಕಳು) ರಾಗಿ ಮೋತಿಲಾಲರು ವಿಲಾಯತಿಗೆ ಪ್ರಯಾಣ ಬೆಳೆಸಿದರು. ಆಗ ಜವಾಹರಲಾಲರಿಗೆ ೧೫ ವರುಷಗಳಾಗಿದ್ದವು. ಮೇ ತಿಂಗಳ ಕೊನೆಯ ವಾರದಲ್ಲಿ ಲಂಡನ್ ಪಟ್ಟಣಕ್ಕೆ ತಲುಪಿದರು. 'ಹ್ಯಾರೊ' ಎಂಬಲ್ಲಿ ಶ್ರೀಮಂತರ ಮಕ್ಕಳು ಕಲಿಯುವ ದೊಡ್ಡದೊಂದು ಸಾಲೆಯಲ್ಲಿ ಮಗನ ಹೆಸರನ್ನು ಹಚ್ಚಿಸಿ ಆತನನ್ನು ಅಲ್ಲಿಯೇ ಇಟ್ಟು ಯೋಗ್ಯೋಪಚಾರದ ಸುವ್ಯವಸ್ಥೆಯನ್ನು ಮಾಡಿಸಿ ಉಳಿದವರೊಡನೆ ಯುರೋಪ ಖಂಡದ ಪ್ರವಾಸವನ್ನು ತೀರಿಸಿಕೊಂಡು ಸ್ವದೇಶಕ್ಕೆ ಮರಳಿದರು. ಜವಾಹರಲಾಲರು ಸಾಲೆಯಲ್ಲಿಯ ಅಭ್ಯಾಸವನ್ನು ಮುಗಿಸಿಕೊಂಡು ಕೆಂಬ್ರಿಜ್ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದರು. ಅಲ್ಲಿಯ ಸಾಮಾನ್ಯ ವಿಜ್ಞಾನದ ಹೆಚ್ಚಿನ ಡಿಗ್ರೀ (General Science Tripos) ಯನ್ನು ಪಡೆಯಲು ಮೂರು ವರುಷಗಳ ವರೆಗೆ ಸತತವಾಗಿ ಅಭ್ಯಾಸ ಮಾಡಬೇಕಾಯಿತು. ಆಯ್. ಸಿ. ಎಸ್. ಪರೀಕ್ಷೆಗೆ ಕೂಡ್ರಬೇಕೆಂಬ ವಿಚಾರವಿತ್ತು, ಆದರೆ ವಯಸ್ಸು ಇನ್ನೂ ಚಿಕ್ಕದಿತ್ತು, ಆದುದರಿಂದ, ತಮ್ಮ ತಂದೆಯವರಂತೆ ತಾವೂ ವಕೀಲರಾಗಬೇಕೆಂಬ ಉತ್ಕಟೇಚ್ಛೆಯಿಂದ ಕಾಯಿದೆಯ ಅಭ್ಯಾಸಕ್ಕಾಗಿ ಲಂಡನ್ ಪಟ್ಟಣಕ್ಕೆ ತೆರಳಿದರು. ವಿಲಾಯತಿಯಲ್ಲಿದ್ದಾಗ ಬೇಸಿಗೆಯ ಮತ್ತು ಚಳಿಗಾಲದ ರಜೆಗಳಂತಹ ದೀರ್ಘಾವಧಿಯ ಬಿಡುವುಗಳಲ್ಲಿ ಅವರು ಫ್ರಾನ್ಸ, ಜರ್ಮನಿ, ನಾರ್ವೆ, ಮೊದಲಾದ ಯುರೋಪ ಖಂಡದ ಬೇರೆ ಬೇರೆ ದೇಶಗಳಿಗೆ ಸಂದರ್ಶನವನ್ನಿತ್ತಿದ್ದಾರೆ. ಅವರು ವಿಲಾಯತಿಯಲ್ಲಿದ್ದ ಸುಮಾರು ಎಂಟು ವರುಷಗಳಲ್ಲಿ ಎರಡು ಸಲ ಸ್ವದೇಶಕ್ಕೆ ಬಂದು ಹೋದರು. ಆ ಅವಧಿಯಲ್ಲಿ ಅವರಿಗೆ 'ಕಷ್ಣಾ' ಎಂಬ ಮತ್ತೊಬ್ಬ ತಂಗಿಯಂದಿರು ಹುಟ್ಟಿದರು. ನಮ್ಮ ದೇಶದಲ್ಲಿ ಸ್ವದೇಶಿ ಚಳವಳಿಯು ನಡೆದಾಗ ಅವರು ವಿದ್ಯಾಭ್ಯಾಸಕ್ಕಾಗಿ ವಿಲಾಯತಿಯಲ್ಲಿದ್ದರು. ಅದರ ಸುದ್ದಿಗಳನ್ನೆಲ್ಲ ಆಸ್ಥೆ ವಹಿಸಿ ಓದುತ್ತಿದ್ದರು. ಅದರ ವಿರುದ್ಧ ಅವರ ತಂದೆಯವರು ಮಾಡಿದ ಭಾಷಣವನ್ನೋದಿ ತಳಮಳಗೊಂಡು ತಮ್ಮ ಅಸಮಾಧಾನ್ನವನ್ನು ವ್ಯಕ್ತಪಡಿಸಿ ದೀರ್ಘವಾದೊಂದು ಪತ್ರವನ್ನು ತಮ್ಮ ತಂದೆಯವರಿಗೆ ಬರೆದರು. ತಮ್ಮ ವಿದ್ಯಾಭ್ಯಾಸವನ್ನೆಲ್ಲ ಮುಗಿಸಿಕೊಂಡು ಬ್ಯಾರಿಸ್ಟರ ಪರೀಕ್ಷೆಯಲ್ಲಿ ಪಾಸಾಗಿ ೧೯೧೨ನೆಯ ಇಸವಿಯ ಕೊನೆಯ ಸುಮಾರಿಗೆ ತಾಯ್ನಾಡಿಗೆ ಮರಳಿದರು. ಆಗ ಅವರು ೨೩ ವರುಷದ ಪ್ರಾಯದವರಿದ್ದರು.

ಸತ್ಯಾಗ್ರಹ ಚಳವಳಿಯಲ್ಲಿ ಧುಮುಕಿದುದು

ಅಲಹಾಬಾದದಲ್ಲಿ ಉತ್ತಮೋತ್ತಮ ವಕೀಲರೆಂದು ಪ್ರಖ್ಯಾತಿಯನ್ನು ಪಡೆದ ತಮ್ಮ ತಂದೆಯವರ ನೇತೃತ್ವದಲ್ಲಿ ವಕೀಲಿಯನ್ನು ಪ್ರಾರಂಭಿಸಿದರು. ಮುಂದೆ ೧೯೧೪ರಲ್ಲಿ ಮೊದಲನೆಯ ಜಾಗತಿಕ ಯುದ್ಧವು ಪ್ರಾರಂಭವಾಯಿತು. ಅದು ಸತತವಾಗಿ ನಾಲ್ಕು ವರುಷಗಳ ವರೆಗೆ ನಡೆದು ೧೯೧೮ರಲ್ಲಿ ಮುಕ್ತಾಯವನ್ನು ಹೊಂದಿತು. ಭಾರತೀಯರೆಲ್ಲರು ಸ್ವರಾಜ್ಯ (Home-rule) ಚಳವಳಿಯನ್ನು ಹೂಡಿದರು. ತಂದೆ–ಮಗ ಈರ್ವರೂ ಅದರಲ್ಲಿ ಭಾಗವಹಿಸಿದರು. ಜವಾಹರಲಾಲರು ಅಲಹಾಬಾದದಲ್ಲಿ ತಮ್ಮ ಮೊದಲನೆಯ ಭಾಷಣ (Maiden speech) ವನ್ನು ಮಾಡಿದರು. ತಮ್ಮ ಶ್ರೀಮಂತಿಕೆಯ ವಿಷಾರಾಮದ ವೃತ್ತಿಯನ್ನು ಬಿಟ್ಟುಗೊಟ್ಟು ಬಂದಿಖಾನೆಗೆ ಹೋಗಿ ಕಷ್ಟ-ಪರಂಪರೆಗಳನ್ನೆಲ್ಲ

ಅನುಭೋಗಿಸಲು ಸಿದ್ಧರಾದರು. ೧೯೧೬ನೆಯ ಇಸವಿಯಲ್ಲಿ ಹದಿನೇಳು ವರುಷದ ಪ್ರಾಯದವರಾದ ಕಮಲಾದೇವಿಯರೆಂಬ ಕನ್ಯೆಯೊಡನೆ ದಿಲ್ಲಿಯಲ್ಲಿ ವಸಂತ ಪಂಚಮಿಯ ಸುಮುಹೂರ್ತದಲ್ಲಿ ಬಳ್ಳೇ ವಿಜೃಂಭಣೆಯಿಂದ ಅವರ ವಿವಾಹವು ಜರುಗಿತು. ೧೯೧೯ರಲ್ಲಿ ಹೊರಬಿದ್ದ ಮಾಂಟ-ಫರ್ಡ ಸುಧಾರಣೆಗಳಿಂದ ಕಾಂಗ್ರೆಸ್ಸಿಗೆ ಎಳ್ಳಷ್ಟು ಸಮಾಧಾನವಾಗಲಿಲ್ಲ. ಮಹಾತ್ಮಾ ಗಾಂಧೀಯವರು ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸಿದರು. ಅಮೃತಸರದಲ್ಲಿ ಜಲಿಯನ್‌ವಾಲಾ ಬಾಗದ ದುರಂತವೊದಗಿ ನಿರಪರಾಧಿಗಳಾದ ಎಷ್ಟೋ ಜನರು ಕೊಲ್ಲಲ್ಪಟ್ಟರು. ಹಿಂದೂ-ಮುಸಲ್ಮಾನರಿಬ್ಬರೂ ಸ್ವತಂತ್ರತೆಯ ಸಲುವಾಗಿ ಟೊಂಕ ಕಟ್ಟಿದರು. ಜವಾಹರಲಾಲರೂ ಅದರಲ್ಲಿ ಧುಮುಕಿದರು. ಕಿಸಾನ ಚಳವಳಿಯ ಅಧ್ವರ್ಯುಗಳಾಗಿ ಸಂಯುಕ್ತ ಪ್ರಾಂತದ ಹಳ್ಳಿಗಳನ್ನೆಲ್ಲ ಸುತ್ತಾಡಿ ಕಿಸಾನ (ರೈತ) ರನ್ನೆಲ್ಲ ಬಡಿದೆಬ್ಬಿಸಿ ಅವರಲ್ಲಿ ಒಕ್ಕಟ್ಟನ್ನುಂಟು ಮಾಡಿದರು. ಇದೇ ಸಮಯಕ್ಕೆ ಅವರಿಗೆ 'ಇಂದಿರಾ' ಎಂಬ ಮಗಳು ಹುಟ್ಟಿದಳು. ಅವರಿಗೆ ಈಗ ಇವರೊಬ್ಬರೇ ಮಗಳು. ಗಾಂಧಿ ಎಂಬ ಗೃಹಸ್ಥರಿಗೆ ಲಗ್ನ ಮಾಡಿ ಕೊಟ್ಟಿದ್ದರಿಂದ ಇವರಿಗೆ ಈಗ ಇಂದಿರಾ ಗಾಂಧಿ ಎಂಬ ಹೆಸರು ಪ್ರಾಪ್ತವಾಗಿದೆ. ಇವರು ಈಗ ತಂದೆಯವರ ಹತ್ತರವೇ ಇರುತ್ತಾರೆ. ಮುಂದೆ ಇಂಗ್ಲಂಡದ ಯುವರಾಜರು ನಮ್ಮ ದೇಶಕ್ಕೆ ಸಂದರ್ಶನವಿತ್ತಾಗ ಕರೇನಿಶಾನೆಗಳ ಆಂದೋಲನವು ಎದ್ದಿತು. ಆಗ ತಂದೆ-ಮಗ ಇಬ್ಬರನ್ನೂ ಬಂಧಿಸಿ ಮಗನಿಗೆ ಮೂರು, ತಂದೆಗೆ ಆರು ತಿಂಗಳುಗಳ ಕಾರಾಗೃಹವಾಸವು ಪ್ರಾಪ್ತವಾಯಿತು. ಈರ್ವರೂ ಜೇಲನ್ನು ಕಂಡದ್ದು ಇದೇ ಮೊದಲನೆಯ ಸಲ. ಸಂಯುಕ್ತ ಪ್ರಾಂತದಲ್ಲಿ ಚೌರಿಚೌರಾ ಎಂಬಲ್ಲಿ ಹಳ್ಳಿಗರೆಲ್ಲರು ಕೂಡಿ ಪೋಲೀಸ ಕಚೇರಿಗೆ ಬೆಂಕಿಕೊಟ್ಟು ಅದನ್ನು ಸುಟ್ಟರು. ಈ ಅನಾಹುತವನ್ನು ಮನದಂದು ಮಹಾತ್ಮರು ತಮ್ಮ ಸವಿನಯ ಕಾಯಿದೆ ಭಂಗ ಚಳವಳಿ (civil disobedience movement) ಯನ್ನು ಬಂದಿಟ್ಟದೆಯೆಂದು ಸಾರಿದರು. ಎರಡನೆಯ ಸಲ ಜವಾಹರಲಾಲರಿಗೆ ಒಂದು ವರುಷ ಆರು ತಿಂಗಳು ಬಂದಿವಾಸವಾಯಿತು. ೧೯೨೬ನೆಯ ಇಸವಿ ಜನೇವರಿ ತಿಂಗಳಲ್ಲಿ ಶ್ರೀಮತಿ ಕಮಲಾದೇವಿಯವರಿಗೆ ಅತಿಶಯ ಜಡ್ಡಾಗಿ ಹಾಸಿಗೆ ಹಿಡಿದರು. ಆಗ ಸರಕಾರದವರು ಜವಾಹರಲಾಲರನ್ನು ಬಿಡುಗಡೆ ಮಾಡಿದರು. ಡಾಕ್ಟರರ ಸಲಹೆಯ ಮೇರೆಗೆ ತಮ್ಮ ಹೆಂಡತಿಯನ್ನು ಶುಶ್ರೂಷೆಗಾಗಿಯೂ ಹವೆಯನ್ನು ಬದಲಾಯಿಸುವದಕ್ಕಾಗಿಯೂ ಸ್ವಿಟ್ಸರ್ಲಂಡಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರ ಪ್ರಕೃತಿಯು ಚನ್ನಾಗಿ ಸುಧಾರಿಸಿದ ಮೇಲೆ ಸ್ವದೇಶಕ್ಕೆ ಮರಳಿ ಬಂದರು. ೧೯೨೬ ರಿಂದ ೧೯೨೮ರ ವರೆಗೆ ಕಾಂಗ್ರೆಸ್ಸದ ಜನರಲ್ ಸೆಕ್ರೆಟರಿಗಳಾಗಿ ಕೆಲಸ ಮಾಡಿದರು. ೧೯೨೭ನೆಯ ಇಸವಿಯಲ್ಲಿ ರಶಿಯಕ್ಕೆ ಹೋಗಿ ಅಲ್ಲಿ ಕೆಲ ಕಾಲ ನಿಂತು ಸಮತಾವಾದ(communism)ದ ಕಾರ್ಯಾಚರಣೆಯನ್ನೆಲ್ಲ ಚನ್ನಾಗಿ ಅಭ್ಯಸಿಸಿದರು. ಏಳು ಜನ ಸದಸ್ಯರಿಂದೊಡಗೂಡಿದ ಸಾಯಮನ್ ಸಮಿತಿ (Simon Commission) ಯವರು ಇಲ್ಲಿಯ ರಾಜ್ಯಕಾರಭಾರವನ್ನು ಸುಧಾರಿಸುವ ಬಗೆಗಳನ್ನು ಕಂಡು ಹಿಡಿಯಲು ನಮ್ಮ ದೇಶಕ್ಕೆ ೧೯೨೮ರಲ್ಲಿ ಬಂದರು. 'ಸಾಯಮನ್ನರೇ, ಹಿಂತಿರುಗಿರಿ' (Simon, Go back) ಎಂಬದೊಂದು ಆಂದೋಲನವು ಎಲ್ಲ ಕಡೆಗೆ ಎದ್ದಿತು. ಸಮಿತಿಯು ಲಕ್ನೋಕ್ಕೆ ಬಂದಾಗ ಜವಾಹರಲಾಲರು ಆಂದೋಲನದ ಮುಖಂಡರಾಗಿದ್ದರು. ಸಮಿತಿಯನ್ನು ಬಹಿಷ್ಕರಿಸಿದ ಯೋಜನೆಯು ಅವರಿಂದಲೇ ತಯಾರಿಸಲ್ಪಟ್ಟಿತು. ಆ ಯೋಜನೆಯನ್ನು ತಯಾರಿಸುವಲ್ಲಿ ಅವರಿಂದ ಹೊರಹೊಮ್ಮಿದ ಕೈಚಳಕವು ನಮ್ಮ ದೇಶದ ಎಲ್ಲ ಪಕ್ಷ-ಸಂಗಡಗಳ ಮುಖಂಡರನ್ನು ಚಕಿತಗೊಳಿಸಿತು. ಮಾತ್ರವಲ್ಲದೆ ಎಲ್ಲ ಪಕ್ಷಗಳು ತಮ್ಮ ತಮ್ಮ ಮತಭೇದಗಳನ್ನು ಬದಿಗೊತ್ತಿ ಒಂದಾದವು. ಈ ಉದಾಹರಣೆಯು ಭಾರತದ ಇತಿಹಾಸದಲ್ಲಿಯೇ ಅದ್ವಿತೀಯವಾಗಿದೆ. ಇದರ ಶ್ರೇಯಸ್ಸೆಲ್ಲ ಪಂಡಿತ ಜವಾಹರಲಾಲರಿಗಲ್ಲದೆ ಮತ್ತಾರಿಗಿದೆ?

(ಮುಂದುವರಿಯುವದು)

ರನ್ನನೂ ಗದಾಯುದ್ಧವೂ

ಲೇಖಕರು:—ಶ್ರೀ. ಆಯ್. ಎಸ್. ಬಿದರಿ, ಧಾರವಾಡ.

ಇಂದಿಗೆ ಸುಮಾರು ೧೦೦೦ ವರ್ಷಗಳ ಹಿಂದಿನ ಕಾಲ. ಕಿ.ಶಕೆ ೯೪೯ನೆಯ ವರ್ಷ, ಸೌಮ್ಯ ಸಂವತ್ಸರದ ಒಂದು ಶುಭ ದಿನ; ಕರ್ನಾಟಕದ ಭಾಗ್ಯವೇ ತೆರೆಯಿತೆನ್ನುವಂತೆ 'ಮುದುವೊಳಲ' (ಮುಧೋಳ)ಲ್ಲಿ 'ವಾಗ್ದೇವಿಯ ಭಂಡಾರ ಮುದ್ರೆಯನೊಡೆದ' ಕವಿರತ್ನ ರನ್ನನು ವೃತ್ತಿಯಿಂದ ಬಳೆಗಾರರಾದ, ಜೈನಮತಾನುಯಾಯಿಗಳಾದ ಜಿನವಲ್ಲಭ—ಅಬ್ಬಿಲಬ್ಬೆ ಈ ದಂಪತಿಗಳ ಉದರದಲ್ಲಿ ಜನಿಸಿದನು. ತುಸು ದೊಡ್ಡವನಾದ ಬಳಿಕ ಗಂಗರಾಜರ ಮಂತ್ರಿ ಚಾವುಂಡರಾಯನ ಆಶ್ರಯದಲ್ಲಿ ನಿಂತು ಅಜಿತ ಸೇನಾಚಾರ್ಯರೆಂಬ ಗುರುಗಳ ಸಮ್ಮುಖದಲ್ಲಿ ಸಂಸ್ಕೃತ—ಕನ್ನಡ ಇವೆರಡೂ ಭಾಷೆಗಳಲ್ಲಿ ಪಾರಂಗತನಾದನು. ಕಾಳಿದಾಸ, ಬಾಣ, ಭವಭೂತಿ ಮೊದಲಾದ ಸಂಸ್ಕೃತ ಕವಿಗಳ ಹಾಗೂ ಆದಿಪಂಪನೇ ಮೊದಲಾದ ಕನ್ನಡ ಕವಿಗಳ ಕಾವ್ಯಗಳನ್ನು ಅಭ್ಯಸಿಸಿ ಹೃದಯದಲ್ಲಿ ಅಳವಡಿಸಿಕೊಂಡು ನಿಸರ್ಗಜನ್ಯವಾಗಿ ತನ್ನ ಅಂತರಂಗದಲ್ಲಿ ಹುದುಗಿದ ಕವಿತ್ವಕ್ಕೆ ಇನ್ನಷ್ಟು ಒಪ್ಪುಕೊಟ್ಟು ತೇಜಸ್ವಿಯನ್ನಾಗಿ ಮಾಡಿದನು. ನಾಡ ವಿಪ್ಲವದ ಆ ಕಾಲದಲ್ಲಿ ರನ್ನನು ಮಾಂಡಲಿಕರ ಆಶ್ರಯದಿಂದ ಕೊನೆಗೆ ಪಡುವಣದ ಚಾಲುಕ್ಯರ ಅರಸನಾದ ಆಹವಮಲ್ಲ ತೈಲಪನ ಆಸ್ಥಾನದಲ್ಲಿ ನಿಂತು ತನ್ನ ೩೪ನೆಯ ವಯಸ್ಸಿನಲ್ಲಿ 'ಗದಾಯುದ್ಧ'ವನ್ನು, ೪೫ನೆಯ ವಯಸ್ಸಿನಲ್ಲಿ 'ಅಜಿತ ತೀರ್ಥಂಕರ ಪುರಾಣ'ವನ್ನೂ ಬರೆದನು; 'ಪರಶುರಾಮ ಚರಿತೆ', ಚಕ್ರೇಶ್ವರ ಚರಿತೆ' ಇವು ಇವನು ಬರೆದ ಬೇರೆ ಎರಡು ಗ್ರಂಥಗಳು; ಆದರೆ ಇವು ಉಪಲಬ್ಧವಾಗಿರುವದಿಲ್ಲ. 'ಯೌವನದ ಉತ್ಸಾಹ, ಕಳಕಳಿ, ಅರ್ಥಪ್ರೌಢಿಮೆ, ನವರಸ, ಸಮಯೋಚಿತ ಅಲಂಕಾರಗಳಿಂದ ಕೂಡಿದ ಲೌಕಿಕ ಕಾವ್ಯವಾದ 'ಗದಾಯುದ್ಧ'ವು ರನ್ನನಿಗೆ ಕವಿಚಕ್ರವರ್ತಿ ಬಿರುದನ್ನೂ, ರಾಜಮನ್ನಣೆಯನ್ನೂ, ಬತ್ತಗಾವೆ ಜಹಾಗೀರನ್ನು ಒದಗಿಸಿ ರತ್ನತ್ರಯಗಳಲ್ಲಿ ಸಮಾವೇಶಗೊಳಿಸಿತು. ಪ್ರಾಪಂಚಿಕನಾದ ರನ್ನನಿಗೆ ಶಾಂತಿ—ಜಕ್ಕಿ ಎಂಬ ಇಬ್ಬರೂ ಹೆಂಡಂದಿರೂ 'ರಾಯ' ಎಂಬ ಮಗನೂ 'ಅತ್ತಿಮಬ್ಬೆ' ಎಂಬ ಮಗಳೂ ಇದ್ದರೆಂದು ತಿಳಿಯುತ್ತದೆ. ಕವಿರತ್ನ ರನ್ನನು ಕಿ. ಶ. ೧೦೨೦ರಲ್ಲಿ ಮರಣಹೊಂದಿದನೆಂದು ಹೇಳಬಹುದು. ಇಷ್ಟು ರನ್ನನ ಜೀವನಯಾತ್ರೆ.

ರನ್ನನು ಮರೆಯಾಗಿ ದಶ ಶತಕಗಳು ಗತಿಸಿದರೂ ನಾಡದೇವಿಯ ದೃಷ್ಟಿಯಲ್ಲಿ ಅವನು ನಿತ್ಯ—ಸತ್ಯನಾಗಿ ನಿಂತಿದ್ದಾನೆ. ಹತ್ತು ಆಶ್ವಾಸಗಳಿಂದ—೫೭೬ ಪದ್ಯಗಳಿಂದ ಕೂಡಿದ 'ಗದಾಯುದ್ಧ'ವು ರಸ ಪ್ರವಾಹ, ಪಾತ್ರಚಿತ್ರತೆಯ ಕೌಶಲ, ಸಂಭಾಷಣದ ನಾಟಕೀಯತೆ, ಗಂಭೀರ ಗಭೀರವಾದ ಓಘ, ಕಥಾ ಸಂವಿಧಾನ ಇವೇ ಮೊದಲಾದ ಲೋಕೋತ್ತರ ಗುಣವಿಶೇಷಗಳಿಂದ ಕೂಡಿ ರನ್ನನನ್ನು ಅಜರಾಮರನನ್ನಾಗಿ ಮಾಡಿರುವುದಲ್ಲದೆ ನಾಡದೇವಿಯ ಉಡಿಯಲ್ಲಿ ಅಚ್ಚಳಿಯದ, ನವ್ಯ—ನವೀನ ಅಕ್ಷತೆಯಾಗಿ ಪರಿಶೋಭಿಸಿದೆ; ನಾಡದೇವಿಯು ಸದಾಪಕಾಲ ಮುತ್ತೈದೆಯಾಗಿ ನಿಂತಿರುವಂತೆ ನೋಡಿಕೊಂಡಿದೆ; ಇದೊಂದು 'ರಸಘಟ್ಟ'.

'ಗದಾಯುದ್ಧ'ವು ಚಂಪೂಕಾವ್ಯ; ವೀರರಸ ಪ್ರಧಾನವಾದ ದುಃಖಾಂತ ನಾಟಕ. ಇದಕ್ಕೆ 'ಸಾಹಸಭೀಮ ವಿಜಯ' ಎಂಬ ಇನ್ನೊಂದು ಹೆಸರು ಉಂಟು. ತೈಲಪನ ಮಗ ಸತ್ಯಾಶ್ರಯ 'ಇರಿವಬೆಡಂಗ'ನನ್ನೇ ನಾಯಕ ಭೀಮನಿಗೆ ಹೋಲಿಸಿ ಈ ಕಾವ್ಯವನ್ನು ವಿರಚಿಸಿದ್ದಾನೆ. ಕಾವ್ಯದಲ್ಲಿ ಆದಿಪಂಪನ ಪ್ರಭಾವದ ಪಡಿನೆಳಲು ಕಂಡುಬರುತ್ತಿದೆ. ಆದರೂ ಪಾತ್ರಚಿತ್ರತೆ, ಶೈಲಿ, ಕಥೆಯ ಮಾರ್ಪಾಟಗಳಲ್ಲಿ ಅಲ್ಲಲ್ಲಿ ತನ್ನದೇ ಆದ ವೈಶಿಷ್ಟ್ಯವಿದೆ ಈ ಕವಿಗೆ.

ಸ್ಮಶಾನ ಸದೃಶವಾದ ರಣಭೂಮಿಯಲ್ಲಿ ಕಾಳಭೈರವನಂತೆ ರಕ್ತರಂಜಿತ ಕೈಸ್ಪೈಗಳಿಂದ ಬರುತ್ತಿದ್ದ ಭೀಮನನ್ನು ದ್ರೌಪದಿಯು ಸಂಧಿಸುವಳು. ದುರ್ಯೋಧನನ ಊರುಭಂಗ, ಕಿರೀಟಭಂಗವಾಗದೆ 'ಸಂಧಿಯನಾಗಲೀವೆನೇ' ಎಂದು ಸಿಂಹಗರ್ಜನೆಮಾಡಿ ದುರ್ಯೋಧನನನ್ನು ಅರಸುತ್ತ ಕುರುಕುಲ ಪಿತಾಮಹ ಭೀಷ್ಮರ ಆಜ್ಞೆಯಂತೆ ವೈಶಂಪಾಯನ ಕಮಲ ಕರದಲ್ಲಿ ಅಡಗಿದ ದುರ್ಯೋಧನನನ್ನು ಪೂಜಲಿಸುವನು. 'ಛಲದಂಕ ಕೌರವನು ನೀರೊಳಗಿದ್ದೂ ಜೆಮುತರ್ಣ ಸಹಿಸದೆ ಹೊರಗೆ ಬಂದು ಆಹ್ವಾನಿಸುವನು ಭೈರವ ಭೀಮನನ್ನು; ಅಷ್ಟರಲ್ಲಿ ತೀರ್ಥಯಾತ್ರೆಗೆ ಹೋದ ಬಲರಾಮನು ಆಗಮಿಸುವನು; ಭೀಮ ದುರ್ಯೋಧನರಲ್ಲಿ ಗದಾಯುದ್ಧವಾಗುವದು. ಶ್ರೀಕೃಷ್ಣನ ಸಂಜ್ಞೆಯಂತೆ ದುರ್ಯೋಧನನ ಊರುಭಂಗವಾಗುವದು; ಬಲರಾಮಾದಿಗಳು ಬೇಡವೆಂದರೂ ಭೀಮನು ವೀರವೈರಿಯ ಮುಕಟುವನ್ನೊದೆಯುವನು; ಭೀಮನ ಪಟ್ಟಾಭಿಷೇಕದೊಂದಿಗೆ ರುದ್ರ ನಾಟಕಕ್ಕೆ ಮಂಗಲವಾಗುವದು; ಇಂತಿದು ಕಾವ್ಯವಸ್ತು.

ಕತೆಯು ಮಹಾಭಾರತದ ಅಂಶವೆಂದು ತಿಳಿದರೂ ಕವಿಯು ಸಮಯೋಚಿತವಾಗಿ ಭಾರತದ ಹಿಂದಿನ ಸಂನಿವೇಶಗಳನ್ನು ಅಲ್ಲಲ್ಲಿ ಚುಟುಕು–ಚುಟುಕಾಗಿ ಸೂಚಿಸಲೆತ್ನಿಸಿದ್ದಾನೆ. ಕಾವ್ಯದಲ್ಲಿ ಉಳಿದ ಸಂಗತಿಗಳಿಗಿಂತ ಪಾತ್ರಚಿತ್ರತೆಯಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನೂ, ಚಾಣ್ಮೆಯನ್ನೂ, ಕೈಕುಶಲತೆಯನ್ನೂ, ಕಲಾಕುಸುರನ್ನೂ ಸೂರೆಮಾಡಿದ್ದಾನೆ. ವ್ಯಾಸ, ಕುಮಾರವ್ಯಾಸರ ಧರ್ಮಜನಿಗಿಂತ ರನ್ನನ ಧರ್ಮಜನು ಶ್ರೇಷ್ಠತರನಾಗಿ ಚಿತ್ರಿತವಾಗಿದ್ದಾನೆ. ಧೃತರಾಷ್ಟ್ರ- ಗಾಂಧಾರಿ, ಪ್ರತಿನಾಯಕ ದುರ್ಯೋಧನ ಇವರ ಬಗೆಗೆ ಅವನಿಗೆ ಎಂದಿಲ್ಲದ ಕನಿಕರ. 'ಗದಾಯುದ್ಧ'ದ ದ್ರೌಪದಿಯು ಕೋಪಿಷ್ಟಳಲ್ಲ. 'ಸ್ತ್ರೀತ್ವದ ಕೋಮಲಭಾವಿ; ದುಃಖಿನಿ; 'ಅನವರತ ಬಾಷ್ಪವಾರಿ ಧಾರಾಪೂರಿ ಪರಿವಾರಿತ ಪಲ್ಲವನೇತ್ರೆ' 'ಕೂಳುಗೇಡಿಂಗೊಡಲ ಹೊರಿವಿರಿ' ಎಂದ ಕುಮಾರವ್ಯಾಸನ ದ್ರೌಪದಿ ಇಲ್ಲಿ ಸೌಮ್ಯಸ್ವರೂಪಿ. ಆದರೂ 'ಸೀತಾದೇವಿಯಂತೆ ಮೃದುತ್ವದಿಂದೊಡಗೂಡಿದ ಅಪರಂಜಿಯ ಪುತ್ಥಳಿಯಲ್ಲ.' ಆಕೆಯು 'ಪ್ರೇಮಸುಧೆ, ರಸಿಕಳು, ಸೌಂದರ್ಯಮಯಿ.' ರನ್ನನ ದ್ರೌಪದಿ........

''ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳಾ ಶೃಂಗಾ-
ರಮಾ ಭಾವಮಾ।
ಪರಿಜಾ ವಿಭ್ರಮಮಾ ಬೆಡಂಗು ನೆಗಳ್ದಾ ಸೌಂದ-
ರ್ಯಮಾ ಬಿಂಕಮಾ॥
ತರಳಾಪಾಂಗ ವಿಲಾಸಮಾಲುಟಹಮಾ
ಲಾವಣ್ಯಮಾ ಪುಣ್ಯಮಾ।
ದರಹಾಸಾಮೃತಮೇಂ ಮನಂಗೊಳಿಸಿತೋ
ಚಾಳುಕ್ಯ ಕಂದರ್ಪನಾ॥

ಕಥಾನಾಯಕ ಭೀಮನ ಪಾತ್ರನಿರೂಪಣೆಯು ಅಷ್ಟೊಂದು ಸರಿಯಾಗಿ ಬಂದಿಲ್ಲ; ಅವನೊಬ್ಬ 'ಇರಿವ ಬೆಡಂಗ', ಅದ್ಭುತ ಪರಾಕ್ರಮಿ, 'ಕೌರವ್ಯಗಂಧೇಭಕೇಸರಿ'ಯಾದ ಭೀಮನು ಪ್ರತಿಜ್ಞಾಸ್ಥಿರತೆ, ಕಾರ್ಯನಿರ್ವಹಣ ಶಕ್ತಿಯುತನಾಗಿ ಉದ್ಧತನಾಗಿರುವನೇ ಹೊರತು ಕ್ಷಮೆ, ಗಾಂಭೀರ್ಯ, ವಿನಯ, ಆತ್ಮಶ್ಲಾಘಾವಿರತಿ ಮೊದಲಾದ ಗುಣಗಳಿಂದ ಕೂಡಿದ ಉದಾತ್ತ ಮಾನವನಾಗಿ ರೂಪುಗೊಂಡಿಲ್ಲ. ತಮ್ಮ ಪ್ರೀತಿಯ ಪುತ್ಥಳಿಯನ್ನು ಬದುಕಿಸೆಂಬ ಮುಪ್ಪಿನ ಧೃತರಾಷ್ಟ್ರ–ಗಾಂಧಾರಿಯರ ಮಾತಿಗೆ ಕಿವಿಗೊಡದಿರುವದು, ಯುದ್ಧನೀತಿಯನ್ನು ಬಿಟ್ಟು ಹೊಕ್ಕಳ ಕೆಳಗೆ ಹೊಡೆಯುವದು, ಮರಣಾವಸ್ಥೆಯಲ್ಲಿದ್ದ ಕೌರವನನ್ನು ಹೀಯಾಳಿಸುವದು ಕಿರೀಟವನ್ನು, ಬಲರಾಮಾದಿಗಳು 'ಆಗದಾಗದು' ಎಂದು ಹೇಳಿದರೂ, ಒದೆಯುವದು ಇವೇ ಮೊದಲಾದ ಕೃತಿಗಳು ಭೀಮನನ್ನು ಉದಾತ್ತತೆಯಿಂದ ತೀರ ಕೆಳಗೆ ಅಂದರೆ ಔದ್ಧತ್ಯಕ್ಕೆ ಒಯ್ದಿರುವವೆಂದು ಹೇಳಬಹುದೆ?

ಇನ್ನು ಪ್ರತಿನಾಯಕ ದುರ್ಯೋಧನ. ರನ್ನನ ಪ್ರತಿಭೆ-ಪಾಂಡಿತ್ಯ, ಕರುಣೆ ಇವು ಮುಪ್ಪುರಿಗೊಂಡು ಪ್ರತಿನಾಯಕನ ಪಾತ್ರಚಿತ್ರತೆಯಲ್ಲಿ ಮೂಡಿಬಂದಿವೆ. ರನ್ನನ ದುರ್ಯೋಧನ ಮಹಾವೀರ, ಏಕಾಂಗವೀರ, ಗುರುಭಕ್ತಿಯುತ, ಅಭಿಮಾನಧನ, ಹಟವಾದಿ, ಪ್ರತೀಕಾರೇಚ್ಛೆಯುಳ್ಳವ, ಹನ್ನೊಂದಕ್ಷೋಹಿಣಿ ಸೈನ್ಯವು ಮಡಿದರೂ ಎದೆಗುಂದದ ಎದೆಗಾರ, ಒಳ್ಳೆಯ ಗೆಳೆಯ, ಆದರ್ಶ ಶಿಷ್ಯ, ನಚ್ಚಿನ ಬಂಧು. ಒಪ್ಪಂದದ ಬಗೆಗೆ ಹೇಳುವ

ತಾಯಿ-ತಂದೆಗಳ, ಅಷ್ಟೇಕೆ ಅಜ್ಜ ಭೀಷ್ಮನ ಮಾತುಗಳನ್ನು ಸಹ ಕೇಳನು. ಒಪ್ಪಂದದ ವಿಷಯದಲ್ಲಿ ಮಾತ್ರ ಹಾಗೆ. ಅಲ್ಲಿ ಅಭಿಮಾನ. ನಾಲ್ವರಲ್ಲಿ ಒಬ್ಬನು ಸತ್ತರೆ ಪ್ರಾಣಾರ್ಪಣೆ ಮಾಡುವ ಧರ್ಮರಾಜನಿಗಿಂತ ನಾನೇನು ಕಡಿಮೆಯಾಗಲೇ, 'ಸಂಧಿಯನೊಡರ್ಚೆಂ' ಎಂದು ಹೇಳುವನು; ಅದೇ ವೇಳೆಯಲ್ಲಿ ರೋಷವು ಉಕ್ಕೇರಿ ಬಂದು 'ಸಾಧಿಸುವೆಂ ಫಲುಗುಣನಂ, ಸಾಧಿಸುವೆಂ ಪವನ ಸುತನ ಬಸಿರಂ' ಎಂಬ ಮಾತಿನಲ್ಲಿ ಕಾಣಿಸಿಕೊಂಡು ಮರುಕ್ಷಣದಲ್ಲಿಯೇ 'ಹಾ ಕರ್ಣ, ಹಾ ದುಶ್ಶಾಸನಾ' ಎಂಬ ಉಕ್ತಿಯಲ್ಲಿ ಕರುಣೆಯಾಗಿ ಕಾಣದಾಗುವದು. ಯಾರಲ್ಲಿಯೂ ಕಾಣದ ಅಭಿಮಾನ, ರೋಷ, ಕರುಣೆಗಳ ಮಿಶ್ರಣದ ದುರ್ಯೋಧನ 'ಛಲ_ದಂಕ'ನೂ ಅಹುದು ಎಂಬುದು ಭೀಷ್ಮನಿಗೆ ಕೊಡುವ 'ನೆಲಕಿರಿವೆನೆಂದು ಬಗೆದಿರೆ, ಛಲಕಿರಿವೆಂ' 'ಅಖಂಡ ಮಪ್ಪ ಛಲಮನೆ ಪಿಡಿವೆಂ' ಎಂಬ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ. ಕರ್ಣ, ದುಶ್ಶಾಸನರಿಲ್ಲದ ನೆಲವು ಆತನಿಗೆ 'ಪಾಳ್ನೆಲ'. ದುರ್ಯೋಧನನು ಗುಣಾಗ್ರಹಿಯೂ ಅಹುದು. ಶತ್ರುವೀರರಲ್ಲಿಯ ಗುಣಗಳನ್ನು ಮನವಾರೆ ಹೊಗಳುವ ಇವನು ಅಸಾಮಾನ್ಯ ಗುಣಗ್ರಾಹಿ; ಉದಾತ್ತವ್ಯಕ್ತಿ. ಆಜಿರಂಗದಲ್ಲಿ ಮಡಿದ ವೀರ ಬಾಲಕ ಅಭಿಮನ್ಯುವನ್ನು 'ನಿನ್ನಂ ಪೆತ್ತಳ್ ಮೊಲೆವೆತ್ತಳ್' 'ರಣಕ್ಕೆ ಶುಚಿತ್ವ ಮನಪ್ಪುಕೈದೆ'ಯೆಂದೂ, ನಿನ್ನಂತಹ ಮರಣವನ್ನು ಸ್ವಾಗತಿಸುವೆನೆಂದೂ ಕೊಂಡಾಡುವನು. 'ಚಾಪಾಗಮಾ_ಚಾರ್ಯ'ರಾದ ದ್ರೋಣರ ಶವವನ್ನು ನೋಡಿ ಅವರ ಬಿಲ್ಲ ಬಿನ್ನಣವನ್ನು ಹೊಗಳಿ ತ್ರಿಃಪ್ರದಕ್ಷಿಣೆ ಹಾಕುವನು. ಮುಂದೆ ಬರೆಬರೆ ಅಣುಗದಮ್ಮ ದುಶ್ಶಾಸನನ ಕಳೇಬರವನ್ನು ಕಂಡು ಭ್ರಾತೃಹೃದಯವು ಉಕ್ಕೇರುವದು. 'ಜನನೀಸ್ತನ್ಯಮನುಂಡೆನಾಂ ಮೊದಲ್ ಬಳಿಕ ನೀಂ …………' ಹೀಗೆ ಎಲ್ಲದರಲ್ಲಿಯೂ ಮೊದಲಿಗನಾದ ನನ್ನನ್ನು ಬಿಟ್ಟು ಸರತಿ ತಪ್ಪಿಸಿ ಮರಣದಲ್ಲಿ ನೀನು ಮೊದಲಿಗನಾಗುವದು ಯೋಗ್ಯವೇ ಎಂದು ಹಂಬಲಿಸುವನು. ಅಭಿಮಾನವು ಕ್ಷಿಪ್ರದಲ್ಲಿಯೇ ಹೊರಚಲ್ಲಿದುದರಿಂದ ನೋಡಲಾರದೆ ಮುಂದೆ ಹೋಗುವನು. ಮರುಹೆಜ್ಜೆಯನ್ನಿಡುವಷ್ಟರಲ್ಲಿಯೇ ಎದುರಿನಲ್ಲಿ 'ನಿಜೋನ್ನತ ಕೇತು ದಂಡಮಂ' 'ನೆವಿಮ್ಮ' ಮರಣಹೊಂದಿದ ಅಚ್ಚುಮೆಚ್ಚಿನ ಗೆಳೆಯನಾದ ಕರ್ಣನನ್ನು ನೋಡಿದ ಆತನ ಕಣ್ಣಿನಿಂದ ಕಣ್ಣೀರು ಧಾರೆಯಾಗಿ ಹರಿಯುವದು. ಕರ್ಣನು ದುರ್ಯೋಧನನಿಗೆ ಗುರು, ಮಂತ್ರಿ, 'ಆಪ್ತನು' 'ನರ್ಮಸಚಿವ', 'ಆನೆಯಾಳ್', 'ಇರಿವಾಳ್', 'ತಳಿಲಾಳ್', 'ಮೇಳದಾಳ್' ಆಗಿದ್ದನು. 'ನೀನುಳ್ಳೊಡುಂಟು ರಾಜ್ಯಂ। ನೀನುಳ್ಳೊಡೆ ಪಟ್ಟಮುಂಟು, ಬೆಳ್ಗೊಡೆಯುಂಟೆಯ್ ॥ ನೀನುಳ್ಳೊಡುಂಟು ಪೀಳಿಗೆ। ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತಿ॥ ಕರ್ಣನಿಲ್ಲದ ಮನೆ ಶೂನ್ಯ, ಮನ ಶೂನ್ಯ ದುರ್ಯೋಧನನಿಗೆ. ಪಂಪ ಶೋಕದಿಂದ ಕರ್ಣನ ಘನತೆಯನ್ನು ಹೆಚ್ಚಿಸಿರುವನು. 'ನೀನಿರುವ ರಾಜ್ಯದಲ್ಲಿ ಅನೃತ, ಲೋಭ, ಭಯ ಇವು ಇರುವದಿಲ್ಲ. ಸತ್ಯ, ತ್ಯಾಗ, ಪರಾಕ್ರಮಗಳಿಗೆ ನೀನೇ ಮೊದಲಿಗನಾದಿ. 'ವಸುಮಂದ್ವಿಜನ್ಮದಾನದೆ। ಪೋಸ ಜೌವನಮಂ ಸ್ವದಾರ ಸಂತೋಷದೆ ನಿನ್ನಸುವಂ ಪತಿಕಾರ್ಯದೆ ಪರ್ಜಿಸಿದಯ್ಯ……' …………ನಿನಗೆಣೆ ಕಸ। ಪಾಂಗಲಿ ಮೆಯ್ಗಲಿಯುಮಾವನಂಗಾಧಿಪತಿ॥ ಇವೇ ಮೊದಲಾದ ಮಾತುಗಳಿಂದ ದುರ್ಯೋಧನನು ಕರ್ಣನನ್ನು ವಿಶ್ವಮಿತ್ರನನ್ನಾಗಿ 'ಭಾರತದೊಳ್ಕೇವರ್ಣನೆ ಕರ್ಣಂ', 'ನೆನೆವೊಡೆ ಕರ್ಣನಂ ನನೆಯ' ಎಂಬ ಆದಿ ಪಂಪನ ವಾಕ್ಯವನ್ನು ಸ್ಮರಣೆಗೆ ತರುತ್ತಾನೆ. ಹೀಗೆ ದುರ್ಯೋಧನನು ಆದರ್ಶಮಿತ್ರ. ಯುದ್ಧದಲ್ಲಿ, ಮರಣದಲ್ಲಿ ಸಹ ಧರ್ಮ ಬಿಡನು. ಮೂರ್ಛೆ ಹೋದ ಭೀಮನನ್ನು ಗದೆ ತಿರುವಿ ಗಾಳಿ ಹಾಕಿ ಎಬ್ಬಿಸಿದ; ಮರಳಿ ಯುದ್ಧಕ್ಕೆ ಆಹ್ವಾನಿಸಿದ. ಸತ್ಯಯೋಧನಂತೆ ಕೃಷ್ಣೆಯ ಕುವರರ ಐದು ತಲೆಗಳನ್ನು ತಂದ ಅಶ್ವತ್ಥಾಮನಿಗೆ 'ಪಾತಕಿ' ಎಂದು ಕರೆದ. ಒಟ್ಟಾರೆ ರನ್ನನ ದುರ್ಯೋಧನನು ವಜ್ರಮನಸ್ಕ; ಆದರೆ ಹೂವಿನ ಹೃದಯಿ. ಅವನದು ಕಠಿಣವಾದ ಬಹಿರಂಗ ಆದರೆ ಕೋಮಲಾಂಬುಧಿಯಾದ ಅಂತರಂಗ 'ಅರಿಗಳ ಮುಂದೆ ಕುರುಕೇಸರಿಯು ನಿರಾಘದ ನಡುಹಗಲ ಸೂರ್ಯ; ಗೆಳೆಯರ ಎದುರು ಶರದೃತುವಿನ ಆಹ್ಲಾದಕರವಾದ ಹುಣ್ಣಿಮೆಯ ಹಿಮಕರ' 'ಅರಿಗಳಿಗೆ ಅವನು ಬಳಲಿಕೆಯ ಸೆರೆಮನೆ; ಗೆಳೆಯರಿಗೆ ಉಲ್ಲಾಸದ ಅರಮನೆ.' 'ಮರಣದಲ್ಲಿ ನಿಶೆಯ ಗಗಣದ ಧೂಮಕೇತುವಿನಂತೆ ಥಳಥಳಿಸುವನು.' ಹೀಗೆ ದುರ್ಯೋಧನನು ರನ್ನನ ಗಾಂಧಾರಿ ಹೃದಯ ತೊಟ್ಟಿ

ಅಲ್ಲಿ ಸುಯೋಧನನಾಗಿ, ಮಹಾನುಭಾವನಾಗಿ, ಅಮರನಾಗಿ ಪರಿಣಮಿಸಿದ್ದಾನೆ.

ಪಾತ್ರಚಿತ್ರತೆಯು ವೈಶಿಷ್ಟ್ಯ ಪೂರ್ಣವಾಗಿದ್ದರೆ ರನ್ನನ ಕಾವ್ಯಶೈಲಿಯು ಆಕರ್ಷಕವಾಗಿದೆ. "ಶೈಲಿಯು ಕವಿಯ ಚಿಂತನೆಗಳ ಉಡುಪು" ಎಂಬ ಉಕ್ತಿಯಂತೆ ರನ್ನನು ತನ್ನ ವಿಷಯ ಹಾಗು ಇನ್ನಿತರ ವಿಚಾರ, ಅನುಭಾವಗಳನ್ನು ಮನೋಹರವಾದ ಉಡುಪಿನಲ್ಲಿ ಶೇಖರಿಸಿ ಓದುಗರೆದುರಿಗೆ ಇಟ್ಟಿದ್ದಾನೆ. ಆಂಗ್ಲಕವಿ ಮಿಲ್ಟನ್‌ನಂತೆ ಇವನ ಶೈಲಿಯು ಅಭಿಮಾನದಿಂದ ತುಂಬಿದೆ. 'ಫಣಿಪತಿಯ ಫಣಾರತ್ನಮಂ ಪರೀಕ್ಷಿಸಂಗೆರ್ದೆಯುಂಟೇ' ಎಂದು ಹೇಳುತ್ತ ತನ್ನ ಕಾವ್ಯಪರೀಕ್ಷೆಗೆ 'ಎಂಟೆರ್ದೆ' ಬೇಕು ಎಂದು ಹೇಳುವನು. 'ಕಿವಿಯಂ ಜಕ್ಕುಲಿಪ' ಪದಸರಣಿ, ಹಾಸ್ಯ ಭೀಬತ್ಸಗಳಲ್ಲಿಯೂ ಮೊರೆಯುತ್ತಿರುವ ಗಾಂಭೀರ್ಯ, ರಣಭೂಮಿಗೂ ಶುಚಿತ್ವವನ್ನು ಕೊಡುವ ವೈಶಿಷ್ಟ್ಯ, ಶಬ್ದಾಡಂಬರವಿದ್ದರೂ ಪ್ರಸಂಗವಶದಲ್ಲಿ ಬರುವ ಜನಸಾಮಾನ್ಯರಿಗೆ ಯೋಗ್ಯವಾದ ಸಾಧಾರಣ ಪದಗಳ ಬಳಕೆ, ಮಹತ್ವದ ಅರ್ಥಾಲಂಕಾರಗಳ ಹಿತ-ಮಿತ ಮಿಲನ ಇವೆಲ್ಲವುಗಳಿಂದ ರನ್ನನ ಶೈಲಿಯು ಆಹ್ಲಾದದಾಯಕವಾಗಿದೆಯೆನ್ನಲಡ್ಡಿಯಿಲ್ಲ. 'ಅನೀಚಸಾದ್ರೋಹನಾಸಂಚಳನಾಚಂಡಾಳನಾಪಾತಕಿಯನಿರವಂ ನೋಡು ಸಂಕೇಜವಕ್ತ್ರೇ' ಎಂಬಲ್ಲಿಯ ಸಾಮಾನ್ಯ ಪದಗಳು, 'ಧವಳ ಗಜೇಂದ್ರಮುಂ..................' ಎಂಬಲ್ಲಿಯ ಮಂಜುಳ; 'ಇಭಶೈಲಂಗಳನೇರಿಯೇರಿ.................' ಎಂಬಲ್ಲಿಯ ದಟ್ಟಡವಿಯ ಪ್ರವಾಹ, 'ಮುನ್ನಂ ಕೂಡಿ ಮದನೆಡೆಯೊಳೇಂ ಕಿಡಿಸುವರೇ' ಎಂಬಲ್ಲಿಯ ಅಲಂಕಾರವನ್ನು ಕೆಲವು ಉದಾಹರಣೆಗಳೆಂದು ಇಲ್ಲಿ ಕೊಡಬಹುದು. ಆಯಾ ಪದ್ಯಗಳೇ ಪಾತ್ರಗಳ ಭಾವವನ್ನು ಸೂಚಿಸುತ್ತವೆ. ೪–೫ನೆಯ ಸಂಧಿಗಳಲ್ಲಿ ಬರುವ ದುರ್ಯೋಧನನ ದುಃಖ, ಕೋಪ, ತಾಪಗಳ ವರ್ಣನೆಯ ಅನೇಕ ಪದ್ಯಗಳಲ್ಲಿ ಶಬ್ದಗಳು ಭಲ್ಲೆಯಂತೆ ಹೃದಯಭೇದಿಯಾಗಿವೆ. ಪ್ರಸಿದ್ಧ ಸಂಗತಿಗಳನ್ನು ತಿರುತಿರುಗಿ ನುಡಿಯುವದೊಂದು ರನ್ನನ ಪರಿಪಾಠ; ಪಾಂಡವರಿಗೆ ಕೌರವನು ಬಗೆದ ಪಂಚದ್ರೋಹಗಳನ್ನು ಎಷ್ಟು ಸಲ ಹೇಳಿದರೂ ಆತನಿಗೆ ತೃಪ್ತಿಯಿಲ್ಲ. ಈತನ ಶೈಲಿಯಲ್ಲಿ ಪದಬಾಹುಳ್ಯಕ್ಕೆ ಅವಕಾಶವಿಲ್ಲ. ಪ್ರಸಂಗವಶದಲ್ಲಿ ಸಿಂಹವನ್ನು ಸಹ ನಡುಗಿಸುವ ಗಂಭೀರ ಶೈಲಿ—'ರವಿಯಿಂ ಕಾಲಾಗ್ನಿರುದ್ರಂ ಪೊರಮಡುವವೊಲ್...........' 'ಇಂತಹ ಪದ್ಯಗಳಲ್ಲಿ ಕಂಡುಬರುತ್ತದೆ. ಕನ್ನಡ ಪದಗಳೇ ಹೇರಳ. ಆದರೆ ಹುಣಸೇ ಹಣ್ಣಿನ ಹಾಗೆ ಸಂಸ್ಕೃತ ಶಬ್ದಗಳ ಬಳಕೆಯಿದೆ. ಪದಲಾಲಿತ್ಯದ ಪದ್ಯಗಳು ಇವೆ; 'ಗದಾಯುದ್ಧ'ದ 'ನಿಜಜೀವಂ ಪರಲೋಕದೊಳ್........... ಎಂಬ ಪದ್ಯವನ್ನು, ಅಜಿತ ಪುರಾಣದ ......

'ಸಾರದೆ ಸಾರಮುಷ್ಟ ಜಿನಧರ್ಮಮನಾತ್ಮ ಸಾರಮುಷ್ಪದಂ।
ಸಾರಮಿದೆಂದ. ಸಂದಿ ತನಗಪ್ಪುದುಪಂ ತನಗಪ್ಪುದೆಂದುಕೇಳಿ
ದಾರ ವಿಹಾರ ಸೋದರ ಕೈಶೋದರ ಸುಂದರ ದಾರದಾರರೋ।
ದಾರ ವಿಮೋಹದೊಳ್ ತೊಡರ್ದ ದಾರುಣ ದುಃಖಮನೆಯ್ದು
ದಿರ್ಘಮೋ ।।'

ಎಂಬ ನುಡಿಯನ್ನು ಮಾದರಿಗಾಗಿ ಕೊಡಬಹುದು. ನವರಸಗಳಿಂದ ಕೂಡಿದ ಪದ್ಯಗಳನ್ನು ಯಥೋಚಿತವಾಗಿ ತಂದಿದ್ದಾನೆ. ವೀರರಸಕ್ಕೆ ಪೋಷಕವಾಗುವಂತೆ ಉಳಿದ ರಸಗಳ ವರ್ಣನೆಯಿದೆ. ಶಬ್ದಸೌಷ್ಟವನೊದಲಾದವುಗಳಿಗೆ 'ಕಬ್ಬಿನ ಮೇಲೆ ಜೇನಿಟ್ಟಂತೆ, ಆತನ ಅಪ್ರತಿಮ 'ಕಲಾಭಿಜ್ಞತೆ ಉಪಮಾತೀತವಾದ ವಾಗ್ಝರಿ'ಯಿಂದ ಮತ್ತಿಷ್ಟು ಸವಿ ಬಂದಿದೆ. 'ಗದಾಯುದ್ಧ'ವು ಗುಣವಿಶೇಷಗಳಿಂದ ಕೂಡಿದ ಇಂತಹ ಶೈಲಿಯಿಂದ ಸರಸ್ವತಿಭಾಂಡಾರದ ಶ್ರೇಷ್ಠಕಾವ್ಯವಾಗಿದೆ. ನಾಡಿಗೆ ಇಂತಹ ಈ ಕಾವ್ಯವನ್ನು ನೀಡಿದ ರನ್ನನು ಪುನೀತನೆಂದು ಹೇಳದಿರೆವು.

ಪ್ರಜಾರಾಜ್ಯ ದಿನ

(ಶ್ರೀ. ವ್ಹಿ. ಸಿ. ಪಾವಟೆ, ನಿವೃತ್ತ ಪ್ರಿನ್ಸಿಪಾಲರು, ಕೃಷಿ ಮಹಾವಿದ್ಯಾಲಯ ಧಾರವಾಡ ಅವರ ಭಾಷಣ.)

ಸ್ವಾತಂತ್ರ್ಯದಿನದ ಮೂರನೆಯ ವರ್ಧಂತಿ ಉತ್ಸವಕ್ಕಾಗಿ ಈ ದಿವಸ ತಾವೆಲ್ಲರೂ ನನ್ನನ್ನು ಇಲ್ಲಿಗೆ ಬರಮಾಡಿಕೊಂಡು ಮರ್ಯಾದೆ ಮಾಡಿದ್ದಕ್ಕಾಗಿ ನಾನು ಈ ಸಂಸ್ಥೆಯ ಅಧ್ಯಾಪಕ ವರ್ಗಕ್ಕೂ ಮತ್ತು ಮುಖ್ಯ ಅಧ್ಯಾಪಕರಾದ ಶ್ರೀ. ಹಂದ್ರಾಳ ಅವರಿಗೂ ತುಂಬಾ ಋಣಿಯಾಗಿದ್ದೇನೆ.

ತಮ್ಮ ಕಾರ್ಯಕ್ರಮದ ಪ್ರಕಾರ ಇದೀಗ ನಾನು ಧ್ವಜ ಏರಿಸುವ ಕಾರ್ಯ ನೆರವೇರಿಸಿದೆನು. ಈ ಧ್ವಜವು ನಮ್ಮದು; ನಮ್ಮ ಪೂರ್ಣ ತಂತ್ರ ಸ್ವಾತಂತ್ರ್ಯದ ಕುರುಹು. ಆದ್ದರಿಂದ ಇದು ಒಳ್ಳೆಯ ಅಭಿಮಾನದ ಧ್ವಜವು. ನಮ್ಮ ಪ್ರಾಣಕ್ಕಿಂತಲೂ ಹೆಚ್ಚು ದಕ್ಷತೆಯಿಂದ ನಾವೆಲ್ಲರೂ ಇದನು ರಕ್ಷಿಸಬೇಕು. ಇದು ಸಹಜ ಸಿಕ್ಕ ಧ್ವಜವಲ್ಲ. ಸುಮಾರು ೨೦೦ ವರ್ಷ ಗುಲಾಮರಾಗಿ ಉಳಿದು ೯೦ ವರ್ಷ ಸ್ವಾತಂತ್ರ್ಯದ ಸಲುವಾಗಿ ಅನೇಕ ರೀತಿಯಿಂದ ಕಷ್ಟಬಟ್ಟು ಗಳಿಸಿದ ಸ್ವರಾಜ್ಯದ ಧ್ವಜವಿದು. ೧೮೫೭ನೆಯ ಇಸ್ವಿಯಿಂದ ೧೯೪೭ನೆಯ ಇಸ್ವಿಯ ವರೆಗೆ ಹೋರಾಡಿ ೧೫-೮-೪೭ನೆಯ ದಿವಸ. ಹಿಂದುಸ್ಥಾನವು ಸ್ವತಂತ್ರ ರಾಷ್ಟ್ರವಾಯಿತು. ಆದರೆ ನಮ್ಮ ಆಡಳಿತೆಯ ಪುನರ್ಘಟನೆಯಾಗಿ ಸರ್ವತಂತ್ರ ಸ್ವಾತಂತ್ರ್ಯದ ಪ್ರಜಾಪ್ರಭುತ್ವವು ೨೬-೧-೧೯೫೦ನೆಯ ಇಸ್ವಿಯಲ್ಲಿ ಪ್ರೋಷಿಸಲ್ಪಟ್ಟಿತು. ಇದು ಬಹಳ ಪವಿತ್ರವಾದ ದಿನವು; ದೊಡ್ಡ ಹಬ್ಬಗಳಲ್ಲಿ ದೊಡ್ಡ ಹಬ್ಬದ ದಿನವಿದು. ೧೯೨೯ನೆಯ ಇಸ್ವಿಯ ಜನೆವರಿ ೨೬ನೆಯ ತಾರೀಖಿನ ದಿವಸ ಕಾಂಗ್ರೆಸ್ಸು ವಿದೇಶೀಯರನ್ನು ಹೊಡೆದೋಡಿಸಿ ಸ್ವತಂತ್ರರಾಗಬೇಕೆಂದು ನಿರ್ಧರಿಸಿದ ದಿನ. ಆದ್ದರಿಂದ ೧೯೫೦ನೆಯ ಇಸ್ವಿಯ ಜನೇವರಿ ೨೬ನೆಯ ದಿನಾಂಕವು ಪ್ರಜಾಪ್ರಭುತ್ವದ ದಿನವೆಂದು ಆಚರಿಸಲ್ಪಟ್ಟಿತು. ಈ ಹಿನ್ನೆಲೆಯನ್ನು ಅರಿತು ಭಾರತ ಪ್ರಜಾರಾಜ್ಯ ದಿನದ ಮಹತ್ವವನ್ನು ತಿಳಿಯಬೇಕು. ಭರತಖಂಡದಲ್ಲಿ ಅಲ್ಲದೆ ಉಳಿದ ಎಲ್ಲ ದೇಶಗಳಲ್ಲಿಯೂ ಈ ದಿವಸ ವರ್ಧಂತಿ ಉತ್ಸವವನ್ನು ನೆರವೇರಿಸುತ್ತಿರುವರು. ಈ ವರ್ಷದ ವರ್ಧಂತಿಯು ಮೂರನೆಯ ವರ್ಷದ ವಾರ್ಷಿಕ ಉತ್ಸವವಾಗಿದೆ. ಜಗತ್ತಿನ ತುಂಬೆಲ್ಲ ಭಾರತೀಯರು ಈ ದಿನವನ್ನು ಭಾರತ ಪ್ರಜಾದಿನವೆಂದು ಹೊಸ ಹುಮ್ಮಸದಿಂದ ಆಚರಿಸುತ್ತಿರುವರು. ನಮ್ಮ ಜನರಿಂದ ರಾಜ್ಯಘಟನೆ, ಕಾಯದೆ ಕಾನೂನ ರಚಿಸಿ ಎಲ್ಲ ಸಣ್ಣ ದೊಡ್ಡ ಕೆಲಸಗಳಲ್ಲಿ ನಮ್ಮವರೇ ಕೆಲಸ ಮಾಡಹತ್ತಿ ಮೂರು ವರ್ಷ ಕಳೆದು ಇಂದಿನಿಂದ ನಾಲ್ಕನೆಯ ವರ್ಷವು ಆರಂಭವಾಗುವದು. ಈ ಸ್ವಾತಂತ್ರ್ಯವನ್ನು ಅನುಭೋಗಿಸಲು ತೀರ ಹೊಸಬರಿದ್ದರೂ ಪಂಡಿತ ಜವಾಹರಲಾಲ ನೆಹರು ಅವರ ಅದ್ವಿತೀಯನೇತೃತ್ವದ ಕೆಳಗೆ ಸರ್ವಾಂಗ ಸುಂದರವಾಗಿ ನಾವು ನಮ್ಮ ರಾಜ್ಯಪಾಲನೆ ಮಾಡುತ್ತಿರುವೆವೆಂದು ಒಳ್ಳೇ ಅಭಿಮಾನದಿಂದ ಹೇಳಬೇಕಾಗಿದೆ. ಈ ರೀತಿಯಿಂದ ನಮ್ಮ ರಾಜ್ಯವ್ಯವಸ್ಥೆಯು ನಮ್ಮಲ್ಲಿ ನಡೆಯಬಹುದೆಂದು ಯಾರೂ ನಂಬಿದ್ದಿಲ್ಲ. ಈ ನಮ್ಮ ಸಂಘ ಸಂಸ್ಥೆಯನ್ನು ನೋಡಿ ಪರದೇಶಗವರು ಕೂಡ ಆಶ್ಚರ್ಯಚಕಿತರಾಗಿದ್ದಾರೆ. ನಮ್ಮ ನಾಯಕರನ್ನು ಬಹಳ ಪ್ರಶಂಶಿಸುತ್ತಾರೆ. ಎಲ್ಲ ತರದ ಸುಧಾರಣೆ ಮಾಡಲು ನಮ್ಮ ಕೇಂದ್ರ ಮತ್ತು ರಾಜ್ಯ ಸರಕಾರದವರು ಹಗಲಿರುಳು ವಿಶ್ವಪ್ರಯತ್ನ ಮಾಡುತ್ತಿರುವರೆಂದು ಎದೆ ತಟ್ಟಿ ಹೇಳಬಹುದು. ನಮ್ಮಲ್ಲಿ ಅನೇಕ ಧರ್ಮ ಅಥವಾ ಪಂಥಗಳಿದ್ದರೂ ರಾಜ್ಯಸೂತ್ರ ನಡೆಸುವದರಲ್ಲಿ ಯಾವ ಧರ್ಮ ಅಥವಾ ಪಂಥ ಅಡ್ಡಿ ಬರಲಾರದು. ಪ್ರಜಾಪ್ರಭುತ್ವವಿರುವ ದೇಶದವರಂತೆ ನಮ್ಮಲ್ಲಿಯೂ ಸರಿಸಮಾನತ್ವ, ಸ್ವಾತಂತ್ರ್ಯ, ಮತ್ತು ಪರಸ್ಪರ ಬಂಧುತ್ವಗಳು ನೆಲೆಗೊಂಡಿವೆ. ೨೧ ವರ್ಷ ವಯಸ್ಸಿಗೆ ರಾಜ್ಯಘಟನೆಯ ಜನರನ್ನು ಚುನಾಯಿಸಲ್ಪಡುವ ಅಧಿಕಾರವಿದೆ. ಈ ಪ್ರಕಾರ ಚುನಾಯಿತರಾಗಿಯೇ ನಮ್ಮ ದೇಶ

ಚಲ್ಲಿ ಮತ್ತು ನಮ್ಮ ದೇಶದ ಸಂಗಗಳಿಂದ ಎಲ್ಲ ರಾಜ್ಯಗಳಲ್ಲಿ ಅಧಿಕಾರ ಪಥಕರಿಸಿರುವರು ನಮ್ಮೆಲ್ಲರ ಹಿತದ ಸಲುವಾಗಿಯೇ ನಮ್ಮ ಜನರು ನಮ್ಮ ದೇಶವನ್ನು ಆಳುತ್ತಿರುವವರಿಂದ ನಾವೆಲ್ಲರೂ ಪರಸ್ಪರ ಸಹಾಯ ಸಲಹೆಗಳನ್ನು ನೀಡಿ ನಮ್ಮ ರಾಜ್ಯವು ಚಿರಕಾಲ ಸುಗಮವಾಗಿ ಸಾಗುವಂತೆ ಮಾಡುವದು ನಮ್ಮೆಲ್ಲರ ಅಧ್ಯ ವ್ಯಕ್ಷ. ರಾಜ್ಯಾರೂಢರಾದ ನಮ್ಮವರು ನಮ್ಮ ಎಲ್ಲ ತರದ ಹಿತದ ಸಲುವಾಗಿ ಹಗಲಿರುಳು ಚಿಂತಿಸುತ್ತಿರುವರಲ್ಲದೆ ಎಲ್ಲತರದ ಪ್ರಯತ್ನ ಮಾಡುತ್ತಿರುವರು.

ಈ ಪ್ರಕಾರವಾಗಿ ನಾವು ಸ್ವತಂತ್ರ್ಯರಾಗಿದ್ದರೂ ನಾವು ಬೆಳೆಯುವ ಆಹಾರವು ನಮಗೆ ಸಾಕಾಗುವದಿಲ್ಲ. ನಮ್ಮ ದೇಶದಲ್ಲಿ ಪ್ರತಿ ವರ್ಷ ಸುಮಾರು ೪೫ ಲಕ್ಷ ಟನ್ ಆಹಾರದ ಕೊರತೆಯಾಗುತ್ತದೆ. ಮುಂಬಯಿ ರಾಜ್ಯದಲ್ಲಿ ೭ ಲಕ್ಷ ಟನ್ ಆಹಾರದ ಕೊರತೆಯಾಗುತ್ತದೆ. ಈ ಕೊರತೆಯು ನಿಜವಾಗಿ ಕೊರತೆಯನ್ನುವಷ್ಟು ದೊಡ್ಡದಲ್ಲ. ಈಗ ಹೊರಡುವ ಉತ್ಪನ್ನದಲ್ಲಿ ೧೦೦ಕ್ಕೆ ೧೦ರಷ್ಟು ಹೆಚ್ಚಿಸಿದಲ್ಲಿ ನಮ್ಮ ಅಡಚಣೆಯು ಹೇಳ ಹೆಸರಿಲ್ಲದೆ ಹೊರಟು ಹೋಗುವದು. ಕೇವಲ ಸುಧಾರಿಸಿದ ಬೀಜ ಉಪಯೋಗಿಸುವದರಿಂದ ನಮ್ಮ ಉತ್ಪನ್ನವು ಈಗಿನಕಿಂತ ೧೦ರಂತೆ ಹೆಚ್ಚಾಗುವದು; ಮೇಲಾಗಿ ಬೆಳೆಯ ಕ್ಷೇತ್ರವನ್ನು ಹೆಚ್ಚಿಸಬಹುದು. ನಮ್ಮ ಒಕ್ಕಲತನವು ಉಳಿದ ಮುಂದುವರೆದ ದೇಶಗಳ ಒಕ್ಕಲತನದೊಡನೆ ತುಲಿನೆಮಾಡಿದಲ್ಲಿ ಅವರ ಒಂದು ಎಕರೆಯ ಸರಾಸರಿ ಉತ್ಪನ್ನವು ನಮ್ಮ ೫ ಎಕರೆ ಸರಾಸರಿ ಉತ್ಪನ್ನಕ್ಕಿಂತ ಹೆಚ್ಚಾಗುವದು. ನಮ್ಮಲ್ಲಿ ಒಕ್ಕಲುತನವು ಅಪೂರ್ಣ ತತ್ವದ ಮೇಲೆ ಸಾಗಿದೆ. ವಿಚಾರ ಮಾಡಿ ಹೆಚ್ಚು ಲಾಭವಾಗುವಂತೆ ಒಕ್ಕಲತನ ಮಾಡುವ ಜನರು ಬಹಳ ಕಡಿಮೆ. ಸರಿಯಾದ ಸಾಗುವಳಿ ಮಾಡುವದಿಲ್ಲ. ಸಾಕಷ್ಟು ಗೊಬ್ಬರ ಹಾಕುವದಿಲ್ಲ. ಸುಧಾರಿಸಿದ ಬೀಜ ಬಿತ್ತುವದು ಅಪರೂಪ. ಜಪಾನದಲ್ಲಿ ೧೦೦ಕ್ಕೆ ೧೦೧ರಷ್ಟು ಸುಧಾರಿಸಿದ ಭತ್ತದ ಬೀಜ ಉಪಯೋಗಿಸುವರು. ನಮ್ಮಲ್ಲಿ ಸುಮಾರು ೧೦೦ಕ್ಕೆ ೫ರಷ್ಟು ಸುಧಾರಿಸಿದ ಭತ್ತದ ಬೀಜ ಉಪಯೋಗಿಸುವರು. ಜಪಾನದಲ್ಲಿ ಸುಧಾರಿಸಿದ ಗಳೇದ ಸಾಮಾನುಗಳನ್ನು ಉಪಯೋಗಿಸಿ ಸರಿಯಾಗಿ ಭತ್ತ ಬಿತ್ತುವ ಭೂಮಿ ಸಾಗುಮಾಡುವರು. ತಮ್ಮಲ್ಲಿಯೇ ದೊರೆಯುವ ಗೊಬ್ಬರವನ್ನೆ ವಿಶೇಷವಾಗಿ ಉಪಯೋಗಿಸುವರು.

೧೦೦ಕ್ಕೆ ೪೭ರಂತೆ ನಾಯಿಟ್ರೋಜನ್ ಕಚರಾ ಗೊಬ್ಬರದಿಂದ ಉಪಯೋಗಿಸುವರು. ಗೊಬ್ಬರದ ಪ್ರಕಾರ ಕೆಳಗಿನ ಕೋಷ್ಟಕದಲ್ಲಿ ತೋರಿಸಿದೆ.

ಪ್ರಕಾರ	ನಾಯಟ್ರೋ.	ಫಾಸ್ಫ	ಪೊಟ್ಯಾಶ	ಶರಾ
೧. ಕಚರಾ ಗೊಬ್ಬರ	೬೨%	೬೬%	೬೪%	ಬಿತ್ತುವ
೨. ಹೇಸಿಗೆ ಗೊಬ್ಬರ	೧ %	೮%	೧೦%	ಮೊದಲು
೩. ಹಸರೆಲೆ ಗೊಬ್ಬರ	೫%	೩%	೬%	
೪. ಬೂದಿ, ತಗಣಿ, ಕಸ ಮೊದಲಾದದ್ದು	೧೪%	೧೫%	೧೬%	
	೮೨%	೯೨%	೯೬%	
ಪೌಷ್ಟಿಕ ಗೊಬ್ಬರ	೧೮	೮	೪	ಮೇಲ ಗೊಬ್ಬರ

ಶುದ್ಧಬೀಜ, ಸಾಕಷ್ಟು ಗೊಬ್ಬರ, ಸರಿಯಾಗಿ ಸಾಗು ಮಾಡಿದ ಭೂಮಿ ಸಾಕಷ್ಟು ನೀರು ಸಿಕ್ಕಲ್ಲಿ ಪರಮಾವಧಿ ಉತ್ಪನ್ನ ಹೊರಡುವದು. ರೋಗಾದಿಗಳ ಮೂಲಕ ೧೦೦ಕ್ಕೆ ೧೦ರಂತೆ ಉತ್ಪನ್ನ ಕಡಿಮೆಯಾಗುತ್ತದೆ. ಯೋಗ್ಯ ಕಾಲಕ್ಕೆ ಔಷಧೋಪಚಾರ ಮಾಡಿದಲ್ಲಿ ಹೀಗಾಗದು. ಒಕ್ಕಲತನದ ವಿಷಯದಲ್ಲಿ ಜಪಾನವು ಮುಂದುವರೆದಿದ್ದು ನೆನಪಿನಲ್ಲಿಡತಕ್ಕ ಸಂಗತಿಗಳನ್ನು ಮುಂದೆ ಕೊಟ್ಟಿದೆ.

(೧) ಔದ್ಯೋಗಿಕ ದೇಶವೆಂದು ತಿಳಿಯಲ್ಪಟ್ಟರೂ ಒಕ್ಕಲತನದಲ್ಲಿ ಎರಡನೆಯ ದೇಶಕ್ಕಿಂತ ಕಡಿಮೆ ಇಲ್ಲ.

(೨) ೧೯೩೬ – ೩೭ನೆಯ ಸಾಲಿನಲ್ಲಿ ಜಪಾನದ ಭತ್ತದ ಉತ್ಪನ್ನವು ಜಗತ್ತಿನಲ್ಲಿಯೇ ಹೆಚ್ಚಿಗಿತ್ತು. (೫೩೦೦ ಪೌಂಡು)

(೩) ಕೆಲವು ತೃಣ ಧಾನ್ಯ ಬೆಳೆಗಳು ಅಮೇರಿಕೆಯ ದುಪ್ಪಟ್ಟು ಉತ್ಪನ್ನವಾಗಿವೆ.

(೪) ಜಪಾನವು ಸುಧಾರಿಸಿದ ಒಕ್ಕಲುತನದಿಂದ ಪರಮಾವಧಿ ಉತ್ಪನ್ನ ತೆಗೆಯಲು ಸಾಧ್ಯವಿದೆಯೆಂದು ಸಿದ್ಧಮಾಡಿ ತೋರಿಸಿರುತ್ತದೆ.

(೫) ಸ್ಥಾನಮಾನಕ್ಕನುಸರಿಸಿ ಅನೇಕ ಸಂಶೋಧನೆಯ ಸ್ಥಳಗಳಿವೆ. ಬೇರೆ ಬೇರೆ ಭಾಗದ ಬೆಳೆಯ ಸಂಶೋಧನೆಯು ಕೆಲಸ ಬೇರೆ ಬೇರೆಯಾಗಿರುತ್ತದೆ. ಪ್ರತಿ ೫ ಮೈಲಿಗೊಂದು ಸಂಶೋಧನೆಯ ಕೇಂದ್ರವಿರುತ್ತದೆ.

(೬) ಸಹಕಾರ ಸಾಧನೆ ಬಲವಾಗಿರುತ್ತದೆ. ಇದಲ್ಲದೆ ಪ್ರಚಾರ ಕೆಲಸಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲಿ ಒಕ್ಕಲುತನವನ್ನು ಶಾಸ್ತ್ರೀಯ ದೃಷ್ಟಿಯಿಂದ ಬಲ್ಲ ತಜ್ಞನಿರುತ್ತಾನೆ. ಒಕ್ಕಲಿಗರ ಅಡಚಣೆಗಳನ್ನು ಸಂಶೋಧನೆಗಳನ್ನು ಮಾಡುವವರಿಗೆ ತಿಳಿಸುವರು. ಸಂಶೋಧನೆಮಾಡಿದ ಬೀಜ, ಗೊಬ್ಬರ, ಔಷಧ ಒಕ್ಕಲಿಗರಿಗೆ ತಿಳಿಸಿಕೊಟ್ಟು ಕೂಡಲೇ ಅಮಲಿನಲ್ಲಿ ತರುವರು.

ನಮ್ಮಲ್ಲಿ ಇತ್ತಿತ್ತಲಾಗಿ ಕೆಲವು ಕೃಷಿ ಪಂಡಿತರು ಹೊರಡಹತ್ತಿರುವರು. ಅವರ ಉತ್ಪನ್ನವು ಆಶ್ಚರ್ಯ ಹುಟ್ಟಿಸುವಷ್ಟಾಗಿದೆ. ಭತ್ತದ ಉತ್ಪನ್ನ ನಮ್ಮಲ್ಲಿ ಸರಾಸರಿ ೧೨೮೦ ಪೌಂಡ ಇದ್ದರೂ ಕೃಷಿ ಪಂಡಿತರು ೧೫೬೮೦ ಪೌಂಡಿನ ವರೆಗೆ ತೆಗೆದಿರುವರು. ಇದೇ ಪ್ರಕಾರ ಭತ್ತ ಬೆಳೆಯುವವರೆಲ್ಲ ಉತ್ಪನ್ನ ಹೆಚ್ಚಿಸಿದಲ್ಲಿ ಆಹಾರದ ಕೊರತೆಯು ಅಡಗುವದು. ಜೋಳದ ಸರಾಸರಿ ಉತ್ಪನ್ನ ೩೨೫ ಪೌಂಡ ಇದ್ದರೂ ೬೮೬೧ ಪೌಂಡು ಜೋಳ ತೆಗೆದಿರುವರು. ಇದೇ ಪ್ರಕಾರ ಕಡಲೆ, ಗೋದಿ ಸಜ್ಜೆ, ಬಟಾಟೆ ಮೊದಲಾದ ಬೆಳೆಗಳಲ್ಲಿ ಸುಧಾರಿಸಿದ ಪದ್ಧತಿಗನುಸರಿಸಿ ೧೦-೧೨ ಪಟ್ಟು ಹೆಚ್ಚಿಗೆ ಉತ್ಪನ್ನ ತೆಗೆದ ಕೃಷಿ ಪಂಡಿತರಿದ್ದಾರೆ. ಇದೇ ಪ್ರಕಾರ ನಮ್ಮಲ್ಲಿ ಒಕ್ಕಲಿಗರು ಸುಧಾರಿಸಿದ ಪದ್ಧತಿ ಅನುಸರಿಸಿ ಉತ್ಪನ್ನ ಹೆಚ್ಚಿಸಿದಲ್ಲಿ ನಮ್ಮ ದೇಶಕ್ಕೆ ಸಾಕಾಗಿ ಎರಡನೇ ದೇಶಕ್ಕೆ ಕಾಳುಕಡಿ ಕಳಿಸಿಕೊಡಲು ಸಮರ್ಥರಾಗುವೆವು.

ಇಂದಿನ ಕಾರ್ಯಕಲಾಪಗಳಿಗೆ ನನ್ನನ್ನು ಕರೆಯಿಸಿ ಸತ್ಕರಿಸಿದ್ದಕ್ಕಾಗಿ ನಿಮ್ಮೆಲ್ಲರಿಗೆ ಮತ್ತೊಮ್ಮೆ ಧನ್ಯತೆಗಳನ್ನರ್ಪಿಸುವೆ.

ಸುದ್ದಿ

ಧಾರವಾಡ ಜನೆವರಿ ೨೬. ಪ್ರಜಾರಾಜ್ಯೋತ್ಸವವನ್ನು ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಒಳ್ಳೇ ಉತ್ಸಾಹದಿಂದ ಆಚರಿಸಲಾಯಿತು. ಅಂದು ಮುಂಜಾನೆ ೮ ಘಂಟೆಗೆ ಕುಮಾರಿ ಸರೋಜನಿ ಮಹಿಷಿ ಎಂ. ಎ. ಇವರ ಹಸ್ತದಿಂದ ಧ್ವಜಾರೋಹಣವಾಯಿತು. ರಾಷ್ಟ್ರಗೀತೆಯ ನಂತರ ಅತಿಥಿಗಳು ಸ್ತ್ರೀಯರ ಸ್ಥಾನಮಾನಗಳು, ದೇಶಸೇವೆಯ ರಂಗದಲ್ಲಿ ಸ್ತ್ರೀಯರ ಕರ್ತವ್ಯಗಳ ಬಗ್ಗೆ ಮಾತನಾಡಿದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಜನೇವರಿ ೩೦ನೆಯ ದಿನ ಮಹಾತ್ಮಾಜೀಯವರ ಪುಣ್ಯತಿಥಿಯನ್ನು ನಾಲ್ಕು ಗಂಟೆಗೆ ಕುಮಾರಿ ಸರೋಜನಿ ಶಿರಸಿ ಎಂ. ಎ. ಕರ್ನಾಟಕ ಕಾಲೇಜ ಲೈಕ್ಚರರ ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಅಂದು ಮಹಾತ್ಮಾಜೀಯವರ ವಿಧಾಯಕ ಕಾರ್ಯಕ್ರಮಗಳ ಬಗ್ಗೆ ಕಾಲೇಜದ ಶಿ. ವಿದ್ಯಾರ್ಥಿನಿಯರ ಲೇಖನ ವಾಚನ ವಾಯ್ತು. ಸ್ಕೂಲಿನ ಬಾಲಿಕೆಯರ ಹಾಡುಗಳು ಆದ ಬಳಿಕ ಮುಖ್ಯ ಅತಿಥಿಗಳು ಮಹಾತ್ಮಾಜಿಯವರ ಬಗೆ ಗಾಂಧೀಜಿಯವರು ಶಿಕ್ಷಣ ತಜ್ಞರೂ, ಶಾಸ್ತ್ರಕಾರರೂ, ಶ್ರೇಷ್ಠ ಸಾಹಿತಿಗಳೂ, ರಾಜಕಾರಣ ಪಟುಗಳೂ ಹೌದು' ಎಂಬವನ್ನು ಅನೇಕ ಉದಾಹರಣೆಗಳಿಂದ ತಿಳಿಸಿದರು. ನಂತರ "ರಘುಪತಿ ರಾಘವ" ಭಜನೆಯೊಂದಿಗೆ ಸಭೆಯು ವಿಸರ್ಜನವಾಯಿತು.

ಒನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ,

ಫೆಬ್ರುವರಿ ೧೯೫೨

ಲೇಖಕರು:— **ವಿ. ಕೆ. ನಂದಗಾಂವ**

ಬೆಲೆ ೦-೧೨-೦

ಮಾನ್ಯರಾದ ಎಸ್. ಎನ್. ಅಂಗಡಿ, ಪ್ರೊ ರೆಡ್ಡಿ, ಪ್ರೊ. ಜೋಶಿ, ಪ್ರೊ. ಇಂಚಲ, ಪ್ರೊ. ವರ್ಟಿ, ಪ್ರೊ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: **ನಿ. ವಿ. ನಂದಗಾಂವ**

೬೧೯ ಮಾರುತಗಲ್ಲಿ, ಬೆಳಗಾಂವ

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು :— 'ಮಹಾದೇವಿಯಕ್ಕ
ಬರೆದವರು :— ಶ್ರೀ. ಮಲ್ಲಿಕಾರ್ಜುನ ಶಿ. ಲಠ್ಠೆ
ಪ್ರಕಾಶಕರು :— ಶ್ರೀ. ಬಿ. ಜಿ. ಇಂಗಳೇಶ್ವರ
ಪುಟಗಳು' ೩೪ ಬೆಲೆ ೦—೮—೦

ಗುಣಶೀಲೆ, ತತ್ವಜ್ಞಾನಿ, ಅನುಭಾವಿ, ಮತ್ತು ವೈರಾಗ್ಯನಿಧಿಯಾದ ಮಹಾಶಿವಶರಣೆ ಮಹಾದೇವಿಯಕ್ಕನ ಉಜ್ವಲ ಜೀವನವನ್ನು ನಾಟಕರೂಪವಾಗಿ ಇಲ್ಲಿ ಚಿತ್ರಿಸಿದ್ದಾರೆ. ಅಕ್ಕನ ತುಂಬು ಜೀವನವು ಓದುವವರಿಗೂ, ಆಡುವವರಿಗೂ ಮನದಟ್ಟಾಗಿ ಹೃದಯಕ್ಕೆ ತಟ್ಟುವವರಲ್ಲಿ ಏನಾಶ್ಚರ್ಯ! 'ಕಾವ್ಯೇಷು ನಾಟಕಂ ರಮ್ಯಂ' ಎಂಬುದನ್ನು ಮನಗಂಡೇ ಲೇಖಕರು ನಾಟಕಕಾರರಾಗಿ ನಾಟಕರೂಪದಲ್ಲಿ ಅಕ್ಕನ ಜೀವನವನ್ನು ಬರೆದದ್ದು ಶ್ಲಾಘನೀಯ. ವಚನಗಳೇ ಸಂಗೀತ ಬಿಂದುಗಳಾಗಿ; ಶಿವಶರಣರ ವಚನಗಳೇ ಪ್ರಭಾವಯುತ ಮಂತ್ರಗಳಾಗಿ, ಶ್ರೀಶೈಲದ ನಿಸರ್ಗಸೌಂದರ್ಯದ ವರ್ಣನೆಯೇ ಆಕರ್ಷಕ ಸನ್ನಿವೇಶವಾಗಿ ಓದುಗರ ಹಾಗೂ ಪ್ರೇಕ್ಷಕರ ಹೃದಯಕ್ಕೆ ಆಕರ್ಷಕವಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ.

—ಪ್ರ. ಸಂ.

ಪುಸ್ತಕದ ಹೆಸರು :— " ಸ್ವರ್ಗದೋಲೆಗಳು "
ಬರೆದವರು :— ಶ್ರೀ. ಸಿಂಪಿ ಲಿಂಗಣ್ಣ
ಸಂಪಾದಕರು : ಶ್ರೀ. ಬುರ್ಲಿ ಬಿಂದು ಮಾಧವ
ಪುಟಗಳು—೧೩೮ ಬೆಲೆ—೧—೪—೦

ಕನ್ನಡ ನಾಡಿನಲ್ಲಿ ಜನಿಸಿ ತಮ್ಮ ಕವಿತ್ವ ಶಕ್ತಿಯಿಂದ, ವೀರವೃತ್ತಿಯಿಂದ, ಕಲಾನೈಪುಣ್ಯದಿಂದ, ಸಾಹಿತಿಕ ಪೃಷ್ಟಿಯಿಂದ, ರಾಷ್ಟ್ರೀಯ ಭಾವನೆಯಿಂದ ನಾಡದೇವಿಯ ಸೇವೆಯನ್ನು ಮಾಡಿ ಮಡಿದು ಸ್ವರ್ಗವಾಸಿಗಳಾದ ಆ ಕನ್ನಡ ಕವಿಗಳು, ಸಾಹಿತಿಗಳು, ಕಲಾಕೋವಿದರು, ವೀರರು, ರಾಷ್ಟ್ರಭಕ್ತರು ಸ್ವರ್ಗದಲ್ಲಿ ಕುಳಿತುಕೊಂಡು ಇಂದಿನ ಕನ್ನಡಿಗರಿಗೆ ತಮ್ಮ ಕಾರ್ಯವಿಶೇಷವನ್ನೂ ಇಂದು ನಾವು ಮಾಡಬೇಕಾದ ಕರ್ತವ್ಯವಾವುದೆಂಬುದನ್ನು ಕುರಿತು ಓಲೆಗಳನ್ನು ಬರೆದಂತೆ ಕಲ್ಪಿಸಿಕೊಂಡು ಆ ಓಲೆಗಳನ್ನು ಇಲ್ಲಿ ಈ ಗ್ರಂಥದಲ್ಲಿ ಪ್ರಕಟಿಸಲಾಗಿದೆ. ಸ್ವರ್ಗದಿಂದ ಇಳಿದು ಬಂದ ಈ ಓಲೆಗಳಿಂದ ಇಂದಿನವರಿಗೆ ತಮ್ಮ ನಾಡಿನ ವಿವಿಧ ಮುಖ ಘನತೆಯು ಸ್ಮರಣೆಗೆ ಬರುವುದಲ್ಲದೆ ಅದರ ಬೆಳಕಿನಲ್ಲಿ ಇಂದಿನ ಕಗ್ಗತ್ತಲೆಯನ್ನು ಓಡಿಸುವ ಧೀರತೆಯೂ, ಜಾಣತನವೂ ಪ್ರಾಪ್ತವಾಗಬಹುದು. ವೈವಿಧ್ಯವಿದೆ ವಿಷಯದಲ್ಲಿ; ಶೈಲಿಯು ಸುಲಭವಾದರು ಸುಂದರವಾಗಿದೆ. ಸ್ವರ್ಗದೋಲೆಗಳು ಸ್ವರ್ಗಕ್ಕೆ ಸೋಪಾನಗಳಾಗಿ ಪರಿಣಮಿಸುವವೆಂದು ಹೇಳಬಹುದಲ್ಲವೆ ?

ಪ್ರ. ಸಂ.

ಪುಸ್ತಕದ ಹೆಸರು:—ಹಳ್ಳಿಯ ಮಹಾತ್ಮೆ
ಲೇಖಕರು:—ಸಿಂಪಿ ಲಿಂಗಣ್ಣ
ಪ್ರಕಾಶಕರು:—ಶ್ರೀ. ಶಿವಲಿಂಗಪ್ಪ ಗುಣಕಿ,
ಅಥಣಿ
ಪುಟಗಳು: —೫೬

ಹಳ್ಳಿಯ ಆದರ್ಶ ಶಿಕ್ಷಕರೊಬ್ಬರ ಜೀವನ ಚರಿತ್ರೆಯಿದು. ದಿ| ರೇವಣ ಶಿದ್ದಪ್ಪನವರು ವಿಜಾಪುರ ಜಿಲ್ಲೆಯ ಮನಗೂಳಿ ಗ್ರಾಮದಲ್ಲಿ ಜನಿಸಿ ಅದೇ ಜಿಲ್ಲೆಯ ಹತ್ತರಕಿ ಎಂಬ ಹಳ್ಳಿಯಲ್ಲಿ ಮಾಸ್ತರರೆ—ಅಲ್ಲಿ ಶಿಕ್ಷಕ—ವೃತ್ತಿಯನ್ನು ಕೆಲವು ವರ್ಷ ಸಾಗಿಸಿ ಬೆಳವಲಭೂಮಿಯನ್ನು ಬೆಳಗಿ ಇಳಿವಯಸ್ಸಿನಲ್ಲಿ ಇಳಿಯುವ ಮುನ್ನವೇ ಇಹಲೋಕಯಾತ್ರೆಯನ್ನು ಮುಗಿಸಿದರು. ಶಿಕ್ಷಕ—ವೃತ್ತಿಯ ಆವಾರಾದ ನಾಲ್ಕು ಗೋಡೆಗಳನ್ನು ದಾಟಿ ಹತ್ತರಕಿ ಮತ್ತು ಸುತ್ತಲಿನ ಹಳ್ಳಿಗರಿಗೆ ಮಾರ್ಗದರ್ಶಕರಾಗಿ, ಸುಧಾರಕರಾಗಿ, ನ್ಯಾಯಮೂರ್ತಿಯಾಗಿ, ಆಪದ್ಬಂಧುವಾಗಿ, ಧರ್ಮಶೀಲರಾಗಿ, ಸದ್ಗುಣಗಳ ನೆಲೆಯಾಗಿ ನಿಂತು ಅವರ ಜೀವನವನ್ನು ಬೆಳಗಲಿಕ್ಕೆ ಯತ್ನಿಸಿದ್ದರು.

ಸಿಂಪಿ ಲಿಂಗಣ್ಣನಂತಹ ಉದ್ದಾಮ ಸಾಹಿತಿಗಳ ಕೈಯಲ್ಲಿ ರೇವಣಸಿದ್ದಪ್ಪನವರು ದಿವಂಗತರಾದರೂ ಮರಳಿ ಇಹಲೋಕಕ್ಕೆ ಇಳಿದು ಬಂದಂತಿದೆ. ರಾಮಕೃಷ್ಣ ಪರಮಹಂಸರ, ವಿವೇಕಾನಂದರ, ತಿಲಕ ಮೊದಲಾದವರ ಜೀವನದ ಉದಾಹರಣೆಗಳಿಂದ ಮಾಸ್ತರರ ಜೀವನವು ಉಜ್ವಲವಾಗಿ ಅರಳಿ ಬಂದಿದೆ. ಚರಿತ್ರೆಯು ಜಾಣತನದ ಶೈಲಿಯಿಂದ ರಸವತ್ತಾಗಿ ಪರಿಣಮಿಸಿದೆ. ರೇವಣಸಿದ್ದಪ್ಪನವರ ಈ ಚರಿತ್ರೆಯು ಕಾಣದ, ಕೇಳದ ಜೀವಿತ ರಹಸ್ಯಗಳ ಪ್ರಕಟನೆಗೆ ಪ್ರಚೋದನವಾಗುವದರಲ್ಲಿ ಸಂದೇಹವಿಲ್ಲ.

—ಪ್ರ. ಸಂ.

ಪ್ರಕಟನೆ

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಗೆ ಕೂಡ್ರತಕ್ಕ ಉಮೇದವಾರರು ಪರೀಕ್ಷೆಯ ಬಗ್ಗೆ ಕೆಳಗಿನ ಸಂಗತಿಗಳನ್ನು ಲಕ್ಷ್ಯದಲ್ಲಿಡತಕ್ಕದ್ದು.

ಪ್ರಾಯೋಗಿಕ ಶಿಕ್ಷಣ ಅಂದರೆ ಪರೀಕ್ಷೆಯ ಪಾಠಗಳನ್ನು ಕೊಡುವದು ಮಾರ್ಚ ತಿಂಗಳಲ್ಲಿ ನಡೆಯುವದು ಮತ್ತು ಇದರ ಬಗ್ಗೆ ನಿಶ್ಚಿತ ದಿನಾಂಕಗಳನ್ನು ಆಯಾ ಕೇಂದ್ರಗಳ ಕಂಡಕ್ಟರರು ಸಂಬಂಧಪಟ್ಟ ಕಾಲೇಜುಗಳ ಪ್ರಿನ್ಸಿಪಾಲರೊಂದಿಗೆ ವಿಚಾರಿಸಿ ನಿರ್ಧರಿಸುವರು. ಆದ್ದರಿಂದ ಹೊರಗಿನಿಂದ ಕೂಡ್ರತಕ್ಕ ಉಮೇದವಾರರು ತಾವು ಅಭ್ಯಾಸ ಮಾಡಿದ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಿಗೆ ಭೆಟ್ಟಿಯಾಗಿ ಪರೀಕ್ಷೆಯ ಪಾಠಗಳ ನಿಶ್ಚಿತ ದಿನವನ್ನೂ ತಾವು ಕೊಡತಕ್ಕ ಪಾಠವು ಯಾವುದೆಂಬುದನ್ನೂ ಅವರಿಂದ ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ ಎಲ್ಲ ಪರೀಕ್ಷೆಯ ಪಾಠಗಳ ಕಾರ್ಯಕ್ರಮವು ೩೧–೩–೧೯೫೩ರೊಳಗಾಗಿ ಮುಗಿಯುವದು.

ತಾತ್ವಿಕ ಪರೀಕ್ಷೆಯು ಸೋಮವಾರ ದಿನಾಂಕ ೨೦–೪–೧೯೫೩ರಿಂದ ಶನಿವಾರ ೨೫–೪–೧೯೫೩ರ ವರೆಗೆ ನಡೆಯುವದು: ಪ್ರತಿದಿನ ಎರಡು ಕಾಗದಗಳು ಇರುವವು. ಪರೀಕ್ಷೆಯ ವೇಳಾಪತ್ರಿಕೆಯ ಪ್ರತಿಗಳು ಪ್ರತಿಯೊಂದು ಕಾಲೇಜದ ಪ್ರಿನ್ಸಿಪಾಲರಿಗೂ ಮತ್ತು ಪರೀಕ್ಷೆಯ ಕಂಡಕ್ಟರರಿಗೂ ಪೂರೈಸಲ್ಪಟ್ಟಿದ್ದು ಪರೀಕ್ಷೆಯ ಸ್ಥಳದಲ್ಲಿ ಅಂಟಿಸಲಾಗುವದು.

ಮೂಲೋದ್ಯೋಗದ ಪ್ರಾಯೋಗಿಕ ಪರೀಕ್ಷೆಯು ಸೋಮವಾರ ದಿನಾಂಕ ೨೭–೪–೧೯೫೩ರಿಂದು ಆರಂಭವಾಗಿ ಬುಧವಾರ ದಿನಾಂಕ ೨೯–೪–೫೩ಕ್ಕೆ ಮುಗಿಯುವದು. ಉಮೇದವಾರರು ತಮ್ಮ ಕಾಲೇಜದ ಪ್ರಿನ್ಸಿಪಾಲರಿಂದ ಪ್ರಾಯೋಗಿಕ ಪರೀಕ್ಷೆಗಾಗಿ ನಿಶ್ಚಯಿಸಿದ ದಿನಾಂಕವನ್ನೂ, ಸ್ಥಳವನ್ನೂ ಮುಂಚಿತವಾಗಿಯೇ ತಿಳಿದುಕೊಳ್ಳತಕ್ಕದ್ದು. ಯಾವ ಕಾರಣದಿಂದಲೂ ಪ್ರಾಯೋಗಿಕ ಪರೀಕ್ಷೆಗಾಗಿ ನಿರ್ದಿಷ್ಟಪಡಿಸಿದ ದಿನವನ್ನು ಮುಂದುವರಿಸಲಾಗುವದಿಲ್ಲವೆಂಬುದನ್ನೂ ಮತ್ತು ತಮಗೆ ನಿಶ್ಚಿತಗೊಳಿಸಿದ ಪರೀಕ್ಷೆಯ ದಿನ ಗೈರ ಉಳಿದ ಉಮೇದವಾರರು ನಪಾಸಾದವರೆಂದು ಗಣಿಸಲಾಗುವದೆಂಬುದನ್ನೂ ಉಮೇದವಾರರಿಗೆ ತಿಳಿಸಲಾಗಿದೆ.

No. P. (PTC)–4240
Dharwar 24-1-1953

Sd/ D. V. Chickermane
ಎಜ್ಯುಕೇಶನಲ್ ಇನ್ಸಪೆಕ್ಟರ,
ಧಾರವಾಡ ಭಾಗ, ಧಾರವಾಡ

೧೯೫೩ ಎಪ್ರಿಲದಲ್ಲಿ ಜರುಗಲಿರುವ ಗಂಡು ಮತ್ತು ಹೆಣ್ಣುಮಕ್ಕಳ

ಸಾರ್ವಜನಿಕ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

ಕಾರ್ಯಕ್ರಮ

ದಿನ ಮತ್ತು ದಿನಾಂಕ	ವೇಳೆ ಇಂದ	ವೇಳೆ ವರೆಗೆ	ವಿಷಯ	ಗುಣಗಳು
ಸೋಮವಾರ ೬—೪—೧೯೫೩	೧೦-೩೦	೧೧-೧೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
			೧ನೆಯ ಸದರು : ಪ್ರಾದೇಶಿಕ ಭಾಷೆ.	೧೦೦
			(೨ನೆಯ ಕಾಗದ : ಪ್ರಬಂಧ ಮತ್ತು ಕೈಬರಹ)	
	೩- ೦	೬- ೦	೪ನೆಯ ಸದರು : ವಿಜ್ಞಾನ (ಸಾಯನ್ಸ)	
			(೧) ಶರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ ಮತ್ತು ಸಾಮಾನ್ಯ ಪ್ರಾಥಮಿಕ ವಿಜ್ಞಾನ-ಗಂಡು ಮಕ್ಕಳಿಗಾಗಿ (ಸಾಮಾನ್ಯ ಶಾಲೆಗಳು).	೧೦೦
			(೨) ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಗೃಹವಿಜ್ಞಾನ—ಹೆಣ್ಣು ಮಕ್ಕಳಿಗಾಗಿ (ಸಾಮಾನ್ಯ ಶಾಲೆಗಳು).	೧೦೦
			(೩) ಕೃಷಿವಿಜ್ಞಾನ—ಒಕ್ಕಲತನದ ಶಾಲೆಗಳ ಉಮೇದವಾರರಿಗಾಗಿ.	೧೦೦
			(೪) ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಹಾಗು ಪ್ರಾಣಿಶಾಸ್ತ್ರ ಮತ್ತು ಸಾಮಾನ್ಯವಿಜ್ಞಾನ ನೂಲುವ ಮತ್ತು ನೇಯುವ ಯಾಂತ್ರಿಕ ಜ್ಞಾನವನ್ನೊಳಗೊಂಡು (ಬೇಸಿಕ್ ಶಾಲೆಗಳು).	೧೦೦
			(೫) ಶರೀರಶಾಸ್ತ್ರ ಮತ್ತು ಆರೋಗ್ಯಶಾಸ ಪ್ರಾಣಿ ಮತ್ತು ಸಸ್ಯಗಳ ಅಭ್ಯಾಸ ಹಾಗು ಕಟ್ಟಿಗೆ ಕೆಲಸಕ್ಕೆ ಸಂಬಂಧಿಸಿದ ಸಾಮಾನ್ಯವಿಜ್ಞಾನ.	
ಮಂಗಳವಾರ ೭—೪—೧೯೫೩	೧೧-೦	೨- ೦	೨ನೆಯ ಸದರು : ಗಣಿತ	
			(೧ನೆಯ ಕಾಗದ—ಅಂಕಗಣಿತ)	೧೦೦
	೩- ೦	೬- ೦	೨ನೆಯ ಸದರು: ಇತಿಹಾಸ ಮತ್ತು ಭೂಗೋಲ ಮತ್ತು ನಾಗರಿಕ ಶಾಸ್ತ್ರ. .	೧೦೦

ಬುಧವಾರ ೮—೪—೧೯೫೩	೧೧-೦	೨-೦	೧ನೆಯ ಸದರು : ಪ್ರಾದೇಶಿಕ ಭಾಷೆ. (೧ನೆಯ ಕಾಗದ—ಗದ್ಯ. ಪದ್ಯ ಮತ್ತು ವ್ಯಾಕರಣ.)	೧೦೦
	೩-೦	೬-೦	೨ನೆಯ ಸದರು : ಗಣಿತ. (೨ನೆಯ ಕಾಗದ—ಭೂಮಿತಿ ಮತ್ತು ಸಾದಾ ಜಮಾಖರ್ಚು).	೧೦೦
ಗುರುವಾರ ೯—೪—೧೯೫೩	೧೧-೦	೨-೦	೩ನೆಯ ಸದರು : (ಐಚ್ಛಿಕ) ಹಿಂದೀ	೧೦೦
	೩-೦	೬-೦	೪ನೆಯ ಸದರು : ಸೂಜಿಗೆಲಸ, ರೇಖನ ಕಲೆ (ಡ್ರಾಯಿಂಗು) ಪ್ರಾಯೋಗಿಕ ಕೃಷಿ ಮತ್ತು ನೂಲುವದು ಹಾಗೂ ನೇಯುವದು, ಕಟ್ಟಿಗೆಯ ಕೆಲಸ, ಹೊಲಿಗೆ.*	
ಶುಕ್ರವಾರ ೧೦—೪—೧೯೫೩	೧೧-೦	೨-೦	೩ನೆಯ ಸದರು : (ಐಚ್ಛಿಕ) ಸಂಗೀತ, ಕಾಗದ ಮತ್ತು ರಟ್ಟಿನ ಕೆಲಸ, ಚಿತ್ರದ ಕೆಲಸ ಮತ್ತು ಚರ್ಮದ ಕೆಲಸ	೧೦೦
	೩-೦	೫-೦	೧ನೆಯ ಸದರು : ೩ನೆಯ ಕಾಗದ—ಐಚ್ಛಿಕ	೫೦

*ಬೇಸಿಕ್ ಶಾಲೆಗಳ ಉಮೇದವಾರರ ನೂಲುವಿಕೆ ಮತ್ತು ನೇಯುವಿಕೆಯ ಪ್ರಾಕ್ಟಿಕಲ್ ಪರೀಕ್ಷೆಯನ್ನು ಬರೆಹ ಪರೀಕ್ಷೆಯ ಮೊದಲು ಅನುಕೂಲವಾದ ತಾರೀಖಿನ ದಿನ ತೆಗೆದುಕೊಳ್ಳಲಾಗುವದು. ೧೦೦

ಟೀಪು:—ಪರೀಕ್ಷೆಯ ಮೊದಲನೆಯ ದಿನ ಎಲ್ಲ ಉಮೇದವಾರರು ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ಒಂದು ಗಂಟೆ ಮೊದಲು ಪರೀಕ್ಷಾ-ಸ್ಥಳದಲ್ಲಿ ಹಾಜರ ಇರತಕ್ಕದ್ದು.

ಎಜ್ಯುಕೇಶನಲ್ ಇನಸ್ಪೆಕ್ಟರರ ಕಚೇರಿ
ಧಾರವಾಡ ಭಾಗ, ಧಾರವಾಡ
No. P/PSC (53) 3949
9—1—1953

(ಸಹಿ) ವ್ಹಿ. ಜೆ. ಡೇವಿಡ್.
ಎಜ್ಯುಕೇಶನಲ್ ಇನಸ್ಪೆಕ್ಟರ ಧಾ. ಭಾ-
ಅವರ ಪರವಾಗಿ

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

ಶೈಕ್ಷಣಿಕ ಚಟುವಟಿಕೆಗಳು

೧೯೫೩ ಜನೆವರಿಯಿಂದ ಫೆಬ್ರುವರಿ ೧೫ರ ವರೆಗೆ

ಜಮಖಂಡಿ—೨೪ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ವಾರ್ಷಿಕ ಪಂದ್ಯಾಟಗಳು ಡಾ| ಡಿ. ವ್ಹಿ. ಚಿಕ್ಕರಮನೆ ಅವರ ಅಧ್ಯಕ್ಷತೆಯಲ್ಲಿ ಜರುಗಿದವು.

ಲಿಂಗದಾಳ—೧೬ ಹೆಣ್ಣು ಮಕ್ಕಳ ಶಾಲೆಯ ವಾರ್ಷಿಕ ತಪಾಸಣೆಯು ಶ್ರೀಮತಿ ಕವಾಲ ಅವರಿಂದ ಜರುಗಿತು.

ಶಂದಗಾಂವ—೧೬ ಕೇಂದ್ರ ಕನ್ನಡ ಶಾಲೆಗೆ ಮುಂಬಯಿ ವಿದ್ಯಾಖಾತೆಯ ಡೈರೆಕ್ಟರರಾದ ಶ್ರೀ. ಡಿ. ಸಿ. ಪಾವಟೆ ಅವರು ಡಾ| ಚಿಕ್ಕರಮನೆಯವರೊಡನೆ ಆಕಸ್ಮಿಕವಾಗಿ ಭೆಟ್ಟಿಯನ್ನಿತ್ತು, ಕಾರ್ಯವನ್ನು ನೋಡಿ ಸಂತೋಷವ್ಯಕ್ತ ಮಾಡಿದರು.

ಲಕ್ಷ್ಮೇಶ್ವರ—೨೧ ವಿದ್ಯಾರ್ಥಿಗಳು ಹಂಪಿ ಮತ್ತು ತುಂಗಭದ್ರಾ ಆಣೆಕಟ್ಟನ್ನು ನೋಡಿ ಬಂದರು.

ಹುಬ್ಬಳ್ಳಿ—೧೧ ಯಾವತ್ತೂ ಉರ್ದೂ ಶಾಲೆಗಳ ಮೇಲಿನ ವರ್ಗಗಳ ಬಾಲಕರ ವಾಕ್‌ಸ್ಪರ್ಧೆಯು ಮೇ| ಜಾನವಾಡಕರ ಅವರ ಹಿರಿಯತನದಲ್ಲಿ ನಡೆಯಿತು. ಶ್ರೀ. ಮುಲ್ಲಾ, ಬೇಪಾರಿ, ಅಲ್ವಿ ಅವರಿಗೆ ಒಂದೊಂದು ರೂಪಾಯಿ, ವಿದ್ಯಾರ್ಥಿನಿ ದಫೇದಾರಗಳಿಗೆ ೨ ರೂ. ಇನಾಮನ್ನು ಕೊಟ್ಟರು. ಪ್ರಗತಿಯ ಕಪ್ಪು ೧ನೇ ನಂಬರ ಉರ್ದು ಗಂ. ಶಾಲೆಗೆ ದೊರೆಯಿತು.

ಗಂಗವಾರ—೨೩ ಶ್ರೀ. ತಿಪ್ಪಣ್ಣನವರ ಅವರು ಶಾಲೆಯ ವಾರ್ಷಿಕ ತಪಾಸಣೆ ಮಾಡಿದರು.

ಇಳಗೊಂದಿ—೨೪ ೧, ೧೪ನೆಯ ದಿನಾಂಕಗಳಲ್ಲಿ ಸಮಾಜ ಶಿಕ್ಷಣ ವರ್ಗ, ವಾಚನಾಲಯ, ಹರಿಹರ-ದಾವಣಗೇರಿಯ ಶೈಕ್ಷಣಿಕ-ಪ್ರವಾಸ, ಮುಂತಾದ ಕಾರ್ಯಕ್ರಮಗಳು ಜರುಗಿದವು. ಊರ ಪ್ರಮುಖರಿಂದ ೨೦ ರೂ. ಧನ, ಮತ್ತು ಶ್ರೀ. ಹಲಗೇರಿ ಎಸ್. ಇವರು ಒಂದು ಕೈಗ್ಯಾಸವನ್ನು ಕೊಟ್ಟು ಸಹಾಯ ಮಾಡಿದರ.

ತಲ್ಲೂರ—೧೫ ಗೋಕಾಕ, ತಡಸಲು, ವಿದ್ಯುತ್ ಕಾರಖಾನೆ, ತೂಗಾಡುವ ತಂತಿ, ಅರಭಾವಿಯ ಒಕ್ಕಲತನದ ಫಾರ್ಮ್, ಕೋಳಿ ಫಾರ್ಮ್ ಮುಂತಾದವನ್ನು ವಿದ್ಯಾರ್ಥಿಗಳು ನೋಡಿ ಬಂದರು.

ಅಳಗವಾಡಿ—೧ ಡ್ರಾಯಿಂಗ ಎಲಿಮೆಂಟರಿ ಪರೀಕ್ಷೆಗೆ ಕುಳಿತವರು ೧೪, ಪಾಸಾದವರು ೯. ಇಂಟರ ಮೀಜಿಯಟ್ ಪರೀಕ್ಷೆಗೆ ಕುಳಿತವರು ೬, ಪಾಸಾದವರು ೫.

ಯರಗಟ್ಟಿ—೧೨ ಶ್ರೀ. ಟಿ. ಆರ್. ಉದುಮುಡಿ ಅವರ ಅಧ್ಯಕ್ಷತೆಯಲ್ಲಿ ಸಮ್ಮೇಲನ ನಡೆಯಿತು.

ಮಿಶ್ರಿಕೋಟಿ—೪ ರಿಟಾಯರ್ಡ ಅ| ವಿ| ಇನಸ್ಪೆಕ್ಟರ ಶ್ರೀ. ಬಿ. ಎಂ. ಶಿಂತ್ರಿ ಅವರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕ-ಶಿಕ್ಷಿಕೆಯರ ಸಮ್ಮೇಲನವು ೩೦—೧೨—೫೨ರಂದು ನಡೆಯಿತು. ಶ್ರೀ. ?ರ್ಲೇಕರ ಅ. ಡೆ. ಎ. ಇ. ಅವರಿಂದ ಮುಂಜಾನೆ ಧ್ವಜವಂದನೆಯಾಯಿತು. ಶ್ರೀ. ಜೇವೂರ ಅ| ವಿ| ಇನಸ್ಪೆಕ್ಟರ ಇವರು ಸಮ್ಮೇಲನದ ಉದ್ಘಾಟನೆ ಮಾಡಿದರು. ಶ್ರೀ. ದಾ. ರು. ಕುಪ್ಪಸದ ಅವರು ಪ್ರದರ್ಶನದ ಉದ್ಘಾಟನೆ ಮಾಡಿದರು. ಶ್ರೀ. ಕಮಡೊಳ್ಳಿ ಹೆ| ಮಾ| ಅವರು ಸ್ವಾಗತಪರ ಭಾಷಣ ಮಾಡಿದರು. ಕುಮಾರಿ ಸರೋಜಿನಿ ಶಿಂತ್ರಿ ಎಂ. ಎ. ಅವರು ಇಂಗ್ಲಂಡ, ಫ್ರಾನ್ಸ ಮುಂತಾದ ಕಡೆಗಳಲ್ಲಿಯ ಶಿಕ್ಷಣ ಸಂಸ್ಥೆಗಳನ್ನೂ ಶಿಕ್ಷಣದ ಮಹತ್ವವನ್ನೂ ಕುರಿತು ಭಾಷಣ

ಮಾಡಿದರು. ವಿವಿಧ ವಿನೋದಾವಳಿ, ಪ್ರದರ್ಶನ ಮುಂತಾದ ಕಾರ್ಯಕ್ರಮಗಳೂ ಏರ್ಪಟ್ಟಿದ್ದವು. ಹಳೆಯ ನಾಮಾಂಕಿತ ವಿದ್ಯಾರ್ಥಿಗಳ ಫೋಟೋಗಳನ್ನು ಶಾಲೆಯಲ್ಲಿ ಹಾಕಿ ಒಂದು ಸ್ತುತ್ಯ ಹಾಗೂ ಅನುಕರಣೀಯ ಕಾರ್ಯವನ್ನು ಮಾಡಲಾಗಿದೆ.

ವಿಜಾಪೂರ—೨೬ ಶಾರೀರಿಕ ಶಿಕ್ಷಣ ವರ್ಗವು ಶ್ರೀ. ಜನಬಸಪ್ಪ ಅಂಬಲಿ ಅವರ ಅಧ್ಯಕ್ಷತೆಯಲ್ಲಿ ಸುರುವಾಯಿತು.

ಬೆಳಘಟ್ಟಿ—೬ ಶ್ರೀ. ಟಿ. ಎಫ್. ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ಪಾಲಕರ ದಿನಾಚರಣೆಯಾಯಿತು.

ತಳಕವಾಡ—೨ ವಿದ್ಯಾರ್ಥಿಗಳು ರಾಮದುರ್ಗ ತಾಲೂಕಿನ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡಿದ್ದರು.

ರಟ್ಟೀಹಳ್ಳಿ—೭ ವಿದ್ಯಾರ್ಥಿಗಳು ಕುಮುದ್ವತಿ ಪೂಲು, ಮಗದ ಸರೋವರಗಳನ್ನು, ಹಂಪೆ, ಹೊಸಪೇಟೆಗಳನ್ನು ನೋಡಿಬಂದರು.

ಹುಬ್ಬಳ್ಳಿ—೨ ನಗರದ ೧೮,೧೯, ೨೦ನೆಯ ನಂಬರು ಶಾಲೆಗಳ ವರ್ಧಂತಿಯ ಉತ್ಸವವು ಸಂಯುಕ್ತವಾಗಿ ಶ್ರೀ. ಸಿ. ವಿ. ಜೇವೂರ ಅ। ಎ। ಇ। ಅವರ ಹಿರಿಯತನದಲ್ಲಿ ನಡೆಯಿತು.

ಹುಬ್ಬಳ್ಳಿ— ಧಾರವಾಡ— } ೧೦ ಮಾನ್ಯ ಮಂತ್ರಿಗಳಾದ ದಿನಕರರಾವ ದೇಸಾಯಿ ಅವರು ಹುಬ್ಬಳ್ಳಿಯ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜವನ್ನು ಸಂದರ್ಶಿಸಿದರು. ಮತ್ತು ಧಾರವಾಡ ವನಿತಾ ಟ್ರೇನಿಂಗ ಕಾಲೇಜವನ್ನೂ ಸಂದರ್ಶಿಸಿದರು.

ಚಿಕ್ಕನವ್ಯಾಗೇರಿ—೯ ೨೯–೧೨–೫೨ರಂದು ವಿದ್ಯಾರ್ಥಿಗಳು ಬಾದಾಮಿಯ ಪ್ರವಾಸವನ್ನು ಕೈಕೊಂಡಿದ್ದರು.

ಕೋಟುಮಚಿಗಿ—೧೬ ವಿದ್ಯಾರ್ಥಿಗಳು ಬಾದಾಮಿ, ವಿಜಾಪೂರ, ಸೊಲ್ಲಾಪುರದ ಶೈಕ್ಷಣಿಕ ಪ್ರವಾಸ ಮಾಡಿದರು.

ಕೊಣ್ಣೂರ—೨೦ ೩೧–೧೨–೫೨ರಂದು 'ಬಾಲಕ' ಎಂಬ ಕೈ ಬರೆಹದ ಮಾಸಪತ್ರಿಕೆಯು ಡಿ. ಇ. ಅವರಿಂದ ಉದ್ಘಾಟಿತವಾಯಿತು.

ನಾಗನೂರ—೧೫ ವಿದ್ಯಾರ್ಥಿಗಳು ಉಗಾರ ಸಕ್ಕರೆ ಕಾರಖಾನೆಯನ್ನೂ ನೋಡಿ ಬಂದರು.

ಆದರಗುಂಡಿ—೧೭ ಶ್ರೀ. ರಾ. ರು. ಕುಪ್ಪಸದ ಅವರು ಶಾಲೆಯ ವಾರ್ಷಿಕ ತಪಾಸಣೆಯನ್ನು ಮಾಡಿದರು.

ಅಬ್ಬಿಗೇರಿ—೧೯ ಪಾಲಕರ ದಿನಾಚರಣೆಯಾಯಿತು. ಶ್ರೀ. ಅ. ಮ. ಕುಲಕರ್ಣಿ ಅ। ಡೆ। ಎ। ಇ. ಅವರು ಅಧ್ಯಕ್ಷರಾಗಿದ್ದರು.

ಹುಬ್ಬಳ್ಳಿ—೭ ೧ನೇ. ನಂ. ಶಾಲೆಯ ೮೫ ಸ್ಕೌಟ ಬಾಲಕರು ಮೈಸೂರಿನ ಪ್ರವಾಸವನ್ನು ಮಾಡಿ ಬಂದರು.

ತುಪ್ಪದ ಕುರಹಟ್ಟಿ—೨೦ ಸಮಾಜ ಶಿಕ್ಷಣ ವರ್ಗವನ್ನು ಶ್ರೀ. ಜಾಲಿಹಾಳ ಮತ್ತು ಶ್ರೀ. ಹೇರ್ಲೇಕರ ಅವರು ಸಂದರ್ಶಿಸಿದರು.

ಧವಳಗಿ—೧೦ ವಿದ್ಯಾರ್ಥಿಗಳು ಬಾದಾಮಿಯ ಪ್ರವಾಸ ಕೈಕೊಂಡಿದ್ದರು.

ತಳಕವಾಡ—೨೪ ಚರ್ಚಾಕೂಟವು ಶ್ರೀ. ಅ. ಹೋ. ಕುಂಬಾರ ಅವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಬೆನ್ನೂರ-ಆಲದಗೇರಿ—೨೬ ಪ್ರಜಾರಾಜ್ಯ ದಿನವನ್ನು ಆಚರಿಸಲಾಯಿತು.

ಕಾರವಾರ—೧೯ ಶ್ರೀ. ವಾಯ್. ಡಿ. ಖಾನ, ಪಿ. ಡಬ್ಲ್ಯೂ, ಆರ್. ಯೋಜನೆಯ ಸ್ಪೆಶೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರವಾರ ಸರಕಾರಿ ಟ್ರೇನಿಂಗ ಕಾಲೇಜದ ಫಾರ್ಮಿನಲ್ಲಿ ಒಕ್ಕಲತನ ಪ್ರದರ್ಶನದ ಉದ್ಘಾಟನೆಯಾಯಿತು.

ಶೈಕ್ಷಣಿಕ ಸಮ್ಮೇಲನಗಳು

ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಚರ್ಚೆ, ವಿವಿಧ ವಿನೋದಾವಳಿ, ಶಾರೀರಿಕ ಚಟುವಟಿಕೆ ಮುಂತಾದ ಕಾರ್ಯಕ್ರಮಗಳು ಕೆಳಗಿನ ಊರುಗಳಲ್ಲಿ ನಡೆದವು. ಶಿಕ್ಷಕರ, ಹಾಗೂ ಜನತೆಯ ಉತ್ಸಾಹ, ಸಹಕಾರ ಪ್ರಶಂಸನೀಯವಾಗಿದ್ದವು.

ಊರು—ದಿನಾಂಕ ಜನೇವರಿ	ಅಧ್ಯಕ್ಷರು	ಊರು—ದಿನಾಂಕ ಜನೇವರಿ	ಅಧ್ಯಕ್ಷರು
ರೋಣ—೧೯	ಶ್ರೀ. ಮ. ಗು. ಹಂದ್ರಾಳ	ಸಾಲೋಟಗಿ—೧೧	ಶ್ರೀ. ಜಿ. ಬಿ. ಮೆಂಚ
ಸೂಡಿ—೨೨	ಶ್ರೀ. ರಾ. ರು. ಕುಪ್ಪಸದ	ಇಟಗಿ—೨	ಶ್ರೀ. ಲ. ಅ. ಶಿರಹಟ್ಟಿ
ಕಾಕೋಳ—೨೨	ಶ್ರೀ. ಎ. ಎಚ್. ದಳವಾಯಿ	ಉತ್ಸೂರ—೧೨	ಶ್ರೀ. ಬಿ. ಎಚ್. ಕಣೇಕಲ್ಲ
ಸುಳ್ಳ—೩೧	ಶ್ರೀ. ರಾ. ರು. ಕುಪ್ಪಸದ	ಲಕ್ಕುಂಡಿ—೧೭	ಶ್ರೀ. ಬಿ. ಟಿ. ಪಾಟೀಲ
ಕೌಜಲಗಿ—೨೯		ಸಂಗೊಳ್ಳಿ—೧	ಶ್ರೀ. ಎ. ಜೆ. ರಾಯಣ್ಣವರ
ಉಕ್ಕಲಿ—೨೦	ಶ್ರೀ. ವಾಯ್. ಡಿ. ಉಣಕಲ್	ಜಾಲೀಹಾಳ—೧೭	ಶ್ರೀ. ಛಬ್ಬಿ
ಮುಳಗುಂದ—	ಶ್ರೀ. ರಾ. ರು. ಕುಪ್ಪಸದ	ಹೆಬ್ಬಳ್ಳಿ—೩೧	ಶ್ರೀ. ಬಿ. ಡಿ. ಪುಗಿ
ಇಂಡಿ—	ಶ್ರೀ. ವಾಯ್. ಬಿ. ಯಾರಗಲ್ಲ	ಖಜ್ಜೀಡೋಣಿ—೨೪	ಶ್ರೀ. ಕಮತ
ಹೆಬ್ಬಾಳ—೧೧	ಶ್ರೀ. ಟಿ. ಎಫ್. ದೇಸಾಯಿ		——

ವಿಶೇಷ ಸುದ್ದಿ

ಧಾರವಾಡ ೧೨—೧—೫೩ — ಮುಂಬಯಿ ರಾಜ್ಯದ ಕಾಯದೆ ಮತ್ತು ಶಿಕ್ಷಣ ಮಂತ್ರಿಗಳಾದ ಶ್ರೀ. ದಿನಕರರಾವ ದೇಸಾಯಿಯವರು ದಿ ೧೧-೧-೫೩ ರಂದು ಧಾರವಾಡ ಜಿಲ್ಲಾ ಸ್ಕೂಲ ಬೋರ್ಡ ಕಚೇರಿಗೆ ಸಂದರ್ಶನವಿತ್ತರು. ಶಿಕ್ಷಣ ಮಂತ್ರಿಗಳು ಈ ಬೋರ್ಡಿಗೆ ಭೆಟ್ಟಿಯಿತ್ತದ್ದು ಬೋರ್ಡಿನ ಇತಿಹಾಸದಲ್ಲಿಯೇ ಇದು ಪ್ರಥಮವಾಗಿದೆ. ಜಿಲ್ಲಾ ಸ್ಕೂಲ ಬೋರ್ಡಿನ ಚೇರಮನ್‌ರಾದ ಶ್ರೀ. ಸಿ. ಕೆ. ಕುಲಕರ್ಣಿಯವರು ಎ. ಓ. ರವರಾದ ಶ್ರೀ. ರಾ. ರು. ಕುಪ್ಪಸದರವರೂ ಮಂತ್ರಿಗಳನ್ನು ಸ್ವಾಗತಿಸಿದರು. ಮಂತ್ರಿಗಳು ತಮ್ಮ ಸ್ಥಾನವನ್ನು ಅಲಂಕರಿಸಿದನಂತರ ಶ್ರೀ. ಸಿ. ಕೆ. ಕುಲಕರ್ಣಿಯವರು ಮಂತ್ರಿಗಳಿಗೆ ಮಾಲಾರ್ಪಣೆ ಮಾಡಿ ಸ್ಕೂಲ ಬೋರ್ಡಿನ ಸದಸ್ಯರನ್ನೂ, ಅಧಿಕಾರಿಗಳನ್ನೂ, ಆಮಂತ್ರಿಸಿದ ಅನೇಕ ಸದ್ಗೃಹಸ್ಥರನ್ನೂ ಪರಿಚಯ ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಸ್ಕೂಲಬೋರ್ಡಿನ ಆಡಳಿತೆಯ ಬಗೆಗೂ, ಪ್ರಾಥಮಿಕ ಶಿಕ್ಷಣದ ಬಗೆಗೂ ಚೇರಮನ್ನರು ಕೇಳಿದ ಹಲವು ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಸಮರ್ಪಕವಾಗಿ ಉತ್ತರಿಸಿದರು. ಇದೇ ಸಮಯಕ್ಕೆ ಶ್ರೀ. ಫಕ್ಕೀರಪ್ಪನವರು ಹಸಬಿ, ಪ್ರೆಸಿಡೆಂಟ ಡಿ. ಎಲ್. ಬಿ. ಮತ್ತು ಚೇರಮನ್ ಜಿಲ್ಲಾ ಕಟ್ಟಡ ಸಮಿತಿ ಧಾರವಾಡ ಇವರ ನೇತೃತ್ವದಲ್ಲಿ ಶ್ರೀ. ಎಚ್. ಎಸ್. ಕಟ್ಟಿಮನಿ ,ಎಮ್. ಎಲ್. ಎ., ಶ್ರೀ. ಎಸ್. ಬಿ. ಬೆಟಗೇರಿ, ಶ್ರೀ, ಎ. ಎಸ್. ಪಾಟೀಲ, ಎಮ್. ಎಲ್. ಎ., ಶ್ರೀ. ನರ್ಕೆ ಎಂಜಿನಿಯರ ಡಿ. ಎಲ್. ಬಿ., ಧಾರವಾಡ ಇವರನ್ನೊಳಗೊಂಡ ಜಿಲ್ಲಾ ಕಟ್ಟಡ ಸಮಿತಿಯ ಶಿಷ್ಟ ಮಂಡಳವು ಮಂತ್ರಿಗಳನ್ನು ಕಂಡು ಶಾಲಾ ಕಟ್ಟಡಗಳನ್ನು ಕಟ್ಟಿಸುವಲ್ಲಿ ಬರುವ ಅಡೆತಡೆಗಳನ್ನು ನಿವೇದಿಸಿ ಸರಕಾರದವರು ಇದಕ್ಕಾಗಿ ಹೆಚ್ಚು ಹಣ ಮಂಜೂರ ಮಾಡಬೇಕೆಂದು ಕೇಳಿಕೊಂಡರು. ಮಂತ್ರಿಗಳು ಅದನ್ನು ಸಹಾನುಭೂತಿಯಿಂದ ವಿಚಾರಿಸುವದಾಗಿ ಶಿಷ್ಟ ಮಂಡಳದವರಿಗೆ ತಿಳಿಸಿದರು. ಅದೇ ಕಾಲಕ್ಕೆ ಮಂತ್ರಿಗಳ ಗೌರವಾರ್ಥವಾಗಿ ಸತ್ಕಾರಕೂಟವನ್ನು ಏರ್ಪಡಿಸಲಾಗಿತ್ತು. ಸತ್ಕಾರಕೂಟವು ಮುಗಿದ ಕೂಡಲೇ ಸ್ಕೂಲಬೋರ್ಡಿನ ಎಲ್ಲ ಸದಸ್ಯರನ್ನು ಒಳಗೊಂಡು ಫೋಟೋ ಕಾರ್ಯಕ್ರಮವು ಆದನಂತರ ಮಂತ್ರಿಗಳನ್ನು ಬೀಳ್ಕೊಡಲಾಯಿತು.

———

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ—ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ–೧ ಇತಿಹಾಸ ಬೆಲೆ ೦-೬-೦

" ೨ ಭೂಗೋಲ ಬೆಲೆ ೦-೬-೦

" ೩ ಭೂಮಿತಿ-ಜಮಾಖರ್ಚ ೧-೬-೦

" ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫–೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ–

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಕೆಯವರ "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ ಪಿ. ಎಸ್. **ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ವ್ಹಿ. ಬೋಕೆ ಫುಲಬಾಗ ೨೨೪/೮೭ ಬೆಳಗಾವಿ

೫ ನೆಯ ಆವೃತ್ತಿ) **ಶೈಕ್ಷಣಿಕ ಮನೋವಿಜ್ಞಾನ** (ಪುಟ ೨೫೦

ಬರೆದವರು: ಡಾ। ವಿ. ಕೊ. ಜವಳಿ M. Ed. Ph. D. M.A. (ಕೋಲಂಬಿಯಾ)

ಬೆಲೆ ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಇತ್ತೀಚಿಗೆ ಹೊಸ ಹೊಸ ಸಂಶೋಧನೆಗಳು ಆಗಿವೆ. ಅವುಗಳ ಪರಿಚಯವನ್ನು ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಮಾಡಿ-ಕೊಡುವುದಕ್ಕಾಗಿ ಈ ಪುಸ್ತಕವು ಬರೆಯಲ್ಪಟ್ಟಿದೆ. ಟ್ರೇಸಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಅವಶ್ಯವಾದ ಶೈಕ್ಷಣಿಕ ಅಭ್ಯಾಸ ಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ಶೈಲಿಯು ಎಲ್ಲರಿಗೂ ತಿಳಿಯು-ವಂತೆ ಬಹಳ ಸುಲಭವಾಗಿದೆ. ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು:

ಆಕಳವಾಡಿ ಬುಕ್ ಡಿಪೋ ಧಾರವಾಡ,

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.

ಇಂದೇ ತರಿಸಿರಿ! **ಮರೆಯಬೇಡಿರಿ!**

ಮೆ। ಗ. ಜ. ಗುಂಜೀಕರ, ಎ. ಓ. ಜಿಲ್ಲಾ ಸ್ಕೂಲ್‌ಬೋರ್ಡ, ವಿಜಾಪುರ

ಮೆ। ಎ. ಎಚ್. ದಳವಾಯಿ, ಡೆ. ಎ. ಇ. ಜಿಲ್ಲಾ, ವಿಜಾಪುರ

ಇವರುಗಳ ಮುನ್ನಡಿ ಮತ್ತು ಪ್ರೋತ್ಸಾಹಗಳಿಂದ **ಪ್ರಾಥಮಿಕ, ಮಾಧ್ಯಮಿಕ** ಹಾಗೂ **ಮೂಲ ಶಿಕ್ಷಣ ಬೋ**ರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳದ್ದು **ಬೆಲೆ ೮ ಆಣೆ.**

೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೦೨ ಪುಟಗಳುಳ್ಳದ್ದು

ಬೆಲೆ ೧೨ ಆಣೆ

ಬ. ದು. **ಹಿರೇಮಠ ಮಾಸ್ತರ, ವಿಜಾಪುರ**

ಸಿದ್ಧವಾಗಿವೆ **ಮಾರಾಟಕ್ಕೆ** **ಸಿದ್ಧವಾಗಿವೆ**

ನೀವು ಬಯಸಿದ ಇತಿಹಾಸದ ಅತ್ಯುತ್ತಮ ಹೊತ್ತಿಗೆಗಳು!

೫ನೆಯ ವರ್ಗಕ್ಕೆ:—ಭಾರತೀಯ ಇತಿಹಾಸ ಪ್ರಕಾಶ, ೧ನೆಯ ಪುಸ್ತಕ (ಅತಿ ಪ್ರಾಚೀನಕಾಲದಿಂದ ಮೊದಲ್ಗೊಂಡು ಶ್ರೀ. ಶಂಕರಾಚಾರ್ಯರ ಜೀವನದ ವಿವರಗಳನ್ನೊಳಗೊಂಡಿದೆ).
ಬೆಲೆ ೦—೧೫—೦

೬ನೆಯ ವರ್ಗಕ್ಕೆ:—ಭಾರತೀಯ ಇತಿಹಾಸ ಪ್ರಕಾಶ ೨ನೆಯ ಪುಸ್ತಕ (ಇಸ್ಲಾಂ ಧರ್ಮದ ಹುಟ್ಟು, ಹಾಗೂ ಬೆಳಗೆಯಿಂದ ಮೊದಲ್ಗೊಂಡು ಮರಾಠಾ ರಾಜ್ಯದ ವಿಸ್ತರಣೆ ಮತ್ತು ಅದರ ಆಳಿ-ಗಾಲದ ವಿವರಗಳನ್ನೊಳಗೊಂಡಿದೆ) **ಬೆಲೆ ೧—೯—೦**

೭ನೆಯ ವರ್ಗಕ್ಕೆ:—ಭಾರತೀಯ ಇತಿಹಾಸ ಪ್ರಕಾಶ, ೩ನೆಯ ಪುಸ್ತಕ (ಭಾರತಕ್ಕೆ ಯುರೋಪೀಯರ ಆಗಮನ ಹಾಗೂ ಸ್ಪರ್ಧೆಯಿಂದ ಮೊದಲ್ಗೊಂಡು ಭಾಗತದಲ್ಲಿ ಇಂದಿನ ಪ್ರಜಾರಾಜ್ಯದ ಸ್ಥಾಪನೆಯ ವಿವರಗಳನ್ನೊಳಗೊಂಡಿದೆ.) **ಬೆಲೆ ೨—೨—೦**

ಶ್ರೀ. ರಂ. ಕೃ. ಲಕ್ಕುಂಡಿ
(ಸೇವಾನಿವೃತ್ತ ಪ್ರಿನ್ಸಿಪಾಲರು, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಅವರಿಂದ ರಚಿತವಾದುವು.)

ಸುಲಭ ಮತ್ತು ಚಿತ್ತಾಕರ್ಷಕ ಶೈಲಿ! ಯೋಗ್ಯ ವಿಷಯದ ಭಂಡಾರ! ವಿಪುಲ ಶೈಕ್ಷಣಿಕ ಚಿತ್ರಗಳು! ಇತಿಹಾಸ ತಜ್ಞರಿಂದ ಪ್ರಶಸ್ತಿ ಪಡೆದುವು! ಸರಕಾರದಿಂದ ಮಂಜೂರು ಪಡೆದುವು. ಇಂದೇ ಕೊಳ್ಳಿರಿ.

ಪ್ರಕಾಶಕರು:—**ದಿ ಸ್ಟೂಡಂಟ್ಸ್ ಓನ್ ಬುಕ್ ಡಿಪೊ, ಧಾರವಾಡ**

ವಿಶೇಷ ಪ್ರಕಟನೆ!

ಇಂದೇ ಸಂಗ್ರಹಿಸಿರಿ! **ವಿದ್ಯಾರ್ಥಿ, ಶಿಕ್ಷಕರಿಗೆ ಅತ್ಯುಪಯುಕ್ತ!**

೧. **ಮೂಲ ಶಿಕ್ಷಣ ಮೀಮಾಂಸೆ** ಲೇಖಕರು:—**ಶ್ರೀ. ಹ.ಗ. ಜೋಶಿ. ಬೆಲೆ ೧-೧೨-೦**
(ಮಾನ್ಯ ದಿವಾಕರರ ಮುನ್ನುಡಿ; ಮೂಲ ಶಿಕ್ಷಣದ ಪ್ರೇಮಿಗಳು ಇದನ್ನು ಅವಶ್ಯ ಸಂಗ್ರಹಿಸಲೇ ಬೇಕು)

೨. **ಹಿಂದೀ ಶಿಕ್ಷಣ ಮಾಲೆ**—೧ ಲೇಖಕರು:—**ಶ್ರೀ. ಗುರುನಾಥ ಜೋಶಿ. ಬೆಲೆ ೦-೧೪-೦**
(ಮನೆಯಲ್ಲಿಯೇ ಶಿಕ್ಷಕರ ಸಹಾಯವಿಲ್ಲದೆ ಹಿಂದೀ ಕಲಿಯಲಿಕ್ಕೆ ಉತ್ತಮ)

ಇವಲ್ಲದೆ ಕಾದಂಬರಿಗಳು ಎನ್ಕೆ ಏಕಾಂಕ (೨—೦—೦) **ಭೂಮಿಗಿಳಿದ ತಾರೆ** (೧—೮—೦)
ಮಕ್ಕಳಿಗೆ:—**ಚುಟುಕ** (೦—೮—೦) **ದಿವ್ಯ ಕಥೆಗಳು** (೦—೮—೦)

ಪ್ರ. ಮತ್ತು ಮಾರಾಟಗಾರರು:-**ಹಿಂದಮಾತಾ ಮುದ್ರಣಾಲಯ, ಗಾಂಧಿಚೌಕ, ಧಾರವಾಡ.**

ನೇಯಿಗೆಯ ಶಾಲೆಗಳಿಗೆ ಅತ್ಯುಪಯುಕ್ತವಾದ ಪುಸ್ತಕಗಳು.

ಶ್ರೀ. ಎಮ್. ಡಿ. ನೀಲಗಿರಿ ಕೃತ

೧. ಕೈನೂಲು ೨—೪—೦

೨. ಕೈನೇಯಿಗೆಯ ಮಾರ್ಗದರ್ಶಿಕೆ ೨–೧೨—೦

ಶೇತಕಿ ಶಾಲೆಗಳಿಗೆ ಉಪಯುಕ್ತವಾದ ಪುಸ್ತಕಗಳು.

ಲೇ:—ನಾರಾಯಣ ಶರ್ಮರು

೧. ಆಧುನಿಕ ಕೃಷಿ ಭಾಗ–೧ ೦–೧೨—೦

೨. ಆಧುನಿಕ ಕೃಷಿ ಭಾಗ–೨ ೦–೧೨—೦

೩. ಆಧುನಿಕ ಕೃಷಿ ಭಾಗ–೩ ೧—೨—೦

ಯಾವತ್ತೂ ಶಾಲೆಯ ಲಾಯಬ್ರರಿಗಳಲ್ಲಿ ಅವಶ್ಯ ಸಂಗ್ರಹಿಸಬೇಕಾದ ಚಿಕ್ಕ ಚಿಕ್ಕ ಹೊತ್ತಗೆಗಳು.

ಮುದ್ದಾದ ದೊಡ್ಡ ಅಕ್ಷರ — ಸುಲಭ ಭಾಷೆ

(ಜೀವನ ಚರಿತ್ರೆಗಳು)

೧. ಮಹಾತ್ಮಾ ಗಾಂಧಿ ೦—[illegible]—೦

೨. ಜವಾಹಿರಲಾಲ ನೆಹರು ೦—೨—೦

೩. ಈಶ್ವರಚಂದ್ರ ವಿದ್ಯಾಸಾಗರ ೦—೪—೦

೪. ಭಗವಾನ್ ಬುದ್ಧದೇವ ೦—೪—೦

೫. ಸ್ವಾಮಿ ವಿವೇಕಾನಂದ ೦—೬—೦

೬. ಮಹಾವೀರ ಮಾರುತಿರಾಯ ೦—೬—೦

೭. ರಾಜಾ ರಾಮ ಮೋಹನರಾಯ ೦—೬—೦

೮. ರಾಷ್ಟ್ರಮಾತಾ ಕಸ್ತೂರಬಾ ೦—೬—೦

೯. ರವೀಂದ್ರನಾಥ ಠಾಕೂರ ೦—೬—೦

೧೦. ಮೌಲಾನಾ ಅಬುಲ್‌ಕಲಂ ಅನುವಾದ ೦—೨—೬

೧೧. ಬಲಶಾಲಿ ಭೀಮಸೇನ ೦—೬—೦

೧೨. ರಾಮಕೃಷ್ಣ ಪರಮಹಂಸರ ದಿವ್ಯಜೀವನ ೦—[illegible]—೦

೧೩. ಝಾಂಸಿಯ ಮರೆಯದ ಮಹಾರಾಣಿ ೦—೬—೦

೧೪. ಸರ್ ಸರ್ವಪಲ್ಲಿ ರಾಧಾಕೃಷ್ಣನ್ ೦—೬—೦

ಉಪಯುಕ್ತ ವ್ಯಾಕರಣಗಳು

ಲೇ:—ಪಂಡಿತ ಕವಲಿ.

೧. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ—೮ನೇ ಇಯತ್ತೆಗೆ ೧—೦—೦

ಕನ್ನಡವ್ಯಾಕರಣ ವಿವಿಧ ಸಾಹಿತ್ಯ ಮಾಲೆ - ೯ನೇಇಯತ್ತೆಗೆ ೧—೪—೦

೩. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ ೧೦—೧೧ನೇ ಇ. ೧—೧೨—೦

ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳಿಗೆ ಉಪಯುಕ್ತ ಪುಸ್ತಕಗಳು.

೧. ಮೂಲಶಿಕ್ಷಣ ಲೇ:–ಹಂದ್ರಾಳ ೩–೦–೦

೨ ಐವರು ಶಿಕ್ಷಣ ಸುಧಾರಕರು ೦–೧೦–೦

೩. ಗದಾಯುದ್ಧ ವರ್ಣನ ೧–೬–೦
(೬ನೆಯ ಆಶ್ವಾಸಗಳು)

೪. ರಸ ಪ್ರಬೋಧಸಾರ ಸಂಗ್ರಹ ೧–೦–೦
ಪ್ರಕಾಶ

ಇವಲ್ಲದೆ ಎಲ್ಲ ಬಗೆಯ ಕನ್ನಡ, ಹಿಂದಿ, ಇಂಗ್ಲಿಷ ಶಾಲೋಪಯೋಗಿ ಪುಸ್ತಕಗಳೂ, ಕಥೆಕಾದಂಬರಿಗಳೂ ದೊರೆಯುತ್ತವೆ. ಮಾಸ್ತರ ಜನರ ಹಾಜರಿ ಫಾರ್ಮ ವಿದ್ಯಾರ್ಥಿ ಹಾಜರಿ ಫಾರ್ಮ್ಸ ವಗೈರೆ ಶಾಲೋಪಯೋಗೀ ಎಲ್ಲ ಬಗೆಯ ಫಾರ್ಮ್ಸ ಹಾಗೂ ಪುಸ್ತಕಗಳೂ ದೊರೆಯುತ್ತವೆ. ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ.

ರಾಮಾಶ್ರಯ ಬುಕ್ ಡಿಪೊ, ಧಾರವಾಡ.

Regd. No, B. 5375

ಗೌರೀಶ ಗ್ರಂಥ ಪ್ರಕಟನಾಲಯ, ಧಾರವಾಡ.

ಹೊಸ ಅಭ್ಯಾಸ ಪತ್ರಿಕೆಯನ್ನನುಸರಿಸಿ

ವಿದ್ಯಾರ್ಥಿಗಳ ಮನಂಬುಗುವಂತೆ ಬರೆಯಲಾದ

ಸಚಿತ್ರ

ನಾಗರಿಕನೀತಿ ಅಥವಾ ಪೌರನೀತಿ (ಸಿವ್ಹಿಕ್ಸ)

(ಶಾಲೆಯ ಶಿಕ್ಷಕರು ಹಾಗು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಹೊತ್ತಿಗೆಗಳು)

ಇಂದಿನ ಬಾಲಕ ನಾಳಿನ ನಾಗರಿಕ. ಸ್ವತಂತ್ರ ಭಾರತದ ಪ್ರಜಾಸಾರ್ವಭೌಮ ರಾಜ್ಯದಲ್ಲಿ ಪ್ರತಿಯೊಬ್ಬ ಬಾಲಕನೂ ಉತ್ತಮ ನಾಗರಿಕನಾಗಿ ಮಾರ್ಪಟ್ಟರೆ ಅದು ಭಾರತದ **ಭಾವೀ ಭವಿತವ್ಯದ ಚಿಹ್ನ**ವೆಂದು ಭಾವಿಸಬೇಕು; ಅಂತೆಯೇ ಇಂದಿನ ಪ್ರಭುತ್ವ ಬಾಲಕರಿಗೆ **ಪೌರನೀತಿ** ಅಥವಾ **ನಾಗರಿಕ** ನೀತಿಯನ್ನು ಕಲಿಸಬೇಕೆಂಬ ಅಭಿಲಾಷೆಯುಳ್ಳದ್ದಾಗಿದೆ. ಇದನ್ನು ಗಮನಿಸಿಯೇ ಅನುಭವಿಕ ವಿದ್ವಾಂಸರಿಂದ ಕತೆ, ಸಂಭಾಷಣೆ, ಉಪನ್ಯಾಸ ಮೂಲಕವಾಗಿ ಬಾಲಕರಿಗೆ ರುಚಿಸುವಂತೆ ರಸವತ್ತಾಗಿ ನಾಗರಿಕ ನೀತಿಯ ಗ್ರಂಥಗಳನ್ನು ಹೊಸ ಅಭ್ಯಾಸಪತ್ರಿಕೆಯನ್ನನುಸರಿಸಿ ಸಿದ್ಧಗೊಳಿಸಲಾಗಿದೆ. ವಿದ್ಯಾರ್ಥಿಗಳು ಇದರ ತುಂಬಾ ಪ್ರಯೋಜನವನ್ನು ಹೊಂದಲೆಂದು ಆಶಿಸುತ್ತೇವೆ.

ಎರಡು ಬಣ್ಣಗಳಿಂದ ಕೂಡಿದ ರಕ್ಷಾಕವಚವುಳ್ಳ ಈ ಎಲ್ಲ ಪುಸ್ತಕಗಳು ಅಂತರಂಗ, ಬಹಿರಂಗದಲ್ಲಿ ಸೌಂದರ್ಯದಿಂದೊಡಗೂಡಿದ್ದು ಮಕ್ಕಳ ಮೆಚ್ಚುಗೆಯನ್ನು ಪಡೆಯುವಂತಿವೆ.

೫ನೆಯ ತರಗತಿಗೆ: ಜನಸಂಖ್ಯೆ, ಆಹಾರ, ನೀರಿನ ಪೂರೈಕೆ ಆಹಾರ ಹಂಚಿಕೆ, ನಗರ ಸ್ವಚ್ಛತೆ, ನಾಗರಿಕರ ಆರೋಗ್ಯ ಮನರಂಜನೆ, ವಾಹನಗಳ ಪ್ರಗತಿ, ಸಮಾಜ ಸೇವಾದಳ ಬಗ್ಗೆ ಬರೆಯಲಾಗಿದೆ. ಒಟ್ಟಿಗೆ ಪೌರನೀತಿಯ ಹೆಚ್ಚಿನ ಜ್ಞಾನಕ್ಕೆ ಮಾರ್ಗಮಾಡಿಕೊಟ್ಟಿದೆ. ಮೋಹಕ ಚಿತ್ರಗಳ ಜೋಡಣೆ ಇದೆ.

೬ನೆಯ ತರಗತಿಗೆ : ಶಾಲೆಯ ಸ್ವಚ್ಛತೆ, ಶಿಸ್ತು, ಸಂಘಟನೆ, ದಿನಪತ್ರಿಕೆಗಳ ಪ್ರಕಟನೆ; ಕಲೆಕ್ಟರ ಹಾಗು ಇತರ ಅಧಿಕಾರಿಗಳ ಕಾರ್ಯ, ಸ್ಥಾನಿಕ ಸ್ವರಾಜ್ಯಸಂಸ್ಥೆ, ಸಾರ್ವಜನಿಕ ಶಿಕ್ಷಣ, **ಸಮಾಜ ಸೇವೆ** ಇತ್ಯಾದಿ ವಿಷಯಗಳನ್ನು ಮನೋರಂಜಕವಾಗಿ ವಿವರಿಸಲಾಗಿದೆ,

ಒಟ್ಟಿಗೆ ವರ್ಗಾನುಕ್ರಮದಿಂದ ಮಕ್ಕಳಲ್ಲಿ ನಾಗರಿಕ ನೀತಿಯು ಹೆಚ್ಚೆಚ್ಚಾಗಿ ಬೆಳೆಯುವಂತೆ ಪಾಠಗಳ ಜೋಡಣೆಯಿದೆ.

ಇಂದೇ ಓದಿ ಉತ್ತಮ ನಾಗರಿಕರಾಗಿರಿ.

ಪ್ರಕಾಶಕರು :

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ. ಅಡಕೀ ಓಣಿ, ಧಾರವಾಡ.

Printed by M. A. Kamat, B. Sc. at Jai Hind Art Press, Bank Road, Dharwar. Edited and Published by M. G. Handral, B. M. Shintri. S. R Tatti, & P. A. Bhaskar Jointly at the Kannada Prathamik Shikshan Office, Govt. Training College for Men, Dharwar.

ಕನ್ನಡದ

ಪ್ರಾಥಮಿಕ ಶಿಕ್ಷಣ

[illegible] ೨೦, ೫ ಸಂಚಿಕೆ

ಬಿಡಿ ಪ್ರತಿ ೬ ಪೈಸೆ] ಮಾರ್ಚ ೧೯೬೩ [ವಾ. ಚಂ. ೪. ರೂ.



ಹೊಸ ಪುಸ್ತಕವು! ತಯಾರಾಗಿ ಬಂದಿದೆ! ತ್ವರೆ ಮಾಡಿರಿ!

—ಕನ್ನಡ-ಕನ್ನಡ ಶಬ್ದಕೋಶ—

ಬರೆಹಗಾರರು:—H. V. ರತ್ನಾಕಾಂತರಾವ್, B. A. (Hons)

ಬೆಲೆ:—ಆರು ರೂಪಾಯಿಗಳು ಮಾತ್ರ.

ಈ ಪುಸ್ತಕದಲ್ಲಿ ೩೫ ಸಾವಿರ ಶಬ್ದಗಳ ಸಂಗ್ರಹವು, ಒಂದುವರೆಲಕ್ಷ ಅರ್ಥ ವಿವರಣೆಯೊಳಗೂಡಿ ತಯಾರಾಗಿದೆ. ಮಂಗಳೂರಿನ ಅಂದವಾದ ಮುದ್ರಣದ ೭೬೫ ಪುಟಗಳ ಈ ಪುಸ್ತಕವು ಮೇಲ್ತರದ ಕೋಶ ಗ್ರಂಥವಾಗಿದೆ. ಇದರಷ್ಟು ದೊಡ್ಡ ಕೋಶಗ್ರಂಥವು ಇನ್ನೊಂದಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. V. P. ಯಿಂದ ಬೇಡುವವರು ೮ ಹಣವನ್ನು ಮುಂಗಡ ಕಳಿಸಬೇಕು.

ಇದಲ್ಲದೆ ನಮ್ಮಲ್ಲಿ ಶಾಲೋಪಯೋಗದ ಎಲ್ಲ ಬಗೆಯ ಪುಸ್ತಕಗಳು,
ಕಥೆಯ ಪುಸ್ತಕಗಳು, ಶಾಲೆಯ ಹಾಜರಿ ಪುಸ್ತಕಗಳು ಸಿಗುತ್ತವೆ.

ಪ್ರಕಾಶಕರು:— ಕೇ. ಎಸ್. ಕುಲಕರ್ಣಿ ಬುಕ್‌ಡಿಪ್ರೋ
ಸ್ಟೇಶನ್‌ರೋಡ್, ಹುಬ್ಬಳ್ಳಿ.

ಪುಟ ೨೮೦) ಮೂಲ ಶಿಕ್ಷಣ (ಬೆಲೆ: ೩-೦-೦

ಲೇಖಕರು:— ಶ್ರೀ. ಮು. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.
(ಪ್ರಿನ್ಸಿಪಾಲ. ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.
ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು
ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪ್ರೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : **ಡಾ. ಡಿ. ವ್ಹಿ. ಚಿಕ್ಕರಮನೆ**, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪ್ರಧಾನ ಸಂಪಾದಕರು : **ಶ್ರೀ. ಎಂ. ಜಿ. ಹಂದ್ರಾಳ** ಬಿ.ಎ. (ಆನರ್ಸ) ಬಿ. ಟಿ., **ಡಿ. ಪಿ. ಇಡಿ;**
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು:

ಶ್ರೀ. ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಆಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಿಲಗುಂದ

ಸಂಪುಟ ೯೨	ಮಾರ್ಚ ೧೯೫೨	ಸಂಚಿಕೆ ೧೦

ಅ. ನಂ. ವಿಷಯ

ಪರಿವಿಡಿ

ಪುಟ

ಬೆಳಗು (ಕವಿತೆ) .... ಶ್ರೀ. ಸಿ. ಪಿ. ಹಿರೇಮಠ ೨
ಸಂಪಾದಕೀಯ ೩
ಪಂಡಿತ ಜವಾಹರಲಾಲ ನೆಹರು .... ಶ್ರೀ. ಶಿಂತ್ರಿ ಬಸಪ್ಪನವರು ೫
ರಾಮಾಯಣದ ಕಥಾ ವಸ್ತುವಿನ ವಿಮರ್ಶೆ .... ತಟ್ಟಿ ಶಾಮರಾಯರು. ೮
ಶಿಬಿರಾಗ್ನಿಯ ಸಮ್ಮುಖದಲ್ಲಿ .... ಶ್ರೀ. ಆಯ್. ಎಸ್. ಬಿದರಿ ೧೨
ಓದು ಕಲಿಯಲು ಆರಂಭದ ಹೆಜ್ಜೆಗಳು .... ಶ್ರೀ. ಎಂ. ಜಿ. ಹಂದ್ರಾಳ ೧೪
ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ ೧೯
ವರ್ಧಾ ಪ್ರಾಯೋಜ ೨೫

ಬೆಳಗು

ಶ್ರೀ ಸಿ. ಪಿ. ಹಿರೇಮಠ, ೧ನೆಯ ವರ್ಷ 'ಬ' ಕ. ಗಂ. ಸರಕಾರೀ ಟ್ರೇ. ಕಾ. ಧಾರವಾಡ

ಭಾಸ್ಕರನ ಬರವನ್ನು ಭೂಜನಕೆ ತಿಳಿಸಲ್ಕೆ
ಮುಂದು ಮುಂದಾಗಿ ಮುಂಜಾವದಲಿ ಅಂದು!

ಪಕ್ಕಿಗಳು ಉಲಿ ಉಲಿತ ಪಕ್ಕ ಬಡಿಯುತಲೆದ್ದು
ಸಾಲಾಗಿ ಹಾರಿದವು ಹಿಕ್ಟಿನಾ ಪಥದಿ!

ಕೊಳಗಳಲಿ ಕಮಲಗಳು ಶಶಿ ಬರದ ಅಘದಿಂದ
ಪರಿಹಾರ ಪಟ್ಟೀಗ ಪಸರಿಸುತ್ತಿಹವು!

ಹಂಸ ಪಕ್ಕಿಗಳೀಗ ಹೊಸ ಹುರುಪ ತಳೆದೆದ್ದು
ಈಸೀಸಿ ಉಲ್ಹಾಸ ಪಡಲಿಚ್ಛಿಸಿಹವು!

ಬಾಲಕರು ಬಾಯ್ಬಿಟ್ಟು ಪಾಠವನು ಪಠಿಸುತ್ತ
ತಮ್ಮ ಗುರಿ ಸಾಧಿಸಲು ಯತ್ನಿಪರು ಆಗ

ಇದನೆಲ್ಲ ಕಾಣ್ಬೇಕು ಎಂಬಾಸೆ ಮುಂದಾಗಿ
ದಿನಕರನು ದಿನದಿನವು ತನ್ನ ಪಥದಲಿ ಈಗ

ಅಗೋ ಅಲ್ಲಿ ಬಾಂದಳದ ಅಂಚಿನಲಿ ಮಿಂಚುತ-
ವನಿಗೆ ಹೊಂಬಣ್ಣವೀಯುತ್ತ ಬರುತಿಹನಿತ್ತ॥

ಹೊನ್ನ ಗಿಂಡಿಯ ತೆರದಿ ಅರುಣನು॥
ತನ್ನ ಅಂದವ ತರುವ ನಿತ್ತಲಾ।
ತನ್ನ ಕರಗಳ ಚಾಚಿ ಜಗವನು ಬೆಳಗುವನು ಭರದಿಂ॥
ಬನ್ನ ಬಡುತಿಹ ಜಗಕೆ ತನ್ನಯ।
ರನ್ನವಾಗಿಹ ಹೊಳಪನೀಡುತ।
ತನ್ನ ಹೊಗಳುವ ತೆರದಿ ತಾನೆಲ್ಲರಿಗೆ ಎಸೆಯುತ್ತಂ॥

ಸಂಪಾದಕೀಯ

ವಸಂತಾಗಮನ :

ಅಂದಿನ ಆ ರಗಳೆಯ, ಬಂಜೆ ದಿನಂಗಳ್ ಪಿಂಚಿ ಸಂತಸದ ಬಣ್ಣಿಸೆಯ ರಸಮಯ ದಿನಂಗಳ್ ಸಾರ್ದು ಸೃಷ್ಟಿದೇವಿಯು "ದರೋನ್ಮೀಲಿತ ನಯನೆಯಾಗಿ" ಪರಿಶೋಭಿಸುತ್ತ ಮಾನವಕೋಟಿಗೂ, ಪಶುಪಕ್ಷಿಗಳಿಗೂ ನೇತ್ರಾನಂದನವನ್ನೂ ಮನಾನಂದವನ್ನೂ ಬೀರುತ್ತ ಇನಿಯ ವಸಂತನ ಆಗಮನವನ್ನು ಸೂಚಿಸುತ್ತಿದ್ದಾಳೆ. ಮೂಕನಂತಿದ್ದ ಕೋಗಿಲೆಯಿಂದು 'ಮಾಮರದೆಳದಳಿರ ರಸವನ್ನು ಹೀರ್ದು ದನಿಯಂ ಸಣ್ಣನಾಗಿಸಿ ಉಲಿಯ ತೊಡಗಿದುದು. ಕಾಜಾಣ, ಪಂಡಿತವಕ್ಕಿ, ಗೊರವಂಕಗಳು ಎಲೆ, ಚಿಗುರೆಲೆ, ಪಸುರೆಲೆ, ಪಣ್ಣೆಲೆಗಳಿಂದ ಕೂಡಿಗ ಗಿಡಬಳ್ಳಿಗಳಲ್ಲಿ ಅವಿತುಕೊಂಡು ವಸಂತಾಗಮನವನ್ನು ಕೂಗಿ ಸಾರುತ್ತಿವೆ. ಎಲ್ಲೆಡೆಗೂ ಪೂಗಳ ಕಂಪು, ಎಳದಳಿರ ಸೊಂಪು, ನಳನಳಿಪ ಬನದ ಪೆಂಪು-ತಂಪುಗಳಿಂದ ಕಾಡು ನಾಡಾಯ್ತು; ನಾಡು ಶೃಂಗರ ಮಾಯ್ತು.

ಹೀಗೆ ನರ್ತಿಸುತ್ತ ಬರುತ್ತಿರುವ ವಸಂತನೊಂದಿಗೆ ನಾಡಿನ ಹೊಸವರ್ಷವು ಇಣಕಿಕ್ಕುತಿದೆ. ಹಳೆಯುಗವು ಕಳೆದು ಹೊಸ ಯುಗದ ಆದಿಯು ಬರಲಿದೆ. ಹಳೆಯದು ಹೊಸದಕ್ಕೆ ಸ್ಥಳ ಕೊಡುವಂತೆ ಅನುಭವ ವಿಶೇಷ ಗಳಿಂದ ಮಾರ್ಗದರ್ಶಕವೂ ಆಗುವಂತಾದರೆ ಹೊಸದು ಹೊಸ ಬೆಳಕನ್ನೂ, ಜ್ಞಾನವನ್ನೂ, ಹೆಚ್ಚಿನ ಪ್ರಗತಿ ಯನ್ನೂ ತರುವದರಲ್ಲಿ ಸಂದೇಹವಿಲ್ಲ. ಸೃಷ್ಟಿಯಲ್ಲಿಯ ಹೊಸತು ಹಳೆಯ ಬಂಜೆತನವನ್ನು, ನೀರಸತೆಯನ್ನು ನಿಃಸತ್ವವನ್ನು ನೀಗಿ ಅದಕ್ಕೊಂದು ಕಾಂತಿಯನ್ನೂ, ಶೋಭೆಯನ್ನೂ, ಉತ್ಸಾಹವನ್ನೂ ಕೊಡುವಂತೆ ಮನುಷ್ಯ ಮಾತ್ರರಾದ ನಾವು ಹಳೆಯ ನೀರಸ. ನಿಃಸಾರ ಸಂಗತಿಗಳನ್ನು ಮರೆತು ಹೊಸ ಹುಮ್ಮಸದಿಂದ, ಧೈರ್ಯದಿಂದ, ತತ್ಪರತೆಯಿಂದ ಕಾರ್ಯಸನ್ನದ್ಧರಾಗುವುದು ವಿಹಿತವಾಗಿದೆ. ಹೊಸತಂತಿರಲಿ–ಎಂದಿನಿಂದಲೂ ಸಾಗಿಬಂದ ಸೂರ್ಯೋದಯ, ಸೂರ್ಯಾಸ್ತಗಳು, ಋತುಮಾನಗಳು- ಧುಮುಕುತ್ತಿರುವ ಜಲಪ್ರಪಾತಗಳು ಇವೇ ಮೊದಲಾದವು ಸೃಷ್ಟಿಯಲ್ಲಿ ನಡೆಯಕ್ಕ ಎಲ್ಲ ಕಾರ್ಯಗಳು ಏನನ್ನು ಸೂಚಿಸುತ್ತಿವೆ? ಆದದ್ದು ಆಗಲಿ, ಬಂದದ್ದು ಬರಲಿ–ಎಲೈ ಮಾನವಾ ನಿನ್ನ ಕರ್ತವ್ಯದಲ್ಲಿ ಚ್ಯುತನಾಗದೆ, ದಕ್ಷತೆಯಿಂದ, ನಿಯಮನಿಷ್ಠೆಯಿಂದ ತೊಡಗುವವನಾಗು. ಅಂದರೆ ಮಾತ್ರ ಸೃಷ್ಟಿಯೊಡನೆ ಸಮರಸವಾದ ಯೋಗವನ್ನು ತಂದುಕೊಳ್ಳುವಿ.

ಸಂಪಾದಕೀಯ

ಶಿಕ್ಷಣ ಕ್ಷೇತ್ರದಲ್ಲಿ ತೊಡಗಿದವರಿಗಂತೂ ವಸಂತಾಗಮನವು ಮಹತ್ವದ್ದಾಗಿದೆ. ಹಳೆಯ ಜಾಡ್ಯತೆಗಳಿದ್ದರೆ ಕಳಚಿ ಹೊಸ ಹುರುಪಿನಿಂದ, ಎಂದಿನಂತೆ ಪ್ರಸನ್ನಮುಖಿಗಳಾಗಿ, ಹರ್ಷದಿಂದ ಕಾರ್ಯೋನ್ಮುಖರಾಗಿ ಹೊಸ ವಿಚಾರಗಳನ್ನು, ಹೊಸ ಪ್ರಯೋಗಗಳನ್ನು, ಹೊಸ ಶೋಧಗಳನ್ನು ಮಾಡುವ ದಾರಿಯಲ್ಲಿ ಮುಂದೆ ಸಾಗುವಾ. "ಪ್ರಾಥಮಿಕ ಶಿಕ್ಷಣವು" ವಸಂತದ ಬರುವಿಕೆಯೊಡನೆ ಬರುವ ಹೊಸ ವರುಷವು ಎಲ್ಲರಿಗೂ ಹರ್ಷದಾಯಕವಾಗಲೆಂದು ಹಾರೈಸುತ್ತದೆ.

ವಸ್ತ್ರಸ್ವಾವಲಂಬನ ಯೋಜನೆ :

ಮೂಲ ಶಿಕ್ಷಣ ಯೋಜನೆಯನ್ನು ಅಮಲಿನಲ್ಲಿ ತರುವ ಅಂಗವಾಗಿ ಸರಕಾರದವರು ಎಲ್ಲ ಮೂಲಶಿಕ್ಷಣ ಸಾಲೆಗಳು ಮತ್ತು ಮೂಲೋದ್ಯೋಗದ ಸಾಲೆಗಳು ವಸ್ತ್ರಸ್ವಾವಲಂಬನ ಸಂಘಗಳನ್ನು ಪ್ರಾರಂಭಿಸಬೇಕೆಂದು ಆಜ್ಞೆಗಳನ್ನು ಹೊರಡಿಸಿದ್ದಾರೆ. ಈ ಸಂಗತಿಯು ನಮ್ಮ ಸಾಲೆಗಳಲ್ಲಿಯ ಮೂಲೋದ್ಯೋಗದ [illegible] ಒಂದು ತರಹದ ಪ್ರಗತಿಯ ಗತಿಯನ್ನು ನಿಶ್ಚಯವಾಗಿ ಕೊಡಬಲ್ಲುದು. ನಮ್ಮ ಸಾಲೆಗಳಲ್ಲಿ ಮೂಲೋದ್ಯೋಗದ ಪ್ರಗತಿಗೆ ತೊಂದರೆಯೆಂದರೆ ಆಶೋತ್ತರದ ಅಭಾವವೆಂದು ಹೇಳಬಹುದು. ನೂಲುವದರಲ್ಲಿಯಾಗಲಿ ಇಲ್ಲವೆ ನೇಯುವದರಲ್ಲಿಯಾಗಲಿ ಮಕ್ಕಳಿಗೆ ತಾವು ಮುಟ್ಟಬೇಕಾದ ನಿರ್ದಿಷ್ಟ ಗುರಿಗಳೇ ಇರುವದಿಲ್ಲ. ಅವರು ಶಿಕ್ಷಕರ ಮಾರ್ಗದರ್ಶನದಲ್ಲಿ ಕುರುಡರಂತೆ ಕೆಲಸ ಮಾಡುತ್ತಿರುತ್ತಾರೆ. ವಸ್ತ್ರಸ್ವಾವಲಂಬನ ಸಂಘಗಳು ಆಶೋತ್ತರಗಳನ್ನು ಪೂರೈಸುವವು. ಮಕ್ಕಳು ಈಗ ಸ್ವಾವಲಂಬಿಯಾಗುವಷ್ಟು ಅರಿವೆಯನ್ನು ನೇಯಬೇಕೆಂಬ ಗುರಿಯನ್ನು ಮುಟ್ಟುವದಕ್ಕೆ ಕಾರ್ಯಪ್ರವೃತ್ತರಾಗುವರು. ತನಗೆ ಅವಶ್ಯವಿರುವಷ್ಟು ಅರಿವೆಯನ್ನು ತಯಾರಿಸಲು ಪ್ರತಿ ವಿದ್ಯಾರ್ಥಿಯು ಯತ್ನಿಸುವನು. ಬಳಿಕ ಬೆಲೆಯನ್ನು ನಿರ್ಧರಿಸಿ ಆ ಬೆಲೆಯನ್ನು ಕೊಟ್ಟು ತಯಾರಿಸಿದ ಅರಿವೆಯನ್ನು ಕೊಂಡುಕೊಳ್ಳುವನು. ಸ್ವಂತಕ್ಕೆ ತೆಗೆದುಕೊಳ್ಳಬೇಕಾಗಿರುವದರಿಂದ ಆ ಅರಿವೆಯನ್ನು ನಯವಾಗಿ ತಯಾರಿಸಲು ಶ್ರಮಿಸುವನು.

ಈ ಯೋಜನೆಯು ಅರಿವೆಯ ಮಾರಾಟದ ತೊಂದರೆಯನ್ನೂ ನೀಗುವದು. ಕೊಂಡುಕೊಳ್ಳುವವರ ಗತಿಯಿಲ್ಲದೆ ಅನೇಕ ಸಾಲೆಗಳಲ್ಲಿ ಅರಿವೆಯು ತಯಾರಿಸಲ್ಪಟ್ಟು ಹಾಗೆಯೇ ಉಳಿದಿವೆ. ಸ್ವಂತಕ್ಕೆ ಬೇಕಾಗುವಷ್ಟು ಮತ್ತು ಸ್ವತಃ ಒಯ್ಯಲೇ ಬೇಕಾದ ಅರಿವೆಯನ್ನು ಪ್ರತಿ ಮಗುವು ತಯಾರಿಸಿದರೆ ನಮ್ಮ ಸಾಲೆಗಳಲ್ಲಿಯ ಅರಿವೆಯನ್ನು ಒಯ್ಯುವದರ ಸಲುವಾಗಿ ಗಿರಾಕಿಗಳ ಬೆನ್ನುಹತ್ತುವ ಅವಶ್ಯಕತೆಯೇ ಉಳಿಯುವದಿಲ್ಲ. ಅರಿವೆಯನ್ನು ತಯಾರಿಸುವವರೇ ಅದನ್ನು ಕೊಂಡುಕೊಳ್ಳುವ ಗಿರಾಕಿಗಳಾಗುವದರಿಂದ ಮಾರಾಟದ ಕಾರ್ಯವು ಶೀಘ್ರತರವೂ ಪರಿಣಾಮಕಾರಿಯೂ ಆಗುವದು. ಎಲ್ಲ ಮೂಲೋದ್ಯೋಗದ ಮತ್ತು ಮೂಲ ಶಿಕ್ಷಣ ಸಾಲೆಗಳು ಮೂಲೋದ್ಯೋಗದ ಅಂಗಭೂತವಾಗಿ ವಸ್ತ್ರಸ್ವಾವಲಂಬನ ಸಂಘಗಳನ್ನು ಶೀಘ್ರದಲ್ಲಿಯೇ ಪ್ರಾರಂಭಿಸುವೆವೆಂದು ಆಶಿಸಲಾಗಿದೆ.

ಮುಖಪೃಷ್ಠದ ಪಡಿಯಚ್ಚಿನ ವಿವರಗಳು

೧. ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡದಲ್ಲಿ ೨೬–೨–೫೩ ರಂದು ಜರುಗಿದ ವಾರ್ಷಿಕ ಪಂದ್ಯಾಟಗಳನ್ನು ಡಾ. ಚಿಕ್ಕರಮನೆ ಮುಂತಾದವರು ನಿರೀಕ್ಷಿಸುತ್ತಿರುವರು.

೨. ಸಾಮೂಹಿಕ ಪಂದ್ಯಾಟದಲ್ಲಿ ಪ್ರಾಧ್ಯಾಪಕರು ಲಾಗ ಹೊಡೆಯುತ್ತಿರುವರು.

೩. ಶಿಕ್ಷಕ ವಿದ್ಯಾರ್ಥಿಗಳ ಸಾಮೂಹಿಕ ಕವಾಯಿತು.

೪. ಕಬ್ಬಿಣ ಗುಂಡು ಎಸೆಯುವ ನೋಟ.

೫. ಹತ್ತು ಶಿ. ವಿ. ಗಳ ಗೋಪುರ.

೬. ಲೇಜೀಮ್ ಆಟದ ನೋಟ.

೭. ಒಂಬತ್ತು ಶಿ. ವಿ. ಗಳ ಗೋಪುರ.

ಪಂಡಿತ ಜವಾಹರಲಾಲ ನೆಹರು

ಲೇಖಕರು:- **ಶ್ರೀಯುತ ಶಿಂತ್ರಿ ಬಸಪ್ಪನವರು** ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ
ದಕ್ಷಿಣ ಭಾಗ, ಧಾರವಾಡ

(ಹಿಂದಿನ ಸಂಚಿಕೆಯಿಂದ ಮುಂದುವರೆದದ್ದು)

ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ ಮತ್ತು ಹೋರಾಟ

ಇಲ್ಲಿಯ ವರೆಗೆ ಜವಾಹರಲಾಲರಿಂದ ಹೊರಸೂಸಿ ಬಂದ ತ್ಯಾಗಬುದ್ಧಿ, ಸ್ವದೇಶಪ್ರೇಮ, ದೇಶಸೇವೆ, ಆಗಾಗ ಅನುಭವಿಸಿದ ಕಾರಾಗೃಹವಾಸ, ಪರದೇಶಗಳಲ್ಲಿ ಪಡೆದಂತಹ ಅನುಭವ, ಮೊದಲಾದವುಗಳನ್ನು ಮನ-ದಂದು ರಾಷ್ಟ್ರಕ್ಕೆ ರಾಷ್ಟ್ರವೇ ಒಕ್ಕೊರಲಿನಿಂದ ಅವರನ್ನು ೧೯೨೯ನೆಯ ಇಸವಿಯ ಡಿಶಂಬರ ತಿಂಗಳದ ಕೊನೆಯ ವಾರದ ಕೊನೆಯ ಹಂತದಲ್ಲಿ ಲಾಹೋರದಲ್ಲಿ ಕಲೆತ ಕಾಂಗ್ರೆಸ್ಸದ ಅಧಿವೇಶನಕ್ಕೆ ಅಧ್ಯಕ್ಷರನ್ನಾಗಿ ಆರಿಸಿತು. ಆಗ ಅವರಿಗೆ ೪೦ ವರುಷದ ಪ್ರಾಯ. ಇಷ್ಟು ಚಿಕ್ಕ ವಯಸ್ಸಿನ ಅಧ್ಯಕ್ಷರು ಅಂದಿನ ವರೆಗೆ ಎಂದೂ ಯಾರೂ ಆಗಿರಲಿಲ್ಲವೆಂಬುದನ್ನು ಓದುಗರು ಗಮನಿಸುವದೊಳಿತು. ಬಿಸಿರಕ್ತದ ಹುರುಪು ಹುಮ್ಮಸಗಳಿಂದ ತುಂಬಿ ತುಳುಕುತ್ತಿದ್ದಂತಹ ಜವಾಹರಲಾಲರು ಅಧ್ಯಕ್ಷಪೀಠದಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಘೋಷಿಸಿ ದಿನಾಂಕ ೩೧ ನೆಯ ಮಧ್ಯರಾತ್ರಿ ೧೨ ಗಂಟೆಯ ಸುಮುಹೂರ್ತದಲ್ಲಿ ರಾಷ್ಟ್ರದ ಬಾವುಟ (National Flag)ವನ್ನು ಹಾರಿಸಿದರು. ಅಂದಿನಿಂದ ಅದು ಅವ್ಯಾಹತವಾಗಿ ಹಾರಾಡುತ್ತಲೇ ಇದೆ ಮತ್ತು ಮುಂದಾದರೂ ಹಾರಾಡ-ವದು. ಆ ಹೆಗ್ಗುರಿಯನ್ನಿಟ್ಟುಕೊಂಡೇ ಕಾಂಗ್ರೆಸ್ಸು ಅಂದಿನಿಂದ ಜವಾಹರಲಾಲರ ಹಿರಿಯತನದಲ್ಲಿ ತನ್ನ ಹೋರಾಟವನ್ನು ಅಣಿಗೊಳಿಸಿ ಪ್ರಾರಂಭಿಸಿತು. ೧೯೩೦ ರಲ್ಲಿ ಜವಾಹರಲಾಲ, ಅವರ ಮುಪ್ಪಿನ ತಂದೆ ಮೋತಿಲಾಲ ಮತ್ತು ಮಹಾತ್ಮಾಗಾಂಧಿ ಇವರೆಲ್ಲರನ್ನು ಹಿಡಿದು ಬಂದೀಖಾನೆಯಲ್ಲಿಟ್ಟರು. ೧-೧-೧೯೩೧ನೆಯ ದಿವಸ ಶ್ರೀಮತಿ ಕಮಲಾದೇವಿ ನೆಹರೂರವರನ್ನು ಬಂಧಿಸಿದರು. ಮೋತಿಲಾಲರಿಗೆ ಭಯಂಕರ ಜಡ್ಡಾಯಿತು. ಕೂಡಲೆ ಸರಕಾರದವರು ಜವಾಹರಲಾಲ ಮತ್ತು ಅವರ ಹೆಂಡತಿ ಈರ್ವರನ್ನೂ ಬಂಧಮುಕ್ತ ಮಾಡಿದರು. ಅವರ ತಂದೆಯವರಿಗೆ ಬಂದ ಜಡ್ಡು ಸರಿಯದೆ ದಿನದಿನಕ್ಕೆ ಹೆಚ್ಚುತ್ತ ನಡೆದು ಅವರು ೬-೨-೧೯೩೧ನೆಯ ದಿನ ದಿವಂಗತ-ರಾದರು ! ಪಿತೃವಿಯೋಗದ ದುಃಖವನ್ನು ಹೇಗಾದರೂ ನುಂಗಿಕೊಂಡು ಮಿಂಚಿನ ವೇಗದಿಂದ ಹಿಂದುಸ್ಥಾನದ ತುಂಬೆಲ್ಲ ಸಂಚಾರವನ್ನು ಕೈಕೊಂಡು ಹೋದಲ್ಲೆಲ್ಲ ಸರಕಾರದಗೂಡ ಹೇಗೆ ಹೋರಾಡಬೇಕೆಂಬುದರ ಬಗೆಗೆ ಭಾಷಣಗಳನ್ನು ಮಾಡಿದರು. ೧೯೩೨ನೆಯ ಇಸವಿ-ಯಲ್ಲಿ ಕಾಂಗ್ರೆಸ್ಸು ಕಾಯಿದೆಬಾಹಿರ ಸಂಸ್ಥೆ (unlaw-ful assembly) ಯೆಂದು ಸಾರಿ ಸರಕಾರದವರು ಅವರನ್ನು ಪುನಃ ಬಂಧಿಸಿ ದೀರ್ಘ ಕಾಲದ ವರೆಗೆ ಡೆಹರಾಡುನ್ ಬಂದೀಖಾನೆಯಲ್ಲಿಟ್ಟರು. ಈ ಸಮಯಲ್ಲಿ ಶ್ರೀಮತಿ ಕಮಲಾದೇವಿ ನೆಹರೂರವರಿಗೆ ದೊಡ್ಡದೊಂದು ಬೇನೆಯು ಬಡಿದುಕೊಂಡಿತು. ಇಲ್ಲಿಯ ಡಾಕ್ಟರರಿಗೆ ಅದು ನೀಗಲಿಲ್ಲವಾದುದರಿಂದ ಜರ್ಮನಿಗೆ ಹೋಗಲು ಉಪದೇಶಿಸಿದರು. ಪತ್ರದ್ವಾರದಿಂದ ತಮ್ಮ ಪತಿಯ ಅನುಮತಿಯನ್ನು ಪಡಕೊಂಡು ತಮ್ಮ ಮಗಳು ಇಂದಿರೆಯೊಂದಿಗೆ ಜರ್ಮನಿಗೆ ಹೋದರು ಮತ್ತು ಕೆಲದಿನಗಳ-ಲ್ಲಿಯೇ ಸ್ವರ್ಗಸ್ಥರಾದರು! ಕೂಡಲೇ ಜವಾಹರಲಾಲರು ಬಿಡುಗಡೆ ಮಾಡಲ್ಪಟ್ಟರು. ವಿಮಾನದಿಂದ ಜರ್ಮನಿಗೆ

ಹೋಗಿ ತಮ್ಮ ಮಗಳು ಇಂದಿರೆಯನ್ನು ಕರಕೊಂಡು ಇಂಗ್ಲಂಡಕ್ಕೆ ಹೋಗಿ ಅಲ್ಲಿ ಅವಳನ್ನು ಕಲಿಯಲಿಕ್ಕಿಟ್ಟು ೧೯೩೬ರಲ್ಲಿ ಸ್ವದೇಶಕ್ಕೆ ಒಂಟಿಗರಾಗಿ ಮರಳಿದರು. ಆ ವರುಷ ಪುನಃ ಅವರು ಕಾಂಗ್ರೆಸ್ಸದ ಅಧ್ಯಕ್ಷರೆಂದು ಚುನಾಯಿಸಲ್ಪಟ್ಟರು. ಸಂಘಟನೆಯ ಕಾರ್ಯವನ್ನು ಮತ್ತಿಷ್ಟು ಜೋರಿನಿಂದ ಸಾಗಿಸಿದರು. ಇದರ ಪರಿಣಾಮದಿಂದ ೧೯೩೭ನೆಯ ಇಸವಿಯಲ್ಲಾದ ಚುನಾವಣಿಗಳಲ್ಲಿ ಕಾಂಗ್ರೇಸ್ಸು ಪ್ರಚಂಡ ಬೆಂಬಲವನ್ನು ಸಂಪಾದಿಸಿ ೧೧ ಪ್ರಾಂತಗಳ ಪೈಕಿ ೭ ಪ್ರಾಂತಗಳಲ್ಲಿ ತನ ಹೆಚ್ಚಿನ ಬಹುಮತವನ್ನು ಸ್ಥಾಪಿಸಿತು. ೧೯೩೮ರಲ್ಲಿ ಅವರ ತಾಯಂದಿರಾದ ಶ್ರೀಮತಿ ಸ್ವರೂಪರಾಣಿಯವರು ತಮ್ಮ ಸ್ವಗೃಹವಾದ ಆನಂದ ಭುವನದಲ್ಲಿ ಸ್ವರ್ಗಸ್ಥರಾದರು! ಪಿತೃ–ವಿಯೋಗ ಮತ್ತು ಸತಿ-ವಿಯೋಗಗಳಗೂಡ ಮಾತೃ–ವಿಯೋಗವೂ ಅವರ ಪಾಲಿಗೆ ಬಂದಿತು!! ನಂಬಿಗಸ್ಥ ಸೇವಕನಾದ "ಹರಿ" ಯೆಂಬವನೊಬ್ಬನ ಹೊರತು ಆಗ ಮನೆಯಲ್ಲಿಯಾರೂ ಇರಲಿಲ್ಲ. ಈ ದೃಶ್ಯವನ್ನು ನೋಡಿ ಅವರ ಹೃದಯವು ನಿಜವಾಗಿ ನಡುಗಿರಬೇಕು! ಕೆಲ ದಿನಗಳ ತರುವಾಯ ಧೈರ್ಯದಿಂದ ಚೇತರಿಸಿಕೊಂಡೆದ್ದು ಸ್ಪೇನ, ಚೀನ ಮತ್ತು ಸಿಂಹಳ ದ್ವೀಪಗಳಿಗೆ ಸಂದರ್ಶನವಿತ್ತು ಆಯಾ ದೇಶಗಳ ಮುಖಂಡರ ಸ್ನೇಹವನ್ನು ಸಂಪಾದಿಸಿದರು. ೧೯೩೯ರಲ್ಲಿ ಎರಡನೆಯ ಜಾಗತಿಕ ಯುದ್ಧವು ಎದ್ದಿತು ಮತ್ತು ಬ್ರಿಟನ್ನವು ಸಪ್ಟಂಬರ ೩ನೆಯ ತಾರೀಖಿನ ದಿನ ಅದ ರಲ್ಲಿ ಧುಮುಕಿ ನಮ್ಮ ಮುಖಂಡರ ಒಪ್ಪಿಗೆಯನ್ನು ತಕ್ಕೊಳ್ಳದೆ ಹಿಂದುಸ್ತಾನವೂ ಯುದ್ಧದಲ್ಲಿ ಸೇರಿತೆಂದು ಸಾರಿತು. ಕೂಡಲೇ ಕಾಂಗ್ರೆಸ್ಸು ಮಂತ್ರಿ ಪದವಿಗಳಿಗೆಲ್ಲ ರಾಜಿನಾಮೆ ಕೊಟ್ಟು ಹೊರಳಿಗುಯಿತು. ಜವಾಹರಲಾಲರು ದೇಶವನ್ನೆಲ್ಲ ತಿರುಗಾಡಿ ಸರಕಾರದಗೂಡ ಹೋರಾಡುವ ಕ್ರಮಗಳನ್ನೆಲ್ಲ ಜನರಿಗೆ ತಿಳಿಹೇಳಿದರು. ಸರಕಾರದವರು ಅವರನ್ನು ಬಂಧಿಸಿ ಒಂದು ವರುಷದ ವರೆಗೆ ಬಂದೀಖಾನೆಯಲ್ಲಿಟ್ಟರು. ಗಾಂಧೀಜಿಯವರು 'ಚಲೇಜಾವ' (Quit India) ಚಳವಳಿಯನ್ನೂದಿದರು. ೧೯೪೨ ನೆಯ ಇಸವಿ ಆಗಸ್ಟ ತಿಂಗಳ ೮ ನೆಯ ದಿನಾಂಕದಲ್ಲಿ ಮುಖಂಡರೆಲ್ಲರು ಮುಂಬಯಿಯಲ್ಲಿ ಸಭೆ ಸೇರಿದರು. ಮರುದಿನ ನಸುಕಿನಲ್ಲಿ ಎಲ್ಲರನ್ನೂ ಕೈದು ಮಾಡಿ ಸೆರೆಮನೆಯಲ್ಲಿಟ್ಟರು. ಇವರಲ್ಲಿ ಜವಾಹರಲಾಲರೊಬ್ಬರಿದ್ದರೆಂಬ ಮಾತನ್ನು ಇಲ್ಲಿ ಹೇಳುವದು ಬೇಡ. ೧೯೪೫ರಲ್ಲಿ ವಿಶ್ವ ಮೇಧವು ಮುಗಿದ ಬಳಿಕ ಅವರೆಲ್ಲರೂ ಬಿಡುಗಡೆ ಮಾಡಲ್ಪಟ್ಟರು. ಅದೇ ವರುಷ ದೇಶದಾದ್ಯಂತ ಮಹಾಚುನಾವಣೆಯು ನಡೆದು ಕಾಂಗ್ರೆಸ್ ಉಮೇದವಾರರು ಎಲ್ಲ ಕಡೆಗೆ ಪ್ರಚಂಡ ಬಹುಮತದಿಂದ ಆರಿಸಿ ಬಂದರು. ಇಂಗ್ಲಂಡದಲ್ಲಿಯೂ ಚುನಾವಣೆಯಾಗಿ ಕೂಲಿಕಾರ ಪಕ್ಷವು ವಿಜಯಶಾಲಿಯಾಯಿತು. ಮೇಜರ ಕ್ಲೆಮೆಂಟ ಆ್ಯಟ್ಲಿಯವರು ಪ್ರಧಾನಾಮಾತ್ಯರಾದರು. ಹಿಂದುಸ್ತಾನದ ಸ್ನೇಹ–ಹಸ್ತವನ್ನು ಶಾಶ್ವತ-ಸಂಪಾದಿಸಲು ಆ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವದೇ ತರಣೋಪಾಯವೆಂದು ಪಾರ್ಲಿಮೆಂಟನಲ್ಲಿ ಸಾರಿದರು. ಅದರಂತೆ ಮುಂದೆ ವ್ಯವಸ್ಥೆ ನಡೆದು ಪಾಕಿಸ್ತಾನ ಮತ್ತು ಹಿಂದುಸ್ತಾನ ಎಂಬೆರಡು ರಾಷ್ಟ್ರಗಳ ಉತ್ಪತ್ತಿಯಾಯಿತು. ಈ ಘೋರ ಹೋರಾಟದಲ್ಲಿ ಜವಾಹರಲಾಲರು ೧೯೨೦ ರಿಂದೀಚೆಗೆ ಎಂಟು ವರುಷಕ ರಾಗೃಹವಾಸವನ್ನನುಭೋಗಿಸಿದರು. ಅದರ ವಿವರ ಈ ಪ್ರಕಾರ ಇದೆಃ– ೧೯೨೧, ೧೯೨೨, ೧೯೩೦, ೧೯೩೨, ೧೯೩೪, ೧೯೪೦–೪೧, ೧೯೪೨, ಕೊನೆಯ ಸಲ ಒಂದೇ ಸಮನೆ ಮೂರು ವರುಷಗಳ ವರೆಗೆ ಅಹಮ್ಮದನಗರ ಜೇಲಿನಲ್ಲಿದ್ದರು. ಒಟ್ಟಿನಲ್ಲಿ, ೧೯೨೦ ನೆಯ ಇಸವಿಯಿಂದೀಚೆಗಿನ ಅವರ ಚರಿತ್ರವೆಂದರೆ ಕಾಂಗ್ರೆಸ್ಸದ ಇತಿಹಾಸವೆಂದೇ ಹೇಳಬಹುದು

ಸ್ವಾತಂತ್ರ್ಯದಿನ ಮತ್ತು ಅದರ ತರುವಾಯ.

ಜವಾಹರಲಾಲರು ತ್ಯಾಗಮೂರ್ತಿಯೂ ಅಹುದು; ಭಾರತ ಭೂಷಣರೂ ಅಹುದು; ನಾಗರಿಕರೆಲ್ಲರ ಹೃದಯಾಂತರಾಳದಲ್ಲಿ ಮನೆಮಾಡಿಕೊಂಡಿರುವ ಮುಖಂಡರೂ ಅಹುದು; ಜಗದ್ವಿಖ್ಯಾತ ರಾಜಕಾರಣಿಯೂ ಅಹುದು; ಪೂಜ್ಯ ಬಾಪುಜಿಯ ಉತ್ತರಾಧಿಕಾರಿಯೂ ಅಹುದು. ಇಂತಪ್ಪ ವಿಭೂತಿಯನ್ನು ನಮ್ಮ ರಾಷ್ಟ್ರವು ಪ್ರಧಾನಾಮಾತ್ಯರನ್ನಾಗಿ ಚುನಾಯಿಸಿದುದರಲ್ಲೇನಾಶ್ಚರ್ಯ ? ೧೯೪೭ನೆಯ ಅಗಸ್ಟ ತಿಂಗಳ ೧೫ ನೆಯ ದಿನಾಂಕವು ನಮ್ಮ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂತಹ ದಿನವು. ಆ

ದಿನ ಜವಾಹರಲಾಲರು ಲಾರ್ಡ ಮಾವುಂಟ ಬ್ಯಾಟನ್ನರವರಿಂದ ಅಧಿಕಾರಸೂತ್ರಗಳನ್ನು ವಹಿಸಿದರು. ಕೂಡಲೆ ಬಂಗಾಲ-ಪಂಜಾಬ ಪ್ರಾಂತಗಳಲ್ಲಿ ಲೆಕ್ಕವಿಲ್ಲದಷ್ಟು ರಕ್ತಪಾತವೂ, ಕೋಲಾಹಲವೂ, ಸಂಬವಿಸಿವವು. ದಿನ ದಿನಕ್ಕೆ ಹೊಸ ಹೊಸ ಪ್ರಬಲ ಸಮಸ್ಯೆಗಳು ಸಿಡಿದೆದ್ದು ಅವರ ತಲೆಯನ್ನು ತಿನ್ನಲಿಕ್ಕೆ ಹತ್ತಿದವು, ಇನ್ನೂ ಹತ್ತುತ್ತಲೇ ಇವೆ, ಸ್ವಾತಂತ್ರ್ಯದ ನಂತರ ಅವರಿಗೆ ಸುಖವೇ ಇಲ್ಲದಾಗಿದೆ. ಈ ಐದು ವರುಷಗಳ ವರೆಗೆ ಪತ್ರಸ್ಥ, ಸಮರ್ಥ, ಕಾರ್ಯದಕ್ಷ, ಮತ್ತು ಚಾಣಾಕ್ಷ ಕಪ್ತಾನನಂತೆ ಹಡಗವನ್ನು ಯಾವ ಬಂಡೆಗಲ್ಲಿಗೂ ತಾಕಿ ಅಪ್ಪಳಿಸದಂತೆ ಕುಶಲತೆಯಿಂದ ನಡೆಯಿಸಿಕೊಂಡು ಬಂದಿದ್ದಾರಲ್ಲವೇ? ಜನತೆಯು ತಮ್ಮಲ್ಲಿಟ್ಟ ಪ್ರೇಮಾದರ ವಿಶ್ವಾಸಗಳಿಗೆ ಎಳ್ಳಷ್ಟು ಚ್ಯುತಿಯನ್ನು ತರಗೊಡಲಿಲ್ಲವಲ್ಲವೇ? ಇವುಗಳನ್ನೆಲ್ಲ ಮನವರಿದು ಅವರನ್ನು ರಾಷ್ಟ್ರವು ಪುನಃ ಐದು ವರುಷಗಳ ವರೆಗೆ ಪ್ರಧಾನಾಮಾತ್ಯರನ್ನಾಗಿ ಏಕಕಂಠನಿಂದ ಆರಿಸಿದೆ. ಪ್ರಜಾಪ್ರಭುತ್ವ democracy)ದ ನಾಯಕನಲ್ಲಿರಬೇಕಾದ ಗುಣಗಳೆಲ್ಲ ಅವರಲ್ಲಿ ನೆಲಸಿವೆಯೆಂಬುದೇ ನಮ್ಮ ಪ್ರಾಂಜಲ ಮತ. ಈಗ ಅವರಿಗೆ ೬೩ ವರುಷಗಳಾಗಿವೆ. ಇಳಿವಯಸ್ಸಿನಲ್ಲಿ ಸಹ ಹರೆಯ ಹುಡುಗರ ಹಾಗೆ ಕೆಲಸ ಮಾಡುವ ಹುರುಪು-ಹುಮ್ಮಸಗಳು ಅವರಲ್ಲಿವೆ. ರಾಷ್ಟ್ರೋನ್ನತಿಯ ಕಾರ್ಯಗಳನ್ನು ನಿರ್ವಹಿಸಲು ಇನ್ನೂ ಹೆಚ್ಚಿನ ಸ್ಫೂರ್ತಿಯನ್ನೂ ಕ್ರಿಯಾತ್ಮಕ-ಶಕ್ತಿಯನ್ನೂ ದಯಪಾಲಿಸಲೆಂದು ಆ ಧಯಾಘನನಾದ ಪರಮಾತ್ಮನನ್ನು ಅನನ್ಯಭಾವದಿಂದ ಪ್ರಾರ್ಥಿಸಿ ಈ ಚರಿತ್ರವನ್ನು ಇಲ್ಲಿಗೇ ವಿರಮಿಸುತ್ತೇವೆ.

ಕೊನೆಯ ಮಾತು.

ಪ್ರಾಥಮಿಕ ಪ್ರಮಾಣ ಪತ್ರ ಪರೀಕ್ಷೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಟ್ರೇನಿಂಗ ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳೂ ಶಿಕ್ಷಕಿ-ವಿದ್ಯಾರ್ಥಿನಿಯರೂ ಈಗಿನ ಅಭ್ಯಾಸ ಪತ್ರಿಕೆಯ ಪ್ರಕಾರ ಇತಿಹಾಸ ವಿಷಯದಲ್ಲಿ ಪ್ರಚಲಿತ ಮುಖಂಡರ ಚರಿತ್ರವನ್ನು ಅರಿತಿರಬೇಕೆಂಬುದಿದೆ. ಆದುದರಿಂದ, ಜವಾಹರಲಾಲರವರಿಂದಲೇ ಬರೆಯಲ್ಪಟ್ಟ ಅವರ ಚರಿತ್ರದ ಹೊತ್ತಿಗೆ (auto biography)ಯಿಂದ ವಿವರಗಳನ್ನೆಲ್ಲ ಕಲೆಹಾಕಿ ಅವುಗಳ ತಿರುಳನ್ನು ಸಾಲೆ ಟ್ರೇನಿಂಗ ಕಾಲೇಜುಗಳಿಗೆ ಉಪಯೋಗವಾಗಲೆಂಬ ಸದುದ್ದೇಶದಿಂದ ಈ ಲೇಖದಲ್ಲಿ ಕೊಡಲಾಗಿದೆ. ಶಿಕ್ಷಕ-ಶಿಕ್ಷಕಿಯರು ಇದನ್ನೋದಿಕೊಂಡು ತಮ್ಮ ತಮ್ಮ ಕ್ಲಾಸುಗಳಲ್ಲಿಯ ಮಕ್ಕಳಿಗೆಲ್ಲ ಇದರ ಪೂರ್ಣ ಲಾಭವನ್ನು ಮಾಡಿಕೊಡಬೇಕೆಂಬುದೇ ನಮ್ಮ ಹೆಬ್ಬಯಕೆ.

ಜೈಹಿಂದ

ರಾಮಾಯಣದ ಕಥಾ ವಸ್ತುವಿನ ವಿಮರ್ಶೆ

ಸಿ. ವಿ. ವೈದ್ಯರ 'ರಾಮಾಯಣ ಒಗಟು' ಎಂಬ ಗ್ರಂಥದ ಆಧಾರದಿಂದ

ಲೇಖಕರು: ತಟ್ಟಿ ಶ್ಯಾಮರಾಯರು, ನಿವೃತ್ತ ಪ್ರಿನ್ಸಿಪಾಲರು, ಧಾರವಾಡ.

ಆದರಲ್ಲಿ ಹಿಂದುಗಡೆ ಸೇರಿದ ಕೆಲವಂಶಗಳನ್ನೂ ಅತಿರಂಜತೆಗಳನ್ನೂ ಬಿಟ್ಟರೆ ವಾಲ್ಮೀಕಿ ರಾಮಾಯಣದಂತಹ ಉದಾತ್ತವಾದ ಹಾಗೂ ಮನೋಹರವಾದ ಕಾವ್ಯವು ಬೇರೆ ಯಾವ ಭಾಷೆಯಲ್ಲಿಯೂ ಬರೆಯಲ್ಪಟ್ಟಿಲ್ಲ. ಅದು ಉಳಿದ ಎಲ್ಲ ಸಂಸ್ಕೃತ ಕಾವ್ಯಗಳನ್ನು ಹಿಂದೆಹಾಕುವದು. ಮಹಾಭಾರತದಿಂದ ನಾವು ಜೀವನದ ಪರಿಪೂರ್ಣ ಆದರ್ಶಗಳನ್ನು ತಿಳಿದುಕೊಳ್ಳುವಂತಿದೆ. ಮೊದಲನೆಯದು ಬಾಳುವೆಯ ಕಷ್ಟನಷ್ಟಗಳನ್ನೂ ಅದರಿಂದ ಕಲಿಯಬಹುದಾದ ಸಂಗತಿಗಳನ್ನೂ ವರ್ಣಿಸಿದರೆ, ಎರಡನೆಯದು ಒಂದು ಕಾಲ್ಪನಿಕವಾದರೂ ಉದಾತ್ತ ಜೀವನದ ಸಮ್ಮಾನದುಮಾರ್ಗಗಳನ್ನು ಬಣ್ಣಿಸುತ್ತಿದೆ. ಯಾರಿಗೆ ಉದಾತ್ತವಾದ, ಉನ್ನತವಾದ, ವಿಶಾಲವಾದ, ಅದ್ಭುತವಾದ ವಿಚಾರಗಳು ಸೇರುವವೋ ಅವರಿಗೆ ರಾಮಾಯಣವು ಜಗತ್ತಿನ ಆದರ್ಶ ಕಾವ್ಯಗಳಲ್ಲಿ ಒಂದಾಗಿರುವದು. ಸಂಸ್ಕೃತವಾಙ್ಮಯದಲ್ಲಿ ಅದು ಸರ್ವಶ್ರೇಷ್ಠ ಹಾಗು ಆದಿಕಾವ್ಯವೆಂದು ಪರಿಗಣಿಸಲ್ಪಟ್ಟಿದೆ. ಈ ಪ್ರಥಮಕಾವ್ಯದ ಮಾದರಿಯಿಂದಲೇ ಮಹಾಕಾವ್ಯದ ಲಕ್ಷಣಗಳು ಯಾವವಿರಬೇಕೆಂಬದು ನಿಶ್ಚಿತವಾದಂತೆ ಕಾಣುತ್ತದೆ. 'ಇಲಿಯಡ್' ಎಂಬ ಗ್ರೀಕ್ ಕಾವ್ಯದಿಂದ ಮಹಾಕಾವ್ಯದ ಕಲ್ಪನೆಯು ಹೀಗೆಯೇ ಪಾಶ್ಚಾತ್ಯರಿಗೆ ಹೊಳೆಯಿತು. ಸಂಸ್ಕೃತ ಕವಿಗಳ ಕಲ್ಪನೆಯ ಪ್ರಕಾರ ಮಹಾಕಾವ್ಯದಲ್ಲಿ ಋತುಗಳ ವರ್ಣನೆ, ಸೂರ್ಯೋದಯ ಸೂರ್ಯಾಸ್ತಗಳ ವರ್ಣನೆ, ನಗರಗಳು, ಅಡವಿಗಳು, ಸೈನ್ಯಗಳ ಆಕ್ರಮಣ ಹಾಗು ಯುದ್ಧದ ವರ್ಣನೆಗಳು ಇರಬೇಕು. ರಾಮಾಯಣದಲ್ಲಿ ಇವೆಲ್ಲವುಗಳ ಸರ್ವೋತ್ಕೃಷ್ಟ ವೈಭವದಿಂದ ಕೂಡಿದ ವರ್ಣನೆಗಳಿವೆ. ಅದು ಮುಂದೆ ಮಹಾಕಾವ್ಯಗಳನ್ನು ರಚಿಸಿದ ಕವಿಗಳಿಗೆ ಆದರ್ಶಪ್ರಾಯವಾಗಿದೆ.

ಸಂಸ್ಕೃತ ಕವಿಗಳ ಪ್ರಕಾರ ರಾಮಾಯಣವು ಮಹಾಕಾವ್ಯವಾದರೂ ಪಾಶ್ಚಾತ್ಯರ ವಿಚಾರಕ್ಕನುಸರಿಸಿ ಅದು ಮಹಾಕಾವ್ಯವಾಗಲಾರದು; ಏಕೆಂದರೆ ಅದರ ವಿಷಯವು ಒಂದೇ ಒಂದು ಸಂಕೀರ್ಣವಾದ, ಜಟಿಲವಾದ ಘಟನೆಯು ಆಗಿರುವದಿಲ್ಲ ಮತ್ತು ಅವರ ಭಾಷೆಯು ನಿತಾಂತ ಗಂಭೀರವೂ ವೈಭವಶಾಲಿಯೂ ಆಗಿರುವದಿಲ್ಲ. ನಿಜವಾಗಿ ನೋಡಿದರೆ ಅದು ಮಹಾಕಾವ್ಯಕ್ಕೂ, ಅಥವಾ ವೀರರಸ ಪ್ರಧಾನವಾದ ಕಾವ್ಯಕ್ಕೂ ಮನಸ್ಸಿನ ಸೂಕ್ಷ್ಮಭಾವನೆಗಳನ್ನು ಬಣ್ಣಿಸುವ ಲಲಿತಕಾವ್ಯಕ್ಕೂ ಮಧ್ಯವರ್ತಿಯಾಗಿದೆ. ಅದು ಒಬ್ಬ ಧೀರೋದಾತ್ತ ನಾಯಕನ ಶೌರ್ಯಪರಾಕ್ರಮಗಳನ್ನು ವರ್ಣಿಸುವದಲ್ಲದೆ ಅದರಲ್ಲಿನ ಮನೋಭಾವನೆಯು ತೀಕ್ಷ್ಣವಾಗಿದ್ದು ಸಂವೇದನೆಯ, ತ್ವರಿತ ಛಂದಸ್ಸಿನಿಂದ ಬದ್ಧವಾಗಿದೆ. ಆನಾಲ ಎಂಬ ಆಂಗ್ಲ ಗ್ರಂಥಕಾರನು ಹೀಗೆ ಬರೆದಿದ್ದಾನೆ: "ಸಾತ್ಮಕ ಕಾವ್ಯಗಲ್ಲಿ ಶಬ್ದಗಳೊಂದಿಗೆ ಜೊತೆ ಜೊತೆಯಾಗಿ ಗೀತಾನುಭವವೊಂದು ಇರುವದು. ಮೊದಲಿನಿಂದಲೇ ರೂಢಿಯಾಗಿತ್ತು. ತ್ವರಿತಗತಿ ಮತ್ತು [illegible] ತಪ್ತ ಛಂದಸ್ಸು ಇರುವದು ರೂಢಿಯಾಗಿತ್ತು. ಮನಸ್ಸು ಶಾಂತವೂ ಧ್ಯಾನಪರವೂ ಇದ್ದಾಗ ಬರುವ ಭಾಷೆಗಿಂತ ಅದು ಉದ್ದೀಪಿತವಾದಾಗ ಬರುವ ಭಾಷೆಯು ಅವರ ಸ್ವಭಾವವಾಗಿತ್ತು.

ರಾಮಾಯಣದ ಮೊಟ್ಟಮೊದಲಿಗೆಯೇ ವಾಲ್ಮೀಕಿಯು ತಾನು ರಾಮನ ಪರಾಕ್ರಮವನ್ನೂ ಸೀತೆಯ ಉನ್ನತವಾದ ಬಾಳುವೆಯನ್ನೂ ವರ್ಣಿಸಿದ್ದು

ಅದನ್ನು ಹಾಡುವದಕ್ಕೆ ಯೋಗ್ಯರಾದವರನ್ನು ಹುಡುಕುತ್ತಿರಲು ಅನಾಥರಾಗಿ ವಿಸರ್ಜಿಸಲ್ಪಟ್ಟ ಲವಕುಶರ ಕಡೆಗೆ ತನ್ನ ಲಕ್ಷ್ಯವು ಹೋಯಿತು ಎಂದು ಹೇಳುತ್ತಾನೆ. ವೀಣೆಯ ಜೊತೆಗೆ ತನ್ನ ಕಾವ್ಯವನ್ನು ಹಾಡಲಿಕ್ಕೆ ವಾಲ್ಮೀಕಿಯು ಅವರಿಗೆ ಕಲಿಸಿದನೆಂದೂ ಹೇಳುವನು. ಆ ಮಕ್ಕಳು ಗಾಯಕರಿಗೆ ಆದಿಭೂತವಾದ ಮಾದರಿಯಾಗಿರುವರು. ಅಂಥವರು ಕೇಳುವವರೆಗೆ ಕರ್ಣರಸಾಯನವಾಗುವಂತೆ ಅದನ್ನು ಹಾಡಿದರು. ಅಂತೂ ಕವಿಯೇ ತನ್ನ ಕಾವ್ಯವು ವೀರರಸಪ್ರಧಾನವಾದ ಮಹಾಕಾವ್ಯವಾಗಿದೆ, ಲಲಿತ ಭಾವಗಳನ್ನು ಅಭಿವ್ಯಕ್ತಮಾಡುವ ಕಾವ್ಯವಾಗಿದೆ ಎಂದು ಹೇಳಿಕೊಂಡಿದ್ದಾನೆ. ನಾವು ಅದನ್ನು ವೀರಕಾವ್ಯದ ಚತುರ್ಲಕ್ಷಣಗಳಿಂದ ವಿಮರ್ಶಿಸೋಣ. ಅವು ಇಂತಿವೆ; ಕಥೆ, ಪಾತ್ರಗಳು, ಸ್ಥಾಯಿಭಾವಗಳು, ಭಾಷೆ.

ರಾಮಾಯಣದ ಕಥಾವಿಷಯವು ಲಲಿತಕಾವ್ಯಕ್ಕೆ ಒಳ್ಳೇ ಯೋಗ್ಯವಾಗಿದೆ. ರಾಮನ ಜೀವನವು ಪಾಂಡವರ ಜೀವನದಲ್ಲಿದ್ದಷ್ಟು ವೈವಿಧ್ಯಪೂರ್ಣವಾದ ಅನೇಕ ಘಟನೆಗಳಿಂದ ತುಂಬಿಲ್ಲ; ಆದರೂ ಅದು ವೀರಪುರುಷ-ಜೀವನದಂತೆ ಜೀವಿಸಿದಾತನ ಕಥೆಯಾಗಿದೆ. ಪೂರ್ವಿಕರಿಂದ ದೇವತಾಸ್ವರೂಪನೆಂದು ಭಾವಿಸಲ್ಪಟ್ಟ ಎಲ್ಲ ಚರಿತ್ರನಾಯಕರಿಗಿಂತಲೂ ತನ್ನ ಪರಿಶುದ್ಧವಾದ ಮತ್ತು ಉದಾತ್ತವಾದ ಜೀವನದಿಂದ ರಾಮನು ಅವರೆಲ್ಲರಿಗೂ ಶಿರಃಸ್ಥಾನದಲ್ಲಿದ್ದಾನೆ. ಒಂದು ಕೃತ್ಯವನ್ನು ಬಿಟ್ಟರೆ ಅವನ ಚರಿತ್ರೆಯಲ್ಲಿ ಯಾವದನ್ನು ನಾವು ಬೊಟ್ಟುಮಾಡಿತೋರಿಸಿ ಕ್ಷುದ್ರವಾದದ್ದಲ್ಲದೆ ಹೋದರೂ ನೈಷಯಿಕ ಮನೋಭಾವದಿಂದೆಸಗಿದುದೆಂದು ಹೇಳಬಹುದೋ ಅಂತಹ ಒಂದೂ ರಾಮನಿಂದಾದ ಕಾರ್ಯವಿಲ್ಲ. ರಾಮನ ಚರಿತ್ರೆಯು ಸಾವಿರಾರು ವರ್ಷಗಳಿಂದ ಇಂದೂ ಜನರ ಮನಸ್ಸನ್ನು ತನ್ನ ಪಾವಿತ್ರ್ಯದಿಂದಲೂ ಉದಾತ್ತತೆಯಿಂದಲೂ ಸೆರೆಹಿಡಿದಿದೆ; ಮತ್ತು ಇನ್ನು ಮುಂದೂ ಎಷ್ಟೋವರ್ಷಗಳವರೆಗೆ ಹಾಗೆಯೇ ಸೆರೆಹಿಡಿಯಬಹುದು. ಅತಿ ಉಚ್ಚ ಮನೋಭಾವಗಳನ್ನು ಬಗೆಯಿಂದಲೂ ತಕ್ಕುದಾಗಿದೆ. ಲಲಿತಕಾವ್ಯವು ಭಕ್ತಿ, ಸ್ವಾಮಿನಿಷ್ಠೆ, ಪ್ರೇಮ, ಕಾರ್ಯ ಇಂತಹ ಭಾವಗಳನ್ನು ಚಿತ್ರಿಸಲಿಕ್ಕೆ ಹವಣಿಸುತ್ತದೆ. ರಾಮನ ಪಾತ್ರದಲ್ಲಿ ಇನ್ನೂ ಒಂದು ಅಪೂರ್ವವಾದ ಸಂಗತಿಯಿದೆ—ಹೃದಯವನ್ನು ಕರಗಿಸುವ ಕರುಣರಸ; ರಾಮನ ಆಯುಷ್ಯದಾದ್ಯಂತ ಒಂದು ಧೀರ ಶೋಕಸಹನೆಯ ಚಿತ್ರವಿದೆ. ಇದು ನಮ್ಮ ಅಂತಃಕರಣದಲ್ಲಿ ಕನಿಕರವನ್ನು ಉಂಟುಮಾಡದೆ ವೇದನೆಯಿಂದ ಮಿಶ್ರವಾದ ಒಂದು ದಿವ್ಯ ಕೌತುಕಭಾವವನ್ನುಂಟು ಮಾಡುತ್ತದೆ. ಆ್ಯಡಿಸನ್ ಎಂಬ ಆಂಗ್ಲಸಾಹಿತಿಯು ಒಂದೆಡೆ ಹೀಗೆ ಹೇಳಿದ್ದಾನೆ. ಕಥೆಗಳು ಎರಡು ಬಗೆಯವಿರುವವು—ಮೊದಲನೆಯದರಲ್ಲಿ ಚರಿತ್ರನಾಯಕನು ಅನೇಕ ಗಂಡಾಂತರ ಕಷ್ಟನಷ್ಟಗಳೊಳಗಿಂದ ಹಾಯ್ದು ಕೊನೆಗೆ ಐಶ್ವರ್ಯ ಸುಖಗಳನ್ನು ಹೊಂದುವನು. ಇದು ಯುಲಿಸಿಸ್ಸನ ಗ್ರೀಕ್ ಕಥೆಯಲ್ಲಿ ಕಂಡುಬರುವದು. ಎರಡನೆಯದರಲ್ಲಿ ನಾಯಕನು ಉನ್ನತವಾದ ಒಂದು ಗೌರವಸ್ಥಾನದಿಂದ ಭ್ರಷ್ಟವಾದ ಸಂಕಟ ಮತ್ತು ದೈನ್ಯವನ್ನು ಕಾಣುವನು. ಆಡಮ್ ಮತ್ತು ಈವ್ಹರು ಅರ್ಭಕರಂತೆ ನಿಷ್ಕಲ್ಮಷರಾದವರು ಒಮ್ಮೇಲೆ ಪಾಪಅನುತಾಪಗಳ ಅವಸ್ಥೆಗೆ ಇಳಿಯುತ್ತಾರೆ. ಈ ವಿಧದ ಅವಸಾನವು ಮೊದಲನೆಯದರಕಿಂತಲೂ ಪ್ರೇಕ್ಷಕರನ್ನು ಹೆಚ್ಚು ಕದಡುವದು" ಕಥೆಯಲ್ಲಿ ಈ ಎರಡೇ ಬಗೆಗಳಾಗುವವೇನು? ಎಷ್ಟೋ ಕಥೆಗಳಲ್ಲಿ ನಾಯಕನು ಭಾಗ್ಯದಿಂದ ದೌರ್ಭಾಗ್ಯಕ್ಕೆ ಇಳಿಯುವದರ ಬದಲು ಒಂದು ವಿಚಿತ್ರಗತಿಗೆ ಬಂದು ಮುಟ್ಟುವನು. ಆದರೆ ಅದರಿಂದ ನಾಯಕನಲ್ಲಿಯ ನಮ್ಮ ಆದರವು ಮಾತ್ರ ಕಡಿಮೆಯಾಗುವದಿಲ್ಲ. ಮನುಷ್ಯನಿಂದ ಮಾಡಲಿಕ್ಕೆ ಸಾಧ್ಯವಾದುದೆಲ್ಲವನ್ನೂ ನಾಯಕನು ಮಾಡನು; ಆದರೆ ಕೊನೆಯಲ್ಲಿ ದುಃಖಿತನಾಪುವನು. ರಾಮನ ಕಥೆಯು ಇಂತಹದು. ರಾವಣನನ್ನು ಯುದ್ಧದಲ್ಲಿ ಪರಾಭವಗೊಳಿಸಿ ಕೊಂದು ಸೀತೆಯನ್ನು ಮರಳಿಪಡೆಯುವನು. ಅವಳು ಅಗ್ನಿದಿವ್ಯದೊಳಗಿಂದ ಹಾಯ್ದು ಅಚ್ಚಳಿಯದೆ ಬರುವಳು. ಹೀಗಾದರೂ ಅಯೋಧ್ಯೆಗೆ ಬಂದ ಮೇಲೆ ರಾಮನು ಅವಳನ್ನು ಲೋಕಾಪವಾದದಿಂದ ಪರಿತ್ಯಜಿಸಬೇಕಾಯಿತು. ಪುನಃ ಅವಳು ವಾಲ್ಮೀಕಿ ಋಷಿಯಿಂದ ಕರೆದುತಂದ ತನ್ನಮಕ್ಕಳೊಡನೆ ರಾಮನೆಡೆಗೆ ಪ್ರಾಪ್ತಳಾದಾಗ ಅವಳು ತನ್ನ ಭೂಮಿತಾಯಿಯ ಗರ್ಭದಲ್ಲಿ ಅದೃಶ್ಯಳಾಗಿ ಬಿಡುವಳು. ಕವಿಯು ಹೀಗೆ ಕಥೆಗೆ ಒಂದು

ಬಹು ಸುಂದರವಾದ ಮುಕ್ತಾಯವನ್ನು ಕಲ್ಪಿಸಿದ್ದಾನೆ. ಮಹಾಭಾರತದ ಕಥೆಯೂ ಶೋಕಪರ್ಯವಸಾಯಿಯಾಗಿದೆ. ಪಾಂಡವರ ವಿಜಯವೂ ದುಃಖಾಂತವಾಗಿ ಪರಿಣಮಿಸಿತು. ಏಕೆಂದರೆ ರಾತ್ರಿಯಲ್ಲಿ ಅವರ ಶಿಬಿರದಲ್ಲಿ ಯಾವುದಕ್ಕೂ ಹಿಂದುಮುಂದು ನೋಡದ ಅಶ್ವತ್ಥಾಮನು ಹೊಕ್ಕು ಪಾಂಡವರ ನಿದ್ರೆಹೋಗುತ್ತಿದ್ದ ಐವರು ಮಕ್ಕಳನ್ನು ಕೊಂದು ಹಾಕಿದ ರಕ್ತಮಯವಾದ ದೃಶ್ಯವನ್ನು ನಸುಕಿನಲ್ಲಿ ದ್ರೌಪದಿಯು ನೋಡಬೇಕಾಗಿ ಬಂದಿತು. ಅದನ್ನು ನೋಡಿ ಅವಳು ನಿಶ್ಚೇಷ್ಟಿತಳಾದಾಗ ಯುಧಿಷ್ಠಿರನು "ಜಯಶೀಲರಾದವರೇ ತಮ್ಮ ಅಜಾಗ್ರತೆಯಿಂದ ಅಪಜಯಹೊಂದಿದಂತಾಯಿತು" ಎಂದು ಉದ್ಗಾರತೆಗೆಯುವನು.

ರಾಮಾಯಣ ಮಹಾಭಾರತ ಎರಡರ ಕಥೆಗಳೂ ಶೋಕಪರ್ಯವಸಾಯಿಗಳಾದರೂ ಸುಂದರವಾಗಿವೆ. ಆದರೆ ಎರಡರ ಪಾತ್ರಗಳಲ್ಲಿ ಬಹಳ ಭೇದವಿದೆ. ವ್ಯಾಸರ ಮಹಾಕಾವ್ಯದಲ್ಲಿಯ ಪಾತ್ರಗಳು ಉನ್ನತವಾಗಿದ್ದರೂ ನಿಜವಾಗಿ ಜೀವನದಲ್ಲಿಯ ಸ್ತ್ರೀಪುರುಷರಂತೆಯೇ ಭಾಸವಾಗುತ್ತಾರೆ. ರಾಮಾಯಣದ ಪಾತ್ರಗಳು ಮಾತ್ರ ಕೇವಲಸ್ವರ್ಗೀಯವೆಂದು ಕಾಣುವವು. ಅವು ಭೂಮಿಯನ್ನು ಮುಟ್ಟದೆ ಅದರ ಸುತ್ತಲೂ ಸಂಚರಿಸುವಂತೆ ಕಾಣುವವು. ಯುಧಿಷ್ಠಿರನ ರಥವು ನೆಲದಿಂದ ಅಂತರದ ಮೇಲೆಯೇ ಸಂಚರಿಸುತ್ತಿತ್ತಂತೆ. ಆದರೆ ಆತನೂ ತನ್ನ ಜನ್ಮದಲ್ಲಿಯ ಒಂದೇ ಒಂದು ಸುಳ್ಳನ್ನು ಹೇಳಿದಾಗ ಮಾತ್ರ ಅದು ಭೂಮಿಗೆ ಜಾರಿತೆಂದು ಮಹಾಭಾರತದಲ್ಲಿ ಒಂದು ಕಡೆ ಹೇಳಿದೆ. ಯುಧಿಷ್ಠಿರನ ಪಾತ್ರದ ಔನ್ನತ್ಯವನ್ನು ಕಾವ್ಯಮಯವಾಗಿ ಹೇಳುವ ಇದೊಂದು ವಿಧಾನವಾಗಿದೆ. ಮಾನವ-ಸೃಷ್ಟಿಯ ಕಾರ್ಪಣ್ಯವು ಸೋಂಕದವನಾಗಿ ಆತನು ಭೂಮಿಗೆ ಅಂತರದಲ್ಲಿ ಸಂಚರಿಸುತ್ತಿರುವಂತೆ ಅವನದೊಂದು ಪಾತ್ರವು ಕಲ್ಪಿಸಲ್ಪಟ್ಟಿದೆ. ಆದರೆ ರಾಮಾಯಣದ ಎಲ್ಲ ಪಾತ್ರಗಳೂ ಇದರಂತೆ ಇರುವಂತೆ ಕಾಣುವವು. ರಾಮಾಯಣದಲ್ಲಿ ನಿಃಸೀಮ ಅಂತಃಕರಣದ ತಂದೆಯಿದ್ದಾನೆ. ಪರಮಾವಧಿ ಕ್ರೂರಳಾದ ಮಲತಾಯಿ ಇದ್ದಾಳೆ, ಕರ್ತವ್ಯ ನಿಷ್ಠೆಯ ಪರಾಕಾಷ್ಠೆಯ ಉದಾಹರಣೆಯಾದ ಮಗನಿದ್ದಾನೆ; ಅನುಪಮಪ್ರೇಮದ ಪತಿ ಇದ್ದಾನೆ. ಅಸಮಪತಿಭಕ್ತಿಯ ಹೆಂಡತಿಇದ್ದಾಳೆ. ಪರಮವಿಶ್ವಾಸದ ಮಿತ್ರರಿದ್ದಾರೆ ಎಂದೂ ಶರಣೆನ್ನದ ಶತ್ರುವಿದ್ದಾನೆ. ಈ ಎಲ್ಲ ಪಾತ್ರಗಳಲ್ಲಿ ರಾಮಸೀತೆಯರ ಪಾತ್ರಗಳು ಹೆಚ್ಚು ಎದ್ದು ಕಾಣುವವು ಅವು ಮಾನವ ಕಲ್ಪನೆಯು ಸೃಷ್ಟಿಸಿದ ಪಾತ್ರಗಳಲ್ಲಿ ಅತಿ ಉದಾತ್ತ-ವಾದವುಗಳು. ರಾಮನೆಂದರೆ ಸ್ನೇಹಿತನೆಂದು, ಅಣ್ಣನೆಂದು, ಮಗನೆಂದು, ಪತಿಯೆಂದು ಎಲ್ಲ ಬಗೆ-ಯಿಂದಲೂ ಔದಾರ್ಯದ ಪರಮಾವಧಿಯಾಗಿದ್ದಾನೆ. ಪ್ರಜರ ಮೇಲಿನ ಅವನ ಪ್ರೀತಿ ಅವನು ವಹಿಸಿದ ಅವರ ಯೋಗ ಕ್ಷೇಮ ಗಾದೆಯ ಮಾತಾಗಿದೆ; ರಾಮ-ರಾಜ್ಯವೆಂದರೆ ಜನರ ಕಲ್ಯಾಣಕಾಂಕ್ಷೆಯೇ ರಾಜನ ಗುರಿಯಾಗಿ ಉಳ್ಳ ರಾಜ್ಯವೆಂದು ಅರ್ಥವಾಗಿದೆ. ಮಹಾಭಾರತದಲ್ಲಿಯೂ ರಾಮನ ಆಳಿಕೆಯು ಪ್ರಶಂಸೆಯು ಬಂದಿದೆ. ಸಂಸ್ಕೃತ ಕಾವ್ಯದ ತಂದೆಯಾದ ವಾಲ್ಮೀಕಿಯು ನಿರೂಪಿಸಿದ ಸೀತೆಯ ಸ್ವಭಾವದ ಸೌಂದರ್ಯವನ್ನು ಯಾರು ಪರ್ಯಾಪ್ತವಾಗಿ ಬಣ್ಣಿಸಬಲ್ಲರು? ಅನಿರ್ವಚ-ನೀಯವಾದ ಪರಿಶುದ್ಧವಾದ ಒಂದು ಸನ್ನಿವೇಶದಲ್ಲಿರುವ ಆದರ್ಶ ಸ್ತ್ರೀಯ ಪಾತ್ರವನ್ನು ವಾಲ್ಮೀಕಿಯು ಬಹು ಯಶಸ್ವಿಯಾಗಿ ನಿರ್ಮಿಸಿದ್ದಾನೆ. ಪ್ರತಿಯೊಬ್ಬ ಹಿಂದು-ವಿನ ಮನಸ್ಸಿನಲ್ಲಿ ಆಕೆಯ ಹೆಸರು ಅತ್ಯಂತ ಪವಿತ್ರವಾದ ವಿಚಾರಗಳಿಂದ ಆವರಿಸಲ್ಪಟ್ಟು ಮನೆಮಾಡಿದೆ. ಆಕೆಯು ಹೆಂಡತಿಯಲ್ಲಿ ಇರಬೇಕಾದ ಸಕಲಗುಣಗಳ ಮೂರ್ತಿವೆತ್ತಂತಹ ದಿವ್ಯ ಮೂರ್ತಿಯಾಗಿದ್ದಾಳೆ.

(ಮುಂದುವರಿಯುವದು)

ಶಿಬಿರಾಗ್ನಿಯ ಸಮ್ಮುಖದಲ್ಲಿ

ಲೇಖಕರು:—ಶ್ರೀ ಆಯ್. ಎಸ್. ಬಿದರಿ, ಧಾರವಾಡ.

ಪುಣ್ಯಭೂಮಿಯಾದ ಭರತ ಖಂಡವು ಬಹು ಪುರಾತನ ಕಾಲದಿಂದ ವೇದಭೂಮಿಯೆಂದೂ, ಭೌತಿಕ ಜ್ಞಾನಕ್ಕಿಂತ ಪಾರಮಾರ್ಥಿಕ ಜ್ಞಾನ ಸಾಧನೆಯ ಸ್ಥಾನವೆಂದೂ, ಆರ್ಯ ಸಂಸ್ಕೃತಿಯ ತವರ್ಮನೆಯೆಂದೂ, ವಿಶ್ವಧರ್ಮ ಪ್ರಸ್ಥಾಪಕರ ಪ್ರಾಸಾದ ನಿಲಯವೆಂದೂ, ತಪಸ್ವಿಗಳ ತಪೋನಿಕೇತನವೆಂದೂ ಹೆಸರಾಗಿರುವಂತೆ ಜನಸಾಮಾನ್ಯರಿಗೆ ಜ್ಞಾನ ದಾನಮಾಡುವದರಲ್ಲಿ ಜ್ಞಾನ ಹೆನಲೆಂದೂ ಖ್ಯಾತಿವೆತ್ತಿದೆ. ಸೃಷ್ಟಿಕರ್ತನ ಅಗೋಚರ, ಅಸದೃಶ ಶಕ್ತಿಯಿಂದ ಪುಂಖಾನುಪುಂಖವಾಗಿ ತೂರಿಬಂದ ರಾಜಕೀಯ, ಧಾರ್ಮಿಕ ಹಾಗೂ ನೈಸರ್ಗಿಕ ವಿಪ್ಲವಗಳಿಗೆ ನಾಡು ಆಹುತಿಯಾದರೂ ಅದರ ವೈದಿಕತೆ, ಪಾರಮಾರ್ಥಿಕತೆ, ಸಂಸ್ಕೃತಿ. ಮೈತ್ರೀಯತೆ, ತಪೋನಿಷ್ಠೆ, ಜ್ಞಾನದಾನದ ಭಾವ ಇವೆಲ್ಲವೂ ಯಾವ ಪಾಶವೀ ಶಕ್ತಿಗೂ ತಗ್ಗದೆ, ಬಗ್ಗದೆ ಎಂದಿನಂತೆ ಅಚ್ಚಳಿಯದೆ ಉಳಿದಿವೆಯಲ್ಲವೆ ಪುಟಕ್ಕೆ ಹಾಕಿದ ಚಿನ್ನದಂತೆ ಮತ್ತಿಷ್ಟು ಪರಿಶೋಭಾಯಮಾನವಾಗಿ ಹೊರಹೊಮ್ಮಿವೆ. ಉಳಿದ ವಿಷಯಗಳಲ್ಲಿಯಂತೆ ಅಂದು ಜ್ಞಾನ ದಾನದ ರೀತಿಗಳೂ ವೈಶಿಷ್ಟ್ಯಪೂರ್ಣವಾಗಿದ್ದವು- ಮಠಗಳು, ಇತರ ಧಾರ್ಮಿಕ ಸಂಸ್ಥೆಗಳು, ಋಷಿಗಳು ತಮ್ಮಲ್ಲಿಗೆ ಬಂದ ಶಿಷ್ಯರಿಗೆ ಜ್ಞಾನದಾನ ಮಾಡುತ್ತಿದ್ದುದು ಒಂದು ಕಡೆ ಕಂಡುಬಂದರೆ, ಇನ್ನೊಂದೆಡೆಯಲ್ಲಿ ಸಾಧು-ಸಂತರು, ದಾಸರು, ಕೀರ್ತನಕಾರರು ಮತ್ತು ಲಾವಣಿಕಾರರು ಹಳ್ಳಿಯಿಂದ ಹಳ್ಳಿಗೆ, ಶಿಬಿರಧಂದ ಶಿಬಿರಕ್ಕೆ ಅಲೆಯುತ್ತ ಜನಸಾಮಾನ್ಯರಲ್ಲಿ ಭಜನೆ, ಹಾಡು, ಕೀರ್ತನೆ, ಲಾವಣಿ ಮೊದಲಾದವುಗಳಿಂದ ಜ್ಞಾನದ ಕಿಡಿಯನ್ನು ಹೊತ್ತಿಸುವ ಕಾರ್ಯವನ್ನು ಮಾಡುತ್ತಿದ್ದರು. ೨೦ನೆಯ ಶತಮಾನದ ಹಲವಾರು ಸೌಕರ್ಯಗಳು, ಮನರಂಜನೆಯ ಸಾಧನೆ-ಸಲಕರಣೆಗಳು, ಸಿನೀಮಾ ಹಾಗೂ ನಾಟಕಗೃಹಗಳು, ಕೆಲವು ಒಳ್ಳೆಯ ಶಾಲಾಮಂದಿರಗಳು ಇವೆಲ್ಲವೂ ಇಲ್ಲದ ಅಂದಿನ ಕಾಲದಲ್ಲಿ ಜನರು ಮೇಲಿನ ಎರಡು ಬಗೆಗಳಿಂದ ಅಲ್ಲದೆ ಇನ್ನೂ ಒಂದು ಬಗೆಯಿಂದ ಶಿಕ್ಷಣವನ್ನು ಪಡೆಯುತ್ತಿದ್ದರೆಂದು ಹೇಳಬಹುದು. ಇದು ಮನರಂಜನೆಯ ಕಾರ್ಯಕ್ರಮಗಳಿಂದ ಹಾಗೂ ಶಿಬಿರಾಗ್ನಿಯ ಸಮ್ಮುಖದಲ್ಲಿ. ಇಂತಹವಿ ನೋದಾವಳಿಗಳಲ್ಲಿ ವ್ಯಕ್ತಿಗಳು ತಮ್ಮಲ್ಲಿ ನಿಸರ್ಗಸಿದ್ಧವಾಗಿ ಹುದುಗಿದ ಅಂತಃಶಕ್ತಿಗಳನ್ನೂ, ಅಂತಃಕಲೆಗಳನ್ನೂ ಹೊರಗೆಡವಿ ಸ್ವತಃ ನಕ್ಕು ಪರರನ್ನು ನಗಿಸಿ, ಅವ್ಯಕ್ತವಾಗಿ ಶಿಕ್ಷಣ ಪಡೆದು ಪರರನ್ನು ಶಿಕ್ಷಿತರನ್ನಾಗಿಸುತ್ತಿದ್ದರಲ್ಲವೇ ? ಆದರೆ ಇಂದಿನಂತೆ, ಶಿಬಿರಾಗ್ನಿಯ ಸಮ್ಮುಖದಲ್ಲಿ ನಡೆಯುತ್ತಿದ್ದ ಈ ಚಟುವಟಿಕೆಗಳು ಸರಸತಿಯ ವರದ ಹಸ್ತದ ಮಾಧುರ್ಯದ ಸೊಂಪನ್ನು ಪಡೆದಿರಲಿಲ್ಲ. ಅವೆಲ್ಲ ಅಸಾಂಸ್ಕೃತಿಕ ಸ್ಥಿತಿಯಲ್ಲಿದ್ದು ಸಾಂಸ್ಕೃತಿಯ ಮೆರುಗನ್ನು ಹೊಂದಿರಲಿಲ್ಲ. ದಿನದ ಆಸರ-ಬೇಸರಗಳನ್ನು ನೀಗುವದಕ್ಕಾಗಿ ರಾತ್ರಿಯ ಭೋಜನ ನಂತರ ಹಳ್ಳಿಯ, ತಾಂಡೆಯ ಇಲ್ಲವೆ ಶಿಬಿರದ ಒಂದು ಮಧ್ಯವರ್ತಿ ಸ್ಥಳದಲ್ಲಿ ಸವುದೆ-ಕಟ್ಟಿಗೆಗಳನ್ನು ಕಲೆಹಾಕಿ ಅಗ್ನಿಯನ್ನು ಹೊತ್ತಿಸಿ ಶಿಬಿರದ ಎಲ್ಲ ನಿವಾಸಿಗಳು ಶಿಬಿರಾಗ್ನಿಯ ಸಮ್ಮುಖದಲ್ಲಿ ಕುಳಿತು ಮನರಂಜನೆಯ ಕಾರ್ಯಕ್ರಮಗಳಲ್ಲಿ ತೊಡಗುತ್ತಿದ್ದರು. ಕೆಲವರು ಸಂಗೀತದಿಂದ, ಬೇರೆ ಕೆಲವರು ಲಾವಣಿ ಇಲ್ಲವೆ ಗೀಗೀ ಪದಗಳಿಂದ, ಮತ್ತೆ ಕೆಲವರು ನಕಲಿಯಿಂದ, ಇನ್ನೂ ಕೆಲವರು ಕುಣಿತ-ಮಣಿತಗಳಿಂದ ಜನರನ್ನು ಹಾಸ್ಯದ ಹೊನಲಲ್ಲಿ ತೇಲಿಸಿ ತನ್ಮೂಲಕ ಅವ್ಯಕ್ತವಾಗಿ ಜ್ಞಾನದಾನವನ್ನು ಮಾಡುತ್ತಿರಲಿಕ್ಕೆ ಸಾಕು. ಸಹಕಾರ, ಸೌಹಾರ್ದ್ರ ಭಾವನೆಗಳಂತೂ ತಾವೇ ತಾವಾಗಿ ಮಾಡಿಬರುತ್ತಿದ್ದವು.

ಕೇವಲ ಮನರಂಜನೆಯೇ ಅಂದಿನ ಶಿಬಿರಾಗ್ನಿಯ ಕಾರ್ಯಕ್ರಮದ ಗುರಿಯಿದ್ದರೂ ಅಪರೋಕ್ಷವಾಗಿ ಶಿಕ್ಷಣವೂ ಲಭಿಸುತ್ತಿದ್ದಿತು.

ಶಿಕ್ಷಣತಜ್ಞರ ತೀಕ್ಷ್ಣ ಬುದ್ಧಿಯ ಹಿಡಿತಕ್ಕೆ ಸಿಕ್ಕ ಶಿಬಿರಾಗ್ನಿಯು ಇಂದು ತನ್ನ ವಿಶಾಲ ಅರ್ಥವನ್ನು ಕಂಡುಕೊಂಡಿದೆ. ಅಗ್ನಿಯು ಪ್ರತಿಭೆ, ಪ್ರಕಾಶ, ಪರೀಕ್ಷೆಗಳ ತ್ರಿವೇಣೀ ಸಂಗಮವೆಂದೂ ಸತ್ಯ ಸರಸತಿಯು ಗುಪ್ತಗಾಮಿನಿಯಾಗಿ ಈ ಸಂಗಮದಲ್ಲಿ ಮಿಲನವಾಗಿ ಮಿಂದು ಪರಿಶುದ್ಧಳಾಗಿ ಹೊರಹೊಮ್ಮುವಳೆಂದೂ ಇಂದು ಶಿಕ್ಷಣ ತಜ್ಞರು ತಿಳಿದಿದ್ದರೆ ಆಶ್ಚರ್ಯವಲ್ಲ. ಅಗ್ನಿಯು ಈ ಎಲ್ಲ ಸಂಗತಿಗಳ ಪ್ರತೀಕವೆಂಬುದನ್ನು ಹಿಂದೂ ಸಂಸ್ಕೃತಿಯು ಮೊದಲಿನಿಂದಲೂ ಕಾಣುತ್ತ ಬಂದಿದೆ. ಸೀತಾದೇವಿಯ ಪಾತಿವ್ರತ್ಯ ಪರೀಕ್ಷೆಯು ಅಗ್ನಿಯಲ್ಲಿ ಆದದ್ದೂ, ನ್ಯಾಯ-ಅನ್ಯಾಯಗಳನ್ನು ನಿರ್ಧರಿಸಲು ಅಗ್ನಿಯನ್ನು ಉಪಯೋಗಿಸುತ್ತಿದ್ದುದೂ ಹೃದಯದ ಮಲಿನತೆ, ನಿರ್ಮಲತೆಗಳನ್ನು ಅಗ್ನಿ ಪರೀಕ್ಷೆಯಿಂದ ನಿಶ್ಚಯಿಸುತ್ತಿದ್ದುದೂ, ಅಗ್ನಿ ಸಮ್ಮುಖದಲ್ಲಿ ಪ್ರತಿಜ್ಞೆ ಮಾಡುತ್ತಿದ್ದುದೂ, ದೀವಿಗೆಗೆ ನಮಸ್ಕರಿಸುವದೂ ಇವೆಲ್ಲ ಆರ್ಯ ಸಂಸ್ಕೃತಿಯಲ್ಲಿ ಹಾಸು-ಹೊಕ್ಕಾಗಿದ್ದುದು ಕಂಡು ಬರುತ್ತದೆ. ಸತ್ಯ, ಸತ್ವ ಪರೀಕ್ಷೆಯ ಸಾಧನವಾದ ಅಗ್ನಿಯು ಭಯವನ್ನೂ. ಕ್ರೂರ ಜಂತುಗಳ, ಪಶುಗಳ ಹಾಗೂ ಮಾನವರಿಂದಾಗುವ ಹಿಂಸೆ, ಅತ್ಯಾಚಾರ ಅನಾಚಾರಗಳನ್ನೂ ಓಡಿಸುವ ಮಹಾಮಂತ್ರವಾಗಿಯೂ ಇದೆ. ಹೀಗಿರುವ ಅಗ್ನಿಯನ್ನು ಹೊತ್ತಿಸಿ ಶಿಬಿರಗಳಲ್ಲಿ ವಾಸಿಸುತ್ತಿರಬಹುದಾದ ಅಂದಿನ ನಮ್ಮ ಪೂರ್ವಜರು ತಮ್ಮ ಭಯವನ್ನು ನೀಗಿ, ದುಷ್ಟ ಜನರಿಂದ, ಕ್ರೂರ ಜಂತುಗಳಿಂದ ಆಗಬಹುದಾದ ಅನಿಷ್ಟಗಳನ್ನು ತಪ್ಪಿಸಿ, ದೈಹಿಕ ಹಾಗೂ ಮಾನಸಿಕ ಚಳಿಯನ್ನು ಕಳಚಿ ಎಲ್ಲರೂ ಒಂದಾಗಿ ಹಾಡಿಪಾಡಿ, ನಕ್ಕು-ನಲಿದು ಪ್ರತ್ಯಕ್ಷವಾಗಿ ಮನರಂಜನೆಯನ್ನೂ, ಅಪ್ರತ್ಯಕ್ಷವಾಗಿ ಶಿಕ್ಷಣವನ್ನೂ, ಮರುದಿನದ ಕಲಸ-ಬೊಗಸೆಗಳಿಗಾಗಿ ಹೆಚ್ಚಿನ ಉತ್ಸಾಹವನ್ನೂ ಪಡೆಯುತ್ತಿದ್ದರೆನ್ನುವದರಲ್ಲಿ ಸಂದೇಹವಿಲ್ಲ.

ಶರದೃತುವಿನ ತಿಳಿಸೀಲಗಳ ಪರಿಯಿಂದ ಮುಸಕು ಮುಸಕಾಗಿ ಮಾತ್ರ ಅಂದಿನ ಸುಸಂಸ್ಕೃತ ಜನರಿಗೆ ಹೊಳೆದ ಶಿಬಿರಾಗ್ನಿಯು ಇಂದು ಹೆಚ್ಚು ಮಹತ್ವಪೂರ್ಣವಾಗಿ ಸುಶಿಕ್ಷಿತರಿಗೂ, ಶಿಕ್ಷಣತಜ್ಞರಿಗೂ ಹೊಳೆದಿದೆ. ಶಿಬಿರಾಗ್ನಿಯ ಹೊಂಬಣ್ಣದ ಜ್ವಾಲೆಗಳು ಜನಸಾಮಾನ್ಯರ ಮಧ್ಯದಿಂದ ಶಿಕ್ಷಣಾಲಯಗಳನ್ನು, ಸಂಸ್ಕೃತಿಯ ಕೇಂದ್ರಗಳನ್ನೂ ವ್ಯಾಪಿಸಹತ್ತಿವೆ. ಮೇಘಗಳು ಮರೆಯಾಗಿ ರಜನೀಕಾಂತನು ತನ್ನ ಅಮೃತಕಿರಣಗಳನ್ನು ಭರತ ಭೂಮಿಯ ಮೇಲೆ ಪಸರಿಸಿ ಅಮರ ಶಿಕ್ಷಣದ ಸವಿಯನ್ನುಣಿಸಲು ಸನ್ನದ್ಧನಾಗಿರುವನು. ಈ ಹೊಸ ಶಿಕ್ಷಣದ ಕಕ್ಷೆಯಲ್ಲಿ ಶಿಬಿರಾಗ್ನಿಗೆ ಉಚ್ಚತಮ ಸ್ಥಾನವು ದೊರೆತಿದೆ. ಇಂದು ಪ್ರಾಥಮಿಕ ಸಾಲೆಗಳ ಸಮ್ಮೇಲನಗಳಲ್ಲಿ, ಮಾಧ್ಯಮಿಕ ಸಾಲೆಗಳ ವಾರ್ಷಿಕ ಹಬ್ಬಗಳಲ್ಲಿ, ಉಚ್ಚ ಶಿಕ್ಷಣಾಲಯಗಳ ಸ್ನೇಹ ಸಮ್ಮೇಲನಗಳಲ್ಲಿ ಹಾಗೂ ವಿಶಿಷ್ಟ ದಿನಗಳಲ್ಲಿ ವಿವಿಧ ತರಬೇತಿ ವರ್ಗಗಳ ಮುಕ್ತಾಯ ಸಮಾರಂಭಗಳಲ್ಲಿ ಇದಲ್ಲದೆ ಶಿಕ್ಷಣ ಸಂಸ್ಥೆಗಳ ಸ್ಫುಟವಾದ ಪ್ರಸಂಗಗಳಲ್ಲಿ ಶಿಬಿರಾಗ್ನಿಯ ಕಾರ್ಯಕ್ರಮವಿರುತ್ತಿರುವುದು ನಾಡಿನ ಶುಭೋದಯದ ಶುಭ ಚಿಹ್ನವೆಂದೇ ಹೇಳಬಹುದು.

ಹೀಗೆ ಶಿಬಿರಾಗ್ನಿಯು ಶಿಕ್ಷಣದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದರೂ ಅದು ಹೆಚ್ಚಾಗಿ ಮನರಂಜನೆಯ ಸಾಧನವೆಂದೂ, ಮನದ ಬೇಸರವನ್ನು ನೀಗಿಸುವ ತಮಾಷೆಯೆಂದೂ, ನಿತ್ಯದ ಜಂಜಾಟವನ್ನು ಮರೆಯಲು ದೊರೆಯೊಗವ ಆಶ್ರಯವೆಂದೂ ಗ್ರಹಿತವಾದದ್ದು ಅಲ್ಲಲ್ಲಿ ನಡೆಯುವ ಕಾಯಕ್ರಮಗಳಿಂದ ತಿಳಿದು ಬರುತ್ತಿದೆ. ಶಿಬಿರಾಗ್ನಿಯ ಕಾರ್ಯಕ್ರಮಗಳನ್ನು ಏರ್ಪಡಿಸುವವರೂ ಅವುಗಳಲ್ಲಿ ಭಾಗವಹಿಸುವವರೂ, ಪ್ರೇಕ್ಷಕರೂ ಒಟ್ಟಾರೆ ಎಲ್ಲರೂ ಮನರಂಜನೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಳ್ಳದೆ ತನ್ಮೂಲಕ ಶಿಕ್ಷಣದ ಸವಿಯನ್ನು ಬೀರುವ ಮಹೋದ್ದೇಶವನ್ನೂ ಇಟ್ಟುಕೊಂಡರೆ ಹೆಚ್ಚು ಒಳಿತು. ಸಂಚಾಲಕರಿಗೆ, ಭಾಗಿಗಳಿಗೆ. ಭೋಗಿಗಳಿಗೆ ಜ್ಞಾನದ ಸೆಲೆಯಾಗಿ ಈ ಕಾರ್ಯಕ್ರಮಗಳು ಪರಿಣಮಿಸಬೇಕು. ಹೀಗೆಂದ ಮಾತ್ರಕ್ಕೆ ವರ್ಗದ ಕೋಣೆಯಲ್ಲಿಯ ಅಭ್ಯಾಸದ ಆಭಾಸವಾಗಬೇಕೆಂದಲ್ಲ. ಮನರಂಜನೆಯ ಚಟುವಟಿಕೆಗಳ ಮುಖಾಂತರ ತ್ಯಾಗ, ಭಕ್ತಿ, ಸತ್‌ಪ್ರೀತಿ, ಶೌರ್ಯ ಮೊದಲಾದ ಗುಣಗಳ ಮಹತ್ವವು ಬಿತ್ತರಿಸಲ್ಪಡಬೇಕು

ಆದುದರಿಂದ 'ಜೋಕುಮಾರನ ಸೋಗು ತರುವದು' 'ಸೀಮಂತ ಕಾರ್ಯವನ್ನು ನೆರವೇರಿಸುವದು', 'ದೊಡ್ಡಾಟದ ಕುಣಿತವನ್ನು ಹಾಸ್ಯಕ್ಕಾಗಿ ಕುಣಿಸುವದು', 'ಮದುವೆ ಮಾಡುವದು' 'ಗಂಡ-ಹೆಂಡಿರ ಜಗಳವನ್ನು ಕೇಳಿಸುವದು', 'ದುರ್ಗಮುರ್ಗಿಯು ದುರ್ಗವ್ವನನ್ನು ಕೂಡ್ರಿಸುವದು', 'ಕುರುಡ ಕುಂಟರ ಸೋಗು ಹಾಕುವದು' ಇವೇ ಮೊದಲಾದವು ಶಿಬಿರಾಗ್ನಿಯ ಕಾರ್ಯಕ್ರಮಗಳಾಗಕೂಡದು. ಬೆಳೆಯುತ್ತಿರುವ ಮಕ್ಕಳೆದುರು ಆದರ್ಶಗಳನ್ನೂ, ಒಳ್ಳೆಯ ಸಂಗತಿ, ಸಂವಿಧಾನಗಳನ್ನೂ ಇಡಬೇಕಲ್ಲದೆ ಹೊಲಸು ಸಂನಿವೇಶಗಳನ್ನು ಎಂದಿಗೂ ತೋರಿಸಕೂಡದು. ಮಕ್ಕಳು ಅನುಕರಣಶೀಲರೆಂಬ ಆದರ್ಶಪ್ರಿಯರೆಂಬ ಮಾತು ಹಿರಿಯರ ಗಮನದಲ್ಲಿರಬೇಕು; ಅದರಂತೆ ಪ್ರೌಢರಿಗೂ ಸಹ ಒಳ್ಳೆಯ ನೆನಹುಗಳನ್ನೇ ಎತ್ತಿ ತೋರಿಸುವದೊಳಿತು. ಮೇಲಾಗಿ ಯಾವದೇ ಚಟುವಟಿಕೆಯಲ್ಲಿ ತೊಡಗಿದರೂ ಸಾಲೆಯು ವಿದ್ಯಾಮಂದಿರವೇ ಹೊರತು ಬೇರೇನೂ ಆಗಕೂಡದು. ತಜ್ಞರ ಅಭಿಪ್ರಾಯದಂತೆ ಸೌಂದರ್ಯದ ದೇಗುಲವೂ, ನಾಟಕ ಮಂದಿರವೂ. ಹಳ್ಳಿಯ ಸಾಂಸ್ಕೃತಿಕ ಕೇಂದ್ರವೂ ಆಗಲು ಹೊರಟ ಸಾಲೆಯ ಪ್ರತಿಯೊಂದು ಚಟುವಟಿಕೆಯಲ್ಲಿ ಅದು ನಾಟಕವೇ ಇರಲಿ, ವಿವಿಧ ವಿನೋದಾವಳಿಯೇ ಇರಲಿ ಮಕ್ಕಳಿಗೆ ಹಾಗೂ ಜನತೆಗೆ ಶಿಕ್ಷಣದ ಒಂದಿಲ್ಲೊಂದು ಕಿಡಿಯನ್ನೂ, ಸಂದೇಶವನ್ನೂ, ತತ್ವಾಂಶವನ್ನೂ ಬೀರುವ ದಿವ್ಯ ನಾಕಲೋಕವಾಗಿ ನಿಲ್ಲಬೇಕು. ಈ ದೃಷ್ಟಿಯಿಂದ ನೋಡಿದರೆ ಮೇಲೆ ಹೇಳಿದಂತಹ ಕಾರ್ಯಕ್ರಮಗಳು ಸಾಲೆಯ ಉದ್ದೇಶವನ್ನು ಸಾಧಿಸದೆ ಬಹುದೂರ ಉಳಿಯುವವು. ಬಾಹ್ಯ ಜಗತ್ತಿನಲ್ಲಿ ನಡೆಯಬಹುದಾದ ಅನೇಕ ಮನರಂಜನೆಯ ಸಂಗತಿಗಳಂತೆ, ಸನ್ನಿವೇಶಗಳಂತೆ ಜನರನ್ನು ಹಾಸ್ಯಗಡಲಲ್ಲಿ ಮುಳುಗಿಸಿ ಮನೆಗೆ ಕಳಿಸುವದು ಸಾಲೆಯ ಈ ಕಾರ್ಯಕ್ರಮದ ಉದ್ದೇಶವಲ್ಲ. ಶಾರೀರಿಕ ಶ್ರಮದ ಪರಿಹಾರದ ಜೊತೆಗೆ ಜನರ ಬೌದ್ಧಿಕ ವಿಕಾಸವನ್ನೂ ಮಾಡುವದು ಶಿಬಿರಾಗ್ನಿಯ ಗುರಿಯಾಗಿದೆ; ವಿಲಾಸದ ಜೊತೆಗೆ ವಿಕಾಸವನ್ನು ಸಾಧಿಸುವದು ಅದರ ಧ್ಯೇಯವಾಗಿದೆ.

ವಿಲಾಸವನ್ನೂ ವಿಕಾಸವನ್ನೂ ಏಕಕಾಲಕ್ಕೇ ಸಾಧಿಸುವಂತಹ ಚಟುವಟಿಕೆಗಳು ತುಸು ವಿಚಾರಿಸಿದರೆ ಸಹಸ್ರಾರು ಹೊಳೆಯದೆ ಇರವು. ಧ್ರುವ ಚರಿತ್ರೆ, ಅರ್ಜುನ-ಬಬ್ರುವಾಹನರ ಸಂವಾದ, ಕನಕದಾಸರ ಪಾತ್ರ, ಸಾವಿತ್ರಿ ಸತ್ಯವಾನರ ಜೀವನ ದೃಶ್ಯ, ಲವ-ಕುಶ-ಶತ್ರುಘ್ನರ ವಾಗ್ಯುದ್ಧ, ಶೀನಪ್ಪ ನಾಯಕನು ಪುರಂದರದಾಸನಾದ ರೀತಿ, ಮಯೂರ ಶರ್ಮನು ಮಯೂರವರ್ಮನಾದ ಬಗೆ, ಭಾರತಮಾತೆಯ ಗೀತ, ಮೂರು ಹೋಳಿಗೆ' ಇವೇ ಮೊದಲಾದ ಪೌರಾಣಿಕ, ಐತಿಹಾಸಿಕ ಸಾಮಾಜಿಕ ಘಟನೆಗಳನ್ನೂ, ಸಂಗತಿಗಳನ್ನೂ ಶಿಬಿರಾಗ್ನಿಯ ಕಾರ್ಯಕ್ರಮಗಳಲ್ಲಿ ಸೇರಿಸಬೇಕು. ಇಂತಹ ಚಟುವಟಿಕೆಗಳಿಂದ ದೇವಭಕ್ತಿ, ಮಾತೃ ಭಕ್ತಿ, ಸತಿಪತಿ ಭಾವ, ರಾಷ್ಟ್ರ ಭಕ್ತಿ ಮೊದಲಾದ ಗುಣಗಳು ಆಡುವವರಿಗೆ ನೋಡುವವರಿಗೆ ತಾವೇ ತಾವಾಗಿ ಹೊಳೆಯುವವಲ್ಲದೆ ಮನರಂಜನೆಯ ಮಾಯದ ಮುಸುಕಿನಲ್ಲಿ ಬರುವದರಿಂದ ಅವಿನಾಶಿಯಾಗಿ ಉಳಿಯುವವೆಂದು ಬೇರೆ ಹೇಳಬೇಕಿಲ್ಲ. ಇಂತಹ ಘಟನೆಗಳು, ವೀರ ಚರಿತೆಗಳು ನಮ್ಮ ಪುರಾಣಗಳ ಮತ್ತು ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಹೇರಳವಾಗಿ ನಮಗೆ ಉಪಲಬ್ಧವಾಗುತ್ತವೆ. ವಿದೇಶಗಳ ಇತಿಹಾಸದಿಂದ ದೊರೆಯುವ ಜಾರ್ಜ ವಾಷಿಂಗ್ಟನ್, ವೀರ ಪೀಟರ, ವಿಲಿಯಮ್ ಟೆಲ್ ಮೊದಲಾದ ಪಾತ್ರಗಳನ್ನೂ ಅಭಿನಯಿಸಬಹುದು. ದೊಡ್ಡವರಿಗೂ ಅದಕಿಂತ ಹೆಚ್ಚಾಗಿ ಎಳೆಮನಸ್ಸಿನ ಮಕ್ಕಳಿಗಂತೂ ಇವು ಹೆಚ್ಚು ಪರಿಣಾಮಕಾರಿಯಾಗಿ ಪರಿಣಮಿಸುವವು.

ಹೀಗೆ ಶಿಬಿರಾಗ್ನಿಯ ಸಮ್ಮುಖದಲ್ಲಿ ಮನರಂಜನೆಯ ಮತ್ತು ಜ್ಞಾನದಾನದ ಚಟುವಟಿಕೆಗಳು ಸಾಗಿದರೆ ಆಬಾಲವೃದ್ಧರಲ್ಲಿ ತಮ್ಮ ಶಿಬಿರ, ನಾಡು, ನುಡಿ, ಇವೆಲ್ಲವುಗಳ ಬಗೆಗೆ ಅಗ್ನಿಯು ಪ್ರಜ್ವಲಿಸದೆ ಇರದು; ಹಸನ್ಮುಖತೆಯು ಒಡಮೂಡದೆ ಉಳಿಯದು; ಸಾಲೆಯ ಘನತೆ, ಕೀರ್ತಿ ಬೆಳೆದು ಶಿಕ್ಷಣದ ಅಂತಿಮ ಗುರಿಯು ನಿಲುಕದೆ ಹೋಗದು. ಶಿಬಿರಾಗ್ನಿಯ ಸಮ್ಮುಖವು 'ಹೊತ್ತು ಹೋಗಲು ಪುಂಡರಾಲಿಪ ಮತ್ತಮತಿಗಳ ಗೋಷ್ಠಿಯಲ್ಲ' ಆದರೆ 'ಸತ್ಯಶರಣರು' ತಿಳಿವ ದೈವಲೀಲೆ.'

ಓದು ಕಲಿಯಲು ಆರಂಭದ ಹೆಜ್ಜೆಗಳು

(ಪದ್ಧತಿಗಳ ಸಾಮಾನ್ಯ ವಿಮರ್ಶೆ)

ಲೇಖಕರು:- ಶ್ರೀ. ಎಂ. ಜಿ. ಹಂದ್ರಾಳೆ ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

(ಅ) ಅಕ್ಷರ ಪದ್ಧತಿ

ಹಳೆಯ ಪದ್ಧತಿಯ ಶಿಕ್ಷಣ ಕ್ರಮದಲ್ಲಿ ಅಕ್ಷರ ಪದ್ಧತಿಯೇ ರೂಢವಾಗಿತ್ತು. ಮೂಲಾಕ್ಷರಗಳು, ಕಾಗುಣಿತಾಕ್ಷರಗಳು ಇವುಗಳನ್ನು ಸಂಪೂರ್ಣವಾಗಿ ಬರೆಯಲು ಕಲಿಸಿದ ನಂತರ ಓದು ಆರಂಭವಾಗುತ್ತಿತ್ತು. ಮೊದಲು ಅ, ಆ, ಇ, ಈ, ಮೊದಲಾದ ಮೂಲಾಕ್ಷರಗಳನ್ನು ಗುರುಗಳು ಪಾಟಿಯ ಮೇಲೆ ಬರೆದುಕೊಟ್ಟು ಬಾಲಕರಿಗೆ ಅವುಗಳನ್ನೇ ತೀಡಲಿಕ್ಕೆ ಹಚ್ಚುತ್ತಿದ್ದರು. ಬಾಲಕರ ಮನಸ್ಸಿನಲ್ಲಿ ಅಕ್ಷರಗಳ ಆಕೃತಿಯು ಸ್ಥಿರವಾಗಬೇಕೆಂಬುದೇ ಈ ಪದ್ಧತಿಯ ಮುಖ್ಯ ಉದ್ದೇಶವು.

ಆದರೆ ಮಗುವಿಗೆ ಅಕ್ಷರಗಳನ್ನು ತೀಡುವ ಕೆಲಸವು ಆಟವೆಂದು ಪರಿಣಮಿಸಿದಾಗ ಅವನ ಮನಸ್ಸು ಅವನ ಕೆಲಸದಲ್ಲಿ ನೆರವಾಗುವದು; ಆ ಕಾರ್ಯದ ಉದ್ದೇಶವು ಸಫಲವಾಗುವದು. ಆದರೆ ಅಕ್ಷರ ತೀಡುವದೊಂದು ಗುರುಗಳ ಹೇಳಿಕೆಯಿಂದ ಬಂದ ಒಂದು ಒತ್ತಾಯದ ಕೆಲಸವೆಂದು ಪರಿಣಮಿಸಿದಲ್ಲಿ ಅದು ಮಗುವಿಗೆ ರುಚಿಸಲಾರದು; ಅವನ ಮನಸ್ಸು ಆ ಕಾರ್ಯದಲ್ಲಿ ಅವನಿಗೆ ನೆರವಾಗುವದಿಲ್ಲ. ಎಂದ ಮೇಲೆ ಅಕ್ಷರಗಳ ಆಕೃತಿಯು ಮಗುವಿನ ಮನಸ್ಸಿನಲ್ಲಿ ಸ್ಥಿರಗೊಳ್ಳುವದಿಲ್ಲ. ಆದರಿಂದ ಈ ಪದ್ಧತಿಯು ಮಾನಸ ಶಾಸ್ತ್ರಾನುಗಾಮಿಯಾಗಲಾರದು. (Not a Psychological method) ಹಾಗಾದರೆ ಈ ಪದ್ಧತಿಯು ಬಹುಕಾಲದಿಂದ ಏಕೆ ರೂಢವಾಯಿತು? ಹಳೆಯ ಕಾಲದಲ್ಲಿ ಶಿಕ್ಷಣವು ಮಕ್ಕಳ ದೃಷ್ಟಿಯಿಂದ ಸಾಗುತ್ತಿರಲಿಲ್ಲ. ಅಕ್ಷರಾಭ್ಯಾಸ ಮಾಡಿಸಬೇಕೆಂಬುವೇ ಹಿರಿ ಗುರಿಯಾಗಿತ್ತು. ಆ ಕೆಲಸವು ಹೇಗೆ ಸಾಗಿದರೆ ಮಗುವಿಗೆ ರುಚಿಸಬಹುದು, ಅವನಿಗೆ ತೀವ್ರ ಗ್ರಾಹ್ಯವಾಗಬಹುದು ಎಂಬ ವಿಧಾನದ ಬಗೆಗೆ ಶಿಕ್ಷಣ ತಜ್ಞರು ಗಮನಿಸಲಿಲ್ಲ. ಆದರಿಂದ ಪ್ರೌಢ ಶಿಕ್ಷಕನು ಪ್ರೌಢನ ದೃಷ್ಟಿಯಿಂದ ವಿಧಾನವನ್ನು ಕಂಡುಕೊಂಡನು. ಅಂದರೆ ಅಕ್ಷರಗಳು ಕೂಡಿ ಶಬ್ದಗಳಾಗುತ್ತವೆ; ಶಬ್ದಗಳು ಕೂಡಿ ವಾಕ್ಯಗಳಾಗುತ್ತವೆ; ಆದರಿಂದ ಬಾಲಕರು ಅಕ್ಷರಗಳನ್ನು ಗುರುತಿಸಲು ಮೊದಲು ಕಲಿಯಬೇಕು. ಅಕ್ಷರಗಳನ್ನು ಕಲಿತ ಹೊರತು ಶಬ್ದಗಳನ್ನು ಗುರುತಿಸಲಾರರು. ಇದು ಪ್ರೌಢನ ವಿಚಾರ ಸರಣಿ; ತರ್ಕಬದ್ಧ ವಾದಕ್ರಮ. ಇದಕ್ಕನುಗುಣವಾಗಿಯೇ ಶಾಸ್ತ್ರೀಯ ದೃಷ್ಟಿಯಿಂದ ಪದ್ಧತಿಯು ನಿರ್ಮಾಣವಾಯಿತು. ಮೊದಲು ಮೂಲಾಕ್ಷರಗಳನ್ನು ಬರೆಯಲು ಕಲಿಸುವ ಕ್ರಮವು ಬಳಿಕೆಯಲ್ಲಿ ಬಂದಿತು. ಆರಂಭದಲ್ಲಿ ಸ್ವರಗಳನ್ನೂ ಬಳಿಕ ವ್ಯಂಜನಗಳನ್ನೂ ಬರೆಯಲು ಕಲಿಸುತ್ತಿದ್ದರು.

ಅ ಆ ಇ ಈ ಉ ಊ ....

ಕ ಖ ಗ ಘ ಙ ... ...

ಚ ಛ ಜ ಝ ಞ ....

ಈ ಕ್ರಮದಿಂದ ಅಕ್ಷರಗಳನ್ನು ಬಾಲಕರಿಗೆ ತೀಡಲಿಕ್ಕೆ ಹೇಳುವದು ತೀರ ಜಡವಾಗುವದೆಂದು ಎನಿಸತೊಡಗಿತು. ಆದ್ದರಿಂದ ಅಕ್ಷರಗಳನ್ನು ಬರೆಯಲು ಹಗುರಾಗುವಂತೆ ಆಕಾರ ಮಾನದಿಂದ ಗುಂಪುಗಳನ್ನು ಮಾಡಿದರು. ಇದೊಂದು ಸುಧಾರಣೆಯಾಯಿತು.

ರ ಠ ಈ ಕ

ಗ ಇ ಞ ಣ

ಲ ಳ ಉ ಊ ......

ಹೀಗೆ ಗುಂಪುಗಳನ್ನು ರಚಿಸಿಕೊಂಡು ಬಾಲಕರಿಗೆ ಅಕ್ಷರಗಳನ್ನು ಬರೆಯಲು ಹೇಳಲಾರಂಭಿಸಿದರು. ಇದರಿಂದ ಮಕ್ಕಳಿಗೆ ಮೂಲಾಕ್ಷರಗಳನ್ನು ಬರೆಯಲು ಕಲಿಯಲು ಸುಲಭವಾಯಿತು; ಆದರೆ ಅಕ್ಷರಾಭ್ಯಾಸದ ವಿಧಾನವು ಬದಲಾಗಲಿಲ್ಲ: ಬಾಲಕರಿಗೆ ಅರ್ಥವಾಗದ ರೀತಿಯಲ್ಲಿ ಅಕ್ಷರವನ್ನು ತೀಡುವ ಕ್ರಮವು ತಪ್ಪಲಿಲ್ಲ. ಎಂದರೆ ಮಗುವಿಗೆ ಏನೂ ಅರ್ಥವಾಗುವದಿಲ್ಲ; ಅದು ಕೇವಲ ಭಾವವಾಚಕವಾಗುವದು. ಈ ರೀತಿಯ ಅಕ್ಷರಾಭ್ಯಾಸವು ಯಾಂತ್ರಿಕವಾದುದು.

(ಬ) ಶಬ್ದ ಪದ್ಧತಿ

ಅಕ್ಷರಗಳನ್ನು ಬಿಡಿ ಬಿಡಿಯಾಗಿ ಕಲಿಯುವದರಿಂದ ಬಾಲಕರಿಗೆ ಏನೂ ಅರ್ಥವಾಗುವದಿಲ್ಲವೆಂದು, ವಸ್ತು ಸಂಯೋಜಕ ಮಾಡಲಾಯಿತು.

ರ—ರಥ

ಇ—ಇಲಿ

ಮ—ಮಂಟಪ........

ಕೆಲವು ಶಬ್ದಗಳನ್ನು ಆರಿಸಿ ಆ ಶಬ್ದಗಳ ಮೊದಲಿನ ಅಕ್ಷರಗಳನ್ನು ಕಲಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಯಿತು. ಆಯ್ದುಕೊಂಡ ಶಬ್ದಗಳ ಚಿತ್ರಗಳನ್ನೂ ಉಪಯೋಗಿಸಲಾಯಿತು. ವಸ್ತುವನ್ನಾಗಲಿ ಇಲ್ಲವೆ ಚಿತ್ರವನ್ನಾಗಲಿ ತೋರಿಸಿ ಅಕ್ಷರಾಭ್ಯಾಸ ಮಾಡಿಸುವ ಪದ್ಧತಿಯು ಬಾಲಕರಿಗೆ ತುಸುಮಟ್ಟಿಗೆ ರುಚಿಯೆನಿಸಲಾರಂಭಿಸಿತು. ಕೇವಲ ಯಾಂತ್ರಿಕವಾಗಿ ಅಕ್ಷರವನ್ನು ಓದುತ್ತಿದ್ದರು ಇಲ್ಲವೆ ಬರೆಯುತ್ತಿದ್ದರು: ಈ ಕ್ರಮವು ಹೋಗಿ ಶಬ್ದಪದ್ಧತಿಯು ರೂಢವಾಯಿತು. ಯಾವದೊಂದು ವಸ್ತುವಿನ ಹೆಸರನ್ನು ತೋರಿಸುವ ಶಬ್ದವನ್ನು ಆಯ್ದುಕೊಂಡರೆ ಬಾಲಕರಿಗೆ ಅರ್ಥವಾಗುವದೆಂದು ತಿಳಿಯಬಾರದು. ಅವರಿಗೆ ಪರಿಚಿತ ವಸ್ತುಗಳ ಹೆಸರುಗಳನ್ನು ಆಯ್ದುಕೊಳ್ಳಬೇಕು. ಇಲ್ಲವಾದರೆ ಆ ವಸ್ತು ಸಾಕಾರವಾಗುವಂತೆ ಯತ್ನಿಸಬೇಕು. ಆದರಿಂದ ಚಿತ್ರಗಳ ಉಪಯೋಗವು ಅವಶ್ಯವೆನಿಸಿತು. ಶಬ್ದವು ಮಗುವಿಗೆ ಒಂದು ಅರ್ಥವನ್ನು ಕಲ್ಪಿಸಿಕೊಡುವದರಿಂದ ಮತ್ತು ಅದು ವಸ್ತು ಸಂಯೋಜಕವಾದುದರಿಂದ, ಶಬ್ದ ಪದ್ಧತಿಯ ಮೂಲಕ ಅಕ್ಷರಾಭ್ಯಾಸ ಮಾಡುವದು ಬಾಲಕರಿಗೆ ಅಷ್ಟು ಬೇಸರವೆನಿಸಲಿಲ್ಲ. ತುಸು ಮಟ್ಟಿಗೆ ಯಾಂತ್ರಿಕತೆ ಕಡಿಮೆಯಾಯಿತು.

ರ—ರಥ

ಇ—ಇಲಿ

ರಥದ ಚಿತ್ರವನ್ನು ನೋಡಿ, ರಥ ಶಬ್ದವನ್ನು ಬಾಲಕರು ಗುರುತಿಸುವರು. ರ-ರಥ ಇ-ಇಲಿ ಎಂದು ಮೇಲಿಂದ ಮೇಲೆ ಓದಿಸಿ ರ ಮತ್ತು ಇ ಅಕ್ಷರಗಳ ಆಕಾರ ಬಾಲಕರ ಮನಸ್ಸಿನ ಮೇಲೆ ಸ್ಥಿರಗೊಳ್ಳುವಂತೆ ಯತ್ನಿಸಬೇಕಾಗುವದು. ಈ ಪದ್ಧತಿಯೂ ಮುಂದೆ ಯಾಂತ್ರಿಕವೆನಿಸುವದು ಶಬ್ದ ಪದ್ಧತಿಯನ್ನು ಬಳಸುವಲ್ಲಿ ಇನ್ನೊಂದು ಸುಧಾರಣೆಯಾಯಿತು.

ರಥ ಮರ, ದನ ಬಸವ, ಹೀಗೆ ಮೂರು ಇಲ್ಲವೆ ನಾಲ್ಕು ಶಬ್ದಗಳ ಚಿತ್ರಗಳನ್ನು ಒಂದೆಡೆ ಕೊಟ್ಟು,- ಆ ಶಬ್ದಗಳನ್ನು ಓದಿ ಹೇಳುವದು; ಬಳಿಕ ಈ ಶಬ್ದಗಳಲ್ಲಿ ಬಂದ ಅಕ್ಷರಗಳನ್ನು ಪೃಥಕ್ಕರಿಸುವದು; ಈ ಅಕ್ಷರಗಳನ್ನು ಹೊಂದಿಸಿ ಬೇರೆ ಬೇರೆ ಶಬ್ದಗಳನ್ನು ರಚಿಸಿ ಓದಿಸುವದು. ಈ ಪದ್ಧತಿಯಿಂದ ಅಕ್ಷರಗಳ ಆಕಾರವನ್ನು ಬಾಲಕರ ಮನಸ್ಸಿನಲ್ಲಿ ಸ್ಥಿರಗೊಳಿಸುವದಕ್ಕೂ ಅವುಗಳನ್ನು ಗುರುತಿಸಿ ಓದಲಿಕ್ಕೂ ಸುಲಭವೆನಿಸಿತು. ಆದರಿಂದ ಈ ಕ್ರಮವು ಈಗ ಬಹಳ ಪ್ರಚಾರವಾಗಿದೆ. ರೂಢಿಯಲ್ಲಿಯೂ ಇದೆ. ಕೇವಲ ಅಕ್ಷರಗಳನ್ನು ಮೇಲಿಂದ ಮೇಲೆ ಓದಿಸುವದು ಇಲ್ಲವೆ ಪಾಟಿಯ ಮೇಲೆ ತೀಡಿಸುವದು– ಈ ಪದ್ಧತಿಯು ನೀರಸವಾದುದು ನಿಸ್ಸತ್ವವಾದುದು, ಯಾಂತ್ರಿಕವಾದುದು, ತಾರ್ಕಿಕವಾದುದು ಎಂಬ ಕಲ್ಪನೆಯು ಮನವರಿಕೆಯಾಗಿ ಶಬ್ದ ಪದ್ಧತಿಯು ಹೊಸ ರೂಪದಲ್ಲಿ ಬಳಕೆಯಲ್ಲಿ ಬಂದಿತು. ಬಾಲಕರ ಓದಿನ ಕೆಲಸವು ತುಸು ಮಟ್ಟಿಗೆ ಆಕರ್ಷಕವಾಗಿ ಆಟದ ಸ್ವರೂಪವನ್ನು ತಾಳಿತು. ಇದರಿಂದ ಈಗಲೂ ಈ ಪದ್ಧತಿಯು ಬಹಳ ಸಾಲೆಗಳಲ್ಲಿ ಬಳಕೆಯಲ್ಲಿದೆ.

(ಕ) ವಾಕ್ಯ ಪದ್ಧತಿ

ಬಿಡಿ ಬಿಡಿಯಾಗಿ ಶಬ್ದಗಳನ್ನು ಬಾಲಕರಿಗೆ ಪರಿಚಯ ಮಾಡಿಕೊಡುವದಕ್ಕಿಂತ ಅವುಗಳನ್ನು ಮಾತುಗಳಲ್ಲಿ ಹೆಣೆಯುವದು ಒಳ್ಳೆಯದೆಂಬ ವಿಚಾರವು ಗಮನಾರ್ಹವಾಗಿದೆ. ಯಾವದೊಂದು ಶಬ್ದವು ಒಂದು ಸಂದರ್ಭದಲ್ಲಿ ವಿಶಿಷ್ಟಾರ್ಥವನ್ನು ತಳೆಯುವದು; ಶಬ್ದದ ಸರಿಯಾದ ಅರ್ಥವು ಪೂರ್ಣ ಮಾತಿನಲ್ಲಿಯೇ ಸ್ಪಷ್ಟವಾಗುವದು. ಬಾಲಕನು ಒಂದು ವಸ್ತುವನ್ನು ಕಂಡಾಗ ಇಲ್ಲವೆ ಹೊಸ ಅನುಭವ ಹೊಂದಿದಾಗ ತನ್ನ ಅನಿಸಿಕೆಗಳನ್ನು ತನ್ನ ಮಾತುಗಳಲ್ಲಿಯೇ ಹೇಳುವನು. 'ದೀಪ' ಎಂದು ಹೇಳಿದಾಗ ಅದು ಮಗುವಿನ ದೃಷ್ಟಿಯಿಂದ ಪೂರ್ಣ ಮಾತೇ ಎಂದು ತಿಳಿಯಬೇಕು; ಯಾಕಂದರೆ 'ಇದು ದೀಪ' ಎಂಬರ್ಥದಲ್ಲಿಯೇ ಶಬ್ದದ

ಬಳಕೆಯುಂಟು. ಬಾಲಕನ ಓದು ವಾಕ್ಯದಿಂದ ಆರಂಭವಾಗಬೇಕೆಂದು ಆಧುನಿಕ ಶಿಕ್ಷಣ ತಜ್ಞರು ಹೇಳುವರು. ವಾಕ್ಯದಿಂದ ಶಬ್ದ, ಶಬ್ದದಿಂದ ಅಕ್ಷರ ಪರಿಚಯ ಮಾಡಿಕೊಡಬೇಕೆಂಬುದೇ ವಾಕ್ಯ ಪದ್ಧತಿಯ ವೈಶಿಷ್ಟ್ಯವು.

ಇವ ಈರ

ಅದು ತರ

ಇವ ಯಾರು? ಅದು ಏನು? ಈ ಪ್ರಶ್ನೆಗಳನ್ನು ಚಿತ್ರಗಳ ಸಹಾಯದಿಂದ ಕೇಳಿ, ಉತ್ತರಗಳನ್ನು ಹೊರಡಿಸಿಕೊಳ್ಳಬೇಕು. ಮತ್ತು ಆ ಮಾತುಗಳನ್ನು ಬರೆದ ಪಟಗಳನ್ನು ಉಪಯೋಗಿಸಬೇಕು. ಯಾವದೊಂದು ಶಬ್ದವನ್ನು ತೆಗೆದು, ಅದು ಯಾವ ಶಬ್ದವೆಂದು ಕೇಳಬೇಕು. ಬಳಿಕ ಆ ಶಬ್ದಗಳಲ್ಲಿ ಬಂದ ಅಕ್ಷರಗಳನ್ನು ಪ್ರಥಕ್ಕರಿಸಿ ಅವುಗಳನ್ನು ಗುರುತಿಸಲು ರೂಢಿ ಮಾಡಬೇಕು. ಆ ಅಕ್ಷರಗಳನ್ನು ಬಳಸಿ ಬೇರೆ ಶಬ್ದಗಳನ್ನು ರಚಿಸಲು ಉತ್ತೇಜನ ಕೊಡಬೇಕು. ವಾಕ್ಯಪದ್ಧತಿಯನ್ನು ಅನುಸರಿಸುವಲ್ಲಿ ಒಂದು ಸಂಗತಿಯನ್ನು ಗಮನಿಸಬೇಕು. ಒಂದಕ್ಕೊಂದು ಸಂಬಂಧವಿಲ್ಲದ ವಾಕ್ಯಗಳನ್ನು ಓದಿಸುವದರಿಂದ ಬಾಲಕರಿಗೆ ಅಷ್ಟೊಂದು ಲಾಭವಾಗುವದಿಲ್ಲ, ಅಂಥ ವಾಕ್ಯಗಳನ್ನು ಓದಲು ಬಾಲಕರು ಬೇಸರಗೊಳ್ಳಬಹುದು. ಹೀಗೆ ಮಾಡುವದರಿಂದ ವಾಕ್ಯ ಪದ್ಧತಿಯು ಫಲಪ್ರದವಾಗಿ ತೋರಲಿಕ್ಕಿಲ್ಲ.

(ಡ) ಪ್ರಸಂಗ ಹಾಗು ಕಥಾ ಪದ್ಧತಿ

ಬಿಡಿ ಬಿಡಿಯಾಗಿ ತೋರುವ ವಾಕ್ಯಗಳನ್ನು ಓದಿಸುವದಕ್ಕಿಂತ ಅವು ಒಂದು ಪ್ರಸಂಗಕ್ಕೆ ಸಂಬಂಧಿಸಿದಂಥವು ಇರಬೇಕು.

ಇವ ಬಸವ

ಇದು ಬಸವನ ಬಗರಿ

ಬಸವ ಬಗರಿ ಆಡುವನು.

ಇವ ಯಾರು? ಇದು ಯಾರ ಬಗರಿ? ಬಸವ ಏನು ಮಾಡುವನು? ಎಂಬ ಪ್ರಶ್ನೆಗಳನ್ನು ಕೇಳಿ ಈ ವಾಕ್ಯಗಳ ಪರಿಚಯ ಮಾಡಿಕೊಡಬೇಕು. ಈ ವಾಕ್ಯಗಳು ಸುಸಂಬದ್ಧವಾದ ಸನ್ನಿವೇಶಕ್ಕೆ ಹೆಣೆಯಲ್ಪಟ್ಟಿವೆ. ಆದಿರಿಂದ ಬಾಲಕರಿಗೆ ಅವುಗಳನ್ನು ಓದಲು ರುಚಿಸುವದು. ಈ ಮಾತುಗಳನ್ನು ಕರಿ ಹಲಗೆಯ ಮೇಲೆ ಬರೆದು ಓದಿಸಬೇಕು. ಹಾಗೂ ಪಟಗಳನ್ನು ಉಪಯೋಗಿಸಿ ಓದಿಸಬೇಕು. ಮೇಲಿಂದ ಮೇಲೆ ಬಂದ ಶಬ್ದಗಳನ್ನು ಬಾಲಕರು ಸುಲಭವಾಗಿ ಗುರುತಿಸುವರು. ಹೆಚ್ಚು ಸಾರೆ ಬಂದ ಸುಲಭ ಅಕ್ಷರಗಳನ್ನು ವಿಂಗಡಿಸಿ ಅವುಗಳನ್ನು ಗುರುತಿಸಲು ರೂಢಿ ಮಾಡಬೇಕು. ಹೀಗೆ ಮಾಡಿದಲ್ಲಿ ವಾಕ್ಯದಿಂದ ಶಬ್ದ, ಶಬ್ದದಿಂದ ಅಕ್ಷರ ಕಲಿಸುವ ಕ್ರಮವು ಹೆಚ್ಚು ಮನೋರಂಜಕವೂ, ಪರಿಣಾಮಕಾರಕವೂ ಆಗುವವದರಲ್ಲಿ ಸಂದೇಹವಿಲ್ಲ. ಒಂದು ಪಾಠದಲ್ಲಿ ಬಂದ ಎಲ್ಲ ಮೂಲಾಕ್ಷರಗಳನ್ನೂ, ಕಾಗುಣಿತಾಕ್ಷರಗಳನ್ನೂ, ಬಾಲಕರು ಕಲಿತೇ ತೀರಬೇಕೆಂಬ ಹಟ ಹಿಡಿಯಬಾರದು. ಮೇಲಿನ ಪಾಠದಲ್ಲಿ 'ಬ,ಸ,ವ, ಇ,ಗ' ಈ ಅಕ್ಷರಗಳನ್ನು ಮಾತ್ರ ಪರಿಚಯ ಮಾಡಿಕೊಡುವ ಉದ್ದೇಶವನ್ನು ಇಟ್ಟುಕೊಳ್ಳಬಹುದು. ಈ ಪಾಠದಲ್ಲಿ ಬಂದ ಶಬ್ದಗಳೂ, ಅಕ್ಷರಗಳೂ ಮುಂದಿನ ಪಾಠಗಳಲ್ಲಿ ಮತ್ತೆ ಬರಬೇಕು, ಬರುವವು. ಬಂದ ಅಕ್ಷರಗಳನ್ನು ದೃಢೀಕರಿಸುತ್ತ, ಹೊಸ ಅಕ್ಷರಗಳನ್ನು ಪರಿಚಯ ಮಾಡಿಕೊಡುತ್ತ ವಾಚನವನ್ನು ಸಾಗಿಸಬೇಕು. ಪ್ರಸಂಗ ಪದ್ಧತಿಯ ಮುಖಾಂತರ ವಾಚನವು ಸಾಗಿ, ಸುಲಭ ವಾಕ್ಯಗಳುಳ್ಳ ಚಿಕ್ಕ ಕಥೆಗಳನ್ನು ಓದಲು ರೂಢಿ ಮಾಡಿಸಬೇಕು. ಕಾಗುಣಿತಾಕ್ಷರಗಳನ್ನೂ ಒತ್ತಕ್ಷರಗಳನ್ನೂ ಕ್ರಮವಾಗಿ ಪರಿಚಯ ಮಾಡಿಕೊಟ್ಟು ಅನೇಕ ಉದಾಹರಣೆಗಳಿಂದ ಅವುಗಳನ್ನು ದೃಢೀಕರಿಸಬೇಕು.

ಮಕ್ಕಳು ವಾಚನದ ಬಗೆಗೆ ಉತ್ಸಾಹವನ್ನು ತೋರಿಸಬೇಕಾದರೆ, ಅವರಿಗೆ ಅರ್ಥವಾಗುವಂಥ ವಿಷಯಗಳನ್ನು ಕುರಿತು ಅವರ ಮನಸ್ಸನ್ನು ಸೆಳೆಯುವಂಥ, ಅವರು ಹಿಗ್ಗಿ ನಲಿಯುವಂಥ ಸನ್ನಿವೇಶಗಳನ್ನು ಆಯ್ದುಕೊಂಡು, ಅವರಿಗೆ ಪರಿಚಿತವಿರುವ ಶಬ್ದಗಳಲ್ಲಿ ವಾಚನವನ್ನು ಪ್ರಾರಂಭಿಸಬೇಕು, ಅಂದರೆ ಪ್ರಾರಂಭದಿಂದಲೂ ವಾಚನವೆಂದರೆ ಕೇವಲ ಅಕ್ಷರಗಳನ್ನು, ಶಬ್ದಗಳನ್ನು ಗುರುತಿಸುವದೆಂಬ ಹಳೆಯ ಭಾವನೆಯನ್ನು ಬಿಟ್ಟು, ಅವುಗಳ ಅರ್ಥ ಭಾವ ಮುಂತಾದ್ದನ್ನು ತಿಳಿದುಕೊಳ್ಳುವದೇ ವಿಶೇಷ ಮಹತ್ವದ ಭಾಗವೆಂಬುದನ್ನು ತಿಳಿಯಬೇಕು. ಇದನ್ನು ಸಾಧಿಸಬೇಕಾದರೆ ಮಕ್ಕಳು ಮೊದಲಿನಿಂದಲೂ ಅರ್ಥವಾಗುವಂಥ, ಪ್ರಸಂಗಾನುಗತ ವಾಕ್ಯಗಳನ್ನೇ ಓದಲು ಪ್ರಾರಂಭಿಸಬೇಕು; ಮತ್ತು ಈ ವಾಕ್ಯ-

ಗಳು ಅವರ ದಿನದ ಅನುಭವಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೆ ಇರಬೇಕು. ಬಾಲಕರು ಸಾಲೆಗೆ ಬರುವ ಮುಂಚೆ ತಮ್ಮ ಸುತ್ತುಮುತ್ತಲಿನ ಜನರು, ಪ್ರಾಣಿಗಳು, ವಸ್ತುಗಳು ಇವುಗಳನ್ನು ಅರಿತುಕೊಳ್ಳುವದಲ್ಲದೆ, ಅವುಗಳ ಬಳಕೆಗೆ ಸ್ವಲ್ಪ ಮಾತನಾಡಲೂ ಬಲ್ಲರು. ಶಿಕ್ಷಕರು ಮಕ್ಕಳಲ್ಲಿದ್ದ ಈ ಜ್ಞಾನವನ್ನು ಉಪಯೋಗಿಸಿಕೊಂಡು ಓದು ಕಲಿಸಲು ಪ್ರಾರಂಭಿಸಬೇಕು. ಅಂದರೆ ಅವರಿಗೆ ಗೊತ್ತಿದ್ದ ವಿಷಯಗಳನ್ನೇ ತೆಗೆದುಕೊಂಡು ಒಂದೊಂದು ವಿಷಯದ ಬಗೆಗೆ ಅವರಿಗೆ ಪರಿಚಿತವಿದ್ದ ಶಬ್ದಗಳಿಂದ ರಚಿಸಿದ ವಾಕ್ಯಗಳನ್ನು ಓದಲು ತೊಡಗಿಸಬೇಕು.

ಇಂಥ ಓದಿನಲ್ಲಿ ಮಕ್ಕಳಿಗೆ ಆಸಕ್ತಿಯುಂಟಾಗುತ್ತದೆ. ಈ ವಾಕ್ಯಗಳ ರಚನೆಯಲ್ಲಿ ಕೃತಿ, ಕತೆ, ನಾದ-ಮಾಧುರ್ಯ ಇವು ಇದ್ದರೆ ಮಕ್ಕಳಿಗೆ ಓದಲು ಹುರುಪು ಬರುತ್ತದೆ, ಈಗ ಸರಕಾರದವರು ಬಳಕೆಯಲ್ಲಿ ತಂದಿರುವ ಕನ್ನಡ ವಾಚನಮಾಲೆಯಲ್ಲಿ ಈ ಎಲ್ಲ ಮಾತುಗಳನ್ನು ಗಮನಿಸಲಾಗಿದೆ.

ಒಟ್ಟಿನಲ್ಲಿ, ಮಕ್ಕಳು ಶಬ್ದಗಳನ್ನು ಗುರುತಿಸುವದಲ್ಲದೆ ಅವುಗಳ ಭಾವ, ಅರ್ಥ ಇವುಗಳನ್ನು ಗ್ರಹಿಸುವಂತೆಯೂ ಓದಿ ಹಿಗ್ಗುವಂತೆಯೂ, ಅವರಲ್ಲಿ ಓದುವ ಅಭಿರುಚಿ ಬೆಳೆಯುವಂತೆಯೂ ನಾವು ಮೊದಲಿನಿಂದ ಪ್ರಯತ್ನಿಸಬೇಕು.

ಮೇಲೆ ಕಾಣಿಸಿದ ವಚನದ ವಿವೇಚನೆಯಿಂದ-ಮಕ್ಕಳು ಮೊದಲಿನಿಂದಲೂ ಅರ್ಥವಾಗುವಂಥ, ಮನಸ್ಸು ಹಿಡಿಯುವಂಥ ಓದನ್ನು ಕೈಕೊಳ್ಳಬೇಕೆಂಬುದು ಸ್ಪಷ್ಟವಿದೆ. ಕೇವಲ ಅಕ್ಷರಗಳನ್ನಾಗಲಿ. ಒಂದಕ್ಕೊಂದು ಸಂಬಂಧವಿಲ್ಲದ ಶಬ್ದಗಳನ್ನಾಗಲಿ ಓದುವದರಲ್ಲಿ ಹುರುಪಿಲ್ಲ; ಇಂಥ ಓದು ಮಕ್ಕಳಿಗೆ ಅರ್ಥವಾಗುವದಿಲ್ಲ. ಅವರಿಗೆ ಓದಿನಲ್ಲಿ ಉತ್ಸಾಹವುಂಟಾಗುವದಿಲ್ಲ. ಸುಸಂಗತ ವಾಕ್ಯಗಳಿದ್ದರೆ ಮಕ್ಕಳಿಗೆ ಅರ್ಥವಾಗುವದು; ಆಸಕ್ತಿಯುಂಟಾಗುವದು. ಈ ಮೊದಲು ಪ್ರಚಾರದಲ್ಲಿದ್ದ ಅಕ್ಷರ ಪದ್ಧತಿ, ಶಬ್ದ ಪದ್ಧತಿಗಳನ್ನು ಬಿಟ್ಟು ಈಗ ವಾಕ್ಯ ಪದ್ಧತಿಯನ್ನು ಅನುಸರಿಸಲಾಗುತ್ತದೆ ಎಂದರೆ ವಾಕ್ಯಗಳಿಂದಲೇ ಮಕ್ಕಳ ಓದನ್ನು ಪ್ರಾರಂಭಿಸುವ ಪದ್ಧತಿ ಬಳಕೆಯಲ್ಲಿ ಬರುತ್ತಿದೆ. ಈ ವಾಕ್ಯಗಳೂ ಕೂಡಾ ಒಂದಕ್ಕೊಂದು ಸಂಬಂಧಿಸಿದವಿರಬೇಕು. ಮಕ್ಕಳು ದಿನಾಲು ಮಾಡುವ ಕೃತಿಗಳನ್ನೊಳಗೊಂಡಿರಬೇಕು. ಅಂದರೆ ಅವರ ಕೃತಿಗಳನ್ನು ವರ್ಣಿಸುವ ವಾಕ್ಯಗಳಿರಬೇಕು. ಇಂಥ ವಾಕ್ಯಗಳ ಓದಿನಿಂದ ಅವರಲ್ಲಿ ಉತ್ಸಾಹವು ಉಂಟಾಗುವದು.

ಮೇಲೆ ಹೇಳಿದ ತತ್ತ್ವಗಳನ್ನು ಹಿಡಿದು ಒಂದು ಪ್ರಸಂಗವನ್ನು ಇಲ್ಲವೆ ಒಂದು ಕಥೆಯನ್ನು ಇಲ್ಲವೆ ಮಕ್ಕಳ ಒಂದು ಕೃತಿಯನ್ನು ಹೇಳುವಂತೆ ರಚಿಸಿದ ವಾಕ್ಯವೃಂದಗಳು ಆರಂಭದ ವಾಚನಕ್ಕೆ ಇರಬೇಕು. ಈ ಆರಂಭದ ವಾಚನದಲ್ಲಿ ಅನುಸರಿಸಬೇಕಾದ ಮುಖ್ಯ ಮೆಟ್ಟುಗಳನ್ನು ಇಲ್ಲಿ ಸ್ಥೂಲವಾಗಿ ಸೂಚಿಸಲಾಗಿದೆ.

(೧) ಶಿಕ್ಷಕರು ಮೊದಲು ಮಕ್ಕಳ ಕೂಡ ಅವರ ಹೆಸರು, ತಂದೆ, ತಾಯಿ, ಅಣ್ಣತಮ್ಮಂದಿರು, ಅಕ್ಕತಂಗಿಯರು, ಮನೆ, ಹೊಲ, ನೆರೆಹೊರೆಯವರು, ಸಾಕಿದ ಪ್ರಾಣಿಗಳು, ಮುಂತಾದವುಗಳ ಬಗ್ಗೆ ಸಂಭಾಷಣೆ ಮಾಡಬೇಕು. ಆಗಾಗ ಚಿಕ್ಕ ಚಿಕ್ಕ ಕಥೆಗಳನ್ನು ಹೇಳಬೇಕು; ಆಟಗಳನ್ನು ಆಡಿಸಬೇಕು. ಈ ರೀತಿಯಿಂದ ಮಕ್ಕಳಲ್ಲಿ ಸಾಲೆಯ ವಿಷಯವಾಗಿ ಉತ್ಸಾಹ, ಶಿಕ್ಷಕನಲ್ಲಿ ಮಮತೆ, ಆದರ ಇವು ಉಂಟಾಗುವಂತೆ ಪ್ರಯತ್ನಿಸಬೇಕು.

(೨) ಈ ರೀತಿಯಾಗಿ ಸಂಭಾಷಣೆ ನಡೆದ ವೇಳೆಯಲ್ಲಿ ಮಕ್ಕಳಲ್ಲಿ ಕಂಡ ಉಚ್ಚಾರಣೆಯ ದೋಷಗಳನ್ನು ತಿದ್ದಬೇಕು. ಅವರಿಗೆ ಚೆನ್ನಾಗಿ ಮಾತನಾಡಲು ಕಲಿಸಬೇಕು; ಮತ್ತು ಅವರು ಸಂಕೋಚಪಡದೆ ಮಾತನಾಡುವಂತೆ ಹುರುಪುಗೊಳಿಸಬೇಕು.

(೩) 'ಚಿಕ್ಕ ಮಕ್ಕಳ ಪುಸ್ತಕದಲ್ಲಿ' ಬಂದ ಪಾಠಗಳ ವಾಚನವನ್ನು ಆರಂಭಿಸುವಾಗ ಮೊದಲು ಚಿತ್ರಗಳ ಇಲ್ಲವೆ ಉಳಿದ ಉಪಕರಣಗಳ ಸಹಾಯದಿಂದ ಸಂಭಾಷಣೆಯನ್ನು ಸಾಗಿಸಬೇಕು.

(೪) ಕರಿ ಹಲಿಗೆಯ ಹಾಗೂ ಚಿತ್ರಗಳ ಸಹಾಯದಿಂದ ಇಡೀ ವಾಕ್ಯಗಳನ್ನು ಓದಬೇಕು. ಶಿಕ್ಷಕರು ಮೊದಲು ಮೂರು ನಾಲ್ಕು ಸಾರೆ ಓದಬೇಕು. ಸಾವಕಾಶವಾಗಿ ಯೋಗ್ಯ ಸ್ಥಳಗಳಲ್ಲಿ ನಿಂತು ಆಘಾತವುಳ್ಳ

ಶಬ್ದಗಳ ಮೇಲೆ ಆಘಾತಕೊಟ್ಟು ಅರ್ಥವು ಸ್ಪಷ್ಟವಾಗುವಂತೆಯೂ, ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಉಂಟಾಗುವಂತೆಯೂ, ಅವರಲ್ಲಿ ಉತ್ಸಾಹ ಉಂಟಾಗುವಂತೆಯೂ ಓದಬೇಕು.

(೫) ಶಿಕ್ಷಕನು ಅಷ್ಟಷ್ಟೇ ಭಾಗವನ್ನು ತಾನು ಓದಿ ತೋರಿಸಿ, ಅದರಂತೆ ಬಾಲಕರು ಸಾಮೂಹಿಕವಾಗಿ ಓದುವಂತೆ ಪ್ರೋತ್ಸಾಹಿಸಬೇಕು.

(೬) ವೈಯಕ್ತಿಕವಾಗಿ ಓದುವದು, ಸಾಮಾನ್ಯವಾಗಿ ಕಂಡು ಬಂದ ಮುಖ್ಯ ದೋಷಗಳನ್ನು ತಿದ್ದುವದು.

(೭) ಚಿತ್ರಗಳನ್ನು ತೋರಿಸಿದರೆ, ವಾಕ್ಯಗಳನ್ನು ತೋರಿಸುವದು; ವಾಕ್ಯಗಳನ್ನು ತೋರಿಸಿದರೆ, ಚಿತ್ರಗಳನ್ನು ತೋರಿಸುವದು.

(೮) ರಟ್ಟಿನ ತುಂಡುಗಳ ಮೇಲೆ ಬರೆದು ಇಲ್ಲವೆ ಕ. ಹಲಗೆಯ ಮೇಲೆ ಬರೆದ ವಾಕ್ಯಗಳನ್ನು ತೋರಿಸಿದ ಕೂಡಲೆ ಗುರುತಿಸಿ ಹೇಳುವದು.

(೯) ವಾಕ್ಯಗಳಲ್ಲಿಯ ಶಬ್ದಗಳನ್ನು ವಿಶೇಷತಃ ಮೇಲಿಂದ ಮೇಲೆ ಬಂದಂಥವನ್ನು ವಿಂಗಡಿಸಿ ಗುರುತಿಸುವದು.

(೧೦) ಬಿಟ್ಟ ಶಬ್ದಗಳನ್ನು ಹಾಕಿ ವಾಕ್ಯಗಳನ್ನು ಪೂರ್ಣ ಮಾಡುವದು; ಶಬ್ದ ಮತ್ತು ಚಿತ್ರಗಳನ್ನು ಹೊಂದಿಸುವದು.

(೧೧) ಗೊತ್ತಿದ್ದ ಶಬ್ದಗಳನ್ನು ವಿಂಗಡಿಸಿ ಅಕ್ಷರ ಜ್ಞಾನವನ್ನು ಮಾಡಿಕೊಡುವದು. ಅಕ್ಷರಗಳ ಆಕೃತಿ ಪರಿಚಯ ಹಾಗೂ ಉಚ್ಚಾರ ಇವು ನೆಟ್ಟಗಾಗುವಂತೆ ಸಾಕಷ್ಟು ಅಭ್ಯಸನಗಳನ್ನು ಕೊಡಬೇಕು.

(೧೨) ಸಾಕಷ್ಟು ಅಕ್ಷರ ಜ್ಞಾನವಾದ ಬಳಿಕ ಗೊತ್ತಿದ್ದ ಅಕ್ಷರಗಳಿಂದ ಆದ ಹೊಸ (ಆದರೂ ಪರಿಚಿತ ವಿಷಯಗಳಿಗೆ ಸಂಬಂಧಿಸಿದ) ಶಬ್ದಗಳನ್ನು ಓದಲು ಪ್ರಯತ್ನ ಮಾಡಬೇಕು. ಈ ಪ್ರಯತ್ನವನ್ನು ಮಾಡುವಾಗ ಮಕ್ಕಳಿಗೆ ಮೊದಲು ಮನಸ್ಸಿನಲ್ಲಿ ಆ ಅಕ್ಷರಗಳನ್ನು ಉಚ್ಚರಿಸುತ್ತ 'ಕಮಕಮ' ಓದುವದನ್ನು ಮೊದಲಿನಿಂದಲೇ ಪ್ರತಿಬಂಧಿಸಬೇಕು.

(೧೩) ಸಂಭಾಷಣೆ ಸುಮಾರು ೧೦-೧೫ ದಿನ ನಡೆದ ಬಳಿಕ ಮಕ್ಕಳಿಗೆ ಓದಲು ಹೇಳಬೇಕು. ೪–೬ ಪಾಠಗಳನ್ನು ಓದುವದಾದ ಬಳಿಕ, ಸಾಕಷ್ಟು ವಾಕ್ಯಗಳನ್ನು ಗುರುತಿಸಲು ಬಂದ ಬಳಿಕ, ಶಬ್ದಗಳನ್ನು ವಿಂಗಡಿಸಬೇಕು. ಶಬ್ದಗಳನ್ನು ಚೆನ್ನಾಗಿ ಗುರುತಿಸುವದಲ್ಲದೆ, ಅವುಗಳನ್ನು ಯೋಗ್ಯ ಸ್ಥಳಗಳಲ್ಲಿ ಹಾಕಿ ವಾಕ್ಯಗಳನ್ನು ಮಾಡಬಲ್ಲರೆಂದು ಅನಿಸಿದ ಬಳಿಕ, ಶಬ್ದಗಳನ್ನು ಪೃಥಕ್ಕರಿಸಿ ಅಕ್ಷರಗಳ ಜ್ಞಾನವನ್ನು ಮಾಡಿಕೊಡಬೇಕು. ಚಿಕ್ಕ ಮಕ್ಕಳಿಗೆ ಕಲಿಸುವಾಗ ಪುನರುಕ್ತಿಗಳು, ರೂಢಿಯ ಪಾಠಗಳು, ಅಭ್ಯಸನಗಳು ಇವೆಲ್ಲ ಸಾಕಷ್ಟು ಬೇಕು. ಮಕ್ಕಳಿಗೆ ಪ್ರತಿಯೊಂದು ಪಾಠವನ್ನು ಕಲಿಸಲು ೪-೬ ದಿನಗಳು ಬೇಕು ಶಿಕ್ಷಕರು ಶ್ರಮವಹಿಸಿ ಈ ಪದ್ಧತಿಯನ್ನು ಚೆನ್ನಾಗಿ ಬಳಸಿದಲ್ಲಿ ನವೀನ ಪದ್ಧತಿಯ ನವೀನತೆಯು ಗೋಚರಿಸಿ ಫಲವೂ ಮಕ್ಕಳಿಗೆ ದೊರೆಯಲು ಅನುಕೂಲವಾಗುವದೆಂದು ನಿಸ್ಸಂದೇಹವಾಗಿ ಹೇಳಬಯಸುತ್ತೇವೆ.

ವಿಶೇಷ ಸುದ್ದಿ

ಶಿಕ್ಷಣ ಖಾತೆಯ ಆಡಳಿತೆಯ ಯಂತ್ರವನ್ನು ಪುನರ್ಘಟಿಸುವ ವಿಚಾರವನ್ನು ಸರಕಾರದವರು ಘೋಷಿಸಿದ್ದು ಇದರಿಂದ ಶೀಘ್ರದಲ್ಲಿಯೇ ಶ್ರೇಷ್ಠತರದತ್ತ ಸಾಗುವ ಬದಲಾವಣೆಯು ಬರಲಿದೆ. ಈಗಿನಂತೆ ನಾಲ್ಕು ಜಿಲ್ಲೆಗಳಿಗೆ ಕೂಡಿ ಓರ್ವ ಎಜ್ಯುಕೇಶನಲ್ ಇನಸ್ಪೆಕ್ಟರರಿದೆ ಇನ್ನು ಮುಂದೆ ಪ್ರತಿ ಜಿಲ್ಹೆಗೆ ಒಬ್ಬರಂತೆ ಎಜ್ಯುಕೇಶನಲ್ ಇನಸ್ಪೆಕ್ಟರರು ನೇಮಿಸಲ್ಪಡುವರು. ಈ ಆಫೀಸರರಿಗೆ ತಮ್ಮ ಜಿಲ್ಹೆಯಲ್ಲಿಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ಸರ್ವತೋಮುಖ ಪ್ರಗತಿಯನ್ನು ಸಾಧಿಸಲು ಹೆಚ್ಚಿನ ಲಕ್ಷ್ಯವನ್ನು ಪೂರೈಸಲಿಕ್ಕೆ ಸಾಧ್ಯವಾಗುವದು. ಈ ಬದಲಾವಣೆಯು ದಿನಾಂಕ ೧-೪-೫೩ರಿಂದ ಜರಬಹುದೆಂಬ ಗ್ರಹಿಕೆ.

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

೧೯೫೪ ಫೆಬ್ರುವರಿಯಿಂದ ಮಾರ್ಚ ೧೫ರ ವರೆಗೆ

ಶೈಕ್ಷಣಿಕ ಸಮ್ಮೇಲನಗಳು

ಕೆಳಗೆ ಕಾಣಿಸಿದ ಊರುಗಳ ಶಾಲೆಗಳಲ್ಲಿ ಗ್ರುಪ್ ಶೈಕ್ಷಣಿಕ ಸಮ್ಮೇಲನಗಳು ಜರುಗಿದವು. ಇವುಗಳ ಅಂಗವಾಗಿ ಶೈಕ್ಷಣಿಕ ಚಟುವಟಿಕೆಗಳು ಮನರಂಜನೆಯ ಕಾರ್ಯ ಕ್ರಮಗಳು, ಶಾರೀರಿಕ ಶಿಕ್ಷಣದ ಚಟುವಟಿಕೆಗಳು, ಚರ್ಚೆಗಳು ಮಾದರಿ ಪಾಠಗಳು ಮುಂತಾದ ಕಾರ್ಯಕ್ರಮಗಳು ಉತ್ಸಾಹದಿಂದ ನೆರವೇರಿಸಲ್ಪಟ್ಟವು

ಊರು-ತಾರೀಖು ಫೆಬ್ರುವರಿ	ಅಧ್ಯಕ್ಷರು	ವಿಶಿಷ್ಟ ಸಂಗತಿಗಳು
ಬಬ್ಬಳ್ಳಿ—೪	ಶ್ರೀ. ಬಿ. ಡಿ. ಮೂಗಿ ಅ। ಏ. ಓ.	ಸೂತ್ರಯಜ್ಞ, ಪ್ರದರ್ಶನ
ಬಗರಖೇಡ—೨೭	ಶ್ರೀ. ಗುಂಜಿಕರ ಏ, ಓ.	ವಸ್ತು ಪ್ರದರ್ಶನ
ರಾಣೇಬೆನ್ನೂರ—೫	ಶ್ರೀ. ಎ. ಎಚ್ ದಳವಾಯಿ	—
ಬ್ಯಾಡಗಿ—೨೦	ಡಿ. ಇ. ಆಯ್. ಶ್ರೀ. ರಾ. ರು. ಕಪ್ಪಸದ, ಏ. ಓ.	ಅಭ್ಯಾಸ ಪತ್ರಿಕೆಯ ಚರ್ಚೆ.
ಕಟ್ಟಿಹಳ್ಳಿ—೨೬	,, ,, ,,	ಶಿಕ್ಷಣದಲ್ಲಿ ಆಗುವ ಕುಂದು ಕೊರತೆಗಳ ನಿವಾರಣೆಯ ಬಗ್ಗೆ ಚರ್ಚೆ.
ಬಸುಂಡಿ—೨೫	ಶ್ರೀ. ರಾ. ರು. ಕುಪ್ಪಸದ ಏ. ಓ.	ಶ್ರೀ ಎಂ ಎಂ. ಕೆರೂಡಿ ಅವರು ಸಮ್ಮೇಲನವನ್ನು ಉದ್ಘಾಟಿಸಿದರು
ಉಣ್ಣಿಭಾವಿ—೨೪	ಶ್ರೀ. ಜಿ. ಜೆ. ಗುಂಜೀಕರ ಏ. ಓ.	ಬಾಗೇವಾಡಿ ತಾಲೂಕ ಸಾಕ್ಷರತಾ ಪ್ರಸಾರಕ ಸಂಘದಿಂದ ಪ್ರಾ. ಶಿ. ಸಮ್ಮೇಲನವು ಜರುಗಿತು. ಪ್ರದರ್ಶನವನ್ನು ಮಾಮಲೇದಾರರಾದ ಶ್ರೀ. ಹೆಬಸೂರ ಅವರು ಉದ್ಘಾಟಿಸಿದರು. ಮಾನ್ಯ ಶ್ರೀ. ಕೆ. ಎಫ್. ಪಾಟೀಲ, ಉಪಮಂತ್ರಿಗಳು ಆಗಮಿಸಿದ್ದರು. ಗ್ರಾಮೋದ್ಧಾರ ಕಾರ್ಯವನ್ನು ಮಾನ್ಯ ಕೆ. ಎಫ್. ಪಾಟೀಲರು ಸಂದರ್ಶಿಸಿದರು. ವಿದ್ಯಾರ್ಥಿಗಳ ಸಮ್ಮೆಲನವೂ ಆಯಿತು.

ಚಿಕ್ಕೋಡಿ ೨೫	ಶ್ರೀ. ಆರ್. ಬಿ. ನಾಯಕ, ಸಿವ್ಹಿಲ್ ಜಜ್ಜ	ಸಮ್ಮೇಲನಕ್ಕೆ ಶ್ರೀ. ಶಿವಪ್ಪಣ್ಣಾ ಕೋರಿ ಅಂಕಲಿ ಅವರೂ ಶ್ರೀ. ಶಾಂತಪ್ಪಣ್ಣಾ ಮಿರ್ಜಿ ಅವರೂ ಒಂದೊಂದು ಬೆಳ್ಳಿಯ ಥಾಲು ಮತ್ತು ಶ್ರೀ. ಬಿ. ಎಸ್. ಪಾಟೀಲ ನವಲಹಾಳಕರ, ಉಳ್ಳೇಗಡ್ಡಿ, ಪಾಟೀಲ ಕರೂರ, ಬಾಬಣ್ಣಾ ಹುಕ್ಕೇರಿ ಅವರು ಒಂದೊಂದು ಕಪ್ ಕೊಟ್ಟರು.
ದೇವನಹಾಳ—೩೭	ಶ್ರೀ ಮೋಗೂರ ಅ। ಎ. ಓ.	—
ತಿಕೋಟಾ—೧೬	ಶ್ರೀ. ಗುಂಜೀಕರ, ಎ. ಓ	—
ಗೂಡೂರ—೩೭	ಶ್ರೀ. ಯಾರಗಲ್ಲ, ಡಿ. ಇ. ಆಯ್.	—
ಹಿಪ್ಪರಗಿ—೧೨	ಶ್ರೀ. ವಾಲಗದ ಅ. ಡೆ. ಎ. ಇ	—
ಬಿಂಕದಕಟ್ಟಿ ೮	ಶ್ರೀ. ರಾ. ರು. ಕುಪ್ಪಸದ ಎ. ಓ.	ಪ್ರಾ ಶಾ. ಪ್ರ. ಪರೀಕ್ಷೆಯಲ್ಲಿ ಮೇಲ್ಪಂಕ್ತಿ ಪಡೆದ ವಿದ್ಯಾರ್ಥಿಗಳಿಗೆ ಹಂಚುವ ಪಾರಿತೋಷಕ ಸಮಾರಂಭ. ಪ್ರದರ್ಶನ ಶಾಲಾ ಕಟ್ಟಡದ ನಿಧಿ ಸಂಗ್ರಹಕ್ಕೆ ಡಾ। ಕರೂರ ೧೦೦೧ ರೂ ಶ್ರೀ. ತಿ. ಬ. ತಿಲಾಪೂರ ೫೦೧ ರೂ. ಶ್ರೀ. ಬೂ ಭಿ. ತಿಲಾಪೂರ ೫೦೧ ರೂ, ಕೊಡುವ ವಾಗ್ದಾನ ಮಾಡಿದರು. ಕುಮಾರ ವಾಸನಗೌಡ ಆಗಸನಕೊಪ್ಪ ಎಂಬ ೭ನೆಯ ಇಯತ್ತೆಯ ವಿದ್ಯಾರ್ಥಿ ೫೧ ರೂ. ಕೊಡುವ ವಾಗ್ದಾನ ಮಾಡಿದನು.
ಸಿಡಸೋಸಿ—೧೮	ಶ್ರೀ. ಜಿ. ಎಸ್. ಹಿರೇಮಠ, ಶ್ರೀ. ಅರ್ಜುನ ವಾಡಕರ, ಶ್ರೀ. ಹಿರೇಮಠ ಡಾಕ್ಟರ	ಸ್ನೇಹ ಸಮ್ಮೇಲನಗಳು ನಡೆದವು.
ಸುಳ್ಳ—೯	ಶ್ರೀ. ರಾ. ರು. ಕುಪ್ಪಸದ	ಸಂಗಮೇಶ್ವರ ವಾಚನಾಲಯದ ಪ್ರಾರಂಭ ಪ್ರದರ್ಶನ
ಮುದ್ದೇಬಿಹಾಳ—೧೦.	ಶ್ರೀಮತಿ ಮುಳ್ಳೂರ ಅ। ಎ। ಡಿ। ಇ। ಆಯ್.	—

ಪ್ರಾಥಮಿಕ ಶಿಕ್ಷಣದ ಕ್ಷೇತ್ರದ ಸೇವೆ

ಕಾರವಾರ—೭	ಶ್ರೀ. ಜಮಖಂಡಿ, ಜಿಲ್ಲಾ ನ್ಯಾಯಾಧೀಶ	ಶ್ರೀ [illegible] ಕ್ರೀಡಾ ಸಪ್ತಾಹ [illegible]
ಚಿಕ್ಕೋಡಿ—೧೫	ಶ್ರೀ. ಆರ್. ಬಿ. ನಾಯಿಕ, ಸಿವ್ಹಿಲ್ ಜಡ್ಜ	[illegible]
ಮೆಟಗುಡ್ಡ—೮	ಶ್ರೀ. ಕೆ. ಬಿ. ಓಂಕಾರ	—
ಹಿರೇಬಾಗೇವಾಡಿ—೧	ಶ್ರೀ. ಪಪ್ಪದ ಆ। ಏ। ಓ.	—
ಸೂಡಿ—೨೦	ಶ್ರೀ. ರಾ. ರು. ಕುಪ್ಪಸದ ಏ. ಓ.	—
ಕೋಡ—೨	ಶ್ರೀ. ವರಾಹ ಮೂರ್ತಿ ಎ ಡಿ. ಇ, ಆಯ್.	—
ಹಿರೇಕೆರೂರ—೨	,,	—
ಬ್ಯಾಡಗಿ—೨	ಶ್ರೀ. ದಳವಾಯಿ, ಡಿ. ಇ. ಆಯ್.	—
ಹಿರೇಬೆಂಡಿಗೇರಿ—೨	ಶ್ರೀ. ಎಂ. ಜಿ. ಹಂದ್ರಾಳ	ಭೂಗೋಲ ವಿಷಯದ ಬಗೆಗೆ ಚರ್ಚೆ
ರೋಣ—೨	,,	ಸಾಯನ್ಸ ಕಲಿಸುವ ಬಗೆಗೆ ಚರ್ಚೆ
ಹೆಬ್ಬಾಳ—೨	ಶ್ರೀ. ಟಿ. ಎಫ್. ದೇಸಾಯಿ	—
ಬಳಗಾನೂರ—೨	ಶ್ರೀ. ಎಂ. ಎ. ಮುಲ್ಲಾ	—
ಗಿರಿಸಾಗರ—೬	ಶ್ರೀ. ಗಡ. ಆ। ಏ। ಓ.	—
ಜಂಬಗಿ—೧	ಶ್ರೀ. ಪರ್ವತೇಶ್ವರ ಸ್ವಾಮಿಗಳು	—

ಪ್ರಜಾರಾಜ್ಯ ಮತ್ತು ಗಾಂಧಿ ಪುಣ್ಯತಿಥಿ ದಿನಾಚರಣೆ

[೨೬-೧-೧೯೫೩ರಂದು ಕೆಳಗೆ ಕಾಣಿಸಿದ ಊರುಗಳ ಶಾಲೆಗಳಲ್ಲಿ 'ಪ್ರಜಾರಾಜ್ಯ ದಿನ'ವನ್ನು ಆಚರಿಸಲಾಯಿತು. ಅವುಗಳ ವರದಿಗಳು ನಮಗೆ ತಡಮಾಡಿ ಕೈಸೇರಿದ್ದರಿಂದ ಅವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.—ಸಂ.]

ಅಂದು ಎಲ್ಲ ಕಡೆಗಳಲ್ಲಿ ಧ್ವಜಾರೋಹಣ, ಸಭೆ, ಗಾಂಧೀಜಿಯ ನೆನಪು, ಮಕ್ಕಳ ಪಂದ್ಯಾಟಗಳು, ಮಿಠಾಯಿ ಹಂಚುವಿಕೆ ಮುಂತಾದ ಕಾರ್ಯಕ್ರಮಗಳು ಜರುಗಿದವು.

ಊರು	ಅಧ್ಯಕ್ಷರು	ವಿಶೇಷ ಸಂಗತಿ
ರಾಮಪೂರ	ಶ್ರೀ. ಜಿ. ಜಿ. ಗುಂಜೀಕರ, ಏ. ಓ.	—
ಬಾಗಲಕೋಟ	—	ಗುಜರಾತಿ ಶಾಲೆಯಲ್ಲಿ ಮಾಂಟೀಸರಿ ಶಾಲೆಯನ್ನು ಪ್ರಾರಂಭಿಸಲಾಯಿತು.
ಬಟ್ಕೂರು	—	ಮಹಾತ್ಮಾಜಿಯವರ ಪುಣ್ಯತಿಥಿಯನ್ನು ೩೦-೧-೫೩ರಂದು ಆಚರಿಸಲಾಯಿತು
ತೆಗ್ಗಿ	ಶ್ರೀ. ಗಡ ಆ। ಏ। ಓ.	—
ಹಣಕೋಣ	—	ಹಳಗೆ ಜಂಗದ ಶಾಲೆಗಳೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.
ಕಮತಗಿ	ಒಬ್ಬ ಶಾಲೆಯ ಬಾಲಕ	—
ಶಿರೂರ	ಡಾ। ಡಿ. ವ್ಹಿ. ಚಿಕ್ಕರಮನೆ	ಗಾಂಧೀ ಪುಣ್ಯತಿಥಿ
ಆಲದಗೇರಿ	ಶ್ರೀ. ಎಸ್. ಎಂ. ಹಿತ್ತಲಮನಿ	—

ಕೋಡ	ಶ್ರೀ. ಕೆ. ಎಸ್. ವರಾಹಮೂರ್ತಿ	
ಕನವಳ್ಳಿ	ಶ್ರೀ. ಬಿ. ಎಂ. ಶಾಲಿಬಾನ	ಉರ್ದು ಶಾಲೆಗಳು ಆಚರಿಸಿದವು.
ಗುತ್ತಲ	—	ಗಾಂಧೀ ಪುಣ್ಯತಿಥಿ.
ಗುಡಗೇರಿ	ಶ್ರೀ. ಲಕ್ಷ್ಮೇಶ್ವರ	—
ಸಾಸ್ವಿಹಳ್ಳಿ	ಪೂ. ಶ್ರೀಗಳಾದ ಬಸವಲಿಂಗರಾಯರು	—
ಕೋಲ್ಹಾರ	ಡಾ| ಡಿ. ವ್ಹಿ. ಚಿಕ್ಕರಮನೆ	—
ಕೊರ್ತಿ	—	—
ಬಟಕುರ್ಕಿ	ಡಾ|| ಕಟ್ಟಿ	—
ಸಂಪಗಾಂವ	ಶ್ರೀ. ಎಂ. ರಷೀದ್. ಖಾನ	—
ಯಲಗೂರು	ಶ್ರೀ. ಕೆ. ವ್ಹಿ. ಕೊರ್ತಿ	—

ಶೈಕ್ಷಣಿಕ ಪ್ರವಾಸಗಳು

ನೇಗಿನಹಾಳ—೧೪	೩೦ ವಿದ್ಯಾರ್ಥಿಗಳು ಧಾರವಾಡವನ್ನು ಸಂದರ್ಶಿಸಿದರು.
ಆಗಡಿ—೪	೫, ೬, ೭ನೆಯ ಇಯತ್ತೆಯ ವಿದ್ಯಾರ್ಥಿಗಳು ಹಂಪಿಯ ಪ್ರವಾಸ ಮಾಡಿದರು.
ಹಳಗೆಜೂಗ—೮	ದೇವಗಡ ಪ್ರವಾಸ ಮಾಡಿದರು.
ಬಬಲೇಶ್ವರ—೨	ವಿಜಾಪುರ ಸಿದ್ಧರಾಮೇಶ್ವರ ಜಾತ್ರೆ.
ಬಾಗೇವಾಡಿ—೧	ಹಂಪೆಯ ಪ್ರವಾಸ

ಸ್ನೇಹ ಸಮ್ಮೇಲನ ಮತ್ತು ಹಾಜರಿ ಸಪ್ತಾಹದ ಪ್ರಕಟನೆ

ಜಮಖಂಡಿ—೨೨	ಮರಾಠಿ ಹೈಸ್ಕೂಲಿನವರು ದುಷ್ಕಾಳ ನಿವಾರಣೆಗೆ ೧೦ರೂ. ಕೊಟ್ಟರು.
ದೋಣ—೧೦	ಮಾರ್ಚ ತಿಂಗಳ ೧೦ರಿಂದ ೧೪ರ ವರೆಗೆ ಹಾಜರೀ ಸಪ್ತಾಹ ಆಚರಿಸಬೇಕೆಂದು ತಿಳಿಸಿದಂತೆ ಶಾಲೆಗಳು ಸಪ್ತಾಹವನ್ನು ಆಚರಿಸಿದವು.

ಪಾಲಕರ ದಿನಾಚರಣೆ

ಹುಬ್ಬಳ್ಳಿ—೯	ಪ್ರಿ. ಮ. ಗು. ಹಂದ್ರಾಳ	೧೦ನೆಯ ನಂಬರ ಶಾಲೆಯ ಪಾಲಕರ ದಿನಾಚರಣೆ.
ಗುಡಿಗೇರಿ—೧ ಮಾರ್ಚ	ಶ್ರೀಮತಿ ಕವಾಲ	—
ಹಿರೇಬಾಗೇವಾಡಿ—೯	ಶ್ರೀ. ಲಿಂಬಣ್ಣಕ್ಕ ಪಾಟೀಲ	ಮಾತಾ ದಿನಾಚರಣೆ
ಕಕ್ಕೂರಹಳ್ಳಿ—೨೬	ಶ್ರೀ. ಬ. ತ. ಪಾಟೀಲ	—
ಹುಬ್ಬಳ್ಳಿ—೧೬ ಜನೇವರಿ	ಶ್ರೀ. ಕೃ. ರಾ. ಪವಾರ	ಮರಾಠಿ ಶಾಲೆಗಳು ಒಟ್ಟುಗೂಡಿ ಬಾಲ ದಿನಾಚರಣೆ ಮಾಡಿದವು.

ವಾರ್ಷಿಕ ಪಂದ್ಯಾಟಗಳು

ಜಮಖಂಡಿ	ಡಾ॥ ಡಿ. ವ್ಹಿ. ಚಿಕ್ಕರಮನೆ	ಸರಕಾರಿ ಕನ್ನಡ ಟ್ರೇನಿಂಗ ಕಾಲೇಜದವರ ವಾರ್ಷಿಕ ಪಂದ್ಯಾಟಗಳ ಪಾರಿತೋಷಕ ಸಮರ್ಪಣ ಸಮಾರಂಭ.
ವಿಜಾಪುರ		ಶಾರೀರಿಕ ಶಿಕ್ಷಣ ಚಟುವಟಿಕೆಗಳ ಪ್ರದರ್ಶನ
ಧಾರವಾಡ	ಶ್ರೀ. ಜೇವೂರ	ಸರಕಾರಿ ಪ್ರಾ್ಯ. ಸ್ಕೂಲಿನ ವಿದ್ಯಾರ್ಥಿಗಳಿಗೆ ವಾರ್ಷಿಕ ಪಂದ್ಯಾಟದ ಪಾರಿತೋಷಕ ಹಂಚಲಾಯಿತು.

ಸಮಾಜ ಶಿಕ್ಷಣ ಕಾರ್ಯ

ಹುಬ್ಬಳ್ಳಿ—೯	ಶ್ರೀ. ಎಸ್. ಡಿ. ಇಂಚಲ	ಕನ್ನಡ ೧೦ನೆಯ ನಂಬರಿನ ಶಾಲೆಯಲ್ಲಿ ನಡೆಯಿತು.
ಶಿಗ್ಗಾಂವ—೧೭	ಶ್ರೀ. ಆರ್. ಕೆ. ಮೆಣಸಿ ಸ|ಶಿ| ಕಾರ್ಯದರ್ಶಿ	ಮಾದರಿ ಪಾಠ, ಭಜನೆ ಇತ್ಯಾದಿ.
ಶಿಗ್ಗಾಂವ—೨೫	ಡಾ॥ ಚಿಕ್ಕರಮನೆ	ಹರಿಜನ ಸಮಾಜ ಶಿಕ್ಷಣ ವರ್ಗದ ಕಾರ್ಯಕ್ರಮ.
ಬಬಲೇಶ್ವರ—೧	ಶ್ರೀ. ಮೆಣಸಿ	ಸ| ಶಿ| ವರ್ಗಕ್ಕೆ ಸಂದರ್ಶನ.
ಸವದತ್ತಿ—೪	ಶ್ರೀ. ಸಿದ್ಧಲಿಂಗವ್ವ ಶಿರಸಂಗಿ ಅವರು ಸ್ತ್ರೀ ಪ್ರೌಢ ಶಿಕ್ಷಣ ವರ್ಗ ಪ್ರಾರಂಭಿಸಿದ್ದಾರೆ.	
ಮೋಟೇಬೆನ್ನೂರ -೧	ಶ್ರೀ. ದಳವಾಯಿ ಅವರು ವರ್ಗಕ್ಕೆ ಭೆಟ್ಟಿಯನ್ನಿತ್ತರು.	

ವಾರ್ಷಿಕ ತಪಾಸಣೆ ಮತ್ತು ಪಾರಿತೋಷಕ ವಿತರಣ

ಧಾರವಾಡ—೪	ಡಾ॥ ಡಿ. ವ್ಹಿ. ಚಿಕ್ಕರಮನೆ.	ಗಂ. ಪ. ಟ್ರೇ. ಕಾಲೇಜದಲ್ಲಿ ವಾರ್ಷಿಕ–ಪಂದ್ಯಾಟಗಳಲ್ಲಿ, ಲೇಖನ ಸ್ಪರ್ಧೆಗಳಲ್ಲಿ ಕೌಶಲ್ಯವನ್ನು ತೋರಿದವರಿಗೆ ಪ್ರಶಸ್ತಿ ಪತ್ರಿಕೆ ಮತ್ತು ಪಾರಿತೋಷಕಗಳನ್ನು ಹಂಚಲಾಯಿತು.
ಭಗತವಾಡಾ—೧೯	ನಾರಾಯಣ ವೆಂ. ಭಟ್ಟ	ಜಾಗಟೆಯನ್ನು ಕೊಟ್ಟರು.
ತಳಕವಾಡ—೧೩	ಶ್ರೀ. ಮೋಗೂರ	ವಿವಿಧ ವಿನೋದಾವಳಿ.

ಪ್ರಾಥಮಿಕ ಶಿಕ್ಷಣ

ಶಿಶುವಿನಹಾಳ—೧೬	ಶ್ರೀ. ಎಲ್. ಎಸ್. ಪಾಟೀಲ ಆ| ಎ. ಓ.	ವಾಕ್ ಸ್ಪರ್ಧೆಯಲ್ಲಿ ಮೇಲು ನಂಬರು ಬಂದವರಿಗೆ ಪಾರಿತೋಷಕ.
ಹುಬ್ಬಳ್ಳಿ—೯	ಶ್ರೀ. ಎಚ್. ಎಫ್. ಕಟ್ಟಿಮನಿ	—

ವಿವಿಧ ವಿನೋದಾವಳಿಗಳು

ರೋಣ—೨೨	ರೋಣ ತಾಲೂಕಿನ ಮಾಮಲೇದಾರರು.	'ಪ್ರಭಾಕರ' ನಾಟಕಾಭಿನಯ.
ಕೊಂಚಿಗೇರಿ—೧೦	ಶ್ರೀ. ಟಿ ಎಫ್. ದೇಸಾಯಿ.	ಹಾಜರಿ ದಿನ ಚರಣೆಯ ಅಂಗವಾಗಿ ಕಾರ್ಯಕ್ರಮಗಳು.
ಕೂಸನೂರ—೧೪	—	ಶ್ರೀ. ರಾಮಪ್ಪ ದಂಡಿದಾಸ ಹಾಗು ಸಂಗಡಿಗರು ಗೀಗೀ ಪದ ಹಾಡಿದರು.
ಲಿಂಗಧಾಳ—೨	ಶ್ರೀ. ಹನಮಸಾಗರ	—
ಗುಂಡೇನಹಳ್ಳಿ—೨೫	ಶ್ರೀ. ಎಸ್. ಕೆ. ಇಂಚಲ	—

ವಾಚನಾಲಯಗಳು ಮತ್ತು ವಿವಿಧ ಸುದ್ದಿಗಳು

ಬೇಡಕೀಹಾಳ—೨೯	ಶ್ರೀ. ಎಸ್. ವ್ಹಿ. ಪಾಟೀಲ, ಮಾಮಲೆದಾರ	ಶಾರದಾ ವಾಚನಾಲಯ ಉದ್ಘಾಟನೆ.
ಸಾಲವಾಡಗಿ—೨೨	ಶ್ರೀ. ಬಿ. ಎ. ಪಾಟೀಲ	ಆ|ಬಾ| ಸ್ಕೂಲಿಗೆ ೧೦೦ ರೂ. ಬೆಲೆಯ ಗಡಿಯಾರ ಕೊಟ್ಟರು.
ಧಾರವಾಡ—೧೩	ಡಾ|| ಡಿ. ವಿ. ಚಿಕ್ಕರಮನೆ	ಅಲ್ಪಾವಧಿ ಶಾರೀರಿಕ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭ. ಶ್ರೀ. ಜೇವೂರ ಅವರು ಶಿಬಿರಾಗ್ನಿಯನ್ನು ಹೊತ್ತಿಸಿದರು.
ಆಗಡಿ—೪		ಉರ್ದು ಶಾಲೆಗೆ ಪಂಚಾಯತಿಯವರು ಗಡಿಯಾರ ಕೊಟ್ಟರು.

ಶಿರೂರ—೯ ಶ್ರೀ. ಬಿ. ಡಿ. ಜತ್ತಿ, ಶ್ರೀ. ಎಸ್. ಆರ್. ಕಂಠಿ ಮೊದಲಾದವರು ಮೂಲ ಶಿಕ್ಷಣ ಶಾಲೆಗೆ ಭೆಟ್ಟಿ ಕೊಟ್ಟರು.

ಧಾರವಾಡ—೬ ಗಣೇಶ ನಿಬಂಧ ಸ್ಪರ್ಧೆಯಲ್ಲಿ ಮೇಲು ಬಂದವರಿಗೆ ಶ್ರೀ. ಎ. ಎಚ್. ದಳವಾಯಿ ಅವರು ಬಹುಮಾನ ಹಂಚಿದರು.

ವರ್ಥ ಪ್ರಾಯಿಜ ಸ್ಕಾಲರಶೀಪ್ ಪರೀಕ್ಷೆ, ೧೯೫೪

೧ **ಪರೀಕ್ಷೆಯ ವಿಷಯಗಳು:**—(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ—ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟೀಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು. (ಬ) ವರ್ಥ ಸಾಹೇಬರು ರಚಿಸಿರುವ **ಪ್ರಾಕ್ಕಾವ್ಯಮಾಲೆ** ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು- ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ:**— ಈ ಮೊದಲು ಇದ್ದ ೮೦ರೂ. ಗಳ ಒಂದೇ ಬಹುಮಾನದ ಬದಲು ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. ಮೊದಲನೆಯ ಬಹುಮಾನ ೫೦ ರೂ. ಎರಡನೆಯ ಬಹುಮಾನ ೩೦ ರೂ. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರನು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದು ವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿಮಾಡತಕ್ಕ ಅವಧಿ:**— ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೫೩ನೆಯ ಇಸವಿಯ ಆಗಸ್ಟ ತಿಂಗಳ ೧ನೆಯ ತಾರೀಖಿನೊಳಗಾಗಿ ಎಜ್ಯುಕೇಶನಲ್ ಇನಸ್ಪೆಕ್ಟರ ಧಾರವಾಡ ಭಾಗ, ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ:**— ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಈ ಪರೀಕ್ಷೆಯು ೧೯೫೩ನೆಯ ಆಗಸ್ಟ ತಿಂಗಳಲ್ಲಿ ನಡೆಯುವದು. ದಿನಾಂಕ, ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. **ಪ್ರಶ್ನೆಕಾಗದಗಳು:**—ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು

ಮೊದಲನೆಯದು:— ಪ್ರಾಕ್ಕಾವ್ಯಮಾಲೆ ೭೦; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು:— ಹಳಗನ್ನಡ ನಿಬಂಧ ೫೦; ಕನ್ನಡ ಬಾವುಟದಲ್ಲಿಯ ಕವಿತಾಭಾಗ ೩೦; ಹಳಗನ್ನಡ ಪರಿಚಯ ಗದ್ಯ ಭಾಗಗಳು ೨೦.

ಮೂರನೆಯದು:— ಹೊಸಗನ್ನಡ ನಿಬಂಧ ೭೫; ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ ೨೫.

ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ:-(೧) ರಾಷ್ಟ್ರಕೂಟ ರಾಜನ ಶಾಸನ, ಪುಟ ೫.(೨) ಕನ್ನಡ ನಾಡಿನ ಚೆಲುವು, ಪುಟ ೧೭-೨೦ ಪೂರ್ಣ. (೩) ಬಸವಣ್ಣನವರ ಗುಣ, ಪುಟ ೪೫ (೪) ಮಹಾದೇವಿಯಕ್ಕ ಪುಟ ೪೬-೪೯ ಪೂರ್ಣ (೫) ಕನಕದಾಸರು, ಪುಟ ೫೯-೬೧ ಪೂರ್ಣ (೬) ಅರುಣೋದಯ, ಪುಟ ೯೭ (೭) ಕಾರ್ಗಾಲದ ವೈಭವ, ಪುಟ ೨೦ (೮) ಕೊಡಗು, ಪುಟ ೧೦೩ (೯) ತೆಂಕಳಗಾಳಿಯೂಟ, ಪುಟ ೧೦೬ (೧೦) ಕುಮಾರವ್ಯಾಸ ಪುಟ ೧೨೧ (೧೧) ಬೇಲೂರಿನ ಶಿಲಾಬಾಲಿಕೆಯರು, ಪುಟ ೧೩೬.

ಕವಿತಾ ಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು. ಮೂರನೆಯ ಕಾಗದದ ವಿಷಯದಲ್ಲಿ ೧೫ ಗುಣಗಳು. ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

ಗವ್ಹರ್ನಮೆಂಟ ಟ್ರೇನಿಂಗ ಕಾಲೇಜ
ಫಾರ ಮೆನ್, ಧಾರವಾಡ ೧-೩-೧೯೫೩,

(Sd) M. G. Handral
ಪ್ರಿನ್ಸಿಪಾಲರು

ತ್ವರೆ ಮಾಡಿರಿ !   ಇಂದೇ ಸಂಗ್ರಹಿಸಿರಿ !

ಹಬ್ಬ—ಹುಣ್ಣಿವೆಗಳು

ಬೆಲೆ: ೦-೧೨-೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು ? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ !   ಇದೀಗ ತಯಾರಾಗಿವೆ.

ಲಘುಪಾಠಮಾಲೆ-೧ ಇತಿಹಾಸ ಬೆಲೆ ೦-೬-೦

,,   ೨ ಭೂಗೋಲ ಬೆಲೆ ೦-೬-೦

,,   ೩ ಭೂಮಿತಿ-ಜಮಾಖರ್ಚು ೧-೬-೦

,,   ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ-

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತಿರ ದೊರೆಯುವದು. **ಬೆಲೆ ೧-೧೨-೦,** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಕೆಯವರ "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮವಾಗಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ : ಎ. ವ್ಹಿ. ಬೋಕೆ ಫುಲಬಾಗ ೨೨೪/೮೭ ಬೆಳಗಾವಿ

೫ನೆಯ ಆವೃತ್ತಿ

ಶೈಕ್ಷಣಿಕ ಮನೋವಿಜ್ಞಾನ

ಪುಟ ೨೫೦

ಬರೆದವರು: **ಡಾ। ವಿ. ಕೊ. ಜವಳಿ** M. Ed. Ph. D. M.A. (ಕೋಲಂಬಿಯಾ)

ಬೆಲೆ ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಇತ್ತೀಚಿಗೆ ಹೊಸ ಹೊಸ ಸಂಶೋಧನೆಗಳು ಆಗಿವೆ. ಅವುಗಳ ಪರಿಚಯವನ್ನು ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಮಾಡಿಕೊಡುವುದಕ್ಕಾಗಿ ಈ ಪುಸ್ತಕವು ಬರೆಯಲ್ಪಟ್ಟಿದೆ. ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಅವಶ್ಯವಾದ ಶೈಕ್ಷಣಿಕ ಅಭ್ಯಾಸ ಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ಶೈಲಿಯು ಎಲ್ಲರಿಗೂ ತಿಳಿಯುವಂತೆ ಬಹಳ ಸುಲಭವಾಗಿದೆ. ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ಪುಸ್ತಕ ಕನ್ನಡದಲ್ಲಿ ಇದೋಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು:

ಆಕಳವಾಡಿ ಬುಕ್ ಡಿಪೋ ಧಾರವಾಡ.

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.

ಇಂದೇ ತರಿಸಿರಿ! **ಮರೆಯಬೇಡಿರಿ!**

ಮೆ। ಗ. ಜ. ಗುಂಜೀಕರ, ಎ. ಓ. ಜಿಲ್ಲಾ ಸ್ಕೂಲ್ ಬೋರ್ಡ್, ವಿಜಾಪುರ

ಮೆ। ಎ. ಎಚ್. ದಳವಾಯಿ, ಡೆ. ಎ. ಇ. ಜಿಲ್ಲಾ, ವಿಜಾಪುರ

ಇವರುಗಳ ಮುನ್ನಡಿ ಮತ್ತು ಪ್ರೋತ್ಸಾಹಗಳಿಂದ **ಪ್ರಾಥಮಿಕ, ಮಾಧ್ಯಮಿಕ** ಹಾಗೂ **ಮೂಲ ಶಿಕ್ಷಣ ಬೋರ್ಡು**ಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟ ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳದ್ದು **ಬೆಲೆ ೮ ಆಣೆ.**

೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೦೨ ಪುಟಗಳುಳ್ಳದ್ದು **ಬೆಲೆ ೧೨ ಆಣೆ**

ಬ. ದು. ಹಿರೇಮಠ **ಮಾಸ್ತರ, ವಿಜಾಪುರ**

ಸಿದ್ಧವಾಗಿವೆ　　　　　**ಮಾರಾಟಕ್ಕೆ**　　　　　ಸಿದ್ಧವಾಗಿವೆ

ನೀವು ಬಯಸಿದ ಇತಿಹಾಸದ ಅತ್ಯುತ್ತಮ ಹೊತ್ತಿಗೆಗಳು!

೫ನೆಯ ವರ್ಗಕ್ಕೆ:-ಭಾರತೀಯ ಇತಿಹಾಸ ಪ್ರಕಾಶ, ೧ನೆಯ ಪುಸ್ತಕ (ಅತಿ ಪ್ರಾಚೀನಕಾಲದಿಂದ ಮೊದಲೊಂದು ಶ್ರೀ. ಶಂಕರಾಚಾರ್ಯರ ಜೀವನದ ವಿವರಗಳನ್ನೊಳಗೊಂಡಿದೆ).
ಬೆಲೆ ೦—೧೫—೦

೬ನೆಯ ವರ್ಗಕ್ಕೆ:-ಭಾರತೀಯ ಇತಿಹಾಸ ಪ್ರಕಾಶ ೨ನೆಯ ಪುಸ್ತಕ (ಇಸ್ಲಾಂ ಧರ್ಮದ ಹುಟ್ಟು ಹಾಗೂ ಬೆಳಗೆಯಿಂದ ಮೊದಲ್ಗೊಂಡು ಮರಾಠಾ ರಾಜ್ಯದ ವಿಸ್ತರಣೆ ಮತ್ತು ಅದರ ಅಳಿಗಾಲದ ವಿವರಗಳನ್ನೊಳಗೊಂಡಿದೆ)　**ಬೆಲೆ ೧—೯—೦**

೭ನೆಯ ವರ್ಗಕ್ಕೆ:-ಭಾರತೀಯ ಇತಿಹಾಸ ಪ್ರಕಾಶ, ೩ನೆಯ ಪುಸ್ತಕ (ಭಾರತಕ್ಕೆ ಯುರೋಪೀಯರ ಆಗಮನ ಹಾಗೂ ಸ್ಪರ್ಧೆಯಿಂದ ಮೊದಲ್ಗೊಂಡು ಭಾಗತದಲ್ಲಿ ಇಂದಿನ ಪ್ರಜಾರಾಜ್ಯದ ಸ್ಥಾಪನೆಯ ವಿವರಗಳನ್ನೊಳಗೊಂಡಿದೆ.)　**ಬೆಲೆ ೨—೨—೦**

ಶ್ರೀ. ರಂ. ಕೃ. ಲಕ್ಕುಂಡಿ
(ಸೇವಾನಿವೃತ್ತ ಪ್ರಿನ್ಸಿಪಾಲರು, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಅವರಿಂದ ರಚಿತವಾದುವು.)

ಸುಲಭ ಮತ್ತು ಚಿತ್ತಾಕರ್ಷಕ ಶೈಲಿ! ಯೋಗ್ಯ ವಿಷಯದ ಭಂಡಾರ! ವಿಪುಲ ಶೈಕ್ಷಣಿಕ ಚಿತ್ರಗಳು! ಇತಿಹಾಸ ತಜ್ಞರಿಂದ ಪ್ರಶಸ್ತಿ ಪಡೆದುವು! ಸರಕಾರದಿಂದ ಮಂಜೂರು ಪಡೆದುವು. ಇಂದೇ ಕೊಳ್ಳಿರಿ.

ಪ್ರಕಾಶಕರು:—**ದಿ ಸ್ಟೂಡಂಟ್ಸ್ ಓನ್ ಬುಕ್ ಡಿಪೊ, ಧಾರವಾಡ**

ವಿಶೇಷ ಪ್ರಕಟನೆ!

ಇಂದೇ ಸಂಗ್ರಹಿಸಿರಿ!　　　　**ವಿದ್ಯಾರ್ಥಿ, ಶಿಕ್ಷಕರಿಗೆ ಅತ್ಯುಪಯುಕ್ತ!**

೧. **ಮೂಲ ಶಿಕ್ಷಣ ಮೀಮಾಂಸೆ** ಲೇಖಕರು:-**ಶ್ರೀ. ಹ.ಗ. ಜೋಶಿ ಬೆಲೆ ೧-೧೨-೦**
(ಮಾನ್ಯ ದಿವಾಕರರ ಮುನ್ನುಡಿ; ಮೂಲ ಶಿಕ್ಷಣದ ಪ್ರೇಮಿಗಳು ಇದನ್ನು ಅವಶ್ಯ ಸಂಗ್ರಹಿಸಲೇ ಬೇಕು)

೨. **ಹಿಂದೀ ಶಿಕ್ಷಣ ಮಾಲೆ-೧** ಲೇಖಕರು:-**ಶ್ರೀ. ಗುರುನಾಥ ಜೋಶಿ. ಬೆಲೆ ೦-೧೪-೦**
(ಮನೆಯಲ್ಲಿಯೇ ಶಿಕ್ಷಕರ ಸಹಾಯವಿಲ್ಲದೆ ಹಿಂದೀ ಕಲಿಯಲಿಕ್ಕೆ ಉತ್ತಮ)

ಇವಲ್ಲದೆ ಕಾದಂಬರಿಗಳು **ಎನ್ಕೆ ಏಕಾಂಕ** (೨—೦—೦) **ಭೂಮಿಗಿಳಿದ ತಾರೆ** (೧—೮—೦)
ಮಕ್ಕಳಿಗೆ:—**ಚುಟುಕ** (೦—೮—೦) **ದಿವ್ಯ ಕಥೆಗಳು** (೦—೮—೦)

ಪ್ರ. ಮತ್ತು ಮಾರಾಟಗಾರರು:-**ಹಿಂದಮಾತಾ ಮುದ್ರಣಾಲಯ, ಗಾಂಧಿಚೌಕ, ಧಾರವಾಡ.**

ನೇಯಿಗೆಯ ಶಾಲೆಗಳಿಗೆ ಅತ್ಯುಪಯುಕ್ತವಾದ ಪುಸ್ತಕಗಳು.

ಶ್ರೀ. ಎಸ್. ಡಿ. ನೀಲಗಿರಿ ಕೃತ

೧. ಕೈನೂಲು ೨—೪—೦
೨. ಕೈನೇಯಿಗೆಯ ಮಾರ್ಗದರ್ಶಿಕೆ ೨-೧೨—೦

ಶೇತಕಿ ಶಾಲೆಗಳಿಗೆ ಉಪಯುಕ್ತವಾದ ಪುಸ್ತಕಗಳು.

ಲೇ:— ನಾರಾಯಣ ಶರ್ಮರು

೧. ಆಧುನಿಕ ಕೃಷಿ ಭಾಗ-೧ ೦-೧೨—೦
೨. ಆಧುನಿಕ ಕೃಷಿ ಭಾಗ-೨ ೦-೧೨—೦
೩. ಆಧುನಿಕ ಕೃಷಿ ಭಾಗ-೩ ೧—೨—೦

ಯಾವತ್ತೂ ಶಾಲೆಯ ಲಾಯಬ್ರರಿಗಳಲ್ಲಿ ಅವಶ್ಯ ಸಂಗ್ರಹಿಸಬೇಕಾದ ಚಿಕ್ಕ ಚಿಕ್ಕ ಹೊತ್ತಗೆಗಳು

ಮುದ್ದಾದ ದೊಡ್ಡ ಅಕ್ಷರ — ಸುಲಭ ಭಾಷೆ

(ಜೀವನ ಚರಿತ್ರೆಗಳು)

೧. ಮಹಾತ್ಮಾ ಗಾಂಧಿ ೦—೪—೦
೨. ಜವಾಹಿರಲಾಲ ನೆಹರು ೦—೪—೦
೩. ಈಶ್ವರಚಂದ್ರ ವಿದ್ಯಾಸಾಗರ ೦—೪—೦
೪. ಭಗವಾನ್ ಬುದ್ಧದೇವ ೦—೪—೦
೫. ಸ್ವಾಮಿ ವಿವೇಕಾನಂದ ೦—೬—೦
೬. ಮಹಾವೀರ ಮಾ ಎತಿರಾಯ ೦—೬—೦
೭ ರಾಜಾ ರಾಮ ಮೋಹನರಾಯ ೦—೬—೦
೮. ರಾಷ್ಟ್ರಮಾತಾ ಕಸ್ತೂರಬಾ ೦—೬—೦
೯. ರವೀಂದ್ರನಾಥ ಠಾಕೂರ ೦—೩—೦
೧೦. ಮೌಲಾನಾ ಅಬುಲ್‌ಕಲಂ ಆಝಾದ ೦—೨—೬
೧೧. ಬಲಶಾಲಿ ಭೀಮಸೇನ ೦—೬—೦
೧೨ ರಾಮಕೃಷ್ಣ ಪರಮಹಂಸರ ದಿವ್ಯಜೀವನ ೦—೨—೦
೧೩. ಝಾಂಸಿಯ ಮರೆಯದ ಮಹಾರಾಣಿ ೦—೩—೦
೧೪. ಸರ್ ಸರ್ವಪಲ್ಲಿ ರಾಧಾಕೃಷ್ಣನ್ ೦—೬—[illegible]

ಉಪಯುಕ್ತ ವ್ಯಾಕರಣಗಳು

ಲೇ:—ಪಂಡಿತ ಕವಲಿ.

೧. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ—೮ನೇ ಇಯತ್ತೆಗೆ ೧—೦—೦
ಕನ್ನಡವ್ಯಾಕರಣ ವಿವಿಧ ಸಾಹಿತ್ಯ ಮಾಲೆ —೯ನೇ ಇಯತ್ತೆಗೆ ೧—೪—೦
೩. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ ೧೦—೧೧ನೇ ಇ. ೧—೧೨—೦

ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳಿಗೆ ಉಪಯುಕ್ತ ಪುಸ್ತಕಗಳು.

೧. ಮೂಲ ಶಿಕ್ಷಣ ಲೇ:-ಹಂದ್ರಾಳ ೩-೦-೦
೨ ಐವರು ಶಿಕ್ಷಣ ಸುಧಾರಕರು ೦-೧೦-೦
೩. ಗದಾಯುದ್ಧ ದರ್ಪಣ ೧-೬-೦
(೪ ೫ನೆಯ ಆಶ್ವಾಸಗಳು)
೪. [illegible] ಪ್ರವೇಶಸಾರ ಸಂಗ್ರಹ ಪ್ರಕಾಶ ೧-೦-೦

ಇನಲ್ಲದೆ ಎಲ್ಲ ಬಗೆಯ ಕನ್ನಡ, ಹಿಂದಿ, ಇಂಗ್ಲಿಷ ಶಾಲೋಪಯೋಗಿ ಪುಸ್ತಕಗಳೂ, ಕಥೆಕಾದಂಬರಿಗಳೂ ದೊರೆಯುತ್ತವೆ. ಮಾಸ್ತರ ಜನರ ಹಾಜರಿ ಫಾರ್ಮ ವಿದ್ಯಾರ್ಥಿ ಹಾಜರಿ ಫಾರ್ಮ್ ವಗೈರೆ ಶಾಲೋಪಯೋಗೀ ಎಲ್ಲ ಬಗೆಯ ಫಾರ್ಮ್ ಹಾಗೂ ಪುಸ್ತಕಗಳೂ ದೊರೆಯುತ್ತವೆ. ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ.

Regd. No. B. 5375

ಗೌರೀಶ ಗ್ರಂಥ ಪ್ರಕಟನಾಲಯ, ಧಾರವಾಡ.

ಹೊಸ ಅಭ್ಯಾಸ ಪತ್ರಿಕೆಯನ್ನನುಸರಿಸಿ

ವಿದ್ಯಾರ್ಥಿಗಳ ಮನಂಬುಗುವಂತೆ ಬರೆಯಲಾದ

ಸಚಿತ್ರ

ನಾಗರಿಕನೀತಿ ಅಥವಾ ಪೌರನೀತಿ (ಸಿವ್ಹಿಕ್ಸ)

(ಶಾಲೆಯ ಶಿಕ್ಷಕರು ಹಾಗು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಹೊತ್ತಿಗೆಗಳು)

ಇಂದಿನ ಬಾಲಕ ನಾಳಿನ ನಾಗರಿಕ. ಸ್ವತಂತ್ರ ಭಾರತದ ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಪ್ರತಿಯೊಬ್ಬ ಬಾಲಕನೂ ಉತ್ತಮ ನಾಗರಿಕನಾಗಿ ಮಾರ್ಪಟ್ಟರೆ ಅದು ಭಾರತದ ಭಾವೀ ಭವಿತವ್ಯದ ಚಿಹ್ನವೆಂದು ಭಾವಿಸಬೇಕು; ಅಂತೆಯೇ ಇಂದಿನ ಪ್ರಭುತ್ವ ಬಾಲಕರಿಗೆ **ಪೌರನೀತಿ** ಅಥವಾ **ನಾಗರಿಕ** ನೀತಿಯನ್ನು ಕಲಿಸಬೇಕೆಂಬ ಅಭಿಲಾಷೆಯುಳ್ಳದ್ದಾಗಿದೆ. ಇದನ್ನು ಗಮನಿಸಿಯೇ ಅನುಭವಿಕ ವಿದ್ವಾಂಸರಿಂದ ಕತೆ, **ಸಂಭಾಷಣೆ**, ಉಪನ್ಯಾಸ ಮೂಲಕವಾಗಿ **ಬಾಲಕರಿಗೆ** ರುಚಿಸುವಂತೆ ರಸವತ್ತಾಗಿ ನಾಗರಿಕ ನೀತಿಯ ಗ್ರಂಥಗಳನ್ನು ಹೊಸ ಅಭ್ಯಾಸಪತ್ರಿಕೆಯನ್ನನುಸರಿಸಿ ಸಿದ್ಧಗೊಳಿಸಲಾಗಿದೆ. ವಿದ್ಯಾರ್ಥಿಗಳು ಇವರ ತುಂಬಾ ಪ್ರಯೋಜನವನ್ನು ಹೊಂದಲೆಂದು ಆಶಿಸುತ್ತೇವೆ.

ಎರಡು ಬಣ್ಣಗಳಿಂದ ಕೂಡಿದ ರಕ್ಷಾಕವಚವುಳ್ಳ **ಈ** ಎಲ್ಲ ಪುಸ್ತಕಗಳು ಅಂತರಂಗ, ಬಹಿರಂಗದಲ್ಲಿ ಸೌಂದರ್ಯದಿಂದೊಡಗೂಡಿದ್ದು ಮಕ್ಕಳ ಮೆಚ್ಚುಗೆಯನ್ನು ಪಡೆಯುವಂತಿವೆ.

೫ನೆಯ ತರಗತಿಗೆ : ಜನಸಂಖ್ಯೆ, ಆಹಾರ, ನೀರಿನ ಪೂರೈಕೆ ಆಹಾರ ಹಂಚಿಕೆ, ನಗರ ಸ್ವಚ್ಛತೆ, ನಾಗರಿಕರ ಆರೋಗ್ಯ ಮನರಂಜನೆ, ವಾಹನಗಳ ಪ್ರಗತಿ, ಸಮಾಜ ಸೇವಾದಳ ಬಗ್ಗೆ ಬರೆಯಲಾಗಿದೆ. ಒಟ್ಟಿಗೆ ಪೌರನೀತಿಯ ಹೆಚ್ಚಿನ ಜ್ಞಾನಕ್ಕೆ ಮಾರ್ಗಮಾಡಿಕೊಟ್ಟಿದೆ. ಮೋಹಕ ಚಿತ್ರಗಳ ಜೋಡಣೆ ಇದೆ.

೬ನೆಯ ತರಗತಿಗೆ : ಶಾಲೆಯ ಸ್ವಚ್ಛತೆ, ಶಿಸ್ತು, ಸಂಘಟನೆ, ದಿನಪತ್ರಿಕೆಗಳ ಪ್ರಕಟನೆ; ಕಲೆಕ್ಟರ ಹಾಗು ಇತರ ಅಧಿಕಾರಿಗಳ ಕಾರ್ಯ ಸ್ಥಾನಿಕ ಸ್ವರಾಜ್ಯಸಂಸ್ಥೆ, ಸಾರ್ವಜನಿಕ ಶಿಕ್ಷಣ, ಸಮಾಜ ಸೇವೆ ಇತ್ಯಾದಿ ವಿಷಯಗಳನ್ನು ಮನೋರಂಜಕವಾಗಿ ವಿವರಿಸಲಾಗಿದೆ,

ಒಟ್ಟಿಗೆ ವರ್ಗಾನುಕ್ರಮದಿಂದ ಮಕ್ಕಳಲ್ಲಿ ನಾಗರಿಕ ನೀತಿಯು ಹೆಚ್ಚೆಚ್ಚಾಗಿ ಬೆಳೆಯುವಂತೆ ಪಾಠಗಳ ಜೋಡಣೆಯಿದೆ.

ಇಂದೇ ಓದಿ ಉತ್ತಮ ನಾಗರಿಕರಾಗಿರಿ.

ಪ್ರಕಾಶಕರು :

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಅಡಕೀ ಓಣಿ, ಧಾರವಾಡ.

Printed by M A. Kamat B. Sc. at Jai Hind Art Press, Bank Road, Dharwar. Edited and Published by M. G. Haudral, B. M. Shintri S. R Tatti, & P. A. Bhaskar Jointly at the Kannada Prathamik Shikshan Office, Govt. Training College for Men, Dharwar.

ಕನ್ನಡ
ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು:— ಶ್ರೀ. ಎಂ. ಜಿ. ಹಂದ್ರಾಳ

ಹಂಪಿಯ ವಿರೂಪಾಕ್ಷ ದೇವಾಲಯ

ಪಡಿಯಚ್ಚು:— ಎಸ್. ಎಸ್. ಕುಲಕರ್ಣಿ ಅವರ ಕೃಪೆಯಿಂದ

ಈ ಸಂಚಿಕೆಯಲ್ಲಿ

★ ರಾಮಾಯಣದ ಕಥಾ ವಸ್ತುವಿನ ವಿಮರ್ಶೆ ★ ಗಿಡಗಳ ಕಥೆ ★ ಮಾರ್ಶಲ್ ಜೋಸೆಫ್ ಸ್ಟಾಲಿನ್ ★
★ ಮಂಜೂರಾದ ಪುಸ್ತಕಗಳ ಯಾದಿ ★ ಗ್ರಂಥಾವಲೋಕನ ★ ಸುದ್ದಿಗಳು ★
★ ದ. ಭಾ. ಜಿಲ್ಹಾ ಮತ್ತು ಮುನಿಸಿಪಲ್ ಸ್ಕೂಲ್‌ಬೋರ್ಡಗಳ ಚೇರಮನ್ನರ ಪರಿಷತ್ತು ★ ಇತ್ಯಾದಿ

ಬಿಡಿ ಪ್ರತಿ ೬ ಆಣೆ] ಎಪ್ರಿಲ್ ೧೯೫೧ [ವಾ. ಚಂ. ೪ ರೂ.

ನೇಯಿಗೆಯ ಶಾಲೆಗಳಿಗೆ ಅತ್ಯುಪಯುಕ್ತವಾದ ಪುಸ್ತಕಗಳು.

ಶ್ರೀ. ಎಮ್. ಡಿ. ಮೋಲಗಿರಿ ಕೃತ

೧. ಕೈನೂಲು — ೨—೪—೦
೨. ಕೈನೇಯಿಗೆಯ ಮಾರ್ಗದರ್ಶಿಕೆ — ೨-೧೨—೦

ಶೇತಕಿ ಶಾಲೆಗಳಿಗೆ ಉಪಯುಕ್ತವಾದ ಪುಸ್ತಕಗಳು.

ಲೇ:—ನಾರಾಯಣ ಶರ್ಮರು

೧. ಆಧುನಿಕ ರೈತ ಭಾಗ-೧ ೦-೧೨—೦
೨. ಆಧುನಿಕ ರೈತ ಭಾಗ-೨ ೦-೧೨—೦
೩. ಆಧುನಿಕ ರೈತ ಭಾಗ-೩ ೧—೨—೦

ಯಾವತ್ತೂ ಶಾಲೆಯ ಲಾಯಬ್ರರಿಗಳಲ್ಲಿ ಅವಶ್ಯ ಸಂಗ್ರಹಿಸಬೇಕಾದ ಚಿಕ್ಕ ಚಿಕ್ಕ ಹೊತ್ತಿಗೆಗಳು

ಮುದ್ದಾದ ದೊಡ್ಡ ಅಕ್ಷರ — ಸುಲಭ ಭಾಷೆ

(ಜೀವನ ಚರಿತ್ರೆಗಳು)

೧. ಮಹಾತ್ಮಾ ಗಾಂಧಿ ೦—೪—೦
೨. ಜವಾಹಿರಲಾಲ ನೆಹರು ೦—೪—೦
೩. ಈಶ್ವರಚಂದ್ರ ವಿದ್ಯಾಸಾಗರ ೦—೪—೦
೪. ಭಗವಾನ್ ಬುದ್ಧದೇವ ೦—೪—೦
೫. ಸ್ವಾಮಿ ವಿವೇಕಾನಂದ ೦—೬—೦
೬. ಮಹಾವೀರ ಮಾರುತಿರಾಯ ೦—೬—೦
೭. ರಾಜಾ ರಾಮ ಮೋಹನರಾಯ ೦—೬—೦
೮. ರಾಷ್ಟ್ರಮಾತಾ ಕಸ್ತೂರಬಾ ೦—೬—೦
೯. ರವೀಂದ್ರನಾಥ ಠಾಕೂರ ೦—೩—೦
೧೦. ಮೌಲಾನಾ ಅಬುಲ್ ಕಲಂ ಆಝಾದ ೦—೨—೬
೧೧. ಬಲಶಾಲಿ ಭೀಮಸೇನ ೦—೬—೦
೧೨. ರಾಮಕೃಷ್ಣ ಪರಮಹಂಸರ ದಿವ್ಯಜೀವನ ೦—೨—೦
೧೩. ಝಾಂಸಿಯ ಮರೆಯದ ಮಹಾರಾಣಿ ೦—೬—೦
೧೪. ಸರ್ ಸರ್ವಪಲ್ಲಿ ರಾಧಾಕೃಷ್ಣನ್ ೦—೬—೦

ಉಪಯುಕ್ತ ವ್ಯಾಕರಣಗಳು

ಲೇ:—ಪಂಡಿತ ಕಪಲಿ.

೧. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ—೮ನೇ ಇಯತ್ತೆಗೆ ೧—೦—೦
ಕನ್ನಡವ್ಯಾಕರಣ ವಿವಿಧ ಸಾಹಿತ್ಯ ಮಾಲೆ —೯ನೇ ಇಯತ್ತೆಗೆ ೧—೪—೦
೩. ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ ೧೦—೧೧ನೇ ಇ. ೧—೧೨—೦

ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳಿಗೆ ಉಪಯುಕ್ತ ಪುಸ್ತಕಗಳು.

೧. ಮೂಲಶಿಕ್ಷಣ ಲೇ:—ಹಂದ್ರಾಳ ೩-೦-೦
೨ ಐವರು ಶಿಕ್ಷಣ ಸುಧಾರಕರು ೦-೧೦-೦
೩. ಗದಾಯುದ್ಧ ದರ್ಪಣ ೧-೬-೦
(೪-ಜನೆಯ ಆಶ್ವಾಸಗಳು)
೪. ರಾವಣಾಶ್ವಮೇಧಸಾರ ಸಂಗ್ರಹ ಪ್ರಕಾಶ ೧ ೦-೦

ಇವಲ್ಲದೆ ಎಲ್ಲ ಬಗೆಯ ಕನ್ನಡ, ಹಿಂದಿ, ಇಂಗ್ಲಿಷ ಶಾಲೋಪಯೋಗಿ ಪುಸ್ತಕಗಳೂ, ಕಥೆಕಾದಂಬರಿಗಳೂ ದೊರೆಯುತ್ತವೆ. ಮಾಸ್ತರ ಜನರ ಹಾಜರಿ ಫಾರ್ಮ ವಿದ್ಯಾರ್ಥಿ ಹಾಜರಿ ಫಾರ್ಮು ವಗೈರೆ ಶಾಲೋಪಯೋಗೀ ಎಲ್ಲ ಬಗೆಯ ಫಾರ್ಮು ಹಾಗೂ ಪುಸ್ತಕಗಳೂ ದೊರೆಯುತ್ತವೆ. ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ.

ರಾಮಾಶ್ರಯ ಬುಕ್ ಡಿಪೊ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು: ಡಾ. ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪ್ರಧಾನ ಸಂಪಾದಕರು: ಶ್ರೀ. ಎಂ. ಜಿ. ಹಂದ್ರಾಳ ಬಿ.ಎ. (ಆನರ್ಸ) ಬಿ. ಟಿ., ಡಿ. ಪಿ. ಇಡಿ;
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು:

ಶ್ರೀ. ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ಶೆಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೬೨ | ಎಪ್ರಿಲ್ ೧೯೫೨ | ಸಂಚಿಕೆ

ಸಂಪಾದಕೀಯ

ಪಾನ ನಿರೋಧ ಸಪ್ತಾಹ :

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಜನತಾ ಸರಕಾರವು ಜನರ ಕಲ್ಯಾಣಕ್ಕಾಗಿ ಕೈಕೊಂಡ ಅನೇಕ ಯೋಜನೆಗಳಲ್ಲಿ ಪಾನ ನಿರೋಧ ಯೋಜನೆಯು ಮಹತ್ವದ್ದಾಗಿದೆ. ದೇಶದ ಜನಸಾಮಾನ್ಯರು ಅದರಲ್ಲಿಯೂ ಹಿಂದುಳಿದವರು, ಕೂಲಿಕಾರರು—ಇವರಲ್ಲಿ ಅನೇಕರು ಕರಾಳ ಮದಿರಾ ರಾಕ್ಷಸನ ದವಡೆಗೆ ಸಿಕ್ಕು ದಿನಾಲು ಸಾಯುತ್ತಿದ್ದರು: ದಿನಾಲು ಬದುಕುತ್ತಿದ್ದರು. ಸುಖಕರ ಮನೆತನಗಳೆಲ್ಲ ಮದ್ಯದ ಹಿಡಿತಕ್ಕೆ ಸಿಕ್ಕು ಜರ್ಜರಿತವಾಗುತ್ತಿದ್ದವು. ಇಂತಹ ಹಲವಾರು ಮನೆತನಗಳಿಂದ ತುಂಬಿದ ಭಾರತವು ಬಡತನದ ಬೇಗೆಯಿಂದ, ಅಸಂಸ್ಕೃತಿಯ ಕಾಳ್ಗಿಚ್ಚಿನಿಂದ, ನಿರಕ್ಷರತೆಯ ಜೇಗುದಿಯಿಂದ ಬೆಂದು ಬಳಲುವದನ್ನು ಕಂಡು ಪ್ರಜಾಸರಕಾರದವರು ಪಾನ ಪ್ರತಿಬಂಧ ಕಾಯಿದೆಯನ್ನು ಅಮಲಿನಲ್ಲಿ ತಂದು ನಾಡಿನ ಉತ್ಥಾನದ ಕಾರ್ಯದಲ್ಲಿ ತೊಡಗಿದ್ದುದು ಹೆಮ್ಮೆಯ ಹಾಗೂ ಪ್ರಶಂಸನಾರ್ಹವಾದ ಸಂಗತಿ. ಸರಕಾರಕ್ಕೆ ಸಲ್ಲುತ್ತಿದ್ದ ಕೋಟ್ಯಂತರ ಹಣವು ಇಲ್ಲದಂತಾದರೂ ದೇಶದ ಜನತೆಯಲ್ಲಿ ಜ್ಞಾನೋದಯ, ಶಾಂತಿ, ನೆಮ್ಮದಿಗಳು ನೆಲಸಿ ರಾಷ್ಟ್ರವು ಸಂಸ್ಕೃತಿಯುತ, ಸಂಪದ್ಯುತವಾಗುವದರಲ್ಲಿ ಸಂದೇಹವಿಲ್ಲ.

ಪಾನ ನಿರೋಧದ ಮಹತ್ವವು ಎಲ್ಲರಿಗೂ ತಿಳಿದು ಅದು ಇನ್ನೂ ಹೆಚ್ಚು ಯಶಸ್ವಿಯಾಗಲೆಂದೂ, ಜನರು ತಮ್ಮಿಂದ ತಾವೇ ಸರಕಾರದವರು ಕೈಕೊಂಡ ಈ ದೇಶಹಿತ ಕಾರ್ಯದಲ್ಲಿ ಸಹಕರಿಸಲೆಂದೂ ಬಗೆದು ಪಾನ ನಿರೋಧ ಸಪ್ತಾಹವನ್ನು ಆಚರಿಸುವ ಕಾರ್ಯವನ್ನು ಬಳಕೆಯಲ್ಲಿ ತಂದುದಾಯಿತು. ನಾಡಿನಲ್ಲಿ ಮೂಲೆ-ಮೂಲೆಗಳಲ್ಲಿ ಈ ಸಪ್ತಾಹವು ವಿವಿಧ ಕಾರ್ಯಕ್ರಮಗಳಿಂದ ಅತ್ಯಂತ ಯಶಸ್ವಿಯಾಗಿ ಆಚರಿಸಲ್ಪಟ್ಟದ್ದು ಕಂಡು ಬಂದಿದೆ. ಮನುಷ್ಯನ ಸರ್ವಾಂಗೀನ ಉನ್ನತಿಗೆ ಸಾಮಾನ್ಯ ಶಿಕ್ಷಣವು ಅವಶ್ಯವಿದ್ದಂತೆ ಆತನನ್ನು ಕುಟುಂಬಕ್ಕೂ, ನೆರೆಹೊರೆಗೂ, ದೇಶಕ್ಕೂ ಉಪಯುಕ್ತ ವ್ಯಕ್ತಿಯಾಗುವಂತೆ, ಕುಟುಂಬ ಜೀವಿಯಾಗುವಂತೆ ಮಾಡುವ ಉಪಾಯಗಳಲ್ಲಿ ಪಾನ ನಿರೋಧವು ಅತ್ಯಂತ ಮಹತ್ವದೆಂದು ಬೇರೆ ಹೇಳಬೇಕಿಲ್ಲ; ಪಾನ ನಿರೋಧ ಸಪ್ತಾಹವು ನಾಡಿನ ಜನರೆಲ್ಲರಲ್ಲಿ ಕುಡಿತದಿಂದಾಗುವ ಅನಿಷ್ಟಗಳನ್ನು ಬೀರಿ, ಅದರ ನಿರೋಧದಿಂದ ಆಗುವ ಕಲ್ಯಾಣವನ್ನು ಜನತೆಯು ಮನಂಬಿಟ್ಟು ಅವರು ಏಳ್ಗೆಯ ದಾರಿಯತ್ತ ಸಾಗುತ್ತ ನಡೆಯುವಂತೆ ಮಾಡಿದ್ದು ಯಥಾರ್ಥವೇ ಸರಿ.

ಪ್ರಾಥಮಿಕ ಶಿಕ್ಷಣ

ಪಂಚವಾರ್ಷಿಕ ಯೋಜನೆ :

ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯವು ಲಭಿಸಿ ದೇಶವು ಉಳಿದ ರಾಷ್ಟ್ರಗಳ ಮಾಲಿಕೆಯಲ್ಲಿ 'ನಾನು ಸಮ ನಿಮಗೆಂದು' ನಿಲ್ಲಬೇಕೆಂಬ ಹೆಬ್ಬಯಕೆಯಿಂದ ರಾಷ್ಟ್ರನಾಯಕರು ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದ್ದಾರೆ. ಒಕ್ಕಲತನ, ಶಿಕ್ಷಣ, ಆರೋಗ್ಯ, ಉದ್ಯೋಗಗಳು ಮೊದಲಾದ ಶಾಖೆಗಳ ಬೆಳವಣಿಗೆಯ ಮುಖಾಂತರ ರಾಷ್ಟ್ರದ ಸರ್ವತೋಮುಖ ಉನ್ನತಿಯನ್ನು ಸಾಧಿಸಲಿಕ್ಕೂ ತನ್ಮೂಲಕ ತಮ್ಮ ಉತ್ಕರ್ಷವನ್ನು ಮಾಡಿಕೊಳ್ಳಲಿಕ್ಕೂ ಜನತೆಯು ಮುಂಬರುವದೆಂದು ಹಾರೈಸುವೆವು. ಜನತೆಯಲ್ಲಿ ಪಂಚ-ವಾರ್ಷಿಕ ಯೋಜನೆಯ ರೂಪ-ರೇಷೆಗಳು ತಿಳಿಯಬೇಕೆಂದೂ, ತಿಳಿದ ನಂತರ ಅವರ ಸಹಾಯ-ಸಹಕಾರಗಳು ತಾನೇ ತಾನಾಗಿ ಲಭಿಸುವವೆಂಬ ಆಶೆಯಿಂದಲೂ ಶ್ರೀ ಅಗರವಾಲಾರವರು ಇದೇ ದಿನಾಂಕ ೬ರಿಂದ ೧೩ನೆಯ ದಿನಾಂಕದವರೆಗೆ ಸಪ್ತಾಹವನ್ನು ಆಚರಿಸಬೇಕೆಂದೂ ಸೂಚಿಸಿದ್ದಾರೆ. ಶ್ರೀ ಅಗರವಾಲಾರವರ ಕೂಗಿಗೆ ಓಗೊಟ್ಟು, ಎಲ್ಲರೂ ಈ ಸಪ್ತಾಹವನ್ನು ಆಚರಿಸಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ಕಾರಣೀಭೂತರಾಗುವರೆಂದು ಆಶಿಸುವೆವು.

ಕರ್ನಾಟಕ ವಿಧಾಯಕ ಕಾರ್ಯಕರ್ತರ ಐದನೆಯ ಸಮ್ಮೇಲನ :

ಜೂ ಸಮಸ್ಯೆಯು ಇಂದಿನ ಯುಗ ಸಮಸ್ಯೆಯಾಗಿದೆ; ಇದು ಅಹಿಂಸೆಯಿಂದ ಸಾಧಿಸಲ್ಪಡಬೇಕಾಗಿದೆ. ಇದರ ಜೊತೆಗೆ ಇರಿಸಿದರೆ ಖಾದಿಯ ಪ್ರಗತಿಯೂ, ಹರಿಜನೋದ್ಧಾರವೂ ಸಾಧಿಸುವವು. ಇವೆಲ್ಲವುಗಳ ವಿಚಾರಣೆಗಾಗಿ ಸಂಕೇಶ್ವರದಲ್ಲಿ ಕರ್ನಾಟಕದ ವಿಧಾಯಕ ಕಾರ್ಯಕರ್ತರ ೫ನೆಯ ಸಮ್ಮೇಲನವು ಜರುಗಿತು. ಮಹಾತ್ಮಾ ಗಾಂಧಿಯವರು ವಿಧಾಯಕ ಕಾರ್ಯಕರ್ತರ ಬಗೆಗೆ ಉಚ್ಚ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು. ಆ ಆಕಾಂಕ್ಷೆಗಳನ್ನು ಅಂದರೆ ಸರ್ವ ಜನಹಿತ ಕಾರ್ಯಗಳನ್ನು ಕೈಕೊಂಡು ರಾಷ್ಟ್ರವು ಸರ್ವತೋಮುಖ ಏಳ್ಗೆಯಾಗುವಂತೆ ಯತ್ನಿಸುವದನ್ನು ವಿಧಾಯಕ ಕಾರ್ಯಕರ್ತರು ಈಡೇರಿಸಿ ನಾಡಿನ ಎಲ್ಲ ಜನರನ್ನು ವಿಧಾಯಕ ಕಾರ್ಯಕರ್ತರನ್ನಾಗಿ ಪರಿವರ್ತಿಸುವದರಲ್ಲಿ ಸಂದೇಹವಿಲ್ಲ.

ಜಾಗತಿಕ ಆರೋಗ್ಯ ದಿನ :

ಎಪ್ರಿಲ ದಿನಾಂಕ ೭ರಂದು ಜಾಗತಿಕ ಆರೋಗ್ಯ ಸಂಸ್ಥೆಯ ದಿನವು ಒಳ್ಳೆಯ ಯಶಸ್ವಿಯಾಗಿ ಆಚರಿಸಲ್ಪಟ್ಟಿದುದು ಸಂತೋಷದ ಸಂಗತಿ. ಆರೋಗ್ಯ ಸಂಪತ್ತು ಸಕಲ ಸಂಪತ್ತುಗಳಲ್ಲಿ ಮಿಗಿಲಾದುದು. ಇದನ್ನರಿತೇ ಜಗತ್ತಿನ ಎಲ್ಲ ಜನರ ಆರೋಗ್ಯ ಸಂವರ್ಧಗಾಗಿ ಶ್ರಮಿಸುವ ಸಂಸ್ಥೆಯ ದಿನವನ್ನು ಕರ್ನಾಟಕದಲ್ಲಿ ಕಾರ್ಯ-ವೈವಿಧ್ಯದಿಂದ ಆಚರಿಸಲಾಯಿತೆಂದು ತಿಳಿದಿದೆ. ಧಾರವಾಡದಲ್ಲಿ ಕುಟುಂಬ ಯೋಜನೆಯ ರೂಪು-ರೇಷೆಗಳ-ನ್ನೊಳಗೊಂಡ ಒಂದು ಪ್ರದರ್ಶನವನ್ನು ಏರ್ಪಡಿಸಿದ್ದು ಎಲ್ಲರಿಗೂ ತಿಳಿದ ಮಾತಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಕಲಿಯುವ ಮಕ್ಕಳ ಬುದ್ಧಿಯ ಬಲದ ಬೆಳೆಗೆಯಷ್ಟೇ ಅವರ ಆರೋಗ್ಯವೂ ಮಹತ್ವದ್ದು. ಮಕ್ಕಳಲ್ಲಿ ಆರೋಗ್ಯದ ಚಟಗಳು,—ದೈಹಿಕ ಹಾಗೂ ಮಾನಸಿಕ—ನೆಲೆಗೊಳ್ಳುವಂತೆ ಶಿಕ್ಷಕರಾದವರ, ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರ ಕರ್ತವ್ಯವಾಗಿದೆ. ಆರೋಗ್ಯ ದಿನಾಚರಣೆಯು ಆರೋಗ್ಯದ ನಿಯಮ—ನಿಬಂಧನೆಗಳನ್ನು ತಿಳಿಸಿಕೊಡುವಲ್ಲಿ ಸಹಾಯಕವಾಗುವುದೆಂದು ಬೇರೆ ಹೇಳಬೇಕೆ?

ಹಿಂದೀ ವಿಷಯ :

ಹಿಂದೀ ಭಾಷಾ ವಿಷಯದಲ್ಲಿ ಅರ್ಹತೆಯನ್ನು ಪಡೆದಂತಹ ಉತ್ತಮ ಶಿಕ್ಷಕರಿದ್ದ ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳಲ್ಲಿ ಹಿಂದೀ ವಿಷಯವನ್ನು ಕಲಿಸಬಹುದೆಂದು ಸರಕಾರದವರು ಆಜ್ಞೆ ಹೊರಡಿಸಿದ್ದಾರೆ. ಅಭ್ಯಾಸ ಪತ್ರಿಕೆಯು ಮಾಧ್ಯಮಿಕ ಶಾಲೆಗಳಲ್ಲಿಯ ೫, ೬, ೭ನೆಯ ಇಯತ್ತೆಗಳ ಅಭ್ಯಾಸ ಪತ್ರಿಕೆಗೆ ಸರಿ ಹೋಗುವದು. ಇತ್ತೀಚೆಗೆ ಅನೇಕ ಪ್ರಾಥಮಿಕ ಶಿಕ್ಷಕರು ಮದ್ರಾಸ, ವರ್ಧಾ ಮೊದಲಾದ ಮಾನ್ಯತೆ ಹೊಂದಿದ ಸಂಸ್ಥೆಗಳಿಂದ ನಡೆಸಲ್ಪಡುವ ಹಲವಾರು ಪರೀಕ್ಷೆಗಳಿಗೆ ಅಭ್ಯಾಸ ಮಾಡುತ್ತಿದ್ದಾರೆ. ಪ್ರಾಥಮಿಕ ಶಿಕ್ಷಕರ

ಸಂಪಾದಕೀಯ

ಟ್ರೇನಿಂಗ ಕಾಲೇಜುಗಳಲ್ಲಿ ಕಡ್ಡಾಯದ ವಿಷಯವೆಂದು ಹಿಂದಿಯನ್ನು ಕಲಿಸಲಾಗುತ್ತಿದೆ; ಮತ್ತು ಅನೇಕ ಪ್ರಾಥಮಿಕ ಶಿಕ್ಷಕರು ಈ ವಿಷಯವನ್ನು ತೆಗೆದುಕೊಂಡು ಎಸ್. ಎಸ್. ಸಿ. ಪರೀಕ್ಷೆಗೆ ಕುಳಿತಿದ್ದಾರೆ. ಸರಕಾರದವರ ಈ ಆಜ್ಞೆಗಳು, ಪ್ರಾಥಮಿಕ ಶಿಕ್ಷಕರು ಸಾಲೆಗಳಲ್ಲಿ ಹಿಂದೀ ವಿಷಯವನ್ನು ಕಲಿಸುತ್ತ ಹೋದರೆ, ಅವರಿಗೆ ತಾವು ಕಲಿತ ಹಿಂದೀ ವಿಷಯದ ಜ್ಞಾನವನ್ನು ಉಳಿಸಿಕೊಳ್ಳಲಿಕ್ಕೆ ನೆರವಾಗುವವು. ಇಲ್ಲದಿದ್ದರೆ ಪರೀಕ್ಷೆಯಲ್ಲಿ ಅವರು ಸಂಪಾದಿಸಿದ ಭಾಷೆಯ ಅಲ್ಪಜ್ಞಾನ, ಮಾತಾಡುವ ಹಾಗೂ ಬರೆಹದ ರೂಢಿ ಇವು ಕಾಲಾನುಕ್ರಮದಲ್ಲಿ ಮಸಕು-ಮಸಕಾಗಿ ಕೊನೆಗೆ ಮಾಯವಾಗುವದು ನಿಶ್ಚಯ.

ಈ ಯೋಜನೆಯಿಂದ ಇನ್ನೂ ಒಂದು ಲಾಭವಿದೆ. ಸದ್ಯಕ್ಕೆ ಮಾಧ್ಯಮಿಕ ಸಾಲೆಗಳಲ್ಲಿ ೫ರಿಂದ ೭ನೆಯ ಇಯತ್ತೆಗಳಲ್ಲಿ ಹಿಂದೀ ವಿಷಯವನ್ನು ಕಡ್ಡಾಯದ ವಿಷಯವೆಂದು ಕಲಿಸಲಾಗುತ್ತಿದೆ; ಆದರೆ ಪ್ರಾಥಮಿಕ ಸಾಲೆಗಳಲ್ಲಿ ಹೀಗೆ ಇರುವದಿಲ್ಲ. ಆದದರಿಂದ ಪ್ರಾಥಮಿಕ ಸಾಲೆಯ ೭ನೆಯ ಇಯತ್ತೆಯಿಂದ ಮಾಧ್ಯಮಿಕ ಸಾಲೆಯ ೮ನೆಯ ಇಯತ್ತೆಗೆ ಹೋಗುವಂತಹ ಹುಡುಗನು, ಮಾಧ್ಯಮಿಕ ಸಾಲೆಯಲ್ಲಿ ಆರಂಭದಿಂದ ಹಿಂದೀ ವಿಷಯವನ್ನು ಕಲಿತಂಥ ಹುಡುಗರ ಸರಿಸಮಾನತೆಗೆ ಮುಟ್ಟಬೇಕಾದರೆ, ಮನೆಯಲ್ಲಿ ಖಾಸಗಿ ರೀತಿಯಿಂದ ವಿಷಯವನ್ನು ಹೇಳಿಸಿಕೊಂಡು ಆ ಮೂರು ವರ್ಷಗಳ ಹಿಂದೀ ಅಭ್ಯಾಸವನ್ನು ಅವಸರದಿಂದ ಮುಗಿಸಬೇಕಾಗುವದರಿಂದ, ಒಂದು ರೀತಿಯಿಂದ ಹಾನಿಗೆ ಒಳಗಾಗುವನೆಂದು ಹೇಳಬಹುದು. ಅನೇಕ ಹುಡುಗರು ಹಣದ ಉಳಿತಾಯದ ಇಲ್ಲವೆ ಅಲ್ಪ ಖರ್ಚಿನ ಶಿಕ್ಷಣದ ದೃಷ್ಟಿಯಿಂದ ೭ನೆಯ ಇಯತ್ತೆಯವರೆಗೆ ಪ್ರಾಥಮಿಕ ಸಾಲೆಗಳಲ್ಲಿಯೇ ಕಲಿತು ೮ನೆಯ ಇಯತ್ತೆಗೆ ಮಾಧ್ಯಮಿಕ ಸಾಲೆಗೆ ಹೋಗಲು ಇಚ್ಛಿಸುತ್ತಾರೆ. ಮೇಲ್ಕಾಣಿಸಿದ ಈ ಯೋಜನೆಯಿಂದ ಇಂತಹ ಹುಡುಗರಿಗೆ ಬಹಳ ಪ್ರಯೋಜನವಾಗುವದು.

ಹಿಂದೀ ವಿಷಯವನ್ನು ಶಾಲೆಯ ವೇಳಾಪತ್ರಿಕೆಯಲ್ಲಿ ಸೇರಿಸಿದ್ದರ ಪರಿಣಾಮವಾಗಿ ಶಿಕ್ಷಕರಲ್ಲಿ ಉದ್ಭವಿಸಿ, ಬೆಳೆಯ ಬಹುದಾದ ಒಂದು ಮನೋವೃತ್ತಿಯ ಬಗೆಗೆ ಶಿಕ್ಷಕರಿಗೆ ನಾವು ಸೂಚನೆ ಕೊಡಬೇಕಾಗುತ್ತದೆ. ಇಂದು ಅನೇಕ ಮಾಧ್ಯಮಿಕಸಾಲೆಗಳಲ್ಲಿ ಈ ಮನೋವೃತ್ತಿಯು ಕಂಡುಬರುತ್ತಿದೆ. ವಿದ್ಯಾರ್ಥಿಗಳನ್ನು ಖಾಸಗಿ ರೀತಿಯಿಂದ ಹೇಳಿಸಿಕೊಳ್ಳಲಿಕ್ಕೆ ಕರೆಯಲಾಗುತ್ತಿದೆ. ಇದರ ಸಲುವಾಗಿ ಅವರಿಂದ ಫೀ ಹಣ ವಸೂಲ ಮಾಡಲಾಗುತ್ತಿದೆ; ನಿರ್ದಿಷ್ಟ ಪುಸ್ತಕಗಳನ್ನು ಕೊಳ್ಳುವಂತೆ ಮಾಡಲಾಗುತ್ತಿದೆ ಮತ್ತು ವ್ಯಾಪಾರ ಹಾಗೂ ಹಣಗಳಿಸುವ ಕೆಲಸ ನಡೆದಿದೆ. ನಮಗೆ ಹಿಂದೀ ವಿಷಯವನ್ನು ಕಲಿಸುವದು ಬೇಕಾಗಿದೆ; ಆದರೆ ಹಿಂದಿಯನ್ನು ಮಾರುವದಲ್ಲ. ಈ ಮಾರಾಟವು ಬಡ ಅರಿಯದ ಮಕ್ಕಳನ್ನು, ಕಲಿಸುವ ಫೀ, ಪರೀಕ್ಷೆಯ ಫೀ, ಪುಸ್ತಕಗಳ ಬೆಲೆ ಹೀಗೆ ಹಿಂದೀ ವಿಷಯದ ಹೆಸರಿನಿಂದ ಇನ್ನೂ ಅನೇಕ ರೀತಿಯಿಂದ ಹಣವನ್ನು ಹೀರಿಕೊಂಡು ಸುಲಿಗೆ ಮಾಡುವ ಪರಿಯಲ್ಲಿ ನಡೆಯುತ್ತಿದೆ.

ಕಣ್ಣೀರು.

ಸ್ವಿತ್ಸರ್ಲಂಡದಲ್ಲಿ ಭಾರತದ ರಾಯಭಾರಿಗಳಾಗಿದ್ದ ಅಸಫ ಅಲಿಯವರು ಇದೇ ತಿಂಗಳ ಮೊದಲನೆಯ ವಾರದಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿ ಅನಂತತೆಯಲ್ಲಿ ತೇಲಿಹೋದ ಸಂಗತಿಯು ಭಾರತೀಯರೆಲ್ಲರನ್ನು ದುಃಖಾಬ್ಧಿಯಲ್ಲಿ ಮುಳುಗಿಸಿತು. ಭಾರತ ಸ್ವಾತಂತ್ರ್ಯ ಹೋರಾಟದ ವೀರಸೇನಾಪತಿಯೋರ್ವ, ನಿಷ್ಠೆಯುಳ್ಳ ವ್ಯಕ್ತಿಯೋರ್ವ ಸ್ವತಂತ್ರ ಭಾರತದ ನಾಯಕಮಣಿಯೋರ್ವ ಮರೆಯಾದಂತಾಯಿತು. ಕಷ್ಟ-ಸುಖಗಳನ್ನು, ಅರಮನೆ ಸೆರೆಮನೆಗಳನ್ನು ಸಮನೆಂದು ಭಾವಿಸಿ ಅನುಭವಿಸಿ ತಾಯ್ನಾಡ ಪ್ರೇಮವನ್ನು ಸಂಘಟಿಸಿ, ಚೈತನ್ಯದ ಸೆಲೆಯಾಗಿ ನಿಂತು ನಾಡನ್ನು ಕಟ್ಟಲು ಹವಣಿಸಿ, ಕಾರ್ಯವೆಸಗಿ ಅಸಫ ಅಲಿಯವರು ಆಕಸ್ಮಿಕವಾಗಿ ಸ್ವರ್ಗವನ್ನೈದಿದರು. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ.

ನೀನು ಹೇಳೇ?

ಹೆಣೆದವರು:– ಸುರೇಶ ಹೊಸಟ್ಟಿ, ಕ. ಪ್ರೀ. ಕಾ. ಲಚ್ಯಾಣ

ಓ! ನನ್ನ ಮನದನ್ನೆ
ನನ್ನ ಚಲುವಿನ ಕನ್ನೆ
ಯಾರ ಸಂಭ್ರಮವಿಂದು ನಡೆಯುತಿದೆ ಹೇಳೇ? ೧.

ಮೈತುಂಬ ಹೂ ಮುಡಿದು
ಹೊಸ ಸೀರೆಯನು ಹೊದೆದು
ಯಾರ ಬರುವನು ನೀನು ನೋಡುತಿಹೆ ಹೇಳೇ? ೨.

ಎಂದಿಲ್ಲದಾನಂದ
ತೂರಿ ಬರುತಿದೆ ಚಂದ
ಯಾರ ಕಾರಣ ಕಾರ್ಯ ನಡೆದಿಹುದು ಹೇಳೇ? ೩.

ನಿನ್ನ ಹಾಡಿನ ಇಂಪು
ರಸ ಕಾವ್ಯಕೂ ಸೊಂಪು
ಕವಿಯು ಕಾತುರನಾಗಿ ಕೇಳುವನು ಹೇಳೇ! ೪.

ಮುಗಿಲು ಮರೆಯಾಗಿಹುದು
ಚಳಿಯು ಕಾಲ್ತೆಗೆದಿಹುದು
ಬಿಸಿಲು ಭಯ ನಿನಗೇಕೆ ಬೇಗ ಹೇಳೇ? ೫.

ತಾಳ ಮದ್ದಲಿ ಹಿಡಿದು
ಮೇಳದಿಂದಲಿ ನಡೆದು
ಯಾರ ಲಗ್ನಕೆ ನೀನು ನಡೆದಿರುವೆ ಹೇಳೇ! ೬.

ಹಣ್ಣು ಉಡಿಯಲಿ ತುಂಬಿ
ಹೊನ್ನಗೊಡವನು ಹೊತ್ತು
ಯಾರ ಎಡೆಯನು ನೀನು ಒಯ್ಯುತಿಹೆ ಹೇಳೇ! ೭.

ತುಂಬಿಗಳು ಹಿಂಡಾಗಿ
ಹೊರಟಿಹವು ಒಂದಾಗಿ
ಯಾರ ಸ್ವಾಗತಕಾಗಿ ನೀನು ಹೇಳೇ! ೮.

ಸೃಷ್ಟಿಯಂಗಳದಲ್ಲಿ
ಯಾವ ಋತುವಿನ ಬಳ್ಳಿ
ನಗುತಲಿದೆ ಇಂದೇಕೆ ನೀನು ಹೇಳೇ? ೯.

ಬಾಳು ಹಸನಾಗುತಿದೆ
ಸವಿಜೇನು ಸುರಿಯುತಿದೆ
ಕಾಂತಿ ಕಾರಣ ಪುರುಷ ಯಾರು ಹೇಳೇ! ೧೦.

ಕಂಡು ಕಾಣದ ಶಕ್ತಿ
ತಿಳಿದವಗೆ ತಾ ಮುಕ್ತಿ
ಇದುವೆ ಜೀವದ ಉಕ್ತಿ ಏನು ಹೇಳೇ! ೧೧.

ರಾಮಾಯಣದ ಕಥಾ ವಸ್ತುವಿನ ವಿಮರ್ಶೆ

ಶ್ರೀ. ಸಿ. ವಿ. ವೈದ್ಯರ 'ರಾಮಾಯಣ ಒಗಟು' ಎಂಬ ಗ್ರಂಥದ ಆಧಾರದಿಂದ

ಲೇಖಕರು:- **ಶ್ರೀ ತಟ್ಟಿ ಶ್ಯಾಮರಾಯರು,** ನಿವೃತ್ತ ಪ್ರಿನ್ಸಿಪಾಲರು, ಧಾರವಾಡ.

(ಮುಂದುವರಿದುದು)

ತಾನು ಕಲ್ಪಿಸಿದ ಸೂತ್ರಗಳಿಗನುರೂಪವಾಗುವಂತೆ ಕವಿಯು ಅವರ ಅಂತಃಕರಣದಲ್ಲಿ ಭಾವಗಳನ್ನೂ ಅವರ ಬಾಯಲ್ಲಿ ಮಾತುಗಳನ್ನೂ ಹಾಕಿದ್ದಾನೆ. ಯಾವ ರಸ-ಭಾವವೂ ಉಚ್ಚ ಅಂತಸ್ತಿನಿಂದ ಸ್ವಲ್ಪಾದರೂ ಕೆಳ ಮಟ್ಟಕ್ಕೆ ಬಂದದ್ದು ಕಾಣುವದಿಲ್ಲ. ಪ್ರತಿಸೂತ್ರದ ವಿಷಯದಲ್ಲೂ ಇಂತಹ ಉಚ್ಚ ಭಾವಗಳ ಉದಾಹರಣೆ-ಗಳನ್ನು ಇಲ್ಲಿ ಕೊಡಲು ಸಾಧ್ಯವಿಲ್ಲ. ಸೀತೆಯ ಹಲ-ವಾರು ಉತ್ಕೃಷ್ಟ ನುಡಿಗಳನ್ನು ಇಲ್ಲಿ ಕೊಡುವೆವು. ವನವಾಸದ ಕಷ್ಟನಿಷ್ಠುರಗಳನ್ನು ಹೇಳಿ ತನ್ನನ್ನು ಹಿಂಬಾಲಿಸುವದನ್ನು ಬಿಡಿಸಲು ರಾಮನು ಸೀತೆಯ ಮನವೊಲಿಸಲೆಳಸಿದಾಗ ಆಕೆಯು ಅನ್ನುವಳು: "ಮುಳ್ಳಿನ ಮೊನೆಗಳನ್ನೂ ತೃಣಾಂಕುರದ ತುದಿಗಳನ್ನೂ ಸಮ ಸಮಮಾಡುತ್ತ ನಾನು ನಿನ್ನ ಮುಂದೆ ಮುಂದೆ ನಡೆಯುವೆನು;" "ಮಧುರವಾದ ಮಕರಂದದ ವಾಸನೆ-ಯಿಂದ ತುಂಬಿದ ಅಡವಿಗಳಲ್ಲಿ ನಾನು ತಿರುಗಾಡಲಿಚ್ಛಿ-ಸುವೆ." ಇದನ್ನುಲ್ಲೇಖಿಸಿಯೇ ಭವಭೂತಿಯು ಉತ್ತರ ರಾಮಚರಿತದಲ್ಲಿ ಹೇಳಿದ್ದಾನೆ.

> ತ್ವಯಾ ಸಹ ನಿವತ್ಸ್ಯಾಮಿ ವನೇಷು ಮಧುಗಂಧಿಷು।
> ಇತಿ ಹಾ ರಮತೇ ಸೀತಾ ಸ್ನೇಹಸ್ತಸ್ಯಾ: ಸ
> ತಾದೃಶಃ॥

ಪತಿಯಲ್ಲಿ ಅಸದೃಶವಾದ ಪ್ರೇಮವಿದ್ದುದರಿಂದಲೇ ಅವಳಲ್ಲಿ ಅಂತಹ ಆಲೋಚನೆಗಳು ಬರುವವು. ಸೀತೆಯು ಅಯೋಧ್ಯೆಗೆ ತಿರಿಗಿ ಬಂದ ಮೇಲೆ ಅವಳನ್ನು ಪುನಃ ಅರಣ್ಯದಲ್ಲಿ ಲಕ್ಷ್ಮಣನು ಬಿಟ್ಟು ಬಂದಾಗ ಆಕೆಯು ರಾಮನಿಗೆ ಕಳಿಸಿದ ಸಂದೇಶವನ್ನು ನೀವು ಓದಿದ ಪ್ರತಿಯೊಂದು ಸಲ ನಿಮ್ಮ ಕಣ್ಣಲ್ಲಿ ನೀರು ಬರುವಂತಾಗುವದು. ರಘುವಂಶದ ೧೪ನೇ ಸರ್ಗದಲ್ಲಿ ಕಾಲಿದಾಸನು ಅದೇ ಸೀತೆಯ ಸಂದೇಶವನ್ನು ಹೇಳಿ ತನ್ನದೊಂದು ಬಹು ಸುಂದರವಾದ ಮಾತನ್ನು ಅದ-ರೊಂದಿಗೆ ಕೂಡಿಸಿದ್ದಾನೆ. ಸೀತೆಯು ಹೇಳಿಕಳಿಸುವ-ದೇನಂದರೆ: "ನನ್ನ ಗರ್ಭದಲ್ಲಿರುವ ಕೂಸು ಜನಿಸಿದ ಮೇಲೆ, ನನಗೆ ಮುಂದಿನ ಜನ್ಮದಲ್ಲಿಯೂ ನೀನೇ ಪತಿ ಯಾಗಬೇಕೆಂದೂ ಈ ಜನ್ಮದಲ್ಲಿಯ ಹಾಗೆ ನಿನ್ನಿಂದ ವಿರಹವು ಮಾತ್ರ ಆಗಬಾರದೆಂದೂ ನಾನೊಂದು ತಪ-ಸ್ಸನ್ನು ಮಾಡುವೆನು." ವಾಲ್ಮೀಕಿಯು ಸೀತೆಯನ್ನು ರಾಮನ ಮುಂದೆ ಕರೆದುತಂದಾಗ, ಚಿರಕಾಲ ಶೋಕ-ಸಂತಪ್ತಳಾದ ರಾಣಿಯು ಹೆಣ್ಣು ಮಕ್ಕಳ ನೈಜಪ್ರವೃತ್ತಿ ಯಂತೆ ತನ್ನ ಪ್ರಾಣಪರಿತ್ಯಾಗಮಾಡಲೆಳಸಿದಾಗ ಅವಳು ಮಾಡಿದ ಪ್ರತಿಜ್ಞೆಯು ಮಾನವ ಜೀವನದಲ್ಲಿಯೇ ಅತ್ಯಂತ ಸಂಸ್ಮರಣೀಯವಾಗಿದೆ. "ನಾನು ಕೃತಿ-ಯಿಂದಲೂ ಮಾತಿನಿಂದಲೂ ಮನಸ್ಸಿನಿಂದಲೂ ಸಹ ನನ್ನ ಗಂಡನಿಗೆ ದ್ರೋಹ ಬಗೆಯದೆ ಇದ್ದುದು ನಿಜ ವಾದರೆ, ಧರಾದೇವಿಯು ನನ್ನನ್ನು ತನ್ನ ಉದರದಲ್ಲಿ ಹಾಕಿಕೊಳ್ಳಲಿ" —

> ಮನಸಾ ಕರ್ಮಣಾ ವಾಚಾ ಯಥಾ ರಾಮಂ
> ಸಮರ್ಚಯೇ।
> ತಥಾ ಮೇ ಮಾಧವೀ ದೇವೀ ವಿವರಂ
> ದಾತುಮರ್ಹತಿ॥

ಸಾವಿರಾರು ವರ್ಷಗಳಿಂದ ಹಿಂದೂ ಸ್ತ್ರೀಯರ ಸಹನೆ, ಪತಿಭಕ್ತಿ ಸಂತೋಷಗಳಿಗೆ ಸೀತೆಯ ಆದರ್ಶವೇ

ಸ್ಫೂರ್ತಿದಾಯಕವೂ ಪೋಷಕವೂ ಆಗಿದೆ. ಕರುಣ ರಸದ ಪರಿಪೋಷಕ್ಕೆ ವಾಲ್ಮೀಕಿಯನ್ನು ಯಾರೂ ಸರಿಗಟ್ಟಲಾರರು. ದುಃಖಪರ್ಯವಸಾಯಿಯಾದ ಕಾವ್ಯದಿಂದ ನಮ್ಮ ಅಂತಃಕರಣವು ಶೋಕರಸದ ಉನ್ನತ ಶಿಖರಕ್ಕೆ ಮುಟ್ಟಿದರೂ ಆ ಸಂವೇದನೆಯು ಪರಾಕಾಷ್ಠೆಯಿಂದ ನಮಗೆ ಒಂದು ದಿವ್ಯಾನಂದದ ಅನುಭವವೇ ಆಗುವದು. ಸೃಷ್ಟಿಯಲ್ಲಿ ಎರಡು ಅತ್ಯಂತ ವಿರುದ್ಧ ಕೋಟಿಯ ಅನುಭವಗಳು ಒಂದರಲ್ಲೊಂದು ಅಭಿನ್ನವಾಗಿ ಸೇರಿಹೋಗುವಂತೆ ನಮಗಾದ ದುಃಖಸಂವೇದನೆಯ ಚರಮಸೀಮೆಯು ಕೊನೆಯಲ್ಲಿ ಆಲ್ಹಾದದಲ್ಲಿ ಪರಿಣಮಿಸುವದು. ಅಯೋಧ್ಯಾಕಾಂಡದಲ್ಲಿ ತೀವ್ರವಾದ ಕರುಣರಸದ ಅನೇಕ ದೃಷ್ಟಾಂತಗಳು ದೊರೆಯುವವು. ಕೈಕೇಯಿಯು ರಾಮನ ಮಾತನ್ನೇ ಹಿಡಿದುಕೊಂಡವಳಾಗಿ ರಾಮಲಕ್ಷ್ಮಣ ಸೀತೆಯರ ಮುಂದೆ ವನವಾಸಕ್ಕೆ ಹೊರಡಬೇಕೆಂದು ವಲ್ಕಲವಸ್ತ್ರಗಳನ್ನು ತಂದೊಡ್ಡುವಳು. ಅನುಭವವಿಲ್ಲದ ಸೀತೆಗೆ ಅವುಗಳನ್ನು ಹೇಗೆ ಧರಿಸಬೇಕೆಂಬದು ತೋಚದಂತಾಗಿ ತನ್ನ ಗಂಡನನ್ನು "ಆಶ್ರಮವಾಸಿಗಳ ಹೆಂಡಂದಿರು ವಲ್ಕಲಗಳನ್ನು ಹೇಗೆ ಉಟ್ಟುಕೊಳ್ಳುತ್ತಾರೆ" ಎಂದು ಕೇಳುವಳು. ವಸ್ತ್ರವನ್ನು ತನ್ನ ಕತ್ತಿಗೆ ಒಯ್ದು ಹಾಗೊಮ್ಮೆ ಹೀಗೊಮ್ಮೆ ಹಿಡಿದು ನೋಡುತ್ತಿರುವಾಗ ಭೋಳೆಬಂದು ಈಗೋ ಇನ್ನೊಂದು ಕ್ಷಣಕ್ಕೋ ಕೆಳಕ್ಕೆ ಬೀಳುವಳೆಂಬಂತೆ ತೋರಿತು. ಅದನ್ನು ನೋಡಿ ಸುತ್ತಲಿದ್ದ ಎಲ್ಲ ಹೆಂಗಸರ ಕಣ್ಣಲ್ಲಿಯೂ ನೀರು ಬಂದು ಅವರೆಲ್ಲರೂ ಏಕಕಂಠದಿಂದ ರಾಮನನ್ನು ಬೇಡಿಕೊಂಡರು. "ರಾಮಾ, ಸೀತೆಯನ್ನು ವನಕ್ಕೆ ಕರೆದುಕೊಂಡು ಹೋಗದಿರು; ಈ ಕಲ್ಯಾಣಮೂರ್ತಿಯಾದ ರಾಜಪುತ್ರಿಯು ವನದಲ್ಲಿ ಜೀವಿಸಲಾರಳು" ಆದರೆ ರಾಮನು ಕೂಡಲೆ ಅವಳೆಡೆ ಧಾವಿಸಿ ಅವಳುಟ್ಟ ರೇಶಿಮೆಯ ವಸ್ತ್ರದ ಮೇಲೆ ವಲ್ಕಲವನ್ನು ಬಿಗಿದು ಕಟ್ಟಿದನು.

ಆದರ್ಶಮಾನವರ ಗುಣಶೀಲಗಳನ್ನೂ ಕರುಣರಸವನ್ನೂ ವರ್ಣಿಸುವದರಲ್ಲಿ ವಾಲ್ಮೀಕಿಗೆ ಸರಿಸಮಾನರಿಲ್ಲವೆಂದು ಹೇಳುವಂತೆಯೇ ಸೃಷ್ಟಿಯ ಸೊಬಗನ್ನು ವರ್ಣಿಸುವದರಲ್ಲಿಯೂ ಯಾವ ಸಂಸ್ಕೃತ ಕವಿಯೂ ಅವನನ್ನು ಸರಿಗಟ್ಟಲಾರನೆಂದು ಹೇಳಬಹುದು. ತನ್ನ ಕಾವ್ಯದ ಬೇರೆ ಬೇರೆ ಭಾಗಗಳಲ್ಲಿ ಭರತಖಂಡದ ಆರು ಋತುಗಳನ್ನೂ ಅತಿಮನೋಹರವಾಗಿ ಆತನು ವರ್ಣಿಸಿದ್ದಾನೆ. ಆಧುನಿಕ ಸಂಸ್ಕೃತ ಕಾವ್ಯಗಳಲ್ಲಿ ಪ್ರಕೃತಿ ಸೌಂದರ್ಯದ ವರ್ಣನೆಯು ಅಷ್ಟೊಂದಾಗಿ ಕಾಣುವದಿಲ್ಲ. ಇದ್ದ ವರ್ಣನೆಗಳು ಸಹ ಶ್ಲೇಷಮೂಲವಾದ ಅನೇಕ ಕೃತ್ರಿಮ ಉಪಮೆಗಳಿಂದ ತುಂಬಿವೆ. ನಿಸರ್ಗದ ರಮಣೀಯತೆಯನ್ನು ವಾಲ್ಮೀಕಿಯೊಬ್ಬನೇ ಆಂಗ್ಲಕಾವ್ಯಗಳಲ್ಲಿ ಕಂಡುಬರುವಂತೆ ಸೂಕ್ಷ್ಮತೆ, ಸ್ವಚ್ಛಂದತೆಯಿಂದ ವರ್ಣಿಸಿದ್ದಾನೆ. ಅರಣ್ಯಕಾಂಡದೊಳಗಿನ ಚಳಿಗಾಲದ ವರ್ಣನೆ, ಕಿಷ್ಕಿಂಧಾಕಾಂಡದಲ್ಲಿನ ಮಳೆಗಾಲದ ವರ್ಣನೆಗಳನ್ನು ಓದಿದವರಿಗೆ ತಾವೇ ಮುದುಗಿಕೊಂಡು ಚಳಿಯಲ್ಲಿ ಥರಗುಟ್ಟುವಂತೆ ಇಲ್ಲವೆ ಮಳೆಯಲ್ಲಿ ತಪತಪ ತೋಯಿಸಿಕೊಂಡವರಂತೆ ಭಾಸವಾಗುವದು. ಕವಿಯು ಹೇಳುತ್ತಾನೆ: "ನೀರಡಿಸಿದ ಆನೆಯು ನದಿಗೆ ನೀರು ಕುಡಿಯಲಿಕ್ಕೆ ಹೋಗಿ ಬರ್ಫಿನಂತೆ ಇದ್ದ ಆ ನೀರಿನ ಸ್ಪರ್ಶದಿಂದ ತನ್ನ ಸೊಂಡಿಯನ್ನು ಹಿಂದಕ್ಕೆಳೆದುಕೊಳ್ಳುವದು." ಸ್ವಭಾವೋಕ್ತಿ ಎಂಬ ಅಲಂಕಾರವನ್ನು ವಾಲ್ಮೀಕಿಯಷ್ಟು ಉತ್ತಮವಾಗಿ ಯಾರೂ ಉಪಯೋಗಿಸಿಲ್ಲ.

"ಆ ಪರ್ವತಾವಳಿಯ ಒಂದೊಂದು ಶಿಖರದ ಮೇಲೆ ಒಂದೊಂದರಂತೆ ನೀರಿನ ಭಾರವನ್ನು ಹೊತ್ತು ಬಳಲಿ ವಿಶ್ರಮಿಸುತ್ತಿರುವ ಆರ್ದ್ರವಾದ ಮೋಡಗಳನ್ನು ನೋಡು." ಇದರಲ್ಲಿ ಬಿಚ್ಚಿಹೇಳದೆ ಇದ್ದ ಒಂದು ಉಪಮೆಯು ಸೂಕ್ಷ್ಮವಾಗಿ ಕೂಡಿದೆ; ಅದು ಹೀಗೆ: "ಆಶ್ರಮಜೀವಿಗಳು ತಮ್ಮ ಬೆವರಿನಹನಿಯ ಭಾರದಿಂದ ದಣಿದವರಾಗಿ ತಾವು ಕಂಡ ಅಲ್ಲಲ್ಲಿಯ ಎತ್ತರದ ಸ್ಥಳದ ಮೇಲೆ ವಿಶ್ರಾಂತಿಯನ್ನು ಪಡೆಯುತ್ತಿರುವರು."

ವಿಶಾಲವಾದ, ಮಹೋನ್ನತವಾದ, ಗಂಭೀರವಾದ ಸನ್ನಿವೇಶಗಳನ್ನು ಕಲ್ಪಿಸುವದರಲ್ಲಿಯೂ ವರ್ಣಿಸುವದರಲ್ಲಿಯೂ ವಾಲ್ಮೀಕಿಯು ಅಷ್ಟೇ ಪ್ರಭಾವಶಾಲಿಯೆಂದು ಹೇಳಬಹುದು. ವಾಲ್ಮೀಕಿಯ ಸುಂದರಕಾಂಡದಲ್ಲಿ ಕೆಲವು ಇಂತಹ ಅದ್ಭುತರಮ್ಯ ದೃಶ್ಯಗಳಿವೆ. ಕವಿಯ ದೃಷ್ಟಿಯಿಂದ ಅದು 'ಸುಂದರ'ವಾದ ಕಾಂಡವೂ

ಆಹುದು. ಭಾರತವನ್ನು ಸಿಂಹಳದಿಂದ ಬೇರ್ಪಡಿಸಿದ ಸಮುದ್ರವನ್ನು ಹನುಮಂತನುಲ್ಲಂಘಿಸಿದ ವೃತ್ತಾಂತದಿಂದ ಇದರ ಆರಂಭವಾಗುವದು. ಮೂಲವನ್ನು ಓದಬೇಕು ಅದರಲ್ಲಿ ಹನುಮಂತನು ಆಗ ತನ್ನ ಆಕಾರವನ್ನು ಹೇಗೆ ಬೆಳಸಿದನು. ಹಾರುವದಕ್ಕೆ ಸಿದ್ಧನಾದಾಗ ಅವನ ಅಂಗವಿನ್ಯಾಸವು ಹೇಗಿತ್ತು, ಹಾರುವಾಗ ಅವನು ನೆಲಕ್ಕೆ ಮಾಡಿದ ಪಾದಾಘಾತದಿಂದ ಮರಗಳು ಕಿತ್ತು ಮೇಲಕ್ಕೆ ಹೇಗೆ ಹಾರಿದವು, ಹಣುಮಂತನು ಹಾರಿ ಮೋಡಗಳೊಳಗಿಂದ ಹಾರಿ ಹೋಗುವಾಗ ಒಮ್ಮೊಮ್ಮೆ ಕಾಣಿಸದೆಯೂ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತಲೂ ಹೇಗೆ ಸಾಗಿದನು, ಹೇಗೆ ಅವನ ನೆರಳು ಕೆಳಗೆ ಸಮುದ್ರದ ನೀರಿನ ಮೇಲೆ ಮೂರು, ಯೋಜನಗಳಪರ್ಯಂತ ಬಿದ್ದಿತ್ತು. ಹೇಗೆ ಆ ಭಾಗದೊಳಗಿನ ಪ್ರಾಣಿಗಳು ಅದರಿಂದ ಭಯಗ್ರಸ್ತವಾದವು, ಆ ನೀರಿನಭಾಗವೂ ಅಲ್ಲೋಲಕಲ್ಲೋಲವಾಗುತ್ತಿತ್ತು—ಮೂಲದಲ್ಲಿ ಇವನ್ನೆಲ್ಲ ಓದಿದರೆಯೇ ಕವಿಯು ಈ ಒಂದು ಸಂದರ್ಭದಿಂದ ಎಂತಹ ಅದ್ಭುತ ರಮಣೀಯವಾದ ಸನ್ನಿವೇಶವನ್ನು ರಚಿಸಿದ್ದಾನೆ ಎಂಬುದರ ಕಲ್ಪನೆಯು ಬರುವದು. ಹೀಗೆಯೇ ಮುಂದು ಮುಂದೆ ರಾವಣನ ಅರಮನೆಗಳು. ಅಂತಃಪುರಗಳು ವಾಲ್ಮೀಕಿಯ ಭವ್ಯಕಲ್ಪನೆಯಿಂದ ಭವ್ಯವಾಗಿ ರೂಪುಗೊಂಡಿವೆ. ರಾವಣನು ದೇವಾಸುರರ ಪ್ರಭುವು, ಸ್ವರ್ಗ ನರಕಗಳ ಸ್ವಾಮಿಯು, ಇಂತಹ ರಾವಣನ ಸಂಪತ್ತನ್ನೂ ಐಶ್ವರ್ಯವನ್ನೂ ಮಹಾಕವಿಯ ವಿಶಾಲವಾದ ಪ್ರತಿಭೆಯೇ ವರ್ಣಿಸಬಲ್ಲದು. ರಾವಣನ ಅಶೋಕವನಕ್ಕೆ ಹನುಮಂತನು ತಲುಪಿದಾಗ ಮತ್ತು ಸೀತೆಯು ಅಲ್ಲಿ ಖಿನ್ನಮನಸ್ಕಳಾಗಿ ಆಸೆಯನ್ನು ತೊರೆದವಳಂತೆ ಕುಳಿತುಕೊಂಡದ್ದನ್ನು ಆತನು ನೋಡಿದಾಗಿನ ವರ್ಣನೆಯಲ್ಲಿ ಕವಿಯ ಪ್ರತಿಭೆಯು ಇನ್ನೂ ಭವ್ಯತರವಾದ ಅಂತಸ್ತನ್ನು ಮುಟ್ಟುವದು. ವಾಲ್ಮೀಕಿ ಕವಿಯ ವರ್ಣನೆಗಳ ಒಂದು ವೈಲಕ್ಷಣ್ಯವನ್ನು ನಾವು ಇಲ್ಲಿ ಕಾಣಬಹುದು—ವಾಕ್ಯೋಪಮೆಯ ರೀತಿ. ವ್ಯಾಸನು ಮಹಾಭಾರತದಲ್ಲಿ ಉದ್ದವಾದ ಉತ್ಪ್ರೇಕ್ಷೆಗಳನ್ನು ಹೆಚ್ಚಾಗಿ ಉಪಯೋಗಿಸುವದೊಂದು. ಇನ್ನೂ ಒಂದರ ಮೇಲೊಂದು ರಾಶಿರಾಶಿಯಾಗಿ ಒಟ್ಟಿದ, ವಾಲ್ಮೀಕಿಯ ಉಪಮೆಗಳ ಭಾರದಿಂದ ವಾಚಕನ ಮನಸ್ಸು ಕುಸಿಯುವಂತಾಗುತ್ತದೆ. ಎಷ್ಟೋ ಉಪಮೆಗಳಲ್ಲಿ ಉಪಮೇಯ ವಸ್ತುವು ಒಂದು ಭಾವವಾಚಕವಾಗಿದ್ದರೂ ಸಾದೃಶ್ಯವು ಆಕರ್ಷಕವಾಗಿಯೇ ಇರುವದು. ಉದಾ: ಸಂಶಯವೆಂಬ ಧೂಮವು ವ್ಯಕ್ತನಾದ ಸಿದ್ಧಾಂತವೆಂಬ ಅನಲದಂತೆ, ನಿರಾಶೆ ಎಂಬ ಮೋಡವು ಕವಿದ ಆಸೆಯೆಂಬ ಸೂರ್ಯನಂತೆ ಸೀತೆಯು ಕಾಣುತ್ತಿದ್ದಳು—ಎಂದು ಕವಿಯು ಹೇಳುವನು. ಆ ಅನಾಥ ಸ್ಥಿತಿಯಲ್ಲಿದ್ದ ಮತ್ತು ಅವಿಭೂಷಿತಳಾದ ಸೀತೆಯ ವರ್ಣನೆಯನ್ನು ಕವಿಯು ಬಹು ಭವ್ಯವಾಗಿ ಮಾಡಿದ್ದಾನೆ. ಬಾಣನೂ ತನ್ನ ಕಾದಂಬರಿಯಲ್ಲಿ ಈ ಕಲೆಯನ್ನು ಹೆಚ್ಚಾಗಿ ಬಳಸಿದ್ದರೂ ಅವನ ಉಪಮೆಗಳು ಅನೇಕ ಸಾರೆ ಕೃತ್ರಿಮವೂ ಎಳೆದು ತಂದು ಹಚ್ಚಿದವೂ ಆಗಿವೆ.

ಕೊನೆಯಲ್ಲಿ ಕಾವ್ಯದ ಭಾಷೆಯನ್ನೂ ನಾವು ವಿಮರ್ಶಿಸೋಣ. ವಾಲ್ಮೀಕಿಯ ಭಾಷೆಯು ಸರಳವೂ ಸುಲಭವೂ ಆಗಿದೆ. ಶೈಲಿಯು ಲಲಿತಕಾವ್ಯಕ್ಕೆ ಒಪ್ಪುವಂತಿದೆ—ಮನಸ್ಸಿನ ತೀವ್ರವೇದನೆಯ ಅಭಿವ್ಯಕ್ತಿಗೆ ಅವಕಾಶವನ್ನು ಕೊಡುವಂತಹದೂ ಸಮವರ್ಣಗಳ ಆವೃತ್ತಿಯಿಂದ ಕೂಡಿದ್ದೂ ಆಗಿದೆ. ಆದರೆ ಅದು ಸಾಕಷ್ಟು ಕಿವಿಗಳಲ್ಲಿ ತುಂಬುವಂತಹದೂ ಭಾರಿಯ ಗುಣವುಳ್ಳದ್ದೂ ಆಗಿರುವದಿಲ್ಲ. ಮಹಾಭಾರತದ ಭಾಷೆಯಷ್ಟು ಶುದ್ಧವೂ ಇರುವದಿಲ್ಲ. ಆದರೆ ಅದು ಉದಾತ್ತ ವಿಚಾರಗಳಿಗೂ ಭಾವನೆಗಳಿಗೂ ಮೂರ್ತ ಸ್ವರೂಪವನ್ನು ಕೊಡುವದರಿಂದ ಮೇಲಿಂದ ಮೇಲೆ ಕಾಣುವ ಭಾಷೆಯ ಅಸಮೀಚೀನತೆಯ ಕಡೆಗೆ ನಮ್ಮ ಲಕ್ಷ್ಯವು ಹೋಗುವದಿಲ್ಲ. ಹಿಮಾಲಯದ ಉನ್ನತವಾದ ಶಿಖರಗಳ ಮೇಲಿನ ಹಿಮವು ಒಂದಾನೊಂದು ಬೇಸಿಗೆಯ ದಿನ ಕರಗಿ ಬಂದು ತುಂಬಿದ ಗಂಗೆಯ ಪ್ರವಾಹದಗುಂಟ ನಾವು ಕೊಚ್ಚಿಕೊಂಡು ಹೋಗುವಂತೆ ಭಾಸವಾಗುವದು. ಆ ನೆರೆಯು ಸುಸ್ವಾದುವಾದ ಮತ್ತು ಪವಿತ್ರವಾದ ನೀರಿನಿಂದ ಮೋಹಿತರಾಗಿ ಅದರೊಡನೆ ಹರಿದುಬಂದ ಸಣ್ಣ ಸಣ್ಣ ಕಟ್ಟಿಗೆಯ ಚೂರುಗಳನ್ನೂ ಕಸವನ್ನು ನಾವು ಲೆಕ್ಕಿಸುವದೇ ಇಲ್ಲ. ವಾಲ್ಮೀಕಿಯ ವಿಚಾರಗಳ ಭವ್ಯತೆಯು ಹೀಗಿರುವದು; ಮತ್ತು ಅವು ನಿಮ್ಮ ಮನಸ್ಸನ್ನು ರಭಸದಿಂದ ಪ್ರವೇಶಮಾಡಿ ಅದನ್ನು ಮೇಲಕ್ಕೆತ್ತುವ ಆತುರವು ಇಂತಿಹುದು.

ಗಿಡಗಳ ಕತೆ.

ಲೇಖಕ:— ಶ್ರೀ. ಸಿಂಪಿ ಲಿಂಗಣ್ಣ, ಚಡಚಣ

(ದಿ. ಸರ್ ಜಗದೀಶಚಂದ್ರ ಬೋಸರ ವಿಚಾರಗಳು.)

ಗಿಡಗಳೇನಾದರೂ ಮಾತಾಡುವವೋ, ಎಂದು ಯಾರಾದರೂ ಕೇಳಿದರೆ ಅವರಿಗೆ ನಾವು ಹುಚ್ಚರೆಂದು ಬಿಡುವೆವು. ಇದೇನು ಕೇಳುವುದು, ಗಿಡಗಳೆಂದಾದರೂ ಮಾತಾಡಬಲ್ಲವೇ ಎಂದು ಮರುಪ್ರಶ್ನೆಯನ್ನೇ ಮಾಡುವೆವು. ಹಾಗಾದರೆ ಮನುಷ್ಯನೊಬ್ಬನೇ ಮಾತಿನ ಗುತ್ತಿಗೆ ಹಿಡಿದಿರುವನೋ, ಶಬ್ದಗಳನ್ನು ಬಳಸದೆ ನಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಪ್ರಕಟಿಸುವುದು ಮಾತು ಅಲ್ಲವೋ? ನಮ್ಮಲ್ಲೊಂದು ಮಗು ಇದೆ. ಅದು ತನ್ನ ಮನಸ್ಸಿನೊಳಗಿನ ವಿಚಾರಗಳನ್ನು ಸ್ಪಷ್ಟವಾಗಿ ಬಾಯಿಂದ ಹೇಳಲಾರದು. ಅದು ಬಳಸುವ ನಾಲ್ಕಾರು ಶಬ್ದಗಳು ಸಹ ಬಳಸುವಾಗ ಇನ್ನಾರಿಗೂ ಅರ್ಥವಾಗಲಾರದು. ಯಾಕೆಂದರೆ ತೊದಲುತೊದಲಾಗಿ ಅದು ಅಸ್ಪಷ್ಟವಾದ ಶಬ್ದಗಳನ್ನು ಉಚ್ಚರಿಸುತ್ತದೆ. ಆದರೂ ನಾನು ಆ ಮಗುವಿನ ಮಾತಿನ ಅರ್ಥವೆಲ್ಲವನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳಬಲ್ಲೆನು. ಎಷ್ಟೋ ಶಬ್ದಗಳನ್ನು ಅದು ಉಚ್ಚರಿಸಲಿಕ್ಕೆ ಆಗದಿರಲು ಕಣ್ಣು, ಮುಖ, ಕೈಗಳನ್ನು ಅಲುಗಿಸಿಯೂ ತಲೆಯನ್ನು ತೂಗಿಸಿಯೂ ತನ್ನ ಇಂಗಿತವನ್ನು ಹೇಳುವದು. ಆದರೆ ಅವುಗಳ ಅರ್ಥವು ಅನ್ಯರಿಗೆ ಆಗಲಾರದು. ನಾನು ಮಾತ್ರ ಅವುಗಳನ್ನು ತಿಳಿದುಕೊಳ್ಳುವೆ. ಒಂದು ದಿನ ನೆರೆಮನೆಯ ಪಾರಿವಾಳವೊಂದು ಹಾರಿ ಬಂದು ನಮ್ಮ ಮನೆಯಲ್ಲಿ ಕುಳಿತುಕೊಂಡಿತು. ಬಳಿಕ ಅದು ತನ್ನ ಗೋಣನ್ನು ಉಬ್ಬಿಸಿ ಉಚ್ಚಸ್ವರದಿಂದ ಒದರಿತು. ನಮ್ಮ ಮಗು ಪಾರಿವಾಳವನ್ನು ಅದೇ ಮೊದಲು ಕಂಡುದು. ಆ ಮೊದಲ ಪರಿಚಯದಲ್ಲಿಯೇ ಮಗು ಅನುಕರಣ ಮಾಡತೊಡಗಿತು. ಪಾರಿವಾಳವು ಹೇಗೆ ಒದರುವದು ಮಗು, ಎಂದು ಕೇಳಿದರೆ ಕೂಡಲೆ ಮಗು ಪಾರಿವಾಳದಂತೆ ಒದರಿತೋರಿಸುವದು. ಅಲ್ಲದೆ ಮಗುವು ತನ್ನ ಸುಖದುಃಖಗಳಲ್ಲಿಯೂ ಆಟಪಾಟಗಳಲ್ಲಿಯೂ ಸದಾ ತನ್ನಷ್ಟಕ್ಕೆ ತಾನೆ ಒದರಿಕೊಳ್ಳುವದು. ಮಗು ಹೊಸ ಒಂದು ವಿದ್ಯೆಯನ್ನು ಕಲಿತುಕೊಂಡಿತು. ಅದರಿಂದಾದ ಅದರ ಆನಂದಕ್ಕೆ ಮೇರೆಯೇ ಇರಲಿಲ್ಲ.

ಒಂದುದಿನ ಮನೆಗೆ ಬಂದು ನೋಡುತ್ತೇನೆ. ಮಗುವಿಗೆ ತೀರ ಹೆಚ್ಚು ಜ್ವರ ಬಂದು ಬಿಟ್ಟಿದೆ. ತಲೆಬೇನೆಯಿಂದ ತುಂಬ ಮೆತ್ತಗಾಗಿದೆ. ಕಣ್ಣುಗಳನ್ನು ಮುಚ್ಚಿಕೊಂಡು ಹಾಸಿಗೆಯ ಮೇಲೆ ಬಿದ್ದುಕೊಂಡಿದೆ. ಇಡಿಯ ಮನೆಯನ್ನೇ ನಡುಗಿಸಿ ಬಿಡುವ ಆ ಹಳವಂಡ. ಕೂಸು ಇಂದು ತನ್ನ ಕಣ್ಣುಗಳನ್ನು ಅರಳಿಸಲು ಸಹ ಅಸಮರ್ಥವಾಗಿದೆ. ನಾನು ಮಗುವಿನ ಹಾಸಿಗೆಯ ಬಳಿಯಲ್ಲಿ ಕುಳಿತುಕೊಂಡೆನು. ಮೆಲ್ಲನೆ ಅದರ ತಲೆಯ ಮೇಲೆ ಕೈಯಾಡಿಸತೊಡಗಿದೆನು. ನನ್ನ ಹಸ್ತಸ್ಪರ್ಶದಿಂದ ಅದು ನನ್ನನ್ನು ಗುರುತಿಸಿತು, ಅಲ್ಲದೆ ಅತ್ಯಂತ ಕಷ್ಟದಿಂದ ತನ್ನ ಕಣ್ಣುಗಳನ್ನು ಬಿಚ್ಚಿ ಕೆಲ ಹೊತ್ತು ನನ್ನ ಕಡೆಗೆ ನೋಡತೊಡಗಿತು. ಆ ಬಳಿಕ ಪಾರಿವಾಳದ ಧ್ವನಿ ತೆಗೆದು ಒಮ್ಮೆ ಒದರಿಯೂ ಬಿಟ್ಟಿತು. ಆಗಿನ ಆ ಧ್ವನಿಯಲ್ಲಿ ನನಗೆ ಅನೇಕ ಮಾತುಗಳು ಕೇಳಿಸಿದವು. ''ಮಗುವಿಗೆ ನೋಡಬಂದಿರುವಿಯಾ?'' ಎಂದು ಕೇಳಿದಂತೆ ಅರ್ಥವಾಯಿತು. ಅಲ್ಲದೆ ಶಬ್ದಗಳಿಂದ ವಿವರಿಸಿ ಹೇಳಲಿಕ್ಕೆ ಬಾರದ ಇನ್ನೆಷ್ಟೋ ಮಾತುಗಳನ್ನು ನಾನು ಅದರಿಂದ ಕಲಿತುಕೊಂಡೆನು. ಮಗುವಿನ ಪಾರಿವಾಳದಂತೆ ಒದರಿದ ಆ ಧ್ವನಿಯಲ್ಲಿ ಇಷ್ಟೊಂದು ಮಾತುಗಳನ್ನು ನೀವು ಹೇಗೆ ಕೇಳಿದಿರಿ, ಎಂದು ಯಾರಾದರೂ ಪ್ರಶ್ನೆ ಮಾಡಬಹುದು. ಅದಕ್ಕೆ ನಾನು—''ಮಗುವನ್ನು ಪ್ರೀತಿಸುತ್ತಿರುವೆ ಆದ್ದರಿಂದ." ಎಂದು ಅವರಿಗೆ ಉತ್ತರ ಕೊಡುವೆನು. ಮಕ್ಕಳ ಮುಖವನ್ನು ನೋಡಿದ ಕೂಡಲೇ ಅವು ಏನು ಬೇಡುತ್ತವೆ ಎನ್ನುವುದರ ಇಂಗಿತಾರ್ಥವನ್ನು ತಾಯಿಯು ತಿಳಕೊಳ್ಳಬಲ್ಲಳು. ಈ ಮಾತು ನಿಮಗೆ

ಗೊತ್ತಿದೆ. ಪ್ರೀತಿಸಿ ನೋಡಿದರೇ ಅನೇಕ ಗುಣಗಳು ಕಂಡುಬರುವವು. ಆದರಂತೆ ಅನೇಕ ಮಾತುಗಳೂ ಕೇಳಿಸುವವು.

ಹಿಂದಕ್ಕೆ ನಾನು ಯಾವುದೋ ಒಂದು ಕಾಡಿನಲ್ಲಾಗಲಿ ಗುಡ್ಡದೋರೆಯಲ್ಲಾಗಲಿ ಅಡ್ಡಾಡಲು ಹೋಗುತ್ತಿದ್ದೆ. ಆಗ ನೋಡಿದತ್ತೆಲ್ಲ ಭಣಭಣವೇ ಎನಿಸುತ್ತಿತ್ತು. ಬರಬರುತ್ತ ನಾನು ಗಿಡಮರಗಳನ್ನೂ ಪಶುಗಳನ್ನೂ ಕ್ರಿಮಿಕೀಟಕಗಳನ್ನೂ ಪ್ರೀತಿಸುವುದಕ್ಕೆ ಕಲಿತುಕೊಂಡೆನು. ಮೊದಲು ತಿಳಿದುಕೊಳ್ಳಲಿಕ್ಕಾಗದ ಅವುಗಳ ಮಾತುಗಳನ್ನೆಷ್ಟೋ ಅರಿತುಕೊಳ್ಳಲು ಆಗ ನಾನು ಶಕ್ತನಾದೆ. ಗಿಡಗಳಿಗೆ ಜೀವನವಿದ್ದುದು, ಅವು ನಮ್ಮಂತೆ ಆಹಾರ-ವ್ಯವಹಾರ ಮಾಡುತ್ತಿದ್ದುದು, ಅಲ್ಲದೆ ಅವು ದಿನದಿನವು ಬೆಳೆಯುತ್ತಿರುವುದು ಇವೆಲ್ಲ ನನಗೆ ಆ ಮೊದಲು ಎಷ್ಟೂ ತಿಳಿದಿರಲಿಲ್ಲ. ಆದರೆ ಈಗ ಅವುಗಳನ್ನೆಲ್ಲ ತಿಳಿಯಬಲ್ಲವನಾಗಿದ್ದೇನೆ. ನಮ್ಮಂತೆ ಅವುಗಳಿಗೂ ಕುಂದು ಕೊರತೆಗಳವೆ, ಸುಖದುಃಖಗಳಿವೆ. ಅವುಗಳಿಗೂ ಕೂಡ ಜೀವನನ್ನು ಉಳಿಸಿಕೊಳ್ಳುವ ಆತುರತೆ ಯಾವಾಗಲೂ ಇರುತ್ತದೆ. ಕಷ್ಟದಲ್ಲಿ ಬಿದ್ದಾಗ ಅವುಗಳಲ್ಲಿ ಕೆಲವು ಕಳ್ಳತನವನ್ನೂ ಸುಲಿಗೆಯನ್ನೂ ಮಾಡುತ್ತವೆ. ಮನುಷ್ಯರಲ್ಲಿ ಸದ್ಗುಣಗಳಿರುವಂತೆ ಅವುಗಳಲ್ಲಿಯೂ ಸದ್ಗುಣಗಳಿರುವುದು ಕಂಡುಬರುತ್ತದೆ, ಒಂದರೊಡನೆ ಬೇರೊಂದರ ಬಾಂಧವ್ಯವಿರುವದು. ಅಲ್ಲದೆ ಮನುಷ್ಯರಲ್ಲಿರುವ ಸರ್ವೋಚ್ಚಗುಣವಾದ ಸ್ವಾರ್ಥತ್ಯಾಗವು ಸಹ ಕಂಡು ಬರುತ್ತದೆ. ತಾಯಿಯು ತನ್ನ ನಿಜಜೀವನವನ್ನು ಕೊಟ್ಟು ಸಂತಾನದ ಜೀವನವನ್ನು ಕಾಪಾಡುತ್ತಾಳೆ. ಸಂತಾನಕ್ಕಾಗಿ ನಿಜ ಜೀವವನ್ನು ಧಾರೆಯೆರೆಯುವುದು ಸತ್ಯ ಜೀವನದಲ್ಲಿ ನಮಗೆ ಯಾವಾಗಲೂ ನೋಡಲು ಸಿಗುವದು ಈ ಮಾತನ್ನು ಇನ್ನುಮುಂದೆ ನಾನು ನಿಮಗೆ ಕ್ರಮ ಕ್ರಮವಾಗಿ ಹೇಳಿಕೊಡುವೆನು.

ಗಿಡದ ಒಣಗಿದ ಟೊಂಗೆಯನ್ನು ನೀವು ನೋಡಿದ್ದೀರಿ. ದಟ್ಟವಾದ ಹಸುರೆಲೆಗಳಿಂದ ಆಚ್ಛಾದಿತವಾದ ಒಂದು ಮರದ ತಳದಲ್ಲಿ ನೀವು ಕುಳಿತಿರುವಿರೆಂದು ಈಗ ತಿಳಿದುಕೊಳ್ಳಿರಿ. ಅಲ್ಲಿಯೇ ಸಮೀಪದ ಒಂದು ಮಗ್ಗುಲಲ್ಲಿ ಒಣಗಿದ ಒಂದು ಟೊಂಗೆ ಬಿದ್ದಿದೆ. ಒಂದಾನೊಂದು ಸಮಯದಲ್ಲಿ ಆ ಟೊಂಗೆಗೆ ಎಷ್ಟೋ ಎಲೆಗಳಿದ್ದವು! ಈಗ ಅವೆಲ್ಲವೂ ಒಣಗಿಹೋಗಿದ್ದರೂ ಆ ಟೊಂಗೆಯ ಒಂದು ತುದಿ ಮಾತ್ರ ಹಸಿ ಅದೆ. ಇನ್ನು ಕೆಲವು ವೇಳೆಯಲ್ಲಿ ಅದು ಸಹ ಒಣಗಿ ಹೋಗುವದು, ಒಳ್ಳೇದು. ಹೇಳಿರಿ ನೋಡುವಾ—ಈ ಗಿಡಕ್ಕೂ ಆ ಒಣಗಿಹೋದ ಟೊಂಗೆಗೂ ಏನು ಭೇದವಿದೆ? ಗಿಡವು ಬೆಳೆಯುತ್ತದೆ. ಮುರಿದ ಟೊಂಗೆಯು ಕ್ಷಯಿಸುತ್ತದೆ. ಒಂದಕ್ಕೆ ಜೀವವಿದೆ; ಇನ್ನೊಂದು ನಿರ್ಜೀವವಾಗಿದೆ. ಯಾವುದು ಸಜೀವವೋ ಅದು ಕ್ರಮವಾಗಿ ಬೆಳೆಯುವದು, ಬಾಳುವದು. ಜೀವನದ ಇನ್ನೂ ಒಂದು ಲಕ್ಷಣವೆಂದರೆ—ಅದಕ್ಕೆ ಗತಿಯುಂಟು. ಅಂದರೆ ಅದು ಮಿಸುಕುವದು. ಆ ಮಿಸುಕಾಗಲಿ ಆ ಗತಿಯಾಗಲಿ ಒಮ್ಮೆಲೆ ನೋಡಲು ನಮಗೆ ದೊರೆಯುವದು. ಯಾವರೀತಿಯಲ್ಲಿ ಬಳ್ಳಿಯು ಗಿಡವನ್ನು ಹಬ್ಬುತ್ತಿದೆಯೆಂಬುದನ್ನು ನೋಡಿರುವಿರಾ?

ಸಜೀವಕ್ಕೆ ಗತಿಯುಂಟು. ಅದು ಬೆಳೆಯುತ್ತದೆ. ತತ್ತಿಯಲ್ಲಿ ಮಾತ್ರ ಜೀವನದ ಯಾವ ಚಿಹ್ನವೂ ಕಂಡುಬರುವದಿಲ್ಲ. ಯಾಕಂದರೆ ಅದರಲ್ಲಿ ಜೀವವು ಮಲಗಿಕೊಂಡಿರುತ್ತದೆ. ಕಾವು ಕೊಟ್ಟಾಗ ಮಾತ್ರ ಅದರಿಂದ ಪಕ್ಷಿಯು ಮರಿಯು ಜನ್ಮತಾಳುವದು. ಹಾಗೆಯೇ ಬೀಜವೂ ಗಿಡದ ತತ್ತಿಯಿದ್ದಂತೆ. ಅದರಲ್ಲಿ ವೃಕ್ಷಶಿಶುವು ನಿದ್ರೆಹೋಗಿರುತ್ತದೆ. ನೆಲದ ಮಣ್ಣು, ನೀರು ಮತ್ತು ಕಾವು ಇವುಗಳನ್ನು ಪಡೆದಾಗ ಬೀಜದಿಂದ ವೃಕ್ಷಶಿಶುವು ಜನ್ಮತಾಳುವದು.

ಬೀಜದ ಮೇಲೆ ಬಿರುಸಾದ ಒಂದು ಕವಚವಿರುತ್ತದೆ. ಅದರ ಸಹಾಯದಿಂದ ತೊಂದರೆಯಿಲ್ಲದೆ ವೃಕ್ಷಶಿಶು ನಿದ್ರೆಮಾಡುವದು. ಬೀಜಗಳು ಕೆಲವು ಸಣ್ಣವಾಗಿಯೂ ಕೆಲವು ದಪ್ಪವಾಗಿಯೂ ಇರುವವು. ಅವನ್ನು ನೋಡಿ ಗಿಡವು ಅದೆಷ್ಟು ದೊಡ್ಡದಾಗುವದೆಂಬುದನ್ನು ಹೇಳಲಿಕ್ಕೆ ಬಾರದು. ಅತಿ ಪ್ರಕಾಂಡವಾದ ವಟವೃಕ್ಷವು ಸಾಸಿವೆ ಕಾಳಿನಂಥ ಚಿಮಣಾದ ಬೀಜದಿಂದ ಜನ್ಮತಾಳುತ್ತದೆ. ಅಂಥ ವಿಶಾಲವಾದ ಮರವು ಅಷ್ಟೊಂದು ಕ್ಷುದ್ರವಾದ ಬೀಜದಲ್ಲಿ ಅಡಗಿಕೊಂಡಿರುತ್ತದೆಂದು ಯಾರು ಭಾವಿಸಬಲ್ಲರು?

ಪ್ರಾಥಮಿಕ ಶಿಕ್ಷಣ

ಒಕ್ಕಲಿಗರು ತಮ್ಮ ಹೊಲಗಳಲ್ಲಿ ಬೀಜಬಿತ್ತುವದನ್ನು ನೋಡಿರುವಿರಿ. ಆದರೆ ಕಾಡುಗಳಲ್ಲಿ ಅವೆಷ್ಟೋ ಗಿಡಬಳ್ಳಿಗಳ ಬೀಜಗಳನ್ನು ಮನುಷ್ಯರು ಬಿತ್ತುವದಿಲ್ಲವಾದರೂ ಹಲವು ಉಪಾಯಗಳಿಂದ ಅವು ಅಲ್ಲಿ ಬಿತ್ತಲ್ಪಡುವವು. ಪಕ್ಷಿಗಳು ಹಣ್ಣುಹಂಪಲಗಳನ್ನು ತಿಂದು ದೂರ ದೇಶಕ್ಕೆ ಬೀಜಗಳನ್ನು ಒಯ್ಯುವವು. ಆದ್ದರಿಂದ ಜನಶೂನ್ಯವಾದ ದ್ವೀಪಗಳಲ್ಲಿಯೂ ಕೂಡ ಗಿಡಗಳು ಬೆಳೆದಿವೆ. ಅಲ್ಲದೆ ಇನ್ನೆಷ್ಟೋ ಬೀಜಗಳು ಗಾಳಿಯಲ್ಲಿ ತೂರಿಹೋಗಿ ದೂರದೂರದ ದೇಶಗಳಲ್ಲಿ ಬಿತ್ತಲ್ಪಡುವವು. ಎಕ್ಕೆಯ ಗಿಡವನ್ನು ನೀವೆಲ್ಲ ನೋಡಿರುವಿರಿ. ಅದರ ಕಾಯಿಯು ಬಿಸಲಿನ ಆವೇಗಕ್ಕೆ ಒಡೆದಾಗ ಬೀಜಗಳು ಅದರಲ್ಲಿ ಅರಳಿಯೊಡನೆ ಹಾರಾಡುವವು. ನಮ್ಮ ಚಿಕ್ಕಂದಿನಲ್ಲಿ ನಾವು ಅವುಗಳನ್ನು ಹಿಡಿದುಕೊಳ್ಳಲು ಹಾತೊರೆದು ಕೈ ಚಾಚುವಷ್ಟರಲ್ಲಿಯೇ ಗಾಳಿಯು ಬೀಜದೊಡನೆ ಅರಳಿಯನ್ನು ತೆಗೆದುಕೊಂಡು ಮೇಲಕ್ಕೆ ಹೋಗುತ್ತಿತ್ತು. ಈ ಪ್ರಕಾರವಾಗಿ ದಿನರಾತ್ರಿಗಳೆನ್ನದೆ ಅವು ದೇಶದೇಶಾಂತರಕ್ಕೆ ಹರಡಿ ಹೋಗುತ್ತವೆ.

ಪ್ರತಿಯೊಂದು ಬೀಜದಿಂದ ಮರವು ಹುಟ್ಟಿಯೇ ಹುಟ್ಟುವದೋ ಅಥವಾ ಇಲ್ಲವೋ ಎಂಬುದನ್ನು ಯಾರೂ ಹೇಳಲಾರರು. ಕಠಿಣವಾದ ಕಲ್ಲಿನ ಮೇಲೆ ಬೀಜವು ಬಿದ್ದುಕೊಂಡರೆ ಆ ಸ್ಥಾನದಲ್ಲಿ ಮಾತ್ರ ಅದು ಅಂಕುರಿಸಲಾರದು. ಅಂಕುರವು ಹೊರಬೀಳಬೇಕಾದರೆ ನೆಲ ನೀರು ಕಾವುಗಳು ಅತ್ಯಗತ್ಯವಾಗಿ ಬೇಕು.

ಯಾವ ಸ್ಥಳದಲ್ಲಾದರೂ ಬೀಜವು ಬಿದ್ದುಕೊಂಡಿರಲೊಲ್ಲದೇಕೆ, ಬಹುದಿನಗಳವರೆಗೆ ವೃಕ್ಷಶಿಶುವು ಅದರಲ್ಲಿ ನಿರಾತಂಕವಾಗಿ ನಿದ್ರಿಸುತ್ತದೆ. ಬೆಳೆಯಲು ಯೋಗ್ಯವಾದ ಸ್ಥಾನದಲ್ಲಿ ಎಲ್ಲಿಯವರೆಗೆ ಅದು ಬೀಳುವದಿಲ್ಲವೋ ಅಲ್ಲಿಯವರೆಗೆ ಅದರ ಕಠಿಣವಾದ ಕವಚವು ವೃಕ್ಷಶಿಶುವನ್ನು ನಾನಾತರದ ವಿಪತ್ತುಗಳಿಂದ ರಕ್ಷಿಸುತ್ತದೆ.

ಬೇರೆ ಬೇರೆ ಬೀಜಗಳು ಬೇರೆ ಬೇರೆ ಕಾಲಕ್ಕೆ ಪಕ್ವಕ್ಕೆ ಬರುವವು. ಮಾವು ವೈಶಾಖಕ್ಕೆ ಪಕ್ವಗೊಳ್ಳುವದು ನೆಲ್ಲು ಜವೆಗಳು ಆಶ್ವೀನ ಕಾರ್ತಿಕಕ್ಕೆ ಪಕ್ವವಾಗುವವು. ಈಗ ಯಾವುದೋ ಒಂದು ಗಿಡದ ಬೀಜಗಳು ಆಶ್ವೀನ ಮಾಸಕ್ಕೆ ಪಕ್ವವಾದವೆಂದು ತಿಳಿಯೋಣ. ಆಶ್ವೀನ ಮಾಸದ ಕೊನೆಯ ಭಾಗದಲ್ಲಿ ಬಲವಾದ ಬಿರುಗಾಳಿ ಬೀಸಿ ಆದ ಎಲೆ-ಟೊಂಗೆಗಳೆಲ್ಲ ಮುರಿದು ನುಗ್ಗುನುರಿಯಾಗಿ ಹೊರಚಲ್ಲುವವು. ಆಗ ಅದರ ಬೀಜಗಳು ನಾಲ್ಕೂ ದಿಕ್ಕಿನಲ್ಲಿ ಹರಡಿಹೋಗುವವು. ಪ್ರಬಲವಾದ ಗಾಳಿಯ ಹೊಡೆತಕ್ಕೆ ಎಲ್ಲಿ ಏನು ಹಾರಿಹೋದೀತೆಂದು ಯಾರು ಹೇಳಬಲ್ಲರು? ಹಗಲುರಾತ್ರಿಯೆನ್ನದೆ ಹೊರಳಾಡಿ ಒಂದು ಇಟ್ಟಂಗಿಯ ಕೆಳಗೋ ಅಥವಾ ಒಂದು ಮಣ್ಣು ಹೆಂಟೆಯ ಕೆಳಗೋ ಒಂದು ಬೀಜವು ಆಶ್ರಯ ಹೊಂದಿತೆಂದು ತಿಳಿಯೋಣ. ಎಲ್ಲಿಯೋ ಹುಟ್ಟಿತು. ಎಲ್ಲಿಯೋ ಬಂದು ಬಿದ್ದಿತು. ಕ್ರಮೇಣ ಅದು ಧೂಳಿನಿಂದ ಮುಚ್ಚಿಕೊಂಡಿತು. ಈಗ ಮಾತ್ರ ಬೀಜವು ಮನುಷ್ಯನ ದೃಷ್ಟಿಯಿಂದ ಮರೆಯಾಯಿತು. ನಮ್ಮ ದೃಷ್ಟಿಯಿಂದೇನೋ ಮರೆಯಾಯಿತು; ಆದರೆ ಅದು ವಿಧಾತನ ದೃಷ್ಟಿಯಿಂದ ಮರೆಯಾಗಲಿಲ್ಲ. ಪೃಥ್ವಿಯು ತಾಯಿಯಂತೆ ಅದನ್ನು ತನ್ನ ತೊಡೆಯಲ್ಲಿ ತೆಗೆದುಕೊಂಡಿತು. ವೃಕ್ಷಶಿಶು ಮಣ್ಣಿನಲ್ಲಿ ಮುಚ್ಚಿಕೊಂಡು ಚಳಿ ಗಾಳಿಗಳಿಂದ ರಕ್ಷಣೆಯನ್ನು ಹೊಂದಿ ನಿರಾತಂಕವಾಗಿ ಅದರಲ್ಲಿ ನಿದ್ರೆಹೋಯಿತು.

ವಿಶೇಷ ಸುದ್ದಿ

ಮ್ಯಾಟ್ರಿಕ್ ಅಥವಾ ಎಸ್. ಎಸ್. ಸಿ ಪಾಸಾಗಿ ಟ್ರೇನಿಂಗ ಪಡೆದ ಶಿಕ್ಷಕರು ಈಗ ಪಡೆಯುತ್ತಿರುವ ಹತ್ತು ರೂಪಾಯಿ ಸ್ಪೆಶಲ್ ಸಂಬಳವನ್ನು ಇನ್ನು ಮುಂದೆಯೂ ಪಡೆಯುತ್ತ ಹೋಗುವರೆಂದೂ ೧-೭-೧೯೫೩ರ ವರೆಗೆ ಎಸ್. ಎಸ್. ಸಿ. ಪಾಸಾದ ಟ್ರೇನಿಂಗ ಹೊಂದಿದ ಶಿಕ್ಷಕರೂ ಈ ಸ್ಪೆಶಲ್ ಸಂಬಳವನ್ನು ಪಡೆಯುವರೆಂದೂ ಸರಕಾರದವರು ಆಜ್ಞೆಗಳನ್ನು ಹೊರಡಿಸಿರುವರು. ಆದರೆ ಮೇಲ್ಕಾಣಿಸಿದ ನಿರ್ದಿಷ್ಟ ಅವಧಿಯ ನಂತರ ಟ್ರೇನಿಂಗ ಹೊಂದಿದ ಶಿಕ್ಷಕರು ಎಸ್. ಎಸ್. ಸಿ. ಪಾಸಾದರೂ ಎಸ್. ಎಸ್. ಸಿ. ಪಾಸಾಗಿ ಪಿ. ಟಿ. ಸಿ. ಪರೀಕ್ಷೆ ಪಾಸಾದರೂ ಈ ಸ್ಪೆಶಲ್ ಸಂಬಳವನ್ನು ಪಡೆಯಲಾರರೆಂದೂ ಸರಕಾರದಿಂದ ಆಜ್ಞೆಗಳು ಹೊರಟಿವೆ.

ಕೀರ್ತಿಶೇಷರಾದ

ಮಾರ್ಶಲ್ ಜೋಸೆಫ್ ಸ್ಟಾಲಿನ್

(ವಿಶ್ವದ ಶ್ರೇಷ್ಠ ಮುತ್ಸದ್ದಿ)

ಲೇಖಕರು:- ಶ್ರೀಯುತ ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣಭಾಗ, ಧಾರವಾಡ.

ಮೊದಲ ಮಾತು.

ದಿನಾಂಕ ೫-೩-೧೯೫೩ ರಂದು ರಶಿಯದ ಮುಖ್ಯ ಮಂತ್ರಿ ಜೋಸೆಫ್ ಸ್ಟಾಲಿನ್ನರವರು ನಿಧನರಾದರೆಂಬ ದುಃಖದ ಸುದ್ದಿಯನ್ನು ಕೇಳಿ ವಿಶ್ವವೇ ಶೋಕಸಾಗರದಲ್ಲಿ ಮುಳುಗಿತು. ರಶಿಯದ ಜನತೆಯ ದುಃಖಕ್ಕಂತೂ ಇತಿಮಿತಿಯಿರಲಿಲ್ಲ. ರಶಿಯವನ್ನು ಈಗ ಅತ್ಯಂತ ಪ್ರಬಲ ರಾಷ್ಟ್ರವನ್ನಾಗಿ ಮಾಡಿದ ಯಶಸ್ಸು ಮಾರ್ಶಲ್ ಸ್ಟಾಲಿನ್ನರಿಗೇ ಸಲ್ಲುತ್ತಿದೆಯಲ್ಲವೇ ? ದ್ವಿತೀಯ ವಿಶ್ವಮಹಾಯುದ್ಧದಲ್ಲಿ ಹಿಟ್ಲರನನ್ನು ಸಂಪೂರ್ಣವಾಗಿ ಸೋಲಿಸಿದ ಕೀರ್ತಿಯು ಇವರಿಗೇ ಮೀಸಲಾಗಿದೆ. ಮಿತ್ರರಾಷ್ಟ್ರಗಳೆಲ್ಲ ಆಗ ಈ ಮಾತನ್ನೆತ್ತಿ ಬಾಯಿತುಂಬ ಹೊಗಳಿವೆ ಮತ್ತು ಸ್ಟಾಲಿನ್ನರನ್ನು ಉಕ್ಕಿನ ಮನುಷ್ಯ (The Man of Steel) ನೆಂದು ಹಾಡಿ ಹರಸಿವೆ. ಹಿಟ್ಲರನ ಸೈನ್ಯಗಳಗೂಡ ಸ್ಟಾಲಿನ್‌ಗ್ರಾಡದಲ್ಲಿ ಹೋರಾಡುವಾಗ ಇವರಿಂದ ಹೊರಹೊಮ್ಮಿದ ಕೈಚಳಕವೂ ಗತ್ತುಗಾರಿಕೆಯೂ ಜಗತ್ತನ್ನೇ ಬೆರಗುಗೊಳಿಸಿದ ಸಂಗತಿಯನ್ನು ಓದುಗರು ಮರೆತಿಲ್ಲದಿಕ್ಕಿಲ್ಲವಷ್ಟೇ? ಯುದ್ಧವು ಮುಗಿದ ತರುವಾಯ ಅವರ ದೃಷ್ಟಿಯು ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದರ ಕಡೆಗೆ ಹೊರಳಿತು. ಈ ಹೆಗ್ಗುರಿಯನ್ನು ಸಾಧಿಸಲೋಸುಗ ಪಂಚ-ವಾರ್ಷಿಕ ಯೋಜನೆಗಳನ್ನು ಹೂಡಿದರು- ಈ ಯೋಜನೆಗಳ ಪರಿಣಾಮದಿಂದ ರಶಿಯವು ಈಗ ಅತ್ಯಂತ ಪ್ರಬಲ ಔದ್ಯೋಗಿಕ ರಾಷ್ಟ್ರವಾಗಿದೆ; ಯುರೋಪದಲ್ಲಿ ಪ್ರಥಮ ಸ್ಥಾನವನ್ನು ಪಡೆದು ವಿಶ್ವದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದೆ. ಬಡತನದಲ್ಲಿಯೇ ಹುಟ್ಟಿ ಬಡತನದಲ್ಲಿಯೇ ಬೆಳೆದು ಬಡ ರಾಷ್ಟ್ರದ ಮುಖಂಡನಾಗಿ ಬಡತನವನ್ನೆಲ್ಲ ಹೊಡೆದೋಡಿಸಿ ತನ್ನ ರಾಷ್ಟ್ರವನ್ನು ಈಗಿನ ಉನ್ನತ ಮಟ್ಟಕ್ಕೇರಿಸಿದವನ ಜೀವನ ಚರಿತ್ರದ ಅರಿವು ನಮ್ಮ ಓದುಗರಿಗಿರುವದು ಅವಶ್ಯವಲ್ಲವೇ

ಬಾಲ್ಯ ಮತ್ತು ಶಿಕ್ಷಣ

ಇವರು ಯು. ಎಸ್. ಎಸ್. ಆರ್. (ರಶಿಯ) ದಲ್ಲಿಯ ಜಾರ್ಜಿಯಾ ಎಂಬ ಪ್ರಾಂತದಲ್ಲಿಯ ಗೋರಿ ಎಂಬ ಪಟ್ಟಣದಲ್ಲಿ ೧೮೭೯ರಲ್ಲಿ ಜನಿಸಿದರು. ಇವರ ತಂದೆಯು ಅತಿ ಬಡವನು. ಹರಿದ ಬೂಟು-ಚಪ್ಪಲಿಗಳನ್ನು ಹೊಲಿದು ದುರಸ್ತ ಮಾಡುವ ಉದ್ಯೋಗವನ್ನು ಕೈಕೊಂಡು ತನ್ನ ಉಪಜೀವನವನ್ನು ಹೇಗೋ ಸಾಗಿಸುತ್ತಿದ್ದನು. ಆತನ ಹೆಸರು ವಿಸ್ಸಾರಿಯೋನ ಜುಗಶ್ವಿಲಿ. ಓದು-ಬರಹವಂತೂ ಆತನಿಗೆ ಸ್ವಪ್ನದಲ್ಲಿ ಕೂಡಾ ಗೊತ್ತಿರಲಿಲ್ಲ. ತಾಯಿಯ ಹೆಸರು ಕೆಥರಿನಾ ಜೋರ್ಗ್ವಾನಾ. ಅವಳೂ ನಿರಕ್ಷರಕುಕ್ಷಿಯೇ ಆಗಿದ್ದಳು. ಈ ಬಡ ದಂಪತಿಗಳಿಗೆ ನಾಲ್ವರು ಮಕ್ಕಳಿದ್ದರು. ಮೂವರು ಅಕಾಲಮೃತ್ಯುವನ್ನು ಹೊಂದಿ ಸ್ಟಾಲಿನ್ನರೊಬ್ಬರೇ ಉಳಿದಿದ್ದರು. ಸ್ಟಾಲಿನ್ನರು ವಿಶ್ವದ ಅತ್ಯಂತ ಶ್ರೇಷ್ಠ ಮುತ್ಸದ್ದಿಯಾಗುವದನ್ನು ನೋಡುವ ಭಾಗ್ಯವು ತಂದೆಗೆ ಸಿಗದೆ ಹೋಯಿತು. ತಾಯಿಯು ಮಾತ್ರ ಮಗನ ವೈಭವವನ್ನು ಮನಸಾರೆ ನೋಡಿ ನಲಿದು ೧೯೩೭ರಲ್ಲಿ ನಿಧನ ಹೊಂದಿದಳು. ಆ ಬಡ ದಂಪತಿಗಳು ನಿರಕ್ಷರಕುಕ್ಷಿಗಳಾಗಿದ್ದರೂ ತಮ್ಮ ಮಗನು ವಿದ್ಯಾಭ್ಯಾಸ ಮಾಡಿ

ಹೆಚ್ಚಿನ ಸ್ಥಾನ ಪಡೆಯಬೇಕೆಂಬ ಹಂಬಲವು ಮಾತ್ರ ಅವರಲ್ಲಿ ಬೇರೂರಿತ್ತು. ತಂದೆಯ ಮನಸಿನಲ್ಲಿ ಏಕೋ ಏನೋ ತನ್ನ ಮಗನು ಪಾದ್ರಿಯಾಗಬೇಕೆಂದಿತ್ತು! ಆ ಉದ್ದೇಶದಿಂದ ಗೋರಿ ಪಟ್ಟಣದಲ್ಲಿಯ ಇಗರ್ಜಿ ಎಂಬ ಹೆಸರಿನ ಧರ್ಮಾರ್ಥ ಶಾಲೆಯಲ್ಲಿ ತನ್ನ ಮಗನ ಹೆಸರನ್ನು ಹಚ್ಚಿಸಿದನು. ಸ್ಟಾಲಿನ್ನನಿಗೆ ಧರ್ಮಗ್ರಂಥಗಳು ಅಷ್ಟೊಂದು ಸೇರಲಿಲ್ಲ 'ಕಾರ್ಲ್ ಮಾರ್ಕ್ಸ' (Carl Marx) ನೆಂಬ ತತ್ವಜ್ಞಾನಿಯ ಗ್ರಂಥಗಳನ್ನು ಒಳ್ಳೇ ಆಸ್ಥೆವಹಿಸಿ ಓದಿದನು. 'ಕಾರ್ಲ ಮಾರ್ಕ್ಸ'ನ ತತ್ವಗಳು ಆತನ ಅವಧಾನವನ್ನೇ ತಮ್ಮ ಕಡೆಗೆ ಸೆಳೆದುಕೊಂಡವು. ಆತನ ಮನಸಿನ ಮೇಲಾದ ಅವುಗಳ ಪ್ರಭಾವವು ಅಷ್ಟಿಷ್ಟಲ್ಲ. ಸಮತಾವಾದವು ಅವನಲ್ಲಿ ಮನೆಮಾಡಿಕೊಂಡಿತು; ಅದು ಆತನ ಜೀವನದ ಹೆಗ್ಗುರಿಯಾಗಿ ಪರಿಣಮಿಸಿತು.

ಕ್ರಾಂತಿಯ ಕಹಳೆ

ಝಾರ (Czar) ಕಠೋರ ದಬ್ಬಾಳಿಕೆಯ ದವಡೆಯಲ್ಲಿ ಸಿಕ್ಕು ಎಷ್ಟೋ ವರುಷಗಳಿಂದ ರಶಿಯದ ಪ್ರಜೆರೆಲ್ಲರು ಬೆಂದು ನೊಂದು ವಿಲಿವಿಲಿ ಒದ್ದಾಡಲಿಕ್ಕೆ ಹತ್ತಿದ್ದರು. ಅಸಂತುಷ್ಟತೆಯ ಕಾಡ್ಗಿಚ್ಚು ಒಳಗಿಂದೊಳಗೆ ದಿನದಿನಕ್ಕೆ ಪ್ರಜ್ವಲಿಸುತ್ತ ನಡೆದಿತ್ತು. ಇದರ ಸಂಪೂರ್ಣ ಲಾಭವನ್ನು ಲೆನಿನ್ ಮತ್ತು ಸ್ಟಾಲಿನ್ನರು ತಕ್ಕೊಳ್ಳದೆ ಬಿಡಲಿಲ್ಲ. ಜನತೆಯು ಅವರೀರ್ವರಿಂದ ಸಂಘಟಿತವಾಗಿ ಕೊನೆಗೊಮ್ಮೆ ೧೯೧೭ರಲ್ಲಿ ಕ್ರಾಂತಿಯ ಕಹಳೆಯನ್ನು ಊದಿತು. ಲೆನಿನ್ನರು ಅದರ ಅಧ್ವರ್ಯುಗಳಾಗಿ ಕೆಲಸ ಮಾಡುತ್ತಿದ್ದರೂ ಸ್ಟಾಲಿನ್ನರು ಲೆನಿನ್ನರ ಬಲಗೈಯಾಗಿ ಸೂತ್ರಧಾರರಂತೆ ಕೆಲಸ ಮಾಡಿದ್ದುಂಟು ಈ ಕ್ರಾಂತಿಯ ಕಾಲದಲ್ಲಿ ಸ್ಟಾಲಿನ್ನರು ಅನೇಕ ಸಲ ಕಾರಾಗೃಹವಾಸವನ್ನು ಅನುಭೋಗಿಸಬೇಕಾಯಿತು. ಸುಮಾರು ೧೭ ವರುಷಗಳ ವರೆಗೆ ಅವರು ಭೂಗತರಾಗಿರಬೇಕಾಯಿತ್ತು. ಆಗ ಇವರು ಸೋಸಿದ ಕಷ್ಟಪರಂಪರೆಗಳನ್ನು ಹೇಳಲಾಸಲ್ಲ. ಜಯಲಕ್ಷ್ಮಿಯು ಕೊನೆಗೊಮ್ಮೆ ಅವರ ಪಕ್ಷಕ್ಕೆ ಮಾಲೆಯನ್ನು ಹಾಕಿದಳು.

ರಶಿಯದ ಸರ್ವತೋಮುಖ ಉನ್ನತಿ

ಕೊನೆಗೊಮ್ಮೆ ಸಮತಾವಾದವು ರಶಿಯದಲ್ಲಿ ಲೆನಿನ್ನರಿಂದ ಪ್ರಸ್ಥಾಪಿಸಲ್ಪಟ್ಟಿತು. ಅಂದಿನಿಂದ ರಶಿಯಕ್ಕೆ ಯು. ಎಸ್. ಎಸ್. ಆರ್. (Union of Soviet Socialist Republics) ಎಂಬ ಅಭಿಧಾನವು ಪ್ರಾಪ್ತವಾಯಿತು. ಮುಂದೆ ಲೆನಿನ್ನರು ಬಹಳ ದಿನಗಳ ವರೆಗೆ ಬದುಕಿರದೆ ೧೯೨೪ರಲ್ಲಿ ನಿಧನ ಹೊಂದಿದರು. ಅವರ ನಿಧನದ ನಂತರ ಸ್ಟಾಲಿನ್ನರೇ ಮುಖ್ಯ ಮಂತ್ರಿಗಳಾದರು. ಇವರು ಸುಮಾರು ೨೯ ವರುಷಗಳ ವರೆಗೆ ರಾಷ್ಟ್ರದ ಮುಖಂಡತ್ವವನ್ನು ವಹಿಸಿ ಕೆಲಸ ಮಾಡಿದ್ದಾರೆ. ಪಂಚವಾರ್ಷಿಕ ಯೋಜನೆಗಳನ್ನು ಹೂಡಿ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸೈನಿಕ, ಔದ್ಯೋಗಿಕ ಮೊದಲಾದ ಎಲ್ಲ ರಂಗಗಳಲ್ಲಿ ಉತ್ತಮೋತ್ತಮ ಪ್ರಗತಿಯನ್ನು ಮಾಡಿ ತೋರಿಸಿದ್ದಾರೆ. ಝಾರರ ಕಾಲದಲ್ಲಿ ಬೇರೂರಿದ್ದ ಬಡತನವನ್ನು ಹೇಳಹೆಸರಿಲ್ಲದೆ ಹೊಡೆದೋಡಿಸಿದ್ದಾರೆ. ಓಲ್ಗಾ-ಡಾನ್ ಕಾಲುವೆಯನ್ನು ಕಟ್ಟಿಸಿ ರಶಿಯದಂತಹ ಒಳನಾಡಿನ ಪ್ರದೇಶದಲ್ಲಿ ಜಲಮಾರ್ಗವನ್ನು ಕಲ್ಪಿಸಿ ಕೊಟ್ಟು ವ್ಯಾಪಾರ-ಉದ್ದಿಮೆಗಳಿಗೆ ಹೇಳತೀರದಷ್ಟು ಲಾಭವನ್ನು ಮಾಡಿಕೊಟ್ಟಿದ್ದಾರೆ; ನಿರ್ಜಲವಾದ ಪ್ರದೇಶಗಳನ್ನು ಜಲಮಯವನ್ನಾಗಿ ಮಾರ್ಪಡಿಸಿದ್ದಾರೆ; ಉಸುಕಿನ ಅರಣ್ಯಗಳನ್ನು ಫಲವತ್ತಾದ ಪ್ರದೇಶಗಳನ್ನಾಗಿ ಮಾಡಿದ್ದಾರೆ; ಸಹಕಾರ ಪದ್ಧತಿಯಿಂದ ನಡೆಯುವ ಕೃಷಿ (Cooperative Farming) ಯನ್ನು ಬಳಿಕೆಯಲ್ಲಿ ತಂದು ಹುಟ್ಟುವಳಿಯನ್ನು ಹೆಚ್ಚಿಸಿದ್ದಾರೆ. ಹೋದ ವರುಷವೇ 'ಟರ್ಕ್ಮೇನ್' ಎಂಬ ಹೆಸರಿನ ಮತ್ತೊಂದು ಅದ್ಭುತ ಕಾಲುವೆಯ ಶಂಕುಸ್ಥಾಪನೆಯು ಅವರ ಅಮೃತ ಹಸ್ತದಿಂದಲೇ ಜರುಗಿದೆ; ಈ ಪ್ರಕಾರ ಒಂದಲ್ಲ ಎರಡಲ್ಲ ಹಲವಾರು ಸುಧಾರಣೆಗಳನ್ನು ಮಾಡಿ ತಮ್ಮ ರಾಷ್ಟ್ರವನ್ನು ಈಗ ಪ್ರಬಲ ರಾಷ್ಟ್ರವನ್ನಾಗಿ ಮಾಡಿಟ್ಟಿದ್ದಾರೆ. ಒಟ್ಟಿನಲ್ಲಿ ಪ್ರಜರ ಬಡತನವನ್ನೆಲ್ಲ ಆಮೂಲಾಗ್ರವಾಗಿ ಕಿತ್ತೊಗೆದು ಅವರನ್ನು ಎಲ್ಲ ಬಗೆಯಿಂದಲೂ ಸಂತುಷ್ಟರನ್ನಾಗಿ ಮಾಡಿದ್ದಾರೆ. ಇಂತಹ ಸೇವಾತತ್ಪರನಾದ ಮುಖಂಡನನ್ನು ಕಳೆದುಕೊಂಡು ರಶಿಯದ ಜನತೆಯು ಈಗ ಅತಿ ವಿಹ್ವಲವಾಗಿರುವದರಲ್ಲೇನಾಶ್ಚರ್ಯ ?

ಪ್ರತಿಭಾವಂತ ಮುತ್ಸದ್ದಿ

ಅಂತರ್ರಾಷ್ಟ್ರೀಯ ರಂಗದಲ್ಲಿ ಇಂಗ್ಲಂಡವನ್ನು 'ಬುಲ್ ಡಾಗ್ (Bull dog) ಎಂಬ ನಾಯಿಗೂ ರಶಿಯವನ್ನು ಕರಡಿಗೂ ಹೋಲಿಸುವದುಂಟು. ಚರ್ಚಿಲ್ಲರು

ಬಾಹ್ಯರೂಪದಲ್ಲಿಯೂ ಗುಣಗಳಲ್ಲಿಯೂ 'ಬುಲ್-ಡಾಗ್' ನಾಯಿಯಂತೆ ಕಾಣುತ್ತಿದ್ದರೆ, ಸ್ಟಾಲಿನ್ನರು ಹೊರಗೂ ಒಳಗೂ ರಶಿಯದ ಕರಡಿಯಂತಿದ್ದರು. ನಿಷ್ಠುರ ಮಾತು ಮತ್ತು ದೃಢನಿಶ್ಚಯ ಇವು ಅವರಲ್ಲಿ ಎದ್ದು ಕಾಣುತ್ತಿದ್ದ ಗುಣಗಳು. ಒಮ್ಮೆ ಹಿಡಿದ ಕೆಲಸವನ್ನು ಪಾರುಗಾಣಿಸದೆ ಎಂದೂ ಬಿಡುತ್ತಿದ್ದಿಲ್ಲ. ಸಮತಾವಾದದ ಹೆಗ್ಗುರಿಯನ್ನು ಮುಟ್ಟಲು ಕೊಲೆ, ಕಗ್ಗೊಲೆ, ರಕ್ತಪಾತ ಮೊದಲಾದ ಕಠೋರ ಮತ್ತು ನಿಷ್ಕರುಣ ಕೃತಿಗಳನ್ನು ಮಾಡಲು ಹಿಂಜರಿಯಲಿಲ್ಲ. ತಮ್ಮ ಮನಸ್ಸಿನಲ್ಲುಂಟಾದ ವಿಚಾರಗಳನ್ನು ಬೇರೆಯವರಿಗೆ ಎಂದೂ ಅರಿ ತೋರಿಸುತ್ತಿರಲಿಲ್ಲ. ತಮ್ಮ ವಿಚಾರವನ್ನು ಮೌನದಿಂದಲೇ ಕೃತಿಗಿಳಿಸಿ ತೋರಿಸುತ್ತಿದ್ದರು. ಆದುದರಿಂದ, ಅನೇಕ ಸಲ ಅವರ ಧೋರಣವು ಏನಿದೆ ಹೇಗಿದೆಯೆಂಬುದು ಹೊರ ದೇಶದ ರಾಜಕಾರಣಿಗಳಿಗೆ ಗೊತ್ತಾಗದೆ ಅದೊಂದು ಒಡೆಯದ ಒಗಟವಂತೆ ರಹಸ್ಯಮಯವಾಗಿಯೇ ಉಳಿಯುತ್ತಿದ್ದಿತು. ಉದಾಹರಣಾರ್ಥವಾಗಿ, ಹೋದ ಮಹಾ ಯುದ್ಧದಲ್ಲಿ ಹಿಟ್ಲರನ ಸೈನಿಕರಿಗೂ ರಶಿಯದಲ್ಲಿ ನಡೆದ ಹೋರಾಟದಲ್ಲಿ ರಶಿಯವು ಕೈಕೊಂಡ ಯುದ್ಧ ಮಾಡುವ ರೀತಿ-ನೀತಿ, ಸೈನಿಕ ರಚನೆ ಮತ್ತು ಚಲನವಲನಗಳು, ಯುದ್ಧ ಸಾಮಗ್ರಿಗಳ ತಯಾರಿಕೆ, ಆಹಾರ ಸಾಮುಗ್ರಿಗಳ ಪೂರೈಕೆ, ಮೊದಲಾದವುಗಳ ಬಗೆಗೆ ವೈರಿಗಳಿಗೆ ಎಳ್ಳಷ್ಟೂ ತಿಳಿಯಗೊಡಲಿಲ್ಲ; ಮಾತ್ರವಲ್ಲದೆ ಮಿತ್ರರಾಷ್ಟ್ರದವರಿಗೂ ಸಹ ಸೂಚಿಸಿರಲಿಲ್ಲ. ಆಗಿನ ಕಾಲಕ್ಕೆ ಅವರಿಂದ ಆವಿಷ್ಕರಿಸಿದ ಗಂಭೀರ ಮುತ್ಸದ್ದಿತನಕ್ಕೆ ಎಲ್ಲ ರಾಷ್ಟ್ರಗಳು ತಲೆಬಾಗಿಸಿ ಅವರನ್ನು ಮುಕ್ತಕಂಠದಿಂದ ಹೊಗಳಿವೆ. "ಇಪ್ಪತ್ತು ತಲೆತಲಾಂತರಗಳಲ್ಲಿ (twenty generations) ಆಗಲಾರದಷ್ಟು ಸುಧಾರಣೆಯು ಸ್ಟಾಲಿನ್ನರ ಇಪ್ಪತ್ತು ವರುಷಗಳ ಆಳಿಕೆಯಲ್ಲಾಗಿದೆ" ಎಂದು ಆಯಿಝಾಕ್ ಡುಶರ (Isaac Deutscher) ನೆಂಬ ರಾಜಕಾರಣಪಟುವು ತನ್ನ ಪ್ರಾಂಜಲ ಮತವನ್ನು ಅಡಿ ತೋರಿಸಿದ್ದಾನೆ. ಲೆನಿನ್ನರು ಸಮತಾವಾದದ ಮಂತ್ರೋಪದೇಶವನ್ನು ರಶಿಯದ ಜನಸಾಮಾನ್ಯರಿಗೆಲ್ಲ ಮಾಡಿ ಅವರ ಮನಸ್ಸಿನಲ್ಲಿ ಬೆಂಕಿಯನ್ನು ಹೊತ್ತಿಸಿದರು; ಸ್ಟಾಲಿನ್ನರು ಆ ಅಗ್ನಿಗೆ ಆಗಾಗ ತಕ್ಕಷ್ಟು ಎಂಹೆ-ಕಟ್ಟಿಗೆಗಳನ್ನು ಪೂರೈಸಿ ಅದು ದಿನದಿನಕ್ಕೆ ಹೆಚ್ಚೆಚ್ಚು ಪ್ರಜ್ವಲಿಸುವಂತೆ ಮಾಡಿದರು.

ಕೊನೆಯ ಮಾತು

ಅವರಿಗೆ ಇಬ್ಬರು ಹೆಂಡಂದಿರು. ಮೊದಲನೆಯ ಹೆಂಡತಿಯು ಕ್ಷಯರೋಗದಿಂದ ಸಾಯಲು ಮತ್ತೊಬ್ಬಳನ್ನು ಲಗ್ನವಾದರು. ಅವಳ ಹೊಟ್ಟೆಯಿಂದ ಇಬ್ಬರು ಮಕ್ಕಳಿದ್ದಾರೆ. ಮುದುಳಿನಲ್ಲಿ ರಕ್ತಸ್ರಾವವಾಗಿ ಪಾರ್ಶ್ವಬೇನೆ (Paralysis) ಯು ಅವರನ್ನು ಆವರಿಸಿಕೊಂಡಿತು, ಮತ್ತು ಅದರಿಂದಲೇ ದಿನಾಂಕ ೫-೩-೧೯೫೩ ರಂದು ಸ್ವರ್ಗಸ್ಥರಾದರು. ನಿಧನರಾದಾಗ ಅವರಿಗೆ ೭೩ ವರುಷಗಳಾಗಿದ್ದವು. ಪ್ರಾಣೋತ್ಕ್ರಮಣದ ಸಮಯದಲ್ಲಿ ಅವರ ಇಬ್ಬರು ಮಕ್ಕಳು ಅವರ ಬದಿಯಲ್ಲಿದ್ದರು. ಅವರು ವಿಶ್ವದ ಶಾಂತಿ-ಸ್ಥಾಪಕರೆಂದೂ ಮಹಾ ಮುತ್ಸದ್ದಿಯೆಂದೂ ನಮ್ಮ ರಾಷ್ಟ್ರದ ಮುಖಂಡರೆಲ್ಲ ಅವರನ್ನು ಹೊಗಳಿದ್ದಾರೆ. ಜಾರ್ಜ ಮ್ಯಾಲೆಂಕೋವ್ ಮಾಲೆಂಕೋವ್ಹರವರು ಅವರ ಉತ್ತರಾಧಿಕಾರಿಗಳಾಗಿದ್ದಾರೆ. ದಿನಾಂಕ ೯-೩-೧೯೫೩ ರಂದು ಶವದ ಅಂತ್ಯಕ್ರಿಯೆಯು ನೆರವೇರಿತು. ತಮ್ಮ ಅಂತ್ಯಸಂಸ್ಕಾರದ ಭಾಷಣದಲ್ಲಿ ಸ್ಟಾಲಿನ್ನರ ಶಾಂತಿ ಧೋರಣೆಯಲ್ಲಿಯೇ ಮುನ್ನಡೆಯಲಾಗುವದೆಂದು ಮಾಲೆಂಕೋವ್ಹರವರು ಸಾರಿದರು.

ಜಯ ಹಿಂದ

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

(೧೯೫೪ ಮಾರ್ಚದಿಂದ ಎಪ್ರಿಲ್ ವರೆಗೆ)

ದೇವಲಾಪೂರ— ೧೧ ಕ. ಗಂ. ಶಾಲೆಯ ೬, ೭ನೆಯ ಇಯತ್ತೆಯ ವಿದ್ಯಾರ್ಥಿಗಳು ಧಾರವಾಡ ಮತ್ತು ಹುಬ್ಬಳ್ಳಿಗೆ ಶೈಕ್ಷಣಿಕ ಪ್ರವಾಸ ಕೈಕೊಂಡಿದ್ದರು.

ಕುಮಟಾ— ೧೩ ಮುಂಬಯಿ ರಾಜ್ಯದ ಜೀವನ-ಶಿಕ್ಷಣದ ಡೆಪ್ಯುಟಿ ಡೈರೆಕ್ಟರರಾದ ಮೆ। ಬಿ.ಎಂ.ಮೀಮಾಂಸಿಯವರು 'ಪ್ರಾಥಮಿಕ ಶಾಲೆಗಳಲ್ಲಿ ಮೂಲ ಶಿಕ್ಷಣದ ಸ್ಥಾನ ಮತ್ತು ಕಲಿಸುವ ಪದ್ಧತಿಗಳು' ಎಂಬ ವಿಷಯವನ್ನು ಕುರಿತು ಬೆಸಿಕ್ ಶಾಲೆಗಳ ಅಧ್ಯಾಪಕರ ಸಭೆಯಲ್ಲಿ ವ್ಯಾಖ್ಯಾನ ಕೊಟ್ಟರು.

ಚಿಟಗಿ— ೧೩ ಮೆ। ಬಿ.ಎಂ. ಮೀಮಾಂಸಿ, ಡೆ. ಡೈರೆಕ್ಟರ ಅವರು ಬೇಸಿಕ್ ಶಾಲೆಯಲ್ಲಿ ವಸ್ತ್ರ ಸ್ವಾವಲಂಬನ ವಿತರಣ ಸಮಾರಂಭ ಮತ್ತು ಗುರುಕುಲದ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು.

ದೇವರ ಹಿಪ್ಪರಗಿ— ೮ ಮೆ। ಎಜ್ಯುಕೇಶನಲ್ ಇನಸ್ಪೆಕ್ಟರರು ಏ. ಓ., ಡಿ. ಇ. ಆಯ್. ಪ್ರಿ. ಟ್ರೇ. ಕಾ. ಮತ್ತು ಅ। ಡೆ। ಎ। ಇ। ಗಳೊಂದಿಗೆ ಮೂಲೋದ್ಯೋಗದ ಶಾಲೆಗೆ ಭೆಟ್ಟಿಯನ್ನು ಕೊಟ್ಟರು. ಶಿಬಿರಾಗ್ನಿ, ಮನರಂಜನೆಯ ಕಾರ್ಯಕ್ರಮಗಳು ನಡೆದವು.

ಶಿರೂರ— ೧೦ ಮೆ। ಬಿ. ಎಂ. ಮೀಮಾಂಸಿ, ಡೆ। ಡೈರೆಕ್ಟರ ಅವರು ಜೀವನ ಶಿಕ್ಷಣ ಶಾಲೆಗೆ ಎ। ಇ। ಡಾ. ಚಿಕ್ಕರಮನೆ, ಏ.ಓ. ಶ್ರೀ. ಗುಂಜೀಕರ ಅವರೊಂದಿಗೆ ಭೆಟ್ಟಿಕೊಟ್ಟರು.

ಮುದ್ದೇಬಿಹಾಳ— ೨೨ ಶಿಕ್ಷಕ ಶಿಕ್ಷಕಿಯರ ಮುದ್ದೇಬಿಹಾಳ ತಾಲೂಕಾ ಸಮ್ಮೇಲನವು ಪ್ರೊ. ಬಿ. ಟಿ. ಸಾಸನೂರ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ. ಸ್ಥಿ. ಸಿ ಮೋಟಗಿ ವಕೀಲರು ಸ್ವಾಗತಾಧ್ಯಕ್ಷರಾಗಿದ್ದರು. ಶಾರೀರಿಕ ಶಿಕ್ಷಣ ಸಮ್ಮೇಲನದ ಶ್ರೀ. ಎಂ. ಆರ್ ಮುದ್ದೇಬಿಹಾಳ ಅವರೂ ವಸ್ತು ಪ್ರದರ್ಶನದ ಶ್ರೀ. ಎಂ. ಸ್ಥಿ. ಎತ್ತಿನಮನಿ ಸಬ್ ಜಜ್ ಅವರೂ ಕಾರ್ಯಕಲಾಪ ಮತ್ತು ಉದ್ಘಾಟನೆಗಳನ್ನು ಜರುಗಿಸಿದರು. ಶ್ರೀ. ವಾಯ್. ಬಿ. ಎರಗಲ್ ಅವರ ಹಿರಿಯತನದಲ್ಲಿ ಪಾಠಗಳು, ಆಸನ ಮತ್ತು ಸರಕಸ್ ಶ್ರೀ. ಎತ್ತಿನಮನೆಯವರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿಗಳು, ಪ್ರೊ ಸಾಸನೂರ ಅವರಿಂದ ಪಾರಿತೋಷಕ ಸಮಾರಂಭಗಳು ಜರುಗಿದವು.

ಹಿರೇಕೆರೂರ— ೧೧ ಕ. ಗಂ. ಶಾಲೆಯಲ್ಲಿ ಪ್ರಾಂತ ಅಧಿಕಾರರಾದ ಶ್ರೀ. [illegible]ಕ್ಷತೆಯಲ್ಲಿ ಶ್ರೀ. ಕೆ. ಎಸ್. ನರಹರಿಮೂರ್ತಿ, ಅ। ಡೆ। ಎ। ಇ। ಅವರು ಸೇವಾನಿವೃತ್ತರಾಗಲಿದ್ದುದರಿಂದ ಅವರಿಗೆ ಹಿರೇಕೆರೂರ ಗ್ರೂಪ್‌ದ ಶಿಕ್ಷಕ-ಶಿಕ್ಷಕಿಯರು ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಿದ್ದರು.

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

ಲೋಣಿಬುದ್ರುಕ— ೧೩ ಶ್ರೀ. ಗೋಗೇರಿ, ಬೀಟ ಆಫೀಸರ ಅವರ ಹಿರಿಯತನದಲ್ಲಿ 'ಪಾನನಿರೋಧ' ನಿಮಿತ್ತ ಗ್ರೂಪ್ ಶಿಕ್ಷಕರ ಸಮ್ಮೇಲನವು ಜರುಗಿತು. ಧ್ವಜವಂದನೆ, ಚರ್ಜೆ, ಸಂಭಾಷಣೆ, ಸಾಮಾಜಿಕ ಶಿಕ್ಷಣದ ಚಟುವಟಿಕೆ, ವಿವಿಧ ವಿನೋದಾವಳಿ, 'ಪಾನಪ್ರತಿಬಂಧ' ನಾಟಕ ಮುಂತಾದ ಕಾರ್ಯಕ್ರಮಗಳು ಜರುಗಿದವು.

ಮನೋಳಿ— ೧೮ ಶ್ರೀಮತಿ ಗಂಗವ್ವ ಹನಮನಗಸಿ ಅ। ಮಿಸ್ಟ್ರೆಸ್ ಅವರು ಘೋರ ಓಣಿಯಲ್ಲಿ ಸ್ತ್ರೀ ಪ್ರೌಢ ಶಿಕ್ಷಣ ವರ್ಗವನ್ನು ಪ್ರಾರಂಭಿಸಿದ್ದಾರೆ. ವರ್ಗವು ಪ್ರಗತಿಪಥದಲ್ಲಿದೆ.

ಕಣಗಲಿ— ೧೫ ಶ್ರೀ. ಎಸ್. ಆರ್. ವಸ್ತ್ರದ, ಅ. ಎ. ಓ. ಡಿ. ಎಸ್. ಬಿ. ಬೆಳಗಾಂವಿ, ಅವರ ಅಧ್ಯಕ್ಷತೆಯಲ್ಲಿ ಶಾರೀರಿಕ ಶಿಕ್ಷಣದ ಚಟುವಟಿಕೆಗಳು, ಪಂದ್ಯಾಟಗಳು, ಶೈಕ್ಷಣಿಕ ಪ್ರದರ್ಶನ, ಪಾಠದರಿಯ ಪಾಠಗಳು, 'ನಂದಾದೀಪ'ವೆಂಬ ಕೈಬರೆಹದ ಪತ್ರಿಕೆಯ ಉದ್ಘಾಟನೆ, ಪಾರಿತೋಷಕ ವಿತರಣ, ವಿವಿಧ ವಿನೋದಾವಳಿಗಳು ಜರುಗಿದವು.

ಹಿರೇಕುಂಬಿ— ೧೫ ಗ್ರೂಪ್ ಶಿಕ್ಷಕ ಶಿಕ್ಷಕಿಯರ ಸಮ್ಮೇಲನವು ಶ್ರೀ. ಹೆಗಡೆ ಎ. ಓ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಹೂಲಿ ಶಾಲೆಯ ೫ನೆಯ ಇಯತ್ತೆಯ ವಿದ್ಯಾರ್ಥಿ ಶ್ರೀ. ಸಿದ್ದಯ್ಯ ಹಿರೇಮಠ ಇವರು ತಯಾರಿಸಿದ ಮಗ್ಗ ಮತ್ತು ನೆಯ್ದ ಬಟ್ಟೆ ದರ್ಶನೀಯವಾಗಿದ್ದವು. ಶ್ರೀ. ಉದಪುಡಿ ಸ್ಕೂಲ್ ಬೋರ್ಡ ಚೇರಮನ್ನರು ನೂರು ರೂಪಾಯಿ ಬಹುಮಾನ ಕೊಟ್ಟರು. ಅಲ್ಲದೆ ಇತರ ಒಳ್ಳೆಯ ವಿದ್ಯಾರ್ಥಿಗಳಿಗೂ ಇನಾಮುಗಳು ಹಂಚಲ್ಪಟ್ಟವು.

ಹೂವಿನ ಹಿಪ್ಪರಗಿ— ೧೪ ಶ್ರೀ. ವಾಯ್. ಡಿ. ಉಣಕಲ್ ಬೀಟ ಆಫೀಸರ ಇವರ ಅಧ್ಯಕ್ಷತೆಯಲ್ಲಿ ಪಾನ-ಪ್ರತಿಬಂಧದ ಬಗ್ಗೆ ಏಕಾಂಕ ನಾಟಕಗಳು, ಗೀ ಗೀ, ಲಾವಣಿ ಪದಗಳು ಜರುಗಿದವು.

ದೇವೀಹೊಸೂರ— ೧೪ ಶ್ರೀ. ಎನ್. ಕೆ. ಇಂಚಲ ಅ. ಡೆ. ಇ. ಅವರಿಗೆ ಬೆಳಗಾಂವಿ ಜಿಲ್ಹೆಗೆ ವರ್ಗ-ವಾದ್ದರಿಂದ ಶಿಕ್ಷಕರು ಸಂತೋಷಕೂಟವನ್ನು ಏರ್ಪಡಿಸಿ ಅವರನ್ನು ಬೀಳ್ಕೊಟ್ಟರು.

ತಾಂಬೆ— ೨೧ ಕೇತಕಿ ಶಾಲೆಯಲ್ಲಿ ಶ್ರೀ. ಖೋದಾನಪುರ ಅ. ಡೆ. ಇ. ಅವರ ಅಧ್ಯಕ್ಷತೆಯಲ್ಲಿ ಪಾನ-ನಿರೋಧದ ಬಗ್ಗೆ ಅನೇಕ ಕಾರ್ಯಕ್ರಮಗಳು ಜರುಗಿದವು.

ಹೊಕ್ಕುಂಡ— ೧೭ ಶ್ರೀ. ಪಾವಟೆ ಚೆನ್ನಪ್ಪನವರು ಬೀಟ ಆಫೀಸರ ಇವರ ಹಿರಿಯತನದಲ್ಲಿ ಪಾನ-ನಿರೋಧದ ಕಾರ್ಯಕ್ರಮಗಳು ಜರುಗಿದವು.

ಹೆಬ್ಬಾಳಟ್ಟಿ— ೨೦. ಶ್ರೀ. ಪಾವಟೆ ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ ಪಾನನಿರೋಧ ದಿನವನ್ನು ಆಚರಿಸಲಾಯಿತು.

ಹಿಪ್ಪರಗಿ— ೭ ಶಾಲಾ ಬಾಲಕ-ಬಾಲಿಕೆಯರು ಧರ್ಮಶಾಲೆಯ ಎದುರಿನಲ್ಲಿ ಸಾಮಾಜಿಕ ಶಿಕ್ಷಣದ ಅಂಗವಾಗಿ ಸಾರ್ವಜನಿಕರಿಗಾಗಿ ಶಿಬಿರಾಗ್ನಿ ಮತ್ತು ವಿವಿಧ ವಿನೋದಾವಳಿಗಳನ್ನು ಏರ್ಪಡಿಸಿದ್ದರು.

ಪ್ರಾಥಮಿಕ ಶಿಕ್ಷಣ

ಹಿಪ್ಪರಗಿ— ೮ ಲವಾಣಿ ತಾಂಡೆಯ ಶಾಲೆಯು ಜಿಲ್ಲಾ ಸ್ಕೂಲ ಬೋರ್ಡಿನ ಆಡಳಿತಕ್ಕೆ ಸೇರಿದ್ದರಿಂದ ಜನರಿಗೆ ಬಹಳ ಸಂತೋಷವಾಗಿತ್ತು ಮತ್ತು ಸೇರ್ಪಡೆಯ ಕಾರ್ಯಕ್ರಮಕ್ಕೆ ಎಜ್ಯುಕೇಶನಲ್ ಇನ್ಸ್‌ಪೆಕ್ಟರರೂ ಎ. ಓ. ಅವರೂ ಹಾಜರಿದ್ದರು.

ನಾಗವಂದ— ೪ ೨೨-೨-೫೩ ರಂದು ಮೇಲಿನ ವರ್ಗಗಳ ೨೫ ವಿದ್ಯಾರ್ಥಿಗಳು ಉಪಶಿಕ್ಷಕರ ಹಿರಿಯತನದಲ್ಲಿ ಮುಗದ ಮಾಸೂರ ಕೆರೆ, ಕುಮುದ್ವತಿಗೆ ಕಟ್ಟುತ್ತಿರುವ ಪೂಲುಗಳನ್ನು ನೋಡಿ ಬಂದರು.

ಉತ್ತೂರು— ೪ ೨೭-೨-೫೩ ರಂದು ಶ್ರೀ. ಕೆ. ಪಿ. ನಾಡಗೌಡ ವಕೀಲರ ಅಧ್ಯಕ್ಷತೆಯಲ್ಲಿ ಮಳಲಿ ಕನ್ನಡ ಶಾಲೆಯಲ್ಲಿ ಗ್ರುಪ್ ಶಿಕ್ಷಣ ಸಮ್ಮೇಲನವು ಜರುಗಿತು. ಶೈಕ್ಷಣಿಕ ಚರ್ಚೆ, ಮನರಂಜನೆಯ ಕಾರ್ಯಗಳು, ಪಂದ್ಯಾಟಗಳು ಜರುಗಿದವು. ಶ್ರೀ. ಅಪ್ಪಾಸಾಹೇಬ ಲಕ್ಕಾನಿ ವಕೀಲರು ಒಂದು ಬೆಳ್ಳಿಯ ಥಾಲನ್ನು, ಶ್ರೀ. ದೇಶಮುಖರು ಒಂದು ಬೆಳ್ಳಿಯ ಕಪ್ಪನ್ನು ಮುಧೋಳ ತಾಲೂಕ ಪಂದ್ಯಾಟಕ್ಕೆ ಕೊಡಲು ಒಪ್ಪಿಗೆ ವ್ಯಕ್ತ ಮಾಡಿದರು. 'ಬಾಲಚಂದ್ರ' ನಾಟಕ, ಶ್ರೀ. ಲಕ್ಷ್ಮಣ ಕುಮಾರ ಇಂಗಳಗಿ ಇವರ ಸಂಗೀತ ಜರುಗಿದವು. ಶ್ರೀ. ಜಿ. ಎಚ್. ಕಣೇಕಲ್ ಎ. ಡಿ. ಇ. ಆಯ್. ಅವರೂ ಉಪಸ್ಥಿತರಿದ್ದರು.

ಹಿರೇಕುಂಬಿ— ೧೫ ಗ್ರುಪ್ ಶಿಕ್ಷಕರ ಶಿಕ್ಷಣ ಸಮ್ಮೇಲವು ವಿಜೃಂಭಣೆಯಿಂದ ಜರುಗಿತು. ದೇ. ಭ. ಶ್ರೀ. ವೆಂಕರಡ್ಡಿ ಹೂಲಿಯವರು ಉದ್ಘಾಟಿಸಿದರು. ಶ್ರೀ. ಉದಪುಡಿ ಸ್ಕೂ. ಬೋ. ಚೇರಮನ್ನರು ಶೈಕ್ಷಣಿಕ ಪ್ರದರ್ಶನವನ್ನು ಉದ್ಘಾಟಿಸಿದರು. ಶ್ರೀ. ಹೆಗಡೆ ಎ. ಓ. ಅವರ ಅಧ್ಯಕ್ಷತೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳು ಜರುಗಿದವು. ಶ್ರೀ. ಗವಿಸಿದ್ದಪ್ಪ ಬೆಳವಡಿ ಎಂ. ಎಲ್. ಸಿ. ಅವರ ಹಿರಿಯತನದಲ್ಲಿ ಶಾರೀರಿಕ ಚಟುವಟಿಕೆಗಳು ಜರುಗಿದವು.

ಬೆಳವಣಿಕಿ— ೫ ೫ರಿಂದ ೭ನೆಯ ಇಯತ್ತೆಯ ವಿದ್ಯಾರ್ಥಿಗಳಲ್ಲಿ ೫೦ ವಿದ್ಯಾರ್ಥಿಗಳು ಐವರು ಶಿಕ್ಷಕರ ಹಿರಿಯತನದಲ್ಲಿ ಹಂಪೆಯ ಶೈಕ್ಷಣಿಕ ಪ್ರವಾಸವನ್ನು ಮಾಡಿಬಂದರು.

ಭಂಟನೂರ— ೫ ೨೭-೨-೫೩ ರಂದು ಗ್ರುಪ್ ಶಿಕ್ಷಕರ ಸಮ್ಮೇಲನವು ಶ್ರೀ. ತ.ಬ. ಕಮತ, ಅ.ಡೆ.ಎ.ಇ. ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಣಗಿನಹಾಳ— ೬ ವಿದ್ಯಾರ್ಥಿಗಳೂ ಶಿಕ್ಷಕರೂ ಕೂಡಿಕೊಂಡು ಹಂಪೆಯ ಶೈಕ್ಷಣಿಕ ಪ್ರವಾಸವನ್ನು ೨-೩-೫೩ಕ್ಕೆ ಮುಗಿಸಿಕೊಂಡು ಬಂದರು.

ಮೋಟೇಬೆನ್ನೂರ— ೮ ವಿದ್ಯಾರ್ಥಿಗಳೂ ಶಿಕ್ಷಕರೂ ಹಾವೇರಿ, ಬಂಕಾಪೂರ, ಸವಣೂರುಗಳ ಶೈಕ್ಷಣಿಕ ಪ್ರವಾಸ ಮಾಡಿದರು.

ಕೌಜಗೇರಿ— ೬ ಬಾಲ ಅಭ್ಯಾಸ ಮಂಡಳದ ಪರವಾಗಿ 'ಮಲೆನಾಡು ಉತ್ತಮವೋ ಬೇಲಲನಾಡು ಉತ್ತಮವೋ' ಎಂಬ ವಿಷಯವನ್ನು ಕುರಿತು ಚರ್ಚೆ ನಡೆಯಿತು. ೨೫ ರೂ. ಕರ್ನಾಟಕ ವಿಶ್ವ-ವಿದ್ಯಾಲಯಕ್ಕೆ ನಿಧಿ ಕೂಡಿಸಿ ಕೊಡಲಾಯಿತು.

ಬೆನ್ನೂರ— ೮ ಶಾಲೆಯ ವಾರ್ಷಿಕ ತಪಾಸಣಿಯು ೨೭-೩-೫೩ರಂದು ನಡೆಯಿತು. ಅ. ಏ. ಪ್ರಿ. ಅವರೂ ತಾಲ್ಲೂಕ ಸುಪರನಾಯಿಜರರೂ ಬಂದಿದ್ದರು. ಶ್ರೀ. ಮೊಗೂರ ಅವರ ಅಧ್ಯಕ್ಷತೆಯಲ್ಲಿ ಮೂಲ ಶಿಕ್ಷಣದ ಬಗ್ಗೆ ಸಭೆ ಸೇರಿತ್ತು.

ಅಬ್ಬಿಗೇರಿ— ೧ ಉರ್ದು ಶಾಲೆಯ ಶಿಕ್ಷಕ ಸ್ನೇಹವು ಹರಿಜನ ಕೇರಿಯಲ್ಲಿಯ ಸಮಾಜ ಶಿಕ್ಷಣ ವರ್ಗಕ್ಕೆ ಬಂದ ನೂರು ರೂಪಾಯಿ ಸಹಾಯ ಧನದಿಂದ ಒಂದು ಗಡಿಯಾರವನ್ನು ಕ. ಗಂ. ಶಾಲೆಗೆ ಕೊಟ್ಟಿತು. ಇದರ ಅನಾವರಣ ಸಮಾರಂಭವು ೨೮-೨-೫೩ ರಂದು ಶ್ರೀ. ಶಂಕರಗೌಡರು ಸಂ. ಪಾಟೀಲ ಅವರಿಂದ ಆಯಿತು.

ಹುನ್ನೂರ— ೨೨ ಜಮಖಂಡಿ ಗ್ರೂಪ್ ಶಿಕ್ಷಣ ಸಮ್ಮೇಲನವು ಶ್ರೀ. ಗಾಜರೆ ಪ್ರಾ. ಪ್ರಿ.ಗಂ.ಟ್ರೇ. ಕಾಲೇಜ, ಜಮಖಂಡಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಅನೇಕ ಶೈಕ್ಷಣಿಕ ಚಟುವಟಿಕೆಗಳು ಜರುಗಿದವು.

ಸುಂಕಣಿ— ೨೬ ಶ್ರೀ. ಪೂಜ್ಯ ಚಿಕ್ಕಪ್ಪಯ್ಯನವರು ಬಬಲಾದಿ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶಾಲಾ ಕಟ್ಟಡದ ಸಮಿತಿಯು ಏರ್ಪಟ್ಟಿತು. ಶ್ರೀ. ಹಣಮಗೌಡ ಪಾಟೀಲರನ್ನು ಚೇರಮನ್ನರೆಂದು ಆರಿಸಲಾಯಿತು. ಊರ ಜನರು ೭೦೧ ರೂ. ಕೂಡಿಸುವ ವಾಗ್ದಾನ ಮಾಡಿದರು.

ಉಮದಿ— ೨೨ ಜತ್ತ ಭಾಗದ ಶಿಕ್ಷಕರ ಸಮ್ಮೇಲನವು ಶ್ರೀ. ಜೇರೆ, ಡಿ. ಎ. ಆಯ್. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ರಾತ್ರಿ ಮನರಂಜನ ಕಾರ್ಯಕ್ರಮಗಳು ಜರುಗಿದವು.

ಬನಗಾವಿ— ೧೮ ವಾರ್ಷಿಕ ಶಾಲಾ ತಪಾಸಣಿಯು ಜರುಗಿತು. ಶ್ರೀ. ಬಿ. ಬಿ. ಕುಲಕರ್ಣಿ, ಅ. ಏ. ಏ. ಅವರ ಹಸ್ತದಿಂದ ಬಾಲಕರ 'ವಿಚಾರ ಝರಿ' ಎಂಬ ಕೈಬರೆಹದ ಮಾಸಪತ್ರಿಕೆಯ ಉದ್ಘಾಟನೆ ಯಾಯಿತು. ಮನರಂಜನೆಯ ಕಾರ್ಯಕ್ರಮಗಳು ಜರುಗಿದವು.

ಸವದತ್ತಿ— ೨೭ ಸೌ. ಗಂಗಾದೇವಿ ಹಂಪಣ್ಣವರ ಅವರ ಅಧ್ಯಕ್ಷತೆಯಲ್ಲಿ ಸವದತ್ತಿ ತಾಲೂಕ ಗ್ರೂಪ್ ಶಿಕ್ಷಕಿಯರ ಸಮ್ಮೇಲನವು ಜರುಗಿತು. ಈ ತರದ ಸಮ್ಮೇಲವು ಜರುಗಿದುದು ಇದೇ ಮೊದಲನೆಯದು. ಇದಕ್ಕೆ ಅ। ಡೆ। ಎ। ಇ। ಶ್ರೀ. ಎಂ ವ್ಹಿ. ಜೋಶಿ ಬಾಯಿಯವರೇ ಪ್ರೇರಕರು. ಪ್ರದರ್ಶನವು ಪ್ರೇಕ್ಷಣೀಯವಾಗಿತ್ತು. ಮಾದರಿಯ ಪಾಠಗಳು, ವಿದ್ಯಾರ್ಥಿನಿಯರ ಏಕಾಂಕ ನಾಟಕಗಳು ಜರುಗಿದವು. ಅಧ್ಯಕ್ಷಿಣಿಯರು ೫ ರೂ. ಶ್ರೀ. ಬಸವಣ್ಣೆವ್ವ ಹಂಪಣ್ಣವರ ೩ ರೂ. ಶ್ರೀ. ಗಿರಿಗೆವ್ವ ಹಿರೇಮಠ ೧ ರೂ. ಶ್ರೀ. ನೀಲವ್ವ ಕಲ್ಲಿ ೧ ರೂ. ಶ್ರೀ. ಲಿಂಗವ್ವ ಶಿಂಗಾಡಿ ೨ ರೂ. ಶ್ರೀ ಶಿವವ್ವ ಜಾಲೀಕಟ್ಟಿ ೪ ರೂ. ಗಳು ಪಾರಿತೋಷಕವೆಂದು ಕೊಟ್ಟರು. ವಿವಿಧ ವಿನೋದಾವಳಿಗಳೂ ನಡೆದುವು. ಶಿಕ್ಷಕಿಯರ ಸಮ್ಮೇಲನವು ಯಶಸ್ವಿಯಾಗಿ ಕೊನೆಗಂಡಿತು.

ಹುಬ್ಬಳ್ಳಿ— ೨೯ ಜಗದ್ಗುರು ಗುರುಸಿದ್ಧೇಶ್ವರ ಟ್ರೇನಿಂಗ ಕಾಲೇಜ (ಹುಬ್ಬಳ್ಳಿ) ದ ಸ್ನೇಹ ಸಮ್ಮೇಲನವು ಶ್ರೀ. ಎಂ. ಜಿ. ಹಂದ್ರಾಳ, ಪ್ರಿನ್ಸಿಪಾಲ, ಕ. ಗಂ. ಟ್ರೇನಿಂಗ ಕಾಲೇಜ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಧಾರವಾಡ — ೨೮ ಡಾ. ಚಿಕ್ಕರಮನೆ ಅವರ ಅಧ್ಯಕ್ಷತೆಯಲ್ಲಿ ವಾರ್ಷಿಕ ತಪಾಸಣಿಯ ಕಾಲದಲ್ಲಿ ಹೆಣ್ಣುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ ಹಾಗೂ ಪ್ರಾಯೋಗಿಕ ಶಾಲೆಯ ವಿದ್ಯಾರ್ಥಿನಿಯರು ವಿವಿಧ ವಿನೋದಾವಳಿ ಮತ್ತು ಶಾರೀರಿಕ ಶಿಕ್ಷಣದ ಚಟುವಟಿಕೆಗಳನ್ನು ಮಾಡಿ ತೋರಿಸಿದರು. ಕಾರ್ಯಕ್ರಮಗಳು ಪ್ರೇಕ್ಷಣೀಯವಾಗಿದ್ದವು.

ಮುಂಬಯಿ ಸರಕಾರದ

ಕನ್ನಡ ಸ್ಕೂಲ್ ಬುಕ್ ಕಮಿಟಿ, ಧಾರವಾಡ.

ಅವರಿಂದ ಮಂಜೂರಾದ ಪುಸ್ತಕಗಳು.

ಅ.ನಂ	ಪುಸ್ತಕ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೧.	ನಮ್ಮ ಜಗತ್ತು—೪	ಶ್ರೀ. ಸಾನೆ ಮತ್ತು ಪರುಳೆಕರ	ಮ್ಯಾಕ್‌ಮಿಲನ್ ಕಂಪನಿ, ಮುಂಬಯಿ	೨—೮—೦	ಮಾ. ಶಾಲೆಗಳ ೮ನೆಯ ಇಯತ್ತೆಗೆ ಪಠ್ಯ.
೨.	ಹಿಂದೂ ದೇಶದ ಚರಿತ್ರೆ.	ಶ್ರೀ. ಇ. ಡಬ್ಲ್ಯೂ. ಥಾಮ್ಸನ್	ಕ್ರಿಶ್ಚನ್ ಎಜ್ಯುಕೇಶನ್ ಸೊಸಾಯಿಟಿ, ಮದ್ರಾಸ	೨—೪—೦	ಹೈಸ್ಕೂಲುಗಳ ೯, ೧೦, ೧೧ನೆಯ ವರ್ಗಗಳಿಗೆ ಪುರವಣಿ ವಾಚನ
೩.	ಭಾರತ ಇತಿಹಾಸ ಬೋಧಿನಿ—೩	—	ಶ್ರೀ. ಎಸ್. ಎಸ್. ಕುಲಕರ್ಣಿ, ಧಾರವಾಡ	೧—೫—೦	ಕನ್ನಡ ಶಾಲೆಗಳ ೭ನೆಯ ವರ್ಗಕ್ಕೆ ಪಠ್ಯ
೪.	ಭಾರತ ಇತಿಹಾಸ ಬೋಧಿನಿ—೨	—	,,	೧—೧—೦	ಕನ್ನಡ ಶಾಲೆಗಳ ೬ನೆಯ ವರ್ಗಕ್ಕೆ ಪಠ್ಯ
೫.	ಭಾರತ ಇತಿಹಾಸ ಬೋಧಿನಿ—೧	—	,,	೦—೧೩—೦	ಕ. ಶಾ. ೫ನೆಯ ವರ್ಗಕ್ಕೆ ಪಠ್ಯ
೬.	ನವಭಾರತದ ಸಾಂಸ್ಕೃತಿಕ ಇತಿಹಾಸ	ಶ್ರೀ. ಚಿತಳೆ ಮತ್ತು ಲಕ್ಕುಂಡಿ	ಮ್ಯಾಕ್‌ಮಿಲನ್ ಕಂಪನಿ, ಮುಂಬಯಿ	೩—೧—೦	ಮಾ. ಶಾ. ೯, ೧೦, ೧೧ನೆಯ ವರ್ಗಗಳಿಗೆ ಪಠ್ಯ
೭.	ಭಾರತ ಇತಿಹಾಸ ಬೋಧಿನಿ (ಕಂಬಾಯಿನ್ಡ)	—	ಶ್ರೀ. ಎಸ್. ಎಸ್. ಕುಲಕರ್ಣಿ, ಧಾರವಾಡ	೩—೦—೦	ಕನ್ನಡ ಶಾಲೆಗಳ ೫, ೬, ೭ನೆಯ ವರ್ಗಗಳಿಗೆ ಪಠ್ಯ

ಅ.ನಂ.	ಪುಸ್ತಕದ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೮.	ಕನ್ನಡ ನಾಡಿನ ಚರಿತ್ರೆ	ಶ್ರೀ. ಸಿ. ಎ. ಕವಲಿ	ರಾಮಾಶ್ರಯ ಬುಕ್‌ಡಿಪ್ಪೋ, ಧಾರವಾಡ	೦-೧೪-೦	ಕನ್ನಡ ಶಾಲೆಗಳ ೪ನೆಯ ವರ್ಗಕ್ಕೆ ಪಠ್ಯ
೯.	ಭಾರತ ಸಂಸ್ಕೃತಿಯ ಇತಿಹಾಸ ಭಾಗ-೨	ಶ್ರೀ. ಹುಣಶ್ಯಾಳ	,,	೧-೧೪-೦	ಹೈಸ್ಕೂಲುಗಳ ೯, ೧೦, ೧೧ನೆಯ ವರ್ಗಗಳಿಗೆ ಪಠ್ಯ
೧೦.	ಚಿನ್ನುಡಿ ಭಾಗ-೩	ಶ್ರೀ. ಬಸವನಾಳ ಮತ್ತು ಕವಲಿ	ಶ್ರೀ. ಎಸ್. ಎಸ್. ಕುಲಕರ್ಣಿ, ಧಾರವಾಡ	೧-೦-೦	ಕ. ಶಾಲೆಗಳ ೭ನೆಯ ವರ್ಗಕ್ಕೆ ಪಠ್ಯ
೧೧.	ಕನ್ನಡ ಚಿನ್ನುಡಿ ಭಾಗ-೨	,,	,,	೦-೧೧-೦	ಕ. ಶಾಲೆಗಳ ೭ನೆಯ ಇಯತ್ತೆಗೆ ಪಠ್ಯ
೧೨.	ಕನ್ನಡ ಚಿನ್ನುಡಿ ಭಾಗ-೧	,,	,,	೦-೭-೦	,, ,,
೧೩.	ಪತ್ರಗಳ ಪರಿಚಯ	—	,,	೦-೧೦-೦	ಪ್ರಾ. ಶಾ. ಮೇಲಿನ ವರ್ಗಗಳಿಗೆ ಪುರವಣಿ ವಾಚನ
೧೪.	ನಾಡನೆಲೆಗಾರ	ಶ್ರೀ. ಎಸ್. ಬಿ. ಕುಲಕರ್ಣಿ	,,	೧-೦-೦	,,
೧೫.	ದೇಶಿ ಜಮಾಖರ್ಚಿನ ಪಧ್ಧತಿ	ಶ್ರೀ. ವ್ಹಿ. ಎಸ್. ಹೂಲಿ	,,	೧-೬-೦	ಕ. ಶಾ. ೫, ೬, ೭ನೆಯ ವರ್ಗಗಳಿಗೆ ಪುರವಣಿ ವಾಚನ
೧೬.	ಮಾತಿನ ಮುನ್ನಡೆ-೭ನೆಯ ಇಯತ್ತೆಗೆ	ಶ್ರೀ. ಮಾಲಕಾಯಿ, ಹುಣಶ್ಯಾಳ, ಕವಲಿ	,,	೧-೧೦-೦	ಪ್ರಾ. ಶಾ. ೭ನೆಯ ಇಯತ್ತೆಗೆ ಪುರವಣಿ ವಾಚನ
೧೭.	ಮಾತಿನ ಮುನ್ನಡೆ-೬ನೆಯ ಇಯತ್ತೆಗೆ	,,	,,	೧-೪-೦	ಪ್ರಾ. ಶಾ. ೬ನೆಯ ಇಯತ್ತೆಗೆ ಪುರವಣಿ ವಾಚನ

ಅ.ನಂ.	ಪುಸ್ತಕದ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ.
೧೮.	ಭೂಮಂಡಲ ಶೋಧಿನಿ-೧	ಶ್ರೀ. ಎಸ್. ಎಸ್. ಕುಲಕರ್ಣಿ	ಶ್ರೀ. ಎಸ್. ಎಸ್. ಕುಲಕರ್ಣಿ, ಧಾರವಾಡ	೦-೧೨-೦	ಪ್ರಾ. ಶಾ. ೪ನೆಯ ಇಯತ್ತೆಗೆ ಪಠ್ಯ
೧೯.	ನಮ್ಮ ಹಿಂದುಸ್ಥಾನ	ಶ್ರೀ ಮೀನಾ ಮಸಾನಿ. ಅನುವಾದಕರು ಶ್ರೀ. ಎಸ್. ಎಸ್. ಶರ್ಮಾ	ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್, ಅಪೋಲೊ ಬಂದರ, ಮುಂಬಯಿ ೧	೧-೨-೦	ಪ್ರಾ. ಮಾ. ಶಾಲೆಗಳ ಮೇಲಿನ ವರ್ಗಗಳಿಗೆ ಪುರವಣಿ ವಾಚನ
೨೦.	ಅಭಿನವ ಸಂಸ್ಕೃತ ಪ್ರವೇಶ-೨	ಶ್ರೀ. ದೇಶಪಾಂಡೆ ಮತ್ತು ಮಂಡಾಸ	ಶ್ರೀ. ಜೋಶಿ ಮತ್ತು ಲೋಖಂಡೆ ಪೂನಾ ೨	೨-೦-೦	ಮಾ. ಶಾ. ೯ನೆಯ ವರ್ಗಕ್ಕೆ ಪಠ್ಯ
೨೧.	ಶಿಕ್ಷಣ ಮನೋವಿಜ್ಞಾನ	ಡಾ|| ಕುಪ್ಪುಸ್ವಾಮಿ	ಕ್ರಿಶ್ಚನ್ ಲಿಟರೇಚರ ಸೋಸಾಯಿಟಿ, ಪಾರ್ಕಟೌನ, ಮದ್ರಾಸ ೩	೨-೮-೦	ಪ್ರಾ. ಟ್ರೇನಿಂಗ ಕಾಲೇಜುಗಳಿಗೆ ಪುರವಣಿ ವಾಚನ
೨೨.	ಮಾತಿನ ಮುನ್ನಡೆ-೪ನೆಯ ವರ್ಗಕ್ಕೆ	ಶ್ರೀ. ಮಲಕಾಯಿ, ಕವಲಿ ಮತ್ತು ಹುಣಶ್ಯಾಳ	ಶ್ರೀ. ಎಸ್. ಎಸ್. ಕುಲಕರ್ಣಿ, ಧಾರವಾಡ	೦-೧೦-೦	ಪ್ರಾ. ಶಾ. ೪ನೆಯ ವರ್ಗಕ್ಕೆ ಪುರವಣಿ ವಾಚನ
೨೩.	ಗೌರೀಶ ವಾಚನ ಮಾಲೆ-೭	—	,,	೧-೩-೦	ಪ್ರಾ. ಶಾ. ೭ನೆಯ ವರ್ಗಕ್ಕೆ ಪಠ್ಯ
೨೪.	,, -೬	—	,,	೦-೧೩-೦	,, ೬ ,,
೨೫.	,, -೫	—	,,	೦-೧೦-೦	,, ೫ ,,
೨೬.	ಮಾತಿನ ಮುನ್ನಡೆ-೫ನೆಯ ವರ್ಗಕ್ಕೆ	ಶ್ರೀ. ಮಲಕಾಯಿ, ಹುಣಶ್ಯಾಳ ಮತ್ತು ಕವಲಿ	,,	೧-೦-೦	,, ೫ ,, ಪುರವಣಿ ವಾಚನ
೨೭.	ಸಚಿತ್ರ ಸಾಮಾನ್ಯ ವಿಜ್ಞಾನ	ಶ್ರೀ. ಎಲ್. ಆರ್. ಅಕಳವಾಡಿ	ರಾಮಾಶ್ರಯ ಬುಕ್ ಡಿಪ್ಪೋ, ಧಾರವಾಡ	೦-೧೨-೦	ಪ್ರಾ. ಶಾ. ೫ನೆಯ ವರ್ಗಕ್ಕೆ ಪಠ್ಯ
೨೮.	ಸಚಿತ್ರ ಸಾಮಾನ್ಯಜ್ಞಾನ ಮಾಲೆ	,,	,,	೦-೯-೧	,, ೪ ,, ಪಠ್ಯ

ಕ್ರ.ಸಂ.	ಪುಸ್ತಕದ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೩೯.	ಸಚಿತ್ರ ಸಾಮಾನ್ಯ ವಿಜ್ಞಾನ	ಶ್ರೀ ಎಚ್. ಆರ್. ಆಕಳವಾಡಿ	ರಾಮಾಶ್ರಯ ಬುಕ್ ಡಿಪೋ, ಧಾರವಾಡ	೧—೦—೦	ಪ್ರಾ. ಶಾ. ೭ನೆಯ ವರ್ಗಕ್ಕೆ ಪಠ್ಯ
೪೦.	ಭೂಮಂಡಲ ಪರಿಚಯ—೨	,,	,,	೧—೪—೦	,, ೫ ,, ,,
೪೧.	ಭೂಮಂಡಲ ಪರಿಚಯ-೧	,,	,,	೦-೧೨—೦	,, ೪ ,, ,,
೪೨.	ಭೂಮಂಡಲ ಪರಿಚಯ—೩	,,	,,	೧—೮—೦	,, ೬ ,, ,,
೪೩.	ನೂತನ ಭೂಮಿತಿ—೨	ಶ್ರೀ. ಟಿ. ಎ. ಕುಲಕರ್ಣಿ	ಶ್ರೀ ಟಿ. ಎ. ಕುಲಕರ್ಣಿ, ಠಳಕವಾಡಿ, ಬೆಳಗಾಂವಿ	೨—೦—೦	ಮಾ. ಶಾ. ೧೦, ೧೧ ,, ,,
೪೪.	ಭೂಮಿತಿ ಪರಿಚಯ—೨	ಶ್ರೀ. ಕೇಳಕರ ಮತ್ತು ಗೋಖಲೆ	ಮ್ಯಾಕ್‌ಮಿಲನ್ ಎಂಡ್ ಕಂಪನಿ, ಮುಂಬಯಿ	೧-೧೪—೦	ಮಾ. ಶಾ. ೯ನೆಯ ವರ್ಗಕ್ಕೆ ,,
೪೫.	ನಾಗರಿಕ ಅಂಕಗಣಿತ—೨	ಶ್ರೀ. ಎಸ್. ಸಿ. ವಾಲಿಂಬೆ	ಶ್ರೀ, ಎಸ್. ಸಿ. ವಾಲಿಂಬೆ, ಚಿಂತಾಮಣಿನಿವಾಸ, ಸ್ಟೇಶನ್ ರೋಡ. ಅಹಮ್ಮದನಗರ	೧—೮—೦	,, ೯ ,, ,,
೪೬.	ಗದ್ಯ ಪದ್ಯಾವಲಿ	ಶ್ರೀ. ಕೆ. ಬಿ. ಅಂಗಡಿ	ಜಯಬಸವ ಪುಸ್ತಕ ಲಯ, ಗದಗ	೧—೮—೦	ಪ್ರಾ. ಶಾ. ಗಳ ಮೇಲಿನ ವರ್ಗಗಳಿಗೆ ಪುರವಣಿ ವಾಚನ
೪೭.	ಶೈಕ್ಷಣಿಕ ಮಾನಸ ಶಾಸ್ತ್ರದ ಮೂಲ ತತ್ತ್ವಗಳು	ಶ್ರೀ. ಕೆ. ಎಂ. ನವರತ್ನ	ಶ್ರೀ ಕೆ ಎಂ ನವರತ್ನ, ಪಿ.ಡಿ.ಜೆ ಟ್ರೇನಿಂಗ ಕಾಲೇಜ, ವಿಜಾಪುರ	೩ ೧೨—೦	ಪ್ರಾ. ಟ್ರೇ. ಕಾಲೇಜಗಳಿಗೆ ಪುರವಣಿ ವಾಚನ
೪೮.	ಮಗಳಿಗೆ ತಂದೆಯ ಓಲೆಗಳು	ಪಂಡಿತ ಜವಾಹರಲಾಲ ನೆಹರು ಅನುವಾದಕರು ಶ್ರೀ. ಹೊಯ್ಸಳ	ಸಾಹಿತ್ಯ ಭಂಡಾರ, ಹುಬ್ಬಳ್ಳಿ	೧—೪—೦	,,

ಅ.ನಂ	ಪುಸ್ತಕದ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರಾಗಿವೆ,
೩೯.	ಭಾರತದ ನಿರ್ಮಾಪಕರು	ಶ್ರೀ. ರೇವಣ ಶಿದ್ದಪ್ಪ	ಗೌರೀಶಂಕರ ಬುಕ್‌ಡಿಪೋ, ದೇವರಾಜ ಮಾರ್ಕೆಟ, ಮೈಸೂರ	೧—೦—೦	ಮಾ. ಶಾ ೯, ೧೦ನೆಯ ವರ್ಗಗಳಿಗೆ ಪುರವಣಿ ವಾಚನ
೪೦.	ಚಂದ್ರಗುಪ್ತ ವಿಜಯ	ಶ್ರೀ. ಎಚ್. ಎಂ, ಶಂಕರನಾರಾಯಣರಾವ	,,	೧—೮—೦	,,
೪೧.	ದೀಪಗಳ ಮಾಲೆ	ಶ್ರೀ. ಎಸ್- ಸಿ; ಹಿರೇಮಠ	ಶ್ರೀ. ಎಸ್. ಸಿ. ಹಿರೇಮಠ, ಬಸವೇಶ್ವರ ಕಾಲೇಜ, ಬಾಗಲಕೋಟ	೧—೧೨—೦	ಮಾ. ಶಾಲೆಗಳ ಮೇಲಿನ ವರ್ಗ–ಗಳಿಗೆ ಪುರವಣಿ ವಾಚನ
೪೨.	ಆಧುನಿಕ ಮಾನವನ ಹೋರಾಟ	ಶ್ರೀ. ಎಫ್, ಜಿ. ಪಿಯರ್ಸ	ಆಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್, ಅಪೋಲೊ ಬಂದರ, ಮುಂಬಯಿ ೧	೨—೮—೦	ಮಾ. ಶಾ. ೯, ೧೦ನೆಯ ವರ್ಗ–ಗಳಿಗೆ ಮತ್ತು ಪ್ರಾ ಟ್ರೇ. ಕಾಲೇಜಗಳಿಗೆ ಪುರವಣಿ ವಾಚನ,
೪೩.	ಮಹಾತ್ಮಾ ಗಾಂಧಿ	ಶ್ರೀ. ಎಸ್, ವ್ಹಿ. ಹಂಜಿ	ಶ್ರೀ. ಎಸ್. ವ್ಹಿ, ಹಂಜಿ, ಟೀಚರ ಬಸವೇಶ್ವರ ಟ್ರೇ. ಕಾಲೇಜ, ಬಾಗಲಕೋಟ	೧—೮—೦	ಮಾ, ಶಾ. ಮೇಲಿನ ವರ್ಗಗಳಿಗೆ ಮತ್ತು ಪ್ರಾ. ಟ್ರೇ. ಕಾಲೇಜುಗಳಿಗೆ ಪುರವಣಿ ವಾಚನ

ಧಾರವಾಡ
೨೬—೩—೧೯೫೩

(ಸಹಿ) ಡಿ. ವ್ಹಿ. ಚಿಕ್ಕರಮನಿ
ಎಜ್ಯುಕೇಶನಲ್ ಇನಸ್ಪೆಕ್ಟರ ಮತ್ತು
ಪ್ರೆಸಿಡೆಂಟ್, ಸ್ಕೂಲ್‌ಬುಕ್ ಕಮಿಟಿ, ಧಾರವಾಡ

ಗ್ರಂಥಾವಲೋಕನ

ಪುಸ್ತಕದ ಹೆಸರು:— **"ಗಾಂಧೀ ವಿಚಾರ"**

ಪ್ರಕಾಶಕರು:— ಪದವೀಧರ ಜೀವನ ಶಿಕ್ಷಣ ಸಂಘ, ಧಾರವಾಡ.

ಬೆಲೆ:— ೧ ರೂ. ೮ ಆಣೆ. ಪುಟಗಳು:— ೧೬೭.

ಪೂಜ್ಯ ಗಾಂಧೀಜಿಯವರ ಜೀವನ, ವ್ಯಕ್ತಿತ್ವ ಮತ್ತು ಬಹುಮುಖವಾದ ಕಾರ್ಯ ಇವನ್ನು ಕುರಿತು ಜೀವನ ಶಿಕ್ಷಣ ಕೇಂದ್ರದಲ್ಲಿ ತರಬೇತಿ ಹೊಂದಿದ ಹಲವು ಪದವೀಧರರೂ ಬೇರೆ ಕೆಲವು ಮಹನೀಯರೂ ಬರೆದ ೨೪ ಪ್ರಬಂಧಗಳ ಸಂಕಲನವಿದು. ಗಾಂಧೀಜಿಯವರ ಮೆಚ್ಚಿಗೆಯ ವಿಷಯಗಳನ್ನು ಹೃದಯಂಗಮವಾಗಿ, ಸ್ವಾರಸ್ಯವಾಗಿ ನಿರೂಪಿಸಲು ಈ ಗ್ರಂಥದಲ್ಲಿ ಯತ್ನಿಸಲಾಗಿದೆ. ಅವರ ವಿಚಾರ ವೈಖರಿಯ ಮಿಂಚಿನ ಝಳವನ್ನೂ ಇಲ್ಲಿ ಕಾಣಬಹುದಾಗಿದೆ. 'ಸಮತಾವಾದ', 'ಮಹಿಳೆಯರ ಬಗ್ಗೆ ಗಾಂಧೀಜಿ', 'ಪ್ರೇಮ ಮತ್ತು ಅಹಿಂಸೆ', 'ಪ್ರಾರ್ಥನೆ ಹಾಗೂ ಉಪವಾಸ' ಇವುಗಳನ್ನಂತೂ ಓದಿದಂತೆ ಮತ್ತೆ ಓದಬೇಕೆನ್ನಿಸುತ್ತದೆ; ವಿಷಯ ವೈವಿಧ್ಯಕ್ಕೆ ಶೈಲಿಯ ವೈವಿಧ್ಯವು ಕೂಡಿ ಗ್ರಂಥಕ್ಕೆ ಆಕರ್ಷಣೆಯನ್ನು ತಂದಿದೆ. ಕನ್ನಡ ಜನತೆಯು ಸಾದರದಿಂದ ಸ್ವಾಗತಿಸುವ ಗ್ರಂಥವಿದು.

ಪುಸ್ತಕದ ಹೆಸರು:— **"ಹೊಸಶಿಕ್ಷಣ"**

ಅನುವಾದಕರು:— **ಶ್ರೀ ಕಲಹಾಳ ಮಡಿವಾಳಪ್ಪ**

ಪ್ರಕಾಶಕರು:— ಶ್ರೀ ನೀ. ಗೋ. ಗಣಾಚಾರಿ

ಬೆಲೆ: - ೧—೦—೦; ಪುಟಗಳು:— ೫೧.

ಪೂಜ್ಯ ಗಾಂಧೀಜಿಯವರ ಶಿಷ್ಯಾಗ್ರಣಿಗಳಲ್ಲಿ ಓರ್ವರಾದ ಆಚಾರ್ಯ ವಿನೋಬಾರವರು ಸ್ವತಂತ್ರ ಭಾರತಕ್ಕೆ ಬೇಕಾದ ಶಿಕ್ಷಣ, ಇಲ್ಲವೆ ಹೊಸ ಶಿಕ್ಷಣವನ್ನು ಕುರಿತು ಅಲ್ಲಲ್ಲಿ, ಕಾಲಕಾಲಕ್ಕೆ ವ್ಯಕ್ತಮಾಡಿದ ವಿಚಾರ ಪ್ರಣಾಲಿಯನ್ನು ಕನ್ನಡಿಸಿ ಶಿಕ್ಷಣ ಪ್ರಪಂಚದಲ್ಲಿ ದುಡಿಯುವವರೆಲ್ಲರಿಗೆ ಅನುವಾದಕರು ಮುಟ್ಟಿಸಲೆಳಸಿದ್ದಾರೆ. ಜೀವನದ ಸಂಗತಿಯಾಗಿ ಬರುವ ಶಿಕ್ಷಣವು ಉದ್ಯಮ ಮೂಲವಾಗಿ ಎರೆತು ವ್ಯಕ್ತಿಯಲ್ಲಿ ಜೀವನದ ಮೂಲ್ಯಗಳನ್ನು ತುಂಬಿ ಆದರ್ಶ ಸಮಾಜವನ್ನು ನಿರ್ಮಿಸಬಲ್ಲ ಯೋಜನೆಯ ಸೂಕ್ಷ್ಮ ಪರಿಚಯವನ್ನು ವಿನೋಬಾಜಿಯವರ ವಿಚಾರ ಕಿಡಿಗಳ ಕಾಂತಿಯಲ್ಲಿ ಮಿನುಗುವಂತೆ ಮಾಡಲಾಗಿದೆ. ಪೂಜ್ಯ ವಿನೋಬಾರವರ ಹೊಸ ಶಿಕ್ಷಣದ ಬಗೆಗಿನ ವಿಚಾರಗಳು ತರಂಗ-ತರಂಗಗಳಾಗಿ ನಾಡ ಬಾಂದಳದಲ್ಲಿ ತೇಲಿ ಬಂದು ನಾಡವರ ಹೃದಯಕ್ಕೆ ಮುಟ್ಟುವದರಲ್ಲಿ ಸಂದೇಹವೇನಿದೆ ?

ಕಾವ್ಯ: — **"ಭಾವತೀರ್ಥ"**

ಕವಿಗಳು:— **ಡಾ॥ ಡಿ. ಎಸ್. ಕರ್ಕಿಯವರು**

ಪ್ರಕಾಶಕರು:- ಶ್ರೀ ಬ. ಗಂ. ತುರಮರಿ, ಬಿ.ಎ., ಬಿ.ಟಿ. ಉದಯ ಸಾಹಿತ್ಯ ಪ್ರಕಾಶನ, ಬೆಳಗಾವಿ.

ಬೆಲೆ:— ೧—೦—೦; ಪುಟಗಳು: —೬೪.

ಕನ್ನಡ ನಾಡಿನ ವಾಸ್ತುಶಿಲ್ಪದ ಕೇಂದ್ರಗಳಾದ ಹಂಪಿ, ಬನವಾಸಿ, ಬನಶಂಕರಿ, ಬಾದಾಮಿ, ಪಟ್ಟದಕಲ್ಲು, ವಿಜಯಪುರ, ಶ್ರವಣ ಬೆಳಗೊಳ, ಬೇಲೂರು, ಐಹೊಳೆ ಮೊದಲಾದವುಗಳನ್ನು ಕಂಡು ಹೃದಯಾಂತರಾಳದಲ್ಲಿ ಹೊಮ್ಮಿ ಬಂದ ಭಾವ ಭಾವನೆಗಳನ್ನು ಶ್ರೀ ಕರ್ಕಿಯವರು ಒಳ್ಳೆಯ ಆಕರ್ಷಕವಾಗುವಂತೆ ಮೃದು-ಮಧುರ ಮಾತುಗಳಲ್ಲಿ ವ್ಯಕ್ತಗೊಳಿಸಿದ್ದಾರೆ. 'ತುಂಗಭದ್ರೆಯ ಹಾಡು', 'ಗೋಲಗುಮ್ಮಟ', 'ಗೋಮಟ ಶಿಲ್ಪಿಗೆ' ಈ ಕವನಗಳನ್ನು ಎಷ್ಟು ಸಲ ಹಾಡಿದರೂ ತೃಪ್ತಿಯಾಗದು. ಅಷ್ಟೊಂದು ರಸವತ್ತಾಗಿ ಕವಿಯ ಭಾವನಾ ವಿಲಾಸ, ಕವಿತ್ವ ಶಕ್ತಿ, ಶೈಲಿಯ ಮಧುರತೆಗಳು ಅಲ್ಲಿ ತೇಲಿ ಬಂದಿವೆ. ಕವಿಯು ವರ್ಣಿಸಿದ ಕ್ಷೇತ್ರಗಳಲ್ಲಿ ಜಲ ಪ್ರಧಾನವಾದ ಸನ್ನಿವೇಶದಲ್ಲಿ ಇದ್ದವುಗಳೇ ಹೆಚ್ಚಾಗಿದ್ದು ಇವೆಲ್ಲವುಗಳ ಪಾವನ ತೀರ್ಥದಿಂದ ನಾಡು ಪಾವನತರ, ನಾಡಿನ ಮನೋಭಾವವು ಪಾವನತಮವಾಗಿ ಪರಿಣಮಿಸುವಂತಿದೆ. ತೀರ್ಥ ಕ್ಷೇತ್ರ ಸಂಚಾರಕರಾಗಿ ಈ ಶ್ರೇಷ್ಠ ಕವನ ಸಂಗ್ರಹವನ್ನು ನಾಡಿಗೆ ನೀಡಿದ ಶ್ರೀ. ಕರ್ಕಿಯವರಿಗೆ ನಾಡು ಋಣಿಯಾಗಲೇಬೇಕು.

(೨೫ನೆಯ ಪುಟಕ್ಕೆ ಮುಂದುವರೆದಿದೆ)

ಧಾರವಾಡ ಭಾಗದ ಜಿಲ್ಲಾ ಮತ್ತು ಮುನಸಿಪಲ ಸ್ಕೂಲ್‌ಬೋರ್ಡುಗಳ

ಚೇರಮನ್ನರ ಪರಿಷತ್ತು

ಧಾರವಾಡ— ೩೮. ಧಾರವಾಡ ಭಾಗದ ಜಿಲ್ಲಾ ಮತ್ತು ಮುನ್ಸಿಪಲ್ ಸ್ಕೂಲು ಬೋರ್ಡುಗಳ ಚೇರಮನ್ನರ ಪರಿಷತ್ತು ೫-೬-೧೯೫೩ ರಂದು ಸೇರಿತು. ಈ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಧಾರವಾಡ ಜಿಲ್ಲಾ ಸ್ಕೂಲ್ ಬೋರ್ಡಿನ ಚೇರಮನ್ನರಾದ ಶ್ರೀ. ಸಿ. ಕೆ. ಕುಲಕರ್ಣಿ ವಕೀಲರು ಅಲಂಕರಿಸಿದ್ದರು. ವಿಜಾಪುರ, ಹುಬ್ಬಳ್ಳಿ, ಗದಗ ಜಿಲ್ಲಾ ಮತ್ತು ಮುನಸಿಪಲ್ ಸ್ಕೂಲು ಬೋರ್ಡುಗಳ ಚೇರಮನ್ನರು ಶ್ರೀ. ರಾ. ರಾ. ಕುಪ್ಪಸದ, ಶ್ರೀ. ಎಸ್. ಎಸ್. ಗವಿಮಠ, ಶ್ರೀ. ಆರ್. ಎಲ್. ಪಾಟೀಲ, ಎ. ಓ. ಅವರೂ ಆಮಂತ್ರಣದ ಮೇರೆಗೆ ಮತ್ತು ಸರ್ವ ಶ್ರೀ. ಈರಡ್ಡಿ, ಹಿರೇಗೌಡರ, ನಾಡಗೇರ, ಅಂಕಲಕೋಟಿ, ಸವಣೂರ, ಕೇದಾರ, ಪಾಟೀಲ, ಕ್ಯಾಟಿನೋ, ಹಿ. ಎಸ್. ಪಾಟೀಲ ಮುಂತಾದ ಸ್ಕೂಲು ಬೋರ್ಡುಗಳ ಮೆಂಬರರು ಮತ್ತು ವ್ಹಾಯಿಸ ಚೇರಮನ್ನ ಹಾಗು ವಿಶಾಲ ಕರ್ನಾಟಕದ ಸಂಪಾದಕರಾದ ಶ್ರೀ. ಎಚ್. ಆರ್. ಇಟಗಿ ವಕೀಲರೂ ಪ್ರೇಕ್ಷಕ ಆಗಮಿಸಿದ್ದರು. ಶ್ರೀ. ಸಿ. ಕೆ. ಕುಲಕರ್ಣಿ ಅವರು ಸಭೆಯು ಸಭ್ಯಗೃಹಸ್ಥರನ್ನು ಸ್ವಾಗತಿಸಿದರು‌ರಾಗಿ ಈ ಪರಿಷತ್ತಿನಲ್ಲಿ ಕೆಳಗೆ ಕಾಣಿಸಿದ ಗೊತ್ತುವಳಿಗಳು ಪಾಸಾದವು. ಅವುಗಳ ಸಾರವು ಇಂತಿದೆ.—

೧. ವಿದ್ಯಾಖಾತೆಯ ಆಡಳಿತದ ಪುನಸ್ಸಂಘಟನೆಯನ್ನು ಮಾಡಿದುದಕ್ಕಾಗಿ ಪ್ರಾಗತಿಕ ವಿಚಾರದ ಮತ್ತು ಪ್ರಾಯೋಗಿಕ ದೃಷ್ಟಿಯ ವಿದ್ಯಾಖಾತೆಯ ಮಂತ್ರಿಗಳನ್ನು ಈ ಪರಿಷತ್ತು ಅಭಿನಂದಿಸುತ್ತದೆ.

೨. ೧೯೪೭ರಲ್ಲಾದ ಪಿ ಇ. ಕಾಯಿದೆಯನ್ನು ಕುರಿತು ವಿಚಾರ ಮಾಡಲು ವಿದ್ಯಾಮಂತ್ರಿಗಳು ಮುಂಬಯಿ ರಾಜ್ಯದ ಎಲ್ಲ ಸ್ಕೂಲ್ ಬೋರ್ಡುಗಳ ಪರಿಷತ್ತನ್ನು ಪುನಸ್ಸಂಘಟನೆಯು ಕಾರ್ಯಕಾರಿ ಆಗುವ ಮೊದಲು ಕರೆಯಬೇಕು.

೩. ೧೯೪೭ ರಲ್ಲಾದ ಪ್ರಾಥಮಿಕ ಶಿಕ್ಷಣ ಕಾಯಿದೆಯಿಂದ ಯಾವ ಲಾಭಗಳೂ ಆಗದಂತೆ ಕಂಡು ಬರುವದರಿಂದ ಪ್ರಾಥಮಿಕ ಶಿಕ್ಷಣದ ಆಡಳಿತಾಧಿಕಾರಗಳನ್ನೆಲ್ಲ ಸ್ಕೂಲ ಬೋರ್ಡಿಗೆ ಪುನಃ ಕೊಡಬೇಕು.

೪. ವರ್ಗಾವರ್ಗಿಯ ಅಧಿಕಾರವು ಎ. ಓ. ಅವರಿಗೆ ಇರಬೇಕು ಮತ್ತು ಅವರು ಸ್ಕೂಲ ಬೋರ್ಡ ಚೇರಮನ್ನರ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳ ಒಪ್ಪಿಗೆಯನ್ನು ಈ ಸಂಬಂಧವಾಗಿ ಪಡೆದುಕೊಳ್ಳಬೇಕು.

೫. ಈಗಿರುವ ದ್ವಿದಳ ಆಡಳಿತೆಯು ರದ್ದು ಮಾಡಲ್ಪಡಬೇಕು, ಏಕೆಂದರೆ ಇದರಿಂದ ಅನೇಕ ತೊಂದರೆಗಳು ಸೀಗಿ ಹಣದ ಉಳಿತಾಯವನ್ನು ಮಾಡಲು ಬರುವದು.

೬. ಸ್ವತಂತ್ರ ಕೆಲಸ, ಎಸ್. ಆರ್. ಎಸ್.ಗಳ ಅಂದಾಜುಗಳನ್ನು ಮಂಜೂರ ಮಾಡುವ ಅಧಿಕಾರವು ಸ್ಕೂಲುಬೋರ್ಡುಗಳಿಗೆ ಇರತಕ್ಕದ್ದು.

೭. ಹಳೆಯ ಶಾಲಾ ಕಟ್ಟಡಗಳ ರಿಪೇರಿ ಮಾಡಿಸುವದಾಗಲಿ ಹೊಸದಾಗಿ ಕಟ್ಟಿಸುವದಾಗಲಿ ಶಕ್ಯವಾಗಿಲ್ಲವೆಂಬುದನ್ನು ಗಮನಿಸಿ ಸರಕಾರವು ಸ್ಕೂಲ ಬೋರ್ಡುಗಳಿಗೆ ಹಣ ಒದಗಿಸುವ ವ್ಯವಸ್ಥೆ ಮಾಡಬೇಕು.

ಚೀರಮನ್ನರ ಪರಿಷತ್ತು

೮. ಸರಕಾರಕ್ಕೆ ನೇರವಾಗಿ ಸಂಬಂಧವಿರುವ ಮುನ್ಸಿಪಾಲಿಟಿಗಳು ತಮ್ಮ ಆದಾಯದ ಕೆಲ ಹಣವನ್ನು ಶಾಲಾ ಕಟ್ಟಡಗಳ ರಚನೆಗೆ ತೆಗೆದಿರಿಸಬೇಕೆಂದು ಸರಕಾರವು ನಿರ್ದೇಶಿಸಬೇಕು.

೯. ಪ್ರತಿಯೊಂದು ಸ್ಕೂಲ ಬೋರ್ಡಿಗೆ ಎಂಜಿನಿಯರ ಸಿಬ್ಬಂದಿಯನ್ನು ಇಟ್ಟು ಸರಕಾರವು ಕಟ್ಟಡಗಳನ್ನು ತಪಾಸು ಮಾಡಿಸಬೇಕು.

೧೦. ಪ್ರಾಥಮಿಕ ಶಾಲಾ ವಾರ್ಷಿಕ ಪರೀಕ್ಷೆಗಳನ್ನು ಶಾಲಾ ಮಾಸ್ತರರೇ ತೆಗೆದುಕೊಳ್ಳುವದನ್ನು ನಿಲ್ಲಿಸಿ, ಮೊದಲಿನಂತೆ ತಪಾಸಣಿಯ ಅಧಿಕಾರಿಗಳೇ ತೆಗೆದುಕೊಳ್ಳುವಂತೆ ಮಾಡಬೇಕು.

೧೧. ಹಾಜರಿ ತಪಾಸಣಿ ಅಧಿಕಾರಿಗಳನ್ನು ಪುನಃ ನಿಯಮಿಸುವ ಆಲೋಚನೆಯನ್ನು ಸರಕಾರವು ಮಾಡಬೇಕು.

೧೨. ಸ್ಕೂಲ ಬೋರ್ಡ ಮೆಂಬರರ ಅವಧಿಯು ಈಗಿರುವ ಮೂರು ವರುಷದ ಬದಲು ೫ ವರ್ಷ ಮಾಡಬೇಕು.

೧೩. ಮುನಸಿಪಲ್ ಸ್ಕೂಲುಬೋರ್ಡುಗಳು ತಮ್ಮ ಆಡಳಿತ ವೆಚ್ಚ ನಿರ್ವಹಿಸಿಕೊಂಡು ಹೋಗಲ ಶಕ್ಯವಾಗುವಂತೆ ಸರಕಾರವು ೧೦೦ಕ್ಕೆ ೭೫ರಷ್ಟು ಸಹಾಯ ಧನವೀಯುವ ವಿಚಾರ ಮಾಡಬೇಕು.

(೨೩ನೇ ಪುಟದಿಂದ ಮುಂಪೆ ವರೆದುದು.)

ಗ್ರಂಥಾವಲೋಕನ

ಪುಸ್ತಕದ ಹೆಸರು:— **“ದೇವತಾತ್ಮಾ”**
ಬರೆದವರು:—**ಶ್ರೀ ದೊಡ್ಮನೆ ಮಹಾದೇವಿಯಮ್ಮ**
ಪ್ರಕಾಶಕರು:— **ಶ್ರೀ ಬಿಂದು ಮಾಧವ ಬುರ್ಲಿ,**
ಮಿಂಚಿನಬಳ್ಳಿ, ಚಾವಡಿ, ಧಾರವಾಡ.
ಪುಟಗಳು:—೯೬; ಬೆಲೆ:—೧-೦-೦ (ಸಾದಾಪ್ರತಿ)

“ಪ್ರಕೃತಿ ಸೌಂದರ್ಯದ ಭಾಂಡಾರವಾದ ಹಿಮಾಲಯ” ಪ್ರವಾಸನ ವಿವರಗಳಿಂದ ಕೂಡಿದ ಈ ಪುಸ್ತಕವು ಅಭಿಲಾಷಿಗಳಿಗೆ ಕೈಪಿಡಿಯಾಗಿ, ಪ್ರವಾಸದಲ್ಲಿ ತೊಡಗಿದವರಿಗೆ ಕೈದೀವಿಗೆಯಾಗಿ, ಉದಾಸೀನರಿಗೆ ಕುತೂಹಲವನ್ನು ಕೆರಳಿಸುವ ಸಾಧನವಾಗಿ ಪ್ರಕಟಗೊಂಡಿದೆ. ಮಹಾದೇವಿಯಮ್ಮನವರ ಆದರ್ಶ ಜೀವನವು ಸಂಕ್ಷೇಪವಾಗಿ ಇಲ್ಲಿ ಇಣಿಕಿದೆ. ಲೇಖಿಕೆಯನ್ನೊಳಗೊಂಡು ಒಟ್ಟು ಐವರು ಭಗಿನಿಯರು ಹಿಮಾಲಯದಲ್ಲಿ ನೋಡಲೇಬೇಕಾದ ಐದು ಸ್ಥಳಗಳನ್ನು “ಪಂಚಧಾಮ”ಗಳನ್ನು ಸಂದರ್ಶಿಸಲೆತ್ನಿಸಿದ ಸಂಗತಿಯು ಇಲ್ಲಿ ವಿವರಿಸಲ್ಪಟ್ಟಿದೆ. ಹಿಮಾಲಯದ ಪ್ರಾಕೃತಿಕ ಸೌಂದರ್ಯ, ಘನತೆ, ಸಂಬಂಧಿಸಿದ ಪೌರಾಣಿಕ ಸಂಗತಿಗಳ ಝುಳುಕು ಅವುಗಳನ್ನು ಪೋಣಿಸತಕ್ಕ ರಾಷ್ಟ್ರೀಯತೆ-ಇವೆಲ್ಲವನ್ನು ಈ ಗ್ರಂಥದಲ್ಲಿ ಕಾಣಬಹುದು. “ನಯನರಂಜಕವಾದ ಹಚ್ಚಹಸರಿನ ಸೀರೆಯನ್ನು ಉಟ್ಟು, ಬಿಸಿನೀರಿನಂತಹ ಶ್ರಮಪರಿಹಾರಕ ಉಪಚಾರಗಳಿಂದ,” “ಯಾತ್ರಿಕ ಮಕ್ಕಳನ್ನು ಬರಮಾಡಿಕೊಂಡು ಸತ್ಕರಿಸುವ” ಪ್ರಕೃತಿ ಮಾತೆಯಂತಿರುವ ಹಿಮಾಲಯವು ಜಟಾಧರನೆಂಬಂತೆ ಕಣ್ಣೆದುರಿಗೆ ನಿಲ್ಲುವದು ಈ ಗ್ರಂಥವನ್ನು ಓದುವದರಿಂದ.

ಪ್ರ. ಸಂ.

೫ನೆಯ ಆವೃತ್ತಿ

ಶೈಕ್ಷಣಿಕ ಮನೋವಿಜ್ಞಾನ

ಪುಟ ೨೫೦

ಬರೆದವರು: ಡಾ| ವಿ. ಕೊ. ಜವಳಿ M. Ed. Ph. D. M.A. (ಕೋಲಂಬಿಯಾ)

ಬೆಲೆ ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಇತ್ತೀಚಿಗೆ ಹೊಸ ಹೊಸ ಸಂಶೋಧನೆಗಳು ಆಗಿವೆ. ಅವುಗಳ ಪರಿಚಯವನ್ನು ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಮಾಡಿ-ಕೊಡುವುದಕ್ಕಾಗಿ ಈ ಪುಸ್ತಕವು ಬರೆಯಲ್ಪಟ್ಟಿದೆ. ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಅವಶ್ಯವಾದ ಶೈಕ್ಷಣಿಕ ಅಭ್ಯಾಸ ಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ಶೈಲಿಯು ಎಲ್ಲರಿಗೂ ತಿಳಿಯು-ವಂತೆ ಬಹಳ ಸುಲಭವಾಗಿದೆ. ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು:

ಆಕಳವಾಡಿ ಬುಕ್ ಡಿಪೋ ಧಾರವಾಡ.

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಳೆಯವರ "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮುಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ವ್ಹಿ. ಬೋಳೆ ಫುಲಬಾಗ ೨೨೪/೮೭ ಬೆಳಗಾವಿ

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ—ಹುಣ್ಣಿವೆಗಳು

ಬೆಲೆ: ೦-೧೨-೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ—೧ ಇತಿಹಾಸ ಬೆಲೆ ೦-೬-೦

,, ೨ ಭೂಗೋಲ ಬೆಲೆ ೦-೬-೦

,, ೩ ಭೂಮಿತಿ-ಜಮಾಖರ್ಚ ೧-೬-೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

…ವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. **ಬೆಲೆ ೧-೧೨-೦,** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.

ಇಂದೇ ತರಿಸಿರಿ! ಮರೆಯಬೇಡಿರಿ!

ಮೆ॥ ಗ. ಜ. ಗುಂಜೀಕರ, ಎ. ಓ. ಜಿಲ್ಲಾ ಸ್ಕೂಲ್‌ಬೋರ್ಡ, ವಿಜಾಪುರ

ಮೆ॥ ಎ. ಎಚ್. ದಳವಾಯಿ, ಡೆ. ಎ. ಇ. ಜಿಲ್ಲಾ, ವಿಜಾಪುರ

ಇವರುಗಳ ಮುನ್ನಡಿ ಮತ್ತು ಪ್ರೋತ್ಸಾಹಗಳಿಂದ **ಪ್ರಾಥಮಿಕ, ಮಾಧ್ಯಮಿಕ** ಹಾಗೂ **ಮೂಲ** ಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳುಳ್ಳದ್ದು **ಬೆಲೆ ೮ ಆಣೆ.**

೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೨೫ ಪುಟಗಳುಳ್ಳದ್ದು

ಬೆಲೆ ೧೨ ಆಣೆ

ಬ. ದು. ಹಿರೇಮಠ ಮಾಸ್ತರ, ವಿಜಾಪುರ

ಸಿದ್ಧವಾಗಿವೆ ಮಾರಾಟಕ್ಕೆ ಸಿದ್ಧವಾಗಿವೆ

ನೀವು ಬಯಸಿದ ಇತಿಹಾಸದ ಅತ್ಯುತ್ತಮ ಹೊತ್ತಿಗೆಗಳು!

೫ನೆಯ ವರ್ಗಕ್ಕೆ:–ಭಾರತೀಯ ಇತಿಹಾಸ ಪ್ರಕಾಶ, ೧ನೆಯ ಪುಸ್ತಕ (ಅತಿ ಪ್ರಾಚೀನಕಾಲದಿಂದ ಮೊದಲ್ಗೊಂಡು ಶ್ರೀ. ಶಂಕರಾಚಾರ್ಯರ ಜೀವನದ ವಿವರಗಳನ್ನೊಳಗೊಂಡಿದೆ). **ಬೆಲೆ ೦—೧೫—೦**

೬ನೆಯ ವರ್ಗಕ್ಕೆ:–ಭಾರತೀಯ ಇತಿಹಾಸ ಪ್ರಕಾಶ ೨ನೆಯ ಪುಸ್ತಕ (ಇಸ್ಲಾಂ ಧರ್ಮದ ಹುಟ್ಟು ಹಾಗೂ ಬೆಳಗೆಯಿಂದ ಮೊದಲ್ಗೊಂಡು ಮರಾಠಾ ರಾಜ್ಯದ ವಿಸ್ತರಣೆ ಮತ್ತು ಅದರ ಅಳಿಗಾಲದ ವಿವರಗಳನ್ನೊಳಗೊಂಡಿದೆ) **ಬೆಲೆ ೧—೯—೦**

೭ನೆಯ ವರ್ಗಕ್ಕೆ:–ಭಾರತೀಯ ಇತಿಹಾಸ ಪ್ರಕಾಶ, ೩ನೆಯ ಪುಸ್ತಕ (ಭಾರತಕ್ಕೆ ಯುರೋಪೀಯರ ಆಗಮನ ಹಾಗೂ ಸ್ಪರ್ಧೆಯಿಂದ ಮೊದಲ್ಗೊಂಡು ಭಾಗತದಲ್ಲಿ ಇಂದಿನ ಪ್ರಜಾರಾಜ್ಯದ ಸ್ಥಾಪನೆಯ ವಿವರಗಳನ್ನೊಳಗೊಂಡಿದೆ.) **ಬೆಲೆ ೨—೨—೦**

ಶ್ರೀ. ರಂ. ಕೃ. ಲಕ್ಕುಂಡಿ

(ಸೇವಾನಿವೃತ್ತ ಪ್ರಿನ್ಸಿಪಾಲರು, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಅವರಿಂದ ರಚಿತವಾದುವು.)

ಸುಲಭ ಮತ್ತು ಚಿತ್ತಾಕರ್ಷಕ ಶೈಲಿ! ಯೋಗ್ಯ ವಿಷಯದ ಭಂಡಾರ! ವಿಪುಲ ಶೈಕ್ಷಣಿಕ ಚಿತ್ರಗಳು! ಇತಿಹಾಸ ತಜ್ಞರಿಂದ ಪ್ರಶಸ್ತಿ ಪಡೆದುವು! ಸರಕಾರದಿಂದ ಮಂಜೂರು ಪಡೆದುವು. ಇಂದೇ ಕೊಳ್ಳಿರಿ.

ಪ್ರಕಾಶಕರು:—ದಿ ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

ವಿಶೇಷ ಪ್ರಕಟನೆ!

ಇಂದೇ ಸಂಗ್ರಹಿಸಿರಿ! **ವಿದ್ಯಾರ್ಥಿ, ಶಿಕ್ಷಕರಿಗೆ ಅತ್ಯುಪಯುಕ್ತ!**

೧. **ಮೂಲ ಶಿಕ್ಷಣ ಮೀಮಾಂಸೆ** ಲೇಖಕರು:–**ಶ್ರೀ. ಹ.ಗ. ಜೋಶಿ.** ಬೆಲೆ ೧-೧೨-೦

(ಮಾನ್ಯ ದಿವಾಕರರ ಮುನ್ನುಡಿ; ಮೂಲ ಶಿಕ್ಷಣದ ಪ್ರೇಮಿಗಳು ಇದನ್ನು ಅವಶ್ಯ ಸಂಗ್ರಹಿಸಲೇ ಬೇಕು)

೨. **ಹಿಂದೀ ಶಿಕ್ಷಣ ಮಾಲೆ–೧** ಲೇಖಕರು:–**ಶ್ರೀ. ಗುರುನಾಥ ಜೋಶಿ.** ಬೆಲೆ ೦-೧೪-೦

(ಮನೆಯಲ್ಲಿಯೇ ಶಿಕ್ಷಕರ ಸಹಾಯವಿಲ್ಲದೆ ಹಿಂದೀ ಕಲಿಯಲಿಕ್ಕೆ ಉತ್ತಮ)

ಇವಲ್ಲದೆ ಕಾದಂಬರಿಗಳು **ಎನ್ಕೆ ಏಕಾಂಕ** (೨—೦—೦) **ಭೂಮಿಗಿಳಿದ ತಾರೆ** (೧—೮—೦)

ಮಕ್ಕಳಿಗೆ:—**ಚುಟುಕ** (೦—೮—೦) **ದಿವ್ಯ ಕಥೆಗಳು** (೦—೮—೦)

ಪ್ರ. ಮತ್ತು ಮಾರಾಟಗಾರರು:-**ಹಿಂದಮಾತಾ ಮುದ್ರಣಾಲಯ, ಗಾಂಧಿಚೌಕ, ಧಾರವಾಡ.**

ಹೊಸ ಪುಸ್ತಕವು! ತಯಾರಾಗಿ ಬಂದಿದೆ! ತ್ವರೆ ಮಾಡಿರಿ!

—ಕನ್ನಡ-ಕನ್ನಡ ಶಬ್ದಕೋಶ—

ಬರೆಹಗಾರರು:—H. V. ರಮಾಕಾಂತರಾವ್. B. A (Hons)

ಬೆಲೆ:—ಆರು ರೂಪಾಯಿಗಳು ಮಾತ್ರ.

ಈ ಪುಸ್ತಕದಲ್ಲಿ ೩೫ ಸಾವಿರ ಶಬ್ದಗಳ ಸಂಗ್ರಹವು, ಒಂದುವರೆಲಕ್ಷ ಅರ್ಥ ವಿವರಣೆಯೊಳಗೂಡಿ ತಯಾರಾಗಿವೆ. ಮಂಗಳೂರಿನ ಅಂದವಾದ ಮುದ್ರಣದ ೬೬೫ ಪುಟಗಳ ಈ ಪುಸ್ತಕವು ಮೇಲ್ತರದ ಕೋಶ ಗ್ರಂಥವಾಗಿದೆ. ಇದಷ್ಟು ದೊಡ್ಡ ಕೋಶಗ್ರಂಥವು ಇನ್ನೊಂದಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. V. P. ಯಿಂದ ಬೇಡುವವರು ೧ ಹಣವನ್ನು ಮುಂಗಡ ಕಳಿಸಬೇಕು.

ಇದಲ್ಲದೆ ನಮ್ಮಲ್ಲಿ ಶಾಲೋಪಯೋಗದ ಎಲ್ಲ ಬಗೆಯ ಪುಸ್ತಕಗಳು,
ಕಥೆಯ ಪುಸ್ತಕಗಳು, ಶಾಲೆಯ ಹಾಜರಿ ಪುಸ್ತಕಗಳು ಸಿಗುತ್ತವೆ.

ಪ್ರಕಾಶಕರು:— **ಕೇ. ಎಸ್ ಕುಲಕರ್ಣಿ ಬುಕ್‌ಡಿಪೋ**
ಸ್ಟೇಶನ್‌ರೋಡ್, ಹುಬ್ಬಳ್ಳಿ.

ಪುಟ ೨೮೦) **ಮೂಲ ಶಿಕ್ಷಣ** (**ಬೆಲೆ: ೩-೦-೦**

ಲೇಖಕರು:— **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.
(ಪ್ರಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.
ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು
ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

Regd. No, B. 5375

ಗೌರೀಶ ಗ್ರಂಥ ಪ್ರಕಟನಾಲಯ, ಧಾರವಾಡ.

ಹೊಸ ಅಭ್ಯಾಸ ಪತ್ರಿಕೆಯನ್ನನುಸರಿಸಿ

ವಿದ್ಯಾರ್ಥಿಗಳ ಮನಂಬುಗುವಂತೆ ಬರೆಯಲಾದ

ಸಚಿತ್ರ

ನಾಗರಿಕನೀತಿ ಅಥವಾ ಪೌರನೀತಿ (ಸಿವ್ಹಿಕ್ಸ)

(ಶಾಲೆಯ ಶಿಕ್ಷಕರು ಹಾಗು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಹೊತ್ತಿಗೆಗಳು)

ಇಂದಿನ ಬಾಲಕ ನಾಳಿನ ನಾಗರಿಕ. ಸ್ವತಂತ್ರ ಭಾರತದ ಪ್ರಜಾಸಾರ್ವಭೌಮ ರಾಜ್ಯದಲ್ಲಿ ಪ್ರತಿಯೊಬ್ಬ ಬಾಲಕನೂ ಉತ್ತಮ ನಾಗರಿಕನಾಗಿ ಮಾರ್ಪಟ್ಟರೆ ಅದು ಭಾರತದ ಭಾವೀ ಭವಿತವ್ಯದ ಚಿಹ್ನವೆಂದು ಭಾವಿಸಬೇಕು; ಅಂತೆಯೇ ಇಂದಿನ ಪ್ರಭುತ್ವ ಬಾಲಕರಿಗೆ **ಪೌರನೀತಿ** ಅಥವಾ **ನಾಗರಿಕ** ನೀತಿಯನ್ನು ಕಲಿಸಬೇಕೆಂಬ ಅಭಿಲಾಷೆಯುಳ್ಳದ್ದಾಗಿದೆ. ಇದನ್ನು ಗಮನಿಸಿಯೇ ಅನುಭವಿಕ ವಿದ್ವಾಂಸರಿಂದ ಕತೆ, ಸಂಭಾಷಣೆ, ಉಪನ್ಯಾಸ ಮೂಲಕವಾಗಿ ಬಾಲರಿಗೆ ರುಚಿಸುವಂತೆ ರಸವತ್ತಾಗಿ ನಾಗರಿಕ ನೀತಿಯ ಗ್ರಂಥಗಳನ್ನು ಹೊಸ ಅಭ್ಯಾಸಪತ್ರಿಕೆಯನ್ನನುಸರಿಸಿ ಸಿದ್ಧಗೊಳಿಸಲಾಗಿದೆ. ವಿದ್ಯಾರ್ಥಿಗಳು ಇದರ ತುಂಬಾ ಪ್ರಯೋಜನವನ್ನು ಹೊಂದಲೆಂದು ಆಶಿಸುತ್ತೇವೆ.

ಎರಡು ಬಣ್ಣಗಳಿಂದ ಕೂಡಿದ ರಕ್ಷಾಕವಚವುಳ್ಳ ಈ ಎಲ್ಲ ಪುಸ್ತಕಗಳು ಅಂತರಂಗ, ಬಹಿರಂಗದಲ್ಲಿ ಸೌಂದರ್ಯದಿಂದೊಡಗೂಡಿದ್ದು ಮಕ್ಕಳ ಮೆಚ್ಚುಗೆಯನ್ನು ಪಡೆಯುವಂತಿವೆ.

೫ನೆಯ ತರಗತಿಗೆ: ಜನಸಂಖ್ಯೆ, ಆಹಾರ, ನೀರಿನ ಪೂರೈಕೆ ಆಹಾರ ಹಂಚಿಕೆ, ನಗರ ಸ್ವಚ್ಛತೆ, ನಾಗರಿಕರ ಆರೋಗ್ಯ ಮನರಂಜನೆ, ವಾಹನಗಳ ಪ್ರಗತಿ, ಸಮಾಜ ಸೇವಾದಳ ಬಗ್ಗೆ ಬರೆಯಲಾಗಿದೆ. ಒಟ್ಟಿಗೆ ಪೌರನೀತಿಯ ಹೆಚ್ಚಿನ ಜ್ಞಾನಕ್ಕೆ ಮಾರ್ಗಮಾಡಿಕೊಟ್ಟಿದೆ. ಮೋಹಕ ಚಿತ್ರಗಳ ಜೋಡಣೆ ಇದೆ.

೬ನೆಯ ತರಗತಿಗೆ : ಶಾಲೆಯ ಸ್ವಚ್ಛತೆ, ಶಿಸ್ತು, ಸಂಘಟನೆ, ದಿನಪತ್ರಿಕೆಗಳ ಪ್ರಕಟನೆ; ಕಲೆಕ್ಟರ ಹಾಗು ಇತರ ಅಧಿಕಾರಿಗಳ ಕಾರ್ಯ ಸ್ಥಾನಿಕ ಸ್ವರಾಜ್ಯಸಂಸ್ಥೆ, ಸಾರ್ವಜನಿಕ ಶಿಕ್ಷಣ, ಸಮಾಜ ಸೇವೆ ಇತ್ಯಾದಿ ವಿಷಯಗಳನ್ನು ಮನೋರಂಜಕವಾಗಿ ವಿವರಿಸಲಾಗಿದೆ,

ಒಟ್ಟಿಗೆ ವರ್ಗಾನುಕ್ರಮದಿಂದ ಮಕ್ಕಳಲ್ಲಿ ನಾಗರಿಕ ನೀತಿಯು ಹೆಚ್ಚೆಚ್ಚಾಗಿ ಬೆಳೆಯುವಂತೆ ಪಾಠಗಳ ಜೋಡಣೆಯಿದೆ.

ಇಂದೇ ಓದಿ ಉತ್ತಮ ನಾಗರಿಕರಾಗಿರಿ.

ಪ್ರಕಾಶಕರು :

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಅಡಕೀ ಓಣಿ, ಧಾರವಾಡ.

Printed by M. A. Kamat, B. Sc. at Jai Hind Art Press, Bank Road, Dharwar. Edited and Published by M. G. Handral, B. M. Shintri S. R Tatti, & P. A. Bhaskar Jointly at the Kannada Prathamik Shikshan Office, Govt. Training College for Men, Dharwar.

ಪ್ರಬುದ್ಧ ಕರ್ಣಾಟಕ

ಬಿಡಿ ಪ್ರತಿ
೧ ರೂ.

ಸಂ. ೩೮.
೪ ಸಂ.

ಪ್ರಾಕೃತಿಕ ಸೌಂದರ್ಯ ಸಂಪದ

ಮೇ ೧೯೫೬

ನೇಯಿಗೆಯ ಶಾಲೆಗಳಿಗೆ ಅತ್ಯುಪಯುಕ್ತವಾದ ಪುಸ್ತಕಗಳು.

ಶ್ರೀ. ಎಚ್. ಡಿ. ನೇಲಗಿರಿ ಕೃತ

೧.	ಕೈನೂಲು	೭—೪—೦
೨.	ಕೈನೇಯಿಗೆಯ ಮಾರ್ಗದರ್ಶಿಕೆ	೨—೧೨—೦

ಶೇತಕಿ ಶಾಲೆಗಳಿಗೆ ಉಪಯುಕ್ತವಾದ ಪುಸ್ತಕಗಳು.

ಲೇ:—ನಾರಾಯಣ ಶರ್ಮರು

೧.	ಆಧುನಿಕ ಕೃಷಿ	ಭಾಗ-೧	೦-೧೨—೦
೨.	ಆಧುನಿಕ ಕೃಷಿ	ಭಾಗ-೨	೦-೧೨—೦
೩.	ಆಧುನಿಕ ಕೃಷಿ	ಭಾಗ-೩	೧—೨—೦

ಯಾವತ್ತೂ ಶಾಲೆಯ ಲಾಯಬ್ರರಿಗಳಲ್ಲಿ ಅವಶ್ಯ ಸಂಗ್ರಹಿಸಬೇಕಾದ ಚಿಕ್ಕ ಚಿಕ್ಕ ಹೊತ್ತಗೆಗಳು.

ಮುದ್ದಾದ ದೊಡ್ಡ ಅಕ್ಷರ — ಸುಲಭ ಭಾಷೆ

(ಜೀವನ ಚರಿತ್ರೆಗಳು)

೧.	ಮಹಾತ್ಮಾ ಗಾಂಧಿ	೦—೪—೦
೨.	ಜವಾಹಿರಲಾಲ ನೆಹರು	೦—೪—೦
೩.	ಈಶ್ವರಚಂದ್ರ ವಿದ್ಯಾಸಾಗರ	೦—೪—೦
೪.	ಭಗವಾನ್ ಬುದ್ಧದೇವ	೦—೪—೦
೫.	ಸ್ವಾಮಿ ವಿವೇಕಾನಂದ	೦—೬—೦
೬.	ಮಹಾವೀರ ಮಾರುತಿರಾಯ	೦—೬—೦
೭.	ರಾಜಾ ರಾಮಮೋಹನರಾಯ	೦—೬—೦
೮.	ರಾಷ್ಟ್ರಮಾತಾ ಕಸ್ತೂರಬಾ	೦—೬—೦
೯.	ರವೀಂದ್ರನಾಥ ಠಾಕೂರ	೦—೩—೦
೧೦.	ಮೌಲಾನಾ ಅಬುಲ್‌ಕಲಂ ಆಝಾದ	೦—೨—೬
೧೧.	ಬಲಶಾಲಿ ಭೀಮಸೇನ	೦—೬—೦
೧೨.	ರಾಮಕೃಷ್ಣ ಪರಮಹಂಸರ ದಿವ್ಯಜೀವನ	೦—೨—೦
೧೩.	ಝಾಂಸಿಯ ಪುರಿಯುದ ಮಹಾರಾಣಿ	೦—೬—೦
೧೪.	ಸರ್ ಸರ್ವಪಲ್ಲಿ ರಾಧಾಕೃಷ್ಣನ್	೦—೬—೦

ಉಪಯುಕ್ತ ವ್ಯಾಕರಣಗಳು

ಲೇ:—ಪಂಡಿತ ಕವಲಿ.

೧.	ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ—೮ನೇ ಇಯತ್ತೆಗೆ	೧—೦—೦
	ಕನ್ನಡವ್ಯಾಕರಣ ವಿವಿಧ ಸಾಹಿತ್ಯ ಮಾಲೆ —೯ನೇ ಇಯತ್ತೆಗೆ	೧—೪—೦
೩.	ಕನ್ನಡ ವ್ಯಾಕರಣ ವಿವಿಧ ಸಾಹಿತ್ಯ ಮಾಲೆ ೧೦—೧೧ನೇ ಇ.	೧—೧೨—೦

ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳಿಗೆ ಉಪಯುಕ್ತ ಪುಸ್ತಕಗಳು.

೧.	ಮೂಲಶಿಕ್ಷಣ ಲೇ:—ಹಂದ್ರಾಳ	೩—೦—೦
೨.	ಐವರು ಶಿಕ್ಷಣ ಸುಧಾರಕರು	೦—೧೦—೦
೩.	ಗದಾಯುದ್ಧ ದರ್ಪಣ (೪ ನೆಯ ಆಶ್ವಾಸಗಳು)	೧—೬—೦
೪.	ರಾಮಾಶ್ವಮೇಧಸಾರ ಸಂಗ್ರಹ ಪ್ರಕಾಶ	೧—೦—೦

ಇವಲ್ಲದೆ ಎಲ್ಲ ಬಗೆಯ ಕನ್ನಡ, ಹಿಂದಿ, ಇಂಗ್ಲಿಷ ಶಾಲೋಪಯೋಗಿ ಪುಸ್ತಕಗಳೂ, ಕಥೆಕಾದಂಬರಿಗಳೂ ದೊರೆಯುತ್ತವೆ. ಮಾಸ್ತರ ಜನರ ಹಾಜರಿ ಫಾರ್ಮ್ಸ ವಿದ್ಯಾರ್ಥಿ ಹಾಜರಿ ಫಾರ್ಮ್ಸ ವಗೈರೆ ಶಾಲೋಪಯೋಗೀ ಎಲ್ಲ ಬಗೆಯ ಫಾರ್ಮ್ಸ ಹಾಗೂ ಪುಸ್ತಕಗಳೂ ದೊರೆಯುತ್ತವೆ. ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು: ಡಾ. ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

ಪ್ರಧಾನ ಸಂಪಾದಕರು: ಶ್ರೀ. ಎಂ. ಜಿ. ಹಂದ್ರಾಳ, ಬಿ. ಎ. (ಆನರ್ಸ) ಬಿ. ಟಿ., ಡಿ. ಪಿ. ಇಡಿ.
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು:

ಶ್ರೀ. ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಆಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ
ಶ್ರೀ. ಎಶ್. ಆರ್ ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೨ | ನೋ ೧೯೫೩ | ಸಂಚಿಕೆ ೧೨

ಪರಿವಿಡಿ

ಅ. ನಂ.	ವಿಷಯ		ಪುಟ
೧.	ಯುಗಾದಿ	ಶ್ರೀ. ಎಸ್. ಡಿ. ಇಂಚಲ	೨
೨.	ಸಂಪಾದಕೀಯ	....	೩
೩.	ಗಿಡಗಳ ಕಥೆ	ಶ್ರೀ. ಸಿಂಪಿ ಲಿಂಗಣ್ಣ	೫
೪.	ಮಾಲೆಂಕೊವ್ಹ	ಶ್ರೀ. ಶಿಂತ್ರಿ ಬಸಪ್ಪನವರು	೭
೫.	ಶಿಕ್ಷಕನ ಜ್ಞಾನದಾನದ ಕಾರ್ಯ	ಶ್ರೀ. ತಟ್ಟಿ ಶ್ಯಾಮರಾಯರು	೧೦
೬.	ಪಂಚವಾರ್ಷಿಕ ಯೋಜನೆ	....	೧೨
೭.	ಶಿಕ್ಷಣದಲ್ಲಿ 'ದೃಕ್ ಶಿಕ್ಷಣ' ಕಲೆ	ಅನು:—ಶ್ರೀ. ಎನ್. ಬಿ. ಹಳಕಟ್ಟಿ	೧೫
೮.	ಥಿಯಾಸೋಫಿಕಲ್ ಸೋಸಾಯಿಟ	ಶ್ರೀ. ಗುರುನಾಥ ಜೋಶಿ	೨೧
೯.	ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ	....	೨೩

"ಭಾರತದ ಸಂಜೆಯ ಸೊಬಗು"

ರಶ್ಯಾದ ಸುಪ್ರಸಿದ್ಧ ಚಿತ್ರಗಾರ ವಿ. ಎಸ್. ಕ್ಲಿಮಾಶಿನ್ ಕಳೆದ ವರ್ಷ ಭಾರತಕ್ಕೆ ಬಂದಾಗ ಈ ಚಿತ್ರವನ್ನು ರಚಿಸಿದರು. ಅದಕ್ಕೆ ರಶ್ಯಾ ಪ್ರದರ್ಶನದಲ್ಲಿ ಮೆಚ್ಚುಗೆ ಸಿಕ್ಕಿದೆ.

—**'ನೂತನ'** ಕೃಪೆಯಿಂದ

ಯುಗಾದಿ

ಕವಿ ಶ್ರೀ. ಎಸ್. ಡಿ. ಇಂಚಲ

ನಮ್ಮ ಜೀವನ ಗಗನಾಂಗಣದಲಿ ಶುಭ
ಶಕುನದ ಹಕ್ಕಿಯು ಹಾರುತಿದೆ!
ಬಹ ಮನ್ವಂತರದಾಂತರ್ಯದ ಹೊಸ
ಹೊಂಗನಸುಗಳನು ಹೊಸೆಯುತಿದೆ!
ಹಗಲಿನ ಇರುಳಿನ ಗಾಲಿಗಳುರುಳುತ
ಯುಗ ಯುಗಾದಿಯು ಮೊದಲಾಗುತಿದೆ
ಹಳತುದರೆಯೊಳು ಮೊಳೆಯಿತು ಹೊಸತು
ನಾಡಿದು ನಂದನವಾಗುತಿದೆ.

೧

ತಳಿತಿಹ ಮಾಮರ ತಬ್ಬಿದ ಮಲ್ಲಿಗೆ
ಬಾಂಧವ್ಯದ ಬಲೆ ಬೀಸುತಿದೆ
ತಳಿರಿನ ಮರೆಯಲಿ ಕೋಕಿಲ ಹೊನ್ನುಲಿ
ಚೈತನ್ಯದ ರಸ ಸೂಸುತಿದೆ
ಎದೆಯಂಗಣದಲಿ ಮನದ ಮಯೂರಂ
ಹೊಂಬಯಕೆಯ ಗರಿ ಬಿಚ್ಚುತಿದೆ!
ವಿಧಿ ಬರೆದಿಹ ರಸರಂಗೋಲಿಗೆ
ನಲಿಯುತ ವೈಮನ ಮರೆಯುತಿದೆ!

೨

ಹೊಸ ವರುಷದ ಹೊಸ ಸಾಹಸಗಳ ಬಲ್
ಸಾಗರವನು ದಾಂಟುವೆವೆಂದು
ಅಚಲಿತ ಛಲದಿಂದಾಶಾ ಬಲದಿಂ
ಹರಗೋಲನು ಹಾಕುವೆವೆಂದು
ಕಡಲಬ್ಬರಿನಲಿ ಗುಡುಗಲಿ ಸಿಡಿಲು
ಬಿರುಮಳೆ ಬೀಳಲಿ ಘೋರೆಂದು
ಬಂಡೆಗೆ ತಾಗಲಿ ಬಲ್ತೆರೆ ಮೊರೆಯಲಿ
ಕೈಕೊಂಡುದ ಸಾವ್ ಬಿಡೆವೆಂದು

೩

ವರುಷದ ಪಯಣದಿ ಏಸಿಡೆ ಇರಲಿ
ಬಿರುಗಾಳಿಯು ಬಿಸಿಲಿಲ್ಲಾ ಬರಲಿ
ಅಂಬಿಗನೆದೆಯೊಳು ದೃಢನಂಬುಗೆಯಿರೆ
ಬಾರದೆ ತೀರವು ತಾ ಮರಳಿ!
ಬಾಳಿನ ಬೇವು-ಬೆಲ್ಲವ ಮೆಲ್ಲುತ
ನಾಡಿನ ಸೌಕೆಯ ಸೂಕೋಣ!
ತ್ಯಾಗವೆ ಜೀವನ ಸೇವೆಯೆ ಸಾಧನ
ವೆನ್ನುತ ಹುಟ್ಟನು ಹಾಕೋಣ!

೪

ಮಾಗಿಯು ಕಳೆದಿಹ ತರುಗಳ ತಳಿರಲಿ
ಸಾಕವೆ ನಳನಳಿಸಿಹುದೇನು?
ಹಕ್ಕಿಯ ಗಾನವು ಚುಕ್ಕೆಯ ಮೌನವು
ಹೃದಯಂಗಮವಾಗಿಹುದೇನು!
ಮಿಕ್ಕಿನ ಗ್ರಹಗಳ ತಾನ ವಿತಾನಕೆ
ಗಗನವೆ ತಂಬೂರಿಯೆ ತಾನು!
ಇಂತಿಹ ವಸುಧೆಗೆ ಶಾಂತಿಯ ಸೂಸುವ
ಮಧು ಮಾಸವು ತಾ ಬರದೇನು!

(ಧಾರವಾಡ ಆಕಾಶವಾಣಿಯ ಕೃಪೆಯಿಂದ)

ಸಂಪಾದಕೀಯ

ಸಾಮಾಜಿಕ ಶಿಕ್ಷಣ ಕಾರ್ಯಕರ್ತರ ತರಬೇತಿ : ಕಳೆದ ವರ್ಷಗಳಂತೆ ಈ ವರುಷವೂ ಅಲ್ಪಾವಧಿ ಪಾಠ್ಯಕ್ರಮದ ವರ್ಗಗಳು ಈ ಭಾಗದ ನಾಲ್ಕು ಜಿಲ್ಲೆಗಳಲ್ಲಿ ಮುಂದಾಗಲಿರುವ ಸಮಾಜ ಶಿಕ್ಷಣ ಕಾರ್ಯಕರ್ತರನ್ನು ತರಬೇತಿಗೊಳಿಸುವದಕ್ಕಾಗಿ ಸಂಘಟಿಸಲ್ಪಡುವವು. ಇಂಥ ವರ್ಗಗಳು ಜಿಲ್ಲೆಗೊಂದರಂತೆ ನಾಲ್ಕು ಇರುವವು; ಇವುಗಳ ಅವಧಿಯು ೬೫ ದಿನ ಇದ್ದಿರುವದು. ಈ ವರ್ಗಗಳು ಟ್ರೇನಿಂಗ ಕಾಲೇಜುಗಳಲ್ಲಿ ನಡೆಯುವವು. ಏಕೆಂದರೆ ಸಾಮಾಜಿಕ ಕಾರ್ಯಕರ್ತರು ಟ್ರೇನಿಂಗ ಕಾಲೇಜುಗಳ ಕಾರ್ಯಕಲಾಪಗಳನ್ನು ಅರಿತುಕೊಳ್ಳುವ ಅನುಕೂಲತೆಯುಳ್ಳವರಾಗಿರುವರು. ಬೇರೆ ಬೇರೆ ಹಳ್ಳಿಗಳಿಂದ ಬರುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಈ ವರ್ಗಗಳಲ್ಲಿ ತರಬೇತಿಗೊಳಿಸಲಾಗುವುದು. ಈ ಶಿಕ್ಷಣ ಕ್ರಮದಲ್ಲಿ ಶಿಕ್ಷಣಶಾಸ್ತ್ರ ಮತ್ತು ಕಲೆಯನ್ನು ಸಹ ಕಲಿಸಲಾಗುವದು. ಈ ತರಬೇತಿ ಹೊಂದುತ್ತಿರುವ ಪ್ರತಿಯೊಬ್ಬ ಶಿಕ್ಷಕನಿಗೂ ಈ ಶಿಕ್ಷಣಾವಧಿಯಲ್ಲಿ ಸ್ಟಾಯಿಪೆಂಡ ಕೊಡಲಾಗುವದು. ಆದಾಗ್ಯೂ ಹಳ್ಳಿಗಳಲ್ಲಿ ಸಾಮಾಜಿಕ ಶಿಕ್ಷಣದ ಕಾರ್ಯವನ್ನು ಪದ್ಧತಿಯುಕ್ತವಾಗಿ ತರಬೇತಿ ಹೊಂದಿದ ಕಾರ್ಯಕರ್ತರಿಂದ ಸಾಗಿಸುವದೇ ಸರಕಾರದ ಉದ್ದೇಶವಾಗಿದೆಯೆಂಬುದನ್ನು ದಯವಿಟ್ಟು ಲಕ್ಷದಲ್ಲಿಡಬೇಕಾದ ಸಂಗತಿಯಾಗಿದೆ. ಇದಕ್ಕೂ ಮುಂಚಿನ ಪರಿಣಾಮಗಳು ಅಷ್ಟೊಂದು ಉತ್ಸಾಹವರ್ಧಕವಾಗಿರುವುದಿಲ್ಲ. ತರಬೇತಿಗಾಗಿ ಬರುವ ಶಿಕ್ಷಕರು ಬಹುತರವಾಗಿ ಹೆಚ್ಚಿನ ಸ್ಥಳಗಳನ್ನು ಪಡೆಯಲು ಅರ್ಜಿಗಳನ್ನು ಮಾಡಲು ಈ ತರಬೇತಿಯು ಒಂದು ವಿಶಿಷ್ಟ ಯೋಗ್ಯತೆಯಾಗುವದೆಂದು ತಿಳಿಯುತ್ತಾರೆಯೇ ವಿನಃ ಸಾಮಾಜಿಕ ಶಿಕ್ಷಣದ ಪವಿತ್ರ ಕರ್ತವ್ಯವು ಇದಾಗಿದೆಯೆಂದು ತಿಳಿಯುವದಿಲ್ಲ. ಅವರು ಮೊದಲಿನಂತೆಯೇ ತಮ್ಮ ತಮ್ಮ ಹಳ್ಳಿಗಳಿಗೆ ಹೋಗುತ್ತಾರೆ ಮತ್ತು ತರಬೇತಿಯು ಆ ಬೇಕಾದಷ್ಟು ಪರಿಣಾಮಕಾರಿಯಾಗಿಲ್ಲ. ಈ ಶಿಕ್ಷಣ ಕ್ರಮದಲ್ಲಿ ಶಿಕ್ಷಣ ಹೊಂದುತ್ತಿರುವವರೆಲ್ಲರೂ ತಾವು ಹಿಂತಿರುಗಿ ಹೋದ ಬಳಿಕ ಸಾಮಾಜಿಕ ಶಿಕ್ಷಣ ಕಾರ್ಯವು ಮುಂದೆ ಹೆಜ್ಜೆಯನ್ನಿಕ್ಕುವಂತೆ ಮಾಡಬೇಕೆಂಬ ಹೊಣೆಯು ತಮ್ಮ ಮೇಲೆ ಇರುವದೆಂಬುದರ ಕಡೆಗೆ ಗಮನವನ್ನು ಕೊಡಬೇಕು ಮತ್ತು ಸಾಕ್ಷರತೆಯ ಕನಿಷ್ಟ ಸಂಖ್ಯೆಯನ್ನು ಪೂರ್ತಿಗೊಳಿಸದಿದ್ದರೆ ಅಂದರೆ ನಿಯಮಾನುಸಾರ ತಯಾರಿಸಬೇಕಾದಷ್ಟು ಜನರನ್ನು ಸಾಕ್ಷರರನ್ನಾಗಿ ಮಾಡದಿದ್ದರೆ ಅವರು ತಮಗೆ ಸಿಕ್ಕ ಸ್ಟಾಯಿಪೆಂಡ ಹಣವನ್ನು ತಿರುಗಿ ಸರಕಾರಕ್ಕೆ ಕೊಡಬೇಕಾಗುವದು. ಇಂಥ ಪರಿಸ್ಥಿತಿಯನ್ನು ಕಾರ್ಯಕರ್ತರು ತಂದುಕೊಳ್ಳಲಿಕ್ಕಿಲ್ಲವೆಂದು ಆಶಿಸಲಾಗಿದೆ,

ನಮ್ಮ ಮಾತು : ಈ ಸಂಚಿಕೆಗೆ ಪ್ರಾಥಮಿಕ ಶಿಕ್ಷಣವು ತನ್ನ ೯ನೆಯ ವರುಷವನ್ನು ಮುಗಿಸಿದಂತಾಯಿತು. ಸಂಪಾದಕ ಮಂಡಳವು ತನ್ನ ಶಕ್ತಿಗನುಸಾರವಾಗಿ ಪ್ರಾಥಮಿಕ ಶಿಕ್ಷಕರಿಗೆ ಅವರ ಕಾರ್ಯದಲ್ಲಿ ಮಾರ್ಗದರ್ಶನ ಮಾಡುವದಕ್ಕಾಗಿಯೂ ಪ್ರಾಥಮಿಕ ಶಿಕ್ಷಣವನ್ನು ಪ್ರಗತಿಪಥದಲ್ಲಿ ನಡೆಸುವದಕ್ಕಾಗಿಯೂ ಅಗತ್ಯವಾಗಿ-

ರುವ ಸಮಸ್ಯೆಗಳನ್ನು ನಿವಾರಿಸಿಕೊಡುವ ವಿಷಯಗಳನ್ನು ಕೊಡುವ ಪ್ರಯತ್ನವನ್ನು ಮಾಡಿದೆ. ಈ ವರುಷದಲ್ಲಿ ಪುಟಗಳನ್ನು ಹೆಚ್ಚಿಸಿ ಪ್ರಾಥಮಿಕ ಶಿಕ್ಷಕರು ಮಾಡಿದ ಕಾರ್ಯಗಳ ಸಂಕ್ಷಿಪ್ತ ವರದಿಗಳನ್ನು ಪ್ರಕಟಿಸಿ ಪ್ರೋತ್ಸಾಹನೆಯನ್ನು ಕೊಟ್ಟಿದೆ. ನಮ್ಮ ಕಾರ್ಯವು ನಮ್ಮ ಪತ್ರಿಕೆಯ ಓದುಗರಿಗೆ ತೃಪ್ತಿಕರವಾಗಿದೆಯೆಂದು ನಂಬಿದ್ದೇವೆ.

ಮುಂದಿನ ವರುಷ ಇನ್ನೂ ಕೆಲವು ಪುಟಗಳನ್ನು ಹೆಚ್ಚಿಸಿ ಇನ್ನೂ ಹೆಚ್ಚು ಶಿಕ್ಷಣದ ಪ್ರಗತಿಗೆ ಉಪಯುಕ್ತವಾಗುವ ಸಾಮಗ್ರಿಯನ್ನು ಕೊಟ್ಟು ಆಕರ್ಷಕ ಮಾಡಬೇಕೆಂಬ ಹೆಬ್ಬಯನ್ನಿಟ್ಟುಕೊಂಡಿದ್ದೇವೆ. ಈ ಬಯಕೆಯನ್ನು ಈಡೇರಿಸುವದು ನಮ್ಮ ಶಿಕ್ಷಕ ಬಂಧುಗಳಿಗೇ ಸೇರಿದುದಾಗಿದೆ. ಅವರು ಎಂದಿನಂತೆ ನಮ್ಮೊಡನೆ ಸಕ್ರಿಯ ಸಹಕಾರದಿಂದ ವರ್ತಿಸಿ ಪ್ರಾಥಮಿಕ ಶಿಕ್ಷಣದ ಸೇವೆಯನ್ನು ಮಾಡಿಸುವರೆಂದು ಆಶಿಸಿದ್ದೇವೆ.

ಕೃತಜ್ಞತೆ : ನಮ್ಮ ಕಾರ್ಯದಲ್ಲಿ ಜಿಲ್ಲಾ ಮತ್ತು ಮುನ್ಸಿಪಲ್ ಸ್ಕೂಲ್ ಬೋರ್ಡುಗಳ ಚೇರಮನ್ನರೂ ಎ. ಓ. ಅವರೂ, ಅನೇಕ ಶಿಕ್ಷಣ ಸಂಸ್ಥೆ ಹಾಗೂ ವಾಚನಾಲಯಗಳ ಸಂಚಾಲಕರೂ, ಶಿಕ್ಷಣ ಪ್ರೇಮಿಗಳೂ ಪ್ರಾಥಮಿಕ ಶಿಕ್ಷಕರೂ ಚಂದಾದಾರರಾಗಿ ಪ್ರೋತ್ಸಾಹಿಸಿದ್ದಾರೆ. ಪ್ರಕಾಶಕರು ಜಾಹೀರಾತುಗಳನ್ನು ಕೊಟ್ಟು ನೆರವಾಗಿದ್ದಾರೆ. ಇವರೆಲ್ಲರಿಗೂ ಪ್ರಾಥಮಿಕ ಶಿಕ್ಷಣದ ಸಂಪಾದಕ ಮಂಡಳವು ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ ಮತ್ತು ಇದೇ ರೀತಿಯಾಗಿ ಇನ್ನೂ ಹೆಚ್ಚು ಹೆಚ್ಚಾಗಿ ನಮಗೆ ನೆರವಾಗಬೇಕೆಂದು ಇವರೆಲ್ಲರನ್ನೂ ಬಿನ್ನವಿಸಿಕೊಳ್ಳುತ್ತದೆ.

ಸಿದ್ಧವಾಗಿವೆ ಮಾರಾಟಕ್ಕೆ ಸಿದ್ಧವಾಗಿವೆ

ನೀವು ಬಯಸಿದ ಇತಿಹಾಸದ ಅತ್ಯುತ್ತಮ ಹೊತ್ತಿಗೆಗಳು!

೫ನೆಯ ವರ್ಗಕ್ಕೆ:–ಭಾರತೀಯ ಇತಿಹಾಸ ಪ್ರಕಾಶ, ೧ನೆಯ ಪುಸ್ತಕ (ಅತಿ ಪ್ರಾಚೀನಕಾಲದಿಂದ ಮೊದಲೊಂದು ಶ್ರೀ. ಶಂಕರಾಚಾರ್ಯರ ಜೀವನದ ವಿವರಗಳನ್ನೊಳಗೊಂಡಿದೆ).
ಬೆಲೆ ೦—೧೫—೦

೬ನೆಯ ವರ್ಗಕ್ಕೆ:–ಭಾರತೀಯ ಇತಿಹಾಸ ಪ್ರಕಾಶ ೨ನೆಯ ಪುಸ್ತಕ (ಇಸ್ಲಾಂ ಧರ್ಮದ ಹುಟ್ಟು ಹಾಗೂ ಬೆಳಗೆಯಿಂದ ಮೊದಲ್ಗೊಂಡು ಮರಾಠಾ ರಾಜ್ಯದ ವಿಸ್ತರಣೆ ಮತ್ತು ಅದರ ಅಳಿಗಾಲದ ವಿವರಗಳನ್ನೊಳಗೊಂಡಿದೆ)
ಬೆಲೆ ೧—೪—೦

೭ನೆಯ ವರ್ಗಕ್ಕೆ:–ಭಾರತೀಯ ಇತಿಹಾಸ ಪ್ರಕಾಶ, ೩ನೆಯ ಪುಸ್ತಕ (ಭಾರತಕ್ಕೆ ಯುರೋಪೀಯರ ಆಗಮನ ಹಾಗೂ ಸ್ಪರ್ಧೆಯಿಂದ ಮೊದಲ್ಗೊಂಡು ಭಾಗತದಲ್ಲಿ ಇಂದಿನ ಪ್ರಜಾರಾಜ್ಯದ ಸ್ಥಾಪನೆಯ ವಿವರಗಳನ್ನೊಳಗೊಂಡಿದೆ.)
ಬೆಲೆ ೨—೨—೦

ಶ್ರೀ. ರಂ. ಕೃ. ಲಕ್ಕುಂಡಿ

(ಸೇವಾನಿವೃತ್ತ ಪ್ರಿನ್ಸಿಪಾಲರು, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಅವರಿಂದ ರಚಿತವಾದುವು.)

ಸುಲಭ ಮತ್ತು ಚಿತ್ತಾಕರ್ಷಕ ಶೈಲಿ! ಯೋಗ್ಯ ವಿಷಯದ ಭಂಡಾರ! ವಿಪುಲ ಶೈಕ್ಷಣಿಕ ಚಿತ್ರಗಳು! ಇತಿಹಾಸ ತಜ್ಞರಿಂದ ಪ್ರಶಸ್ತಿ ಪಡೆದುವು! ಸರಕಾರದಿಂದ ಮಂಜೂರು ಪಡೆದುವು. ಇಂದೇ ಕೊಳ್ಳಿರಿ.

ಪ್ರಕಾಶಕರು:—ದಿ ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

ಗಿಡಗಳ ಕತೆ.

ಲೇಖಕ :– ಶ್ರೀ. ಸಿಂಪಿ ಲಿಂಗಣ್ಣ, ಚಡಚಣ

(ಡಿ. ಸರ್ ಜಗದೀಶಚಂದ್ರ ಬೋಸರ ವಿಚಾರಗಳು.)

(ಹಿಂದಿನ ಸಂಚಿಕೆಯಿಂದ ಮುಂದುವರೆದುದು.)

ಸಸ್ಯಗಳ ಹುಟ್ಟು ಸಾವುಗಳು

ಮಣ್ಣು ಹೆಂಟೆಯ ಕೆಳಗೆ ಬೀಜವು ಅನೇಕ ದಿನಗಳ ವರೆಗೆ ಅಡಗಿಕೊಂಡಿತು. ತಿಂಗಳುಗಳೆಷ್ಟೋ ಕಳೆದು ಹೋದವು. ಚಳಿಗಾಲವು ಬಂದುಹೋಗಿ ಬೇಸಿಗೆಯು ಅಡಿಯಿಟ್ಟಿತು. ಆದರೂ ಅದು ಹೊರಗೆ ಬರಲಿಲ್ಲ. ಆ ಬಳಿಕ ಮಳೆಗಾಲವು ಆರಂಭವಾಗಿ ಮೇಘರಾಜನು ಬಂದು ಎಲ್ಲಕಡೆಗೂ ಮಳೆಯನ್ನು ಕರೆದು ಭೂಮಿಯನ್ನು ಸಂಪೂರ್ಣವಾಗಿ ತೋಯಿಸಿಹೋದನು. ಆ ಬೀಜವು ಆಗ ಸಹ ಮತ್ತೂ ಮೊದಲಿನಂತೆಯೆ ಅಡಗಿಕೊಂಡಿರುವ ಅಗತ್ಯವು ಅದಕ್ಕೆ ಉಳಿಯಲಿಲ್ಲ. "ಇನ್ನು ಮಲಗಿಕೊಳ್ಳ ಬೇಡ. ಬೇಗನೆ ಮೇಲಕ್ಕೆದ್ದು ಬಾ. ಮೇಲಕ್ಕೆದ್ದು ಬಂದಿಯೆಂದರೆ ಸೂರ್ಯನ ಕಿರಣಗಳನ್ನು ನೋಡುವಿ" ಎಂದು ಯಾರೋ ಹೊರಗಿನಿಂದ ಆ ಶಿಶುವನ್ನು ಒದರುತ್ತಿದ್ದಾರೋ ಏನೋ. ಸಾವಕಾಶವಾಗಿ ಬೀಜದ ಕವಚವು ಕಳಚಿಹೋಗಿ ಮೃದುವಾದ ಎರಡು ಎಲೆಗಳ ನಡುವಿನಿಂದ ಮೊಳಕೆಯು ಹೊರಗೆ ಬಂದಿತು. ಆಗ ಮೊಳಕೆಯ ಒಂದು ಭಾಗವು ಮಣ್ಣಿನಲ್ಲಿ ಗಟ್ಟಿಯಾಗಿ ಹಿಡಿದುಕೊಂಡಿತಲ್ಲದೆ ಅದರ ಇನ್ನೊಂದು ಭಾಗವು ಮಣ್ಣನ್ನು ಸೀಳಿ ಮೇಲಕ್ಕೆದ್ದಿತು. ಮೊಳಕೆಯು ಮೇಲಕ್ಕೇಳುತ್ತಿರುವುದನ್ನು ಎಂದಾದರೂ ನೋಡಿರುವಿರಾ? ಆ ಮಗು ತನ್ನ ತಲೆಯನ್ನು ಮೇಲಕ್ಕೆತ್ತುತ್ತ ಅತಿ ಆಶ್ಚರ್ಯದಿಂದ ಹೊಸನಾಡನ್ನು ನೋಡುತ್ತಿರುವಂತೆ ಆಗ ಅನಿಸುವದು.

ಗಿಡವು ಮೊಳೆಯಿತೆಂದರೆ ನೆಲದಲ್ಲಿ ಪ್ರವೇಶಮಾಡಿದ ಭಾಗಕ್ಕೆ ಬೇರು ಎನ್ನುತ್ತಾರೆ. ಮೇಲಕ್ಕೆದ್ದ ಭಾಗಕ್ಕೆ ಬೊಡ್ಡೆ ಎನ್ನುತ್ತಾರೆ. ಪ್ರತಿಯೊಂದು ಗಿಡಕ್ಕೂ ಬೊಡ್ಡೆ ಬೇರು ಎರಡನ್ನೂ ನಾವು ನೋಡಿಯೇ ನೋಡುವೆವು. ಒಂದು ತೀರ ಆಶ್ಚರ್ಯದ ಮಾತೇನಂದರೆ—ಗಿಡವನ್ನು ಯಾವ ರೀತಿಯಾಗಿ ಇರಿಸಿದರೂ ಬೇರು ಕೆಳ ಮುಖ ಮಾಡಿಯೂ ಬೆಳೆಯುವವು. ಪರೀಕ್ಷಿಸುವುದಕ್ಕಾಗಿ ಮಣ್ಣಿನ ಪಾತ್ರೆಯಲ್ಲಿ ಹಚ್ಚಿದ ಒಂದು ಗಿಡವನ್ನು ಒಮ್ಮೆ ತಿರುವುಮುರುವು ಮಾಡಿ ತೂಗುಹಾಕಿದೆನು. ಆಗ ಗಿಡದ ತುದಿಯು ಕೆಳಮುಗ್ಗಲಾಗಿಯೂ ಬೇರುಗಳು ಮೇಲುಗಡೆಯಾಗಿಯೂ ನೇತಾಡತೊಡಗಿತು. ಒಂದೆರಡು ದಿನಗಳಲ್ಲಿಯೇ ಗಿಡವು ಅದರ ಇಂಗಿತವನ್ನು ತಿಳಿದುಕೊಂಡಿತೇನೋ. ಆ ಬಳಿಕ ಟೊಂಗೆಗಳು ಬಾಗುತ್ತ ಮೇಲುಗಡೆಗೆ ನಡೆದವು. ಅಲ್ಲದೆ ಬೇರುಗಳು ಹೊರಳಿ ಕೆಳಮುಗ್ಗಲಿಗೆ ಇಳಿಯತೊಡಗಿದವು.

ಗಿಡಗಳೂ ಸಹ ನಮ್ಮಂತೆ ಆಹಾರವನ್ನು ಸೇವಿಸುತ್ತವೆ. ನಮಗೆ ಹಲ್ಲುಗಳು ಇರುವದರಿಂದ ನಾವು ಬಿರುಸು ಪದಾರ್ಥಗಳನ್ನು ಜಗಿದು ತಿನ್ನುವೆವು. ಹಲ್ಲುಗಳಿಲ್ಲದ ಸಣ್ಣ ಮಕ್ಕಳು ಬರಿಯೆ ಹಾಲು ಕುಡಿಯುವವು. ಹಾಗೆಯೇ ಗಿಡಗಳಿಗೂ ಹಲ್ಲುಗಳಿಲ್ಲದ್ದರಿಂದ ಕೇವಲ ಜಲೀಯ (ನೀರಾದ) ದ್ರವ್ಯಗಳಿಂದಲೂ ಗಾಳಿಯಿಂದಲೂ ಅವು ಆಹಾರವನ್ನು ಸಂಗ್ರಹಿಸುವವು. ಗಿಡವು ತನ್ನ ಬೇರುಗಳಿಂದ ಮಣ್ಣಿನೊಳಗಿನ ರಸವನ್ನು ಹೀರಿಕೊಳ್ಳುವದು. ನೀರಿನಲ್ಲಿ ಸಕ್ಕರೆಯು ಕರಗುವಂತೆ ಮಣ್ಣಿನೊಳಗಿನ ಅವೆಷ್ಟೋ ಜಿನಸುಗಳು ನೀರಿಗೆ ಕರಗುತ್ತವೆ. ಆದ್ದರಿಂದ ಗಿಡವು ಆ ಎಲ್ಲ ಜಿನಸುಗಳನ್ನೇ ತನ್ನ ಆಹಾರ ಮಾಡಿಕೊಳ್ಳುವದು. ಅಂತೆಯೇ ಗಿಡಗಳ ಬೊಡ್ಡೆ ಬೇರುಗಳಿಗೆ ನೀರು ಹನಿಸದಿದ್ದರೆ ಅದಕ್ಕೆ ಆಹಾರವು ಇಲ್ಲದಂತಾಗಿ ಅದು ಸತ್ತು ಹೋಗುವದು.

ಸೂಕ್ಷ್ಮದರ್ಶಕ ಯಂತ್ರದಿಂದ ಅತಿ ಕ್ಷುದ್ರವಾದ ಪದಾರ್ಥವೂ ನಮ್ಮ ಕಣ್ಣಿಗೆ ಕಾಣಿಸಬಲ್ಲದು. ಅಂಥ ಸೂಕ್ಷ್ಮದರ್ಶಕ ಯಂತ್ರದಿಂದ ಗಿಡದ ಒಂದು ಟೊಂಗೆಯನ್ನೋ ಬೇರನ್ನೋ ಪರೀಕ್ಷಿಸಿ ನೋಡಿದರೆ ಅದರ ಅಂತರಂಗದೊಳಗೆಲ್ಲ ಸಾವಿರಾರು ನಲಿಕೆಗಳುಂಟೆಂಬುದು ಕಂಡುಬರುವದು. ಈ ನಲಿಕೆಗಳಿಂದಲೇ ಭೂಮಿಯಲ್ಲಿಯ ರಸವು ಗಿಡದ ಶರೀರದಲ್ಲಿ ಪ್ರವೇಶಿಸುತ್ತದೆ.

ಇದಲ್ಲದೆ ಗಿಡದ ಎಲೆಗಳು ಹವೆಯೊಳಗಿನ ಆಹಾರವನ್ನು ಸಂಗ್ರಹಿಸುತ್ತವೆ. ಎಲೆಯಲ್ಲಿ ಅವೆಷ್ಟೋ ಸಣ್ಣ ಸಣ್ಣ ಮುಖಗಳಿವೆ. ಸೂಕ್ಷ್ಮದರ್ಶಕ ಯಂತ್ರದಿಂದ ನೋಡಿದರೆ ಆ ಎಲ್ಲ ಬಾಯಿಗಳಿಗೂ ಸಣ್ಣ ಸಣ್ಣ ತುಟಿಗಳು ಕಂಡುಬರುವವು. ಆಹಾರವನ್ನು ಸೇವಿಸುವ ಅವಶ್ಯಕತೆ ಕಾಣದಾಗ ಅವು ತಮ್ಮ ತುಟಿಗಳೆರಡನ್ನೂ ಮುಚ್ಚಿಕೊಳ್ಳುವವು. ನಾವು ಉಸಿರಾಡಿಸುವಾಗ ಬಿಡುವ ಉಸಿರಿನಲ್ಲಿ ಒಂದು ರೀತಿಯ ವಿಷವಾಯು ಹೊರಬರುವದು. ಅದಕ್ಕೆ ಅಂಗಾರಾಮ್ಲವಾಯು ಎನ್ನುವರು. ಆ ಅಂಗಾರಾಮ್ಲ ವಾಯುವು ಹಾಗೆಯೇ ಈ ಪೃಥ್ವಿಯಲ್ಲಿ ಸಂಗ್ರಹವಾಗುತ್ತ ಹೋದರೆ ಸ್ವಲ್ಪ ದಿನಗಳಲ್ಲಿಯೇ ಆ ವಾಯುವನ್ನು ಸೇವಿಸಿ ಸಕಲಪ್ರಾಣಿಗಳು ಸತ್ತುಹೋಗಬಹುದು. ವಿಧಾತನ ಕರುಣೆಯನ್ನು ಭಾವಿಸಿ ನೋಡಿರಿ. ಪ್ರಾಣಿಗಳಿಗೆ ವಿಷವಾದುದನ್ನೇ ಗಿಡಗಳು ಸೇವಿಸಿ ಹವೆಯನ್ನು ಪರಿಶುದ್ಧಗೊಳಿಸುವವು. ಗಿಡದೆಲೆಗಳ ಮೇಲೆ ಬಿದ್ದ ಸೂರ್ಯಕಿರಣಗಳ ಸಹಾಯದಿಂದ ಎಲೆಗಳು ಹವೆಯೊಳಗಿನ ಅಂಗಾರಾಮ್ಲ ವಾಯುವನ್ನು ಹೀರಿಕೊಳ್ಳುವವು. ಆ ಅಂಗಾರಾಮ್ಲವಾಯು ಗಿಡದ ಶರೀರದಲ್ಲಿ ಪ್ರವೇಶಮಾಡಿ ಗಿಡಗಳನ್ನು ಬೆಳೆಸುತ್ತದೆ. ಗಿಡಗಳು ಬೆಳಕನ್ನು ಬೇಡುತ್ತವೆ. ಆ ಬೆಳಕು ದೊರೆಯದಿದ್ದರೆ ಅವು ಬದುಕಲೇ ಆರವು. ಹೇಗೆ ಒಂದಿಷ್ಟು ಬೆಳಕನ್ನು ಕಂಡೇನು, ಎನ್ನುವುದೇ ಗಿಡದ ಸರ್ವಶ್ರೇಷ್ಠವಾದ ಉದ್ಯಮವಿರುತ್ತದೆ. ಮನೆಯ ಕಿಡಕಿಯಲ್ಲಿ ಒಂದು ಗಿಡವನ್ನು ತಂದಿಟ್ಟರೆ ಕತ್ತಲೆಯ ಮಗ್ಗುಲನ್ನು ಬಿಟ್ಟು ಬೆಳಕಿನಕಡೆಗೆ ಎಲ್ಲ ಟೊಂಗೆಗಳು ಹೊರಳುವುದನ್ನು ನೋಡುತ್ತೇವೆ. ಹಾಗೆಯೇ ವನದಲ್ಲಿ ಹೋಗಿ ನೋಡಿದರೆ ಜಿದ್ದುಬಿದ್ದಂತೆ ತಲೆಯನ್ನು ಮೇಲಕ್ಕೆತ್ತಿ ಮೊಟ್ಟಮೊದಲು ಬೆಳಕನ್ನು ಕಾಣಬೇಕೆಂದು ಯಾವಾಗಲೂ ಗಿಡಗಳು ಪ್ರಯತ್ನಿಸುತ್ತವೆ. ಬಳ್ಳಿಗಳು ನೆಲದಲ್ಲಿ ಬಿದ್ದುಕೊಂಡಿದ್ದರೆ ಬೆಳಕು ಕಾಣದೆ ಸತ್ತುಹೋಗುವವು. ಆದ್ದರಿಂದ ಅವು ಗಿಡಕ್ಕಂಟಿಕೊಂಡು ಮೇಲಮೇಲಕ್ಕೆ ಹಬ್ಬಿಕೊಳ್ಳುವವು.

ಪ್ರಕಾಶವೇ ಜೀವನದ ಮೂಲವೆಂದಂತಾಯಿತು. ತನ್ನ ಶರೀರದಲ್ಲಿ ಸೂರ್ಯಕಿರಣಗಳನ್ನು ತೆಗೆದುಕೊಂಡೇ ಗಿಡವು ಬೆಳೆಯುತ್ತಿರುವುದರಿಂದ ಅಲ್ಲಿ ಸೂರ್ಯಕಿರಣಗಳು ಸಂಗ್ರಹವಾಗುತ್ತವೆ. ಕಟ್ಟಿಗೆಗೆ ಬೆಂಕಿಯನ್ನು ಹಚ್ಚಿದರೆ ಹೊರಡುವ ಬೆಳಕುಕಾವುಗಳು ಆ ಸೂರ್ಯನ ತೇಜವೇ.

ಗಿಡಬಳ್ಳಿಗಳು ಪ್ರಕಾಶವನ್ನು ಹಿಡಿದುಕೊಳ್ಳುವ ಬಲೆಗಳಾಗಿವೆ. ಜಂತುಗಳು ಆ ಗಿಡಬಳ್ಳಿಗಳನ್ನು ತಿನ್ನುವದರಿಂದಲೇ ಅವುಗಳಲ್ಲಿಯ ಆ ಸೂರ್ಯಪ್ರಕಾಶವು ಆ ಮುಖಾಂತರವಾಗಿ ಶರೀರದಲ್ಲಿ ಪ್ರವೇಶಿಸುತ್ತವೆ. ಆದ್ದರಿಂದ ಅವು ಜೀವಿಸಲಿಕ್ಕೆ ಸಾಧ್ಯವಾಗುತ್ತದೆ. ಇಷ್ಟೇ ಏಕೆ, ನಾವು ಸಹ ಸಸ್ಯಾದಿಗಳನ್ನು ಸೇವಿಸದಿದ್ದರೆ ಬದುಕಿ ಉಳಿಯುತ್ತಿರಲಿಲ್ಲ. ಒಟ್ಟಿನಲ್ಲಿ ವಿಚಾರಿಸಿ ನೋಡಿದರೆ ಸಕಲರೂ ಪ್ರಕಾಶವನ್ನು ಸೇವನಮಾಡಿಯೇ ಬದುಕಿದ್ದೇವೆಯೆಂಬುದು ಕಂಡುಬರುವದು. ಹಲಕೆಲವು ಸಸ್ಯಗಳು ಒಂದು ವರುಷದಲ್ಲಿಯೇ ತಮ್ಮ ಜೀವನವನ್ನು ಮುಗಿಸುತ್ತವೆ. ಅಲ್ಲದೆ ಅವು ತಮ್ಮ ಜೀವನ ಮುಗಿದು ಹೋಗುವವರಲ್ಲಿಯೇ ತಮ್ಮ ಸಂತಾನವನ್ನು ಕಾಯ್ದಿಡುವದಕ್ಕಾಗಿ ಪುಷ್ಪಗಳ ಪಕಳೆಗಳಿಂದ ಸಣ್ಣಸಣ್ಣ ಮನೆಗಳನ್ನೂ ಅವು ಕಟ್ಟುತ್ತವೆ. ಗಿಡವು ಹೂಗಳನ್ನು ಅರಳಿಸುವಾಗ ಅದೆಂಥ ಸುಂದರವಾದ ದೃಶ್ಯವು ಕಂಡು ಬರುವದು? ಆಗಗಿಡವು ನಗುತ್ತಿದೆಯೋ ಏನೋ ಎಂದೆನಿಸುವದಲ್ಲವೇ? ಹೂವಿನಂಥ ಸುಂದರ ಪದಾರ್ಥವು ಇನ್ನಾವುದಿದೆ? ಗಿಡವು ಸಾಮಾನ್ಯವಾದ ನೆಲದೊಳಗಿನ ರಸವನ್ನೂ ಹವೆಯ ಅಂಗಾರವನ್ನೂ ತಿಂದು ಅದು ಹೇಗೆ ಇಂಥ ಸುಂದರವಾದ ಪುಷ್ಪವನ್ನು ಕೊಟ್ಟಿತು? ಸ್ಪರ್ಶಮಣಿಯಿಂದ ಲೋಹವು ಸುವರ್ಣವಾಗುವದೆಂದು ಕತೆಯಲ್ಲಿ ಕೇಳಿದ್ದೇವೆ. ಈ ನಮ್ಮ ಮನಸ್ಸಿನಲ್ಲಿ ಮಾತೆಯ ಸ್ನೇಹವೇ ಆ ಸ್ಪರ್ಶಮಣಿಯೆಂದು ಅನಿಸುತ್ತಿದೆ. ಏನು ಮಕ್ಕಳಮೇಲಿನ ಪ್ರೀತಿಯೇ ಹೂವಾಗುವದೋ ಏನೋ

ಪ್ರೇಮ ಸಂಸ್ಪರ್ಶದಿಂದಲೇ ಮಣ್ಣು ಮತ್ತು ಅಂಗಾರಾಮ್ಲಗಳು ಇಲ್ಲಿ ಹೂವಾಗಿ ಅರಳಿವೆ.

ಗಿಡಗಳಲ್ಲಿ ಹೂಗಳರಳಿದ್ದನ್ನು ನೋಡಿದರೆ ನಮಗೆಷ್ಟು ಆನಂದ! ಗಿಡಗಳಿಗೂ ಕೂಡ ಅದೆಷ್ಟು ಆನಂದವಿರಬೇಕು! ಆನಂದದ ದಿನಗಳಲ್ಲಿ ನಾವು ನಮ್ಮ ಎಷ್ಟೋ ಜನರಿಗೆ ಆಮಂತ್ರಣ ಕೊಡುತ್ತೇವೆ. ಅದರಂತೆ ಹೂಗಳು ಅರಳಿದಾಗ ಗಿಡಗಳ ಕೂಡ ತಮ್ಮ ಬಂಧುಬಳಗದವರಿಗೆ ಅವು ಕೈಮಾಡಿ ಕರೆಯುವವು. “ಎಲ್ಲ ನಮ್ಮ ಬಂಧುಬಳಗದವರು ಇಂದು ನಮ್ಮ ಮನೆಗೆ ಬನ್ನಿರಿ. ಒಂದು ವೇಳೆ ನೀವು ಪಥಭ್ರಷ್ಟರಾದರೆ ಇಲ್ಲವೆ ಮನೆಯನ್ನು ಗುರುತಿಸಲು ನಿಮಗೆ ಶಕ್ಯವಾಗದಿದ್ದರೆ ನೋಡಿರಿ. ಅದಕ್ಕಾಗಿ ಬಣ್ಣಬಣ್ಣದ ಪಕಳೆಗಳ ಬಾವುಟವನ್ನು ಹಿಡಿದಿದ್ದೇವೆ. ಅವುಗಳನ್ನು ನೀವು ದೂರದಿಂದಲೇ ನೋಡಬಲ್ಲಿರಿ” ಎಂದು ಒದರುವವೋ ಏನೋ. ಭೃಂಗ ಮತ್ತು ಜೇನುನೊಣಗಳ ಕೂಡ ಪುಷ್ಪಗಳ ಪರಿಚಯವು ಬಹುಕಾಲದ್ದು. ಆದ್ದರಿಂದ ಅವೆಲ್ಲವೂ ಗುಂಪುಗುಂಪಾಗಿ ಹೂಗಳನ್ನು ನೋಡಬರುವವು. ಕೆಲಕೆಲವು ಪತಂಗಗಳು ಪಕ್ಷಿಗಳ ಭಯಕ್ಕಾಗಿ ಹಗಲು ಹೊರಗೆ ಬರುವದಿಲ್ಲ. ಆದ್ದರಿಂದ ಅವುಗಳನ್ನು ಕರೆಯುವದಕ್ಕಾಗಿ ಪುಷ್ಪಗಳು ಸೂರ್ಯಾಸ್ತವಾದಕೂಡಲೇ ದಿಕ್ಕುದಿಕ್ಕಿಗೆಲ್ಲ ಸುಗಂಧವನ್ನು ಬೀರುವವು.

ಗಿಡವು ಪುಷ್ಪಗಳಲ್ಲಿ ಸಂಗ್ರಹಿಸಿಟ್ಟ ಮಧುವನ್ನು ಭ್ರಮರಗಳೂ ಜೇನುಹುಳುಗಳೂ ಪಾನಮಾಡುವವು. ಜೇನುನೊಣಗಳ ಆಗಮನದಿಂದ ಗಿಡಗಳಿಗೆ ಮಹದುಪಕಾರವಾಗುವದು. ಯಾಕಂದರೆ ಅವು ಪುಷ್ಪಗಳಿಂದ ಪುಷ್ಪಗಳಿಗೆ ಪುರುಷರೇಣುಗಳನ್ನು ತೆಗೆದುಕೊಂಡು ಹೋಗುತ್ತವೆ. ಪುರುಷರೇಣುಗಳಿಲ್ಲದೆ ಬೀಜಗಳು ಪಕ್ವವಾಗಲಾರವು.

ಈ ರೀತಿಯಾಗಿ ಪುಷ್ಪಗಳಲ್ಲಿ ಬೀಜಗಳು ಪಕ್ವವಾಗುತ್ತಿರುವಾಗ ಗಿಡವು ತನ್ನ ಶರೀರದ ರಸದಿಂದ ಆ ಬೀಜಗಳ ಲಾಲನಪಾಲನೆ ಮಾಡುತ್ತದೆ ಅಲ್ಲದೆ ಇನ್ನು ಮುಂದೆ ತನ್ನ ನಿಜಜೀವನಕ್ಕಾಗಿ ಅದು ಆಶೆಯನ್ನಿಟ್ಟುಕೊಳ್ಳುವದಿಲ್ಲ. ಅಣುಅಣುವಾಗಿ ತನ್ನ ಸಂತಾನಕ್ಕಾಗಿ ಸಮಸ್ತವನ್ನೂ ವಿಶ್ರಮಿಸಿಕೊಳ್ಳುವದು. ಆದ್ದರಿಂದ ಕೆಲವು ದಿನಗಳ ಮೊದಲು ಇದ್ದ ಅದರ ಸತೇಜವಾದ ಶರೀರವು ಈಗ ಒಮ್ಮೆಲೆ ಒಣಗಿ ಹೋಗುವದು. ಶರೀರಭಾಗವನ್ನು ಹೊರಲು ಕೂಡ ಅದಕ್ಕೆ ಶಕ್ತಿ ಉಳಿಯುವದಿಲ್ಲ. ಮೊದಮೊದಲು ಗಾಳಿಯು ಭರ್ರನೆ ಬಂದು ಎಲೆಗಳನ್ನೆಲ್ಲ ಅಲುಗಾಡಿಸಿ ಹೋಗುತ್ತಿದ್ದಾಗ ಎಲೆಗಳೂ ಕೂಡ ಗಾಳಿಯೊಡನೆ ಆಟವಾಡುತ್ತಿದ್ದವು. ಅಲ್ಲದೆ ಪುಟ್ಟ ಪುಟ್ಟ ಶಾಖೆಗಳೆಲ್ಲ ತಾಳತಾಳಗಳಮೇಲೆ ನರ್ತಿಸುತ್ತಿದ್ದವು. ಈಗ ಒಣಗಿದ ಆ ಗಿಡವು ಗಾಳಿಯ ಹೊಡತವನ್ನು ಸಹಿಸಲಾರದೆ ಥರಥರನೆ ಕಂಪಿಸಿ ಒಂದೊಂದಾಗಿ ಮುರಿದುಬೀಳುವವು. ಕಟ್ಟಕಡೆಗೆ ಒಂದುದಿನ ಬೊಡ್ಡೆ ಮುರಿದು ನೆಲದಮೇಲೆ ಗಿಡವು ಉರುಳುವದು.

ಈ ರೀತಿಯಾಗಿ ಗಿಡವು ಸಂತಾನವನ್ನು ಕಾಯುವುದಕ್ಕಾಗಿ ತನ್ನ ಜೀವನವನ್ನೇ ಕೊಟ್ಟು ಸತ್ತು ಹೋಗುವದು.

ಮಾಲೆಂಕೋವ್ಹ

(ಸ್ಟಾಲಿನ್ನರ ಉತ್ತರಾಧಿಕಾರಿ)

ಲೇಖಕರು:—ಶ್ರೀಯುತ ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ
ನಿವೃತ್ತ ಅಸಿಸಂಟ್ಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ.

ಮೊದಲ ಮಾತು

ವಿಶ್ವದ ಕಂಣುಗಳೆಲ್ಲ ಈಗ ರಶಿಯ ಮತ್ತು ಅಮೇರಿಕ ಇವುಗಳ ಕಡೆಗೆ ಹೊರಳಿವೆ. ಮೂರನೆಯ ಮಹಾಯುದ್ಧವು ಸಂಭವಿಸುವದಾದರೆ (ಜಗತ್ತಿನ ಹಿತದ ದೃಷ್ಟಿಯಿಂದ ಅದು ನಿಜವಾಗಿ ಯಾರಿಗೂ ಬೇಡಾಗಿದೆ) ಇವೆರಡೂ ರಾಷ್ಟ್ರಗಳ ತಿಕ್ಕಾಟದಿಂದಲೇ ಘಟಿಸಬಹುದೆಂಬ ಅಂಜಿಕೆಯು ಉಳಿದೆಲ್ಲ ರಾಷ್ಟ್ರಗಳ ಮುಖಂಡರ ಮನಸಿನಲ್ಲಿ ನೆಲೆಸಿದೆಯೆಂಬ ಸಂಗತಿಯು ಯುಕ್ತ-ರಾಷ್ಟ್ರ-ಸಂಘದ ಸಭೆಗಳಲ್ಲಿ ನಡೆಯುವ ಚರ್ಚೆಗಳ ಮೇಲಿಂದ ಒಡೆದೆದ್ದು ಕಂಡು ಬರುತ್ತಿದೆಯಲ್ಲವೇ? ಮಾರ್ಶಲ್ ಸ್ಟಾಲಿನ್ನರ ನಿಧನದ ತರುವಾಯ ಎಲ್ಲ ರಾಷ್ಟ್ರಗಳ ದೃಷ್ಟಿಯು ರಶಿಯದತ್ತ ವಿಶೇಷವಾಗಿ ಹೊರಳಿದೆ. ಮಾಲೆಂಕೋವ್ಹರು ಸ್ಟಾಲಿನ್ನರ ಉತ್ತರಾಧಿಕಾರಿಯಾಗಿ ಮುಖ್ಯ ಮಂತ್ರಿ ಪದವಿಯನ್ನು ಸ್ವೀಕರಿಸಿದ ನಂತರ ಮಾಡಿದ ಭಾಷಣಗಳನ್ನು ಎಲ್ಲ ರಾಷ್ಟ್ರಗಳ ಮುತ್ಸದ್ದಿಗಳು ಕಂಣಲ್ಲಿ ಕಂಣಿಟ್ಟುಗೊಂಡು ಅಭ್ಯಸಿಸಲಿದ್ದಾರೆ. ಸ್ಟಾಲಿನ್ನರ ಶವ ಸಂಸ್ಕಾರದ ವೇಳೆಯಲ್ಲಿ (ದಿನಾಂಕ ೯-೩-೧೯೫೩) ಮಾಲೆಂಕೋವ್ಹರು ಉತ್ತಮೋತ್ತಮವಾದೊಂದು ಆಶಾಭರಿತವಾದ ಹೇಳಿಕೆಯನ್ನು ಜಗತ್ತಿಗೆ ಕೊಟ್ಟಿದ್ದಾರೆ. "ನಮಗೆ ಯುದ್ಧವು ಬೇಡ. ಸ್ಟಾಲಿನರು ಹಾಕಿ ಕೊಟ್ಟ ಶಾಂತಿ ಧೋರಣದಿಂದಲೇ ರಶಿಯವು ಮುಂದೆ ಸಾಗುವದು. ಒಂದು ವೇಳೆ ವೈರಿಗಳು ಮೇಲೇರಿ ಬಂದರೆ ಅವರನ್ನು ಧ್ವಂಸ ಮಾಡುವಷ್ಟು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸಂಗ್ರಹವು ವೆಗ್ಗಳವಾಗಿದೆ." ಇದರ ಮೇಲಿಂದ ಕಾಲು ಕೆದರಿ ಜಗಳ ಹೂಡಬೇಕೆಂಬ ಮನೋವೃತ್ತಿಯು ರಶಿಯದಲ್ಲಿಲ್ಲವೆಂಬುದು ಸ್ಪಷ್ಟವಾಯಿತಲ್ಲವೇ? ಈಗಿನಂತಹ ಆಯಕಟ್ಟಿನ ಸಮಯದಲ್ಲಿ ಇಂತಹ ಜಾಗತಿಕ ಮಹತಿಯನ್ನು ಪಡೆದಂತಹವನ ಚರಿತ್ರದ ಅಲ್ಪ ಪರಿಚಯವು ನಮ್ಮ ಓದುಗರಿಗಿರುವದು ವಿಹಿತವಲ್ಲವೇ? ಈ ಸದುದ್ದೇಶದಿಂದ ದೈನಿಕಗಳಲ್ಲಿ ದೊರೆತ ವಿವರಗಳನ್ನೆಲ್ಲ ಶಕ್ಯವಿದ್ದಷ್ಟು ಕಲೆ ಹಾಕಿ ಸುಸಂಬದ್ಧವಾಗಿ ಹೊಂದಿಸಿ ಈ ಲೇಖವನ್ನು ಬರೆಯಲಾಗಿದೆ.

ಬಾಲ್ಯ ಮತ್ತು ಶಿಕ್ಷಣ

ಅವರ ಪೂರ್ಣ ಹೆಸರು ಜಾರ್ಜ ಮಾಕ್ಝಿಮಿಲಿಯಾನೋವಿಚ್ ಮಾಲೆಂಕೋವ್ಹ (Georgie Max[illegible]i-milianovic[illegible] Malenkov) ಎಂದು ಇದೆ. ಅವರ ಜನ್ಮ ತಾರೀಖು ನಿಷ್ಕರ್ಷವಾಗಿ ಗೊತ್ತಾಗಿರದಿದ್ದರೂ, ಅವರು ೧೯೦೧ ಇಲ್ಲವೆ ೧೯೦೨ ರಲ್ಲಿ ಜನಿಸಿರಬಹುದೆಂಬ ತರ್ಕವಿದೆ. ದಕ್ಷಿಣ ಉರಲ್ ಪ್ರಾಂತದಲ್ಲಿ ಓರೆನ್‌ಬರ್ಗ (ಈಗ ಅದಕ್ಕೆ ಚಕಲೋವ್ಹ ಎಂಬ ಹೆಸರು ಪ್ರಾಪ್ತವಾಗಿದೆ) ಎಂಬ ಪಟ್ಟಣದಲ್ಲಿ ಕೋಸ್ಯಾಕ್ (Cossack) ಎಂಬ ಹೆಸರಿನ ರಶಿಯದ ಸೈನ್ಯ-ವಿಭಾಗದ ಅಧಿಕಾರಿಯ ಮನೆತನದಲ್ಲಿ ಹುಟ್ಟಿದರು. ಹದಿನೆಂಟು ವರುಷದವರಾದಾಗ ಕೆಂಪು ಸೇನೆ (Red Army) ಸೇರಿದರು. ೧೯೨೨ರಲ್ಲಿ ಮಾಸ್ಕೋ ಪಟ್ಟಣದಲ್ಲಿಯದೊಂದು ಟೆಕ್ನಿಕಲ್ ಹಾಯಸ್ಕೂಲಿನಲ್ಲಿ ವಿದ್ಯಾರ್ಥಿಯಾದರು. ೧೯೨೫ರಲ್ಲಿ ಆ ಪಟ್ಟಣದಲ್ಲಿಯ ಎಲ್ಲ ಮಾಧ್ಯಮಿಕ ಸಾಲೆಗಳ ವಿದ್ಯಾರ್ಥಿಗಳ ಸಮತಾವಾದ ಸಂಘದ ಸೆಕ್ರೆಟರಿಯಾಗಿ ಪ್ರತಿಭಾವಂತ ಸೆಕ್ರೆಟರಿಯೆಂಬ ಕೀರ್ತಿಯನ್ನು ಪಡೆದರು. ಆ ಕಾಲಕ್ಕೆ ರಶಿಯದಲ್ಲಿ ಮುಖಂಡರು ಯಾರಾಗಬೇಕೆಂಬ ಬಗೆಗೆ ಟ್ರಾಟ್‌ಸ್ಕಿ (Trotsky) ಸ್ಟಾಲಿನ್ (Stalin) ಇವರೀರ್ವರಲ್ಲಿ ಒಳ್ಳೇ ತುರುಸಿನದೊಂದು ಹೋರಾಟವು ತಲೆ

ದೋರಿತು. ವಿದ್ಯಾರ್ಥಿಗಳ ಸಂಘದಲ್ಲಿ ಬಹುಮತವು ಟ್ರಾಟ್ಸ್ಕಿಯರ ಕಡೆಗಿದ್ದರೂ ಮಾಲೆಂಕೋವ್ಹರು ಸ್ಟಾಲಿನ್ನರ ಪಕ್ಷದ ಸಲುವಾಗಿ ಹೋರಾಡಿದರು. ಈ ಹೋರಾಟದಲ್ಲಿ ಅವರಿಂದ ಹೊರಹೊಮ್ಮಿದ ಸಾಹಸವನ್ನು ಮನದಂದು ಸ್ಟಾಲಿನ್ನರು ಅವರನ್ನು ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡರು.

ಆಡಳಿತೆ ಮತ್ತು ರಾಜತಂತ್ರ

ಸ್ಟಾಲಿನ್ನರ ಆಪ್ತಕಾರ್ಯದರ್ಶಿಯಾಗಿದ್ದಾಗ ಅವರು ತಮ್ಮ ಪ್ರೌಢಿಮೆಯನ್ನು ಎಲ್ಲರಿಗೂ ತೋರ್ಪಡಿಸಿದರು. ಆಡಳಿತೆಯಲ್ಲಿಯೂ ರಾಜತಂತ್ರದಲ್ಲಿಯೂ ಅವರಿಂದ ಹೊರಹೊಮ್ಮಿದ ಕೈಚಳಕವು ಸ್ಟಾಲಿನ್ನರ ಮನಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಿತು. ಸಮತಾವಾದದ ವೈರಿಗಳನ್ನು ನಿರ್ದಾಕ್ಷಿಣ್ಯದಿಂದಲೂ ಕಠೋರತನ[illegible] ಚಿತ್ರಹಿಂಸೆಯಿಂದಲೂ ಬಗ್ಗುಬಡಿದರು. [illegible]ಸ ಸಂಘದ ನೂರಾರು ನಾಮಾಂಕಿತ ಸದಸ್ಯರು ಸಂಘದ ವಿರುದ್ಧ ಹಲಕೆಲವು ಕೃತಿಗಳನ್ನು ಮಾಡಿದ್ದರು. ಅವುಗಳನ್ನೆಲ್ಲ ನಮೂದಿಸಿಟ್ಟು ಕಾಗದ ಪತ್ರಗಳ ಪುರಾವೆಗಳನ್ನು ತಯಾರಿಸಿ ಅವರನ್ನೆಲ್ಲ ಕಜೇರಿಗೆ ಎಳೆತಂದು ವಿಚಾರಣೆಗೆ ಗುರಿಮಾಡಿ ಆರೋಪವು ಸಿದ್ಧವಾದ ಮೇಲೆ ಅವರನ್ನೆಲ್ಲ ಸಂಘದಿಂದ ಹೊರದೂಡಿದರು. ಅಂದಿನಿಂದ ಅವರು ಮಿಂಚಿನ ವೇಗದಿಂದ ಹುದ್ದೆಯಿಂದ ಹುದ್ದೆಗೆ ಮೇಲೇರುತ್ತ ನಡೆದರು. ಹೋದ ಮಹಾಯುದ್ಧದಲ್ಲಿ ದಿನಕ್ಕೆ ೩-೪ ತಾಸುಗಳಷ್ಟೇ ನಿದ್ದೆಯನ್ನು ಮಾಡಿ ಉಳಿದೆಲ್ಲ ವೇಳೆಯಲ್ಲಿ ಕೆಲಸದಲ್ಲಿ ತೊಡಗಿ ಸ್ಟಾಲಿನ್ನರ ಬಲಗೈಯಾಗಿ ಕೆಲಸ ಮಾಡಿದ್ದಾರೆ. ರಾಜತಂತ್ರದ ಹಂಚಿಕೆಗಳಲ್ಲಿಯೂ ಗತ್ತುಗಾರಿಕೆಗಳಲ್ಲಿಯೂ ಕುಟಿಲ ಕಾರಸ್ಥಾನಗಳಲ್ಲಿಯೂ ಅವರದು ಮೇಲುಗೈ. ಆದುದರಿಂದಲೇ, ಸ್ಟಾಲಿನ್ನರು ತಮ್ಮ ತರುವಾಯ ಮಾಲೆಂಕೋವ್ಹರು ಮುಖ್ಯ ಮಂತ್ರಿಯಾಗಬೇಕೆಂದ ಬರೆದಿಟ್ಟಿರಬೇಕೆಂದು ಇಲ್ಲವೆ ಕೊನೆಯ ಗಳಿಗೆಯಲ್ಲಿ ಆದಿ ತೋರಿಸಿರಬೇಕೆಂದು ಹಲವು ಮುತ್ಸದ್ದಿಗಳ ಊಹೆಯಿದೆ.

ಕೊನೆಯ ಮಾತು

ಈಗಲೂ ಉಚ್ಚತಮ ಪದವಿಗೇರಿ ಮುಖ್ಯ ಮಂತ್ರಿಯಾಗಿದ್ದಾಯಿತು. ಅವರು ತಮ್ಮ ಸಂಗಡಿಗರಾದ ಮೊಲೊಟೋವ್ಹ, ಬೆರಿಯಾ, ಬಲ್ಗಾನಿನ್ ಮತ್ತು ಕಗನೋವಿಚ್ ಈ ನಾಲ್ವರಗೂಡ ಕೂಡಿಕೊಂಡು ಕೆಲಸ ಮಾಡಬೇಕಾಗಿದೆ. ಈ ನಾಲ್ವರು ಮಾಲೆಂಕೋವ್ಹರಂತೆ ಸ್ಟಾಲಿನ್ನರ ಗರಡೀ ಮನೆಯಲ್ಲಿ ತರಬೇತಿ ಹೊಂದಿದ ರಾಜತಂತ್ರಪಟುಗಳೆಂಬ ಮಾತನ್ನು ಓದುಗರ ಗಮನಕ್ಕೆ ಈ ಸಂದರ್ಭದಲ್ಲಿ ತರಬಯಸಲಾಗಿದೆ. ಸ್ಟಾಲಿನ್ನರಂತೆ ಮಾಲೆಂಕೋವ್ಹರಿಗೆ ಸರ್ವಾಧಿಕಾರಿಯಾಗಿ ಆಡಳಿತೆಯನ್ನು ಈಗ ಸಾಗಿಸುವದು ದುಸ್ತರವಿದೆ. ಸಮತಾವಾದದ ಸಂಘದ ಶಕ್ತಿಯನ್ನು ಹೆಚ್ಚಿಸಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕಾಗಿದೆ. ಸಮತಾವಾದದ ಸರಕಾರ (Soviet Regime) ವು ಬಹುಜನರಿಗೆ ಬೇಡಾಗಿದೆ. ಸಮತಾವಾದದ ತತ್ವಗಳನ್ನೆಲ್ಲ ಜನತೆಗೆ ತಿಳಿಹೇಳಿ ಅವು ಜನಪ್ರಿಯವಾಗುವಂತೆ ಮಾಡುವ ಭಾರವು ಅವರ ಮೇಲೂ ಅವರ ಅನುಯಾಯಿಗಳ ಮೇಲೂ ಇದೆ. ಈಗಿನ ಹೊಸ ಸರಕಾರವು ಜನಹಿತಕ್ಕಾಗಿಯೇ ಇದೆಯೆಂಬುದನ್ನು ಕೃತಿಗಿಳಿಸಿ ತೋರಿಸಬೇಕಾಗಿದೆ. ಇಷ್ಟೆಲ್ಲ ಮಾಡಿ ತೋರಿಸಲು ಸಾಕಷ್ಟು ವೇಳೆಯು ಬೇಕಲ್ಲವೇ ? ಆದುದರಿಂದಲೇ, ಈಗ ಯುದ್ಧ ಬೇಡನೆಂದು ರಶಿಯವು ಕೂಗನ್ನೆಬ್ಬಿಸಿದೆಯೆಂದು ಹಲವು ರಾಜಕಾರಣಿಗಳ ಮತವಾಗಿದೆ. ಅದು ಏನೇ ಇರಲಿ, ಈಗ ಎಲ್ಲ ರಾಷ್ಟ್ರಗಳಿಗೆ ಬೇಕಾದ ಒಂದೇ ಒಂದು ಮಾತೆಂದರೆ ಶಾಂತಿಯು. ಯಾಕೆಂದರೆ, ಹೋದ ವಿಶ್ವಮೇಧದಲ್ಲಿ ಎಲ್ಲ ರಾಷ್ಟ್ರಗಳು ಬೆಂದು-ನೊಂದು ಜೇತರಿಸಿಕೊಂಡೇಳದಷ್ಟು ಜರ್ಜರಿತವಾಗಿವೆ. ಮಾಲೆಂಕೋವ್ಹರಾದರೂ ಆ ಶಾಂತಿಯನ್ನೇ ಈಗ ಬಯಸುತ್ತಿರುವದು ನಿಜಕ್ಕೂ ಶುಭ ಚಿಹ್ನವೆಂದೇ ಭಾವಿಸುವದೊಳಿತು. ಆ ಶಾಂತಿಯು ಶಾಶ್ವತವಾಗಿ ಬಾಳಬೇಕೆಂಬುದು ನಮ್ಮ ಹೆಬ್ಬಯಕೆ.



ಶಿಕ್ಷಕನ ಜ್ಞಾನದಾನದ ಕಾರ್ಯ

ಲೇಖಕರು :— ಶ್ರೀ. ತಟ್ಟಿ ಶ್ಯಾಮರಾಯರು, ನಿವೃತ್ತ ಪ್ರಿನ್ಸಿಪಾಲರು, ಧಾರವಾಡ

ವಿಷಯ ಬೋಧನೆಯು ಶಿಕ್ಷಕನ ಕಾರ್ಯಕಲಾಪಗಳಲ್ಲಿ ಒಂದಾಂಶವಾದರೂ ಜನರು ಶಿಕ್ಷಕನೆಂದರೆ ಹುಡುಗರಿಗೆ ಜ್ಞಾನವಮಾಡಿಕೊಡುವವನೆಂದೇ ಆತನನ್ನು ನೆನಸುತ್ತಾರೆ. ಆ ಕಾರ್ಯವೂ ದೊಡ್ಡದೇ. ಆದರೆ ಕಲಿಸುವದೆಂದರೆ ಕಲಿಯುವಂತೆ ಪ್ರಚೋದಿಸುವದಾಗಿದ್ದು ನಿತ್ಯ-ಜೀವನದಲ್ಲಿ ನಾವು ಕಲಿಯುವ ರೀತಿಗಳು ಬಹುಮುಖ-ವಾಗಿವೆ. ಒಂದೊಂದು ಸಲ ಕೆಲವೊಂದು ಸಂಗತಿಗಳು ನಮಗೆ ತಿಳಿದಿರುವದು ಯಾರೋ ಒಬ್ಬರು ನಮಗೆ ಅವನ್ನು ಹೇಳಿರುವದರಿಂದಲೇ. ಅವನು ವಿಶ್ವಾಸಕ್ಕೆ ಅತ್ಯಂತ ಪಾತ್ರವಾದ ಸ್ಥಾನವಾಗಿದ್ದರೆ ಅದು ಜ್ಞಾನ ಸಂಪಾದನೆಗೆ ಒಂದು ಶೀಘ್ರವಾದ, ಸುಲಭವಾಧ್ಯವಾದ ಮಾರ್ಗವಾಗುವದು. ಆದರೂ ಈ ರೀತಿಯಾಗಿ ನಾವು ಕಲಿತದ್ದು ನಮ್ಮ ಸ್ವಂತ ಅನುಭವದಿಂದ ಕಲಿತ ಮಾತಿನಷ್ಟು ಮನಸ್ಸಿನಮೇಲೆ ಅಚ್ಚೊತ್ತುವದಿಲ್ಲ. ಮಲೆನಾಡಿನ ಹವೆಯು ಅನಾರೋಗ್ಯಕರವೆಂದು ಜನರು ನಮಗೆ ಹೇಳಬಹುದು; ಆದರೆ ಚಳಿಜ್ವರದೊಡನೆ ನಾವು ಹೋರಾಡಿದ್ದ ಪಕ್ಷದಲ್ಲಿ ಆ ಮಾತಿನ ಅರ್ಥವು ನಮಗೆ ವಿಲಕ್ಷಣವಾದ ರೀತಿಯಿಂದ ಆಗುವದು. ಲೋಕದಲ್ಲಿ ಅಪ್ರಾಮಾಣಿಕ ಜನರಿರುವರೆಂಬದನ್ನು ನಾವು ಕೇಳಬಹುದು. ಆದರೆ ನಾವು ವಂಚಿಸಲ್ಪಟ್ಟಾಗಲೇ ಅದರ ಅರ್ಥವು ನಮಗೆ ಪೂರ್ತಿಯಾಗಿ ಆಗುವದು. ತೀಕ್ಷ್ಣ ಗಂಧಕಾಮ್ಲವನ್ನು ಉಪಯೋಗಿಸುವಾಗ ಎಚ್ಚರದಿಂದರಬೇಕೆಂದು ಹುಡುಗರಿಗೆ ನಾವು ಹೇಳುವೆವು; ಆದರೆ ಅದರದೊಂದು ಹನಿ ಅವನ ಬೆರಳಿನಮೇಲೆ ಇಲ್ಲವೆ ಬಟ್ಟೆಯಮೇಲೆ ಬಿದ್ದಾಗ ಅದು ಅವನಿಗೆ ಹೆಚ್ಚು ಮನಗಾಣಿಸುವ ಎಚ್ಚರಿಕೆಯಾಗಿ ಪರಿಣಮಿಸುವದು. ಅನು-ಭವವೆಂಬ ಮಾತಿನ ಸರಿಯಾದ ಅರ್ಥವನ್ನು ಹೇಳುವದು ಕಷ್ಟ; ಆದರೂ ಪ್ರಪಂಚದೊಡನೆ ನಮಗುಂಟಾಗುವ ಪ್ರತ್ಯಕ್ಷ ಸಂಪರ್ಕವನ್ನಷ್ಟು ಅದು ವಿಷಯೀಕರಿಸುತ್ತದೆಂದು ತಿಳಿಯಬಹುದು—ಎಂದರೆ ನಮ್ಮ ಸುತ್ತುಮುತ್ತಲೂ ಇರುವ ವಿದ್ಯಾರ್ಥಿಗಳು ಹಾಗು ಜನರು, ಅವರಿಂದಾಗುವ ನಮ್ಮ ಮನಸಿನ ಮೇಲೆ ಸಂಸ್ಕಾರ, ಆ ಸಂಸ್ಕಾರಗಳಿಗೆ ನಮ್ಮಿಂದಾಗುವ ಪ್ರತಿಕ್ರಿಯೆಗಳು, ಈ ಪ್ರತಿಕ್ರಿಯೆಗೆ ಮತ್ತೆ ಉಂಟಾಗುವ ಪ್ರತಿಫಲ, ಇತ್ಯಾದಿ.

ಆದರೆ ಪ್ರತಿಯೊಂದು ಮಾತನ್ನು ಸಾಕ್ಷಾತ್ ಅನು-ಭವದಿಂದ ಕಲಿಯುವದಕ್ಕೆ ಬಹು ದೀರ್ಘಕಾಲವು ಹಿಡಿಯಬಹುದು, ಇದೊಂದೇ ಅಲ್ಲದೆ, ಶೋಧಿಸದೆ ಇದ್ದ ವೈಯಕ್ತಿಕ ಅನುಭವವು ಯಾವಾಗಲೂ ... ರ್ಣ ವಾಗಿ ವಿಶ್ವಸನೀಯವಾದುದೆಂದು ಹೇಳ ... ಟವೆದಿಲ್ಲ. ಮೊದಲನೆಸಲ ತಾನು ಮಾಡಿಕೊಂಡ ಗ್ರಹಿಕೆಯು ತಪ್ಪೆಂದು ನಿರ್ವಾಹವಿಲ್ಲದೆ ಒಪ್ಪಿಕೊಳ್ಳುವ ಒಂದಿಲ್ಲೊಂದು ಸಮಯ ಯಾರಿಗೆ ತಾನೆ ಬಂದಿಲ್ಲ ?

ಹೀಗಾಗಿ ಇತರ ಅನುಭವದಿಂದ ಕಲಿತುಕೊಳ್ಳುವ ನಮ್ಮ ಕೈಯಲ್ಲಿದ್ದ ಮಹತ್ತರವಾದ ಲಾಭವನ್ನು ಬಿಟ್ಟು-ಕೊಡುವದು ಹುಚ್ಚತನವಾಗುವದು. ಜ್ಞಾನವನ್ನು ದೊರಕಿಸುವ ಬಿಡಲುಬಾರದ ಸ್ವಾಭಾವಿಕವಾದ ಸಾಧನವೆಂದು ಅದಕ್ಕೆ ನಾವು ಮೊರೆ ಹೋಗಬೇಕಾಗುವದು. ಜನರ ಮಾತನ್ನು ಕಿವಿಗೊಟ್ಟು ಕೇಳುವೆವು, ಅವರನ್ನು ಪ್ರಶ್ನಿಸುವೆವು; ಇತರರ ರೀತಿಯನ್ನು ಅನುಕರಿಸುವೆವು; ಅನುಮಾನಗಳನ್ನು ತೆಗೆಯುವೆವು; ಯಾರ ಮಧ್ಯದಲ್ಲಿ ನಾವು ಬಾಳುವೆವೋ ಅವರ ಮನಸಿನ ವೃತ್ತಿಯಿಂದ ಕಂಡು ಕಾಣದೆಯೇ ನಮ್ಮ ಮೇಲೆ ಪರಿಣಾಮವಾಗುವದು. ಹೇಗೆ ಮತ್ತು ಯಾವ ಯಾವ ಪ್ರಸಂಗ ಪರಿಸ್ಥಿತಿಯಲ್ಲಿ ಜನರು, ವಿಶೇಷತಃ ಮಕ್ಕಳು ಬುದ್ಧಿ ಕಲಿತುಕೊಳ್ಳುವರೆಂಬದನ್ನು ವಿಚಾರಿಸಿ ತಿಳಿದುಕೊಳ್ಳುವದು ಶಿಕ್ಷಕನ ಮೊದಲನೆಯ ಕರ್ತವ್ಯವಾಗಿದೆ ... ಸಾ-ಮಾನ್ಯವಾಗಿ ಜ್ಞಾನವು ಎರಡುರೀತಿಯಿ ... ಲ್ಪಡುವವೆಂದು ಹೇಳಬಹುದು.

೧. ಹೊರಗಿನಿಂದ ನಮ್ಮ ಮೇಲಾಗುವ ಸಂಸ್ಕಾರಗಳಿಂದ.

೨. ನಮ್ಮ ಕಲ್ಪನೆಗಳಿಗೆ ಮತ್ತು ಪ್ರೇರಣೆಗಳಿಗೆ ವ್ಯಕ್ತರೂಪವನ್ನು ಕೊಡಲಿಕ್ಕೆ ನಾವು ಮಾಡಿದ ಪ್ರಯತ್ನಗಳಿಗೆ ನಮಗುಂಟಾದ ಜಯಾಪಜಯಗಳಿಂದ.

ಈ ಹೊರಗಿನ ಸಂಸ್ಕಾರಗಳ ಮೂಲವನ್ನೂ ಅವುಗಳ ಬಗೆಗೆ ನಮ್ಮ ಮನೋಭಾವವನ್ನೂ ಮೊದಲು ವಿಚಾರಿಸೋಣ. ಈ ಸಂಸ್ಕಾರಗಳನ್ನು ನಾವು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು:

ಅ. ನಮಗೆ ಕಲಿಸಲೆಳಸುತ್ತಿರುವವರು ಹೇಳುವದನ್ನು ಕೇಳುವಾಗ ಬುದ್ಧಿಪುರಃಸರವಾಗಿ ನಾವು ಗ್ರಹಿಸುವ ಎಲ್ಲ ವಿಷಯಾಂಶಗಳು.

ಬ. ಪ್ರಶ್ನೆಗಳನ್ನು ಕೇಳುವಾಗ, ಪ್ರತ್ಯಕ್ಷ ನಿರೀಕ್ಷಣೆ ಮಾಡುವಾಗ, ಪ್ರಯೋಗದಿಂದ ಪರೀಕ್ಷೆಗೆ ಇಳಿದಾಗ, ಇ- ರ ಕೃತಿಗಳನ್ನು ಅನುಕರಿಸುವಾಗ, ನಾವು ಉದ್ದೇಶಪೂರ್ವಕವಾಗಿ ಅಪೇಕ್ಷಿಸುವ ವಿಷಯಾಂಶಗಳು.

ಕ. ನಮ್ಮ ಕೈವಿಾರಿದ, ನಮ್ಮ ಸ್ವಾಧೀನದಲ್ಲಿರದ ಸಂಗತಿಗಳಿಂದ ಬೇಡವೆಂದರೂ ನಮ್ಮ ಮೇಲೆ ಬಂದು ಬಿದ್ದ ವಿಷಯಾಂಶಗಳು (ಯಾವವು ನಮ್ಮನ್ನು ಹೆಚ್ಚು ಕಡಿಮೆ ದುಃಖಕ್ಕೀಡುಮಾಡಿ ಎಂದೂ ಮರೆಯಲಾರದಂತಹ ಬುದ್ಧಿಯನ್ನು ಕಲಿಸುವವೊ ಅಂತಹ, ಆಕಸ್ಮಿತ ಘಟನೆಗಳು—ಸುಟ್ಟುಕೊಂಡ ಕೂಸು ಯಾವಾಗಲೂ ಬೆಂಕಿಯಿಂವರೆ ಹೆದರುವದು,—ಇತರರು ನಮಗಾಗಿ ನಿಯಮಿಸಿದ ನಾನಾವಿಧವಾದ ನಿರಂತರ ಶಾಸನಕ್ಕೆ ನಾವು ತಲೆಬಾಗಬೇಕಾಗುವದು— ಸ್ವಚ್ಛತೆಯಿಂದಿರುವದಕ್ಕೆ ' ದಡ್ಡಿ ಬಿದ್ದ ' ರೂಢಿಗಳು, ಇತರರ ಮನೋಭಾವನೆಗಳಿಗೆ ಗಮನ, ಇವು ಈ ರೀತಿಯಾಗಿ ನೆಲೆಗೊಂಡಿರಬಹುದು—);

ಡ. ನಮ್ಮ ಬಹಿರ್ಮನಸ್ಸಿಗೆ ತಿಳಿಯದೆಯೇ ನಾವು ಮೈಗೂಡಿಸಿಕೊಳ್ಳುವ ಸಂಸ್ಕಾರಗಳು. ಉದಾ: ನಮ್ಮ ಸುತ್ತುಮುತ್ತಲಿರುವ ಜನರ ನೀತಿ ನಡತೆಗಳನ್ನೂ ಮಾತಿನ ರೀತಿಯನ್ನೂ ನಾವು ಸ್ವೇಚ್ಛೆಯಿಂದ ನಮ್ಮವರನ್ನಾಗಿ ಮಾಡಿಕೊಳ್ಳುವೆವು; ಸಮಕಾಲೀನ ಜನರ ನಂಬುಗೆಗಳನ್ನೂ ಅವಿಮರ್ಶಿತ ಪೂರ್ವಗ್ರಹಗಳನ್ನೂ ನಮ್ಮ ಮೇಲಿನ ಅವುಗಳ ಪರಿಣಾಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ರಕ್ತಾಗತವಾಗಿ ಮಾಡಿಕೊಳ್ಳುವೆವು; ಮುಂದೆ ಹೊಸದೊಂದು ಸನ್ನಿವೇಶವು ಪ್ರಾಪ್ತವಾದಾಗ ' ಇದೇನು ನಮ್ಮ ಈ ಅವಸ್ಥೆ ' ಎಂದೂ ಕೆಲವು ಸಂಗತಿಗಳನ್ನು ನಾವು ಏಕೆ ಗೃಹೀತವಾಗಿ ಹಿಡಿದೆವೆಂದೂ ನಮ್ಮ ವಿಷಯಕ್ಕೆ ನಾವು ವಿಚಾರ ಮಾಡಬೇಕಾಗಿ ಬರುವದು. ಉದಾಹರಣೆಗಾಗಿ, ಉದಾರಹೃದಯದ ಜನರ ಸಹವಾಸದಲ್ಲಿ ಬರುವವರೆಗೆ ಅಹಂಶ್ರೇಷ್ಠ ಭಾವವುಳ್ಳ ಜನರಿಗೆ ತಮ್ಮ ಸ್ವಭಾವದ ಅರಿವು ತಮಗೆಂದೂ ಆಗುವದಿಲ್ಲ.

ಈ ಎಲ್ಲ ಉದಾಹರಣೆಗಳಲ್ಲಿ ಜ್ಞಾನದ ಆಧಾರಗಳಾದ ಬಾಹ್ಯ ಸಂಸ್ಕಾರಗಳನ್ನು ನಾವು ವಿಚಾರಿಸುತ್ತಲಿದ್ದೇವೆ. ಇದೇ ಕಾಲಕ್ಕೆ ನಾವು ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು, ಅದಾವದೆಂದರೆ ಒಂದೇ ಹೊರಗಿನ ಘಟನೆಯು ಬೇರೆ ಬೇರೆ ವ್ಯಕ್ತಿಗಳ ಮೇಲೆ ಬೇರೆ ಬೇರೆ ಪರಿಣಾಮವನ್ನುಂಟುಮಾಡುವದು. ಇದರ ವಿವರಣೆಯನ್ನು ಸದ್ಯಕ್ಕೆ ಬಿಟ್ಟುಬಿಡೋಣ.

ಇದನ್ನು ಜ್ಞಾನ ಸಂಪಾದನೆಯ ಮೇಲೆ ಹೇಳಿದ ೨ನೆಯ ಮಾರ್ಗವ ಕುರಿತು ಹೇಳಬೇಕಾದರೆ, ನಮಗೆ ತಿಳಿದಿದೆ ಎಂದು ಭಾವಿಸಿದ ವಿಷಯಗಳಿಗೆ ವ್ಯಕ್ತರೂಪವನ್ನು ಕೊಡಲಿಕ್ಕೆ ಮಾಡಿದ ಪ್ರಯತ್ನಗಳಿಂದ ನಮ್ಮ ಲೋಪದೋಷಗಳನ್ನು ಕಳೆದುಕೊಳ್ಳಲಿಕ್ಕೆ ಸಾಧಕವಾಗುವದು. ಅಭಿವ್ಯಕ್ತಿಯು ನಾನಾವಿಧರೂಪವನ್ನು ತಾಳಬಹುದು, ಉದಾ: ಹಾವಭಾವ ಆಟ. ಆಡಿದ ಮತ್ತು ಬರೆದ ಮಾತು, ಸಂಗೀತ, ನಾಟಕ, ಹಾಗು ಎಲ್ಲ ಪ್ರಕಾರದ ಸಂಘಟಕ, ವಿಧಾಯಕ ಮತ್ತು ಬೌದ್ಧಿಕ ಚಟುವಟಿಕೆಗಳು. ಸಮುದ್ರದ ಏರಿಳಿತದ ಕಾರಣಗಳನ್ನು ನಾವು ತಿಳಿದುಕೊಂಡಿದ್ದೇವೆಂದು ಭಾವಿಸಬಹುದು; ಆದರೆ ಕುತೂಹಲದಿಂದ ಕೇಳುವ ಒಬ್ಬ ಸ್ನೇಹಿತನ ಮುಂದೆ ವಿವರಿಸಲಿಕ್ಕೆ ಹೋದಾಗ ಅವನು ಹಾಕುವ ಪ್ರಶ್ನೆಗಳಿಂದ ನಮ್ಮ ವಿಚಾರಗಳು ತಲೆ ಕೆಳಗಾಗಿ ಬಿಟ್ಟು ಅವನ್ನು ನಾವು ಮನರ್ವಿಮರ್ಶಿಸಬೇಕಾಗಿರುವದು; ಅಥವಾ ತೇವದಿಂದ ಕೂಡಿದ ಒಂದು ಗಾಜಿನ ತುಣುಕಿಗೆ ರೇಶಿಮೆಯವಸ್ತ್ರದಿಂದ ಉಜ್ಜಿ ಅದರಲ್ಲಿ ವಿದ್ಯುತ್ತನ್ನು ಉಂಟುಮಾಡಬೇಕೆಂದು ವ್ಯರ್ಥವಾಗಿ ಪ್ರಯತ್ನ

ಮಾಡಿ ಕೊನೆಯಲ್ಲಿ ಗಾಜಿನ ತುಂಡು ಶಬ್ದವಾಗಿದ್ದ ವಿನಾ ಕೆಲವು ದೊರೆಯಲಾರದೆಂದು ಕಂಡುಕೊಳ್ಳುವೆವು; ಅಥವಾ ಆಯ್ಕೆಯೊಂದರಲ್ಲಿ ತನ್ನ ಮತವನ್ನು ಕೊಡಹೋದ ಒಬ್ಬ ನಾಗರಿಕನಿಗೆ ಚುನಾವಣೆಯ ಕಾಯದೆಯಲ್ಲಿರುವ ಒಂದು ಲೋಪದ ಕಾರಣದಿಂದ ತನ್ನ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದೆ ಹೋದದ್ದು ತಿಳಿಯುವದು. ಈ ಕಲಿಯುವ ಪ್ರಕಾರಗಳಲ್ಲಿ ಒಂದೊಂದಾಗಿ ಎಲ್ಲವನ್ನೂ ಶಿಕ್ಷಕನು ವಿಚಾರಿಸಬೇಕಾದದ್ದಿರುವದು. ವ್ಯವಹಾರದಲ್ಲಿ ಯಾವ ರೂಪವನ್ನು ಅವು ತಾಳುವವೆಂಬದನ್ನು ಸಾವಕಾಶವಾಗಿ ನಾವು ವಿಚಾರಿಸೋಣ.

ಅದಿಬುನಾದಿಯಿಂದ ನಡೆದು ಬಂದ ಅವನ ಕಾರ್ಯವು ಪ್ರತ್ಯಕ್ಷ ಬೋಧನವಾಗಿದೆ. ವಿಷಯಗಳ ಜ್ಞಾನಮಾಡಿಕೊಡುವದು ತನ್ನ ಮೊದಲನೆಯ ಕೆಲಸವೆಂದು ಅವನು ಭಾವಿಸುವನು; ಮತ್ತು ಆಗತಿಕನಾಗಿ ಎಲ್ಲಕ್ಕಿಂತ ಸೇರವಾದ 'ಹೇಳಿಬಿಡುವ' ಪದ್ಧತಿಯನ್ನೇ ಆಶ್ರಯಿಸುವನು; ಆದರೆ ಇಷ್ಟಕ್ಕೆ ತನ್ನ ಕೆಲಸವು ಮುಗಿಯಲಿಲ್ಲವೆಂದು ಸ್ವಲ್ಪ ಸಮಯದಲ್ಲಿಯೇ ಆತನಿಗೆ ಕಂಡುಬರುವದು—ವಿದ್ಯಾರ್ಥಿಗಳು ಅವರಿಗೆ ತಾನು ಹೇಳಿಕೊಟ್ಟದನ್ನು ಕಲಿತಿರುವರೋ ಇಲ್ಲವೋ ಎಂಬದನ್ನು ನೋಡುವದೊಂದಿದೆ.

(ಮುಂದುವರಿಯುವದು)

ಪಂಚವಾರ್ಷಿಕ ಯೋಜನೆ

ಪಂಚವಾರ್ಷಿಕ ಯೋಜನೆಯನ್ನು ಕುರಿತು ಜನತೆಗೆ ತಿಳಿಸುವದಕ್ಕಾಗಿ ಮತ್ತು ಜನತೆಯ ಸಹಕಾರವನ್ನು ಪಡೆಯುಕೊಳ್ಳುವದಕ್ಕಾಗಿ ಭಾರತದ ಪಾರ್ಲಿಮೆಂಟಿನಲ್ಲಿಯೂ ರಾಜ್ಯಗಳ ಶಾಸನ ಸಭೆಗಳಲ್ಲಿಯೂ ಇತರ ಕಡೆಗಳಲ್ಲಿಯೂ ಕಳೆದ ಕೆಲವು ತಿಂಗಳುಗಳಲ್ಲಿ ಚರ್ಚೆಗಳು ನಡೆದವು ಮತ್ತು ಈ ಯೋಜನೆಯ ಮಹತ್ವವನ್ನು ಬಿಂಬಿಸುವದಕ್ಕಾಗಿ ಇದೇ ಎಪ್ರಿಲ್ ೬ ನೆಯ ತಾರೀಖಿನಿಂದ ೧೩ನೆಯ ತಾರೀಖಿನ ವರೆಗೆ ನಡೆದ ರಾಷ್ಟ್ರೀಯ ಸಪ್ತಾಹದಲ್ಲಿ ಅನೇಕ ಬಗೆಯ ಚಟುವಟಿಕೆಗಳು ಜರುಗಿದವು. ಈ ಯೋಜನೆಯಲ್ಲಿ ಭಾರತ ಸರಕಾರವು ಶಿಕ್ಷಣದ ಬಗೆಗೆ ಎಷ್ಟು ಮಹತ್ವವನ್ನು ಕೊಟ್ಟಿದೆ ಎಂಬುದು ಕೆಳಗಿನ ಮಾತುಗಳಿಂದ ತಿಳಿದು ಬರುವದು. ಪ್ರಾಥಮಿಕ ಶಿಕ್ಷಕರು ಈ ಯೋಜನೆಯ ಮಹತ್ವವನ್ನು ಬಾಲಕರಿಗೂ ಪಾಲಕರಿಗೂ ತಿಳಿಸಿಕೊಡಬೇಕಲ್ಲದೆ ಇದು ಯಶಸ್ವಿಯಾಗುವಂತೆ ಮಾಡಲು ಮನಃಪೂರ್ವಕವಾಗಿ ಪ್ರಯತ್ನಿಸಬೇಕೆಂದು ಸರಕಾರವು ಅಪೇಕ್ಷಿಸುತ್ತದೆ. ಈ ಯೋಜನೆಯಿಂದ ಭಾರತವು ಸರ್ವವಿಧದಿಂದಲೂ ಪ್ರಗತಿಗೈಯುವದು. ರಾಷ್ಟ್ರ ನಿರ್ಮಾಣದ ಪ್ರಮುಖ ಘಟಕರಾಗಿರುವ ಶಿಕ್ಷಕರು ಈ ಯೋಜನೆಗೆ ಸರ್ವ ರೀತಿಯಿಂದಲೂ ನೆರವಾಗಬೇಕಾಗಿ ಬಿನ್ನವಿಸುತ್ತೇವೆ.

—ಪ್ರ. ಸಂಪಾದಕರು

ಶಿಕ್ಷಣ

ಒಕ್ಕಲತನ, ನೀರಾವರಿ ಮತ್ತು ತತ್ಸಂಬಂಧವಾದ ವಿಕಾಸಯೋಜನೆಗಳಿಗೋಸ್ಕರ ಮುಂಬಯಿ ಸರಕಾರವು ಪಂಚವಾರ್ಷಿಕಯೋಜನೆಯಲ್ಲಿ ಶಿಕ್ಷಣಕ್ಕಾಗಿ ೪೬ ಕೋಟಿ ರೂಪಾಯಿಗಳನ್ನು ವೆಚ್ಚಮಾಡುವದು. ಈ ಯೋಜನೆಯಂತೆ ಪ್ರಾದೇಶಿಕ ರಾಜ್ಯಗಳು ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ, ತಾಂತ್ರಿಕ ಶಿಕ್ಷಣದಲ್ಲಿ ತರಬೇತಿ, ಶಾರೀರಿಕ ಶಿಕ್ಷಣ, ಸೈನಿಕ ಶಿಕ್ಷಣದಲ್ಲಿ ತರಬೇತಿ, ವಾಚನಾಲಯಗಳ ಬೆಳವಣಿಗೆ ಮತ್ತು ದೃಷ್ಟಿ

ಮೂಲಶಿಕ್ಷಣದ ಯೋಜನೆಯುಬಗ್ಗೆ ಕೈಕೊಂಡ ಕಾರ್ಯಕ್ರಮಗಳನ್ನು ಹೆಚ್ಚಿಸುವದು ಮತ್ತು ಮುಂದುವರಿಸುವುದು ಮುಖ್ಯವಾದುದಾಗಿದೆ.

ಪ್ರಾಥಮಿಕ ಶಿಕ್ಷಣ

ಒತ್ತಾಯಶಿಕ್ಷಣ :—

ರಾಜ್ಯದಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಮುಂದಿನ ಐದುವರುಷಗಳಲ್ಲಿ ಮುಂದುವರಿಸಿ ಬೆಳಸುವದಕ್ಕಾಗಿ ೩೦೫೮.೪೬ ಲಕ್ಷ ರೂಪಾಯಿಗಳ ಏರ್ಪಾಟನ್ನು ಮಾಡಲಾಗಿದೆ. ೧೯೪೭ರಿಂದ ೪೮ರಲ್ಲಿ ಪ್ರಾರಂಭವಾದ ಈ ಒತ್ತಾಯ ಶಿಕ್ಷಣದ ಯೋಜನೆಯು ಮುಂಚಿನ ಮುಂಬಯಿಯ ೨೦ ಜಿಲ್ಲೆಗಳಲ್ಲಿ ಹಾಗು ಈಗ ಲೀನವಾದ ಬರೋಡಾ ರಾಜ್ಯದ ಕ್ಷೇತ್ರದಲ್ಲಿ ೧೦೦೦ ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ೭ ರಿಂದ ೧೧ ವರುಷದ ಬಾಲಕರಿಗೆ ಅನ್ವಯಿಸಿದೆ ಮತ್ತು ಜಾರಿಯಲ್ಲಿದೆ. ೧೯೫೧-೫೨ರಲ್ಲಿ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆ ೨೮೩೩೫ ಇದ್ದಿತು ಮತ್ತು ಅವುಗಳಲ್ಲಿ ೩೪೭೮೨೨೧ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಉಳಿದ ಭಾಗಗಳಿಗೂ ಇದನ್ನು ವಿಸ್ತರಿಸುವ ಯೋಜನೆ ಇದೆ.

ಶಾಲೆಯು ಕಟ್ಟಡಗಳು :—

ಪಂಚವಾರ್ಷಿಕ ಯೋಜನೆಯಲ್ಲಿ ಶಾಲೆಯ ಕಟ್ಟಡಗಳ ಸಲುವಾಗಿ ೫೧.೦೫ ಲಕ್ಷ ರೂಪಾಯಿಗಳನ್ನು ಕೊಡುವ ಯೋಜನೆಯನ್ನು ಮಾಡಲಾಗಿದೆ. ಬಾಲಕರ ಬೆಳೆಯುತ್ತಿರುವ ಸಂಖ್ಯೆಗೆ ಅನುಗುಣವಾಗಿ ಯೋಗ್ಯ ಶಾಲಾಕಟ್ಟಡವನ್ನು ಒದಗಿಸುವದು ಬಹಳ ದಿನಗಳಿಂದ ಒಂದು ಬೇರೆಯ ಸಮಸ್ಯೆಯಾಗಿದೆ. ಶಾಲಾ-ಕಟ್ಟಡಗಳನ್ನು ಕಟ್ಟಿಸುವ ಕೆಲಸವನ್ನು ಜಿಲ್ಲಾ ಸ್ಕೂಲ ಬಿಲ್ಡಿಂಗ ಕಮಿಟಿಗಳಿಗೆ ಒಪ್ಪಿಸಲಾಗಿದೆ ಮತ್ತು ಇವಕ್ಕೆ ಸರಕಾರದಿಂದ ನಿಧಿಯನ್ನು ಕೊಡಲಾಗಿದೆ. ೧೯೫೧—೫೨ ರ ಕೊನೆಯೊಳಗಾಗಿ ೨೯೮ ಕಟ್ಟಡಗಳು ಕಟ್ಟಲ್ಪಟ್ಟವು. ಒಟ್ಟು ಕಟ್ಟಲಾಗುತ್ತಿರುವ ಕಟ್ಟಡಗಳ ಸಂಖ್ಯೆಯು ೯೩೭ ಇದೆ.

ಜೀವನ ಶಿಕ್ಷಣ :—

ಜೀವನ ಶಿಕ್ಷಣ ಯೋಜನೆಯನ್ನು ಮುಂದೆ ಸಾಗಿಸುವದಕ್ಕಾಗಿ ಪಂಚವಾರ್ಷಿಕ ಯೋಜನೆಯಲ್ಲಿ ೧೩೦ ೭೯ ಲಕ್ಷ ರೂಪಾಯಿಗಳ ಏರ್ಪಾಡನ್ನು ಮಾಡಲಾಗಿದೆ. ಪ್ರಾಥಮಿಕ ಶಿಕ್ಷಣದ ಪ್ರಗತಿಯು ಜೀವನ ಶಿಕ್ಷಣದ ಮಾರ್ಗದಲ್ಲಿ ಅಥವಾ ಉತ್ಪಾದಕ ಕೆಲಸದ ಮುಖಾಂತರ ಸಾಗುವ ಶಿಕ್ಷಣದ ಮಾರ್ಗದಲ್ಲಿ ಆಗಬೇಕೆಂದು ಸರಕಾರವು ನಿಶ್ಚಯಿಸಿದೆ. ೧೯೫೧-೫೨ರಲ್ಲಿ ೬೬ ಮೂಲ ಶಿಕ್ಷಣದ ಶಾಲೆಗಳಲ್ಲಿ ೧೨೮೦೭ ವಿದ್ಯಾರ್ಥಿಗಳು ಇದ್ದರು ಮತ್ತು ಮೂಲ ಶಿಕ್ಷಣದ ಶಾಲೆಗಳನ್ನಾಗಿ ಮಾರ್ಪಡಿಸಬೇಕೆಂಬ ಉದ್ದೇಶದಿಂದ ಮೊದಲನೆಯ ಹೆಜ್ಜೆಯಾಗಿ ಮೂಲೋದ್ಯೋಗವನ್ನು ಪ್ರಾರಂಭಿಸಿದ ಶಾಲೆಗಳ ಒಟ್ಟು ಸಂಖ್ಯೆಯು ೨೮೦೧ ಇದೆ.

ಶಿಕ್ಷಕರ ತರಬೇತಿ :—

ಈ ಯೋಜನೆಯಲ್ಲಿ ಟ್ರೇನಿಂಗ ಕಾಲೇಜುಗಳ ಮತ್ತು ಅವುಗಳ ವಸತಿಗೃಹಗಳ ಆವರ್ತ ವೆಚ್ಚವನ್ನು ತುಂಬಿಕೊಳ್ಳುವದಕ್ಕಾಗಿ ಸುಮಾರು ೫೦ ಲಕ್ಷರೂಪಾಯಿಗಳನು ತೆಗೆದಿಡಲಾಗಿದೆ. ಪ್ರಾಥಮಿಕ ಶಿಕ್ಷಕರ ತರಬೇತಿಗಾಗಿ ಸ್ಥಾಪಿಸಬೇಕಾಗಿದ್ದ ೧೬ ಕಾಲೇಜುಗಳಲ್ಲಿ ೧೩ ಈಗಾಗಲೇ ತೆರೆಯಲ್ಪಟ್ಟಿವೆ.

ಮಾಧ್ಯಮಿಕ ಶಿಕ್ಷಣ

ಈ ಯೋಜನೆಯ ಅವಧಿಯಲ್ಲಿ ಮಾಧ್ಯಮಿಕ ಶಿಕ್ಷಣದ ಸಲುವಾಗಿ ೯೨.೦೩ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುವದು. ಇದರೊಡನೆ ವಿಲೀನ ಹೊಂದಿದ ಕ್ಷೇತ್ರಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಬೆಳೆಸುವದಕ್ಕಾಗಿ ೧೪.೫೦ ಲಕ್ಷ ರೂಪಾಯಿಗಳ ಏರ್ಪಾಡನ್ನು ಮಾಡಲಾಗಿದೆ. ಮಾಧ್ಯಮಿಕ ಶಿಕ್ಷಣದ ವಿಕಾಸಕ್ಕಾಗಿ ಪಂಚವಾರ್ಷಿಕ ಯೋಜನೆಯು ಗೈರ ಸರಕಾರಿ ಶಾಲೆಗಳಲ್ಲಿ ತಮ್ಮಲ್ಲಿ ದುಡಿಯುತ್ತಿರುವ ಶಿಕ್ಷಕರ ಸಂಬಳದ ಪ್ರಮಾಣವನ್ನೂ ಸೇವೆಯ ಸ್ಥಿತಿಗತಿಗಳನ್ನೂ ಸುಧಾರಿಸುವದಕ್ಕಾಗಿ ಹೆಚ್ಚು ಗ್ರಾಂಟನ್ನು ಕೊಡುವ ಏರ್ಪಾಡನ್ನು ಮಾಡಿದೆ. ೧೯೪೭-೪೮ ರಲ್ಲಿ ಕೊಟ್ಟ ಈ ರಕಮಿನ ಗ್ರಾಂಟು ೯.೪೭ ಲಕ್ಷ ರೂಪಾಯಿಗಳಷ್ಟಾಗಿತ್ತು. ಪ್ರತಿ ವರ್ಷ ಇದು ಬೆಳೆಯುತ್ತ ಹೋಯಿತು ಮತ್ತು ೧೯೫೧-೫೨ ರಲ್ಲಿ ೧೬ ಲಕ್ಷ ರೂಪಾಯಿಗಳಿಗೆ ಮುಟ್ಟಿತು. ೧೯೫೧-೫೨ ರಲ್ಲಿ ಒಟ್ಟು ಮಾಧ್ಯಮಿಕ ಶಾಲೆಗಳು ೧೩೪೯ ಮತ್ತು ಅವುಗಳಲ್ಲಿ ಕಲಿಯುತ್ತಿರುವವರು ೪೨೬೧೩೨ ವಿದ್ಯಾರ್ಥಿಗಳು.

ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣ :—

ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣದ ಮುಂದಿನ ವಿಕಾಸಕ್ಕಾಗಿ ಅನುಕೂಲತೆಗಳನ್ನು ಒದಗಿಸಲು ಈ ಯೋಜನೆಯಲ್ಲಿ ೧೩೫.೪೦ ಲಕ್ಷ ರೂಪಾಯಿಗಳನ್ನು ಕೊಡುವ ಯೋಜನೆಯನ್ನು ಮಾಡಲಾಗಿದೆ. ಪುಣೆಯ ಎಂಜಿನಿಯರಿಂಗ ಕಾಲೇಜದ ಬೆಳವಣಿಗೆಗಾಗಿಯೂ ಅಹಮದಾಬಾದದಲ್ಲಿ ಒಂದು ಹೆಚ್ಚಿನ ಎಂಜಿನಿಯರಿಂಗ ಕಾಲೇಜನ್ನು ಸ್ಥಾಪಿಸುವದಕ್ಕಾಗಿಯೂ ಅಹಮದಾಬಾದದಲ್ಲಿ ಆರ್. ಸಿ. ಟಿ. ಸಂಸ್ಥೆಯ ಪುನಸ್ಸಂಘಟನೆಯ ಸಲುವಾಗಿಯೂ ಏರ್ಪಾಡನ್ನು ಮಾಡಲಾಗಿದೆ. ಭಿನ್ನ ಭಿನ್ನ ಅಭಿರುಚಿಗಳಿರುವ ವಿದ್ಯಾರ್ಥಿಗಳಿಗೆ ಮಾಧ್ಯಮಿಕ ಶಿಕ್ಷಣವನ್ನು ಒದಗಿಸುವದಕ್ಕಾಗಿ ಈಗಾಗಲೇ ೭ ತಾಂತ್ರಿಕ ಶಾಲೆಗಳು ಇವೆ, ಇನ್ನೂ ಕೆಲವನ್ನು ತೆರೆಯಬೇಕೆಂದು ಸೂಚಿಸಲಾಗಿದೆ. ಸರಕಾರದಿಂದ ಮತ್ತು ಖಾಸಗಿ ಸಂಸ್ಥೆಗಳಿಂದ ಅನೇಕ ಸಾಮಾನ್ಯ ಹಾಯಸ್ಕೂಲುಗಳು ಔದ್ಯೋಗಿಕ ಶಾಲೆಗಳಾಗಿ ಮಾರ್ಪಡಿಸಲ್ಪಟ್ಟಿವೆ. ಹೀಗೆ ಪರಿವರ್ತಿಸಲ್ಪಟ್ಟ ಶಾಲೆಗಳ ಸಂಖ್ಯೆಯು ೧೯೫೧–೫೬ ರ ಕೊನೆಯಲ್ಲಿ ೨೮ ಇದ್ದಿತು. ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಔದ್ಯೋಗಿಕ ಶಾಲೆಗಳಿಗೆ ಉದಾರತೆಯಿಂದ ಆರ್ಥಿಕ ಸಹಾಯ ಮಾಡುವ ಏರ್ಪಾಡೂ ಈ ಯೋಜನೆಯಲ್ಲಿದೆ.

ಉಚ್ಚ ಶಿಕ್ಷಣ

ಕಲಾ (Arts), ವಿಜ್ಞಾನ (Science) ಮತ್ತು ಎಂಜಿನಿಯರಿಂಗ ಕಾಲೇಜುಗಳಿಗೆ ಆರ್ಥಿಕ ಸಹಾಯ, ವಿಶ್ವವಿದ್ಯಾಲಯುಗಳಿಗೂ ಗ್ರಾಂಟುಗಳನ್ನು ಕೊಡುವ ಏರ್ಪಾಡನ್ನು ಮಾಡಲಾಗಿದೆ.

ಸಾಮಾಜಿಕ ಶಿಕ್ಷಣ

ಈ ಯೋಜನೆಯಲ್ಲಿ ಸಾಮಾಜಿಕ ಅಥವಾ ಪ್ರಾಥಮಿಕ ಶಿಕ್ಷಣದ ಯೋಜನೆಗಳ ಮೇರೆಗೆ ನಡೆಯುವ ಕಾರ್ಯಗಳನ್ನು ಬೆಳೆಯಿಸುವದಕ್ಕಾಗಿ ೧೧೧.೨೦ ಲಕ್ಷ ರೂಪಾಯಿಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಸಾಮಾಜಿಕ ಶಿಕ್ಷಣ ಯೋಜನೆಯು ೧೯೫೨–೫೩ ರಿಂದ ಪ್ರಾರಂಭವಾಯಿತು. ೧೯೫೧ ಮಾರ್ಚ ಕೊನೆಯಲ್ಲಿ ಸಾಕ್ಷರತೋತ್ತರ ವರ್ಗಗಳು ೧೪೭೧೭ ಇದ್ದವು ಮತ್ತು ೩೨೭೭೯ ಪ್ರೌಢರು ಇವುಗಳಲ್ಲಿ ಕಲಿಯುತ್ತಿದ್ದರು.

ಶಾರೀರಿಕ ಶಿಕ್ಷಣ ಮತ್ತು ಸೈನಿಕ ತರಬೇತಿ

ಪಂಚವಾರ್ಷಿಕ ಯೊಜನೆಯಲ್ಲಿ ಶಾರೀರಿಕ ಶಿಕ್ಷಣದ ಮತ್ತು ನ್ಯಾಶನಲ್ ಕ್ಯಾಡೆಟ್ ಕೋರ್ (N. C. C.) ದ ಯೋಜನೆಯ ಕಾರ್ಯಗಳನ್ನು ಹೆಚ್ಚಿಸುವದಕ್ಕಾಗಿ ೨೩ ಲಕ್ಷ ಮತ್ತು ೮೫.೬೦ ಲಕ್ಷ ರೂಪಾಯಿಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಶಾರೀರಿಕ ಶಿಕ್ಷಣದ ಕಾರ್ಯಕ್ರಮವು ಮುಖ್ಯವಾಗಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಕರನ್ನು ಶಾರೀರಿಕ ಶಿಕ್ಷಣದಲ್ಲಿ ತರಬೇತಿಗೊಳಿಸುವದನ್ನು ಮತ್ತು ಜಿಲ್ಲಾ ಸ್ಕೂಲ ಬೋರ್ಡುಗಳಿಗೆ, ಮಾಧ್ಯಮಿಕ ಶಾಲೆಗಳಿಗೆ ವಾರ್ಷಿಕ ಗ್ರಾಂಟು ಕೊಡುವದನ್ನು ಒಳಗೊಂಡಿದೆ. ನ್ಯಾಶನಲ್ ಕ್ಯಾಡೆಟ್ ಕೋರ್ (N.C.C.) ಎರಡು ಡಿವಿಜನ್ನುಗಳನ್ನು ಒಳಗೊಂಡಿದೆ— (೧) ಸೀನಿಯರ್ ಡಿವಿಜನ್ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ (೨) ಜೂನಿಯರ್ ಡಿವಿಜನ್ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗಾಗಿ.

ವಾಚನಾಲಯ ಅಭಿವೃದ್ಧಿ ಮತ್ತು ಚಾಕ್ಷುಷ ಶಿಕ್ಷಣ ಯೋಜನೆಗಳು

ರಾಜ್ಯದಲ್ಲಿ ವಾಚನಾಲಯ ಅಭಿವೃದ್ಧಿ ಯೋಜನೆಯನ್ನು ಮುಂದುವರಿಸುವದಕ್ಕಾಗಿ ವಿಸ್ತರಿಸುವದಕ್ಕಾಗಿ ಮತ್ತು ಈ ಯೋಜನೆಯಂತೆ ನಡೆಯುವ ವಾಚನಾಲಯಗಳಿಗೆ ಕೊಡಲಾಗುತ್ತಿರುವ ಗ್ರಾಂಟುಗಳನ್ನು ಮುಂದುವರಿಸುವದಕ್ಕಾಗಿ ೪೩ ಲಕ್ಷ ರೂಪಾಯಿಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಚಾಕ್ಷುಕ ಶಿಕ್ಷಣದ ಯೋಜನೆಗೂ ೧೬ ಲಕ್ಷ ರೂಪಾಯಿಗಳ ವ್ಯವಸ್ಥೆಯನ್ನು ಮಾಡಲಾಗಿದೆ ಈ ಯೋಜನೆಯ ಅವಧಿಯಲ್ಲಿ ಇತರ ಕಾರ್ಯಗಳೊಂದಿಗೆ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರದರ್ಶನಕ್ಕಾಗಿ ಫಿಲ್ಮಗಳನ್ನು ಒದಗಿಸುವ, ಚಾಕ್ಷುಕ ಶಿಕ್ಷಣದ ಉಪಕರಣಗಳ ಪ್ರದರ್ಶನಕ್ಕೆ ವಸ್ತುಗಳನ್ನು ಒದಗಿಸುವ ಮತ್ತು ಗೈರ ಸರಕಾರಿ ಮಾಧ್ಯಮಿಕ ಶಾಲೆಗಳಿಗೆ ಪ್ರೊಜೆಕ್ಟರ ಮತ್ತು ತತ್ಸಂಬಂಧವಾದ ಉಪಕರಣಗಳನ್ನು ಒದಗಿಸುವ ಕಾರ್ಯವೂ ಸೇರಿದೆ.

ಶಿಕ್ಷಣದಲ್ಲಿ "ದೃಕ್ ಶಿಕ್ಷಣ" ಕಲೆ

ಅನುವಾದಕರು : ಶ್ರೀ. ಎನ್. ಬಿ. ಹಳಕಟ್ಟಿ

(ಮುಂಬಯಿ ರಾಜ್ಯದ "ದೃಕ್ ಶಿಕ್ಷಣ"ದ ಅಧಿಕಾರಿಗಳಾದ ಶ್ರೀ. ಆಪಲೆ ಅವರು ಕಳುಹಿಸಿದ ಸಂಯುಕ್ತ ರಾಜ್ಯದ, ಬ್ರಿಸ್ಟಲ್ ವಿಚಾರಗೋಷ್ಠಿಯ, ವರದಿಯ ಸಾರಾಂಶವು—೧೯೫೧.)

ವರದಿಯ ವ್ಯಾಪ್ತಿಯು :—

ವರದಿಯ ಮೊದಲನೆಯ ಅಧ್ಯಾಯದಲ್ಲಿ ಕಾರ್ಯಕ್ರಮದ ಸಾಮಾನ್ಯ ರೂಪರೇಷೆಯನ್ನು ಕೊಡಲಾಗಿದೆ. ಎರಡನೆಯ ಅಧ್ಯಾಯದಲ್ಲಿ ರಾಷ್ಟ್ರೀಯ ವರದಿಯ ಸಾರಾಂಶವಿದೆ. ಮೂರನೆಯದರಲ್ಲಿ ಸಾಮಾನ್ಯ ಸಭೆಯ ಕಾರ್ಯಕಲಾಪಗಳು, ನಾಲ್ಕನೆಯದರಲ್ಲಿ ವಿವಿಧ ವಿಭಾಗಗಳ ರೂಪರೇಷೆಯನ್ನು ಕೊಡಲಾಗಿದೆ. ಕೊನೆಯದರಲ್ಲಿ ಸಾದ್ಯಂತವಾಗಿ ಕೈಕೊಳ್ಳಲಾದ ಎಲ್ಲ ನಿರ್ಣಯಗಳ ಮೇಲಿನ ಸೂಚನೆ ಹಾಗೂ ಶಿಫಾರಸುಗಳಿವೆ.

ವಿಚಾರಗೋಷ್ಠಿಯ ಕಾರ್ಯಗಳು :—

ವಿಚಾರ ಗೋಷ್ಠಿಯು ಬ್ರಿಸ್ಟಲ್ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾಯಿತು. ಶ್ರೀಯುತ ಜೀ. ಇ. ಲ್ಯಾಂಗರವರು ವಿಶ್ವವಿದ್ಯಾಲವನ್ನೂ ಹಾಗೂ ಶ್ರೀಯುತ ವಿಟನ್ ಬ್ರಾರೌರವರು ಯುನೆಸ್ಕೋದ ಡಾಯರೆಕ್ಟರ ಜನರಲ್ಲರನ್ನೂ ಪ್ರತಿನಿಧಿಸಿದ್ದರು. ಈ ವಿಚಾರಗೋಷ್ಠಿಯು ''ದೃಕ್ ಶಿಕ್ಷಣ"ದ ಕ್ಷೇತ್ರದಲ್ಲಿ ದುಡಿಯುತ್ತಿರುವ ಎಲ್ಲ ಕಾರ್ಯಕರ್ತರಿಗೆ ಮಾರ್ಗದರ್ಶನ ಮಾಡುವ ಹವ್ಯಾಸದಿಂದ ತನ್ನ ಕೆಲಸವನ್ನು ಪ್ರಾರಂಭಿಸಿತು— ಆ ವಿಷಯವೆಂದರೆ ತಜ್ಞ ಶಿಕ್ಷಕರ ಮಾರ್ಗದರ್ಶನದ ಕೆಳಗೆ ಕಲೆ ಹಾಗೂ ಉದ್ಯೋಗಗಳ ಮೂಲಕ ನಡೆಯುವ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಅಂತಃಶಕ್ತಿಗಳ ಪರಿಪೂರ್ಣ ವಿಕಸನಕ್ಕೆ ತುಂಬಾ ಸ್ವಾತಂತ್ರ್ಯವನ್ನೊದಗಿಸುವದು. ಆ ವಿದ್ವತ್ಪೂರ್ಣವಾದ ಚರ್ಚೆಯ ನಂತರ ಕೈಕೊಳ್ಳಲಾದ ನಿರ್ಣಯಗಳ ಸಾರಾಂಶವನ್ನು ವರದಿಯ ಕೊನೆಯ ಭಾಗದಲ್ಲಿ ಕೊಡಲಾಗಿದೆ.

ಮೊದಲನೆಯ ಅಧ್ಯಾಯ :—

(ಅ) ಕಾರ್ಯ ನಿಯಾಮಕ ಸಮಿತಿಯು ಪ್ರತಿದಿನವೂ ಕೂಡಿ, ನಡೆಯಬೇಕಾದ ಕಾರ್ಯಕ್ರಮದ ಪಟ್ಟಿಯನ್ನು ಎರಡು ದಿನ ಮುಂಚಿತವಾಗಿಯೇ ತಯಾರಿಸುತ್ತಿತ್ತು.

(ಬ) ಪ್ರದರ್ಶನ ಕಮಿಟಿಯು ೨೫ ದೇಶಗಳ ಮಕ್ಕಳಿಂದ ಬಂದ ಕಲಾಕೃಗಳನ್ನು ಪ್ರದರ್ಶಿಸುವ ಏರ್ಪಾಟನ್ನು ಮಾಡಿದ್ದಿತು.

(ಕ) ಸಾಮಾಜಿಕ ಕಮಿಟಿಯು ಎರಡುಸಲ ಸಾಯಂಕಾಲದಲ್ಲಿ ಊಟದ ವ್ಯವಸ್ಥೆಯನ್ನು ಮಾಡಿದ್ದಿತು. ಅದಕ್ಕೆ ಮಿತ್ರರನ್ನೂ ಹಾಗೂ ಭಾಗವಹಿಸಿದವರನ್ನೂ ಆಮಂತ್ರಿಸಲಾಗಿತ್ತು.

(ಡ) "ದೃಕ್ ಶಿಕ್ಷಣ" ಸಮಿತಿಯು ಈ ವಿಚಾರಗೋಷ್ಠಿಗಾಗಿ ಉಪಯೋಗಿಸಿದ ದೃಕ್ ಶಿಕ್ಷಣ ಉಪಕರಣ ಹಾಗೂ ಗ್ರಂಥಗಳ ಪಟ್ಟಿಯನ್ನು ತಯಾರಿಸಿತು.

ಎರಡನೆಯ ಅಧ್ಯಾಯ :—

ಪ್ರಾಥಮಿಕ ಶಿಕ್ಷಣದಲ್ಲಿ ಕಲಾ ಶಿಕ್ಷಣವು ಸಮಾಧಾನಕರವಾಗಿ ಪ್ರಗತಿಯನ್ನು ಹೊಂದುತ್ತಿರುವದು ಕಂಡು ಬಂದರೂ, ಮಾಧ್ಯಮಿಕ ಶಾಲೆಗಳು ಇದರಲ್ಲಿ ಬಹು ಹಿಂದುಳಿದಂತೆ ಕಂಡು ಬರುತ್ತದೆ. ಕಲಾ ಶಿಕ್ಷಣವು ಪ್ರಾತ್ಯಕ್ಷಿಕ ಹಾಗೂ ಅವಶ್ಯಕನಾಗಿದ್ದು, ಬಾಲಕನ ಶಿಕ್ಷಣವು ಎಲ್ಲರೀತಿಯಿಂದಲೂ ಪರಿಪೂರ್ಣತೆಯನ್ನು ಹೊಂದಲು ನೆರವು ನೀಡುವುದೆಂದು ಸಭೆಯು ಒಮ್ಮತ

ದಿಂದ ಅಭಿಪ್ರಾಯಪಟ್ಟಿತು. ಕಲೆಗೆ ಸಂಬಂಧಿಸಿದ ಒಂದು ವಿಶಿಷ್ಟ ರೀತಿಯ ವಿಚಾರ ಸರಣಿಯು ಕೇವಲ ಬಾಲಕನ ಬುದ್ಧಿಗಷ್ಟೇ ಆಸ್ಪದವೀಯದೆ ಅವನಲ್ಲಿ ಹುದುಗಿರುವ ಕಲಾತ್ಮಕ ಭಾವನೆಗಳಿಗೂ ಅನುವು ಕೊಟ್ಟು ಕಲಾತ್ಮಕ ಚಟುವಟಿಕೆಯನ್ನು ಶಿಕ್ಷಣದ ಗುರಿಯು ಸುಶಿಕ್ಷಿತ ವ್ಯಕ್ತಿಯನ್ನು ತಯಾರಿಸುವದು. ಅಂಥವನ ಕಲಾಕೃತಿಗಳು ಇನ್ನೂ ಹೆಚ್ಚು ಮಹತ್ವದವು.

ಮೂರನೆಯ ಅಧ್ಯಾಯ. ಕಲಾಶಿಕ್ಷಣದ ರೂಪ :—

ಕೆಳಗಿನ ನಿರ್ಣಯಗಳು ಒಮ್ಮತದಿಂದ ಸ್ವೀಕೃತವಾದವು.

(೧) ಕಲಾ ಶಿಕ್ಷಣವು ರಚನಾತ್ಮಕ ಪ್ರವೃತ್ತಿಗೆ ಆಸ್ಪದವೀಯಬೇಕು.

(೨) ಮಗುವಿನ ವ್ಯಕ್ತಿತ್ವ ನಿರೂಪಣೆಗೆ ಅನುಕೂಲವಾಗುವಂತೆ ಕಲಾ ನೈಪುಣ್ಯವು ವರ್ಧಿಸಬೇಕು.

(೩) ಬಾಲಕನಿಗೆ ತನಗೆ ಸರಿದೋರಿದ ವಿಷಯವನ್ನು ಆಯ್ದುಕೊಳ್ಳಲು ಹಾಗೂ ಅದನ್ನು ಪೂರೈಸಲು ತನಗೆ ಬೇಕಾದ ತಂತ್ರವನ್ನು ಅನುಸರಿಸಲು ಪೂರ್ಣ ಸ್ವಾತಂತ್ರ್ಯವಿರಬೇಕು.

(೪) ಕಲಾಶಿಕ್ಷಣವು ಬಾಲಕನಲ್ಲಿ ಸರಿಯಾದ ಅಭಿರುಚಿಗಳನ್ನು ಹುಟ್ಟಿಸಬೇಕು.

(೫) ಬಾಲಕನ ಬುದ್ಧಿ, ಭಾವನೆ ಹಾಗೂ ಸಾಮಾಜಿಕ ಪ್ರವೃತ್ತಿಗಳನ್ನು ಬೆಳಸಬೇಕು.

ಕಲಾಶಿಕ್ಷಣವು ಮೂಲತಃ ಬಾಲಕನನ್ನು ಸುತ್ತಲಿನ ವಾತಾವರಣಕ್ಕೆ ಹೊಂದಿಕೊಂಡು ಹೋಗುವಂತೆ ಸಿದ್ಧಗೊಳಿಸುವ ಕ್ರಮವಲ್ಲ. ಆದರೆ ಅವನಲ್ಲಿ ಸುತ್ತಲಿನ ವಾತಾವರಣವನ್ನೇ ಮಾರ್ಪಡಿಸುವ ಸಾಮರ್ಥ್ಯವನ್ನು ತಂದು ಕೊಡುವದಾಗಿದೆ.

ಕಲೆಯ ಮೂಲಕ ಶಿಕ್ಷಣ :—

ಕಲಾಮಯ ಶಿಕ್ಷಣದಲ್ಲಿ ಕೆಳಗೆ ಕಾಣಿಸಿದ ಧ್ಯೇಯಗಳನ್ನು ಇಟ್ಟುಕೊಳ್ಳಲಾಗಿದೆ.

(೧) ಸ್ವಾಭಾವಿಕವಾಗಿ ಇಂದ್ರಿಯಗಳಿಂದ ಜ್ಞಾನ ಸಂಪಾದಿಸುವ ಎಲ್ಲ ಬಗೆಗಳನ್ನು ಕಾಯುವದು.

(೨) ಜ್ಞಾನ ಸಂಪಾದನೆಯ ವಿವಿಧಮಾರ್ಗಗಳಲ್ಲಿ ಪರಿಸ್ಥಿತಿಗನುಸಾರವಾಗಿ ಉಚಿತವಾದ ಹೊಂದಿಕೆಯನ್ನುಂಟು ಮಾಡುವದು.

(೩) ಭಾವನೆಗಳನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವದು.

(೪) ವಿಚಾರಗಳನ್ನು ವ್ಯಕ್ತಪಡಿಸುವ ರೀತಿಯನ್ನು ತಿಳಿಸುವದು.

ಮಾನವನಲ್ಲಿ ಒಡಮೂಡಿದ ಪ್ರತಿಕ್ರಿಯೆಗಳನ್ನು ಸಂಪೂರ್ಣವಾಗಿ ವ್ಯಕ್ತಪಡಿಸಬೇಕಾದರೆ ಕೇವಲ ಶಾಬ್ದಿಕ ರೀತಿಯೊಂದನ್ನೇ ಅನುಸರಿಸಿದರೆ ಸಾಲದು. ಅದರ ಜೊತೆಗೆ ಭಿನ್ನಭಿನ್ನ ಸಾಂಕೇತಿಕ ರೀತಿಗಳನ್ನೂ ಅನುಸರಿಸಬೇಕಾಗುವದು. ಆದರೆ ಬಳಕೆಯಲ್ಲಿರುವ ಶಿಕ್ಷಣಕ್ರಮಗಳು ಸಾಂಕೇತಿಕ ಶಿಕ್ಷಣದ ವಿವಿಧ ಅಂಗಗಳ ಕಡೆಗೆ ಅಲಕ್ಷ ಮಾಡಿವೆ. ಇದರಿಂದ ಶಾಬ್ದಿಕ ಶಿಕ್ಷಣವು ಪರಿಪೂರ್ಣವಾಗಬಲ್ಲದೇ ? ಈ ವಿಚಾರಗಳ ತಾಕಲಾಟವು ಮಾನವನು ಶಾಬ್ದಿಕ ಹಾಗೂ ಸಾಂಕೇತಿಕ ಶಿಕ್ಷಣಕ್ರಮವನ್ನು ಅವಲಂಬಿಸಿರುತ್ತಾನೆಂಬ ನಿರ್ಣಯಕ್ಕೆ ಬಂದು ತಲುಪಿದೆ. ವಿವಿಧ ರೀತಿಯಿಂದ ತಮ್ಮ ಭಾವನೆಗಳನ್ನು ತೋರ್ಪಡಿಸುವ ಹಾಗೂ ತಿಳಿಸುವ ಸಾಮರ್ಥ್ಯವುಳ್ಳ ಜನರನ್ನು ಸಿದ್ಧಗೊಳಿಸುವದೇ ಶಿಕ್ಷಣದ ಗುರಿಯು.

ಕಲಾ ಶಿಕ್ಷಣದ ಇತಿಮಿತಿ :—

ಕೆಳಗೆ ಕಾಣಿಸಿದ ಚಟುವಟಿಕೆಗಳು ಕಲಾಶಿಕ್ಷಣದಲ್ಲಿ ಸಮಾವೇಶವಾಗುತ್ತವೆ :—

ಶಿಕ್ಷಣದಲ್ಲಿ "ದೃಕ್ ಶಿಕ್ಷಣ" ಕಲೆ

ಕಲಾಶಿಕ್ಷಣದಲ್ಲಿ ಸಮಾವೇಶವಾಗುವ ಚಟುವಟಿಕೆಗಳು

. ಸ್ವಭಾವ ಸಿದ್ಧವಾಗಿ ಗ್ರಹಿಸುವದು .
. ವಸ್ತು ಹಾಗೂ ಕಾರ್ಯಗಳ .
. ಮೂಲಕ ಗ್ರಹಿಸುವದು. .

ಬೌದ್ಧಿಕ ಹಾಗೂ ವಿಮರ್ಶಾತ್ಮಕ

ಆತ್ಮಾವಿಷ್ಕರಣ.

ವರ್ಣ ಚಿತ್ರಲೇಖನ.
ಚಿತ್ರಲೇಖನ.
ಮಾದರಿಗಳನ್ನು ತಯಾರಿಸುವದು.
ಪ್ರತಿಮೆಗಳನ್ನು ತಯಾರಿಸುವದು.

ಗುಣಗ್ರಾಹ್ಯತೆ ಕಲೆ ಹಾಗೂ ಉಡಿಗೆ ತೊಡಿಗೆಗಳ ಇತಿಹಾಸವನ್ನು ಅಭ್ಯಾಸಿಸುವದು.

ಶಿಲ್ಪಕಲೆ.
ಸೂಚಕ ಉದ್ಯೋಗ
ಗೊಂಬೆಯಾಟ.
ರಂಗಭೂಮಿ ಹಾಗೂ ನಾಟ್ಯ ಗೃಹಗಳ ನಕ್ಷೆ ತಯಾರಿಸುವದು

ಚಾಲಿತ

ರಚನಾತ್ಮಕ ಉದ್ಯೋಗ ಅಂದರೆ- ಪಾತ್ರೆಗಳನ್ನು ತಯಾರಿಸುವದು. ನೂಲುವದು, ನೇಯುವದು. ಬಟ್ಟೆಗಳನ್ನು ತಯಾರಿಸುವದು. ಲೋಹದ ಕೆಲಸ ಗಾಡದ ಮೇಲೆ ಕೆಲಸ, ಮಾಡುವದು.

ಜೋಡಣೆ ಹಾಗೂ ರಚನಾತ್ಮಕ ಉದ್ಯೋಗಗಳು, ಕಟ್ಟಿಗೆಯ ಕೆಲಸ (ಬಡಿಗತನ) ಲೋಹ ಹಾಗೂ ತಗಡಿನ ಡಬ್ಬಿಗಳ ಕಾರ್ಯ.

ಪುಸ್ತಕಗಳನ್ನು ತಯಾರಿಸುವದು.

ಉಡಿಗೆ ತೊಡಿಗೆಗಳ ಮಾದರಿಗಳನ್ನು ತಯಾರಿಸುವದು.

ಸಾಂಘಿಕ ಯೋಜನೆಗಳು ಅಂದರೆ ಮನೆ ಹಾಗೂ ತೋಟಗಳ ನಕ್ಷೆ ತಯಾರಿಸುವದು.

ಪ್ರದರ್ಶನ............................(ಅಗ್ರಾಹ್ಯ)............................ಪ್ರದರ್ಶನ.

ಭಿನ್ನಪದಾರ್ಥಗಳಿಂದ
ಸುಧಾರಣೆಯನ್ನು ಮಾಡುವದು.

ಸುಧಾರಣೆ.

ಬಾಲಕರ ಸಾಂಘಿಕ ಕೆಲಸ :—

ಮಕ್ಕಳಿಗಾಗಿ ಸಾಂಘಿಕ ಚಟುವಟಿಕೆಯ ಆಯ್ಕೆ ಮಾಡುವಾಗ ಹೆಚ್ಚಿನ ದಕ್ಷತೆ ವಹಿಸಬೇಕು. ಅಲ್ಲಿ ಕೊಂಚ ತಪ್ಪಿದ್ದಾದರೆ ಸಿದ್ಧವಾದ ವಸ್ತು ಹಾಗೂ ಮಕ್ಕಳ ನಡತೆಯಲ್ಲಿ ಸಾಮರಸ್ಯ ಕಂಡು ಬರುವದಿಲ್ಲ. ಆದಾಗ್ಯೂ ಸರಿಯಾದ ಆಯ್ಕೆ ಮಾಡಿದ ಸಾಂಘಿಕ ಚಟುವಟಿಕೆಯನ್ನು ಕಲಿಸುವ ಕಲೆಯಾಗಿ ಉಪಯೋಗಿಸಿಕೊಳ್ಳಬಹುದು.

ನಾಲ್ಕನೆಯ ಅಧ್ಯಾಯ :—

ಶಿಕ್ಷಣದಲ್ಲಿ ಆಸ್ಥೆಯುಳ್ಳವರ ತರಬೇತಿಯಲ್ಲಿ 'ಚಕ್ಷು ಶಿಕ್ಷಣ ಕಲೆ" ಯನ್ನು ಕೆಲಮಟ್ಟಿಗಾದರೂ, ಸೇರ್ಪಡೆ ಮಾಡಬೇಕೆಂದು ಸಭೆಯು ಅಭಿಪ್ರಾಯ ಪಡುತ್ತದೆ. ಉಚ್ಚಶಿಕ್ಷಣದಲ್ಲಿ ಇನ್ನಿತರ ಸಾಮಾನ್ಯ ವಿಷಯಗಳಿಗೆ ಕೊಡುವ ಸ್ಥಾನಮಾನಗಳನ್ನು ''ಚಕ್ಷು ಶಿಕ್ಷಣ"ಕ್ಕಾದರೂ ಕೊಡತಕ್ಕದ್ದು. ಕಲಾ ಶಿಕ್ಷಕನು ಮಾನವನ ಸಂಸ್ಕೃತಿ ಹಾಗೂ ವಿದ್ಯಾರ್ಥಿಗಳ ನಡುವೆ ಸೇತುವೆಯೋಪಾದಿಯಲ್ಲಿ ಸಂಬಂಧವನ್ನುಂಟು ಮಾಡಬೇಕು. ಜೀವನದೊಡನೆ ಇದ್ದ ಕಲೆಯ ಸಂಬಂಧವನ್ನು ಕಲಾಶಿಕ್ಷಕರ ಅಭ್ಯಾಸಕ್ರಮದಲ್ಲಿ ಸಮಾವೇಶ ಮಾಡತಕ್ಕದ್ದು. ಶಿಕ್ಷಕನಿಗೆ ಕಲೆಯ ಬೆಳವಣಿಗೆಯ ಪೂರ್ಣ ಜ್ಞಾನವಿರುವದು ಅವಶ್ಯ ಹಾಗೂ ಅವನು ಅದನ್ನು ವಸ್ತು ಸಂಗ್ರಹಾಲಯ, ಪ್ರದರ್ಶನ, ಚಲನಚಿತ್ರ, ಮಾಯಾದೀಪ, ಮುಂತಾದವುಗಳ ಮೂಲಕ ಒಳ್ಳೇ ಪರಿಣಾಮಕಾರಿಯಾದ ರೀತಿಯಲ್ಲಿ ಕಲಿಸಲು ಉಪ-ಯೋಗಿಸಿಕೊಳ್ಳಬೇಕು. ಪ್ರವೀಣನಾದ ಕಲಾಶಿಕ್ಷಕನು ಬಾಲಕರ ಮೇಲೆ ಪ್ರಯೋಗಗಳನ್ನು ಮಾಡಲು ಸಮರ್ಥನಿರಬೇಕು. ಸದ್ಯಕ್ಕೆ ಮಕ್ಕಳ ಕಲಾಕೃತಿಯನ್ನು ಕುರಿತು ಸಾಕಷ್ಟು ಸಾಹಿತ್ಯವು ನಿರ್ಮಾಣವಾಗಿದ್ದು, ಅದನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಅಭ್ಯಸಿಸಲು ಸಾಧ್ಯವಾಗಿದೆಯೆಂದು ಕಂಡು ಬಂದಿದೆ. ಕಲಾತಜ್ಞರನ್ನು ತಯಾರಿಸಲು ಅನುಕೂಲತೆಗಳನ್ನು ಒದಗಿಸಿರದ ವಿಶ್ವವಿದ್ಯಾಲಯಗಳು ಕಲಾತಜ್ಞರನ್ನು ಸಿದ್ಧಗೊಳಿಸಲು ಸಾಧ್ಯವಾಗುವಂತೆ ಅಭ್ಯಾಸಕ್ರಮವನ್ನು ಪ್ರಾರಂಭಿಸ-ಬೇಕು.

ಬಾಲಕರಿಗೆ ಕಲೆಯನ್ನು ಕಲಿಸುವ ವಿವಿಧ ಮಾರ್ಗಗಳು :—

ಶಿಕ್ಷಕನು ಯಾವದೇ ಮಾರ್ಗದಿಂದ ಬಾಲಕನಿಗೆ ಶಿಕ್ಷಣ ಕೊಟ್ಟರೂ ಅದರ ಯಶಸ್ಸಿನ ಒರೆಗಲ್ಲು ಬಾಲ-ಕನ ಆ ಶಿಕ್ಷಣದಿಂದ ತೂಕಬದ್ಧವಾಗಿ ಪರಿಪೂರ್ಣತೆ-ಯನ್ನು ಹೊಂದುವನೋ ಎಂಬುದೇ ಆಗಿದೆ. ಕಲಿಸಲು ಉಪಯೋಗಿಸುವ ಪದ್ಧತಿಯು ಬಾಲಕನು ವರ್ಗದ ಚಟುವಟಿಕೆಯಲ್ಲಿ ಭಾಗವಹಿಸುವಾಗ ಅವನ ಪ್ರಗತಿಯ ಮಟ್ಟಕ್ಕೆ ಸರಿ ಹೋಗುವಂಥದಿರಬೇಕು. ಬಾಲಕನಿಗೆ ತಾನು ಉಪಯೋಗಿಸುತ್ತಿರುವ ಇಬ್ಬಗೆ ಅಳತೆಯ (ಉದ್ದಗಲಗಳುಳ್ಳ) ವಸ್ತುಗಳ ಹಾಗೂ ಘನಪದಾರ್ಥ-ಗಳ ಪೂರ್ಣ ಅನುಭವ ಇರಬೇಕು. ಅಲ್ಲದೆ ಬಾಲಕರಿಗೆ ತಮ್ಮ ಮನಸ್ಸನ್ನಾಕರ್ಷಿಸಿದ ವಸ್ತುಗಳನ್ನು ತಯಾರಿ-ಸಲು ಬೇಕಾಗುವ ಉಪಕರಣಗಳನ್ನು ತಯಾರಿಸಲು ಬೇಕಾಗುವ ಉಪಕರಣಗಳನ್ನು ಆಯ್ದುಕೊಳ್ಳಲು ಸ್ವಾತಂತ್ರ್ಯವಿರಬೇಕು.

ಪ್ರೌಢರಿಗಾಗಿ ಕಲಾ ಶಿಕ್ಷಣ ;—

ಕೇವಲ ವರ್ಣ ಚಿತ್ರಗಳನ್ನು ತಯಾರಿಸುವದೊಂದೇ ಕಲೆಯ ನಿದರ್ಶನವಲ್ಲ. ಆದರೆ ತೋಟದ ಯೋಜನೆ, ಪಾತ್ರೆಗಳನ್ನು ತಯಾರಿಸುವದು, ಕೋಣೆಯನ್ನು ಅಲಂಕರಿಸುವದು, ಮೊದಲಾದವೂ ಕೂಡ ಅದರಲ್ಲಿ ಸಮಾವೇಶವಾಗುತ್ತವೆ. ಆದುದರಿಂದ ಪ್ರೌಢರಿಗೆ ಕಲಾ ಶಿಕ್ಷಣ ಕೊಡುವ ಸಾರ್ವತ್ರಿಕ ಆವಶ್ಯಕತೆ ತೋರುತ್ತದೆ.

(೧) ಕಲೆಯು ತನಗೆ ಆಶ್ರಯದಾತರಾದ ನಾಗರಿಕರನ್ನು ಅವಲಂಬಿಸಿರುವದರಿಂದ ಪ್ರೌಢರು ನಮ್ಮ ಕಾಲದ ಕಲೆ ಹಾಗೂ ಸಾಂಸ್ಕೃತಿಗಳನ್ನು ಅರಿತುಕೊಳ್ಳಬೇಕು.

(೨) ಯಂತ್ರ ನಿರ್ಮಿತ ವಸ್ತುಗಳು ಸುಂದರವಾಗಿದ್ದು ತಮ್ಮದೇ ಆದ ರೀತಿಯಲ್ಲಿ ಕಲೆಯ ನಿದರ್ಶನಗಳಾಗಬಹುದು. ಆದರೆ ಜನರಲ್ಲಿ ಯಂತ್ರಗಳಿಂದ ನಿರ್ಮಿತವಾಗುವ ಉತ್ತಮ ಕೃತಿಗಳನ್ನು ತಿಳಿದು-ಕೊಳ್ಳುವ ಜ್ಞಾನ ಅವಶ್ಯ.

(೩) ಭಿನ್ನ ಭಿನ್ನ ತೆರನಾಗಿ ಆನಂದವನ್ನು ಹೊಂದುತ್ತಿರುವ ಈ ಕಾಲದಲ್ಲಿ ಜನತೆಗೆ ಪ್ರಚಲಿತ ಕಲೆಗಳ ಪರಿಚಯವಿರುವದು ಅವಶ್ಯ. ಆದ್ದರಿಂದ

ಪ್ರಚಲಿತ ಕಲೆಗಳ ಹಾಗೂ ಔದ್ಯೋಗಿಕ ಉತ್ಪಾದನೆಯೊಡನೆ ಅದರ ಸಂಬಂಧವನ್ನು ತಿಳಿದುಕೊಳ್ಳುವದು ಅಷ್ಟೇ ಮಹತ್ವವಾದುದು.

ಪ್ರೌಢರಲ್ಲಿ ಒಳ್ಳೇ ಯಶಸ್ವಿ ರೀತಿಯಿಂದ ಕಲಾ ಶಿಕ್ಷಣದ ಬೆಳವಣಿಗೆಯನ್ನುಂಟು ಮಾಡಲು—ಶಿಕ್ಷಣ ಸಂಸ್ಥೆ ವಸ್ತು ಸಂಗ್ರಹಾಲಯ, ವಾಚನಾಲಯ ಹಾಗೂ ಔದ್ಯೋಗಿಕ ಸಂಘ ಮುಂತಾದವುಗಳನ್ನು ಉಪಯೋಗಿಸಿಕೊಳ್ಳಬಹುದು. ಮೇಲೆ ಕಾಣಿಸಿದ ಸಂಸ್ಥೆಗಳ ಸಾಮೂಹಿಕ ಪ್ರಯತ್ನದಿಂದ ಕಲಾಭಿರುಚಿಯುಳ್ಳ ಜನತೆಯನ್ನು ತಯಾರಿಸಬಹುದು. ಹೀಗೆ ತಯಾರಾದ ಜನರ ಜೀವನ ದೃಷ್ಟಿಯಿಂದ ಮುಂದೆ ದೇಶದಲ್ಲಿ ಸಂಸ್ಕೃತಿ ಬೆಳೆದು ಸ್ಥಿರಗೊಳ್ಳುವದು.

ಶಿಕ್ಷಣದಲ್ಲಿ ಉದ್ಯೋಗಗಳ ಸ್ಥಾನ :—

ಉದ್ಯೋಗ ಹಾಗೂ ಕಲಾತ್ಮಕ ಚಟುವಟಿಕೆಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲೆಂಬ ಮಾತನ್ನು ಸಾಮಾನ್ಯವಾಗಿ ಸಂಸ್ಥೆಯು ಒಪ್ಪಿಕೊಂಡಿದೆ. ಒಳ್ಳೇ ಕಟ್ಟುನಿಟ್ಟಾಗಿ ಉದ್ಯಮಗಳನ್ನು ಕಲಿಸುವಲ್ಲಿ ಹೆಚ್ಚಾಗಿ ಕಟ್ಟಿಗೆ ಹಾಗೂ ಲೋಹಗಳನ್ನೇ ಉಪಯೋಗಿಸುವದು ಕಂಡು ಬರುತ್ತದೆ. "ದೈಹಿಕ ಶಿಕ್ಷಣ" ಅಥವಾ "ಔದ್ಯೋಗಿಕ ಕಲೆ" ಹಾಗೂ "ಕಲಾ" ವರ್ಗಗಳು ತಯಾರಿಸಿದ ವಸ್ತುಗಳು ಕಚ್ಚಾ ಮಾಲಿಗಿಂತಲೂ ಕಡಿಮೆ ತರಗತಿಯವಿರುತ್ತವೆ. ಇವರ ಪರಿಣಾಮವಾದರೂ ಬಹುಶಃ ಸೌಂದರ್ಯದ ದೃಷ್ಟಿಯಿಂದ ನಿರುತ್ಸಾಹಜನಕವಾಗಿರುವದು. ಆದರೆ ಮಕ್ಕಳಿಗೆ ತಮ್ಮ ಮನಸ್ಸಿಗೆ ತಕ್ಕಂತೆ ಪದಾರ್ಥಗಳನ್ನು ತಯಾರಿಸಲು ಸ್ವಾತಂತ್ರ್ಯವಿದ್ದರೆ ಇದರ ವಿಪರೀತ ಪರಿಣಾಮವು ಕಂಡು ಬರುತ್ತಿದ್ದಿತು. ಮಕ್ಕಳೇ ತಾವು ತಯಾರಿಸುವ ವಸ್ತುಗಳನ್ನು ರಚನಾತ್ಮಕ ಹಾಗೂ ಸಂಶೋಧನಾತ್ಮಕ ರೀತಿಯಿಂದ ವಿಚಾರಿಸಬೇಕು. ಮಕ್ಕಳು ಯಾವುದಾದರೊಂದು ರಚನೆಯನ್ನು ಮಾಡುತ್ತಿರುವಾಗ ಅವರಿಗೆ ಮಾದರಿಗಳನ್ನು ಕೊಡಕೂಡದು. ಅವಶ್ಯಕಂಡರೆ ಮಾತ್ರ ನೆರವು ನೀಡಬಹುದು.

ಮಾಧ್ಯಮಿಕ ಮಟ್ಟದಲ್ಲಿ ಹಿರಿಯ ವಿದ್ಯಾರ್ಥಿಯ ಹೆಚ್ಚು ಪಕ್ವವಾದ ಮನಸ್ಸಿಗೆ ಸಂತೋಷಕಾರಕವಾದ ಒಂದಾಗಲಿ ಎರಡಾಗಲಿ ಉದ್ಯೋಗಗಳ ಏರ್ಪಾಡನ್ನು ಮಾಡಬೇಕು. ವಿಕಸನ ಹೊಂದಿದ ಕೌಶಲ್ಯ ಮತ್ತು ತಂತ್ರದ ಹಸಿವನ್ನು ಹಿಂಗಿಸುವದಕ್ಕಾಗಿ ಹೆಚ್ಚಿನ ಅನುಕೂಲತೆಯನ್ನು ಮಾಡಿಕೊಡಬೇಕು. ಶಿಕ್ಷಕನು ಕಲಿಯುವವರಿಗೆ ಒಳ್ಳೆಯ ಕಲಾಕೃತಿಯನ್ನು ಪ್ರಶಂಸಿಸುವ, ವರ್ಗೀಕರಿಸುವ ಮತ್ತು ಗುಣ ಇವುಗಳ ಭಾವನೆಯನ್ನು ಬೆಳೆಯಿಸಲು ನೆರವಾಗಬೇಕು.

ಉದ್ಯೋಗವು ಶಿಕ್ಷಣದ ಕಾರ್ಯಕ್ರಮದಲ್ಲಿ ಹೆಚ್ಚು ಮಹತ್ವಪೂರ್ಣವಾದುದಾಗಿದೆ. ಏಕೆಂದರೆ, ಅದು ಮನುಷ್ಯನಿಗೆ ವಸ್ತುಗಳನ್ನು ಸ್ವತಃ ತನ್ನ ಕೈಯಿಂದಲೇ ತಯಾರಿಸಬೇಕೆಂದಿರುವ ನೈಸರ್ಗಿಕ ಬಯಕೆಯನ್ನು ಪೂರ್ಣಗೊಳಿಸುತ್ತದೆ.

ಐದನೆಯ ಅಧ್ಯಾಯ

ಸಾಮಾನ್ಯ ಶಿಕ್ಷಣದಲ್ಲಿ ದೃಕ್ ಕಲೆಗಳ ಮಹತ್ವವನ್ನು ಕುರಿತು ನಿರ್ಣಯಗಳು ಮತ್ತು ಸೂಚನೆಗಳು :—

(೧) ಕಲೆಗಳು ಕಲ್ಪನೆಯ ಮತ್ತು ಭಾವನೆಗಳ ಭಾಷೆಗಳಾಗಿವೆ ಮತ್ತು ಸಂಸ್ಕೃತಿಯ ಪೂರ್ಣಭಾಗವಾಗಿವೆ. ಅವು ಮಾನವನಿಗೆ ರಚನಾತ್ಮಕ ಮತ್ತು ಉತ್ಪಾದಕ ಉದ್ದೇಶವನ್ನು ಕೊಡದ ಹೊರತು ಸಾಂಸ್ಕೃತಿಕ ಸಭ್ಯತೆಯು ಉಳಿಯಲಾರದು. ಜೀವನದಲ್ಲಿ ಸರಿಯಾದ ಭಾಗವನ್ನು ನಿರ್ವಹಿಸುವದಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಗೂ ಅವು ಅತ್ಯಂತ ಅವಶ್ಯವಾದವುಗಳಾಗಿವೆ.

(೨) ಸಮತೋಲ ಪೂರ್ಣತ್ವವನ್ನು ಪಡೆಯುವ ಮಾರ್ಗದಲ್ಲಿ ಮುಂದುವರಿಯಲು ಕಲಿಯುವನಿಗೆ ಕಲಾಶಿಕ್ಷಣವು ಕಾರ್ಯಕಾರಿ ಮತ್ತು ಅತ್ಯಗತ್ಯದ ಸಹಾಯದ ಸಾಧನವಾಗಿದೆ. ಕಲೆಯ ಮುಖಾಂತರ ಆತ್ಮಾವಿಷ್ಕದಿಂದ ಕಲಿಯುವವನು ಆತ್ಮಾನುಭೂತಿಯ ಅನುಭವವನ್ನು ಪಡೆಯುತ್ತಾನೆ. ಇದನ್ನೇ ಬೇರೆ ಶಬ್ದಗಳಲ್ಲಿ ಹೀಗೆ ಹೇಳಬಹುದು—ಕಲೆಯ ಅಭ್ಯಾಸವು ಶಿಕ್ಷಣದ ಮಾಧ್ಯಮವಾಗಬಲ್ಲದು, ಅದು ಕಲಾಶಿಕ್ಷಣದಲ್ಲಿ ಪ್ರತ್ಯಕ್ಷ ರಚನಾತ್ಮಕ ಕೃತಿಗಳ ಮುಖಾಂತರ ವಿಚಾರಗಳೊಡನೆ ಸಂಬಂಧೀಕರಣವನ್ನು ಮಾಡುತ್ತದೆ ಮತ್ತು ಅನುಭವವನ್ನು ಮಾಡಿಸುತ್ತದೆ.

(ಇ) ಸಾಮಾನ್ಯ ಶಿಕ್ಷಣದಲ್ಲಿ ಚಾಕ್ಷುಷ ಕಲೆಗಳಿಗೆ ಮಹತ್ವದ ಸ್ಥಾನವಿರಬೇಕು. ಈ ಸೂಚನೆಯು ಬಾಲಕರ ಮತ್ತು ಪ್ರೌಢರ ಶಿಕ್ಷಣಕ್ಕೂ ಅನ್ವಯಿಸುತ್ತದೆ.

(ಈ) ಸಾಮಾನ್ಯ ಶಿಕ್ಷಣದಲ್ಲಿ ಚಾಕ್ಷುಷ ಕಲೆಗಳಿಗೆ ಮಹತ್ವದ ಸ್ಥಾನವಿರುವುದರಿಂದ ಶಾಲೆಗಳ ಪಾಠ್ಯಕ್ರಮದಲ್ಲಿ ಇತರ ವಿಷಯಗಳಿಗೆ ಸರಿಸಮಾನವಾದ ಸ್ಥಾನವು ಚಾಕ್ಷುಷ ಕಲಾಶಿಕ್ಷಣಕ್ಕೂ ಇರಬೇಕು. ಇತರ ವಿಷಯಗಳನ್ನು ಕಲಿಸುವ ಶಿಕ್ಷಕರಿಗೆ ಸರಿಸಮಾನವಾದ ಹಕ್ಕು-ಬಾಧ್ಯತೆಗಳು ಚಾಕ್ಷುಷ ಶಿಕ್ಷಣದ ಶಿಕ್ಷಕರಿಗೂ ಇರಬೇಕು.

೨. ಸಾಮಾನ್ಯ ಶಿಕ್ಷಣ ಪದ್ಧತಿಗಳನ್ನು ಕುರಿತು ನಿರ್ಣಯಗಳು ಮತ್ತು ಸಲಹೆಗಳು :—

(ಅ) ಸಾಮಾನ್ಯ ಶಿಕ್ಷಣಕ್ಕೆ ಅಮೂಲ್ಯ ಕಾಣಿಕೆಯಾಗಿರುವದರಿಂದ ಎಲ್ಲ ಶಾಲೆಗಳ ಕಾರ್ಯಕ್ರಮದಲ್ಲಿ ಎಲ್ಲ ವಯೋಮಾನದ ಬಾಲಕರಿಗೋಸ್ಕರ ಮೂರ್ತಿನಿರ್ಮಾಣ ಕಲೆಯೂ ಸುಚಿತ್ರಿತ ಕಲೆಯೂ ಮುಖ್ಯವಾದ ಅಂಗಗಳಾಗಿರಬೇಕು.

(ಬ) ಬಾಲಕರು ತಮ್ಮ ವ್ಯಕ್ತಿತ್ವಕ್ಕೆ ಅನುಗುಣವಾಗಿ ಸ್ವತಂತ್ರವಾಗಿ ರಚನೆ ಮಾಡಲು ಬರುವಂತೆ ವಿದ್ಯಾರ್ಥಿಗಳ ವ್ಯಕ್ತಿತ್ವದ ಸಾಮಾನ್ಯ ವಿಕಾಸಕ್ಕೂ ಮಾನಸಿಕ ಮಟ್ಟಕ್ಕೂ ಯೋಗ್ಯವಾದ ಶಿಕ್ಷಣದ ಪದ್ಧತಿಗಳು ಇರಬೇಕು.

(ಕ) ತನ್ನ ವಿದ್ಯಾರ್ಥಿಗಳ ಸ್ವಂತ ಕೃತಿಗಳನ್ನು ಮತ್ತು ಅವರ ವ್ಯಕ್ತಿತ್ವವನ್ನೂ ಪ್ರಶಂಸಿಸುವದಕ್ಕಾಗಿ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಬಗೆಗೆ ಸಾಕಷ್ಟು ಜ್ಞಾನವನ್ನು ಇಟ್ಟುಕೊಂಡಿರಬೇಕು.

(ಡ) ನಾನಾಬಗೆಯ ವಸ್ತುಗಳನ್ನು ವಿದ್ಯಾರ್ಥಿಗಳಿಗೆ ಕೊಡಬೇಕು. ಅವುಗಳಿಂದ ಮಾಡಿದ ಕೃತಿಗಳಿಂದ ವಿದ್ಯಾರ್ಥಿಗಳು ಮಾನಸಿಕ ಉಚ್ಚ ಅನುಭವದ ಆನಂದವನ್ನು ಪಡೆಯಬೇಕು. ಚಾಕ್ಷುಷ ಶಿಕ್ಷಣದಲ್ಲಿ ಆತ್ಮಾವಿಷ್ಕರಣದ ಬೆಳವಣಿಗೆಗಾಗಿ ಮತ್ತು ಪೂರ್ಣತೆಗಾಗಿ ಸ್ವಯಂಪ್ರೇರಣೆಯು ಹುಟ್ಟುವಂತೆ ಪೂರ್ಣ ಅನುಕೂಲತೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು. ಇದು ಕೊನೆಯಲ್ಲಿ ಎಲ್ಲ ಅವಸ್ಥೆಗಳಲ್ಲಿ ಕಾಲ್ಪನಿಕ ಮತ್ತು ಭಾವನಾಪ್ರಧಾನ ಅನುಭವಗಳಿಂದ ಬರುವದರಲ್ಲಿ ಸಂದೇಹವಿಲ್ಲ. ಇದು ಮೂಲದಲ್ಲಿ ಅಂತರ್ಜ್ಞಾನದ ಭಾಷೆಯಾಗಿದೆಯಾದ್ದರಿಂದ ಕಲಿಸಲು ಬಾರದಂತಹದಾಗಿದೆ. ಆದುದರಿಂದ ಬಾಲಕರ ಮಾನಸಿಕ-ಬೌದ್ಧಿಕ ಪೂರ್ಣ ವಿಕಾಸಕ್ಕಾಗಿ ತನ್ನ ಸಂಪೂರ್ಣ ಶಕ್ತಿಯನ್ನು ಸಾಧನಗಳನ್ನು ವಿನಿಯೋಗಿಸುವದು ಶಿಕ್ಷಕನ ಕರ್ತವ್ಯವಾಗಿದೆ.

"ನೂತನ ಗಣಿತ" ಗಳ ೧೯೫೨ರ ತಿದ್ದಿದ ಆವೃತ್ತಿಗಳು

ಎಲ್ಲ ಕಡೆಗೂ ದೊರೆಯುವವು

ಹಲವು ತಜ್ಞರ ನೆರವಿನಿಂದ ತಿದ್ದುಪಡೆಯನ್ನು ಕೈಕೊಂಡು ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀ ಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಹಾ ಸ್ಕೂ. ಬೋ. ಹಾಗು ಮುನಸಿಪಲ್ ಸ್ಕೂ. ಬೋ. ಗಳೂ ಮನ್ನಣೆಯನ್ನಿತ್ತಿರುವವು.
ಎಂತಲೇ ೧೯೫೨ರ ಆವೃತ್ತಿಗಳನ್ನು ಕೇಳಿರಿ. ಎಲ್ಲ ಕಡೆಗೂ ದೊರೆಯುವವು.

ಆಕಳವಾಡಿ ಬುಕ್ ಡಿಪೊ, ಧಾರವಾಡ

ಥಿಯಾಸಫಿಕಲ್ ಸೊಸಾಯಿಟಿ

ಲೇಖಕರು :— **ಶ್ರೀ. ಗುರುನಾಥ ಜೋಶಿ**

ಭಾರತದಲ್ಲಿ ಧಾರ್ಮಿಕ ಸುಧಾರಣೆಗಳನ್ನು ಮಾಡುವ ಉದ್ದೇಶದಿಂದ ಅನೇಕ ಸಂಸ್ಥೆಗಳು ಹುಟ್ಟಿದವು. ಅವುಗಳಲ್ಲಿ ಥಿಯೊಸೊಫಿಕಲ್ ಸೋಸಾಯಿಟಿಯೂ ಒಂದು. ಥಿಯಾಸಫಿಕಲ್ ಸೋಸಾಯಿಟಿಯ ಸ್ಥಾಪನೆಯು ವಿಶ್ವದಲ್ಲಿರುವ ಮಾನವರೆಲ್ಲರನ್ನು ಸೋದರತ್ವದ ರಜ್ಜುವಿನಿಂದ ಕಟ್ಟುವುದಕ್ಕಾಗಿ ಆಗಿದೆ. ಇದರ ಸಾರವು ಭಗವದ್ಗೀತೆಯ 'ಅದ್ವೇಷ್ಟಾ ಸರ್ವ ಭೂತಾನಾಂ.......' ಶ್ಲೋಕದ ಆಧಾರದ ಮೇಲೆ ನಿಂತಿದೆ.

ಪ್ರಸಾರ

ಇದರ ಅನೇಕ ಶಾಖೆಗಳು ಪ್ರಪಂಚದಲ್ಲಿ ಹರಡಿವೆ. ಅವುಗಳಲ್ಲಿ ಭಾರತೀಯ ಶಾಖೆಯೊಂದಿದೆ. ಅಂತರ್ರಾಷ್ಟ್ರೀಯ ಸೋಸಾಯಿಟಿಯ ಮುಖ್ಯ ಕೇಂದ್ರವು ಮದ್ರಾಸದ ಬಳಿಯಲ್ಲಿ ಅಡ್ಯಾರ್ ಎಂಬ ನದಿಯ ದಂಡೆಯ ಮೇಲೆ ಸಮುದ್ರದ ಹತ್ತಿರ ಸ್ಥಾಪಿತವಾಗಿದೆ. ಇದರ ಆವಾರದಲ್ಲಿ ಗುಡಿ, ಚರ್ಚು, ಗುರುದ್ವಾರಾ, ಬೌದ್ಧ ಮತ್ತು ಜೈನ ಮುಂತಾದ ದೇವಾಲಯಗಳು ಇವೆ. ತಮ್ಮ ತಮ್ಮ ವಿಶ್ವಾಸದಂತೆ ಜನರು ಈ ದೇವತಾ ನಾಥಿಗಳಿಗೆ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಇದರ ಭಾರತೀಯ ಶಾಖೆಯ ಕೇಂದ್ರವು ಕಾಶಿಯಲ್ಲಿದೆ ಮತ್ತು ಇದರ ಲಾಜ್‌ಗಳು (ಭವನಗಳು) ಇಡಿ ಭಾರತದಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ಇವೆ. ಕೆಲವು ಭವನಗಳು ಹಳ್ಳಿಗಳಲ್ಲಿಯೂ ಇವೆ.

ಈ ಸೋಸಾಯಿಟಿಯ ಸಂಸ್ಥಾಪನೆಯನ್ನು ಬಾಹ್ಯ ಜಗತ್ತಿನಲ್ಲಿ ಮಾಡಿದವರು ಇಬ್ಬರು— (೧) ರಶಿಯನ್ ಮಹಿಳೆ ಮ್ಯಾಡಮ್ ಬ್ಲ್ಯಾವೆಟ್ಸ್ಕಿ ಮತ್ತು (೨) ಅಮೇರಿಕೆಯ ಕರ್ನಲ್ ಎಚ್. ಎಸ್. ಆಲ್‌ಕಾಟ್. ಇವರ ನಂತರ ಡಾಕ್ಟರ ಆನಿ ಬೆಜೆಂಟರು ಈ ಸೊಸಾಯಿಟಿಯ ಅಧ್ಯಕ್ಷೆಯಾದರು.

ಸೊಸಾಯಿಟಿಯು ಮಾಡಿದ ಕಾರ್ಯ

ಈ ಸೊಸಾಯಿಟಿಯು ಕಳೆದ ೭೦ ವರ್ಷಗಳಲ್ಲಿ ಬಹಳ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿದೆ. ಆದಾಗ್ಯೂ ಇದು ಹಿಂದುಸ್ತಾನದಲ್ಲಿ ಮಾಡಿದ ಕಾರ್ಯವನ್ನು ಇಲ್ಲಿ ಸಂಕ್ಷೇಪದಲ್ಲಿ ನಿರೂಪಿಸಲಾಗುವದು. ಕಳೆದ ಶತಮಾನದ ಉತ್ತರಾರ್ಧದಲ್ಲಿ ಪಾಶ್ಚಾತ್ಯ ಸಂಸ್ಕೃತಿಯು ಜಡವಾದವು ಭಾರತೀಯರ ಮೇಲೆ ವಿಶೇಷ ವರ್ಚಸ್ಸನ್ನು ಹಾಕಿತ್ತು. ಆಗ ಜನರು ತಾವು ಹಿಂದೂ ಎಂದು ಹೇಳಿಸಿಕೊಳ್ಳಲು ನಾಚುತ್ತಿದ್ದರು, ಕ್ರಿಶ್ಚಿಯನ್ನರೂ ನಾಸ್ತಿಕರು ಆಗುತ್ತ ನಡೆದಿದ್ದರು. ಈ ಸೊಸಾಯಿಟಿಯ ಸಂಸ್ಥಾಪಕರು ಈ ನಾಸ್ತಿಕತನ ಹಾಗೂ ಜಡವಾದವನ್ನು ತಡೆದರು; ಜನರಲ್ಲಿ ತಮ್ಮ ದೇಶ ಹಾಗೂ ತಮ್ಮ ಧರ್ಮದ ಬಗ್ಗೆ ವಿಶ್ವಾಸ, ಆದರ, ಗೌರವ ಮುಂತಾದ ಉಚ್ಚ ಭಾವಗಳು ಇರಬೇಕೆಂಬುದರ ಬಗ್ಗೆ ಜಾಗೃತಿಯನ್ನುಂಟು ಮಾಡಿದರು. ಕರ್ನಲ್ ಆಲಕಾಟ್ ಅವರು ಈ ದೇಶದಲ್ಲಿ ಮೊಟ್ಟ-ಮೊದಲು ಸ್ವದೇಶಿ ಪ್ರದರ್ಶನ ಜರುಗಿಸಿದರು, ಹರಿಜನರಿಗಾಗಿ ಮತ್ತು ಕೀಳು ಜಾತಿಯವರಿಗಾಗಿ ಮೊಟ್ಟ-ಮೊದಲು ಅಡ್ಯಾರ ಹಾಗೂ ಮದ್ರಾಸದಲ್ಲಿ ಪಾಠಶಾಲೆಗಳನ್ನು ತೆರೆದರು. ಅಡ್ಯಾರದಲ್ಲಿ ಒಂದು ಪುಸ್ತಕಾಲಯವನ್ನು ಸ್ಥಾಪಿಸಿದರು. ಅದರಲ್ಲಿ ಪ್ರಾಚೀನ ಸಂಸ್ಕೃತ ಗ್ರಂಥಗಳ ಅಮೂಲ್ಯ ನಿಧಿಯು ಇರುವಷ್ಟು ಇನ್ನೆಲ್ಲಿಯೂ ಇಲ್ಲ. ತಾಡವಾಲೆಗಳ ಗ್ರಂಥಗಳು ಹೇರಳವಾಗಿವೆ. ಈ ಸೊಸಾಯಿಟಿಯೆ ೧೮೮೫ರಲ್ಲಿ ಇಂದಿನ ರಾಷ್ಟ್ರೀಯ ಮಹಾಸಭೆ (ಕಾಂಗ್ರೆಸ್)ಯ ತಳಹದಿಯನ್ನು ಹಾಕಿತು. ಕಾಂಗ್ರೆಸ್ಸಿನ ಜನ್ಮದಾತರೆನಿಸುವ ಹ್ಯೂಮ ಸಾಹೇಬರು ಈ ಸೊಸಾಯಿಟಿಯ ಸದಸ್ಯರಿದ್ದರು ಮತ್ತು ಇದರ ತತ್ವಾನುಯಾಯಿಗಳಾಗಿದ್ದರು. ಅವರು ಈ ಸೊಸಾಯಿಟಿಯ ಆಜ್ಞೆಯಂತೆ ಭಾರತದ ಸೇವೆಗೆ ಕೈಹಾಕಿದ್ದರು ಮತ್ತು ೧೮೮೫ರಿಂದ ೧೯೦೮ರ ವರೆಗೆ ಕಾಂಗ್ರೆಸ್ಸಿನ ಮುಖ್ಯ ಕಾರ್ಯದರ್ಶಿಗಳಾಗಿದ್ದರು.

ಪ್ರಾಥಮಿಕ ಶಿಕ್ಷಣ

ಶ್ರೀಮತಿ ಆನಿ ಬೆಸೆಂಟರು ೧೮೯೩ರಲ್ಲಿ ಭಾರತಕ್ಕೆ ಬಂದರು. ಬರುತ್ತಲೇ ಅವರು ಶಬ್ದ, ಅಗ್ನಿ, ಯೋಗ, ಪ್ರತೀಕ ಮುಂತಾದ ವಿಷಯಗಳ ಬಗ್ಗೆ ವ್ಯಾಖ್ಯಾನ ಮಾಡಿದರು. ಇದರಿಂದಾಗಿ ಹಿಂದೂಗಳ ಕಣ್ಣುಗಳು ತೆರೆದವು. ಅವರು ಹಿಂದೂ ಧರ್ಮ ಹಾಗೂ ಅನ್ಯ ಧರ್ಮಗಳ ಐಕ್ಯ, ಸಾಮ್ಯವನ್ನು ತೋರಿಸುವ ವ್ಯಾಖ್ಯಾನಗಳನ್ನೂ ಮಾಡಿದರು. ಅವರ ಭಾಷಣಗಳ ಸಂಗ್ರಹವು ಪುಸ್ತಕ ರೂಪದಲ್ಲಿ ದೊರೆಯುತ್ತದೆ. ಅವರು ಸಂಸ್ಕೃತ ಗ್ರಂಥ ಉನ್ನತಿ ಸಭೆ, ವಿದ್ಯಾಪೀಠ, ಬಾಲಕರ ಶಿಕ್ಷಣವನ್ನು ಕೈಯಲ್ಲಿ ತೆಗೆದುಕೊಂಡು ಕಾಶಿಯಲ್ಲಿ ಸೆಂಟ್ರಲ್ ಹಿಂದೂ ಸ್ಕೂಲ್ ಹಾಗೂ ಇತರ ಕಾಲೇಜುಗಳ ಸ್ಥಾಪನೆಯನ್ನು ಮಾಡಿದರು. ಇದರ ಆಧಾರದ ಮೇಲೆಯೆ ಹಿಂದೂ ವಿಶ್ವವಿದ್ಯಾಲಯವನ್ನೂ ಸ್ಥಾಪಿಸ ಹೆಚ್ಚಿದರು. ಇದಕ್ಕೆ ಪಂಡಿತ ಮದನಮೋಹನ ಮಾಲವೀಯರನ್ನು ಅಗ್ರಣಿಯನ್ನಾಗಿ ಮಾಡಿದರು. ಸ್ವತಃ ಇಂಗ್ಲಂಡಕ್ಕೆ ಹೋಗಿ ವಿಶ್ವವಿದ್ಯಾಲಯದ ಚಾರ್ಟರನ್ನು ತಂದರು. ಶ್ರೀಮತಿ ಬೆಜೆಂಟರು ಹಿಂದೂ ಧರ್ಮ ಹಾಗೂ ಶಿಕ್ಷಣದ ಸಂಬಂಧವಾಗಿ ಅನೇಕ ಪುಸ್ತಕಗಳನ್ನು ಬರೆದಿರುವರು. ಅವುಗಳಲ್ಲಿ ಮುಖ್ಯವಾದವು ಇವು—(೧) ಧರ್ಮ, (೨) ಹಿಂದೂ ಆದರ್ಶ, (೩) ಅವತಾರ, (೪) ಆಧುನಿಕ ಜೀವನದಲ್ಲಿ ಪ್ರಾಚೀನ ಆದರ್ಶ, (೫) ಶ್ರೀರಾಮಚಂದ್ರ—ಆದರ್ಶ ಅರಸ, (೬) ಮಹಾಭಾರತದ ಕಥೆ, (೭) ದೀಕ್ಷಾ ಮಾರ್ಗ, (೮) ಬಾಹ್ಯ ಜಗತ್ತಿನಲ್ಲಿ, ಮುಂತಾದವು.

ಪುಸ್ತಕಗಳ ಪ್ರಕಾಶನ

ಹಿಂದೂ ಧರ್ಮದ ಶಿಕ್ಷಣಕ್ಕಾಗಿ ಕಾಶಿಯ ಪಂಡಿತರ ಸಮ್ಮತಿಯಿಂದ ಅವರು ಮೂರು ಪುಸ್ತಕಗಳನ್ನು ಪ್ರಕಟಿಸಿದರು. (೧) ಸನಾತನ ಧರ್ಮ ಪ್ರಶ್ನೋತ್ತರಿ, (೨) ಸನಾತನ ಧರ್ಮ ಪ್ರವೇಶಿಕಾ, (೩) ಸನಾತನ ಧರ್ಮ ಬೃಹತ್ತರ. ಇವು ಇಂಗ್ಲಿಷಿನಲ್ಲಿವೆ. ಇವುಗಳಲ್ಲಿ ಸನಾತನ ಧರ್ಮದ ಎಲ್ಲ ಮೂಲ ತತ್ವಗಳು ಅಡಕವಾಗಿವೆ. ಇವನ್ನು ಪಠ್ಯ ಪುಸ್ತಕಗಳಂತೆ ಸಹ ಕಲಿಸಲಾರಂಭಿಸಲಾಯಿತು. ಈಗ ಇವುಗಳ ಪಠನ ನಿಲ್ಲಿಸಲಾಗಿದೆ. ಈಗ ಪುನಃ ಇವುಗಳ ಪ್ರಕಾಶನವು ಆರಂಭವಾಗಿದೆ. ಏಕೆಂದರೆ ಇಪ್ಪತ್ತು ವರುಷಗಳ ನಂತರ 'ಕಾಪೀರೈಟಿನ' ಪ್ರಶ್ನೆ ಇರುವುದಿಲ್ಲ.

ವಿದ್ವಾಂಸರ ಸಹಕಾರ

ಈ ಸೊಸಾಯಿಟಿಯ ಕಾರ್ಯಕ್ಕೆ ಡಾಕ್ಟರ ಭಗವಾನದಾಸ (ಕಾಶಿ) ಅವರು ನೆರವಾದರು. ಇವರು ಬರೆದ 'ಎಶೆನ್ಸಿಯಲ್ ಯುನಿಟಿ ಆಫ್ ಆಲ್ ರಿಲಿಜನ್ಸ್' (ಸರ್ವ ಧರ್ಮ ಸಮನ್ವಯ) ಎಂಬ ಗ್ರಂಥವು ಜಗತ್ಪ್ರಸಿದ್ಧವಾಗಿದೆ. ವಿಲಾಯತಿಯವರು ಇದನ್ನು ಅಚ್ಚು ಹಾಕಿಸಿ ಹಂಚುತ್ತಿದ್ದಾರೆ. ಡಾಕ್ಟರ ಭಗವಾನದಾಸರ ಸುಪುತ್ರರೀ ಶ್ರೀ. ಶ್ರೀಪ್ರಕಾಶಕರು (ಮದ್ರಾಸ ರಾಜ್ಯದ ರಾಜ್ಯಪಾಲರು) ಶ್ರೀಮತಿ ಬೆಜೆಂಟರ ಸಹ ಕಾರ್ಯಕರ್ತರಲ್ಲಿ ಶ್ರೀ ಉಪೇಂದ್ರನಾಥ ಬಸು (ಕಾಶಿ), ಮಿಸ್ಟರ ಕಿಂಗ, ಶ್ರೀ. ಇಕಬಾಲ ನಾರಾಯಣ ಗುರ್ಟೂ, ಶ್ರೀ. ಶ್ಯಾಮಾಚರಣ ಡೇ ಮುಂತಾದವರು ಉಲ್ಲೇಖನೀಯರಾಗಿದ್ದಾರೆ. ಈ ಸೊಸಾಯಿಟಿಯ ಮುಖ್ಯ ಮಂತ್ರ ಬ್ರಹ್ಮವಿದ್ಯಾ ಪ್ರಚಾರ. ಇದರ ಕಾರ್ಯದಲ್ಲಿ ಶ್ರೀ. ಲಾಲಾ ಸೂರ್ಯಭಾನ, ರಾಯಬಹಾದ್ದೂರ ಪಂಡ್ಯಾ ಮತ್ತು ಶ್ರೀ. ವೈಜನಾಥ ಅವರು ತೊಡಗಿದ್ದಾರೆ.

ಶಿಕ್ಷಣ ವ್ಯವಸ್ಥೆ

ಹಿಂದೂ ವಿಶ್ವವಿದ್ಯಾಲಯ ಹಾಗೂ ಅದರ ಟ್ರೈಸ್ಕೂಲುಗಳಲ್ಲಿ ಮೊದಲಿನ ಆದರ್ಶಗಳ ಅವಹೇಳನೆ ಪ್ರಾರಂಭವಾದ್ದರಿಂದ ಪುನಃ ಬಾಲಕ-ಬಾಲಿಕೆಯರಿಗಾಗಿ ಕಾಶಿಯಲ್ಲಿ ರಾಜಘಾಟ ಮತ್ತು ಕಮಚ್ಛದಲ್ಲಿ ಶಾಲೆಗಳನ್ನು ಸ್ಥಾಪಿಸಲಾಗಿದೆ.

ರಾಜಕೀಯ ಕಾರ್ಯ

ಭಾರತಕ್ಕೆ ಸ್ವಾತಂತ್ರ್ಯದ ಪ್ರಾಪ್ತಿಗಾಗಿಯೂ ಈ ಸೊಸಾಯಿಟಿಯು ಬಹಳ ಕಾರ್ಯ ಮಾಡಿದೆ. ಸ್ವಾತಂತ್ರ್ಯದ ವಿಚಾರ ಮೂಡಲು ಅನೇಕ ಪುಸ್ತಕಗಳನ್ನು ಡಾಕ್ಟರ ಆನಿಬೆಜೆಂಟರು ಇಂಗ್ಲಿಷಿನಲ್ಲಿ ಬರೆದರು. ಅವುಗಳಲ್ಲಿ ಭಾರತವು ಒಂದು ರಾಷ್ಟ್ರವು, ಸ್ವಾತಂತ್ರ್ಯಕ್ಕಾಗಿ ಭಾರತದ ಹೋರಾಟ ಮುಖ್ಯವಾದವು. ನ್ಯೂ ಇಂಡಿಯಾ, ಕಾಮನ್‌ವೀಲ್ ಎಂಬ ಪತ್ರಿಕೆಗಳನ್ನು ನಡೆಸಿದರು. ಬ್ರಿಟಿಶ್ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಧ್ಯೇಯವುಳ್ಳ 'ಹೋಂರೂಲ್ ಲೀಗ್'

೧೯೧೬ರಲ್ಲಿ ಸ್ಥಾಪಿಸಿದರು. ಭಾರತದ ಅಸಂತೋಷದ ತಂದೆಯೆನಿಸಿದ ಲೋಕಮಾನ್ಯ ಟಿಳಕರೊಡನೆ ಈ ಲೀಗಿನ ಕಾರ್ಯವನ್ನು ಮಾಡಿದರು. ಗಾಂಧೀಜಿಯವರ ಅಸಹಕಾರ ಆಂದೋಲನವು ಇವರ ಮನಸ್ಸಿಗೆ ಬಾರದ್ದರಿಂದ ಕಾಂಗ್ರೆಸ್ಸಿನಿಂದ ಬೇರೆ ಆದರು. ಆದರೆ ದೇಶಹಿತದ ಕಾರ್ಯವನ್ನು ನಿಲ್ಲಿಸಲಿಲ್ಲ.

ಉಚ್ಚ ನಿದರ್ಶಕ್ಕಾಗಿ ಶ್ರೀಮತಿ ಆನಿ ಬೆಜೆಂಟರು ಮನೆಯನ್ನು ಬಿಟ್ಟಿದ್ದರು. ಮಕ್ಕಳುಮರಿಗಳನ್ನು ಬಿಟ್ಟಿದ್ದರು. ಅವರು ಸದಾ ಸತ್ಯವನ್ನು ಅವಲಂಬಿಸಿದ್ದರು. ಅವರು ಕ್ರಿಶ್ಚಿಯನ್ ಧರ್ಮದ ವಿರುದ್ಧ ಅಭಿಪ್ರಾಯವುಳ್ಳವರಾಗಿದ್ದರಿಂದ ಪತಿಯನ್ನೂ ಮಕ್ಕಳನ್ನೂ ಬಿಟ್ಟುಬಿಡಬೇಕಾಯಿತು. ನಾಸ್ತಿಕರ ವಿರುದ್ಧ ಹೋರಾಡಬೇಕಾಯಿತು. ಸ್ತ್ರೀಯರ ಕಲ್ಯಾಣಕ್ಕಾಗಿ ಹೆಣಗಬೇಕಾಯಿತು. ಹಿಂದೂ ಕಾಲೇಜದ ಲಕ್ಷಾಂತರ ರೂಪಾಯಿಯ ಆಸ್ತಿಯನ್ನು ಹಿಂದೂಗಳಿಗೆ ಒಪ್ಪಿಸಿದರು, ಅದರ ಕೂಡ ಇನಿತೂ ಸಂಬಂಧವನ್ನು ಇಟ್ಟುಕೊಳ್ಳಲಿಲ್ಲ. ಕಾಂಗ್ರೆಸ್ಸಿನ ಕಾರ್ಯಾಲಯಕ್ಕಾಗಿ ಎಲ್ಲಿಯೂ ಸ್ಥಳ ಸಿಗದ್ದರಿಂದ 'ನ್ಯೂ ಇಂಡಿಯಾ'ದ ಕಚೇರಿ ಇದ್ದ ತಮ್ಮ 'ಗೋಖಲೆ ಹಾಲ'ನ್ನು ಕಾಂಗ್ರೆಸ್ಸಿಗೆ ಯಾವ ಸ್ವಾರ್ಥವೂ ಇಲ್ಲದೆ ಕೊಟ್ಟುಬಿಟ್ಟರು.

ಶ್ರೀಮತಿ ಆನಿ ಬೆಜೆಂಟರ ಪ್ರಯತ್ನದಿಂದಾಗಿ ಥಿಯಾಸಫಿಕಲ್ ಸೊಸಾಯಿಟಿಯ ಪ್ರಭಾವವು ಜಗತ್ತಿನಲ್ಲಿ ಸರ್ವತ್ರ ಹಬ್ಬಿತು. ಇಂದಿಗೂ ಇದು ಡಾ. ಅರುಂಡೇಲರ ನೇತೃತ್ವದಲ್ಲಿ ಕಾರ್ಯ ಮಾಡುತ್ತಲಿದೆ. ಬ್ರಹ್ಮವಿದ್ಯೆಯ ಪ್ರಸಾರ, ಸರ್ವಧರ್ಮ ಸಮನ್ವಯ ಇವೇ ಈ ಸಂಸ್ಥೆಯ ಹೆಗ್ಗುರಿಯೆಂದು ಹೇಳಬಹುದು.

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

೧೯೫೩ ಎಪ್ರಿಲ್‌ದಿಂದ ಮೇ ೧೫ರ ವರೆಗೆ

ಶಿರಗೋಡ ೨. ಶ್ರೀ. ಲಕ್ಕುಂಡಿ ಪುಟ್ಟಪ್ಪನವರು ಶಾಲೆಯ ಕಟ್ಟಡಕ್ಕಾಗಿ ಎರಡು ಎಕರೆ ಭೂಮಿಯನ್ನು ಕಾಣಿಕೆ ಕೊಟ್ಟಿದ್ದಾರೆ. ಇವರು ಇದೇ ಊರ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಈಗ ಶಾಲಾ ಕಟ್ಟಡವು ತಯಾರಾಗಿ ಅಲ್ಲಿಯೇ ಶಾಲೆಯು ನಡೆಯುತ್ತದೆ. ಮೂರುವರೆ ಎಕರೆ ಭೂಮಿಯನ್ನು ಸಾರ್ವಜನಿಕರಿಗೆ ಮನೆಕಟ್ಟಿಕೊಳ್ಳಲು ಪುಕ್ಕಟೆಯಾಗಿ ಕೊಟ್ಟಿದ್ದಾರೆ. ಒಂದು ಸಾರ್ವಜನಿಕ ಬಾವಿಯನ್ನು ತೋಡಿಸತೊಡಗಿದ್ದಾರೆ.

ಹೊಸರಿತ್ತಿ ೮. ಹೊಸರಿತ್ತಿ ಪ್ರಾಯೋಗಿಕ ಕ್ಷೇತ್ರದ ನೆಗಳೂರು, ಹೊಸರಿತ್ತಿ, ಅಗಡಿ, ಕರ್ಜಗಿ, ಮತ್ತು ಹಾವನೂರು ಈ ಹಳ್ಳಿಗಳ ಗಂಡುಮಕ್ಕಳ ಶಾಲೆಗಳಲ್ಲಿ ಆಸನ ಸಪ್ತಾಹವು ಆಚರಿಸಲ್ಪಟ್ಟಿತು. ಒಟ್ಟು ೧೩೦ ಆಸನಗಳು ತಯಾರಾದವು. ಒಂದರ ಬೆಲೆ ಹದಿನಾಲ್ಕು ಆಣೆಯಿಂದ ಒಂದು ರೂಪಾಯಿಯ ವರೆಗೆ ಇದೆ. ವಿದ್ಯಾರ್ಥಿಗಳೇ ಕೊಳ್ಳತಕ್ಕವರಿದ್ದಾರೆ.

ಮಿಶ್ರೀಕೋಟಿ ೧೨. ಮಿಶ್ರೀಕೋಟೆಯ ಶ್ರೀ. ಎಂ. ಎನ್. ಬಡಿಗೇರ ಅವರ ಸಮಾಜ ಶಿಕ್ಷಣ ವರ್ಗಕ್ಕೆ ಮೇಲಧಿಕಾರಿಗಳಾದ ಶ್ರೀ. ಆರ್. ಕೆ. ಪೆಣಸಿ ಅವರು ಸಂದರ್ಶನವಿತ್ತರು. ಮನರಂಜನೆ, ಸಭೆ ಮುಂತಾದ ಕಾರ್ಯಕ್ರಮಗಳು ಏರ್ಪಟ್ಟಿದ್ದವು.

ತಿಕೋಟಾ ೬. ಡೆ. ಎ. ಇ. ಶ್ರೀ. ಯರಗಲ್ಲ ಅವರ ಹಿರಿಯತನದಲ್ಲಿ ಪಾನಪ್ರತಿಬಂಧದ ಪ್ರಚಾರಾರ್ಥವಾಗಿ ಅನೇಕ ಕಾರ್ಯಕ್ರಮಗಳು ಜರುಗಿದವು. ಪ್ರಸಿದ್ಧ ಶಾಬೆಯವರು ಪಾನಪ್ರತಿಬಂಧಕ್ಕೆ ಸಂಬಂಧಿಸಿದ ಚಿತ್ರಗಳನ್ನು ತೋರಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಾಲಕ ಬಾಲಿಕೆಯರಿಗೆ ಶ್ರೀ. ಯರಗಲ್ಲ ಅವರು ೨೫ ರೂ. ಮೆಚ್ಚುಗೆ ಕೊಟ್ಟರು.

ಪ್ರಾಥಮಿಕ ಶಿಕ್ಷಣ

ಕೊಬಾಗಿ ೨. ಊರ ಸಭ್ಯಗೃಹಸ್ಥರು ಶಾಲೆಗೆ ಒಂದು ಹಿತ್ತಾಳೆಯ ನೀರಿನ ಟಾಕಿ, ಒಂದು ತಂಬಿಗೆ, ಎರಡು ಥಾಲಿ, ಒಂದು ಕಬ್ಬಿಣದ ಸ್ಟ್ಯಾಂಡು ಕೊಟ್ಟು ಬಾಲಕರಿಗೆ ಇದ್ದ ನೀರಿನ ತೊಂದರೆಯನ್ನು ನೀಗಿಸಿದರು.

ಕನವಳ್ಳಿ ೭. ಮೆ। ಡೆಪ್ಯೂಟಿ ಡಾಯರೆಕ್ಟರ, ಪುಣೆ ಅವರು ಎಜ್ಯುಕೇಶನಲ್ ಇನಸ್ಪೆಕ್ಟರ, ಎ.ಓ. ಅವರೊಡನೆ ಮೂಲ ಶಿಕ್ಷಣ ಶಾಖೆಯನ್ನು ಸಂದರ್ಶಿಸಿದರು; ಕ್ರಾಫ್ಟ ಅಧಿಕಾರಿಗಳೂ ಬಂದಿದ್ದರು. ಮಕ್ಕಳ ನಾನಾ ವಿಧದ ಶೈಕ್ಷಣಿಕ ಚಟುವಟಿಕೆಗಳನ್ನು ನೋಡಿ ಆನಂದ ವ್ಯಕ್ತಮಾಡಿದರು. ಮೇ। ಡೆ। ಡೈರೆಕ್ಟರರು ಊರ ಜನರಿಗೆ ಶಾಲಾ ಕಟ್ಟಡಕ್ಕೆ ಸಹಾಯ ಮಾಡಬೇಕೆಂದು ತಿಳಿಸಿದರು.

ಮುಧೋಳ ೬. ಆಚಾರ್ಯ ದಾದಾ ಧರ್ಮಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾಯಕ ಕಾರ್ಯಕರ್ತರ ಬೈಠಕ ಸಮ್ಮೇಲನವು ಜರುಗಿತು.

ವಕ್ಕುಂದ ೧೨. ಗುಪ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ಮೊದಲನೆಯ ಅ। ಎ। ಇನಸ್ಪೆಕ್ಟರ ಶ್ರೀ ಎಸ್. ವ್ಹಿ. ಜೇವೂರ ಅವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಅ। ಡೆ। ಎ। ಇ। ಶ್ರೀ. ಸಂಗೊಳ್ಳಿ ಮೆ। ಜಕಾತಿ ಅ। ಎ। ಓ। ಅವರು ಮಾರ್ಗದರ್ಶನ ಮಾಡಿದ್ದರು. ಶ್ರೀ. ಕೆ. ಆರ್. ಉದಪುಡಿ, ಚೇರಮನ್ ಡಿ. ಎ. ಎ. ಬಿ. ಬೆಳಗಾಂವ ಇವರ ಹಸ್ತದಿಂದ ಸಮ್ಮೇಲನದ ಉದ್ಘಾಟನೆಯಾಯಿತು. ಶ್ರೀ. ನಾಗನೂರ ವಕೀಲರು ಪ್ರದರ್ಶನವನ್ನು ಉದ್ಘಾಟಿಸಿದರು. ಮಾದರಿಯ ಪಾಠ, ಪಾಠ ಟೀಕೆ, ನಿಬಂಧ ವಾಚನ, ಚರ್ಚೆ ಮುಂತಾದ ಕಾರ್ಯಕ್ರಮಗಳು ಜರುಗಿದವು. ಸಾಯಂಕಾಲದಲ್ಲಿ ವಿವಿಧ ವಿನೋದಾವಳಿಗಳೂ ನಡೆದವು. ರಾತ್ರಿಯಲ್ಲಿ ಪಾನಪ್ರತಿಬಂಧದ ಚಲಚಿತ್ರವೂ ತೋರಿಸಲ್ಪಟ್ಟಿತು. ಅನೇಕ ಪ್ರತಿಷ್ಠಿತ ಜನರೂ ಅಧಿಕಾರಿಗಳೂ ಬಂದು ಸಮ್ಮೇಲನಕ್ಕೆ ಶೋಭೆಯನ್ನು ತಂದಿದ್ದರು.

ಲಚ್ಯಾಣ ೨೮. ಶ್ರೀ. ಸಿದ್ಧೇಶ್ವರ ಟ್ರೇನಿಂಗ ಕಾಲೇಜದ ಸ್ನೇಹ ಸಮ್ಮೇಲನವು ವಿಜಾಪುರ ವಿಜಯ ಕಾಲೇಜದ ಪ್ರೊ. ಬಿ. ಟಿ. ಸಾಸನೂರ ಮತ್ತು ವಿಜಾಪುರ ಸಿದ್ಧೇಶ್ವರ ಹೈಸ್ಕೂಲಿನ ಪ್ರಿ. ಶ್ರೀ. ಎಸ್. ವಿ. ಪಾಟೀಲ್ಲದೆವರ ಹಿರಿಯತನದಲ್ಲಿ ಜರುಗಿತು. ಧ್ವಜವಂದನೆ, ಆಟಗಳ ಸ್ಪರ್ಧೆ, ಭಾಷಣಗಳು, ಪಾರಿತೋಷಕ ವಿತರಣ, ಮನರಂಜನೆ ಮುಂತಾದ ಕಾರ್ಯಕ್ರಮಗಳು ಜರುಗಿದವು

ಧಾರವಾಡ ೧. ವನಿತಾ ಸೇವಾ ಸಮಾಜದಲ್ಲಿ ಹೊಸ ಮಾದರಿಯ ಹೂವಿಳ್ಯ ಮತ್ತು ಗೌರೀಪೂಜೆಯ ಸಮಾರಂಭವು ನೆರವೇರಿತು. ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ಪ್ರಿನ್ಸಿಪಾಲ ಶ್ರೀ. ವ್ಹಿ. ಕೆ. ಗೋಕಾಕ ಅವರ ಧರ್ಮಪತ್ನಿಯವರಾದ ಶ್ರೀಮತಿ ಶಾರದಾಬಾಯಿಯವರು ವಹಿಸಿದ್ದರು.

ಉಮಚಗಿ ೧೭. ಕನ್ನಡ ಕಲಾ ಪದ್ಮರಾಜ ಮಂದಿರದವರು ಕತೆ. ಕವಿತೆ, ನಾಟಕಗಳ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಕಥೆ, ನಾಟಕ ಫುಲ್ಸಕೇಪರ ೧೨ ಪುಟಗಳಿಗೆ ಮೀರಬಾರದು. ಕವಿತೆ ೧೬೦ ಸಾಲುಗಳಿಗೆ ಮೀರಬಾರದು. ಇವು ಎಲ್ಲಿಯೂ ಪ್ರಕಟವಾಗಿರಬಾರದು. ಸ್ಪರ್ಧೆಯಲ್ಲಿ ಭಾಗವಹಿಸುವವರು ಒಂದು ರೂಪಾಯಿ ಪ್ರವೇಶ ಫೀ (ಪ್ರವೇಶ ಫೀಯ ಹಣವು ಶಾಲಾ ಕಟ್ಟಡಕ್ಕೆ ವಿನಿಯೋಗಿಸಲ್ಪಡುವದು.) ೧೯೫೩ ಮೇ ೩೦ ರೊಳಗಾಗಿ ಕತೆ, ನಾಟಕ, ಕವಿತೆಗಳು ತಲ್ಪಬೇಕು. ಜುಲೈ ೧೫ಕ್ಕೆ ಪರಿಣಾಮವು ಹೊರಬೀಳುವದು. ಸರ್ವರಿಗೂ ಈ ಸ್ಪರ್ಧೆಯು ತೆರೆದಿದೆ. ಸ್ಪರ್ಧೆಯಲ್ಲಿ ಮೊದಲು ಬಂದ ೨ ಕತೆಗಳಿಗೆ ಮತ್ತು ಕವಿತೆ, ನಾಟಕಕ್ಕೆ ಬಹುಮಾನ, ಪ್ರಮಾಣಪತ್ರಗಳನ್ನು ಕೊಡಲಾಗುವದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಅಳಗವಾಡಿ ೨೧. ಮೆ। ಎ. ಓ. ಅವರು ಶಾಲೆಗೆ ಸಂದರ್ಶನವಿತ್ತು ಕಾರ್ಯಗಳು ಸುವ್ಯವಸ್ಥಿತವಾಗಿ ನಾಗಿರುವದನ್ನು ಕಂಡು ಸಂತೋಷಭರಿತರಾದರು. ಸರಪಂಚರನ್ನೂ ಊರ ಹಿರಿಯರನ್ನೂ ಕರೆಯಿಸಿ ಶಾಲೆಯ ಹೊಸ ಕಟ್ಟಡಕ್ಕಾಗಿ ಮೆ। ಕಲೆಕ್ಟರರು ಕೊಟ್ಟ ಸ್ಥಳವನ್ನು ಉಪಯೋಗಿಸಿ ಕಟ್ಟಡದ ಕೆಲಸವನ್ನು ಬೇಗ ಮುಗಿಸಬೇಕೆಂದು ಹೇಳಿದರು. ಪ್ರಾ. ಶಾ. ಪ್ರ. ಪ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ಸಹ ಹಂಚಲಾಯಿತು.

ನೆಗಳೂರ ೨೭. ಶಾಲೆಯ ಸರಸ್ವತಿ ಸಹಕಾರಿ ಸಂಘದ ಡಿವಿಡೆಂಡ ಹಂಚುವ ಸಭೆಯು ಜರುಗಿ ೦-೫-೬ಯಂತೆ ಲಾಭವಾದದ್ದನ್ನು ಹಂಚಲಾಯಿತು.

ಕಾರವಾರ ೨೯. ಟ್ರೇನಿಂಗ ಕಾಲೇಜದ ವಾರ್ಷಿಕ ಸ್ನೇಹ ಸಮ್ಮೇಲನವು ಶ್ರೀ. ಪಿ. ಬಿ. ವಗ್ಯಾಣಿ, ಸಿವ್ಹಿಲ್ ಜಜ್ಜ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ರಾತ್ರಿ ೯ ಗಂಟೆಗೆ 'ದೇವದಾಸಿ' ಎಂಬ ನಾಟಕವನ್ನು ಅಭಿನಯಿಸಲಾಯಿತು.

ಆರೇಮಲ್ಲೂರ ೨೧. ಅ| ಡೆ| ಎ| ಇ| ಶ್ರೀ. ಎಂ. ಬಿ. ಹಿರೇಮಠ ಅವರ ಹಿರಿಯತನದಲ್ಲಿ 'ವಿಜಯ ದಶಮಿ' ಎಂಬ ನಾಟಕವನ್ನು ಅಭಿನಯಿಸಲಾಯಿತು; ಗೀಗೀ ಹಾಡುಗಳೂ [illegible].

ನವಲಗುಂದ ೪. ೨೦ ಮಾರ್ಚರಂದು ಮ| ಡೆ| ಎ| ಇ| ಅವರ ಅಧ್ಯಕ್ಷತೆಯಲ್ಲಿ ತಾಲೂಕ ಶಿಕ್ಷಕರ ಸಭೆಯು ಸೇರಿತು. ಒಕ್ಕಲತನದ ಶಾಲೆಗಳ ಅ| ಡೆ| ಅವರು ಗಣಿತ ವಿಷಯದ ಮಾದರಿ ಪಾಠವನ್ನು ಕೊಟ್ಟರು. ಅನೇಕ ಶೈಕ್ಷಣಿಕ ಸಮಸ್ಯೆಗಳ ಚರ್ಚೆಯಾದ ನಂತರ ಅಧ್ಯಕ್ಷರಾದ ಶ್ರೀ. ದೇಸಾಯಿ ಅವರು ಸಮಯೋಚಿತ ಭಾಷಣ ಮಾಡಿದರು.

ಬ್ಯಾಡಗಿ ೧೨. ಸ್ಥಳಿಕ ಶಾಲೆಗಳ ಶಿಕ್ಷಕರ ಸಭೆಯು ಶ್ರೀ. ಕುಲಕರ್ಣಿ ಅ| ಡೆ| ಎ| ಇ| ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಇತರ ಅ| ಎ| ಡಿ| ವಿ| ಇನಸ್ಪೆಕ್ಟರರೂ ಬಂದು ಸಭೆಯನ್ನು ಯಶಸ್ವಿಯಾಗಿಸಿದರು.

ಶಾಂತಗಿರಿ ೧ ಮೇ. ಶ್ರೀ. ಯು. ಬಾ. ಕೆಂಪಾಭಂಗಿ ಅವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಪರೀಕ್ಷೆಯಲ್ಲಿ ಮೇಲು ನಂಬರು ಬಂದ ವಿದ್ಯಾರ್ಥಿಗಳಿಗೆ ಪಾರಿತೋಷಕ ಹಂಚುವ ಸಮಾರಂಭವು ನೆರವೇರಿತು.

ಕಾಖಂಡಕಿ ೬ ಮೇ. ಹೈಸ್ಕೂಲ ಸ್ಕಾಲರಶಿಪ್ ಪರೀಕ್ಷೆಗೆ ಕುಳಿತ ನಾಲ್ವರೂ ಪಾಸಾಗಿದ್ದಾರೆ. ಕುಮಾರ ಶ. ಬಾ. ಸೂರ್ಯವಂಶಿಯು ವಿಜಾಪೂರ ಕೇಂದ್ರಕ್ಕೆ ಪ್ರಥಮಸ್ಥಾನವನ್ನು ಪಡೆದಿದ್ದಾನೆ.

ತಾಂಬೆ ೩ ಮೇ. ಶ್ರೀ. ಮನೋಹರ ಜಗನ್ನಾಥ ಜೋಶಿ ಹೈಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯಲ್ಲಿ ನಂಬರ ಪಡೆದ ಮೂಲಕ ಅವನನ್ನು ಅಭಿನಂದಿಸುವ ಸಭೆಯು ಜರುಗಿತು.

ಬೆಟಗಿರಿ ೨ ಮೇ. ವಾರ್ಷಿಕ ಸಭೆಯಲ್ಲಿ ಹೆಚ್ಚು ಗುಣಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಶ್ರೀ. ಮು. ರಾ. ಪಾಟೀಲ ಅವರು ಕೊಟ್ಟ ಪಾರಿತೋಷಕಗಳನ್ನು ಹಂಚಲಾಯಿತು.

ನರಗುಂದ ೩೦. ಮಿಡಲ್‌ಸ್ಕೂಲ್ ಮತ್ತು ಹೈಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯಲ್ಲಿ ಶ್ರೀ. ತೀ. ದ. ಕುಲಕರ್ಣಿ, ಬಾ. ಲ. ಕರಜಗಿ ಇವರು ಉತ್ತೀರ್ಣರಾಗಿದ್ದಾರೆ.

ಅಗಡಿ ೩೯. ವಾರ್ಷಿಕ ಪರೀಕ್ಷೆಯಲ್ಲಿ ೧. ೨, ೩ನೆಯ ನಂಬರು ಬಂದ ವಿದ್ಯಾರ್ಥಿಗಳಿಗೆ ಸರ್ವ ಶ್ರೀ. ಮಾಳದಕರ, ಸಿಂಧೆ, ತಾಳೀಕೋಟಿ, ರಾಜಪುರೋಹಿತ, ದೇಸಾಯಿ ಅವರು ಕೊಟ್ಟ ಪಾರಿತೋಷಕಗಳನ್ನು ಹಂಚಲಾಯಿತು.

ಅನಿಗೋಳ ೧೪. ಬೆಳಗಾಂವ ಡಿ. ಎಸ್. ಬಿ. ಯ ಉಪಾಧ್ಯಕ್ಷರಾದ ಶ್ರೀಮತಿ ಎಸ್. ಆಯ್. ನಿಂಬಾಳಕರ ಅವರು ಶಾಲೆಯನ್ನೂ ವಾಚನಾಲಯವನ್ನೂ ಸಂದರ್ಶಿಸಿ ಆನಂದಪಟ್ಟು ವಾಚನಾಲಯಕ್ಕೆ ೫ ರೂ. ಕಾಣಿಕೆ ಕೊಟ್ಟರು.

ಯಡಹಳ್ಳಿ ೨೭ ಶ್ರೀ. ಕುಳ್ಳೂರು ಮಹಾಸ್ವಾಮಿಗಳ ಆಶೀರ್ವಾದದಿಂದ ಹರಿಜನಕೇರಿಯಲ್ಲಿ ಸಮಾಜ ಶಿಕ್ಷಣ ವರ್ಗವನ್ನು ತೆರೆಯಲಾಯಿತು.

ನೇಸರಗಿ ೧ ಮೇ. ಸಬ್‌ಜಜ್ಜ ಶ್ರೀ. ಎತ್ತಿನಮನಿ ಅವರ ಅಧ್ಯಕ್ಷತೆಯಲ್ಲಿ ಶ್ರೀ. ಪ್ರ. ಶ್ರೀ. ಕೊಣ್ಣೂರ ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯಲ್ಲಿ ಉತ್ತೀರ್ಣನಾದದ್ದಕ್ಕಾಗಿಯೂ ಶ್ರೀ. ಹೂಗಾರ ಅವರಿಗೆ ವರ್ಗವಾದದ್ದಕ್ಕಾಗಿ ಸಭೆಯನ್ನು ಏರ್ಪಡಿಸಲಾಗಿತ್ತು.

ಚೇವನಾಳ ೨ ಮೇ. ಕುಮಾರ ಬ. ಹು. ಹೊಸಮನಿ ಇವನು ವಾರ್ಷಿಕ ಪರೀಕ್ಷೆಯಲ್ಲಿ ಕಲಾದಗಿ ಭಾಗಕ್ಕೇ ಪ್ರಥಮಸ್ಥಾನವನ್ನು ಪಡೆದಿದ್ದಾನೆ.

ಬಟ್ಟೂರು ೬. 'ಮದ್ಯಪಾನ ಪ್ರತಿಬಂಧ' ಸಪ್ತಾಹವನ್ನು ಉತ್ತಮ ರೀತಿಯಿಂದ ಆಚರಿಸಲಾಯಿತು.

ಅಗಡಿ ೫. ಪಾನನಿರೋಧ ಸಪ್ತಾಹವನ್ನು ಆಚರಿಸಲಾಯಿತು. ಅನೇಕ ಕಾರ್ಯಕ್ರಮಗಳು ಏರ್ಪಟ್ಟಿದ್ದವು. ಶ್ರೀ. ವಿರುಪಾಕ್ಷಪ್ಪ ಗಂಜಿ ಇವರ ಹಸ್ತದಿಂದ ಯಶಸ್ವಿಯಾಗಿ ಭಾಗವಹಿಸಿದ ಬಾಲಕ-ಬಾಲಿಕೆಯರಿಗೆ ಪಾರಿತೋಷಕಗಳನ್ನು ಹಂಚಲಾಯಿತು.

ಕೋಲ್ಹಾರ ೧೫. ಪಾನಪ್ರತಿಬಂಧ ಸಪ್ತಾಹದ ಮುಕ್ತಾಯ ಸಮಾರಂಭವು ಡಾ. ಅವಧಾನಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ಪರ್ಧೆಯಲ್ಲಿ ಮೇಲು ಬಂದ ಬಾಲಕರಿಗೆ ಪಾರಿತೋಷಕಗಳನ್ನು ಹಂಚಲಾಯಿತು.

ಹಾವನೂರ ೧. ಮಾರ್ಚ ೨೪ಕ್ಕೆ ವಾರ್ಷಿಕ ತಪಾಸಣೆಯು ನಡೆಯಿತು. ೧೯೫೦ನೆಯ ನವಂಬರ ೨೪ರಂದು ಸ್ಥಾಪಿತವಾದ ವಸ್ತ್ರ ಸ್ವಾವಲಂಬನದ ಸದಸ್ಯರು ಸಿದ್ಧಗೊಳಿಸಿದ ಬಟ್ಟೆಯನ್ನು ಮೆ। ಏ। ಓ। ಅವರು ಅವರವರಿಗೆ ಹಂಚಿದರು.

ಕುರುಬರ ಮಲ್ಲೂರ ೧. ೨೯-೩-೫೩ ರಂದು ಜರುಗಿದ ಶೈಕ್ಷಣಿಕ ಸಭೆಯ ಅಧ್ಯಕ್ಷಸ್ಥಾನವನ್ನು ಮೆ। ಏ। ಓ। ಅವರು ವಹಿಸಿದರು. ಸ್ಕೂ. ಬೋ. ಚೇರಮನ್ನರಾದ ಶ್ರೀ. ಕುಲಕರ್ಣಿ ಅವರು ಸಭೆಯ ಉದ್ಘಾಟನೆಯನ್ನು ಮಾಡಿದರು. ಶಾರೀರಿಕ ಶಿಕ್ಷಣದ ಚಟುವಟಿಕೆಗಳು, ವಿನೋದಾವಳಿ, ಪ್ರೌಢರ ಕೋಲಾಟ, ಭಜನೆ, 'ನಿರಕ್ಷರಿಗಳ ಗೋಳು' ಎಂಬ ಏಕಾಂಕ ನಾಟಕದ ಅಭಿನಯ ಮುಂತಾದ ಕಾರ್ಯಕ್ರಮಗಳು ಜರುಗಿದವು. ಶ್ರೀ. ಶಿವಯೋಗಿ ಸ್ವಾಮಿಗಳ ವಚನಗಾಯನ, ಆಭಾರಮನ್ನಣೆ ಮುಂತಾದ ಕಾರ್ಯಕ್ರಮಗಳು ಜರುಗಿದವು. ಶಾಲಾ ಕಟ್ಟಡದ ಬಗ್ಗೆ ಕೆಳಗಿನ ಮಹನೀಯರು ಹಣವನ್ನು ಕೊಟ್ಟು ಸಹಾಯ ಮಾಡಿದ್ದಾರೆ :—

(೧) ೧೫೧ ರೂ. ಶ್ರೀ. ಕರಿಯಪ್ಪ ಫಕೀರಪ್ಪ ಅಜ್ಜಣ್ಣನವರ, (೨) ೨೦೧ ರೂ. ಶ್ರೀ. ಗುರುನಾಥ ಕಾಸೀರಾವ ಕುಲಕರ್ಣಿ, (೩) ೧೫೧ ರೂ. ಶ್ರೀ. ಚನ್ನಮಲ್ಲಯ್ಯಾ ಸಿದ್ರಾಮಯ್ಯಾ ಹಿರೇಮಠ, (೪) ೧೫೧ರೂ. ಶ್ರೀ. ಬೀರಪ್ಪ ನೀಲಪ್ಪ ಕಂಬಳಿ, (೫) ೧೫೧ ರೂ. ಶ್ರೀ ದೊಡ್ಡಫಕೀರಪ್ಪ ಸಂಕಪ್ಪ ಸಣಪೂಜಾರ, (೬) ೧೫೧ ರೂ. ಶ್ರೀ. ಈರನಗೌಡ ಮೋಟನಗೌಡ ಪಾಟೀಲ, (೭) ೫೧ ರೂ. ಶ್ರೀ. ಫಕೀರಪ್ಪ ಗುಡ್ಡಪ್ಪ ಮೂಲಿಮನಿ, (೮) ೫೧ ರೂ. ಶ್ರೀ. ಫಕೀರಪ್ಪ ಬೀರಪ್ಪ ಕಂಬಳಿ, (೯) ೫೧ ರೂ. ಶ್ರೀ. ಕೆಂಚಪ್ಪ ಫಕೀರಪ್ಪ ಹುಲಗೂರ, (೧೦) ೫೧ ರೂ. ಶ್ರೀ. ದತ್ತಾತ್ರಯ ಗುರುನಾಥ ಕುಲಕರ್ಣಿ, (೧೧) ೫೧ ರೂ. ಶ್ರೀ. ಗಣೇಶ ಲಿಂಗೋ ಕುಲಕರ್ಣಿ, (೧೨) ೨೫ ರೂ. ಶ್ರೀ. ಸಣ್ಣ ಫಕೀರಪ್ಪ ಸಂಕಪ್ಪ ಸಣಪೂಜಾರ. (೧೩) ೨೫ ರೂ. ೨೫ ರೂ. ಶ್ರೀ. ಭೀಮರಾವ ಹಣಮಂತರಾವ ಹತ್ತಿಮತ್ತೂರ, (೧೪) ೨೫ ರೂ, ಶ್ರೀ ವೀರಪ್ಪ ಫಕೀರಪ್ಪ ದಂಡಿನ, (೧೫) ೧೧ ರೂ. ಶ್ರೀ. ಮಹದೇವಪ್ಪ ಕಾರಂಜಿ, (೧೬) ೧೫೧ ರೂ. ಶ್ರೀ. ಮೋಟನಗೌಡ, ಬಸನಗೌಡ ಪಾಟೀಲ ಸಾ. ಕಲ್ಮಡು, (೧೭) ೫೧ ರೂ. ಸಕ್ರಪ್ಪ ಬೀರಪ್ಪ ಕಂಬಳಿ.

೫ನೆಯ ಆವೃತ್ತಿ) **ಶೈಕ್ಷಣಿಕ ಮನೋವಿಜ್ಞಾನ** (ಪುಟ ೨೫೦

ಬರೆದವರು: **ಡಾ. ವಿ. ಕೊ. ಜವಳಿ** M. Ed. Ph. D. M.A. (ಕೋಲಂಬಿಯಾ)

ಬೆಲೆ ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಇತ್ತೀಚಿಗೆ ಹೊಸ ಹೊಸ ಸಂಶೋಧನೆಗಳು ಆಗಿವೆ. ಅವುಗಳ ಪರಿಚಯವನ್ನು ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಮಾಡಿ-ಕೊಡುವುದಕ್ಕಾಗಿ ಈ ಪುಸ್ತಕವು ಬರೆಯಲ್ಪಟ್ಟಿದೆ. ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಅವಶ್ಯವಾದ ಶೈಕ್ಷಣಿಕ ಅಭ್ಯಾಸ ಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ಶೈಲಿಯು ಎಲ್ಲರಿಗೂ ತಿಳಿಯು-ವಂತೆ ಬಹಳ ಸುಲಭವಾಗಿದೆ. ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು:

ಆಕಳವಾಡಿ ಬುಕ್ ಡಿಪೋ ಧಾರವಾಡ.

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

“ ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋದೆಯವರ “ **ವ್ಯಾವಹಾರಿಕ ಗಣಿತ** ”ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು **ಅವರ ೩೫** ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾಗಿ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವನದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿವೆ. ಇದು ಇಂಥ ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ.” ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ವ್ಹಿ. ಬೋದೆ ಫುಲಬಾಗ ೨೨೪/೮೭ ಬೆಳಗಾವಿ

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ—ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ–೧ ಇತಿಹಾಸ ಬೆಲೆ ೦-೬-೦
,, ೨ ಭೂಗೋಲ ಬೆಲೆ ೦-೬-೦
,, ೩ ಭೂಮಿತಿ-ಜಮಾಖರ್ಚು ೧-೬-೦
,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತಿರ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಶಿಕ್ಷಕ ಬಂಧುಗಳೇ ತೊಂದರೆ ಪಡುವಿರೇಕೆ ನಿಮ್ಮ ಸಲುವಾಗಿಯೇ ತಯಾರ ಮಾಡಲಾಗಿದೆ.
ಇಂದೇ ತರಿಸಿರಿ! ಮರೆಯಬೇಡಿರಿ!

ಮೆ॥ ಗ. ಜ. ಗುಂಜೀಕರ, ಎ. ಓ. ಜಿಲ್ಲಾ ಸ್ಕೂಲ್‌ಬೋರ್ಡ, ವಿಜಾಪುರ
ಮೆ॥ ಎ. ಎಚ್. ದಳವಾಯಿ, ಡೆ. ಎ. ಇ. ಜಿಲ್ಲಾ, ವಿಜಾಪುರ

ಇವರುಗಳ ಮುನ್ನಡಿ ಮತ್ತು ಪ್ರೋತ್ಸಾಹಗಳಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಮೂಲ ಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ

ಅಭ್ಯಾಸ ಪತ್ರಿಕೆಗಳು

೧ರಿಂದ ೪ನೆಯ ಇಯತ್ತೆ ಪೂರ್ಣ. ೫೦ ಪುಟಗಳದ್ದು ಬೆಲೆ ೮ ಆಣೆ.
೫ರಿಂದ ಪ್ರಾ. ಶಾ. ಪ್ರ. ಪತ್ರ ಪರೀಕ್ಷಾಪೂರ್ಣ ೧೦೨ ಪುಟಗಳುಳ್ಳದ್ದು
ಬೆಲೆ ೧೨ ಆಣೆ

ಬ. ದು. ಹಿರೇಮಠ ಮಾಸ್ತರ, ವಿಜಾಪುರ

ಹೊಸ ಪುಸ್ತಕವು! ತಯಾರಾಗಿ ಬಂದಿದೆ! ತ್ವರೆ ಮಾಡಿರಿ!

—ಕನ್ನಡ-ಕನ್ನಡ ಶಬ್ದಕೋಶ—

ಬರೆಹಗಾರರು:—H. V. ರಮಾಕಾಂತರಾವ್, B. A. (Hons)

ಬೆಲೆ:—ಆರು ರೂಪಾಯಿಗಳು ಮಾತ್ರ.

ಈ ಪುಸ್ತಕದಲ್ಲಿ ೩೫ ಸಾವಿರ ಶಬ್ದಗಳ ಸಂಗ್ರಹವು, ಒಂದುವರೆಲಕ್ಷ ಅರ್ಥ ವಿವರಣೆಯೊಳಗೂಡಿ ತಯಾರಾಗಿವೆ. ಮಂಗಳೂರಿನ ಅಂದವಾದ ಮುದ್ರಣದ ೭೭೫ ಪುಟಗಳ ಈ ಪುಸ್ತಕವು ಮೇಲ್ತರದ ಕೋಶ ಗ್ರಂಥವಾಗಿದೆ. ಇದರಷ್ಟು ದೊಡ್ಡ ಕೋಶಗ್ರಂಥವು ಇನ್ನೊಂದಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. V. P. ಯಿಂದ ಬೇಡುವವರು ೩ ಹಣವನ್ನು ಮುಂಗಡ ಕಳಿಸಬೇಕು.

ಇದಲ್ಲದೆ ನಮ್ಮಲ್ಲಿ ಶಾಲೋಪಯೋಗದ ಎಲ್ಲ ಬಗೆಯ ಪುಸ್ತಕಗಳು,
ಕಥೆಯ ಪುಸ್ತಕಗಳು, ಶಾಲೆಯ ಹಾಜರಿ ಪುಸ್ತಕಗಳು ಸಿಗುತ್ತವೆ.

ಪ್ರಕಾಶಕರು:— **ಕೇ. ಎಸ್. ಕುಲಕರ್ಣಿ ಬುಕ್‌ಡಿಪೋ**
ಸ್ಟೇಶನ್‌ರೋಡ್, ಹುಬ್ಬಳ್ಳಿ.

ಪುಟ ೨೮೦) ಮೂಲ ಶಿಕ್ಷಣ (ಬೆಲೆ: ೩-೦-೦

ಮೂಲ ಶಿಕ್ಷಣ

ಲೇಖಕರು:— **ಶ್ರೀ. ಮ. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.**
(ಪ್ರಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.
ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು
ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

Regd. No. B. 5375

ಹೊಸ ಪುಸ್ತಕಗಳು ! **ಹೊಸ ಅಭ್ಯಾಸ ಪತ್ರಿಕೆಯಂತೆ !!**

ಸರಕಾರದವರು ೧೯೫೨-೧೯೫೩ನೆಯ ಸಾಲಿನಿಂದ ಪಠ್ಯ(TEXT)ಪುಸ್ತಕಗಳೆಂದು ಮಂಜೂರು ಮಾಡಿದ್ದಾರೆ.

ಗಣಿತ ಬೋಧೆ

(೪ ರಿಂದ ೭ನೆಯ ಇಯತ್ತೆಯ ವರೆಗೆ ಬೇರೆ ಬೇರೆಯಾಗಿ)

ತಜ್ಞ ಹಾಗು ಅನುಭವಿಕ ಪಂಡಿತರಿಂದ ಈಗಿನ ಹೊಸ ಅಭ್ಯಾಸ ಪತ್ರಿಕೆಗನುಸರಿಸಿ ಈ ಎಲ್ಲ ಪುಸ್ತಕಗಳು ಆಯಾ ತರಗತಿಗಳಿಗೆ ಬರೆಯಲ್ಪಟ್ಟಿವೆ ಹಾಗು ಗಣಿತದ ಎಲ್ಲ ವಿಷಯಗಳ ವಿವೇಚನೆಯು ಸರಿಯಾಗಿ ಮಾಡಲ್ಪಟ್ಟಿವೆ

ಈ ವರೆಗೂ ಯಾವ ಗಣಿತಗಳಲ್ಲಿಯೂ ಸ್ಪಷ್ಟವಾಗಿ ವಿವೇಚಿಸಲ್ಪಡದ ಹಾಗು ಬಾಲಕರಿಗೆ ಕಠಿಣವೆನಿಸುವ **ಅಪೂರ್ಣಾಂಕ, ಸಮ-ವ್ಯಸ್ತ ತ್ರೈರಾಶಿಕ, ಪ್ರಮಾಣ ಭಾಗ, ದಶಾಂಶ ಅಪೂರ್ಣಾಂಕ, ಶತಮಾನ, ಮುರು-ಕೊಳ್ಳುವ ಬಡ್ಡಿ, ರೋಖು-ಉದ್ರಿ ವ್ಯವಹಾರ, ರೋಖುತಾಳೆ, ಕ್ಷೇತ್ರಫಲ, ಘನಫಲದ ನಿಯಮಗಳು, ವೇಳೆ-ಕೆಲಸ-ವೇಗ, ಭೂಮಿತಿ, ರೇಖಾರೂಪ (ಗ್ರಾಫ), ಪ್ರವಾಸದ ನಕ್ಷೆ,ಭೂಮಾಪನದ ವಿಷಯ, ಬೀಜಗಣಿತ ಇವೇ** ಮೊದಲಾದ ವಿಷಯಗಳ ವಿವರಣೆಯು ಆಯಾ ಗಣಿತ ಬೋಧೆಗಳಲ್ಲಿ ಚಿತ್ರ ಉಪಕರಣಗಳೊಂದಿಗೆ **ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ ಸುಲಭವಾಗಿ** ಮನನವಾಗುವಂತೆ ವಿವರಿಸಲಾಗಿದೆ. ಇದರೊಳಗಿನ ಉದಾಹರಣೆಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಗಣಿತ ವಿಷಯದಲ್ಲಿ ಅಭಿರುಚಿಯನ್ನು ಹುಟ್ಟಿಸುವಂಥವೂ ಇದ್ದು ಸುಲಭವಾದ ಶೈಲಿಯಲ್ಲಿ ಕೊಡಲ್ಪಟ್ಟಿವೆ.

ಕರ್ನಾಟಕ ಕಾಲೇಜದ ನಿವೃತ್ತ ಗಣಿತ ಪ್ರಾಧ್ಯಾಪಕರಾದ ಶ್ರೀಮಾನ್ **ಬಿ. ಬಿ. ಬಾಗಿಯವರೂ** ಶಿಕ್ಷಣದಲ್ಲಿ ನುರಿತ ಹಾಗೂ ಮುಂಬೈ ಮೇಲ್ಮನೆಯ ಸದಸ್ಯರಾದ ಶ್ರೀಮಾನ್ ಎಚ್. ಎಫ್. ಕಟ್ಟೀಮನಿ**ಯವರೂ** ಇವುಗಳನ್ನು ಓದಿ "ಇವುಗಳಲ್ಲಿ ಪ್ರತಿಯೊಂದು ಪ್ರಮೇಯದ ವಿವರಣೆಯನ್ನು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಮನದಟ್ಟಾಗುವ ರೀತಿಯಲ್ಲಿ ಕ್ರಮಬದ್ಧವಾಗಿಯೂ ತರ್ಕಶುದ್ಧವಾಗಿಯೂ ಮಾಡಲಾಗಿದೆ. ಮತ್ತು ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನೂ ಕುದುರಿಸುವ ಉದ್ದೇಶದಿಂದ ವೈವಿಧ್ಯಪೂರ್ಣವೂ ನಿತ್ಯ ಜೀವನಕ್ಕೆ ಸಂಬಂಧಿಸಿದವೂ ಆದ ಉದಾಹರಣೆಗಳನ್ನೇ ಕೊಟ್ಟಿದೆ" ಎಂದು ಅಭಿಪ್ರಾಯಪಟ್ಟಿರುವರು.

ಸ್ಕಾಲರಶಿಪ್ ಪರೀಕ್ಷೆಗೆ ಕೂಡ್ರುವ ಬಾಲಕರಿಗೂ ಹಾಯಸ್ಕೂಲ ಹಾಗು ಕನ್ನಡ ಟ್ರೇನಿಂಗ ಕಾಲೇಜು, S.S.C. ಪರೀಕ್ಷೆಗಳ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಉಪಯುಕ್ತವಾಗಿದ್ದು ಒಮ್ಮೆಯಾದರೂ ತರಿಸಿ ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುವೆವು.

ಕನ್ನಡ ಸಾಹಿತ್ಯ ಪ್ರಕಾಶನ,
ಧಾರವಾಡ

Printed by M. A. Kamat, B. Sc. at Jai Hind Art Press, Bank Road, Dharwar. Edited and **Published** by M. G. Handral, B. M. Shintri, S. R Tatti, & Smti. P. A. Bhaskar Jointly **at the** Kannada Prathamik Shikshan Office, Govt. Training College for Men, Dharwar.

78

1954-55

ಸ್ಥಾಪನೆ : ೧೮೬೩

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು
ಶತಮಾನೋತ್ತರ ಬೆಳ್ಳಿ ಹಬ್ಬದ
ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೮೯ ರಿಂದ)
ವರ್ಷ 1954

ಡೆ. ಚೆನ್ನಬಸಪ್ಪನವರು
(೧೮೩೩-೧೮೮೧)
ನೆಯ ಸಂಪುಟ

ಕನ್ನಡ
ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ
ಡೆಪ್ಯೂಟಿ ಚೆನ್ನಬಸಪ್ಪ ವೃತ್ತ. ರೊಡ್ಡರಸ್ತೆ. ಧಾರವಾಡ - ೧

ಲೇಖಗಳು

ತಿಂಗಳು	ಲೇಖ	ಪುಟ
ಜೂನ ೧೯೫೪	ಶ್ರೀ ದಿವಾಕರ ರಂಗರಾಯರು	೫-೭
	[illegible]	೧೧-೧೩
ಜುಲೈ ೧೯೫೪	[illegible]	೭-೯
ಆಗಸ್ಟ	ಶ್ರೀ ಸಿಂಪಿ ಲಿಂಗಣ್ಣ	೮-೧೦
	[illegible] ಕಾಲೇಜ (... [illegible])	೧೫-೧೭
	ಶ್ರೀ ಎಸ್. ಎಸ್. ಬಸವನಾಳ	೧೮-೧೯
ಸೆಪ್ಟೆಂಬರ ೧೯೫೪	[illegible] ಕಾಲೇಜ	೫-೭
ಅಕ್ಟೋಬರ ೧೯೫೪	[illegible]	೮-೯
ನವಂಬರ ೧೯೫೪	[illegible] ಕಾಲೇಜ	೫-೭
	ಶ್ರೀ [illegible]	೧೬-೧೮
	ಗಾಂಧಿ ಜಯಂತಿ ೧೯೫೪ ([illegible])	೨೭
ಡಿಸೆಂಬರ ೧೯೫೪	[illegible] ಲೇಖಾಂಕ (೧)	೫-೬
	[illegible]	೯-೧೩
ಜನವರಿ ೧೯೫೫	[illegible] ಲೇಖಾಂಕ (೨)	೫-೮

ಲೇಖಗಳು

ತಿಂಗಳು	ಲೇಖ	ಪುಟ
ಫೆಬ್ರುವರಿ ೧೯೫೭	ಅಂತರ್ಯ ಹೆಮ್ಮಾರಿ ಬಸ್ತ್ರಬಸ್ಪಿಸಬೇಕು	೧೪-೧೮
ಮಾರ್ಚ ೧೯೫೭	ಶ್ರೀ ಹರೆಕೃಷ್ಣ ಮಹತಾಬರವರು	೫-೭
	ಹಳ್ಳಿಗಾಡಿನಲ್ಲಿರುವ ನಮ್ಮ ಶಾಲೆಗಳು ಪಠ್ಯೇತರವಾಗಿ ಜಾನಪದಗಳ ಕಲಿಕೆ ಲೇಖನಾಂಕ-(೩)	೧೯-೨೨
ಏಪ್ರಿಲ ೧೯೫೭	" ಲೇಖನಾಂಕ-(೪)	೫-೯
ಮೇ ೧೯೫೭	" ಲೇಖನಾಂಕ-(೫)	೫-೮
ಜುಲೈ ೧೯೫೮	ಕೌಟಿಲ್ಯ ಅರ್ಥಶಾಸ್ತ್ರ (ಆಡಳಿತದ ಗದ್ಯಗಳ ಸಂಗ್ರಹ)	೨೩
ನವಂಬರ ೧೯೫೮	ಗಾಂಧೀ ಜಯಂತಿ-೧೯೫೮ ಶ್ರೀ ಬಿ.ಎಂ. ಶ್ರೀಕಂಠಯ್ಯನವರ ಭಾಷಣ ಸಿ.ಎಸ್. ಸಂಸ್ಥೆಯ ಸರಕಾರಿ ಶಾಲೆಯ ಕಾರ್ಯಕ್ರಮದಲ್ಲಿ	೨೭

ಕನ್ನಡ
[illegible]

18/6/54

ಪ್ರಧಾನ ಸಂಪಾದಕರು: ಶ್ರೀ. ಎಸ್. ಪಿ. ಪಾಟೀಲ

ಜೂನ ೧೯೫೪

ಬಿಡಿ ಪ್ರತಿ ೬ ಆಣೆ

ವಾರ್ಷಿಕ ಚಂದಾ ೪ ರೂ.

ನುಕ್ಲರಿಗರೊಡನೆ
ಮಾತನಾಡುತ್ತಿರುವ
ಮಾನ್ಯ ದಿವಾಕರರು

ಕನ್ನಡ ಪ್ರಾಥಮಿಕ ಶಿಕ್ಷಣ

18/6/54

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವರ, ಬಿ. ಎಸ್‌ಸಿ., (ಆನರ್ಸ) ಬಿ. ಟಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹ ಸಂಪಾದಕರು:

ಶ್ರೀ. ಶಕುಂತಲಾಬಾಯಿ ಚನ್ನಪಟ್ಟಣ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಆಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೪	ಜೂನ ೧೯೫೪	ಸಂಚಿಕೆ ೧

ಪರಿವಿಡಿ

೧. ಸಂಪಾದಕೀಯ ೩

೨. ಶ್ರೀ. ದಿವಾಕರ ರಂಗರಾಯರು ....ಶ್ರೀ. ಶಿಂತ್ರಿ ಬಸಪ್ಪನವರು ೫

೩. ವಿದ್ಯಾರ್ಥಿಗಳಿಗೆ ವಿಚಾರಮಾಡುವ ರೀತಿಯ ಶಿಕ್ಷಣ ....ಶ್ರೀ. ತಟ್ಟಿ ಶ್ಯಾಮರಾಯರು ೮

೪. ಭೂಗೋಲದಲ್ಲಿ ಮಾರ್ಪಾಟಾದ ಹಲವು ಹೆಸರುಗಳು ...ಶ್ರೀ. ಶಿಂತ್ರಿ ಬಸಪ್ಪನವರು ೧೧

೫. ಅನುಕರಣವು ವಿಕಾಸಕ್ಕೆ ಪೋಷಕವೂ ಪ್ರತಿಬಂಧಕವೂ ಆಗಿದೆ....ಶ್ರೀ. ಎಂ. ಕೆ. ಮಣ್ಣೂರೆ ೧೨

೬. ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿ ವರ್ಗ, ಧಾರವಾಡ (ವರದಿ)
....ಶ್ರೀ. ಕೆ. ಎಸ್. ಕುಲ್ಕರ್ಣಿ, ಸಂಚಾಲಕರು ೧೪

೭. ಚಟುವಟಿಕೆಗಳ ವಿಹಂಗಮ ನೋಟ ....ಕು. ಲೀಲಾ ಹೊಟ್ಟಿ ೧೭

೮. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೩

೯. ಕ್ರೀಡಾವೃತ್ತಿ ....ಶ್ರೀ. ಶಿವಕುಮಾರ ೨೫

೧೦. ಶಿಕ್ಷಕನೂ-ಏಕಾಗ್ರತೆಯೂ ....ಶ್ರೀ. ಗುರುಲಿಂಗ ಕಾಪಸೆ ೨೭

ಸ್ಕೂಲ್‌ಬುಕ್ ಕಮೀಟಿಯಿಂದ ಮಂಜೂರಾದ ಪುಸ್ತಕಗಳು ೨೨

ಮುಖಪೃಷ್ಠದ ಪಡಿಯಚ್ಚು:—'ಕರ್ಮವೀರ'ದ ಕೃಪೆಯಿಂದ

ಹೊರಬಿದ್ದಿದೆ ! **ಬೆಳಕು ಕಂಡಿದೆ !!**

೩ನೆಯ ಆವೃತ್ತಿ

ಶೈಕ್ಷಣಿಕ ಮನೋವಿಜ್ಞಾನ

ಪುಟ ೩೦೦

ಬರೆದವರು : **ಡಾ। ವಿ. ಕೊ. ಜವಳಿ,** M. Ed. Ph. D. M. A. (ಕೋಲಂಬಿಯಾ)

ಬೆಲೆ ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ

ಪುಟ ೨೮೦

ಮೂಲ ಶಿಕ್ಷಣ

ಬೆಲೆ: ೩-೦-೦

ಲೇಖಕರು : **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆದರ್ಸ) ಬಿ. ಟಿ.

(ಪ್ರಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ

ಆಕಳವಾಡಿ ಬುಕ್ ಡಿಪೋ, ಧಾರವಾಡ.



ಸಂಪಾದಕೀಯ

ಹೊಸ ವರುಷ :

ಕನ್ನಡ ಪ್ರಾಥಮಿಕ ಶಿಕ್ಷಣಕ್ಕೆ ೯೩ ವರುಷಗಳು ತುಂಬಿದವು. ಇದು ಈ ಸಂಚಿಕೆಯಿಂದ ೯೪ ನೆಯ ವರುಷದಲ್ಲಿ ಹೆಜ್ಜೆಯನ್ನಿಕ್ಕಿದೆ. ಈ ಸುದೀರ್ಘ ಕಾಲಾವಧಿಯಲ್ಲಿ ಇದು ಅನೇಕ ಎಡರು-ತೊಡರುಗಳನ್ನು ದಾಟಿದೆ, ಹಿಗ್ಗು-ಕುಗ್ಗುಗಳನ್ನು ಅನುಭವಿಸಿದೆ, ಕನ್ನಡ ನಾಡಿನ ಪ್ರಾಥಮಿಕ ಶಿಕ್ಷಣದ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಆದರೆ ಇದು ಎಂತಹ ಸಂಕಟ್ಟ ಸಮಯಕ್ಕೂ ಹೆದರದೆ ಕನ್ನಡನಾಡಿನ ಪ್ರಾಥಮಿಕ ಶಿಕ್ಷಣ ಪ್ರಪಂಚಕ್ಕೂ ತನ್ಮೂಲಕ ಕನ್ನಡ ಸಾಹಿತ್ಯಕ್ಕೂ ಪತ್ರಿಕಾ ಪ್ರಪಂಚಕ್ಕೂ ಸೇವೆಯನ್ನು ಸಲ್ಲಿಸಿದೆ. ಇದರ ಈ ಸೇವೆಯೇ ಇದರ ಬಾಳ್ಕೆಗೆ ಸಂಜೀವಿನಿ. ಇದನ್ನು ಅಕ್ಕರೆಯಿಂದ ಮುಂಬಯಿ ಸರಕಾರವೂ ಜಿಲ್ಲಾ ಸ್ಕೂಲ್ ಬೋರ್ಡುಗಳೂ, ಮುನಸಿಪಲ್ ಸ್ಕೂಲ್ ಬೋರ್ಡುಗಳೂ ಪ್ರಾಥಮಿಕ ಶಿಕ್ಷಕರೂ ಶಿಕ್ಷಣ ಪ್ರೇಮಿಗಳೂ ಪೋಷಿಸುತ್ತ ಬಂದಿದ್ದಾರೆ. ಇವರೆಲ್ಲರ ಪೋಷಣೆಯಿಂದ ದಿನದಿನಕ್ಕೆ ಈ ಪತ್ರಿಕೆಯು ಹೆಚ್ಚು-ಹೆಚ್ಚಾಗಿ ಜ್ಞಾನ ವೃದ್ಧಿದಾಸಿಯಾಗುತ್ತ ಮುನ್ನಡೆದಿದೆ. ಈ ಹೊಸ ವರುಷದ ದಿನದಂದು ಇದು ತನ್ನ ಪೋಷಕ ವರ್ಗಕ್ಕೂ, ಶಿಕ್ಷಣ ಪ್ರೇಮಿಗಳಿಗೂ ತನ್ನ ಕೃತಜ್ಞತೆಯನ್ನು ಹೃತ್ಪೂರ್ವಕವಾಗಿ ಸಲ್ಲಿಸಿ, ಇನ್ನು ಮುಂದೆಯೂ ತನ್ನನ್ನು ಅಭ್ಯುತತ್ವದ ಕಡೆಗೆ ಒಯ್ಯಬೇಕೆಂದು ಬಯಸುತ್ತದೆ. ಇದರ ಈ ಬೇಡಿಕೆಯನ್ನು ಸರ್ವರೂ ಮನ್ನಿಸಿ ಇದರಿಂದ ಇನ್ನೂ ಅಧಿಕವಾಗಿ ಸೇವೆಯನ್ನು ತೆಗೆದುಕೊಳ್ಳಬೇಕೆಂದೂ ಅಪೇಕ್ಷಿಸುತ್ತದೆ. ಇದರ ಈ ಅಪೇಕ್ಷೆಯನ್ನು ಇದರ ಹಿತೇಚ್ಛುಗಳೆಲ್ಲರೂ—ವಿಶೇಷವಾಗಿ ಕನ್ನಡನಾಡಿನ ಸ್ಕೂಲ್ ಬೋರ್ಡುಗಳೆಲ್ಲವೂ— ಈಡೇರಿಸುವರೆಂದು ಕನ್ನಡ ಪ್ರಾಥಮಿಕ ಶಿಕ್ಷಣದ ಸಂಪಾದಕ ಮಂಡಲವು ನೆರೆ ನಂಬಿದೆ.

ಮುನ್ನಡೆಯ ವಿಚಾರ :

ಸಂಪಾದಕ ಮಂಳವು ೧೯೫೮-೫೯ ರಲ್ಲಿ 'ಪ್ರಾಥಮಿಕ ಶಿಕ್ಷಣ'ದ ಅಂದಚಂದವನ್ನು ಹೆಚ್ಚಿಸುವುದಲ್ಲದೆ ಪುಟಗಳ ಸಂಖ್ಯೆಯನ್ನೂ ಹೆಚ್ಚಿಸುವ ಮತ್ತು ಹೊರಗಿನಿಂದ ಬಂದ ಯೋಗ್ಯ ಲೇಖನಗಳಿಗೆ ಪ್ರತಿಫಲವನ್ನು ಸ್ವಲ್ಪಾದರೂ ಸರಿಯೇ, ಕೊಡುವ ವಿಚಾರ ಮಾಡಲಾಗಿದೆ. ಆದುದರಿಂದ ಪ್ರಾಥಮಿಕ ಶಿಕ್ಷಕರೂ ಪ್ರಾಥಮಿಕ ಶಿಕ್ಷಣದ ಮೇಲ್ವಿಚಾರಕ ಅಧಿಕಾರಿಗಳೂ ಇತ್ತ ಗಮನಕೊಟ್ಟು 'ಪ್ರಾಥಮಿಕ ಶಿಕ್ಷಣ'ಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಲೇಖನಗಳನ್ನು ಕಳುಹಿಸಬೇಕಾಗಿ ಬಿನ್ನಹ. ಲೇಖನಗಳು ಸ್ವೀಕೃತ ಮತ್ತು ಅಸ್ವೀಕೃತ ಮಾಡುವ ಅಧಿಕಾರವು ಸಂಪಾದಕ ಮಂಡಳಕ್ಕೆ ಇರುತ್ತದೆ, ಅಲ್ಲದೆ ಪ್ರತಿಫಲದ ನಿರ್ಣಯ ಮಾಡುವ ಅಧಿಕಾರವೂ ಅದಕ್ಕೇ ಇದೆಯೆಂದು ಈ ಮೂಲಕ ತಿಳಿಸಲಪೇಕ್ಷಿಸುತ್ತೇವೆ. ಲೇಖಕರಿಗೆ ಪ್ರತಿಫಲವನ್ನು ಕೊಡುವದು ಪ್ರಾಥಮಿಕ ಶಿಕ್ಷಣದ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿದೆ ಎಂದು ನಾವು ಇಲ್ಲಿ ಹೇಳದಿರಲಾರೆವು. ಆದ್ದರಿಂದ ಶಿಕ್ಷಣ ಪ್ರೇಮಿಗಳೆಲ್ಲರೂ ಇದಕ್ಕೆ ಚಂದಾದಾರರಾಗಿ ಇದರ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸುವ ಕಾರ್ಯಕ್ಕೂ ನೆರವಾಗಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

ಎರಡನೆಯದಾಗಿ 'ಪ್ರಾಥಮಿಕ ಶಿಕ್ಷಣ'ದ ಸಂಪಾದಕ ಮಂಡಳವು ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತವಾಗುವ ಶೈಕ್ಷಣಿಕ ಗ್ರಂಥಗಳನ್ನೂ ಪ್ರಕಟಿಸುವ ವಿಚಾರವನ್ನು ಮಾಡುತ್ತಲಿದೆ ಮತ್ತು ಸರಕಾರದ

ಕೂಡ ಈ ಬಗ್ಗೆ ಪತ್ರವ್ಯವಹಾರ ಮಾಡಿ ಪರವಾನಿಗೆಯನ್ನು ತೆಗೆದುಕೊಳ್ಳುವ ವಿಚಾರವನ್ನು ಮಾಡುತ್ತಲಿದೆಂಬುದನ್ನು ತಿಳಿಸಲು ನಮಗೆ ಆನಂದವೆನಿಸುತ್ತದೆ. ಈ ಪ್ರಕಾರವಾಗಿ ಸಂಪಾದಕ ಮಂಡಳವು 'ಕನ್ನಡ ಪ್ರಾಥಮಿಕ ಶಿಕ್ಷಣ' ಸಂಸ್ಥೆಯ ಪರವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆಯನ್ನು ಇಡುವ ವಿಚಾರ ಮಾಡಿದೆ. ಈ ವಿಚಾರವನ್ನು ಕಾರ್ಯರೂಪಕ್ಕೆ ಇಳಿಸುವ ಕಾರ್ಯದಲ್ಲಿ ನಮ್ಮ ನಾಡಿನ ಶಿಕ್ಷಣ ಪ್ರೇಮಿಗಳು ನೆರವಾಗಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

ಜಾಹೀರಾತುದಾರರಲ್ಲಿ ಅರಿಕೆ :

ಹೊಸ ವರುಷದಲ್ಲಿ ಪ್ರಾಥಮಿಕ ಶಿಕ್ಷಣವು ಹೆಚ್ಚಾಗಿ ಸುಂದರವಾಗಿ ಮುನ್ನಡೆಯ ಬೇಕಾದರೆ ಜಾಹಿರಾತುಗಳೂ ಇದಕ್ಕೆ ಅವಶ್ಯ ಎಂಬುದನ್ನು ಹೇಳುವದು ಅಗತ್ಯವೆನಿಸುವದಿಲ್ಲ. ಆದುದರಿಂದ ನಮ್ಮ ಈಗಿರುವ ಜಾಹಿರಾತುದಾರರು ತಮ್ಮ ಜಾಹಿರಾತುಗಳನ್ನು ಮುಂದುವರಿಸುವರೆಂದು ನಂಬಿದ್ದೇವೆ. ಕನ್ನಡನಾಡಿನ ಇತರ ಪುಸ್ತಕಗಳ—ಸರಕಾರದ ಧೋರಣೆಗೆ ವಿರುದ್ಧನಾಗಿರದ ಪುಸ್ತಕಗಳ—ಜಾಹಿರಾತನ್ನು ಕೊಟ್ಟು ನಮ್ಮಿಂದ ಶಿಕ್ಷಣದ ಸೇವೆಯನ್ನು ತೆಗೆದುಕೊಳ್ಳಬೇಕಾಗಿ ನಾವು ಜಾಹಿರಾತುದಾರರಲ್ಲಿ ಅರಿಕೆ ಮಾಡಿಕೊಳ್ಳುತ್ತೇವೆ. ಈ ವರೆಗೆ ನಮಗೆ ಜಾಹಿರಾತುಗಳನ್ನು ಕೊಟ್ಟ ಜಾಹಿರಾತುದಾರರಿಗೆ ಅಭಿನಂದನೆಗಳನ್ನೂ, ಕೃತಜ್ಞತೆಯನ್ನೂ ಸಲ್ಲಿಸುತ್ತೇವೆ.

ಹೊಸ ಅಭ್ಯಾಸಪತ್ರಿಕೆ :

ಹೋದ ವರುಷದ ನಮ್ಮ ಪತ್ರಿಕೆಯ ಸಂಚಿಕೆಗಳಲ್ಲಿ ಹೊಸ ಅಭ್ಯಾಸಪತ್ರಿಕೆಯು ಪ್ರಕಟವಾಗಿದೆ. ಅದನ್ನು ಮುಂಬಯಿ ಸರಕಾರದ ವಿದ್ಯಾಖಾತೆಯು ಶಿಕ್ಷಣದಲ್ಲಿ ಸುಧಾರಣೆಯ ದೃಷ್ಟಿಯಿಂದ ಯೋಜಿಸಲಾಗಿದೆ. ಅದನ್ನು ಪ್ರಾಥಮಿಕ ಶಿಕ್ಷಕರು ಚೆನ್ನಾಗಿ ಅಭ್ಯಾಸಿಸಿ ಅದರಂತೆ ಭಾವೀನಾಗರಿಕರಾಗುವ ಮಕ್ಕಳಿಗೆ ಅಭ್ಯಾಸವನ್ನು ಮಾಡಿಸಿ ನಾಡಿನ ಏಳ್ಗೆಗೆ ಶ್ರೇಯೋಭಾಗಿಗಳಾಗಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ. ನಮ್ಮ ರಾಷ್ಟ್ರದ ಸಮಗ್ರ ಏಳ್ಗೆಯ ತಳಹದಿ ಪ್ರಾಥಮಿಕ ಶಿಕ್ಷಣವೇ ಎಂದು ನಾವು ಹೇಳಬೇಕಾದ ಅಗತ್ಯವಿಲ್ಲ. ಈ ಹೊಣೆಯನ್ನರಿತು ಶಿಕ್ಷಕರು ಕಾರ್ಯಮಾಡುವರೆಂದು ನೆರೆನಂಬಿದ್ದೇವೆ.

ನಮ್ಮ ಮಾತು :

'ಪ್ರಾಥಮಿಕ ಶಿಕ್ಷಣ'ದ ಹೊಸ ವರುಷದ ಆರಂಭದಿಂದ ಅದರ ಗುರುತರವಾದ ಕಾರ್ಯದ ಹೊಣೆಯನ್ನು ನಾವು ಇದೀಗ ವಹಿಸಬೇಕಾಗಿ ಬಂದಿದೆ. ಸುಮಾರು ನಾಲ್ವಾರು ವರುಷಗಳ ನಂತರ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಪುನಃ ಕೆಲಸ ಮಾಡಲು ಬಂದಿರುವ ಈ ಪ್ರಸಂಗವನ್ನು ನಾವು ಸಂತೋಷದಿಂದಲೂ ಅಭಿಮಾನದಿಂದಲೂ ಸ್ವಾಗತಿಸುತ್ತೇವೆ.

ಕಳೆದ ೮ ತಿಂಗಳ ಶ್ರೀಮಾನ್ ಜಾಲಿಯವರು ನಮ್ಮ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಅದರ ಉಜ್ವಲವಾದ ಪರಂಪರೆಯನ್ನು ಮುಂದುವರಿಸುವಲ್ಲಿ ಒಳ್ಳೇ ದಕ್ಷತೆಯಿಂದ ಸಲ್ಲಿಸಿದ ಸೇವೆಗಾಗಿ ಅವರಿಗೆ ನಮ್ಮೆಲ್ಲರ ಹೃತ್ಪೂರ್ವಕ ಕೃತಜ್ಞತೆಗಳು. ಅವರೂ ಅವರ ಹಿಂದಿನವರೂ ಈ ಕಾರ್ಯದಲ್ಲಿ ತೋರಿಸಿದ ಮಾರ್ಗ, ಅನುಸರಿಸಿದ ರೀತಿನೀತಿಗಳನ್ನೇ ನಾವು ಸಹ ಅನುಸರಿಸುತ್ತೇವೆ. ಅವರೆಲ್ಲರೂ ತಮ್ಮ ಅವಿಶ್ರಾಂತ ದುಡಿತದಿಂದ ಈ ಪತ್ರಿಕೆಗೆ ತಂದ ಕೀರ್ತಿಗೌರವಗಳನ್ನು ನಾವೂ ಸಹ ಉಳಿಸಿ ಬೆಳೆಸುವ ಸಾಹಸ ಮಾಡಲಿಚ್ಛಿಸುತ್ತೇವೆ. ಮೇಲಾಧಿಕಾರಿಗಳ ಮಾರ್ಗದರ್ಶನ, ಸಹೋದ್ಯೋಗಿಗಳ ಸಹಕಾರ, ಶಿಕ್ಷಣಾಭಿಮಾನಿಗಳ ಸಹಾನುಭೂತಿ ಹಾಗು ಓದುಗರ ಸಹೃದಯತೆಗಳಲ್ಲಾವುದಕ್ಕೂ ಕೊರತೆ ಇಲ್ಲವೆಂಬ ಭರವಸೆಯಿಂದ ಪ್ರಧಾನ ಸಂಪಾದಕರ ಕಾರ್ಯಕ್ಕೆ ಹುರುಪಿನಿಂದ ಅಣಿಯಾಗಿದ್ದೇವೆ. ಪರಮಾತ್ಮನ ಆಶೀರ್ವಾದ ಬಲದಿಂದ ಯಶಸ್ಸೂ ನಮ್ಮದಾಗುವದು.

ಶ್ರೀ ದಿವಾಕರ ರಂಗರಾಯರು

(ಬಿಹಾರದ ಗವ್ಹರ್ನರರು)

ಲೇ: ಶ್ರೀ. ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ

ಪೀಠಿಕೆ :

ಶ್ರೀ ದಿವಾಕರರವರು ದಿನಾಂಕ ೧೬-೬-೧೯೫೨ ರಿಂದ ಬಿಹಾರದ ಗವ್ಹರ್ನರರಾಗಿದ್ದಾರೆ. 'ಗವ್ಹರ್ನರ'ದಂತಹ ಅತ್ಯುನ್ನತ ಹುದ್ದೆಯನ್ನು ಪಡೆದ ಪ್ರಪ್ರಥಮ ಕನ್ನಡಿಗರಿವರು. ಅದಕ್ಕೂ ಮೊದಲು ೧೯೪೮ ರ ನೆಯ ಇಸವಿ ಡಿಸೆಂಬರ ತಿಂಗಳಲ್ಲಿ ಅವರು ಕೇಂದ್ರಸರಕಾರದ ಸುದ್ದಿ-ಸಮಾಚಾರ ಹಾಗೂ ಬಾನುಲಿ (Information and Broadcast) ಖಾತೆಗಳ ಮಂತ್ರಿಗಳಾಗಿದ್ದರು. ಕೇಂದ್ರ ಮಂತ್ರಿ ಸ್ಥಳಕ್ಕೆ ಏರಿಸಲ್ಪಟ್ಟ ಪ್ರಪ್ರಥಮ ಕನ್ನಡಿಗರು ಅವರೇ ಆಗಿದ್ದಾರೆ. ನಮ್ಮ ಧಾರವಾಡ ಬಾನುಲಿ ಕೇಂದ್ರವು ಸ್ಥಾಪಿತವಾದದ್ದು ಅವರ ಕಾಲಾವಧಿಯಲ್ಲಿಯೇ. ಕರ್ನಾಟಕಕ್ಕೆ ಅವರಿಂದ ಸಲ್ಲಿಸಲ್ಪಟ್ಟ ಅದೊಂದು ದೊಡ್ಡ ಸೇವೆಯು. ಅದರ ಉದ್ಘಾಟನ ಸಮಾರಂಭವು ಧಾರವಾಡ ನಗರದಲ್ಲಿ ದಿನಾಂಕ ೮-೧-೧೯೫೦ ರಂದು ಅವರ ಅಮೃತ ಹಸ್ತದಿಂದ ಬಹಳೇ ಅಟ್ಟಹಾಸದಿಂದಲೂ ವೈಭವದಿಂದಲೂ ಜರುಗಿದು ದನ್ನು ಓದುಗರು ಮರೆತಿರಲಿಕ್ಕಿಲ್ಲವಷ್ಟೆ. ಧಾರವಾಡದ ಬಾನುಲಿ ಕೇಂದ್ರದ ಕೂಡ ಅವರ ಹೆಸರು ಅಜರಾಮರವಾಗಿ ಉಳಿಯುವದು. ಅಂತಹವರ ಜೀವನ ಚರಿತ್ರದ ಅಲ್ಪ ಪರಿಚಯವನ್ನಿಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಬಾಲ್ಯ ಮತ್ತು ಶಿಕ್ಷಣ :

ಅವರ ಪೂರ್ವಜರು ಮೊತ್ತಮೊದಲು ಹೈದರಾಬಾದ ಸಂಸ್ಥಾನದವರು. ಅವರು ಏಕೋ ಏನೋ ಆ ಸಂಸ್ಥಾನವನ್ನು ಬಿಟ್ಟು ಬಂದು ವಿಜಾಪುರ ಜಿಲ್ಲೆಯಲ್ಲಿಯ ಬೀಳಗಿ (ಈಗಿನ ಪೇಠಾದ ಸ್ಥಳ) ಯಲ್ಲಿ ನೆಲೆಸಿದರು. ಸುಮಾರು ಅರವತ್ತು ವರ್ಷಗಳ ಹಿಂದೆ ಶ್ರೀ ದಿವಾಕರವರ ತಂದೆಯವರಾದ ರಾಮಚಂದ್ರರಾಯರು ಧಾರವಾಡ-ಹುಬ್ಬಳ್ಳಿಗಳ ಕಡೆಗೆ ಬಂದು ಅಲ್ಲಿಯೇ ತಳವೂರಿದರು. ಅವರು ರೇಲ್ವೆಯಲ್ಲಿ ನವಕರಿಯನ್ನು ಮಾಡುತ್ತಿದ್ದರು. ಅವರ ಹೆಂಡತಿಯ ಹೆಸರು ಸೀತಾಬಾಯಿಯವರು. ಆ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳೂ ನಾಲ್ವರು ಗಂಡು ಮಕ್ಕಳೂ ಇದ್ದರು. ಆ ನಾಲ್ಕುಜನ ಗಂಡು ಮಕ್ಕಳಲ್ಲಿ ಎರಡನೆಯವರಾದ ರಂಗನಾಥರವರು ನಮ್ಮ ಚರಿತ್ರನಾಯಕರು. ಅವರು ದಿನಾಂಕ ೩೦-೯-೧೮೯೪ ರಂದು ಧಾರವಾಡದಲ್ಲಿ ಜನಿಸಿದರು ಅವರು ಪ್ರಾಥಮಿಕ ಶಿಕ್ಷಣವನ್ನು ಹೊಂದಿದುದು ಗೆಳಗಾವಿಯ ಕನ್ನಡ ಶಾಲೆಯೊಂದರಲ್ಲಿ. ಮಾಧ್ಯಮಿಕ ಶಿಕ್ಷಣಕ್ಕಾಗಿ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹಾಯಸ್ಕೂಲವನ್ನು ಸೇರಿ ಆ ಶಾಲೆಯಿಂದಲೇ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಪುಣೆ ಪಟ್ಟಣದಲ್ಲಿಯ ಫರ್ಗ್ಯುಸನ್ ಕಾಲೇಜವಲ್ಲಿ ಉಚ್ಚಶಿಕ್ಷಣದ ಅಭ್ಯಾಸವನ್ನು ಕೈಕೊಂಡು ೧೯೧೬ ರಲ್ಲಿ ಬಿ. ಎ. ಪರೀಕ್ಷೆಯಲ್ಲಿಯೂ ೧೯೧೮ ರಲ್ಲಿ ಎಮ್. ಎ. ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿದರು.

ಅಷ್ಟಕ್ಕೆ ಅವರ ವಿದ್ಯಾರ್ಜನೆಯ ಹಸಿವು ಹಿಂಗಲಿಲ್ಲ. ಕಾಯಿದೆಗಳ ಅಭ್ಯಾಸವನ್ನು ಮುಂದೆ ಬಿಟ್ಟೂ ಬಿಡದೆ ಎರಡು ವರ್ಷಗಳ ವರೆಗೆ ಮಾಡಿ ೧೯೨೦ ರಲ್ಲಿ ಎಲ್. ಎಲ್. ಬಿ. ಪರೀಕ್ಷೆಯನ್ನು ಪಾಸಾದರು. ಅವರ ಪ್ರೀತಿಯ ವಿಷಯಗಳೆಂದರೆ ಕನ್ನಡ, ಇಂಗ್ಲೀಷ ಮತ್ತು ಸಂಸ್ಕೃತ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇವೆ :

೧೯೧೬ ರಿಂದ ೧೯೨೦ರ ವರೆಗೆ ಅವರು ಕೆಲಕಾಲ ಧಾರವಾಡದಲ್ಲಿಯ ವಿಕ್ಟೋರಿಯಾ (ಈಗಿನ ವಿದ್ಯಾರಣ್ಯ) ಹಾಯಸ್ಕೂಲದಲ್ಲಿ ಶಿಕ್ಷಕರಾಗಿಯೂ ಕೆಲಕಾಲ ಕೊಲ್ಹಾಪುರದ ರಾಜಾರಾಮ ಕಾಲೇಜದಲ್ಲಿ ಹಾಗೂ ಧಾರವಾಡದ ಕೆ. ಈ. ಸೊಸಾಯಟಿ (Karnatak Education Society) ಯ ಕಾಲೇಜದಲ್ಲಿ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು. ಆ ನಾಲ್ಕಾರು ವರ್ಷಗಳ ಅವಧಿಯಲ್ಲಿ ಅವರು ಕನ್ನಡ, ಇಂಗ್ಲೀಷ ಮತ್ತು ಸಂಸ್ಕೃತ ಭಾಷೆಗಳಲ್ಲಿ ತಮ್ಮ ಸ್ವಂತ ಪರಿಶ್ರಮದಿಂದ ಹೆಚ್ಚಿನ ಪ್ರಾವೀಣ್ಯತೆಯನ್ನು ಸಂಪಾದಿಸಿದರು. ಅಷ್ಟರೊಳಗೆ ಮಹಾತ್ಮಾಜಿಯವರು ದೇಶದ ತುಂಬೆಲ್ಲ ಅಸಹಕಾರ ಚಳವಳಿಯನ್ನು ಊದಿದ್ದರು. ಆ ಚಳವಳಿಯ ಪರಿಣಾಮವು ಶ್ರೀ ದಿವಾಕರವರ ಮನಸಿನ ಮೇಲಾದದ್ದು ಅಷ್ಟಿಷ್ಟಲ್ಲ. ೧೯೨೧ ರಲ್ಲಿ ಅವರು ಒಮ್ಮೆ ಅಚಲ ಧೈರ್ಯದಿಂದ ಆ ಚಳವಳಿಯಲ್ಲಿ ಧುಮುಕಿದವರು ಸ್ವಾತಂತ್ರ್ಯ ಪ್ರಾಪ್ತಿಯ ವರೆಗೆ ಅದರಲ್ಲಿಯೇ ನಿರತರಾದರು. ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಅವರೊಬ್ಬ ನಿಷ್ಠಾವಂತ ಸೈನಿಕನಂತೆ ಕೆಲಸ ಮಾಡಿದರು. ಆ ಇಪ್ಪತ್ತಾರು ವರುಷಗಳ ದೀರ್ಘಾವಧಿಯ ಹೋರಾಟದಲ್ಲಿ ಪ್ರತಿಯೊಂದು ಚಳವಳಿಯಲ್ಲಿ ಭಾಗವಹಿಸಿ ಎಷ್ಟೋ ಸಲ ಸೆರೆಮನೆಯನ್ನು ಕಂಡು ಬಂದರು. ಅವರು ಅನುಭೋಗಿಸಿದ ಕಾರಾಗೃಹವಾಸವು ಒಟ್ಟು ಏಳು ವರುಷ ಹತ್ತು ತಿಂಗಳು. ಕಾರಾವಾಸದಲ್ಲಿ ತಾವು ಪಡೆದ ಕಟು ಅನುಭವವನ್ನೂ ಅಲ್ಲಿ ಪಾಲಿಸಬೇಕಾದ ಕಠೋರ ಶಿಸ್ತನ್ನೂ ತಾವೇ ಬರೆದ "ಸೆರೆಯ ಮರೆಯಲ್ಲಿ" ಎಂಬ ಹೊತ್ತಿಗೆಯಲ್ಲಿ ಬಹು ಅಂದಚಂದವಾಗಿ ಬಣ್ಣಿಸಿದ್ದಾರೆ. ೧೯೩೦ನೆಯ ಇಸವಿಯ ವರೆಗೆ ಅವರು ಕೆ. ಪಿ. ಸಿ. ಸಿ. (Karnatak Pradesh Congress Committee) ಯ ಕಾರ್ಯದರ್ಶಿಗಳಾಗಿದ್ದರು ಹಾಗೂ ೧೯೩೦ರಿಂದ ೧೯೩೪ರ ವರೆಗೆ ಅದರ ಅಧ್ಯಕ್ಷರಾಗಿದ್ದರು. ಉತ್ತರ ಕನ್ನಡ ಜಿಲ್ಹೆಯೊಳಗಿನ ಅಂಕೋಲಾ, ಶಿರಸಿ ಮತ್ತು ಸಿದ್ದಾಪುರ ತಾಲೂಕುಗಳಲ್ಲಿ ಕರನಿರಾಕರಣೆಯ ಚಳವಳಿ (No-tax Campaign) ಯನ್ನು ಪ್ರಾರಂಭಿಸಿ ಅದರಲ್ಲಿ ಯಶಸ್ಸನ್ನು ಸಂಪಾದಿಸಿದರು. ೧೯೪೨ರಲ್ಲಿ ಪ್ರಾರಂಭವಾದ "ಹಿಂದುಸ್ಥಾನವನ್ನು ಬಿಟ್ಟು ತೊಲಗಿರಿ" (Quit India) ಎಂಬ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಎರಡು ವರುಷಗಳ ಕಾಲ ಭೂಗತ (underground) ರಾಗಿಯೇ ಇದ್ದುಕೊಂಡು ಕೆಲಸ ಸಾಗಿಸಿದರು.

ಸಾಹಿತ್ಯದಲ್ಲಿಯ ಸೇವೆ

೧೯೨೧ರಲ್ಲಿ "ಕರ್ಮವೀರ" ಎಂಬ ಹೆಸರಿನ ಕನ್ನಡ ವಾರಪತ್ರಿಕೆಯನ್ನು ಹೊರಡಿಸಿದರು. ೧೯೩೩ ರಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ವಿಶ್ವಸ್ಥ ಸಂಸ್ಥೆ (National Literature Publication Trust) ಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿ ಆಗ ಬೆಳಗಾವಿಯಲ್ಲಿ ಹೊರಡುತ್ತಿದ್ದ "ಸಂಯುಕ್ತ ಕರ್ನಾಟಕ" ಎಂಬ ದಿನಪತ್ರಿಕೆಯನ್ನು ತಮ್ಮಲ್ಲಿಗೆ ವರ್ಗಾಯಿಸಿಕೊಂಡು ಎರಡೂ ಪತ್ರಿಕೆಗಳು ಆ ಸಂಸ್ಥೆಯ ಮುಖಾಂತರ ಹೊರಡುವಂತೆ ವ್ಯವಸ್ಥೆಯನ್ನು ಮಾಡಿದರು; ಈಗಲೂ ಅವು ಹೊರಡುತ್ತಲಿವೆ. ಅವರು ಸೆರೆಮನೆಯಲ್ಲಿ ಒಟ್ಟು ಏಳು ವರುಷ ಹತ್ತು ತಿಂಗಳುಗಳ ವರೆಗೆ ಇದ್ದರೆಂಬ ಸಂಗತಿಯನ್ನು ಮೇಲೆ ಹೇಳಿದೆಯಷ್ಟೆ. ಆ ದೀರ್ಘ ಕಾಲಾವಧಿಯಲ್ಲಿ ಸಮಯ ಸಿಕ್ಕಾಗ ಮತ್ತು ಜೇಲಿನ ಅಧಿಕಾರಿಗಳು ಅನುಕೂಲತೆಗಳನ್ನು ಒದಗಿಸಿ ಕೊಟ್ಟಾಗ ಎಷ್ಟೋ ಹೊತ್ತಿಗೆಗಳನ್ನು ಬರೆದಿದ್ದಾರೆ. ನಮಗೆ ಗೊತ್ತಿದ್ದ ಮಟ್ಟಿಗೆ ತಮ್ಮ ತಾಯ್ನುಡಿಯಾದ ಕನ್ನಡದಲ್ಲಿ ಹದಿನಾರು, ಇಂಗ್ಲೀಷದಲ್ಲಿ ಆರು, ಹಾಗೂ ಹಿಂದೀಯಲಿ ಐದು ಹೊತ್ತಿಗೆಗಳನ್ನು ಬರೆದಿದ್ದಾರೆ. ಕನ್ನಡ ಸ [illegible]ಕ್ಕೆ ಅವರು ಸಲ್ಲಿಸಿದ ವಿದ್ವತ್ಪೂರ್ಣವಾದ

ಸೇವೆಯನ್ನು ಮನದಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯು ಬಳ್ಳಾರಿಯಲ್ಲಿ ೧೯೩೮ರಲ್ಲಿ ಕರೆತ ೨೧ನೆಯ ಅಧಿನಿವೇಶನಕ್ಕೆ ಅವರನ್ನು ಒಕ್ಕೊರಲಿನಿಂದ ಅಧ್ಯಕ್ಷರನ್ನಾಗಿ ಚುನಾಯಿಸಿದುದು ಸರ್ವಶ್ರುತವಿದೆ.

ಸ್ವಾತಂತ್ರ್ಯಾನಂತರದ ಸೇವೆ

ಅವರು ಎ. ಆಯ್. ಸಿ.ಸಿ. (All India Congress Committee) ಯ ಸದಸ್ಯರಿರುವರಲ್ಲದೆ ಭಾರತದ ಘಟನಾ ಸಭೆ (Constituent Assembly) ಯಲ್ಲಿಯೂ ಸಹ ಓರ್ವ ತಜ್ಞ ಸದಸ್ಯರಾಗಿದ್ದರು. ೧೯೪೮ರಲ್ಲಿ ರೋಮ ಪಟ್ಟಣದಲ್ಲಿ ನೆರೆದ ಅಂತರ್ರಾಷ್ಟ್ರೀಯ ಲೋಕಸಭೆಗಳ ಸಂಘ (Inter-Parliamentary Union) ದ ಸಮ್ಮೇಲನಕ್ಕೆ ನಮ್ಮ ರಾಷ್ಟ್ರದಿಂದಕಳುಹಲ್ಪಟ್ಟನಿಯೋಗ(Delegation)ದ ಓರ್ವ ಸದಸ್ಯರಾಗಿದ್ದರು. ಅವರಿಂದೆಸಗಲ್ಪಟ್ಟ ಉಳಿದ ಕಾರ್ಯಕಲಾಪಗಳನ್ನು ಪೀಠಿಕೆಯಲ್ಲಿ ವಿವೇಚಿಸಲಾಗಿದೆ.

ಉಪಸಂಹಾರ

ಈಗ ಅವರಿಗೆ ಸುಮಾರು ಅರವತ್ತು ವರುಷಗಳಾಗಿವೆ. ಅವರ ಧರ್ಮಪತ್ನಿಯುವರ ಹೆಸರು ರಾಧಾಯಿಯವರು. ಅವರು ಒಂದು ಗಂಡು ಮಗುವನ್ನು ಹೆತ್ತು ಅಕಾಲಿಕವಾಗಿ ವೈಕುಂಠವಾಸಿಗಳಾದರು. ಆಗ ಲಗ್ನವಾಗುವ ವಯಸ್ಸು ಇನ್ನೂ ಇದ್ದರೂ ಸಹ ಶ್ರೀಯುತರು ಪುನಃ ಲಗ್ನವಾಗುವ ಗೋಜಿಗೆ ಹೋಗಲಿಲ್ಲ. ಇದರಿಂದ ಅವರ ಮನೋನಿರ್ಧಾರವು ತುಂಬಾ ವ್ಯಕ್ತವಾಗುತ್ತಿದೆ. ಅವರಿಂದ ಆಗ ಹೊಮ್ಮಿದ ಈ ದೃಢನಿಶ್ಚಯವು ಮುಂದೆ ಅವರು ಸ್ವಸಂತೋಷದಿಂದ ಕೈಕೊಂಡ ಹೋರಾಟಕ್ಕೆ ಹೇಳತೀರದಷ್ಟು ಪುಷ್ಟಿಯನ್ನು ಕೊಟ್ಟಿತು. ಈ ಮಾತು ಕಣ್ಣಿದ್ದವರಿಗೆ ಕಂಡಿದೆ. ತಾಯ್ನಾಡು ತಾಯ್ನುಡಿಗೋಸ್ಕರ ಅವರು ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸುವರೆಂದು ಕನ್ನಡ ಜನತೆ ಅವರ ಬಗೆಗೆ ಆಶೆ ಆಕಾಂಕ್ಷೆಗಳನ್ನು ತಳೆದಿದೆ. ನಿವೃತ್ತರಾಗಿ ತಾಯ್ನಾಡಿಗೆ ಮರಳಿದ ನಂತರ ತಾವು ಅಲ್ಲಿಯ ವರೆಗೆ ಗಳಿಸಿದ ಆಡಳಿತದ ಅನುಭವವನ್ನು ಕನ್ನಡಮ್ಮನಿಗೆ ಅರ್ಪಿಸುವರೆಂದು ನಾವು ನೆರೆನಂಬಿದ್ದೇವೆ. ಹಾಗೆ ಮಾಡಲು ಆ ದಯಾಸಾಗರನಾದ ಪರಮಾತ್ಮನು ಅವರಿಗೆ ಆಯುರಾರೋಗ್ಯವನ್ನೂ ಉತ್ತರೋತ್ತರ ಅಭಿವೃದ್ಧಿಯನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

"ನೂತನ ಗಣಿತ" ಗಳ ತಿದ್ದಿದ ಆವೃತ್ತಿಗಳು

ಎಲ್ಲ ಕಡೆಗೂ ದೊರೆಯುವವು

ಹಲವು ತಜ್ಞರ ನೆರವಿನಿಂದ ತಿದ್ದುಪಡೆಯನ್ನು ಕೈಕೊಂಡು ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀ ಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಲಾ ಸ್ಕೂ. ಬೋ. ಹಾಗು ಮುನಸಿಪಲ್ ಸ್ಕೂ. ಬೋರ್ಡುಗಳೂ ಮನ್ನಣೆಯನ್ನಿತ್ತಿರುವವು.

ಎಂತಲೇ ತಿದ್ದಿದ ಆವೃತ್ತಿಗಳನ್ನು ಕೇಳಿರಿ. ಎಲ್ಲ ಕಡೆಗೂ ದೊರೆಯುವವು.

ಆಕಳವಾಡಿ ಬುಕ್ ಡಿಪೋ, ಧಾರವಾಡ

ವಿದ್ಯಾರ್ಥಿಗಳಿಗೆ ವಿಚಾರಮಾಡುವ ರೀತಿಯ ಶಿಕ್ಷಣ

ಲೇಖಕರು : ಶ್ರೀ ತಟ್ಟಿ ಶಾಮರಾಯರು, ಧಾರವಾಡ

ಕಳೆದ ಸಂಚಿಕೆಗಳಲ್ಲಿ ವಿದ್ಯಾರ್ಥಿಗಳ ಇದ್ದ ಜ್ಞಾನವನ್ನು ಹೆಚ್ಚಿಸುವ ರೀತಿಗಳ ಬಗೆಗೆ ಬರೆಯಲಾಗಿತ್ತು. ಇತಿವೃತ್ತಕಥನ ಮತ್ತು ವರ್ಣನೆಗಳ ಉದ್ದೇಶವು ಸಫಲವಾಗಬೇಕಾದರೆ ಹುಡುಗರು ಕಲಿಯುವದಕ್ಕೆ ಆತುರರಾಗುವ ಹಾಗೆ ಆ ಕೆಲಸಗಳನ್ನು ಮಾಡಬೇಕಾಗುವದು. ಅದರಿಂದ ಅವರ ಕುತೂಹಲಕ್ಕೆ ಒಂದು ನಿರ್ದಿಷ್ಟ ಸ್ವರೂಪವು ಬರುವದು. ಆದರೆ ಕೆಲವು ಸಾರೆ ನಾವು ಹುಡುಗರಿಗೆ ಹೇಳಿದ ಅಥವಾ ತೋರಿಸಿದ ಸಂಗತಿಗಳಿಗಿಂತ ಅವರು ಒಂದು ಹೆಜ್ಜೆ ಮುಂದೆ ಹೋಗಬೇಕಾದುದು ಇಷ್ಟವಿರುವದು. ಈ ಸಂಗತಿಗಳು ಅವರು ಮುಟ್ಟಬೇಕಾದ ಯಾವುದೋ ಒಂದು ಇತ್ಯರ್ಥಕ್ಕೆ ಹೆಚ್ಚು ಕಡಿಮೆ ತೃಪ್ತಿಕರವಾದ ಪ್ರಮಾಣಗಳಾಗಬೇಕು. ಈ ಮುಂದಿನ ಹೆಜ್ಜೆಯು ಕೆಳಗೆ ಕೊಟ್ಟ ಒಂದು ಮೋಜಿನ ಉದಾರಣೆಯಷ್ಟು ಸುಲಭವಾಗಿರಲಿಕ್ಕಿಲ್ಲ; ಕ್ರಿಶ್ಚನ್ನರಲ್ಲಿ ಪಾದ್ರಿಯ ಮುಂದೆ ತಮ್ಮ ಪಾಪಕೃತ್ಯಗಳನ್ನು ಒಪ್ಪಿಕೊಳ್ಳುವ ಒಂದು ಪರಿಪಾಠವಿದೆ. ಒಬ್ಬ ಪಾದ್ರಿಯ ಕಥೆಯು ಹೀಗೆ ಪ್ರಾರಂಭವಾಗುತ್ತದೆ. "ಒಬ್ಬ ವೃದ್ಧ ಪಾದ್ರಿಯು ತನ್ನ ಆಪ್ತೇಷ್ಟರ ಮಧ್ಯದಲ್ಲಿ ಕುಳಿತು ಸಂಭಾಷಣೆ ಮಾಡುತ್ತಿರುವಾಗ ಹೀಗೆ ಹೇಳಿದನು : ಅಷ್ಟೇಕೆ ಅವ್ವಗಳಿರಾ, ನನ್ನಿದುರು ತನ್ನ ತಮ್ಮನ್ನು ಒಪ್ಪಿಕೊಂಡ ಮೊದಲಿಗನು ಒಬ್ಬ ಕೊಲೆಪಾತಕಿಯಾಗಿದ್ದನು.' ಇದಾದ ತಕ್ಷಣವೇ ನೆರೆಹೊರೆಯು ಸರದಾರನೊಬ್ಬನು ಕೋಣೆಯನ್ನು ಪ್ರವೇಶಿಸಿ 'ಇದೋ ಪಾದ್ರಿಗಳೇ ಬಂದಿದ್ದೇನೆ. ಅವ್ವಗಳಿರಾ ಗೊತ್ತಿದೆಯೇ ಈ ಪಾದ್ರಿಯವರ ಮೊದಲನೇ ಒಪ್ಪುಗಾರನು ನಾನಾಗಿದ್ದೆನು; ಮತ್ತು ನನ್ನ ಎದೆಬಿಚ್ಚಿ ಹೇಳದ ಹೇಳಿಕೆಯು ಅವರನ್ನು ಆಚ್ಚರಿಗೊಳಿಸಿತು !" ಅಥವಾ ಇನ್ನೊಂದು ಉದಾಹರಣೆಯನ್ನು ಹೇಳುವುದಾದರೆ ಹವೆಯ ಒತ್ತಡದ ಬಗೆಗೆ ಪ್ರತ್ಯಕ್ಷ ಪ್ರಾಯೋಗಿಕವನ್ನೊಂದು ಮಾಡಿತೋರಿಸಿ 'ಹುಡುಗರಿರಾ, ನೀರುಜಗ್ಗುವ ಪಂಪು ಅಥವಾ ಭಾರಮಾಪಕಯಂತ್ರವು ಯಾವರೀತಿಯಾಗಿ ತನ್ನ ಕೆಲಸವನ್ನು ಮಾಡುತ್ತದೆ ಎಂಬದನ್ನು ಸೂಚಿಸುವಿರಾ' ಎಂದು ವರ್ಗದ ಹುಡುಗರನ್ನು ಕೇಳಬಹುದು. ಅವರು ಊಹಿಸಿ ನಿರ್ಣಯಗಳನ್ನು ಮಾಡಬೇಕೆಂದು ನಾವು ಬಯಸುವೆವು.

ಈ ತರಹದ ಊಹೆಯ ಕೆಲಸವು ಮಕ್ಕಳಿಗೆ ಹೊಸದೇನಲ್ಲ. ದೊಡ್ಡವರು ಮಾಡುವಂತೆ ಅವರು ಅನುಮಾನಗಳನ್ನು ಕಟ್ಟುತ್ತಿರುವರು; ಇದು ಅವರಿಗೆ ತಿಳಿಯದಲೆ ಆಗುತ್ತಿರಬಹುದು. "ಯಾಕೆ, ಯಾಕೆ" ಎಂದು ಅವರು ಒಂದೇ ಸವನೆ ಕೇಳುತ್ತಿರುವದನ್ನು ನೋಡಿರಿ. ಸರಿಯಾದ ಕಾರಣವೇ ಅವರಿಗೆ ತಕ್ಷಣ ಬೇಕಾಗಿರುವದಿಲ್ಲ. ಅದು ಅವರ ಚಿಕಿತ್ಸಕ ಬುದ್ಧಿಯನ್ನು ತೋರಿಸುತ್ತದೆ. ಸಣ್ಣಮಕ್ಕಳ ನಡತೆಯ ರೀತಿಯಲ್ಲಿ, ಸೂಕ್ಷ್ಮವಾಗಿ ನೋಡಿದರೆ ಅತ್ಯುತ್ತಮ ವ್ಯಾವಹಾರಿಕ ನಿರ್ಣಯದ ಒಂದಂಶವು ಕಂಡುಬರುವದು. ಒಂದು ದೊಡ್ಡ ನಾಯಿಯು ಮೈಮೇಲೆ ಬಿದ್ದು ಆಡಹೋದಾಗ ಮಗುವಿಗೆ ಹೆದರಿಕೆ ಬಂದಿದ್ದರೆ ಅಂತಹ ಪ್ರಾಣಿಗಳ ಸಂಪರ್ಕವನ್ನು ಮುಂದೆ ಅದು ತಪ್ಪಿಸಿಕೊಳ್ಳಲೆತ್ನಿಸುವದು. ತನಗೆ ಯಾರಿಂದ ಬೇಡಿದ್ದು ಸಿಕ್ಕಬಹುದೆಂದೆನಿಸುವದೋ ಅಂಥವರನ್ನು ಹುಡುಗನು ಬಹಳ ಜಾಣತನದಿಂದ ಬೇಡುವನು. ಈ ತರದ ಪ್ರಸಂಗಗಳಲ್ಲಿ ಅವನ ನಡತೆಗೆ ತರ್ಕಸಿದ್ಧವಾದ ತತ್ವವೇನು ಕಾರಣವಾಗಿರುವದಿಲ್ಲ. ಮಗುವಿಗೆ ಮಾತಾಡಲಿಕ್ಕೆ ಬರುವ ಪೂರ್ವದಲ್ಲಿಯೇ ಇಂತಹ ಎಷ್ಟೋ ಉದಾಹರಣೆಗಳನ್ನು ನೋಡಬಹುದು. "ಎಲ್ಲಾ ದೊಡ್ಡ ನಾಯಿಗಳು ಅಪಾಯಕರವಾಗಿರುವವು." "ದಾಯಿಯು ನಾನು ಬೇಡಿದ್ದನ್ನು ಕೊಡುವಳು;" ಹೀಗೆ ಅವನು ಅನ್ನಲಾರನು; ಆ ರೀತಿ ಆತನು ಆಲೋಚಿಸಲೂ ಆರನು. ಹಾಗೆ ಅವನು ಮಾಡಿದ್ದೇ ಆದರೆ ಅವನ ಹೇಳಿಕೆಯ ಅರ್ಥದ ಸತ್ಯವು ಅವನ ಅಲ್ಪ ಅನುಭವವನ್ನು ಮೀರಿದ್ದು ಎಂದು ಹೇಳಬೇಕಾಗುವದು. ಸ್ವೇಚ್ಛೆಯಾಗಿ ಮಾತಾಡಲಿಕ್ಕೆ ಬರಹತ್ತಿದ ಮೇಲೆ ಈ ತರದ ಹೇಳಿಕೆಗಳು ಸಾಮಾನ್ಯವಾಗಿ ಬಿಡುವವು. ಅವು ದೇಹದಿಂದ ಮಾಡುವ ಕೆಲಸಗಳಿಗೆ ಸಂಬಂಧಿಸಿರುವುವೇನೋ ನಿಜ, ಆದರೆ ಅಂಥ ಪ್ರಾಯೋಗಿಕ ಚಟುವಟಿಕೆಗಳು

ಮಕ್ಕಳಿಗೆ ಜೀವನದ ಮುಖ್ಯ ವ್ಯವಸಾಯವೇ ಆಗಿರು-ವವು.

"ಎಲ್ಲ ಆಯಿತು; ಆದರೆ ಈಗ ರೈತರ ಮಲ್ಲಪ್ಪನನ್ನು ಕೇಳುವವರು ಯಾರು? ನಾನಂತೂ ಕೇಳಲಾರೆ. ಹೋದ ಸಾರೆ ನಾನು ಅವನನ್ನು ಕಂಡಾಗ ಇನ್ನೊಮ್ಮೆ ತನ್ನ ಕೈಗೇ ಸಿಕ್ಕದ್ದೇ ಆದರೆ 'ನಿನ್ನ ತಲೆಯನ್ನೇ ಒಡೆಯು-ವೆನು' ಎಂದನು. ನೀನೇ ಅವನನ್ನು ಕೇಳಬೇಕು;" ಎಂದು ಸಿದ್ದನಂತಹ ಹುಡುಗರು ಹೇಳುವದಿಲ್ಲವೇ? ಅದೇ ಒರಟುಸಿದ್ದನು ಹುಡಿಗೆಯರ ಮಾತನ್ನೆತ್ತಿದಾಗ "ಅವರಿಗೇನೂ ಗೊತ್ತಿರುವದಿಲ್ಲ; ಅವರಿಗೆ ಏನೂ ಮಾಡಲೂ ಬರುವದಿಲ್ಲ. ಪೇಟೀ ಬಾರಿಸುವದೊಂದನ್ನು ಬಿಟ್ಟು ಇನ್ನು ಅದರ ವಿಚಾರವಾಗಿ ಮಾತಾಡುವದು ಯಾರಿಗೆ ಬೇಕಾಗಿದೆ; ಅವರು ಯಾವದನ್ನೂ ಹಚ್ಚಿಕೊಂಡು ಚಿಂತಿಸುವದಿಲ್ಲ–ವಿವೇಕಪೂರ್ಣವಾದ ಯಾವದನ್ನೂ–ಎಂದು ನಾನು ಹೇಳುವದು" ಎಂದು ಅನ್ನುವದಿಲ್ಲವೇ? ದೊಡ್ಡ-ವರ ಮಾತಿನಲ್ಲಿ ನಡತೆಯಲ್ಲಿ ಇದೇ ಪ್ರವೃತ್ತಿಯು ಎಷ್ಟೋ ಸಾರೆ ಕಂಡು ಬರುವದು.

ಅವನ ತೋಟದಲ್ಲಿ ನಾನು ಎಂದೂ ಹಣ್ಣನ್ನು ಕೊಂಡುಕೊಳ್ಳುವದಿಲ್ಲ; ಅವು ಯಾವಾಗಲೂ ಸುಮಾರು ಇರುವವು— ಎಂದು ಒಂದೆರಡು ಸಲ ಅನುಭವವನ್ನು ಪಡೆದ ವ್ಯಕ್ತಿಯು ಅನ್ನುವನು. ಹೊರಗೆ ಮುಗಿಲ ಮೋರೆಯನ್ನು ನೋಡಿ ಕೊಡೆಯನ್ನು ಬಿಟ್ಟು ಹೊರಗೆ ಹೋಗುವದಿಲ್ಲ. ಏಕೆಂದರೆ ಮೋಡಕವಿದಾಗ ಮಳೆಖಂಡಿ-ತವಾಗಿ ಬರುವದೆಂದು ತಿಳಿದಿರುವದು. ಕಾರಣದ ಅರಿವು ಸ್ಪಷ್ಟವಾಗಿ ಮನಸ್ಸಿಗೆ ಹೊಳೆಯದೆ ಇದ್ದಾಗಲೂ ಹುಡುಗರಂತೆ ನಾವೂ ಎಷ್ಟೋಸಲ ಮಾಡುವೆವು; ಆಲೋಚಿಸುವೆವು. ಹಾಗೇಕೆ ಎಂದು ಯಾರಾದರೂ ಬಟ್ಟಿಗೆ ಹಚ್ಚಿ ಕೇಳಿದಾಗ ನಾವು ಕೊಡುವ ಕಾರಣವು ಅನ-ವಶ್ಯಕವೆಂದು ನಮಗೇ ಎನಿಸುವದು.

ಮೇಲಿನ ಉದಾಹಣೆಗಳಿಂದ ನಮ್ಮ ಅನುಮಾನಗಳು ಎರಡು ಮುಖವಾಗಿರುವವೆಂದು ಗೊತ್ತಾಗುವದು. ತೋಟಗಾರನಿಂದ ಎರಡುಸಲ ಕಾಯಿಗಳನ್ನು ಕೊಂಡು ನೋಡಿ ಅವು ಯಾವಾಗಲೂ ಸುಮಾರು ಇರುವವೆಂದು ಸಿದ್ಧಾಂತಿಸುವೆವು. ಇಲ್ಲಿ ನಾವು ಒಂದು ಅಥವಾ ಎರಡ ಅನುಭವಗಳ ಮೇಲಿಂದ ಸರ್ವಸಾಮಾನ್ಯವಾದ ಒಂದು ಸಿದ್ಧಾಂತಕ್ಕೆ ಹಾರುವೆವು. ಹಲವಾರು ಉದಾಹರಣೆಗಳ ಮೇಲಿಂದ ಸಾಮಾನ್ಯವಾದ ನಿರ್ಣಯಕ್ಕೆ ಬರುವದಕ್ಕೆ ತರ್ಕಶಾಸ್ತ್ರದಲ್ಲಿ ಉದ್ಗಾಮಿ ಅನುಮಾನವೆನ್ನುವರು.

ಲೋಕರೂಢಿಯಲ್ಲಿದ್ದ ಗಾದೆಯ ಮಾತುಗಳು ಜನರ ಸಾಮಾನ್ಯವಾದ ತರ್ಕಸರಣಿಯಿಂದ ಹುಟ್ಟಿದವೇ ಆಗಿರುತ್ತವೆ. ಒಂದೇ ಒಂದು ಅನುಭವವು ನಮ್ಮನ್ನು ಒಂದು ಸಿದ್ಧಾಂತಕ್ಕೆ ಒಯ್ಯಬಹುದು; ಅದು ನಿಜವಾದದ್ದೂ ಇರಬಹುದು. ಆದರೆ ಫಲಿತಾಂಶವು ನಿಜವಿದ್ದ ಮಾತ್ರದಿಂದ ನಾವು ಅನುಸರಿಸಿದ ಕ್ರಮವು ಸರಿಯಾದುದೆಂದು ಹೇಳಲಾಗುವದಿಲ್ಲ. ಬಹುಶಃ ಒಂದೇ ಒಂದು ವೈಯಕ್ತಿಕ ಅನುಭವದಿಂದ ತೆಗೆದ ಅನುಮಾನಗಳು ಬಹಳ ತಪ್ಪಾಗಿರುವವು. ಸಾಮಾನ್ಯ ವ್ಯವಹಾರದಲ್ಲಿ ನಾವು ಕೊಡುವ ಹೇಳಿಕೆಗಳಲ್ಲಿ ಊಹೆಗೆ ಗೃಹೀತವಾದ ಅಂಶಗಳು ಸಾಕಷ್ಟು ಇಲ್ಲದಿರುವದೊಂದು ದೊಡ್ಡ ತಪ್ಪು. ಈ ಅವಸರದಿಂದ ನಿರ್ಣಯಕ್ಕೆ ಬರುವ ಸ್ವಭಾವಕ್ಕೆ ಸಂಯಮನದ ಮಾರ್ಗವನ್ನು ತೋರಿಸುವದು ಶಿಕ್ಷಕನ ಒಂದು ಕೆಲಸವಾಗಿದೆ.

ಸಣ್ಣಮಕ್ಕಳಿಗೆ ಅನಿಶ್ಚಿತತೆ, ಸಂಶಯಗಳು ಒಗ್ಗುವದಿಲ್ಲ. ಆದರೂ ತಮ್ಮ ನಿರ್ಣಯವನ್ನು ಕೆಲವು ನಿಯಮದ ವರೆಗೆ ಬದಿಗಿರಿಸುವದಕ್ಕೆ ಅವರಿಗೆ ನಾವು ಕಲಿಸಬೇಕು. ಹಾಗೆ ಮಾಡಿದರೆ ಅವರ ಅನುಭವಕ್ಕೆ ನಿಜವಾಗಿ ಬಂದದ್ದೆಷ್ಟು ಆದರ ಆಧಾರದ ಮೇಲೆ ಅವರು ಕಟ್ಟಿದ ಸಿದ್ಧಾಂತವೆಷ್ಟು–ಇವುಗಳಲ್ಲಿರುವ ಅಂತರವು ಅವರ ಗಮನಕ್ಕೆ ಬರುವದು; ನಾವು ಹೇಳುವ ಮಾತಿಗೆ ಸಾಕಷ್ಟು ಆಧಾರಗಳಿವೆ ಎಂದರೇನು ಎಂಬದರ ಕಲ್ಪನೆಯು ಅವರಿಗೆ ಬೇಕು. ಸಾಮಾನ್ಯವಾಗಿ ಒಂದು ಇತ್ಯರ್ಥವು ಯಾವ ದಿಕ್ಕಿನಲ್ಲಿ ಸಾಗಿದೆ ಎಂಬ ಬಗೆಗೆ ಅವರು ಆಗಾಗ್ಗೆ ಊಹಾಪೋಹಗಳನ್ನು ನಡೆಸಬಹುದಾದರೂ ಅವರ ಊಹೆಗಳು ಸರ್ವಮಾನ್ಯ ಸಿದ್ಧಾಂತವೆಂದು ಗೃಹೀತವಾಗಬೇಕಾದರೆ ಅಥವಾ ತಪ್ಪೆಂದು ಬಿಡಲ್ಪಡಬೇಕಾದರೆ ಇನ್ನೂ ಹೆಚ್ಚು ಪ್ರಮಾಣಗಳ ಅವಶ್ಯಕತೆಯನ್ನು ಅವರಿಗೆ ಮುಂದಟ್ಟಾಗಿಸಬೇಕು.

ಹೆಚ್ಚೆಚ್ಚು ಆಧಾರಗಳನ್ನು ಕಲೆಹಾಕುವದೊಂದೇ ವಿಚಾರವಲ್ಲ, ಕೊಟ್ಟ ಆಧಾರಗಳ ಮತ್ತು ಪುರಾವೆಗಳ

ಸ್ವರೂಪವನ್ನು ಪರೀಕ್ಷಿಸುವದೂ ಅಷ್ಟೇ ಮಹತ್ವವಾದದ್ದು; ಎಂದರೆ ಆ ಪುರಾವೆಗಳ ಅರ್ಥವನ್ನು ಸರಿಯಾಗಿ ಮಾಡಲು ಬರುವದು.

ಇಂಥದೊಂದು ಪತ್ರಿಕೆಯ ವಾರದ ಭವಿಷ್ಯವು ಸತ್ಯವಾಗಿರುವದು ಎಂದು ಒಬ್ಬ ಓದುಗನು ಕೇಳಬಹುದು; ಅದನ್ನೇ ಪುಷ್ಟೀಕರಿಸುವ ಇನ್ನೂ ಹತ್ತು ಜನರೂ ದೊರೆಯಬಹುದು; ಆದರೆ ಅದೆಲ್ಲವೂ ಇದ್ದಕ್ಕಿದ್ದ ಹಾಗೆ ಸುಳ್ಳಾಗುವ ರೀತಿಯಲ್ಲಿ ಬೇರೊಬ್ಬನು ಆ ಪುರಾವೆಯ ಅರ್ಥವನ್ನು ಹಚ್ಚಿತೋರಿಸಿದಲ್ಲಿ ನಮ್ಮ ಮೊದಲಿನ ಗೃಹಿಕೆಯು ಕುಸಿದು ಬೀಳುವದು.

ಗಣಿತದ ಕ್ಷೇತ್ರವನ್ನು ಬಿಟ್ಟರೆ ಸಾಲೆಯಲ್ಲಿ ಸಮಾಧಾನಕರವಾಗಿ ಸಿದ್ಧಾಂತಮಾಡಿ ತೋರಿಸುವಂಥ ಬಹು ಸ್ವಲ್ಪ ವಿಷಯುಗಳಿರುವವೆಂದು ಹೇಳಬಹುದು. 'ವಿಶೇಷ ಉದ್ಧಾಹರಣೆಗಳಿಂದ ಸಾಮಾನ್ಯ ನಿಯಮಕ್ಕೆ ಹೋಗು' ಎಂಬ ಶಿಕ್ಷಣ ತತ್ವವನ್ನು ನಾವು ಮೇಲಿಂದ ಮೇಲೆ ಕೇಳುತ್ತೇವೆ. ಎಷ್ಟೋ ಪಾಠಗಳಲ್ಲಿ ಅನುಸರಿಸಿದ ಪದ್ಧತಿಗೆ ಈ ತತ್ವದ ಹೆಸರನ್ನು ಕೊಟ್ಟರೂ ಶಾಸ್ತ್ರೋಕ್ತವಾದ ಅನುಮಾನ ಪದ್ಧತಿಗೆ ಅವು ಮುಟ್ಟಲಾರದೆ ಹೋಗುವವು. ಬೇರೆ ಯಾವ ಸಂಗತಿಗಳೂ ಅಡ್ಡಬರದಿದ್ದರೆ ಉಷ್ಣಮಾನವು ಹೆಚ್ಚಿದಂತೆ ವಾಯುರೂಪ ಪದಾರ್ಥಗಳು ಪ್ರಸರಣಹೊಂದುವವು ಎಂದು ಉದಾಹರಣೆಗಳ ಸಂಕಲನದಿಂದ ಒಂದು ವರ್ಗಕ್ಕೆ ತಿಳಿಸಿಕೊಡಬಹುದು ಅಥವಾ ಅವರು ಆ ಸಿದ್ಧಾಂತಕ್ಕೆ ಬರುವ ಹಾಗೆ ಮಾಡಬಹುದು. ಆದರೆ ತತ್ವವು ನಿಜವಾಗಿದ್ದರೂ ಪ್ರತ್ಯಕ್ಷ ವರ್ಗದಲ್ಲಿ ನಡೆಯುವ ಪಾಠದ ವಿಧಾನದಲ್ಲಿ ಒಂದು ಅಥವಾ ಎರಡು ಉದಾಹರಣೆಗಳ ವಿಚಾರಣೆಯಿಂದಲೇ ಆ ಸಿದ್ಧಾಂತವನ್ನು ಮುಟ್ಟಲಾಗದು—ಈ ಕ್ರಮವು ಎಲ್ಲ ವಾಯುಗಳ ಬಗೆಗೆ ಹೇಳಿದ ಹೇಳಿಕೆಯನ್ನು ಹೇಗೆ ಸಮರ್ಥಿಸಬಲ್ಲದು ?

(ಮುಂದುವರಿಯುವದು)

ತ್ವರೆ ಮಾಡಿರಿ! ಹೊಸ ಪುಸ್ತಕ. ತ್ವರೆ ಮಾಡಿರಿ!!

ಹೊಸ ಶಿಕ್ಷಣ

ಮೂಲ ಲೇಖಕರು :
ಆಚಾರ್ಯ ವಿನೋಬಾಜಿಯವರು
ಅನುವಾದಕರು :
ಶ್ರೀ. ಕಲಹಾಳ ಮಡಿವಾಳಪ್ಪ

ಈ ಪುಸ್ತಕದಲ್ಲಿ ಹೊಸ ಶಿಕ್ಷಣದ ಬಗೆಗೆ ವಿನೋಬಾಜಿಯವರ ಅಮೌಲ್ಯ ವಿಚಾರ ತರಂಗಗಳನ್ನು ಅನುವಾದಿಸಿ ಕೊಡಲಾಗಿದೆ. ಅನುಭವದ ಆಳದಿಂದ ಹೊರಬಿದ್ದ ಪೂಜ್ಯ ವಿನೋಬಾರ ಹೊಸ ಶಿಕ್ಷಣ ವಿಚಾರಗಳು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ ಉಪಯುಕ್ತವಾಗುವದರಲ್ಲಿ ಸಂದೇಹವಿಲ್ಲ ಇಂದೇ ಕೆಳಗಿನವರಿಗೆ ಬರೆದು ತರಿಸಿ ವಿಚಾರದ ಮಾಧುರ್ಯವನ್ನು ಸವೆಯಿಸಿರಿ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ವಯಸ್ಕರ ಸುರಸ ಕತೆಗಳು.

ಬರೆದವರು :
ಶ್ರೀ. ಪಾವಟೆ ಚೆನ್ನಪ್ಪನವರು
ಆ. ಡೆ. ಎ. ಇ., ವಿಜಾಪುರ

ಲೇಖಕರು ತಮ್ಮ ಅನುಭವದಿಂದ ವಯಸ್ಕರಿಗೆ ತಿಳಿಯುವ ರೀತಿಯಲ್ಲಿ ಅವರಿಗೆ ಉಪಯುಕ್ತವಿರುವ ಕತೆಗಳನ್ನು ಬರೆದಿದ್ದಾರೆ. ಸಮಾಜ ಶಿಕ್ಷಣ ಕಾರ್ಯಕರ್ತರಿಗೆ ಬಹಳ ಉಪಯುಕ್ತವಿದೆ. ಪ್ರಕಾಶಕರಿಗೆ ಬರೆದು ಇಂದೇ ತರಿಸಿಕೊಳ್ಳಿರಿ.

ಪುಸ್ತಕದ ಬೆಲೆ : ಕೇವಲ ಹತ್ತು ಆಣೆಗಳು

ಪ್ರಕಾಶಕರು :
ಶ್ರೀ. ಮ. ವಿ. ಐಹೊಳ್ಳಿ,
ಕನ್ನಡ ಶಾಲಾ ಮಾಸ್ತರರು, ವಿಜಾಪುರ

ಭೂಗೋಲದಲ್ಲಿ ಮಾರ್ಪಾಟಾದ ಹಲವು ಹೆಸರುಗಳು

ಲೇ: **ಶಿಂತ್ರಿ ಬಸಪ್ಪನವರು,** ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ,
ದಕ್ಷಿಣ ಭಾಗ, ಧಾರವಾಡ

ಪ್ರಸ್ತಾವನೆ

ಮಾನವನು ಮಾರ್ಪಾಟಿನ ಪ್ರಿಯನು. ಹಳೆಯದನ್ನು ತೆಗೆದೊಗೆದು ಹೊಸತನ್ನು ಧರಿಸುವದು ಅವನ ಹುಟ್ಟು ಸ್ವಭಾವವು. ಹೊಸತನವು ಯಾವಾಗಲೂ ಅವನಿಗೆ ಹೊಸ ಹುರುಪನ್ನೂ ಹೊಸ ವಿಚಾರವನ್ನೂ ಸಲ್ಲಿಸುತ್ತಿದೆ. ಹೊಸ ವಸ್ತುಗಳು ಚಿಕ್ಕಮಕ್ಕಳ ಅವಧಾನವನ್ನು ತಮ್ಮ ಕಡೆಗೆ ಹೇಗೆ ಸೆಳೆಯುವವೆಂಬುದನ್ನು ಓದುಗರು ಕಂಡುಂಡ ಮಾತಾಗಿದೆ. ಮಾರ್ಪಾಟು ಇಲ್ಲವೆ ಹೊಸತನವು ಜೀವನದ ಮಾಧುರ್ಯವನ್ನು ಹೆಚ್ಚಿಸುತ್ತಿದೆ. "Change is the spice of life" ಎಂಬ ಆಂಗ್ಲ ನಾಣ್ಣುಡಿಯು ಈ ಮಾತನ್ನೇ ಒತ್ತಿ ಹೇಳುತ್ತಿದೆಯಲ್ಲವೇ? ಮಾನವನ ಈ ಹುಟ್ಟುಗುಣಕ್ಕನುಸರಿಸಿ ರಾಷ್ಟ್ರದಲ್ಲಿಯ ಜನತೆಯು ಆಗಾಗ ತನ್ನ ವಿಚಾರಗಳು ಬದಲಾದಂತೆ ತನ್ನ ರಾಷ್ಟ್ರದ ಇಲ್ಲವೆ ರಾಷ್ಟ್ರದಲ್ಲಿಯ ಊರುಗಳ ಅಥವಾ ಪ್ರಾಂತಗಳ ಹೆಸರುಗಳನ್ನು ಬದಲಾಯಿಸುವ ಪರಿಪಾಠವನ್ನಿಟ್ಟುಕೊಂಡಿದೆ. ಉದಾಹರಣೆಗಾಗಿ, ರಶಿಯಾದಲ್ಲಿಯ ಲೆನಿನ್‌ಗ್ರಾಡ ಪಟ್ಟಣವನ್ನು ತಕ್ಕೊಳ್ಳಿರಿ. ಮೊದಲನೆಯ ಜಾಗತಿಕ ಯುದ್ಧದ ಮುನ್ನ ಅದರ ಹೆಸರು 'ಸೇಂಟ ಪೀಟರ್ಸ ಬರ್ಗ' ಎಂದು ಇತ್ತು. ಮೊದಲನೆಯ ವಿಶ್ವಮೇಧದಲ್ಲಿ ಅದಕ್ಕೆ 'ಪೆಟ್ರೋಗ್ರಾಡ' ಎಂಬ ಹೆಸರು ಪ್ರಾಪ್ತವಾಯಿತು. ಆ ಹೆಸರೂ ಜನತೆಗೆ ಮುಂದೆ ಬೇಡಾಯಿತು. ಎರಡನೆಯ ಮಹಾಯುದ್ಧದಷ್ಟೊತ್ತಿಗೆ ಅದಕ್ಕೆ 'ಲೆನಿನ್‌ಗ್ರಾಡ' ಎಂದು ನಾಮಕರಣವಾಯಿತು. ಯಾಕಂದರೆ, ಲೆನಿನ್ನರವರು ಮೊದಲನೆಯ ವಿಶ್ವಮೇಧವು ಮುಕ್ತಾಯವನ್ನು ಹೊಂದಿದ ಕೂಡಲೆ ರಾಷ್ಟ್ರದ ತುಂಬೆಲ್ಲ ದೊಡ್ಡದೊಂದು ಕ್ರಾಂತಿಯನ್ನೆಬ್ಬಿಸಿ ಸಮತಾವಾದ (Communism) ವನ್ನು ಸಂಸ್ಥಾಪಿಸಿ ಜಗತ್ತನ್ನೇ ಬೆರಗುಗೊಳಿಸಿದರಲ್ಲವೇ? ಅವರ ಮರಣದ ನಂತರ ಅವರ ಹೆಸರನ್ನು ಸ್ಮಾರಕಗೊಳಿಸುವದು ಜನತೆಗೆ ಅತ್ಯಗತ್ಯವೆನಿಸಿತು. ಆದುದರಿಂದ, ಆಗ ಅದಕ್ಕೆ 'ಲೆನಿನ್‌ಗ್ರಾಡ' ಎಂಬ ಹೆಸರನ್ನಿಟ್ಟರು. ಇದರಂತೆ ಹಲವು ರಾಷ್ಟ್ರಗಳ ಇಲ್ಲವೆ ಪ್ರಾಂತಗಳ ಹೆಸರುಗಳಲ್ಲಿ ಕಾರಣಾಂತರಗಳಿಂದ ಬದಲಾವಣೆಗಳಾಗಿವೆ. ಅವುಗಳನ್ನೆಲ್ಲ ಕೂಡ ಹಾಕಿ ಅಚ್ಚುಕಟ್ಟಾಗಿ ಜೋಡಿಸಿ ಮೇಲಿನ ಇಯತ್ತೆಗಳ ಮಕ್ಕಳಿಗೆ ಉಪಯೋಗವಾಗಲೆಂಬ ಸದುದ್ದೇಶದಿಂದ ಇಲ್ಲಿ ಕೊಡಲಾಗಿದೆ. ಅವು ಟ್ರೇನಿಂಗ ಕಾಲೇಜದಲ್ಲಿ ಓದುವ ಶಿಕ್ಷಕ-ವಿದ್ಯಾರ್ಥಿಗಳಿಗೂ ಶಿಕ್ಷಕಿ-ವಿದ್ಯಾರ್ಥಿನಿಯರಿಗೂ ಉಪಯುಕ್ತವಿವೆಯೆಂಬ ಮಾತನ್ನು ಇಲ್ಲಿ ಹೇಳುವದು ಅನವಶ್ಯಕ. ಅವರೆಲ್ಲರೂ ಈ ಲೇಖದ ಉಪಯೋಗವನ್ನು ಸಂಪೂರ್ಣವಾಗಿ ಮಾಡಿಕೊಳ್ಳುವರೆಂದು ಹಾರೈಸಲಾಗಿದೆ. ನಮ್ಮ ಓದುಗರಲ್ಲಿಯ ಮೇಲಿನ ಇಯತ್ತೆಗಳನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರು ಈ ಪುಟ್ಟ ಲೇಖವನ್ನೋದಿಕೊಂಡು ತಮ್ಮ ತಮ್ಮ ವರ್ಗದ ಮಕ್ಕಳಿಗೆ ಅದರ ಸಂಪೂರ್ಣ ಲಾಭವನ್ನು ಮಾಡಿ ಕೊಡುವರೆಂದು ನೆರೆನಂಬಿದ್ದೇವೆ:—

(ಹಳೆ)	(ಹೊಸ)
ಅಂಗೋರಾ	ಅಂಕಾರಾ
ಕಾನ್ಸ್ಟಂಟನೋಪಲ್	ಇಸ್ತಾಂಬುಲ್
ಆಯರಿಶ್ ಫ್ರೀಸ್ಟೇಟ್	ಆಯರ್ (Eire)
ಕ್ರಿಸ್ತಿಯಾನಿಯಾ (ನಾರ್ವೆ)	ಓಸ್ಲೋ
ಫೋರ್ಮೋಸಾ	ತೈವಾನ್
ಮಂಚೂರಿಯಾ	ಮಂಚುಕುವೋ
ಮೆಸೋಪೋಟೇಮಿಯಾ	ಇರಾಕ್
ಪರ್ಶಿಯಾ	ಇರಾಣ
ರಶಿಯ	ಯು. ಎಸ್. ಎಸ್ ಆರ್. (Union of Soviet Socialist Republics)
ಸಿಂಗಾಪುರ	ಶಾನನ್ (ಜಪಾನಿಯರು ಇಟ್ಟ ಹೆಸರು)
ಪೇಕಿನ್	ಪೇಪಿಂಗ

(ಹಳೆ)	(ಹೊಸ)
ಪೆಟ್ರೋಗ್ರಾಡ	ಲೇನಿನ್‌ಗ್ರಾಡ
ಸಯಾಮು	ಥಾಯಲಂಡ
ಸ್ಯಾಂಡಿಚ್ ನಡುಗಡ್ಡೆಗಳು	ಹವಾಯಿ ನಡುಗಡ್ಡೆಗಳು
ಡಚ್ ಈಸ್ಟ ಇಂಡೀಜ	ಇಂಡೋನೇಸಿಯ
ಇಂಡಿಯಾ	ಭಾರತ
ಸಂಯುಕ್ತ ಪ್ರಾಂತ	ಉತ್ತರ ಪ್ರದೇಶ
ಸೆಂಟ್ರಲ್ ಇಂಡಿಯನ್ ಏಜನ್ಸಿ	ಮಧ್ಯಭಾರತ
ಮಧ್ಯಪ್ರಾಂತ	ಮಧ್ಯ ಪ್ರದೇಶ
ಕಾಠೇವಾಡ	ಸೌರಾಷ್ಟ್ರ
ಬಿಕಾನೇರ,	ರಾಜಸ್ಥಾನ
ಪತಿಯಾಲಾ ಇತ್ಯಾದಿ ಗುಂಪು	ಪೆಪ್ಸು (PEPSU) (Patiala and Eastern Punjab States Union)

—: ಸಿರಿಗನ್ನಡಂ ಗೆಲ್ಗೆ :—

ಅನುಕರಣವು ವಿಕಾಸಕ್ಕೆ ಪೋಷಕವೂ, ಪ್ರತಿಬಂಧಕವೂ ಆಗಿದೆ

ಬರೆದವರು: ಶ್ರೀ ಎಮ್. ಕೆ. ಮಣ್ಣೂರ, ಶಿಕ್ಷಕರು ಹಾಲಕೆರೆ (ರೋಣ)

ಮನುಷ್ಯನಲ್ಲಿ ಸಹಜ ಪ್ರವೃತ್ತಿಗಳಲ್ಲದೆ ಕೆಲ ಸಾಮಾನ್ಯ ವೃತ್ತಿಗಳೂ ಉಂಟು. ಅವೆಲ್ಲವುಗಳು ತಮ್ಮದೇ ಆದ ರೀತಿಯಲ್ಲಿ ವಿಕಾಸವಾಗುತ್ತ ಹೋಗುತ್ತವೆ. ಆದರೆ ಎಲ್ಲವೂ ಉದಾತ್ತೀಕರಣ ಮಾರ್ಗದಲ್ಲಿಯೇ ಬರುತ್ತವೆಂದು ಹೇಳಲಿಕ್ಕಾಗದು. ಈಗ ಸಾಮಾನ್ಯವಾಗಿ ಅನುಕರಣ ವೃತ್ತಿಯ ಬಗೆಗೆ ವಿಚಾರಿಸುವ.

ಅನುಕರಣ ವೃತ್ತಿಯು ಮಕ್ಕಳಿಂದ ಪ್ರೌಢರ ವರೆಗೆ ಹೊಂದಿಕೊಂಡು ಬಂದುದು. ಪ್ರೌಢರಿಗೆ ಮಾತ್ರ ಅದರ ಹಿತಾಹಿತಗಳ ಬಗ್ಗೆ ಸಾಕಷ್ಟು ಜ್ಞಾನ ಇರುತ್ತದೆ. ಅದರಿಂದ ಅವರು ತಮ್ಮ ವಿಕಾಸಕ್ಕೆ ಪೋಷಕವಾಗಿ ಪರಿಣಮಿಸಿ ಕೊಳ್ಳಬಹುದು, ಪ್ರತಿಬಂಧಕವಾಗುವಂತಿದ್ದರೆ ಬಿಟ್ಟುಕೊಡಬಹುದು. ಆದರೆ ಮಕ್ಕಳು ಮಾತ್ರ ಹಾಗಲ್ಲ. ಅದರ ಪರಿಪೋಷಕತೆ, ಪ್ರಬಂಧಕತೆಗಳ

ಬಗೆಗೆ ಸಾಕಷ್ಟು ಜ್ಞಾನವು ಅವರಲ್ಲಿ ಬೆಳೆದು ಬಂದಿರಲಾರದು. ಮಕ್ಕಳಲ್ಲಿ ಮಾತ್ರ ಅನುಕರಣ ವೃತ್ತಿಯು ಅಧಿಕವಾಗಿರುತ್ತದೆ. ಇದು ಅವರ ವಿಕಾಸಕ್ಕೆ ಹೇಗೆ ತಳಹದಿಯಾಗುತ್ತದೆಂಬುದನ್ನು ಮೊದಲು ವಿಚಾರಿಸೋಣ.

ಮಕ್ಕಳು ತಾವು ನೋಡಿದ್ದು, ಕೇಳಿದ್ದು, ಮಾಡಿದ್ದನ್ನು ಮಾಡಲು ಯತ್ನಿಸುತ್ತಾರೆ. ಇದಕ್ಕೆ ಯಾವುದಾದರೊಂದು ಮೂಲ ಪ್ರವೃತ್ತಿಯು ಕಾರಣವಾಗಿರಬಹುದು. ತನಗೆ ಪರಿಣಾಮಕಾರಿಯಾದ ಸನ್ನಿವೇಶಗಳನ್ನು ತಾನೂ ಅನುಕರಿಸಲು ಹಾತೊರೆಯುವದು ಅವನ ಸ್ವಭಾವ. ಈಗ ಮನೆಯಲ್ಲಿ ಒಂದೆರಡು ವರ್ಷದ ಮಕ್ಕಳನ್ನು ನೋಡಿದಾಗ— ಉಚ್ಚರಿಸಿದಂತೆ ಉಚ್ಚರಿಸುವದು, ಹೊಡೆದಂತೆ ಹೊಡೆಯುವದು, ತಿಂಬುಂಬುವ ಉಡುತೊಡುವ, ಮುಂತಾದ ಸಂದರ್ಭಗಳಲ್ಲಿಯೂ ಮಕ್ಕಳು ಅನುಕರಣ ಮಾಡುತ್ತಾರೆಂಬುದು ಪ್ರತಿಯೊಬ್ಬ ತಂದೆ-ತಾಯಿಗಳಿಗೆ ತಿಳಿದ ವಿಷಯವಾಗಿದೆ ಎಂದಬಳಿಕ ತಾಯಿ-ತಂದೆಗಳು ತಮ್ಮ ಆಚಾರ–ವಿಚಾರ, ನಡೆನುಡಿ, ಸಹಾನುಭೂತಿ, ಕರ್ತೃಗೌರವ, ಸತತೋದ್ಯೋಗಗಳಲ್ಲಿ ಕುಶಲರಾಗಿದ್ದರೆ ಮಕ್ಕಳೂ ಅನುಕರಣದಿಂದ ಹಾಗೆ ತಮ್ಮ ವಿಕಾಸವನ್ನು ಮಾಡಿಕೊಳ್ಳುತ್ತ ಹೋಗುವರು. ಇಲ್ಲಿ ಪಾಲಕರು ಮಕ್ಕಳ ಪರಮಪ್ರಿಯ ಗುರುಗಳು. ಪಾಲಕರೇ ಮಕ್ಕಳ ಭವಿತವ್ಯವನ್ನು ಬಹುಮಟ್ಟಿಗೆ ರೂಪಿಸುವವರೆಂದರೆ ತಪ್ಪಾಗಲಿಕ್ಕಿಲ್ಲ. ತಾನು ಒಳ್ಳೆಯುವನಾದರೆ ಜಗತ್ತೂ ಒಳ್ಳೆಯದು. ತಾನು ಸುಶೀಲನಾಗಿದ್ದರೆ ಮಕ್ಕಳೂ ಸುಶೀಲರು. ಇದಕ್ಕೆ ಅಪವಾದಗಳು ಇರಬಹುದು ಅದಕ್ಕೆ ಅನೇಕ ಪ್ರವೃತ್ತಿಗಳ ಉದಾತ್ತ ಅನುದಾತ್ತೀಕರಣವೋ ಪರಿಸ್ಥಿತಿಯೋ ಕಾರಣವಾಗಿರಬಹುದು. ಅವಿದ್ಯಾವಂತ ತಂದೆಯಿಂದ ಬುದ್ಧಿವಂತ ಮಕ್ಕಳು ಹುಟ್ಟುತ್ತಾರೆ. ಇದಕ್ಕೆ ಪರಿಸ್ಥಿತಿಯಾಗಲಿ ಸಮಾಜವಾಗಲಿ ಕಾರಣವಾಗಿರಬೇಕು. ಆದರೂ ಇಲ್ಲಿ ಅನುಕರಣ ವೃತ್ತಿಯ ಪ್ರಭಾವವು ತನ್ನ ಬೆಳಕನ್ನು ಬೀರದೆ ಬಿಟ್ಟಿಲ್ಲ. ಅನುಕರಣ ವೃತ್ತಿಯೇ ಅವನನ್ನು ವಿಕಾಸದ ಮಾರ್ಗದಲ್ಲಿ ತಂದಿರಬೇಕು.

ಇನ್ನು ಮಕ್ಕಳು ದೊಡ್ಡವರಾಗುತ್ತ ಹೋದಂತೆ ಶಾಲೆಯೂ ಒಂದು ಅವರ ಅನುಕರಣ ವೃತ್ತಿಯನ್ನು ಸರಿಯಾದ ದಾರಿಯಲ್ಲಿ ತರಲು ಸಹಾಯವಾಗುವದು. ಮಕ್ಕಳು ಸಾಲೆಗೆ ಬಂದಿದ್ದ ತಮ್ಮ ವರ್ಗದ ಶಿಕ್ಷರ ಮತ್ತು ಓರಿಗೆಯವರ ಆಚಾರ–ವಿಚಾರಗಳನ್ನು ಅನುಕರಿಸುತ್ತಾರೆ. ಇಲ್ಲಿ ಮಕ್ಕಳ ಅನುಕರಣವೃತ್ತಿಯನ್ನೂ, ನೈತಿಕ ಮಟ್ಟವನ್ನೂ ಬೆಳೆಯಿಸಲು ತುಂಬ ಅವಕಾಶವಿದೆ. ಶಿಕ್ಷಕನು ಮೊದಲು ತಾನು ಕಾಯಾ, ವಾಚಾ, ಮನಸಾ ಪರಿಶುದ್ಧನಿದ್ದು ವರ್ಗದಲ್ಲಿಯೂ ಆ ತೆರನಾದ ವಾತಾವರಣವನ್ನು ಹುಟ್ಟಿಸಿದ್ದಾದರೆ ಮಕ್ಕಳೂ ಅವನನ್ನು ಹಿಂಬಾಲಿಸುವರು. ತನ್ನ ಸಾಲೆಯಲ್ಲಿ ಪಂಡಿತರ ವ್ಯಾಖ್ಯಾನ, ನೃತ್ಯ, ಆಟಗಳು, ವಿವಿಧ ಕೈಗಾರಿಕೆಗಳ ಕಲಾಪ್ರದರ್ಶನ ಮೊದಲಾದ ಸಂಗತಿಗಳ ಏರ್ಪಾಡಿನಿಂದ ಅವರೂ ಅನುಕರಣದಿಂದ ಪ್ರತಿಷ್ಠೆಯನ್ನು ಹೊಂದಲು ಯತ್ನಿಸುವರು. ಇಲ್ಲಿ ಶಿಕ್ಷಕನು ಅವರ ಅನುಕರಣ ವೃತ್ತಿಗೆ ಗೌರವವನ್ನು ಕೊಟ್ಟು ಅದರ ತತ್ವಗಳನ್ನು ಪ್ರತಿಪಾದಿಸಬೇಕು. ಅಂದರೆ ತಮ್ಮ ವಿಕಾಸವನ್ನು ಮಾಡಿಕೊಳ್ಳಲು ಅನುವಾಗುವದು. ಅನುಕರಣವೆಂದಲ್ಲಿ ನೋಡಿ, ಕೇಳಿ, ಮಾಡಿ ಕಲಿಯುತ್ತಿರುವದರಿಂದ ಅದು ಹೆಚ್ಚು ಪರಿಣಾಮಕಾರಿಯಾಗಿ ಪರಿಣಮಿಸುವದು. ಆದಷ್ಟು ಹೆಚ್ಚು ಇಂದ್ರಿಯಗಳ ಮುಖಾಂತರ ಕೊಟ್ಟ ಜ್ಞಾನವು ಹೆಚ್ಚು ಸ್ಥಿರವಾಗಿ ನಿಲ್ಲುವದೆಂಬುದನ್ನು ಕಂಡದ್ದಾಗಿದೆ. ಅನುಕರಣದಲ್ಲಿ ಈ ಮೂರು ತತ್ವಗಳು ಅಡಕವಾಗಿರುವದರಿಂದ ಅದು ಮಕ್ಕಳ ವಿಕಾಸಕ್ಕೆ ಪೋಷಕವಾಗಿದೆ. ಇದರ ಇನ್ನೊಂದು ಬದಿಯಿಂದ ನೋಡಿದರೆ ಪ್ರತಿಬಂಧಕವಾಗಿಯೂ ಪರಿಣಮಿಸುವದು.

ಮಕ್ಕಳು ತಮ್ಮದೇ ಆದ ರೀತಿಯಲ್ಲಿ ಈ ಅನುಕರಣ ವೃತ್ತಿಯನ್ನು ಬೆಳೆಯಿಸಿಕೊಂಡದ್ದಾದರೆ ವಿಶೇಷ ಹಾನಿ ತಟ್ಟುವ ಸಂಭವವೂ ಉಂಟು. ಯಾಕೆಂದರೆ ತಾವು ಮಾಡುವ ಅನುಕರಣವೆಲ್ಲವೂ ಸರಿಯಾಗಿರುವದೆಂಬೇ ಅವರ ತಿಳುವಳಿಕೆ. ಅವರ ಹಿತಾಹಿತಗಳ ಬಗ್ಗೆ ಸಾಕಷ್ಟು ಜ್ಞಾನವು ಅವರಲ್ಲಿ ಬೆಳೆದು ಬಂದಿರುವದಿಲ್ಲ. ಇದರಿಂದ ಎಷ್ಟೋ ಬಾಲಕರು ಬೀಡಿ ಸೇದುವದು, ಚಹ ಕುಡಿಯುವದು, ಅವಾಚ್ಯ ಶಬ್ದಗಳನ್ನಾಡುವದು, ಉಪ್ಪುಪಿಗಾಗಿ ಹೇರಳ ಹಣವನ್ನು ವೆಚ್ಚ ಮಾಡುವದು, ಕಿವುಡರ, ಕುಂಟರ, ತೊದಲು ಮಾತಾಡುವವರ ಅನುಕರಣ ಮಾಡುತ್ತ ಹೋಗಿ ತಾವೂ ಅವರಂತೆ ಆಗಿದ್ದಾರೆಂಬು

ದನ್ನು ವ್ಯವಹಾರದಲ್ಲಿ ಕಂಡದ್ದಾಗಿದೆ. ಇದನ್ನು ಹಾಗೆಯೇ ಬೆಳೆಯಗೊಟ್ಟರೆ ಎಷ್ಟೋ ಪ್ರವೃತ್ತಿಗಳು ಸುಪ್ತಾವಸ್ಥೆಯಲ್ಲಿಯೇ ಉಳಿದುಕೊಂಡು ಬಿಡುವವು. ಅವರ ಆಚಾರ-ವಿಚಾರಗಳೂ ನೈತಿಕಮಟ್ಟವೂ ಕುಗ್ಗುವವು ಒಂದು ವೇಳೆ ಕೆಲ ಸನ್ನಿವೇಶದಲ್ಲಿ ಉದಾತ್ತ ವಿಚಾರಗಳು ಹೊಳೆದರೂ ಅದರ ಕಡೆಗೆ ಗಮನವನ್ನು ಕೊಡದೆ ತಮ್ಮ ಸ್ವೇಚ್ಛಾಚಾರವೃತ್ತಿಯನ್ನೇ ಮುಂದು ಮಾಡಿ ಪ್ರಪಂಚದಲ್ಲಿ ಅನೇಕ ಸಂಕಟಗಳಿಗೆ ಗುರಿಯಾಗುವರು. ಯಾಕಂದರೆ ಅನುಕರಣದ ಅನುದಾತ್ತೀಕರಣದ ಪ್ರಭಾವವು ಮಕ್ಕಳ ಸಹಜ ಪ್ರವೃತ್ತಿಗಳ ಮೇಲಾಗಿ ದುರ್ಮಾರ್ಗದತ್ತ ಮನಸ್ಸು ಹಾಕುವರು. ಹೀಗಾಗಿ ಮಕ್ಕಳ ವಿಕಾಸಕ್ಕೆ ಹಾನಿ ತಟ್ಟುವ ಸಂಭವವುಂಟು.

ಆದ್ದರಿಂದ ಮಕ್ಕಳ ವಿಕಾಸಕ್ಕೆ ಪ್ರತಿಬಂಧಕವಾಗುವ ಅನುಕರಣ ವೃತ್ತಿಯನ್ನು ತೊಡೆದು ಹಾಕಲಿಕ್ಕೆ ಮುಖ್ಯವಾಗಿ ತಾಯಿ-ತಂದೆಗಳು, ಶಿಕ್ಷಕರು ಯತ್ನಿಸಬೇಕಾಗುತ್ತದೆ. ತಾವು ಮಕ್ಕಳ ಒಳ್ಳೆಯ ಅನುಕರಣಗಳನ್ನು ಪೋಷಿಸಬೇಕು. ಅಲ್ಲದವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವನ ಕೋಮಲವಾದ ಮನಸ್ಸಿನ ಮೇಲೆ ಯಾವ ಪರಿಣಾಮವಾಗದಂತೆ ದಕ್ಷತೆ ವಹಿಸಿ ತೊಡೆದು ಹಾಕಬೇಕು. ಅನುಕರಣ ವೃತ್ತಿಯನ್ನೇ ಕಿತ್ತು ಹಾಕಲು ಮಾತ್ರ ಬರುವದಿಲ್ಲ; ಉದಾತ್ತೀಕರಣದತ್ತ ಮಾತ್ರ ಬೆಳೆಯಿಸಲು ಸಾಧ್ಯವಿದೆ. ಪಾಲಕರೂ ಶಿಕ್ಷಕರೂ ತಮ್ಮ ಸಾದಾ ಹಾಗು ಸರಳ ಜೀವನವನ್ನು ಅವರ ಗಮನಕ್ಕೆ ತಂದುಕೊಟ್ಟು ಅನುಕರಣವೃತ್ತಿಯ ಅನುದಾತ್ತೀಕರಣ ರೀತಿಯನ್ನು ಪ್ರತಿಬಂಧಿಸಲು ಅನುಕೂಲ ಮಾಡಿಕೊಡಬೇಕು- ಅಂದರೆ ಅವನ ಸರ್ವಾಂಗೀಣ ಉನ್ನತಿಗೆ ಪೋಷಕವಾಗಿ ಪರಿಣಮಿಸುವದು.

ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿ ವರ್ಗ, ಧಾರವಾಡ

ವರದಿ

ನಮ್ಮ ಸ. ಶಿ. ಕಾರ್ಯಕರ್ತರ ತರಬೇತಿ ವರ್ಗಗಳು ದಿ. ೧೫-೫-೫೪ರ ರಂದು ಧಾರವಾಡ ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ. ಎಮ್. ಪಿ. ಜಾಲಿಯವರ ಪ್ರಾಸ್ತಾವಿಕ ಭಾಷಣದೊಂದಿಗೆ ಪ್ರಾರಂಭವಾದವು. ಅಂದಿನಿಂದ ಇಲ್ಲಿಯವರೆಗೆ ಮೆ|| ಪ್ರಿನ್ಸಿಪಾಲಸಾಹೇಬರ ಹಾಗೂ ಮೆ|| ಡೆ.ಎ. ಇ. ಸಾ. ರವರ ನೇತೃತ್ವದಲ್ಲಿ ಅವುಗಳ ಕೆಲಸ ಒಳ್ಳೇ ಯಶಸ್ವಿಯಾಗಿ ನಡೆಯುತ್ತ ಬಂದಿದೆಯೆಂದು ತಿಳಿಸಲು ಸಂತೋಷವಾಗುತ್ತದೆ. ಈ ತರಬೇತಿಗೆ ಒಟ್ಟು ೬೨ ಜನ ಶಿಕ್ಷಕರೂ ೬ ಜನ ಶಿಕ್ಷಕಿಯರೂ ಬಂದಿದ್ದು ಅವರನ್ನು ಅ ಹಾಗೂ ಬ ವರ್ಗಗಳಲ್ಲಿ ವಿಭಾಗಿಸಲಾಗಿತ್ತು. ಪ್ರತಿಯೊಂದು ವರ್ಗದಲ್ಲಿ ೩೪ ಜನರಿದ್ದರು. ಅ ವರ್ಗಕ್ಕೆ ಶ್ರೀ. ಕೆ. ಎಸ್. ಕುಲಕರ್ಣಿ ಅ. ಡೆ ಎ. ಇ. ಹಾಗೂ ಶ್ರೀ. ಶಿವನಾಗಪ್ಪ ಹಳ್ಳಿಕೇರಿ, ಅ. ಮಾ. ಗಂ. ಟ್ರೇ. ಕಾಲೇಜ ಧಾರವಾಡ ಇವರನ್ನೂ ಬ ವರ್ಗಕ್ಕೆ ಶ್ರೀ|| ಎಸ್. ಬಿ. ಪಾಟೀಲ. ಅ. ಮಾ. ಗಂ. ಟ್ರೇ. ಕಾಲೇಜ ಧಾರವಾಡ ಹಾಗೂ ಶ್ರೀ|| ಈ. ಆರ್. ರಾಪೂತ ಅ. ಡೆ. ಎ. ಇ. ಧಾರವಾಡ ಇವರನ್ನೂ ಸಂಚಾಲಕರನ್ನಾಗಿ ನೇಮಿಸಲಾಗಿತ್ತು. ತರಬೇತಿ ವರ್ಗದ ಕಾರ್ಯನಿರ್ವಹಣಕ್ಕಾಗಿ ಸ ಶಿ. ಕಾರ್ಯಕರ್ತರಲ್ಲಿ ಮುಖ್ಯ ಮಂತ್ರಿ,

ಗೃಹಮಂತ್ರಿ, ವರ್ಗದ ಮಂತ್ರಿ ಹಾಗೂ ಸಾಂಸ್ಕೃತಿಕ ಮಂತ್ರಿ ಎಂದು ಆಯಾ ಕೆಲಸಮಾಡುವವರು ಖ್ಯಸ್ಥರನ್ನು ಆರಿಸಿ ಅವರ ಮುಖಾಂತರ ವರ್ಗದ ಎಲ್ಲ ಕೆಸಲಗಳನ್ನು ಸಾಗಿಸಲಾಯಿತು. ತರಬೇತಿಗೆ ಬಂದ ಜನರ ಊಟ-ಕ್ಕಾಗಿ ಇಲ್ಲಿಯೇ ಬೋರ್ಡಿಂಗನ್ನು ಪ್ರಾರಂಭಿಸಬೇಕೆಂಬ ಯೋಜನೆ ಮಾಡಲಾಯಿತಾದರೂ ಅವಧಿ ಸ್ವಲ್ಪೇ ಇದ್ದುದರಿಂದ ಖರ್ಚಿನಭಾಗ ಖಾನಾವಳಿಗಿಂತಲೂ ಹೆಚ್ಚಿಗೆ ಬರುವ ಅಂದಾಜು ಕಂಡು ಬಂದದ್ದರಿಂದ ಉಪಾಯವಿಲ್ಲದೆ ಆಯೋಜನೆಯನ್ನು ಬಿಟ್ಟು ಕೊಡಲಾಯಿತು. ತರಬೇತಿಯ ಅವಧಿಯಲ್ಲಿ ಅಭ್ಯಸಿಸಬೇಕಾದ ಅಭ್ಯಾಸ ಪತ್ರಿಕೆಯನ್ನು ಕಣ್ಣೆದುರಿನಲ್ಲಿಟ್ಟು-ಕೊಂಡು ಆ ದಿಶೆಯಲ್ಲಿ ತರಬೇತಿಯ ಯೋಜನೆಯನ್ನು ಮುಂದಾಗಿಯೇ ಯೋಜಿಸಲಾಯಿತು. ಮೇಲ್ವಿಚಾರಕರ ಸಲಹೆಯ ಮೇರೆಗೆ ಸ. ಶಿ. ಕಾರ್ಯಕರ್ತರೊಡನೆ ವಿಚಾರ-ವಿನಿಮಯ ಮಾಡಿಕೊಂಡು ಭಾಷಣಕಾರರ ಚರ್ಚಿಸುವ ವಿಷಯಗಳ ಹಾಗೂ ಸಂದರ್ಶಿಸುವ ಸ್ಥಳಗಳ ಯಾದಿಯನ್ನು ತಯಾರಿಸಿ ಮೊದಲೇ ಕಾರ್ಯಕ್ರಮ ಗೊತ್ತು ಪಡಿಸಿ ಪ್ರತಿದಿನ ಅದರಂತೆಯೇ ಕಾರ್ಯಕ್ರಮಗಳನ್ನೇ ಪೂರೈಸಲಾಗುತ್ತಿತ್ತು. ವರ್ಗಗಳ ದೈನಂದಿನ ಕಾರ್ಯಕ್ರಮ ಈ ಪ್ರಕಾರವಾಗಿತ್ತು.

ಮುಂಜಾನೆ

೮ ರಿಂದ ೮—೨೦ ಪ್ರಾರ್ಥನೆ, ಅಮೃತವಾಣಿ, ಪಂಚಾಂಗ ಪಠಣ, ಸುದ್ದಿಗಳ ಬಿತ್ತರಣೆ ಇತ್ಯಾದಿ.

೮–೨೦ ರಿಂದ ೯–೨೦ ನೂಲುವದು, ಕೈಕೆಲಸ, ಕಾಗದದ ಕೆಲಸ ಇತ್ಯಾದಿ.

೯–೨೦ ರಿಂದ ೯–೩೦ ವಿಶ್ರಾಂತಿ

೯–೩೦ ರಿಂದ ೧೦–೪೦ ವಿಷಯಗಳ ಚರ್ಚೆ

ಮಧ್ಯಾಹ್ನ

೩ ರಿಂದ ೪ ಪಟಗಳ, ಜಾಹೀರಾತುಗಳ, ಹಾಗೂ ಶೈಕ್ಷಣಿಕ ಉಪಕರಣಗಳ ತಯಾರಿ

೪ ರಿಂದ ೫–೩೦ ವಿಷಯಗಳ ಚರ್ಚೆ

೫–೩೦ ರಿಂದ ೬ ವಿಶ್ರಾಂತಿ

೬ ರಿಂದ ೭ ಮನರಂಜನೆ, ಪಾಠಗಳ ಬಗ್ಗೆ ಚರ್ಚೆ ಮಾದರೀ ಪಾಠ, ಫಿಲ್ಮುಗಳ ಪ್ರದರ್ಶನ ಇತ್ಯಾದಿ. ಅಂತು ಒಟ್ಟು ಪ್ರತಿದಿನ ೬ ತಾಸುಗಳ ವರೆಗೆ ವರ್ಗಗಳ ಕೆಲಸ ಅವ್ಯಾಹತವಾಗಿ ಸಾಗುತ್ತಿತ್ತು.

ಹಳ್ಳಿಯ ಜನರನ್ನು ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಸಲು ಆಯಾ ಹಬ್ಬ, ಉತ್ಸವಗಳಲ್ಲಿ ಭಾಗ ವಹಿಸಲು, ಹಾಗೂ ಶೈಕ್ಷಣಿಕ ಉಪಕರಣಗಳನ್ನು ತಯಾರಿಸಲು ಅನುಕೂಲವಾಗಲೆಂದು ಒಂದು ಅವಧಿಯನ್ನು ಕೈಕೆಲಸ, ಕಾಗದದ ಕೆಲಸ, ಹಾಗೂ ನೂಲುವದು ಇವುಗಳಿಗಾಗಿ ಮೀಸಲಾಗಿಟ್ಟಿತ್ತು. ಈ ಕೆಲಸವನ್ನು ಸಂಪೂರ್ಣ ವರ್ಗದ ಸಂಚಾಲಕರೇ ನೋಡಿಕೊಳ್ಳುತ್ತಿದ್ದರು. ವಿಷಯಗಳ ಚರ್ಚೆಗಾಗಿ ಇಟ್ಟುಕೊಂಡ ಅವಧಿಗಳಲ್ಲಿ ಅನೇಕ ಶಿಕ್ಷಣ ಪ್ರೇಮಿಗಳನ್ನೂ ಶಿಕ್ಷಣ ತಜ್ಞರನ್ನೂ ಹಾಗೂ ಶಿಕ್ಷಣಾಧಿಕಾರಿಗಳನೂ ಸಮಾಜ ಶಿಕ್ಷಣದ ಬೇರೆ ಬೇರೆ ಅಂಗಗಳ ಬಗ್ಗೆ ಮಾತನಾಡಲು ಆಮಂತ್ರಿಸಲಾಗಿತ್ತು. ಕೆಳಗಿನ ಮಹನೀಯರು ಇಲ್ಲಿಗೆ ಬಂದು ತಮಗೆ ಕೊಟ್ಟ ವಿಷಯದ ಮೇಲೆ ಉಪನ್ಯಾಸಕೊಟ್ಟು ಸ. ಶಿ. ಕಾರ್ಯಕರ್ತರಿಗೆ ಉಪದೇಶಪರ ಮಾತುಗಳನ್ನು ಹೇಳಿ ನಮಗೆಲ್ಲ ಒಂದು ಬಗೆಯ ಮಹದುಪಕಾರವನ್ನು ಮಾಡಿದ್ದಾರೆ—

೧ ಶ್ರೀ. ಕೆ. ಬಿ. ತೇರಗಾಂವಕರ, E. I. Dharwar

೨ ಶ್ರೀ. ಆರ್. ಕೆ. ಮೆಣಸಿ, Secretory & S.E. officer, Belgaum

೩ ಶ್ರೀ. ಎಂ. ಜಿ. ಹಂದ್ರಾಳ, Principal G. B. T. C. Dharwar

೪ ಶ್ರೀ. ಎಚ್. ಎಂ. ಕಾಳೆ, ಎ.ಓ.ಡಿ.ಎಸ್. ಜಿ ಧಾರವಾಡ

೫ ಶ್ರೀಮತಿ ಲೀಲಾವತಿ ಮಾಗಡಿ, ಹುಬ್ಬಳ್ಳಿ ಸಮಾಜ ಶಿಕ್ಷಣ ಸಮಿತಿ ಮೆಂಬರರು

೬ ಶ್ರೀ. ಆರ್. ಕೆ. ಲಕ್ಕುಂಡಿ ರಿಟಾಯರ್ಡ ಪ್ರಿನ್ಸಿಪಾಲ T. C. M. Dharwar

೭ ಶ್ರೀ. ಬಿ. ಎಂ ಶಿಂತ್ರೆ, ರಿಟಾಯರ್ಡ A. E. I. Dharwar

೮ ಶ್ರೀ. ಬಿಂದು ಮಾಧವ ಬುರ್ಲಿ,
ಸಂಪಾದಕ ಮಿಂಚಿನಬಳ್ಳಿ ಧಾರವಾಡ

೯ ಶ್ರೀ. ಎಸ್. ಎಸ್. ಹುಕ್ಕೇರಿ,
Teacher, G. B. T. C. Dharwar

೧೦ ಶ್ರೀ. ಎಸ್.ಬಿ. ಪಾಟೀಲ, ರಾಷ್ಟ್ರೀಯ ವಿಸ್ತರಣ ಕೇಂದ್ರ ಧಾರವಾಡ

೧೧ ಶ್ರೀ. ಜಿ. ಎಂ. ಪಾಟೀಲ, Asst curator of Libraries

೧೨ ಶ್ರೀ. ವ್ಹಿ. ಜೆ. ಡೆವ್ಹಿಡ್, ಡೆ. ಎ. ಇ. ಧಾರವಾಡ

೧೩ ಶ್ರೀ. ಎಸ್. ಬಿ. ಗಜೇಂದ್ರಗಡ, ಹುಬ್ಬಳ್ಳಿ

೧೪ ಶ್ರೀಮತಿ ಶಕುಂಲಾಬಾಯಿ ಚನ್ನಪಟ್ಟಣ
L. S. T. C. W. Dharwar

೧೫ ಶ್ರೀಮತಿ ಕವಾಲ ಅ.ಎ.ಎ ಇ. Dharwar

೧೬ ಶ್ರೀ. ಗೋವರ್ಧನರಾವ ಗಲಗಲಿ. ,,

೧೭ ಶ್ರೀ. ಹುಕ್ಕೇರಿ ಬಾಳಪ್ಪನವರು.

೧೮ ಶ್ರೀ. ಎನ್. ಜಿ. ರಾಯಣ್ಣವರ,
A.D.E.I. Dharwar

ಮೇಲೆ ಕಾಣಿಸಿದ ಮಹನಿಯರು ಬಹುಮುಖವಾದ ಸ. ಶಿ. ದ ಬೇರೆ ಬೇರೆ ಅಂಗಗಳ ಬಗ್ಗೆ ಸ. ಶಿ. ದ ನಿಜ ಸ್ವರೂಪವನ್ನು ತಿಳಿಸಿಕೊಟ್ಟರಲ್ಲದೆ. ಸ. ಶಿ. ಕಾರ್ಯ ಕರ್ತರ ಹೊಣೆಗಾರಿಕೆಯ ಅರಿವನ್ನು ಅವರಿಗೆ ಮಾಡಿ ಕೊಟ್ಟಿದ್ದಾರೆ. ಈ ಪ್ರಕಾರ ಭಾರವನ್ನು ಕಡಿಮೆಮಾಡಿದ್ದಕ್ಕಾಗಿ ಸಂಚಾಲಕರಾದ ನಾವು ತುಂಬಾ ಋಣಿಯಾಗಿದ್ದೇವೆಂದು ತಿಳಿಸಬಯುಸುತ್ತೇನೆ.

ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ ನಮ್ಮ ಮೇಲ್ವಿಚಾರಕರೂ ಆದ ಶ್ರೀ ಜಾಲಿಯವರಿಗೆ ವರ್ಗವಾದ ನಿಮಿತ್ತ ಸ.ಶಿ. ವರ್ಗದ ಪರವಾಗಿ ಧಾರವಾಡ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ ಶ್ರೀ. ಕೆ. ಬಿ. ತೀರ-ಗಾಂವಕರ ಇವರ ಅಧ್ಯಕ್ಷತೆಯಲ್ಲಿ ಅವರಿಗೆ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಲಾಯಿತು ಮತ್ತು ಶ್ರೀ. ಜಾಲಿಯವರ ಗುಣಗಳನ್ನು ಕುರಿತು ಅನೇಕರು ಸಮಯೋಚಿತ ಮಾತುಗಳನ್ನಾಡಿದರು.

ಈ ತರಬೇತಿಯ ಅವಧಿಯಲ್ಲಿ ಧಾರವಾಡ ಆಕಾಶವಾಣಿ ಕೇಂದ್ರ, ರಾಷ್ಟ್ರೀಯ ವಿಸ್ತರಣಾ ಕೇಂದ್ರ, ಕೃಷಿ ಮಹಾವಿದ್ಯಾಲಯ ಮುಂತಾದ ಸಂಸ್ಥೆಗಳಿಗೆ ಸಂದರ್ಶನವೀಯಲಾಯಿತು. ಆಯಾ ಸಂಸ್ಥೆಗಳ ವಿಷಯವಾಗಿ ಯಾವತ್ತು ಮಾಹಿತಿಯನ್ನು ತಿಳಿಸಿ ಸಂಸ್ಥೆಯ ಬೇರೆ ಬೇರೆ ವಿಭಾಗಗಳನ್ನು ತೋರಿಸಿ ಹೆಚ್ಚಿನ ಮಾಹಿತಿಯನ್ನು ನಮ್ಮೆಲ್ಲರಿಗೆ ಮಾಡಿಕೊಡಲು ವ್ಯವಸ್ಥೆ ಮಾಡಿದ ಅಧಿಕಾರಿಗಳ ಉಪಕಾರವನ್ನು ನಾವು ಸ್ಮರಿಸದೆ ಇರಲಾರೆವು.

ಇದಲ್ಲದೆ ಈ ಅವಧಿಯಲ್ಲಿ ಪ್ರೌಢರಿಗೆ ಕೆಲವೊಂದು ಪಟಗಳನ್ನು-ಬುದ್ಧಿ ಮಾತುಗಳನ್ನು ಸೂಚಿಸುವ ಹಲವಾರು ಪಟಗಳನ್ನು-ಬರೆಯಿಸಿ ಯೋಗ್ಯ ಉಪಕರಣಗಳ ಸಂಗ್ರಹವನ್ನು ಮಾಡಿಕೊಡಲಾಗಿತ್ತು. ನಿರಕ್ಷರಿ ಪ್ರೌಢರಿಗಾಗಿ ಒಂದೆರಡು ಮಾದರಿಯ ಪಾಠಗಳನ್ನು ಕೊಟ್ಟು ಆ ದಿಶೆಯಲ್ಲಿ ಮಾರ್ಗದರ್ಶನ ಮಾಡಿ ಪ್ರೌಢರಿಗೆ ಓದುಬರಹ ಕಲಿಸುವ ಕ್ರಮವನ್ನು ತೋರಿಸಿ ಕೊಡಲಾಗಿದೆ.

ಶಿಕ್ಷಕ ವೃಂದದಲ್ಲಿ ಕೆಲವೊಂದು ರಸಿಕರಿಂದ ವಿವಿಧ ವಿನೋದಾವಳಿಗಳ ಕಾರ್ಯಕ್ರಮವನ್ನು ಏರ್ಪಡಿಸಿ ಸ. ಶಿ. ವರ್ಗದಲ್ಲಿ ಮನರಂಜನೆಯ ಮಹತ್ವದ ಕಲ್ಪನೆಯನ್ನು ತಂದು ಕೊಡಲಾಯಿತು. ಅಲ್ಲದೆ ಜಗತ್ತಿನಲ್ಲಿ ಮುಂದುವರಿದ ಪಟ್ಟಣಗಳ ಔದ್ಯೋಗಿಕ ಪ್ರಗತಿಯನ್ನು ಸಾಧಿಸಿದ ದೇಶಗಳ ಆರೋಗ್ಯ ಪಶುಸಂಗೋಪನ ಮುಂತಾದ ವಿಷಯಗಳ ಬಗ್ಗೆ ಮ್ಯಾಜಿಕ ಲ್ಯಾಂಟರ್ನದ ಮೂಲಕ ಹೆಚ್ಚಿನ ಜ್ಞಾನವನ್ನು ಮಾಡಿಕೊಡಲಾಯಿತು.

ಒಟ್ಟಿನಲ್ಲಿ ವರ್ಗದ ಕಾರ್ಯಕಲಾಪಗಳನ್ನು ೪ ಮುಖ್ಯ ವಿಭಾಗಗಳನ್ನಾಗಿ ಮಾಡಿ ಸ. ಶಿ. ಕಾರ್ಯಕರ್ತರಿಗೆ ಸಾಮಾಜಿಕ ಶಿಕ್ಷಣದ ಸಾಮಾಜಿಕ, ಐತಿಹಾಸಿಕ ಮಾನಸಶಾಸ್ತ್ರೀಯ ಹಾಗೂ ರಾಷ್ಟ್ರೀಯ ತಳಹದಿಯನ್ನು ತಿಳಿಸಿಕೊಡುವದಲ್ಲದೆ ಸ. ಶಿ. ಕಾರ್ಯಕರ್ತರ ಹೊಣೆಗಾರಿಕೆಯನ್ನು ಹಾಗೂ ತಮ್ಮ ಕೆಲಸಗಳನ್ನು ಅವ್ಯಾಹತವಾಗಿ ಹಾಗೂ ಅಖಂಡವಾಗಿ ಹೇಗೆ ಸಾಗಿಸಬೇಕೆಂಬ ಕಲೆಯನ್ನು ತಿಳಿಸಿಕೊಡಲಾಯಿತು. ಈ

.ಶಿ. ತ. ವರ್ಗದ ಕಾರ್ಯಕಲಾಪಗಳು ಯಶಸ್ವಿಯಾಗಿ ನಡೆದುದರ ಶ್ರೇಯಸ್ಸು ಮಾರ್ಗದರ್ಶನ ಮಾಡಿದ ಮೇಲ್ವಿಚಾರಕರಾದ ಮೆ|| ಪ್ರಿನ್ಸಿಪಾಲ ಸಾಹೇಬ ಸ.ಗ. ಶ್ರೀ. ಕಾ. ಧಾರವಾಡ, ಮೆ || ಡೆ. ಎ.ಇ. ಸಾಹೇಬರು ಆಗಾಗ್ಗೆ ಸಂದರ್ಶನವಿತ್ತು ಸಲಹೆ ಸೂಚನೆಗಳನ್ನು ಕೊಟ್ಟ ಮೇ || ಎಜ್ಯುಕೇಶನಲ್ ಇ. ಸಾಹೇಬರು, ಧಾರವಾಡ ಹಾಗೂ ವಿಚಾರ ಪರಿಪ್ಲುತ ಭಾಷಣವನ್ನು ಮಾಡಿದ ಆಮಂತ್ರಿತರಿಗೂ ಉಪನ್ಯಾಸಕರಿಗೂ ಸಲ್ಲುವದೆಂದು ಬೇರೆ ಹೇಳಬೇಕಾಗಿಲ್ಲ. ಆವರೆಲ್ಲರಿಗೂ ನಮ್ಮ ವಂದನೆಗಳನ್ನು ಅರ್ಪಿಸಿ ನನ್ನ ಈ ಚಿಕ್ಕ ವರದಿಯನ್ನು ಮುಗಿಸುತ್ತೇನೆ.

—ಕೆ ಎಸ್. ಕುಲಕರ್ಣಿ

—ಸಂಚಾಲಕರು

ಚಟುವಟಿಕೆಗಳ ವಿಹಂಗಮ ನೋಟ

ಹೆಣ್ಣುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜಿನ ಓರ್ವ ಶಿಕ್ಷಿಕೆ-ವಿದ್ಯಾರ್ಥಿನಿಯ ದಿನಚರಿಯಿಂದ ಆಯ್ದುಕೊಂಡ ಸಂಗತಿಗಳು

೧೫-೬-೧೯೫೩............ನಾನು ಅಕಸ್ಮಾತ್ತಾಗಿ ಈ ಕಾಲೇಜಿಗೆ ಬಂದೆನು. ಮನೆಯಲ್ಲಿ ಅಕ್ಕರೆಯಿಂದ ಬೆಳೆದವಳು. ಇಲ್ಲಿಯ ಜೀವನ ವಿಚಿತ್ರವೆನಿಸುತ್ತಿದೆ. ಹೊಸ ಜೀವನದೊಡನೆ ಹೊಂದಿಕೊಳ್ಳುವದನ್ನು ಕಲಿಯಬೇಕಾಗಿದೆ.

೧೭-೭-೫೩........ಇಂದು ಜರುಗಿದ ಘಟನೆಯನ್ನು ನೋಡಿ ಇಲ್ಲಿ ನಮ್ಮ ಬೇಸರಿಕೆಯನ್ನು ಕಳೆಯುವ ಚಟುವಟಿಕೆಗಳುಂಟೆಂದು ಅನಿಸಿತು. ಇಷ್ಟು ವರುಷ ಈ ಕಾಲೇಜಿನಲ್ಲಿ ನೆಯ್ಗೆಯ ಕೋಣೆಯ ವ್ಯವಸ್ಥೆ ಸರಿಯಾಗಿದ್ದಿಲ್ಲವಂತೆ. ಈ ವರ್ಷ ಹೊಸ ನೇಯಿಗೆ ಮನೆಯ ವ್ಯವಸ್ಥೆಯಾಯಿತು. ನೇಯಿಗೆ ಮನೆಯ ಉದ್ಘಾಟನೆಯಾದದ್ದು ನನಗೆ ಹೆಮ್ಮೆಯ ಮಾತೆನಿಸಿತು. ಉದ್ಘಾಟಕರಾದ ಮಾನ್ಯ ವ್ಹಿ. ಕೆ. ಜವಳಿಯವರು "ಹೆಣ್ಣುಮಕ್ಕಳು ಹಿಂದಿನ ಮಾನ ಮರ್ಯಾದೆಗಳನ್ನು ಕಾಯ್ದುಕೊಂಡು ಹೋಗಬೇಕಾದರೆ ಇಂದು ಅವರು ತಮ್ಮ ಮಕ್ಕಳನ್ನು ಯೋಗ್ಯ ರೀತಿಯಿಂದ ಬೆಳೆಯಿಸಿ ನಮ್ಮ ನಾಡಿನ ಉದ್ಧಾರ ಮಾಡಬೇಕು." ಎಂದು ಹೇಳಿದರು. ಅಂತೂ ಇಂದು ನನ್ನ ಮನಸ್ಸಿನ ಭಾವನೆಗಳು ಬದಲಾದವು.

೩೦-೭-೫೩.....ಇಂದು ವನ ಮಹೋತ್ಸವದ ದಿನ. ಇಲ್ಲಿ ಇನ್ನೂ ಎಲ್ಲರ ಪರಿಚಯ ಸಾಕಷ್ಟು ಇಲ್ಲದ ನನಗೆ ಇದರಿಂದ ಈ ಉತ್ಸವ ಹುರುಪನ್ನು ತಂದು ಕೊಟ್ಟಿತು. ರಾಷ್ಟ್ರೀಯ ವಿಸ್ತರಣಾ ತರಬೇತಿ ಕೇಂದ್ರದ ಪ್ರಿನ್ಸಿಪಾಲರಾದ ಶ್ರೀ. ಬಿ. ಬಿ. ಎಲಿಗಾರ ಅವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಅವರೊಡನೆ ಶ್ರೀ. ಎಸ್. ಬಿ. ಪಾಟೀಲರೂ ಬಂದಿದ್ದರು. ಎಲ್ಲರೂ ಕೂಡಿ ಗಿಡ ನೆಡುವದು ಒಂದು ಮೋಜೆನಿಸಿತು. ಅಧ್ಯಕ್ಷರು "ವನ ಮಹೋತ್ಸವವೆಂದರೇನು? ಮತ್ತು ಅದನ್ನು ಆಚರಿಸುವ ರೀತಿ"ಯ ಬಗ್ಗೆ ಸವಿಸ್ತಾರವಾಗಿ ಹೇಳಿದರು.

೧-೮-೫೩....ಇಂದು ಲೋಕಮಾನ್ಯ ಟಿಳಕರ ಪುಣ್ಯತಿಥಿ ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲ

ರಾಗಿದ್ದ ಶ್ರೀ. ಮ. ಗು. ಹಂದ್ರಾಳರು ಅಧ್ಯಕ್ಷರಾಗಿದ್ದರು. ಇದುವರೆಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದ ನಾನು "ರಾಜಕೀಯ ರಂಗದಲ್ಲಿ ಲೋ. ಟಿಳಕರು" ಎಂಬ ವಿಷಯವಾಗಿ ಮಾತನಾಡಿದೆನು. ನನ್ನ ಗೆಳತಿಯರು ಮತ್ತು ಪ್ರ್ಯಾಕ್ಟಿಸಿಂಗ ಸಾಲೆಯ ಬಾಲಿಕೆಯರು ಹಾಡುಗಳನ್ನು ಹಾಡಿದರು. ಅಧ್ಯಕ್ಷರು ಲೋ. ಟಿಳಕರು ಹಿಂದುಸ್ತಾನದ ಸ್ವರಾಜ್ಯದ ಅಡಿಗಲ್ಲನ್ನು ಹಾಕಿದ ಮಹಾವೀರ ವ್ಯಕ್ತಿ ಎಂದು ಸೋದಾಹರಣವಾಗಿ ಸ್ಪಷ್ಟಪಡಿಸಿದರು. ಇದು ನಿಜವಾಗಿಯೂ ಮಹತ್ವದ ದಿನವೆನ್ನಿಸಿತು.

೨-೮-೫೩.........ಇಂದು ಜಗತ್ತಿನ ಸಾಹಿತಿಗಳಲ್ಲಿ ಹೆಸರು ಪಡೆದ ಕವೀಂದ್ರ ರವೀಂದ್ರರ ಪುಣ್ಯತಿಥಿ. ಈ ಮಹತ್ವದ ದಿನವನ್ನು ನಾವು ಉತ್ಸಾಹದಿಂದ ನೆರವೇರಿಸುತ್ತಿದ್ದೇವೆ. ಈ ಕಾರ್ಯಕ್ರಮವನ್ನು ಸಾಂಗಗೊಳಿಸುವ ಹೊಣೆಯನ್ನು ಶ್ರೀ. ಹಾವೇರಿಯವರು ಹೊತ್ತಿದ್ದರು. ಅವರ ಹೆಸರನ್ನು ಕೇಳಿ ನಾನು ಹುಟ್ಟಿದ ಊರಾದ ಹಾವೇರಿಯ ನೆನವು ಬಂದಿತು. ಅಲ್ಲಿ ಕಳೆದ ಬಾಲ್ಯದ ನೆನವು ಬಂದಿತು. ಆ ಸುಖ ಜೀವನದ ದೃಶ್ಯಗಳು ಕಂಗೊಳಿದವು. ನಾನು ರವೀಂದ್ರರ ನಾಟಕಗಳ ಬಗ್ಗೆ ಮಾತಾಡಿದೆನು. ನನ್ನ ಗೆಳತಿಯರೂ ಅವರ ವಾಣಿಯಿಂದ ಅರಳಿದ ವಿವಿಧ ಸಾಹಿತ್ಯ ಕುಸುಮಗಳ ಪರಿಚಯವನ್ನು ಮಾಡಿಕೊಟ್ಟರು. ಶ್ರೀ ಹಾವೇರಿಯವರು ರವೀಂದ್ರನಾಥರ ವ್ಯಕ್ತಿತ್ವ, ಅವರ ಕಾರ್ಯಕಲಾಪ ಮತ್ತು ಕಲೋಪಾಸನೆಯ ಬಗ್ಗೆ ಹೇಳಿದರು.

೧೫-೮-೫೩.......ಇಂದು ಸ್ವಾತಂತ್ರ್ಯ ದೊರೆತ ಭಾರತದ ಸುದಿನ. ಮಳೆಬೀಳುತ್ತಲಿತ್ತು. ಆದರೂ ಧ್ವಜ ಏರಿಸುವ ಉತ್ಸಾಹ ನಮ್ಮಲ್ಲಿ ಉಕ್ಕುತ್ತಿತ್ತು. ಅಧ್ಯಕ್ಷರಾಗಿದ್ದ ನಮ್ಮ ಲೇಡಿ ಸುಪರಿಂಟೆಂಡೆಂಟರಾದ ಕು. ಭಾಸ್ಕರ ಇವರ ಹಸ್ತದಿಂದಲೇ ಧ್ವಜಾರೋಹಣವಾಯಿತು. ವಿದ್ಯಾರ್ಥಿನಿಯರು ರಾಷ್ಟ್ರಗೀತೆಗಳನ್ನು ಹಾಡಿದರು. ಅಧ್ಯಕ್ಷರು "ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ ಹೊಣೆ ನಮ್ಮ ಮೇಲೆಯೇ ಇದೆ ಎಂದು ಹೇಳಿದರು. ಇದರಿಂದ ನಮ್ಮಲ್ಲಿ ನವ ಚೈತನ್ಯವು ಉದಯಿಸಿತು.

೩೧-೮-೫೩.......ಇಂದು ಶ್ರೀ. ಕೃಷ್ಣ ಭಗವಾನರ ಜಯಂತಿಯ ದಿನ. ಇದು ಭಕ್ತಿಯ ರಸವನ್ನು ಪುಕ್ಕಿಸಿತು. ಶ್ರೀ ಕೃಷ್ಣನ ವಿಷಯವಾಗಿ ಮಕ್ಕಳ ಸಂಭಾಷಣೆಗಳು ಹಾಗು ಹಾಡುಗಳು ಇವುಗಳಿಂದ ಮನವು ತಣಿಯಿತು. ಅಧ್ಯಕ್ಷರಾಗಿ ಆಗಮಿಸಿದ ಕರ್ನಾಟಕ ಕಾಲೇಜದ ಪ್ರಾಧ್ಯಾಪಕರಾದ ಶ್ರೀ. ಮಳಗಿಯವರು ಸರಳ ಮಾತುಗಳಲ್ಲಿ ಶ್ರೀ ಕೃಷ್ಣನ ದೊಡ್ಡಸ್ತಿಕೆಯನ್ನು ತಿಳಿಸಿದರು. ಪರೋಪಕಾರಿಗಳಾಗಿ ದುಷ್ಟನಿಗ್ರಹ ಶಿಷ್ಟಪಾಲನೆ ಮಾಡಿದರೆ ಮಾತ್ರ ಶ್ರೀ ಕೃಷ್ಣನ ಜಯಂತಿಯನ್ನು ಆಚರಿಸಿದ್ದು ಸಾರ್ಥಕವಾಗುವದೆಂದು ಹೇಳಿದರು. ಜೀವನದ ವಿವಿಧ ರಂಗಗಳ ಪರಿಚಯವಾಯಿತು.

೯-೯-೫೩..........ಇಂದು ಸಿವ್ಹಿಲ್ ಆಸ್ಪತ್ರೆಯನ್ನು ಭೆಟ್ಟಿ ಮಾಡಿ ಬಂದೆವು. ಕ್ಷ-ಕಿರಣಗಳಿಂದ ಹೃದಯದ ಕಾರ್ಯವನ್ನು ನೋಡಿದೆವು. ದೇವನ ಅಗಾಧವಾದ ಮಹಿಮೆಯನ್ನು ಅರಿತೆವು. ಅಲ್ಟ್ರಾವ್ಹಾಯಲೆಟ್ ಕಿರಣಗಳನ್ನು ನೋಡಿದೆವು. ಇದು ವರೆಗೆ ಹೃದಯದ ಕೇವಲ ಚಿತ್ರವನ್ನು ನೋಡಿದ್ದ ನಮಗೆ ಅದರ ಕಾರ್ಯವನ್ನು ಪ್ರತ್ಯಕ್ಷವಾಗಿ ನೋಡಲು ಆಶ್ಚರ್ಯವಾಯಿತು.

೧೨-೯-೫೩ ರಿಂದ ೧೬-೯-೫೩ ಗಜಾನನೋತ್ಸವ. ಇಲ್ಲಿ ಎಲ್ಲ ಧರ್ಮದವರೂ ಕೂಡಿಕೊಂಡು ದೇವರಪೂಜೆ ಮಾಡುವದೊಂದು ವೈಶಿಷ್ಟ್ಯ. ಜಾತಿಭೇದದ ಕಲ್ಪನೆ ದೂರಾಯಿತು. ಎಲ್ಲರೂ ಒಂದೇ ಎಂಬ ಭಾವನೆ ಉದಯಿಸಿತು.

೧೪-೯-೫೩.........ಒಕ್ಕಲುತನ ಕಾಲೇಜಕ್ಕೆ ಭೆಟ್ಟಿ. ಸಣ್ಣ ಕಟ್ಟಡದಲ್ಲಿ ಕಲಿಯುವ ನಮಗೆ ಅದರ ವಿಸ್ತಾರವಾದ ಬೈಲು ಮತ್ತು ಭವ್ಯವಾದ ಮಂದಿರ ಇವುಗಳನ್ನು ನೋಡಿ ಆನಂದವೂ ಆಶ್ಚರ್ಯವೂ ಆದವು. ಅಲ್ಲಿ ವಿವಿಧ ಹಣ್ಣುಗಳನ್ನು ಬೆಳೆಯಿಸುವ ರೀತಿ, ಕಲಿಸುವ ಬೇರೆ ಬೇರೆ ವಿಷಯಗಳು, ಬೀಜಗಳ ಪ್ರಕಾರ, ಮಣ್ಣುಗಳ ಪ್ರಕಾರ, ದನಗಳನ್ನು ಸಾಕುವ ರೀತಿ, ಅವುಗಳ ರೋಗ ಮುಂತಾದ ಅನೇಕ ವಿಷಯಗಳ ಪರಿಚಯವಾಯಿತು. ಅಲ್ಲಿಯ ವಾತಾವರಣವನ್ನು ನೋಡಿ ನನಗೆ ಅಲ್ಲಿಯೇ ಇದ್ದು ಅಲ್ಲಿಯ ವಿಷಯಗಳನ್ನು ಕಲಿಯಬೇಕೆನಿಸಿತು.

ಚಟುವಟಿಕೆಗಳ ವಿಹಂಗಮ ನೋಟ

—೯—೫೩

ಬೋರ್ಸ್ಟಲ್ ಸ್ಕೂಲಿನ ನಿರೀಕ್ಷಣೆ. ಅಲ್ಲಿಯ ...ರುಗಳ ಸಹನೆಯನ್ನು ನೋಡಿ ಮಕ್ಕಳಿಗೆ ಕಲಿಸುವ ...ತಿಗಳನ್ನೂ ಅರಿತೆವು. ಅಲ್ಲಿಯ ಮಕ್ಕಳ ಜೀವನದಲ್ಲಿ ...ಷ್ಟು ಇತ್ತು.

...೧೦-೫೩ ರಿಂದ ೧೨-೧೦-೫೩ ರ ವರೆಗೆ

...ಗಾಂಧೀಜಿಯವರ ಹುಟ್ಟು ಹಬ್ಬಕ್ಕಾಗಿ ಸರ್ವೋದ... ...ಯ ಸಪ್ತಾಹವನ್ನು ಆಚರಿಸಿದೆವು. ಅಧ್ಯಕ್ಷರಾದ ...ಲರ್ ಬಿಂದು ಮಾಧವಾಚಾರ್ಯ ಇವರ ಹಸ್ತದಿಂದ ...೧೦-೫೩ ರಂದು ಬೆಳಿಗ್ಗೆ ೭ ಗಂಟೆಗೆ ಧ್ವಜಾರೋಹಣವಾಯಿತು. ಅವರು ಪ್ರತಿಯೊಬ್ಬ ಭಾರತೀಯರು ...ಚರಿಸತಕ್ಕ ರೀತಿನೀತಿಗಳನ್ನು ತಿಳಿಸಿದರು. ಅವರ ಹಸ್ತದಿಂದಲೇ ಅಖಂಡ ಸೂತ್ರಯಜ್ಞ ಮತ್ತು ವಸ್ತ್ರಯಜ್ಞದ ಉದ್ಘಾಟನೆ ಜರುಗಿತು. ಇದರಿಂದ ನೂಲು ...ವದು ನೇಯುವದೆಂದರೆ ಆಟವೆನಿಸತೊಡಗಿತು. ೨೨೦ ...ವಾರ ಅರಿವೆ ಮತ್ತು ೧೧೬ ಗುಂಡಿ ನೂಲು ತಯಾರಾಗಿರುವದು.

ಪ್ರತಿದಿನ ಸಫಾಯಿ ಮಾಡುವದರಿಂದ ಕೆಲಸವೆಂದರೆ ಕೀಳು ಎಂಬ ಭಾವನೆ ಅಳಿಯಿತು. ಕರ್ತವ್ಯದ ಅರಿವಾಯಿತು.

೪—೧೦—೫೩

ಮಾದರ ಓಣಿಗೆ ಹೋಗಿ ಸಫಾಯಿ ಮಾಡಿದೆವು. ಹಿಂದುಳಿದ ಜನರ ಸ್ಥಿತಿಯನ್ನು ನೋಡಿ ಹಳಹಳಿಯಾಯಿತು. ಅವರನ್ನು ಸುಧಾರಿಸುವ ಹಂಬಲ ಹುಟ್ಟಾಯಿತು. ವಿಚಾರ ಸಂಕೀರ್ಣದಿಂದ ಗಾಂಧೀಜಿಯವರ ಬೇರೆಬೇರೆ ವಿಚಾರಗಳು ನೆನಪಿಗೆ ಬಂದವು.

೧೨—೧೦— ೫೩

ಸಪ್ತಾಹದ ಮುಕ್ತಾಯ ಸಮಾರಂಭ. ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀ. ಎಮ್. ಪಿ. ಜಾಲಿಯವರು ಅಧ್ಯಕ್ಷರು. ಅವರು "ಸ್ತ್ರೀಯರ ರೀತಿ ನಡತೆ" ಗಳ ಬಗ್ಗೆ ಹೇಳಿದರು.

ಈ ಸಪ್ತಾಹದಿಂದ ಜೀವನವು ವಿವಿಧ ರೀತಿಯಿಂದ ...ಕಾಸ ಹೊಂದಿತು.

೨೪—೧೧—೫೩

ಭಾರತ ಮಿಲ್ಲಿಗೆ ಭೆಟ್ಟಿ. ಹತ್ತಿಯು ಸ್ವಚ್ಛತೆಯಿಂದ ಅರಿವೆಯಾಗುವವರೆಗಿನ ವಿವಿಧ ಕ್ರಿಯೆಗಳನ್ನು ನೋಡಿದೆವು. ಯಂತ್ರದ ಕಾರ್ಯದ ವೇಗಕ್ಕೂ ಮಾನವನ ಕಾರ್ಯದ ವೇಗಕ್ಕೂ ಅಜಗಜಾಂತರವೆಂದು ತೋರಿತು.

ಎಲ್ಲರೂ ಕೂಡಿ ವನಭೋಜನ ಮಾಡಿದ್ದೊಂದು ಆನಂದ. ಶ್ರೀ ಸಿದ್ಧಾರೂಢ ಸ್ವಾಮಿಯವರ ಮಠದ ನೋಟದಿಂದ ದೇವರಲ್ಲಿ ಭಕ್ತಿಯುಂಟಾಯಿತು. ಅಲ್ಲಿಯ ಭೇದವಿಲ್ಲದ ನಡತೆಯು ಕಲಿಯುವಂತೆ ಇತ್ತು.

೩-೧೨-೫೩ ರಿಂದ ೫-೧೨-೫೩ ರ ವರೆಗೆ

ಶಾರೀರಿಕ ಶಿಕ್ಷಣ ದಿನಾಚರಣೆ. ಓದಿ ಕೆಲಸಮಾಡಿ ಉಂಟಾದ ಬೇಸರವನ್ನು ಕಳೆಯಲು ಇದೊಂದು ಮೋಜಿನ ದಿನವೆನಿಸಿತು. ಅಧ್ಯಕ್ಷರಾದ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಡೇವ್ಹಿಡ ಅವರು ಶಿಕ್ಷಿಕೆ....ವಿದ್ಯಾರ್ಥಿನಿಯರು ತಮ್ಮ ತಮ್ಮ ಊರುಗಳಿಗೆ ಹೋದ ಮೇಲೆಯೂ ಇದೇ ತರದ ಆಸ್ಥೆಯನ್ನು ಶಾರೀಕ ಶಿಕ್ಷಣದಲ್ಲಿ ವಹಿಸಬೇಕೆಂದು ಹೇಳಿದರು.

೧೨-೧೨-೫೩

ಸಪ್ತಾಪುರಕ್ಕೆ ಹೋಗಿದ್ದೆವು. ಹೋಗುವಾಗ ನೀರಿನ ಹೊಸ ಟಾಕಿಯನ್ನು ಮತ್ತು ಯೂನಿವ್ಹರ್ಸಿಟಿಯನ್ನು ನೋಡಿಕೊಂಡು ಹೋದೆವು. ಊಟವಾದ ಬಳಿಕ ಸಂಯುಕ್ತ ರಾಷ್ಟ್ರಸಂಘದ ದಿನಾಚರಣೆಯನ್ನು ಆಚರಿಸಿದೆವು. ವಿವಿಧ ವಿನೋದಾವಳಿಗಳನ್ನೂ ಮಾಡಿದೆವು. ಗುಪ್ತಧನವನ್ನು ಹುಡುಕುವ ಆಟವಂತೂ ಬಹಳ ಮೋಜಿನದಾಗಿತ್ತು.

೨೧-೧೨-೫೩ ರಿಂದ ೨೪-೧೨-೫೩ ರ ವರೆಗೆ

ಕಿರ್ಲೋಸ್ಕರವಾಡಿ ಮತ್ತು ಓಗಲೆವಾಡಿಯ ಪ್ರವಾಸ. ಹಾದಿಯಲ್ಲಿಯ ಸೃಷ್ಟಿ ಸೌಂದರ್ಯದಿಂದ ಮನ ತಣಿಯಿತು. ಕಿರ್ಲೋಸ್ಕರ ವಾಡಿಯಲ್ಲಿ ಕಬ್ಬಿಣದ ಸಾಮಾನುಗಳನ್ನು ತಯಾರಿಸುವದು ಮತ್ತು ಓಗಲೇ ವಾಡಿಯಲ್ಲಿ ಕಾಜಿನ ಸಾಮಾನುಗಳನ್ನೂ ಕಂದೀಲಗಳನ್ನೂ ಕಾಗದವನ್ನೂ ತಯಾರಿಸುವದು ಮುಂತಾದ್ದನ್ನು ನೋಡಿದೆವು. ಅಲ್ಲಿಯ ಕೂಲಿಗಳ ಸಹನೆ ಕಲಿತು

ಕೊಳ್ಳುವಂತಹದಿತ್ತು. ಬರುವಾಗ ಗೋಕಾಕದ ತಡಸಲನ್ನು ನೋಡಿದೆವು. ನದಿಯು ಬತ್ತಿದ್ದರೂ ಸೃಷ್ಟಿಯ ಸೌಂದರ್ಯವು ಕುಂದಿರಲಿಲ್ಲ. ಕಿರ್ಲೋಸ್ಕರವಾಡಿಯಲ್ಲಿ ಶಿಸ್ತು ಮಾದರಿಯದಾಗಿತ್ತು.

೨೬—೧—೫೪

ಪ್ರಜಾರಾಜ್ಯ ದಿನಾಚರಣೆ. ಧಾರವಾಡ ಸ್ಕೂಲ ಬೋರ್ಡಿನ ಎ. ಓ. ಸಾಹೇಬರಾದ ಶ್ರೀಮಾನ್. ಕಾಳೆಯವರು ಅಧ್ಯಕ್ಷರು. ವಿವಿಧ ವಿನೋದಾವಳಿಗಳಿಂದ ಬಹಳ ಆನಂದವಾಯಿತು. ಅಧ್ಯಕ್ಷರು ಆಂತರಿಕ ಹಾಗು ಬಾಹ್ಯ ಸಫಾಯಿಗಳ ಮಹತ್ವವನ್ನು ತಿಳಿಸಿದರು. ನಿಜವಾದ ಜೀವನದ ಅರಿವಾಯಿತು.

೫-೨—೫೪

ಗಂಡು ಮಕ್ಕಳ ಟ್ರೇನಿಂದ ಕಾಲೇಜದಲ್ಲಿ ಪದವೀಧರರ ಜೀವನ ಶಿಕ್ಷಣ ಕೇಂದ್ರದ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನದ ಸಂಬಂಧವಲ್ಲಿ ಸ್ಥಳೀಯ ಟ್ರೇನಿಂಗ ಕಾಲೇಜಗಳ ಕಾರ್ಯಕ್ರಮದ ಜೊತೆಗೆ ನಮ್ಮ ಶಿಕ್ಷಕ-ವಿದ್ಯಾರ್ಥಿನಿಯರ ಕೆಲ ಸಂಭಾಷಣೆಗಳೂ, ಕಾವ್ಯಗಾಯನವೂ ಪ್ರಾಕ್ಟಿಸಿಂಗ ಸಾಲೆಯ ಚಿಕ್ಕಮಕ್ಕಳ ಕಾರ್ಯಕ್ರಮಗಳೂ ಜರುಗಿದವು.

೧೪ ಮತ್ತು ೧೫ ನೇ ಫೆಬ್ರುವರಿ ೫೪........ ಮೂಲ ಶಿಕ್ಷಣದ ಜಿಲ್ಹಾ ಸಮ್ಮೇಲನವು ಶ್ರೀಮಾನ್ ನಾಯಕ ವೆಂಕಟರಾಯರಿಂದ ಉದ್ಘಾಟಿಸಲ್ಪಟ್ಟಿತು. ಶಿಕ್ಷಕರ ಮಹತ್ವದ ಬಗೆಗೆ ಬಹಳ ಪರಿಣಾಮಕಾರಿಯಾಗಿ ಹೇಳಿದರು. ಸಮ್ಮೇಲನದಲ್ಲಿ ಅನೇಕ ಶೈಕ್ಷಣಿಕ ವಿಷಯಗಳು ಚರ್ಚಿಸಲ್ಪಟ್ಟವು. ಮಾದರಿ ಪಾಠಗಳನ್ನು ನೋಡಿದೆವು. ಒಟ್ಟಿನಲ್ಲಿ ನಮ್ಮ ವಿಚಾರದ ಕಣ್ಣು ಈ ಸಮ್ಮೇಲನದಿಂದ ತೆರೆಯಿತು.

೨೫—೨-೫೪

.... ಶ್ರೀಮಾನ್ ವೆಂಕಟರಾಮಯ್ಯನವರು ನಮ್ಮ ದೇಶದಲ್ಲಿನ ಖಾದಿ ಕೈಗಾರಿಕೆಗೆ ಜನತೆಯು ಬೆಂಬಲಕೊಡುವದು ಹೇಗೆ ಅವಶ್ಯವಿದೆಯೆಂಬುದನ್ನು ನಮ್ಮ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಹೇಳಿದರು. ವ್ಯಾಖ್ಯಾನಕ್ಕೆ ಬರುವಮೊದಲು ಇದ್ದ ನಮ್ಮ ವಿಚಾರಗಳೆಲ್ಲ ಒಮ್ಮೆಲೆ ಬದಲಾಗಿ ಶಿಕ್ಷಿಕೆಯರು ಒಬ್ಬರ ಮೇಲೊಬ್ಬರು ಖಾದಿಯ ಹುಂಡಿಗಳನ್ನು ಕೊಳ್ಳಲಾರಂಭಿಸಿದರು. ಅಂತೂ ೬೦೦ ರೂ. ಗಳ ಹುಂಡಿಗಳನ್ನು ಕೊಂಡೆವು.

೨—೩—೫೪

ಹುಬ್ಬಳ್ಳಿಗೆ ಹೋಗಿ ಖಾದಿ ಹಾಗು ಗ್ರಾಮೋದ್ಯೋಗದ ಪ್ರದರ್ಶನವನ್ನು ನೋಡಿಬಂದೆವು. ಅಲ್ಲಿಯ ಖಾದಿಯ ಅರಿವೆಯನ್ನು ನೋಡಿ ನಾವೂ ಅಂಥ ಉತ್ತಮ ಅರಿವೆಯನ್ನು ತಯಾರಿಸಲು ಪ್ರಯತ್ನಿಸಬೇಕೆಂದು ಅನಿಸಿತು. ಅಲ್ಲಿಯ ಪ್ರದರ್ಶನವನ್ನು ನೋಡಿ ಜೀವನದ ಅನೇಕ ಮುಖಗಳ ಪರಿಚಯವಾಯಿತು. ನೂಲುವದರಿಂದ ನೇಯುವವರೆಗಿನ ಕ್ರಿಯೆಗಳ ಪ್ರದರ್ಶನವಿತ್ತು. ರೇಶಿಮೆ ತಯಾರಿಸುವ ಕೆಲಸವು ನಡೆದಿತ್ತು. ಅನೇಕ ರೀತಿಯಿಂದ ಕೆತ್ತಿಗೆಯ ಕೆಲಸಮಾಡಿದ ಆನೆಯ ಕೋರೆಯ ಮತ್ತು ಚಂದನದ ವಸ್ತುಗಳು ರಮ್ಯವಾಗಿದ್ದವು. ಅಲ್ಲಿಯ ದೃಶ್ಯವನ್ನು ನೋಡಿ ಖಾದಿ ಅರಿವೆ ಉಡಬೇಕೆಂಬ ಉತ್ಸಾಹ ಉಂಟಾಯಿತು. ಜೆಂಡೆ ಕಂಡ ಖಾದಿಯ ಅರಿವೆಯನ್ನೆಲ್ಲ ಕೊಂಡೆವು.

೬—೩-—೫೪

ಕಾಲೇಜಿನ ಹುಟ್ಟುಹಬ್ಬ. ಎಜ್ಯುಕೇಶನಲ್ ಇನ-ಸ್ಪೆಕ್ಟರರಾದ ಶ್ರೀ. ಕೆ. ಬಿ. ಶಿರಗಾಂವಕರ ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಇಂದಿನ ವೈವಿಧ್ಯ ಪೂರ್ಣವಾದ ಚಟುವಟಿಕೆಯೆಂದರೆ ಹತ್ತಿಯ ಸ್ವಚ್ಛತೆಯಿಂದ ಅರಿವೆ ತಯಾರಿಸುವವರೆಗಿನ ಕ್ರಿಯೆಗಳ ಪ್ರದರ್ಶನ ಆಟಪಾಟಗಳು ಹಾಗು ಇತರ ಬೌದ್ಧಿಕ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆಅಧ್ಯಕ್ಷರ ಹಸ್ತದಿಂದ ಬಹುಮಾನ ವಿತರಣವಾಯಿತು. ಅಧ್ಯಕ್ಷರು ಶಿಕ್ಷಣದ ಮೇಲೆ ಬರುತ್ತಿರುವ ಆರೋಪಗಳನ್ನು ಹೋಗಲಾಡಿಸುವ ರೀತಿಗಳನ್ನು ತಿಳಿಸಿದರು.

ಸಂಜೆಗೆ ಮನರಂಜನೆಯ ಕಾರ್ಯಕ್ರಮಗಳನ್ನು ನೋಡಲು ಮಕ್ಕಳ ಪಾಲಕರೂ ಆಗಮಿಸಿದ್ದರು.

ಪಾಲಕರ ಸಂಗಡ ಸಹಕಾರವನ್ನು ಬೆಳೆಸಲು ಮತ್ತು ಮೂಲೋದ್ಯೋಗದ ಬಗ್ಗೆ ಆದರ ಭಾವನೆಯನ್ನು

ಸಲು ಇದೊಂದು ಯೋಗ್ಯವಾದ ಹಬ್ಬವೇ ತ್ತು.

-೩---೫೪

ಂದು ಡೆಪ್ಯೂಟಿ ಡೈರೆಕ್ಟರ ಸಾಹೇಬರಾದ ಶ್ರೀ. ಹಾಂಸಿಯವರ ಸತ್ಕಾರಾರ್ಥವಾಗಿ ಸ್ಥಳಿಯ ಂಗ ಕಾಲೇಜಗಳ ಸಮ್ಮಿಶ್ರ ಕಾರ್ಯಕ್ರಮವನ್ನೇರ್ಪಡಿಗಿತ್ತು. ಈ ಸಂದರ್ಭದಲ್ಲಿ ಜೀವನ ಶಿಕ್ಷಣದ ಬಗ್ಗೆ ಮತ್ತು ನನ್ನ ಗೆಳತಿಯರು ರಚಿಸಿದ ಸಂಭಾಷಣೆ ಅಭಿನಯಿಸಲಾಯಿತು. ನಮ್ಮ ಪ್ರ್ಯಾಕ್ಟಿಸಿಂಗ ಯ ಹುಡಿಗೆಯರ ನೃತ್ಯಗಳು ಪ್ರೇಕ್ಷಣೀಯವಾಗಿ

-೪---೫೪

ಂದು ರಾತ್ರಿ ೮ ಗಂಟೆಗೆ ೨ನೆಯ ವರ್ಷದ ಶಿಕ್ಷಿಕೆ-ರ್ಥಿನಿಯರಿಗೆ ಬೀಳ್ಕೊಡುವ ಸಮಾರಂಭವನ್ನು ಟ ವರ್ಷದವರು ಏರ್ಪಡಿಸಿದ್ದರು. ಒಬ್ಬರನ್ನೊ ಆಗಲಿಹೋಗುವ ವಿಚಾರವು ಎಲ್ಲರ ಮನವನ್ನು ಕಲಕಿತ್ತು ಕೆಲವರ ಕಣ್ಣಲ್ಲಿ ನೀರೂ ಹರಿದುವು. ಈ ಕೆಡೆಯ ದಿನದ ಕಾರ್ಯಕ್ರಮವು ವಿಶೇಷ ಭಾವನಾ ಪ್ರಧಾನವಾಗಿತ್ತು.

ಇಡೀ ವರ್ಷದಲ್ಲಿ ಅನೇಕ ದಿನಾಚರಣೆಗಳು, ಜಯಂತಿ, ಪುಣ್ಯತಿಥಿ, ಪ್ರವಾಸ ಮುಂತಾದ ಚಟುವಟಿಕೆಗಳು ಇದ್ದುದರಿಂದ ನಮ್ಮ ತಂದೆ-ತಾಯಿ, ಬಂಧು-ಬಳಗದವರನ್ನು ಅಗಲಿಬಂದ ದುಃಖವು ದೂರಾಯಿತು. ಪರಸ್ಪರರ ಪರಿಚಯವು ಹೆಚ್ಚಾಗಿ ಎಲ್ಲರೂ ಒಂದೇ ಎಂಬ ಭಾವನೆಯುಂಟಾಯಿತು.

ಕುಮಾರಿ ಲೀಲಾ ಹೊಟ್ಟಿ.
೨ನೇ ವರ್ಷದ ಶಿಕ್ಷಿಕೆ-ವಿದ್ಯಾರ್ಥಿನಿ
ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ
ಧಾರವಾಡ

(ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ಕೈ ಬರಹದ ಮಾಸಪತ್ರಿಕೆಯಿಂದ ಎತ್ತಿ ಬರೆದದ್ದು.)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ೧೯೫೩

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ (೧೯೫೩) ಯಲ್ಲಿ ಹೆಚ್ಚು ಗುಣಗಳನ್ನು ಪಡೆದು ಪಾರಿತೋಷಕಗಳನ್ನು ಗೆದ್ದ ಕೆಳಗಿನ ಪ್ರ್ಯಾಕ್ಟಿಸಿಂಗ ಸ್ಕೂಲಿನ ವಿದ್ಯಾರ್ಥಿನಿಯರು ಅಭಿನಂದನೀಯರಾಗಿದ್ದಾರೆ—

೧.	ಕುಮಾರಿ ಮಂದಾಕಿನಿ ಯಲ್ಲಪ್ಪ ಅಚಲಕರ.	ಪ್ರಾದೇಶಿಕ ಸರಕಾರೀ ಪಾರಿತೋಷಕ.
೨.	ಕುಮಾರಿ ಮಾಲತಿ ಶಾಂತೇಶ ಕೋಟೂರ.	ಜಿಲ್ಲಾ ಸರಕಾರಿ ಪಾರಿತೋಷಕ.
೩.	ಕುಮಾರಿ ಛಾಯಾ ಯಲ್ಲಪ್ಪ ಅಚಲಕರ.	ಜಾರ್ಡನ್ ಪಾರಿತೋಷಕ(ಯೋಗ್ಯತಾ ಪಾರಿತೋಷಕ) ೨ನೆಯದು.
೪.	ಕುಮಾರಿ ಸುಮಿತ್ರಾ ಭೀಮರಾವ ಭಟ್ಟ.	,, ,, ,,
೫.	ಕುಮಾರಿ ಶಾಂತಾಬಾಯಿ ಫಕೀರಪ್ಪ ಮುಳಗುಂದ	ಮಧ್ಯಮ ವರ್ಗದ ಉಮೇದವಾರರ ಪಾರಿತೋಷಕ.
೬.	ಕುಮಾರಿ ನೀಲವ್ವ ಹಣಮಂತರಾವ ಶಿಗ್ಗಾವಿ	,, ,, ,,

ಮುಂಬಯಿ ಸರಕಾರದ ಕನ್ನಡ ಸ್ಕೂಲ್‌ಬುಕ್ ಕಮಿಟಿಯಿಂದ ಮಂಜೂರಾದ ಪುಸ್ತಕಗಳು

ಅ. ನಂ.	ಪುಸ್ತಕದ ಹೆಸರು	ಲೇಖಕರು ಮತ್ತು ಪ್ರಕಾಶಕರು	ಯಾವುದಕ್ಕಾಗಿ ಮಂಜೂರು	ಬೆಲೆ
೧	ಭಾರತದ ಸಂಸ್ಕೃತಿಯ ಇತಿಹಾಸ ಭಾಗ-೩	ಲೇ. ಶ್ರೀ ಎಸ್. ಎಮ್. ಹುಣಶ್ಯಾಳ ಪ್ರ. ರಾಮಾಶ್ರಯ ಬುಕ್‌ಡಿಪ್ಪೋ, ಧಾರವಾಡ	ಪುರವಣಿ ವಾಚನ ೧೦-೧೧ನೆಯ ವರ್ಗಕ್ಕೆ (ಮಾ. ಶಾ.)	೧-೧೨—೦
೨	ನಾಗರಿಕ ನೀತಿ ಸಾರ	ಲೇ. ಶ್ರೀ ಎಸ್. ವಿ. ಪಾಟೀಲ ಪ್ರ. ಹೊಂಬಾಳಿ ಬ್ರದರ್ಸ್, ಹುಬ್ಬಳ್ಳಿ	,,	೧—೮—೦
೩	ಸಂಸ್ಕೃತ ಭಾಷಾ ಪ್ರದೀಪ ಭಾಗ-೩ ೨ನೆಯ ಆವೃತ್ತಿ	ಲೇ. ಶ್ರೀ ಎಸ್. ಬಿ. ಭಟ್ಟ, ಅನು. ಶ್ರೀ ಎನ್. ಎಲ್. ಬಾಪಟ ಪ್ರ. ಮ್ಯಾಕ್‌ಮಿಲನ್ ಎಂಡ್ ಕಂಪನಿ, ಲಿ. ಮುಂಬಯಿ	ಮಾ. ಶಾಲೆಗಳ ೧೧ನೆಯ ವರ್ಗಕ್ಕೆ ಪಠ್ಯ (ಬೆಲೆಯನ್ನು ರೂ. ೨—೪—೦ ಗೆ ಇಳಿಸಿದಲ್ಲಿ)	೨—೮—೦
೪	ಮೇದಿನಾಪುರದ ಮಲ್ಲ	ಲೇ. ಶ್ರೀ ಜಿ. ಬಿ. ಜೋಶಿ ಪ್ರ. ಮನೋಹರ ಗ್ರಂಥಮಾಲಾ, ಧಾರವಾಡ	ಪುರವಣಿ ವಾಚನ ೯-೧೦ನೆಯ ವರ್ಗಕ್ಕೆ (ಮಾ. ಶಾ-)	೧—೮—೦
೫	ಶ್ಯಾಮನ ತಾಯಿ	ಲೇ. ದಿ! ಸಾನೆ ಗುರುಜೀ ಪ್ರ. ಸಮಾಜ ಪುಸ್ತಕಾಲಯ ಧಾರವಾಡ	,,	೧—೮—೦
೬	ಸಂಸ್ಕೃತ ಭಾಷಾದರ್ಪಣ ಭಾಗ-೨	ಲೇ. ಶ್ರೀ ಕೆ. ಬಿ. ವೀರಕರ ಪ್ರ. ಅರುಣ ಪ್ರಕಾಶನ, ಹುಬ್ಬಳ್ಳಿ	೯ನೆಯ ವರ್ಗಕ್ಕೆ (ಮಾ. ಶಾ.) ಪಠ್ಯ	೨—೦—೦
೭	ಹೊಸ ಪದ್ಧತಿಯ-ಭೂಮಿತಿ	ಲೇ. ಶ್ರೀ ಎಚ್. ಕೆ ಲಗಳಿ ಮತ್ತು ಕೆ. ಟಿ. ಪಾಟೀಲ ವಿಜಯ ಕಾಲೇಜ, ವಿಜಾಪುರ ಪ್ರ. ,,	೧೦-೧೧ನೆಯ ವರ್ಗಕ್ಕೆ (ಮಾ. ಶಾ.) ಪಠ್ಯ	೩—೦—೦

ಧಾರವಾಡ

೧೫-೫-೧೯೫೪

(ಸಹಿ) ಕೆ. ಬಿ. ತೇರಗಾಂವಕರ

ಎ. ಇನಸ್ಪೆಕ್ಟರ ಮತ್ತು ಪ್ರೆಸಿಡೆಂಟ

[illegible]

ಪ್ರಾಥಮಿಕ ಶಿಕ್ಷಣ ಪ್ರಪಂಚ

(ಮೇ ೧ರಿಂದ ಜೂನ್ ೧೫ರ ವರೆಗೆ)

ಜಂಬಿಗಿ — ೨೫. ಪ್ರಾ. ಶಾ. ಪ್ರ. ಪರೀಕ್ಷೆ (೧೯೫೪) ಯಲ್ಲಿ ಕುಳಿತ ೧೨ ವಿದ್ಯಾರ್ಥಿಗಳಲ್ಲಿ ೭ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ

ಕೋರವಾರ — ೨೬. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ೮ ವಿದ್ಯಾರ್ಥಿಗಳಲ್ಲಿ ೬ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಹನ್ಮಿಗಿ — ೧೮. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ೧೧ ವಿದ್ಯಾರ್ಥಿಗಳಲ್ಲಿ ೯ ವಿದ್ಯಾರ್ಥಿಗಳು, ಇರ್ವರು ವಿದ್ಯಾರ್ಥಿನಿಯರಲ್ಲಿ ಇರ್ವರೂ ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಗೆ ಕುಳಿತ ಒಬ್ಬ ವಿದ್ಯಾರ್ಥಿಯು ಹಳ್ಳಿಯ ಶಾಲೆಗಳ ಪತಿಯಿಂದ ಇಡೀ ಜಿಲ್ಲೆಗೇ ಒಂದನೇ ನಂಬರು ಪಡೆದು ಉತ್ತೀರ್ಣನಾಗಿದ್ದಾನೆ.

ಬಾಗೇವಾಡಿ — ೨೨. ಈ ಸಲದ ಪ್ರಾ ಶಾ. ಪ್ರ. ಪತ್ರ ಪರೀಕ್ಷೆಗೆ ಕುಳಿತ ನಾಲ್ವರೂ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಚೀಫ ಆಫೀಸರರು ಮತ್ತು ಮಾಮಲೇದಾರರೂ ಜನರಿಗೆ ಶಾಲೆಯ ಕಟ್ಟಡದ ಸಲುವಾಗಿ ಹಣ ಕೂಡಿಸಲು ಬಿನ್ನವಿಸಿಕೊಂಡರು. ಜನರು ಬಿನ್ನಹವನ್ನು ಮನ್ನಿಸಿದರು.

ಎಂಬತ್ತನಾಳ — ೨೧. ಈ ಸಾರೆಯ ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಕುಳಿತ ೧೯ ವಿದ್ಯಾರ್ಥಿಗಳಲ್ಲಿ ೧೭ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಲೋಣಿ — ೨೦. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ೧೬ ರಲ್ಲಿ ೧೨ ಹುಡುಗರು ಪಾಸಾಗಿದ್ದಾರೆ.

ಖಜ್ಜಿಡೋಣಿ — ೨೪. ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಐವರೂ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಜಮಖಂಡಿ — ೫. ೧೯೫೪ರ ಮುಲ್ಕೀ ಪರೀಕ್ಷೆಯಲ್ಲಿ ೧ನೆಯ ಮರಾಠಿ ಶಾಲೆಯಿಂದ ಕುಳಿತ ೪೮ ವಿದ್ಯಾರ್ಥಿಗಳಲ್ಲಿ ೩೭ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕು. ರಮೇಶ ಪಟವರ್ಧನ ಎಂಬ ವಿದ್ಯಾರ್ಥಿಯು ಮರಾಠಿ ವಿಭ-ಗದಲ್ಲಿ ೧ನೆಯ ಸ್ಥಾನವನ್ನು ಪಡೆದು ಪಾಸಾಗಿದ್ದಾನೆ.

ಕುಷೂಗಲ್ — ೨೫. ಈ ವರ್ಷ ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಕುಳಿತ ಒಂಬತ್ತೂ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ರಡ್ಡೇರ ತಿಮ್ಮಾಪೂರ — ೨೨. ೧೯೫೪ರ ಮುಲ್ಕೀ ಪರೀಕ್ಷೆಗೆ ಕುಳಿತ ಆರೂ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಮಾರೀಹಾಳ — ೧೯. ೧೯೫೪ರ ಮುಲ್ಕೀ ಪರೀಕ್ಷೆಗೆ ಕುಳಿತ ೧೯ ವಿದ್ಯಾರ್ಥಿಗಳಲ್ಲಿ ೧೩ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಗೆ ಕುಳಿತ ಐವರಲ್ಲಿ ಇಬ್ಬರಿಗೆ ಶಿಷ್ಯವೇತನ ದೊರಕಿದೆ.

ಹಿರೇಹರಕುಣಿ — ೧೭. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ೯ ವಿದ್ಯಾರ್ಥಿಗಳಲ್ಲಿ ೮ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಖಾನಾಪೂರ — ೧೭. ಈ ಸಲದ ಪ್ರಾ. ಶಾ. ಪ್ರ. ಪರೀಕ್ಷೆಗೆ ಕುಳಿತ ೧೯ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ೧೭ ಮಂದಿ ಪಾಸಾಗಿದ್ದಾರೆ. ಅವರಲ್ಲಿ ಶಿವರಾಮ ಚಿಪಕರನು ಕೇ.ದ್ರಕ್ಕೆ ೧ನೆಯ ನಂಬರು, ಅಚ್ಯುತ ಕುಲಕರ್ಣಿಯು ೩ನೆಯ ನಂಬರು, ರಂಗುತಾಯಿ ಏರಿ ವಿದ್ಯಾರ್ಥಿನಿಯರಲ್ಲಿ ೧ನೆಯ ನಂಬರು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಕೇಂದ್ರದ ನಾಗರಿಕರಿಂದ ಇವರಿಗೆ ಅನುಕ್ರಮವಾಗಿ ೨೫, ೧೦, ೧೫ ರೂ. ಬಹುಮಾನ ಸಿಗತಕ್ಕದ್ದಿದೆ.

ಪ್ರಾಥಮಿಕ ಶಿಕ್ಷಣ

ಬಸವನ ಬಾಗೇವಾಡಿ — ೬. ದಿನಾಂಕ ೫-೫-೧೯೫೪ ರಂದು ಬಸವೇಶ್ವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ನಾಗಸೂರ — ೧೮. ಈ ಸಲದ ಪ್ರಾ. ಶಾ. ಪ್ರ. ಪ ಪರೀಕ್ಷೆಯಲ್ಲಿ ಕುಳಿತ ಹನ್ನೊಂದೂ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಕೊಡಗಾನೂರ — ೧೯. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ಐವರೂ ಹುಡುಗರು ಪಾಸಾಗಿದ್ದಾರೆ.

ನೆಲ್ಲಿಕೇರಿ — ೧೮. ಈ ಸಲದ ಮುಲ್ಕೀ ಪರೀಕ್ಷೆಯಲ್ಲಿ ೩೧ ವಿದ್ಯಾರ್ಥಿಗಳಲ್ಲಿ ೨೫ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಸುಳ್ಯ — ೨೯. ಶ್ರೀಮತಿ ಚಂಪಾವತಿ ಉಗರಗೋಳ ಅವರು ಪ್ರಾರಂಭಿಸಿದ ಸ್ತ್ರೀಯರ ಸಮಾಜ ಶಿಕ್ಷಣ ವರ್ಗದ ಪ್ರಾರಂಭೋತ್ಸವವು ಹುಬ್ಬಳ್ಳಿಯ ಜ. ಗಂ. ಟ್ರೇ. ಕಾ. ದ ಪ್ರಿನ್ಸಿಪಾಲ್ ಶ್ರೀ. ಎಸ್. ಡಿ. ಇಂಚಲ ಅವರಿಂದ ನೆರವೇರಿಸಲ್ಪಟ್ಟಿತು. ಶ್ರೀ. ಹ. ಗ. ಜೋಶಿ ಅವರು ಈ ಸಮಾರಂಭಕ್ಕೆ ಮೂಲಕಾರಣರಾಗಿದ್ದಾರೆ.

ಮುಳವಾಡ — ಈ ಸಲ ಮುಲ್ಕೀ ಪರೀಕ್ಷೆಗೆ ಕುಳಿತ ೧೧ ವಿದ್ಯಾರ್ಥಿಗಳಲ್ಲಿ ೯ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಸೂಳೇಭಾವಿ—೧೮. ಈ ವರ್ಷ ಮುಲ್ಕೀ ಪರೀಕ್ಷೆಗೆ ಕುಳಿತ ೧೫ ವಿದ್ಯಾರ್ಥಿಗಳಲ್ಲಿ ೧೩ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಧಾರವಾಡ—೧೯. ಇಲ್ಲಿಯ ಸರಕಾರಿ ಗಂಡುಮಕ್ಕಳ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀಮಾನ್. ಮ. ಪ ಜಾಲಿಯವರಿಗೆ ಬೆಳಗಾಂವ ಸರದಾರ ಹಾಯ್‌ಸ್ಕೂಲಿಗೆ ವರ್ಗವಾದ್ದರಿಂದ ಇಲ್ಲಿಯ ನೇಯ್ಗೆಯ ಅಲ್ಪಾವಧಿ ತರಬೇತಿ ವರ್ಗದ ವತಿಯಿಂದ ಶ್ರೀಮಾನ್. ಮೆಣಸಿ, ಸಮಾಜ ಶಿಕ್ಷಣ ಮುಖ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಿಳ್ಕೊಡುವ ಸಮಾರಂಭವು ನೆರವೇರಿಸಲ್ಪಟ್ಟಿತ್ತು.

ಮುಖ್ಯ ಅತಿಥಿಗಳ ಪರಿಚಯವನ್ನು ಶ್ರೀ ಹೊಸಮಠ ಮಾಸ್ತರರು ಮಾಡಿಕೊಟ್ಟರು. ನಂತರ ಶ್ರೀ ಮ. ಪ. ಜಾಲಿಯವರು ಮಾತಾಡುತ್ತ ನಾವು ಎಲ್ಲೆ ಇದ್ದರೂ, ಏನೇ ಮಾಡಿದರೂ ದೇವರು ಇದ್ದಾನೆ ಎಂಬ ಭಾವನೆಯಿಂದ ನಾವು ನಮ್ಮ ಕೆಲಸವನ್ನು ಶಿರಸಾವಹಿಸಿ ಮಾಡಬೇಕು. ಕಾಯಕವೇ ಕೈಲಾಸವೆಂದು ಮಹಾನುಭಾವರಾದ ಬಸವಣ್ಣನವರು ಹೇಳಿದ್ದಾರೆ. ಆದ್ದರಿಂದ ನಾವು ನಮ್ಮ ಕೆಲಸಗಳನ್ನು ಮಾಡುತ್ತ ಹೋಗಬೇಕು. ಆದರ ಫಲಾಫಲಗಳ ಬಗ್ಗೆ ನಾವು ವಿಚಾರಿಸಬಾರದು ಎಂಬರ್ಥದ ಮೇಲೆ ಒಳ್ಳೆ ಮಾರ್ಮಿಕವಾಗಿ ಮಾತಾಡಿದರು.

ಶ್ರೀ. ಪ್ಯಾಟಿಮಠ ಶ್ರೀ. ಹಳ್ಳಿ, ಶ್ರೀ. ಮಠಪತಿ ಮೊದಲಾದವರು ಶ್ರೀ. ಜಾಲಿಯವರ ಗುಣಗಾನ ಮಾಡಿದರು. ಶ್ರೀ ಮೆಣಸಿಯವರು ಮಾತಾಡುತ್ತ ನಾನು ಇಲ್ಲಿಗೆ ಆಕಸ್ಮಾತ್ತಾಗಿ ಬಂದು ಈ ಕಾರ್ಯದಲ್ಲಿ ಭಾಗವಹಿಸಿದ್ದು ನನಗೆ ಹೆಮ್ಮೆಯನ್ನುಂಟು ಮಾಡಿದೆ. ಶ್ರೀ. ಜಾಲಿಯವರನ್ನು ನಮ್ಮೂರಿಗೆ ಬರಮಾಡಿಕೊಳ್ಳಲೋಸುಗ ಇಲ್ಲಿಗೇ ಬಂದದ್ದಾಗಿತೆಂದು ಹೇಳಿದರು. ಈ ಕಾರ್ಯಕ್ರಮಕ್ಕೆ ಶ್ರೀ ಹಂದ್ರಾಳರವರೂ ಶ್ರೀ. ಶಿಗ್ಗಾವಿ ಸಾಹೇಬರೂ ಶ್ರೀ. ಬಿದರಿಯವರೂ ಶ್ರೀ. ಪಾಟೀಲರವರೂ ಮೊದಲಾದ ಪ್ರಮುಖ ಜನರು ಹಾಜರಿದ್ದರು.

ಶ್ರೀ. ಹೊಸಮಠ ಮಾಸ್ತರರು ಆಭಾರಮನ್ನಣೆ ಮಾಡಿದರು. ನಂತರ ಉಪಹಾರದೊಂದಿಗೆ ನೇಯ್ಗೆಯ ವರ್ಗದ ಉದ್ಘಾಟನೆ.

ಧಾರವಾಡ-೧೫. ಸರಕಾರಿ ಕನ್ನಡ ಗಂಡುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ವಿಜಾಪೂರ, ಕಾರವಾರ, ಧಾರವಾಡ ಜಿಲ್ಲೆಗಳ ಶಿಕ್ಷಕರಿಗೋಸುಗ ಸರಕಾರವು ತೆರೆದ ನೇಯ್ಗೆಯ ಅಲ್ಪಾವಧಿ ತರಬೇತಿಯ ವರ್ಗದ ಉದ್ಘಾಟನೆಯು ಶ್ರೀ. ಎಮ್. ಪಿ. ಜಾಲಿ ಪ್ರಿನ್ಸಿಪಾಲರ ಅಮೃತ ಹಸ್ತದಿಂದ ನೆರವೇರಿತು. ಶ್ರೀ ಜಾಲಿಯವರು ಈ ವರ್ಗದ ಶಿಕ್ಷಕ ವಿದ್ಯಾರ್ಥಿಗಳಿಗೆ ವರ್ಗದ ಮಹತ್ವ ಹಾಗೂ ವೇಳೆಯ ಮಹತ್ವ ಮೂಲೋದ್ಯೋಗದ ಆವಶ್ಯಕತೆ ಇವುಗಳ ಬಗ್ಗೆ ಮಾತನಾಡುತ್ತ ಕಾಯಕವು ಜೀವನದ ಆಧಾರವಾಗಿದೆ, ಸಹಕಾರದ ದ್ಯೋತಕವಾಗಿದೆ, ಎಂದು ಮಾತಾಡುತ್ತ ಮಾರ್ಮಿಕವಾಗಿ ಹೇಳಿದರು.

ಈ ವರ್ಗದ ಮುಖ್ಯ ಸಂಚಾಲಕರಾದ ಶ್ರೀ. ಶಿಗ್ಗಾವಿ ಸಾಹೇಬರವರು ಆಭಾರಮನ್ನಣೆ ಮಾಡಿ ವರ್ಗದ ಕಾರ್ಯವನ್ನು ಪ್ರಾರಂಭಿಸಿದರು.

ಕ್ರೀಡಾವೃತ್ತಿ

ಲೇಖಕರು:—ಶ್ರೀ. ಶಿವಕುಮಾರ J. K. D. T. C M. I year

ತಿಯೊಬ್ಬರಲ್ಲಿ ಕ್ರೀಡಾವೃತ್ತಿ ಸಹಜ ಪ್ರವೃತ್ತಿ. ಮನವು ತ್ತ ಹರಿಯುವದು ಸಹಜ. ಆದರ ಜೊತೆಗೆ ವ್ಯಕ್ತಿತ್ವ ಾಸವಾಗಬೇಕು. ಅಂದರೆ ಶಾರೀರಿಕ ಬೆಳವಣಿಗೆಯ ತೆಗೆ ಮಾನಸಿಕ ಬೆಳವಣಿಗೆಯೂ ಆಗಬೇಕು. ಕ್ರೀಡಿ-ವಾಗ ಸ್ಫೂರ್ತಿ ಉತ್ಪನ್ನವಾಗುತ್ತದೆ. ಅಲ್ಲಿ ತಂತ್ರ್ಯ ಬೇಕು. ಆದರಿಂದಲೇ ಆನಂದ, ಸ್ವಯಂ ರ್ತಿ, ಸ್ವಾತಂತ್ರ್ಯ, ಇವೇ ಕ್ರೀಡಾವೃತ್ತಿಯ ಕ್ಷಣಗಳು. ಈ ಮೂರರಿಂದ ಸಿದ್ಧವಾದ ಮೂರ್ತಿಯೇ ಮನೆಂದು ಆಧ್ಯಾತ್ಮಿಗಳು ಹೇಳುವದುಂಟು. ಆ ತ್ಮರಾಮನ ಜಾಗ್ರತಿಗಾಗಿಯೇ, ವಿಶಾಲತೆಗಾಗಿಯೇ ಗೆತ್ತು ತವಕಪಡುತ್ತಿದೆ. ಅದು ಮಾತ್ರ ಕ್ರೀಡಾವೃತ್ತಿ ಂದ ಸಾಧ್ಯವೆಂದು ಸಾರಬಹುದು.

ಕ್ರೀಡಾವೃತ್ತಿ, ಅನುಕರಣ, ಪುನರಾವರ್ತನ ಈ ಾರು ವೃತ್ತಿಗಳು ಮನುಷ್ಯನಲ್ಲಿರುವವು. ಇವು ಾರು ಶಿಕ್ಷಣದ ಬಾಗಿಲುಗಳು—ಇವುಗಳ ಮುಖಾಂ ಬಾಲಕರು ಶಿಕ್ಷಣ ಪಡೆಯುವರು. ಆದರೆ ಈ ಾರು ಬಾಗಿಲಗಳಲ್ಲಿ ಕ್ರೀಡಾವೃತ್ತಿಗೆ ಅಧಿಕ ಮಹತ್ವ ಟ್ಟಿದೆ. ಏಕೆಂದರೆ ಕ್ರೀಡಾವೃತ್ತಿಯಿಂದ ಬೇಕಾದ ರ್ಯವು ಸಹಜವಾಗಿ ಕೊನೆಗೊಳ್ಳುವದು. ಆಗ ಸವೇ ಆಟವಾಗುತ್ತಿದೆ. ಈಗ ನಾವು ಮಾಡುವ ಸವು ಬಾಹ್ಯ ಪ್ರೇರಣೆಯಿಂದ ಸಾಗುವದು. ಆದರೆ ವು ಮಾತ್ರ ಸ್ವಯಂಸ್ಫೂರ್ತಿದಾಯಕವಾದುದು. ಯಂಸ್ಫೂರ್ತಿ ಯಾವ ವೇಳೆಯಲ್ಲಿ ನಾಶವಾಗು ೋ ಆಗ ಮನುಷ್ಯನು ನಿರುಪಯೋಗಿ ವಸ್ತು ಆಗಿ ೀಗುವನು.

ಪ್ರತಿಯೊಬ್ಬನಲ್ಲಿ ಒಂದು ವಿದ್ಯುತ್ ಪ್ರೇರಣೆಯಿರು ು. ಅದನ್ನು ಪ್ರತಿಯೊಬ್ಬರು ಜಾಗ್ರತಗೊಳಿಸಲು ಕು. ಆದರ ಮೂಲ ಕೀಲಿಯು ಅವರವರ ಮನಸ್ಸಿನಲ್ಲಿಯೇ ಇರುವದು. ಅದನ್ನು ಕೈಯಲ್ಲಿ ತೆಗೆದುಕೊಳ್ಳಲೇಬೇಕು. ಕೀಲಿ ತೆಗೆದು ಮುಕ್ತದ್ವಾರವಾಗಿಟ್ಟು ಮನಸ್ಸನ್ನು ಅಂದರೆ ಸ್ವಯಂಸ್ಫೂರ್ತಿಯಿಂದ ಕಾರ್ಯ ಪ್ರವೃತ್ತನಾಗಬೇಕು. ಅದನ್ನು ಕಲಿಯುವದು ಕ್ರೀಡಾವೃತ್ತಿಯಿಂದ. ಕ್ರೀಡಾವೃತ್ತಿಯುಳ್ಳವನು ಉತ್ತಮ ನಾಗರಿಕನೂ ಉತ್ತಮ ಕರ್ಮಯೋಗಿಯೂ ಒಳ್ಳೆಯ ವಿದ್ಯಾರ್ಥಿಯೂ ಹೌದು. ಅಂಥ ವಿದ್ಯಾರ್ಥಿಗೆ ಸ್ವತಂತ್ರತೆಯಿಂದ ಓದುವ ಪಾಠ ಸಹ ಆಟ. "ಕ್ರೀಡಾವೃತ್ತಿಯಿಂದ ಮಾಡುವ ಪ್ರತಿಯೊಂದು ವ್ಯವಸಾಯವೆಂದರೆ ಕ್ರೀಡನ." ನೆಪೋಲಿಯನ್ನನಿಗೆ ಯುದ್ಧವು ಸಹ ಆಟವಾಗಬೇಕಾದರೆ ಮಹಾತ್ಮಾಜಿಯವರಿಗೆ ರಾಜಕಾರಣವೂ ಸಹ ಆಟವಾಗಬೇಕಾದರೆ ಅವರಲ್ಲಿದ್ದ ಕ್ರೀಡಾವೃತ್ತಿಯೇ ಆದಕ್ಕೆಮೂಲವೆಂದು ಹೇಳಬಹುದು.

ಅಂಥ ಕ್ರೀಡಾವೃತ್ತಿಯು ಪ್ರತಿಯೊಬ್ಬನಲ್ಲಿ ಬೆಳೆದರೇನೇ ನಾಡಿನ ಏಳ್ಗೆ ಎಂದು ಅರಿತ ನಮ್ಮ ಸರಕಾರವು ಹೊಸ ಶಿಕ್ಷಣದಲ್ಲಿಆದಕ್ಕೆ ಪ್ರಾಮುಖ್ಯ ಸ್ಥಾನ ಕೊಟ್ಟಿದೆ. ಈ ಸದುದ್ದೇಶವು ಸಾರ್ಥಕವಾಗಬೇಕಾದರೆ ಶಿಕ್ಷಕರು ಸರಕಾರದ ಕೈದೀವಿಗೆಯಾಗಬೇಕು.

"ಕ್ರೀಡಾ ಪದ್ಧತಿ ಅಂದರೆ ಆಡುತ್ತ ಆಡುತ್ತ ಕಲಿಸುವ ಪದ್ಧತಿ." ಈ ಪದ್ಧತಿಯೂ ಆಟದ ಬೈಲಿನಲ್ಲಿಯೇ ಸಾಗುವದೆಂದಲ್ಲ, ಆ ಆತ್ಮಾರಾಮನ (ಸ್ವಯಂಸ್ಫೂರ್ತಿ+ಸ್ವಾತಂತ್ರ್ಯ+ಆನಂದ=ರಾಮ) ಜಾಗ್ರತಿಯೂ ಎಲ್ಲಿ ಎಲ್ಲಿ ಆಗುವದೊ ಅಲ್ಲಿಯೇ ಶಿಕ್ಷಣ ಸಾಗುವದು. ಆಟದ ಬೈಲೇ ಶಿಕ್ಷಣದ ಮಂದಿರವಾಗಬಹುದು; ಸಾಲೆಯೂ ಶಿಕ್ಷಣದ ಮಂದಿರವಾಗಬಹುದು; ಅವನ ಜೀವನ ಕೇಂದ್ರದ ಶಿಕ್ಷಣವೂ ಮಂದಿರವಾಗಬಹುದು. ಕ್ರೀಡಾವೃತ್ತಿ ಬೆಳೆದರೆ ಅವನ ಜೀವನವಾದರೂ ಒಂದು ಆಟವಾಗುವದು ಬಂದ ಸಂಕಟಕ್ಕೆ ಎದೆಗೊಟ್ಟು ಆಟವಾಡಿದರೆ.

ಪ್ರತ್ಯಕ್ಷ ಜೀವನದಲ್ಲಂತೂ ಇದರ ಉಪಯುಕ್ತ-ತೆಯು ಅತಿಶಯವಾಗಿದೆ. ಸಮಾಜದಲ್ಲಿ ಉತ್ತಮ ಜೀವಿಯಾಗಿ ಬಾಳಬೇಕೆಂದೆನಿಸುವವನಿಗೆ ಇದು ಸುಖ-ದಾಯಕವು, ಸುಸಹಾಯಕವು ಆಗುವದು."ಕೆಳೆಯಂಗೆ ಸೋಲ್ಪಡೆ ಜಯಂ'' ಎಂಬುದನ್ನು ಕೇಳುವದುಂಟು. ಆದರೆ ನಿಜವಾದ ಕ್ರೀಡಾವೃತ್ತಿಯು ವೈರಿಗೆ ಸೋತರೂ ಸಹ ಹಸನ್ಮುಖಿಯಾಗಿರು, ಆನಂದಿತನಾಗಿರು ಎಂಬುದನ್ನು ಹೇಳುತ್ತಿದೆ. ಯಾವನು ತನ್ನ ಪರಾಭವದ ನಂತರವೂ ಸಂತೋಷಿಯಾಗಿರುವನೊ ಅವನಲ್ಲಿ ಕ್ರೀಡ್ಯಾವೃತ್ತಿಯ ಉದಾತ್ತೀರಣವಾಗಿದೆಯೆಂದು ಹೇಳಬಹುದು.

ಜೀವನದಲ್ಲಿ ಕ್ರೀಡಾವೃತ್ತಿಯ ಮಾನವನು ನಿರಾಶನೂ, ಹತಾಶನೂ ಆಗುತ್ತಾನೆ. "ಕ್ರೀಡಾವೃತ್ತಿಯು ಸುಖಿಜೀವನದ ಗುರುಕಿಲ್ಲಿ."ಅದು ಸಿಗಬೇಕಾದರೆ ಅವನ ಜೀವನವು ಅದರಲ್ಲಿ ಪಳಗಲೇಬೇಕು;ಸರ್ವವೂ ಸಮಾನವೆಂದು ತಿಳಿಯುವ ಭಾವ ಬೆಳೆಯಬೇಕು; ಸುಖದುಃಖಗಳಲ್ಲಿ ಸಮಾನಂದನಾಗಿರಬೇಕು. ಎಂದು ಸುಖದುಃಖಗಳು ಸಮಾನವಾಗುವವೋ ಅಂದು ಅವನು ಮಾನವನ ಮೆಟ್ಟಿಲನ್ನು ದಾಟುತ್ತಾನೆ. ಸಮತ್ವವೃತ್ತಿ-ಸಮಭಾವದ ವೃತ್ತಿಯೂ ಜಾಗೃತವಾದರೆ ಅವನು ಸಮತ್ವಯೋಗ ಸಾಧಿಸದಂತಾಯ್ತು. ಯೋಗ ಸಾಧನೆಯು ಸುಲಭ ಸಾಧ್ಯವಲ್ಲ. ಹಲಕೆಲವರು ಹಲವಾರು ಕಷ್ಟಸಹಿಸಿ, ಹಲವಾರು ಮಾರ್ಗದಿಂದ ಈ ಯೋಗ ಸಾಧಿಸಿದರೂ ಕೊನೆಗೆ ಅವರಲ್ಲಿ ಕ್ರೀಡಾವೃತ್ತಿಯು ಅತಿಯಾಗಿ ಬೆಳೆದದ್ದು ಕಂಡುಬಾರದೆ ಇರದು.

ಸಮತ್ವಯೋಗದ ಸಲುವಾಗಿ ಶ್ರೀಕೃಷ್ಣನು ಭಗ-ವದ್ಗೀತೆಯ ೧೨ ನೇ ಅಧ್ಯಾಯದಲ್ಲಿ ಸವಿಸ್ತಾರವಾಗಿ ಹೇಳಿದ್ದಾನೆ. ಆಚಾರ, ವಿಚಾರ, ವಿಕಾರ ಇವು ಮಾನವ ಜೀವನದ ಮೂರು ಅಂಗಗಳು. ಈ ಮೂರು ಅಂಗಗಳಲ್ಲಿ ಯಾವಾಗ ಸಮತ್ವ ಬರುವದೋ ಆಗ ಸಮತ್ವಯೋ ಸಾಧಿಸಿದಂತಾಯ್ತು.

ಆಚಾರವು ಚಿತ್ತಶುದ್ಧಿಯುಳ್ಳದ್ದಿರಬೇಕು. ವಿಚಾ ಸತ್ಯಮಯವಾಗಿರಬೇಕು. ವಿಕಾರವು ಆನಂದ ಯಾಗಿರಬೇಕು. ಆ ಸತ್ + ಚಿತ್ + ಆನಂದ ಯಾದ= ಸದಾನಂದನಲ್ಲಿ ಸ್ಥಾನ ಸಿಗುವಂತಿರಬೇ ಈ ಆತ್ಮಕ್ಕೆ ಇದು ಎಲ್ಲವು ಕ್ರೀಡಾವೃತ್ತಿಯಿಂದ ಸಾ ಶೈಕ್ಷಣಿಕ, ವ್ಯವಹಾರಿಕ (ಲೌಕಿಕ), ಆಧ್ಯಾತ್ಮಿಕ ಷ ಲಾದ ಜೀವನದ ಪ್ರಗತಿ ಮಾರ್ಗದಲ್ಲಿ ಮಾರ್ಗದ ವಾಗುವದು ಈ ಕ್ರಿಡಾವೃತ್ತಿಯಿಂದ. ಕಲಿಯುವ ಕಲಿಸುವವರು ಕ್ರಿಡಾವೃತ್ತಿಯುಳ್ಳವರಿದ್ದರೆ ಕ್ರೀಡಾ ಣವು ಆನಂದಮಯ ಮಂದಿರವಾಗುವದು ಈ ಆನ ಮಂದಿರದಲ್ಲಿ ಆನಂದ ಮೂರ್ತಿಗಳೇ ನಿರ್ಮಾ ಹೊಂದುವದು ಸಹಜ. ಅದಕ್ಕೆ ಶಿಕ್ಷಣವು ಅವಶ್ಯ.

ಶಿಕ್ಷಣ ಇದರ ಅರ್ಥ ಕ್ರೀಡಾವೃತ್ತಿಯ ಜಾಗ್ ಅಂದರೆ ಆತ್ಮರಾಮನ ಜಾಗ್ರತಿ. ನಮಗೆ ಬಾಹ್ಯ ಗಿಂತಲೂ ಅಂತರಿಕ ಶಿಸ್ತು ಅವಶ್ಯವಿದೆ. ತಾಲ, ತಪ್ಪಿದರೆ ಅಡ್ಡಿಯಿಲ್ಲಾ-ವಿಚಾರ-ವೃತ್ತಿ ಮಾತ್ರ ಬಾರದು.

ಅಂತರ ಶಿಸ್ತಿನಿಂದ ವ್ಯಕ್ತಿಯ ವಿಕಾಸವಾಗುತ್ ವ್ಯಕ್ತಿಯ ವಿಕಾಸವೆಂದರೆ ಸಮಾಜದ ವಿಕಾಸ. ಸಾ ಜದ ವಿಕಾಸವೆಂದರೇನೇ ರಾಷ್ಟ್ರದ ವಿಕಾಸ. ಸಮ ವಿಕಾಸದ ಶ್ರೇಯಸ್ಸು ವ್ಯಕ್ತಿಗೆ. ವ್ಯಕ್ತಿಯ ವಿಕಾ ಶ್ರೇಯಸ್ಸು ಕ್ರೀಡಾವೃತ್ತಿಗೆ.

ಇಂಥ ಕ್ರೀಡಾವೃತ್ತಿಯು ಪ್ರತಿಯೊಬ್ಬ ಪುರುಷ ಬೆಳೆದರೆ ಮಹಾತ್ಮರ ಮನೋ ಮಂದಿರವು ದೇ ಮಂದಿರವಾಗಿ, ಭಾರತವು ಆದರ್ಶವಾಗುವದ ಸಂದೇಹವಿಲ್ಲ.

ಶಿಕ್ಷಕನೂ—ಏಕಾಗ್ರತೆಯೂ

ಲೇಖಕ : ಶ್ರೀ. ಗುರಲಿಂಗ ಕಾಪಸೆ, ಬಿ. ಡಿ. ಇ ಎಸ್. ಟ್ರೇ. ಕಾ. ವಿಜಾಪುರ

ಕುತೂಹಲ ಪ್ರವೃತ್ತಿಯು ಕೆರಳಿದಾಗ ಅಭಿರುಚಿಯು ಅಂಕುರಿಸುತ್ತದೆ. ಅಭಿರುಚಿಯು ಅವಧಾನಕ್ಕೆ ತಾಯಿ-ಬೇರು, ಅವಧಾನದಿಂದ ಫಲಪ್ರಾಪ್ತಿ ಅಥವಾ ಯಶಸ್ಸು. ಯಾವದೇ ಒಂದು ಕಾರ್ಯದ ಯಶಸ್ಸು ಅವಧಾನವನ್ನವಲಂಬಿಸಿದೆ ಎಂಬುದು ಸಿದ್ಧವಾದ. ಈ ಅವಧಾನಕ್ಕೇ ವಿಶಾಲಾರ್ಥದಲ್ಲಿ ಏಕಾಗ್ರತೆ, ತಲ್ಲೀನತೆ, ತನ್ಮಯತೆ ಎಂದು ಬೇರೆ ಬೇರೆಯಾಗಿ ಕರೆಯುವರು.

ನಿರಂತರ ವಿದ್ಯಾರ್ಥಿಯಾದ ಮಾನವನು ತಾನು ಕೈಕೊಂಡ ವೃತ್ತಿಯಲ್ಲಿ ಗೆಲುವನ್ನು ಪಡೆದುಕೊಂಡು, ಸಂತಸದ ಬಾಳನ್ನು ಬಾಳಬೇಕಾದದು ಮಹತ್ವದ ಮಾತು. ದಿನಕ್ಕೊಂದರಂತೆ ಇನ್ನೊಬ್ಬರ ಸೊಬಗನ್ನು ಕಂಡು ತಮ್ಮ ಅಭಿರುಚಿಯನ್ನು ದಬ್ಬಿ, ಮತ್ತೊಂದು ಮಗುದೊಂದು ವೃತ್ತಿಯನ್ನು ಅನುಕರಿಸ ಬಯಸಿದ ಚಂಚಲ ಸ್ವಭಾವದವರನೇಕರು ಬಾಳನ್ನು ಹಾಳು ಮಾಡಿಕೊಂಡಿದ್ದಾರೆ. ಹೀಗಾಗಲಿಕ್ಕೆ ಮೂಲಕಾರಣವೆಂದರೆ ಅವರಿಗೆ ಯೋಗ್ಯ ಸಂಸ್ಕಾರವಾಗದಿರುವದು ಮತ್ತು ತನಗಿಷ್ಟವಿರುವ ಮಾತಿನ ಬಗ್ಗೆ ಸ್ವತಂತ್ರವಾಗಿ ವಿಚಾರಿಸದೇ ಇರುವದು. ಯಾರಲ್ಲಿ ಸ್ವತಂತ್ರ ವಿಚಾರ ಮಾಡುವ ಸಂಸ್ಕಾರವಾಗಿರುತ್ತದೆಯೋ ಅವರು ತಮ್ಮ ವೃತ್ತಿಯನ್ನು ನಿರ್ಧರಿಸಬಲ್ಲವರೂ, ನಿರ್ವಹಿಸಬಲ್ಲವರೂ ಆಗಿರುತ್ತಾರೆ. ಹಂತಗಳನ್ನೇರಿ ನಿರ್ವಹಣೆಯ ಗುರಿಯನ್ನು ಮುಟ್ಟಲು ಸದಾ ಚಿಂತನೆ ಮಾಡುವವರಲ್ಲಿರುತ್ತಾರೆ, ಈ ಚಿಂತನೆಯೇ ಏಕಾಗ್ರತೆ. ಕೃತಿಯಲ್ಲಿ ತೊಡಗಿದಾಗ ಹೊರ ಜಗತ್ತನ್ನು ಮರೆತು ಅದರಲ್ಲಿಯೇ ನಿಮಗ್ನನಾಗಿರುವದೇ ತನ್ಮಯತೆ.

ಆಟದಲ್ಲಿ ತೊಡಗಿದ ಬಾಲಕನು ಊಟವನ್ನೂ ಮರೆಯುತ್ತಾನೆ, ಕೈ-ಕಾಲು-ಶರೀರ ದಣಿದಾಗ್ಯೂ ಆಟ ರಭಸದಿಂದ ಸಾಗಿದಂತೆ ಉತ್ಸಾಹ ಹೆಚ್ಚುತ್ತಲೇ ಇರುತ್ತದೆ. ಅವನ ಕಣ್ಣಿಗಾಗ ಕಾಣುತ್ತಿರುವುದು ಆಟ, ಅದರ ಯಶಾಪಯಶ. ಈ ಹೊತ್ತಿಗೆ ಹೊರಗಿನವರು ಯಾರಾದರೂ ಅವನನ್ನು ಕೂಗಿದರೆ ಕೇಳಿಸುವದಿಲ್ಲ. ಹತ್ತಿರ ಬಂದು ಮಾತಾಡಿಸಿದಾಗ ಸಮಾಧಿ ಭಂಗವಾದ ಋಷಿಯಂತೆ ಒಮ್ಮೇಲೆ ಕೆರಳಿ ನಿಲ್ಲುತ್ತಾನೆ, ಮನದಲ್ಲಿ ಶಪಿಸುತ್ತಾನೆ. ಮಗುವಿನ ಮಟ್ಟಿಗೆ 'ಆಟ'ವು ಅದೊಂದು ಅವನ ವೃತ್ತಿಯೇ ಸರಿ.

ಜೋಳದ ಬೆಳೆ ರಭಸದಿಂದ ಬೆಳೆಯುತ್ತಿರುತ್ತದೆ. ಇನ್ನೂ ತೆನೆ ಹಾಕಲು ಕೆಲವು ದಿನಗಳು ಬೇಕು. ಹೊಲವು ಬಿಗಿದು ನಿಂತಿದೆ. ಆದರೆ ಮಧ್ಯದಲ್ಲಿ ಕಸವೂ ಬೇರೆ ಬೆಳೆದು ಬಿಟ್ಟಿರುತ್ತದೆ. ಈ ಹೊತ್ತಿಗೆ ಬೆಳೆಯ ಸಿರಿಯನ್ನು ಕಂಡು ಹಿರಿ ಹಿಗ್ಗುವ ರೈತ ಎಡೆಹೊಡೆದು ಕಸ ತೆಗೆಯಲು ವ್ಯಕ್ತನಾಗುತ್ತಾನೆ. ಬರಲಿರುವ ಬೆಳೆಯು ಕಲ್ಪನಾ ಸಾಮ್ರಾಜ್ಯದಲ್ಲಿ ಕಸತೆಗೆಯುತ್ತ ಒಮ್ಮೊಮ್ಮೆ ಜೋಳದ ದಂಟನ್ನೂ ತೆಗೆಯ ಹೋಗಿ, ಮತ್ತೆ ತಪ್ಪನ್ನು ತಿಳಿದು ಕಾರ್ಯೋನ್ಮುಖನಾಗುತ್ತಾನೆ, ದಕ್ಷತೆಯನ್ನೂ ವಹಿಸುತ್ತಾನೆ. ಜೋಳದ ದಂಟು ತೆಗೆಯ ಹೋದಾಗ ತನ್ಮಯತೆ ಕಲಕಿದೆ ಎಂಬುದು ಸ್ಪಷ್ಟವಾಗುತ್ತದೆ.

ಭಾವನಾ ಪ್ರಧಾನತೆಯು ಮನಸ್ಸಿನ ಮುಖ್ಯವಾದ ಭಾಗ. ಕೃತಿಗೂ--ಭಾವನೆಗೂ ಹೊಂದಿಕೆಯಿರಬೇಕು. ಶಿಲ್ಪಿ, ಚಿತ್ರಗಾರ, ಕವಿ, ಇವರೆಲ್ಲರೂ ತಮ್ಮ ತಮ್ಮ ವೃತ್ತಿಯಲ್ಲಿ ತನ್ಮಯರಾದಾಗ ಉತ್ಕೃಷ್ಟವಾದ ಕೃತಿ ನಿರ್ಮಾಣವಾಗುತ್ತದೆ.

'ಶಿಕ್ಷಕ' ಎಂಬ ವ್ಯಕ್ತಿಯು ಶಿಲ್ಪಿ, ಚಿತ್ರಗಾರ, ಕವಿ, ಸಾಧಕ, ಅಥವಾ ಯಾವದೇ ಬೇಸಾಗಾರನಕಿಂತ ಹೆಚ್ಚಿನ ಕಲಾವಿದ. ಈತನ ಕಲೆ ಚೇತನ ಮಕ್ಕಳ ಸರ್ವಾಂಗ ಸುಂದರತೆಯನ್ನು ನಿರ್ಮಾಣ ಮಾಡುವದರಲ್ಲಿದೆ. ಮಕ್ಕಳ ಮಧ್ಯದಲ್ಲಿದ್ದು ಅವರ ಒಲವು-ನಿಲವುಗಳನ್ನು ಪರಿಶೀಲಿಸುವ 'ಅಭಿರುಚಿ' ಶಿಕ್ಷಕನಲ್ಲಿರಬೇಕು. ಅದರೊಂದಿಗೆ ತಾಳ್ಮೆ ಸಂಯಮನಗಳೂ ಅವಶ್ಯ, ಆ ಮೇಲೆ ತಾನೇ ತಾದಾತ್ಮ್ಯಯ ಭಾವ ಬರುತ್ತದೆ.

ವರ್ಗದಲ್ಲಿ ಪಾಠಕ್ಕಾರಂಭವಾದಾಗ ಮಕ್ಕಳಲ್ಲಿ ಕೇಳುವ, ಮಾಡುವ ಅಥವಾ ಕಲಿಯುವ ಅವಧಾನವಿರುವಂತೆ

ಶಿಕ್ಷಕನಲ್ಲಿಯೂ 'ಕಲಿಸುವ' ಅವಧಾನ ಇರಲೇಬೇಕು.

ಪ್ರಾಥಮಿಕ ಶಿಕ್ಷಕನಾದವನಿಗೆ ತಾನು ಕಲಿಸುವ ಪ್ರತಿಯೊಂದು ವಿಷಯದಲ್ಲಿ ಅಭಿರುಚಿಯಾಗಲೀ, ಆಸಕ್ತಿಯಾಗಲೀ ಇರುವದು ಅಸಂಭವನೀಯ. ಆದರೆ ಪ್ರತಿಯೊಂದು ವಿಷಯವನ್ನು 'ಕಲಿಸುವ' ಅಭಿರುಚಿ ಇರಬೇಕಾದುದು ಅನಿವಾರ್ಯ. ಕಲಿಸಬೇಕೆಂಬ ಅಭಿರುಚಿ ಹೃದಯದಿಂದ ಚಿಮ್ಮಿದಾಗ ಅನಾಭಿರುಚಿಯುಳ್ಳ ವಿಷಯದಲ್ಲಿಯೂ ಸದಭಿರುಚಿ ಮೂಡುವದರಲ್ಲಿ ಸಂದೇಹವಿಲ್ಲ.

ಶಿಕ್ಷಕನಾದ ಪ್ರತಿಯೊಬ್ಬನಲ್ಲಿ ತಾನು ಶಿಕ್ಷಕ, ತನ್ನ ಹೊಣೆ ದೊಡ್ಡದು, ಎಂಬ ಅರಿವು ಅವನ ಅಂತರಾತ್ಮನಿಗೆ ಇದ್ದೇ ಇರುತ್ತಿದೆ. ಹೀಗಿದ್ದರೂ ಶಿಕ್ಷಕನಿಗೆ ಯೋಗ್ಯ ಸಂಸ್ಕಾರದ ಅಭಾವವಾಗಿಯೋ ಬೌದ್ಧಿಕ ದೌರ್ಬಲ್ಯದ ಮೂಲಕವೋ, ಮನಸ್ಸನ್ನು ಮಂತ್ರಿಕರಿಸದೆ ಹೊಣೆಯನ್ನು ನಿರ್ವಹಿಸದವನಾಗುತ್ತಾನೆ. ಇದಕ್ಕೆ ಶಿಕ್ಷಕರಾಗುವವರಿಗೆ ಅವರ ಗುರುಗಳು ಕೊಟ್ಟ ಶಿಕ್ಷಣದ ಪ್ರಭಾವವೂ ಕಾರಣವಿರಬೇಕು.

ಆದರೆ ಇಂದು ಪೂರ್ವಗ್ರಹ ದೂಷಿತವಾದ ಶಿಕ್ಷಕ, ಮೊದ ಮೊದಲು ಕಾರ್ಯ ನಿರ್ವಹಣೆಯನ್ನು ಆದರ್ಶ ಶಿಕ್ಷಕರ ನೆರವಿನಿಂದಾಗಲೀ, ಅನುಕರುಣೆಯಿಂದಾಗಲೀ ಮಾಡುತ್ತಿರಬೇಕು. ಅನುಕರುಣೆಯು ರೂಢಿಯಾಗಿ ಆಸಕ್ತಿಯು ಅಭಿವೃದ್ಧಿ ಹೊಂದಿ ಒಂದು ಮಟ್ಟಕ್ಕೆ ಬಂದಾಗ ಅದಕ್ಕೆ ಸ್ವತಂತ್ರ ವಿಚಾರದ ಜೋಡಣೆ ಮಾಡಿ ಮುನ್ನಡೆಯಬೇಕು. ಇದರಿಂದ ಮನಸ್ಸಿನ ಮೇಲೆ ತಮ್ಮ ಹಿಡಿತವೂ ಉಳಿಯುತ್ತದೆ. ಹಾಗೆಯೇ ಪಳಗಿದಂತೆ ಗೆಲುವೂ ದೊರಕುತ್ತದೆ.

ವೇದಿಕೆಯ ಮೇಲೆ ನಿಂತು ಮಾತನಾಡುವ ಉಪನ್ಯಾಸಕರು ಹುಟ್ಟಾ ವಾಕ್ಚತುರರಾಗಿರುತ್ತಾರೆ ಎಂಬುದು ಸಂಶಯಾಸ್ಪದವಾದ ಮಾತು. ಮೊದಲನೆಯ ಬಾರಿಗೆ ವೇದಿಕೆಗೆ ಬಂದಾಗ ಎದುರಿನ ಜನರನ್ನು ಕಂಡು ಮೈಯಲ್ಲಿ ನಡುಕು ಹುಟ್ಟುತ್ತದೆ, ಬೆವರು ಬರಲಾರಂಭಿಸುತ್ತದೆ, ಮಾತು ತೊದಲಿಸುತ್ತದೆ, ವಿಷಯ ಪ್ರತಿಪಾದನೆಯು ಮನಸ್ಸಿನಲ್ಲಿಯೇ ಅಡಗಿಕೊಳ್ಳುತ್ತದೆ. ಹೀಗಾಗುವದಕ್ಕೆ ರೂಢಿ ಇಲ್ಲದಿರುವದೇ ಮುಖ್ಯಕಾರಣ. ರೂಢಿ ಮಾಡಿದರೂ ವಿಷಯವನ್ನು ಆಕ್ರಮವಾಗಿಯೂ, '' ಅಂ. ಉಂ. ''ಗಳ ಉಸಿರಾಟದಿಂದಲೂ, 'ಅದು, ಇದು' ಮುಂತಾದ ಸರ್ವನಾಮಗಳ ಶಬ್ದಪ್ರಯೋಗದಿಂದಲೂ ಉಪನ್ಯಾಸ ಮಾಡುವದನ್ನು ನಾವು ಕಾಣುತ್ತೇವೆ. ಹೀಗಾಗಲಿಕ್ಕೆ ಉಪನ್ಯಾಸಕರು ಮಾತನಾಡುವ ವಿಷಯವನ್ನು ಮೊದಲು ತಾದಾತ್ಮ್ಯಭಾವದಿಂದ ವಿಚಾರಿಸದಿರುವದೂ ಒಂದು ಕಾರಣ. ವಿಚಾರಿಸಿದ್ದರೂ ವೇದಿಕೆಯ ಮೇಲೆ ಬಂದಾಗ ಪ್ರಸ್ತುತ ವಿಷಯದಲ್ಲಿ ತಲ್ಲೀನರಾಗದೆ ಇನ್ನಾವುದೋ ವಿಚಾರದ ಗೊಂದಲದಲ್ಲಿ ಸಿಲುಕಿದ್ದುದೂ ಮತ್ತೊಂದು ಕಾರಣ. ಅಂದರೆ ಏಕಾಗ್ರತೆಯ ಅಭಾವವು ಎಲ್ಲಕ್ಕೂ ಮುಖ್ಯ ಕಾರಣವಾಯಿತು. ಏಕಾಗ್ರತೆಯುಳ್ಳ ಮಾತುಗಾರನ ಮಾತು ಗಂಗಾ ಪ್ರವಾಹದಂತೆ ಸಂತತವೂ ತುಂಬಿ ಹರಿಯುತ್ತದೆ. ಅದು ನಿರರ್ಗಳವಾಗಿ ಸುರಿಯುವ ವಾಕ್ಸೋನೆ ಎಂದರೂ ಸರಿಯೇ, ಜನರೆಲ್ಲ ಆ ಪ್ರವಾಹದಲ್ಲಿ ತೇಲುವರು, ಸೋನೆಯಲ್ಲಿ ಮೀಯುವರು.

ಪರೀಕ್ಷೆಯಲ್ಲಿ ಪೇಪರು ಬರೆಯುವಾಗ ಏಕಾಗ್ರತೆಯ ಅನುಭವ ಪ್ರತಿಯೊಬ್ಬ ವಿದ್ಯಾರ್ಥಿಗೂ ಬಂದಿರುತ್ತದೆ. ಮೂರು ತಾಸು ಎಂದೂ ಒಂದೆಡೆಗೆ ಕೂಡದ ಚಂಚಲ ಸ್ವಭಾವದ ವಿದ್ಯಾರ್ಥಿಗಳು ಅಂದು ಮೂರೂ ತಾಸು ಕದಲದೆ ಬರೆಯುವದರಲ್ಲಿ ಲೀನವಾಗಿರುವದನ್ನು ಕಾಣುವೆವು. ಅವರು ಪರೀಕ್ಷೆ ನಡೆದಾಗ ಹೊಡೆಯುವ ಒಂದು, ಎರಡು ತಾಸಿನ ಗಂಟೆಗಳು ಕೇಳುವದೇ ಇಲ್ಲ, ಕೊನೆಯ್ಯ ಗಂಟೆಯಾದಾಗ ಬೆಚ್ಚಿ ಬೀಳುತ್ತಾರೆ. ಕೆಲವು ವಿದಾರ್ಥಿಗಳಿಗಂತೂ ಕೈಯಲ್ಲಿಯ ಪೇಪರು ಕಸಿದುಕೊಳ್ಳುವಾಗಲೇ ಎಚ್ಚರವಾಗುವದು. ವಿದ್ಯಾರ್ಥಿಯ ಮೂರು ತಾಸಿನ ಏಕಾಗ್ರತೆಯು ಪರೀಕ್ಷೆಯ ಪರಿಣಾಮವನ್ನು ಅವಲಂಬಿಸಿದೆ.

ಏಕಾಗ್ರತೆಯು ಒಂದು ಧ್ಯಾನ ಸಮಾಧಿ. ಅದು ಒಂದಿಲ್ಲ ಒಂದು ವಿಷಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಕಾಣಿಸುತ್ತದೆ. ಭಾವಜೀವಿ ಯಾವಾಗಲೂ 'ಹಗಲುಗನಸು' ಕಾಣುತ್ತಿರುತ್ತಾನೆ. ಈ 'ಹಗಲುಗನಸಿ'ನ ಸಚ್ಚಿತ್ರವನ್ನು ನಿರ್ಮಿಸಿಕೊಳ್ಳುವದು ಅವರವರಿಗೆ ಸಂಬಂಧಿಸಿದ ಸಂಗತಿ. '' ನಾನು ಶಿಕ್ಷಕ '' ಎನ್ನುವ ವ್ಯಕ್ತಿಯ ಭಾವದೆದುರು ಇಂದಿನ ಮಗು, ನಾಳಿನ ರಾಷ್ಟ್ರ, ಅದರಲ್ಲಿ ತನ್ನ ಹೊಣೆ, ಇವುಗಳ ಹಗಲುಗನಸನ್ನು ಕಂಡು, ತನ್ನ ಗುರಿಯನ್ನು ಮುಟ್ಟಲು ಶ್ರಮವಹಿಸಬೇಕು. ಈ ಶ್ರಮವು ದಿವ್ಯವಾದ ಸಾಧನೆಯಾಗಬೇಕು. ಅದರಿಂದ ಭವ್ಯವಾದ ತಪಸ್ಸಿದ್ಧಿಯಾಗಬೇಕು. ಇಂದು ನಮ್ಮ ನಾಡಿಗೆ ಬೇಕಾಗಿರುವ ಶಿಕ್ಷಕರು ಇಂಥ ಏಕಾಗ್ರಮನಸಿನ ಸಿದ್ಧ ಪುರುಷರು.

Regd. No. B. 5375

ಹೊಸ ಪುಸ್ತಕಗಳು ! ✻ ಹೊಸ ಅಭ್ಯಾಸ ಪತ್ರಿಕೆಯಂತೆ !!

ಸರಕಾರದವರು ೧೯೫೭-೧೯೫೮ನೆಯ ಸಾಲಿನಿಂದ ಪಠ್ಯ (TEXT) ಪುಸ್ತಕಗಳೆಂದು ಮಂಜೂರು ಮಾಡಿದ್ದಾರೆ.

ಗಣಿತ ಬೋಧೆ

(೪ ರಿಂದ ೭ನೆಯ ಇಯತ್ತೆಯ ವರೆಗೆ ಬೇರೆ ಬೇರೆಯಾಗಿ)

ತಜ್ಞ ಹಾಗು ಅನುಭವಿಕ ಪಂಡಿತರಿಂದ ಈಗಿನ ಹೊಸ ಅಭ್ಯಾಸ ಪತ್ರಿಕೆಗನುಸರಿಸಿ ಈ ಎಲ್ಲ ಪುಸ್ತಕಗಳ ಆಯಾ ತರಗತಿಗಳಿಗೆ ಬರೆಯಲ್ಪಟ್ಟಿವೆ ಹಾಗು ಗಣಿತದ ಎಲ್ಲ ವಿಷಯಗಳ ವಿವೇಚನೆಯು ಸರಿಯಾ[ಗಿ] ಮಾಡಲ್ಪಟ್ಟಿವೆ.

ಈ ವರೆಗೂ ಯಾವ ಗಣಿತಗಳಲ್ಲಿಯೂ ಸ್ಪಷ್ಟವಾಗಿ ವಿವೇಚಿಸಲ್ಪಡದ ಹಾಗು ಬಾಲಕರಿಗೆ ಕಠಿಣವೆನಿಸ[ುವ] ಅಪೂರ್ಣಾಂಕ ಸಮ-ವ್ಯಸ್ತ ತ್ರೈರಾಶಿಕ, ಪ್ರಮಾಣ ಭಾಗ, ದಶಾಂಶ ಅಪೂರ್ಣಾಂಕ, ಶತಮಾನ, ಮುಂ[ದೆ] ಕೊಳ್ಳುವ ಬಡ್ಡಿ, ರೋಖು-ಉದ್ರೀ ವ್ಯವಹಾರ, ತೋಡಿಬಾಕಿ, ಕ್ಷೇತ್ರಫಲ, ಘನಫಲದ ನಿಯಮಗಳು, ವೇಳೆ-ಕೆಲಸ-ವೇಗ, ಭೂಮಿತಿ, ರೇಖಾರೂಪ (ಗ್ರಾಫ), ಪ್ರಮಾಣದ ನಕ್ಷೆ, ಭೂಮಾಪನದ ವಿಷಯ[ಕ] ಚೀಟಿಗಳು ಇವೇ ಮೊದಲಾದ ವಿಷಯಗಳ ವಿವರಣೆಯು ಆಯಾ ಗಣಿತ ಬೋಧೆಗಳಲ್ಲಿ ಚಿತ್ರ, ಉಪಕರ[ಣ]ಗಳೊಂದಿಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಮನನವಾಗುವಂತೆ ವಿವರಿಸಲಾಗಿದೆ. ಇದರೊಳಗ[ಿನ] ಉದಾಹರಣೆಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಗಣಿತ ವಿಷಯದಲ್ಲಿ ಅಭಿರುಚಿಯನ್ನು ಹುಟ್ಟ[ಿಸುವ]ಂಥವೂ ಇದ್ದು ಸುಲಭವಾದ ಶೈಲಿಯಲ್ಲಿ ಕೊಡಲ್ಪಟ್ಟಿವೆ.

ಕರ್ನಾಟಕ ಕಾಲೇಜದ ನಿವೃತ್ತ ಗಣಿತ ಪ್ರಾಧ್ಯಾಪಕರಾದ ಶ್ರೀಮಾನ್ ಪಿ. ಬಿ. ಬಾಗಿಲುಮನೆ[?] ಶಿಕ್ಷಣದಲ್ಲಿ ನುರಿತ ಹಾಗೂ ಮುಂಬೈ ಮಂಡಳಿಯ ಸದಸ್ಯರಾದ ಶ್ರೀಮಾನ್ ಎಚ್. ಎಸ್. ಕಟ್ಟಿಮನಿಯವರೂ ಇವುಗಳನ್ನು ಓದಿ ಇವುಗಳಲ್ಲಿ ಪ್ರತಿಯೊಂದು ಪ್ರಶ್ನೆಯ ವಿವರಣೆಯನ್ನು ಶಿಕ್ಷಕರಿಗ[ೂ] ವಿದ್ಯಾರ್ಥಿಗಳಿಗೂ ಮನದಟ್ಟಾಗುವ ರೀತಿಯಲ್ಲಿ ಕ್ರಮಬದ್ಧವಾಗಿಯೂ ತರ್ಕಶುದ್ಧವಾಗಿಯೂ ಮಾಡಲಾಗಿದೆ.

माता का उपदेश— १, २ (ನನ್ನ ತಾಯಿಯ ಹಿಂದೀ ಸಂಸ್ಕರಣ) ಸಿದ್ಧವಾಗಿದೆ.

नीति कथा— १, २, ३ (ನಾಡದ ನೆರೆಗಾರ ಹಿಂದೀ ಸಂಸ್ಕರಣ) ಅಚ್ಚಿನಲ್ಲಿ !

ಹಿಂದಿ ವ್ಯಾಕರಣ— (ಅಚ್ಚಿನಲ್ಲಿ)

ಕನ್ನಡ ಸಾಹಿತ್ಯ ಪ್ರಕಾಶನ,
ಧಾರವಾಡ

Printed by M. A. Kamat, B. Sc. at Jai Hind Art Press Dharwar. Edited and Published S. P. Patil B. M. Shintri, S. R. Tatti, & Smti. S. S. Channapattona at the Kann- Prathamik Shikshan Office, Govt. Training College for Men. Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಎಸ್. ಪಿ. ಪಾಟೀಲ

17/7/54

ರ್‍ಯಾಂಗಲರ ಡಿ. ಸಿ. ಪಾವಟೆ

ಕರ್ನಾಟಕ ವಿಶ್ವವಿದ್ಯಾಲಯದ ಹೊಸ ಉಪಕುಲಪತಿಗಳು

ವಾ. ಚಂ. ೪ರು

ಬಿಡಿ ಪ್ರತಿ ೬ಆ

ಕನ್ನಡ ಪ್ರಾಥಮಿಕ ಶಿಕ್ಷಣ

17/7/54

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್‌ಸಿ., (ಆನರ್ಸ) ಬಿ. ಟಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹ ಸಂಪಾದಕರು:

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೪	ಜುಲೈ ೧೯೫೪	ಸಂಚಿಕೆ ೨

ಪರಿವಿಡಿ

೧. ಕನ್ನಡ ವರ್ಷ ಪ್ರಾಯಿಜ ಪರೀಕ್ಷೆ—೧೯೫೪.... .... ೨
೨. ಸಂಪಾದಕೀಯ ೩
೩. ವಿದ್ಯಾರ್ಥಿಗಳಿಗೆ ವಿಚಾರಮಾಡುವ ರೀತಿಯ ಶಿಕ್ಷಣ .... ಶ್ರೀ. ತಟ್ಟಿ ಶ್ಯಾಮರಾಯರು ೫
೪. ನೋಬೆಲ್ ಪಾರಿತೋಷಕ .... ಶ್ರೀ. ಶಿಂತ್ರಿ ಬಸಪ್ಪನವರು ೭
೫. ಇಂಡೋನೇಶಿಯಾದ ಶಿಕ್ಷಣ ಕ್ರಮ .... ಶ್ರೀ. ಎಸ್. ಎಂ. ಹಳ್ಳಿಕೇರಿ ೧೦
೬. ಮೂಲ ಶಿಕ್ಷಣ .... ಶ್ರೀ. ತಟ್ಟಿ ಶ್ಯಾಮರಾಯರು ೧೧
೭. ಸಮಾಜದಲ್ಲಿ ಶಿಕ್ಷಕನ ಸ್ಥಾನಮಾನ .... ಶ್ರೀ. ಈಶ್ವರಚಂದ್ರ ಚಿಂತಾಮಣಿ ೧೩
೮. ಶ್ರೀ. ಮಿರ್ಜಿ ಅಣ್ಣಾರಾಯರು .... ಶ್ರೀ. ದಿ. ರಾ. ಘೋರಪಡೆ ೧೬
೯. ಬುದ್ಧಿಮಾಪನ ಪರೀಕ್ಷೆಗಳು .... ಶ್ರೀ. ಎಸ್. ಎಂ. ಹಳ್ಳಿಕೇರಿ ೨೧
೧೦. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೩
ಅಪೂರ್ವ ಯಶಸ್ಸು ೪, ೨೩ ನೇಯ್ಗೆಯ ತರಬೇತಿ ವರ್ಗದ ವರದಿ ೨೪

ಕನ್ನಡ 'ವರ್ಥ ಪ್ರಾಯಿಜ' ಪರೀಕ್ಷೆ—೧೯೫೫

(ಮುಂಬಯಿ ಸರಕಾರದ ವಿದ್ಯಾಖಾತೆಯು ತಾ. ೪-೨-೧೯೫೪ ರ ಗೊತ್ತುವಳಿ ನಂ CEF 1054 ಮತ್ತು ಪ್ರಕಟನೆಯ ಮೇರೆಗೆ)

೧. ಪರೀಕ್ಷೆಯ ವಿಷಯಗಳು :– (೧) ವ್ಯಾಕರಣ ಮತ್ತು ಛಂದಸ್ಸು (೨) ಹಳಗನ್ನಡ ನಿಬಂಧ (೩) 'ಕನ್ನಡ ಬಾವುಟ'ದಿಂದ ಕವಿತೆಗಳು. (೪) ಹಳಗನ್ನಡದ ಗೊತ್ತಿದ್ದ ಗದ್ಯಸಂಗ್ರಹ (೫) ಹೊಸಗನ್ನಡ ನಿಬಂಧ. (೬) ೧೨ ನೆಯ ಶತಮಾನದ ಕನ್ನಡ ಸಾಹಿತ್ಯ.

೨. ಬಹುಮಾನ :– ಈ ಮೊದಲು ಇದ್ದ ೮೦ ರೂಪಾಯಿಗಳ ಒಂದೇ ಬಹುಮಾನದ ಬದಲಾಗಿ ಇನ್ನು ಮುಂದೆ ಈಗ ೫೦ ಹಾಗು ೩೦ ರೂ. ಗಳ ಎರಡು ಬಹುಮಾನಗಳು ಕೊಡಲ್ಪಡುವವು. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನಿಗೆ ಒಟ್ಟಿನಲ್ಲಿ ಕನಿಷ್ಟ ೧೦೦ ಕ್ಕೆ ೭೫, ಎರಡನೆಯ ಬಹುಮಾನ ಪಡೆಯುವ ಉಮೇದವಾರನಿಗೆ ಒಟ್ಟಿನಲ್ಲಿ ಕನಿಷ್ಟ ೧೦೦ ಕ್ಕೆ ೫೦ ಗುಣಗಳನ್ನು ದೊರೆಯಲೇಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರ ಕೂಡದು. ಒಂದು ವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವುದು.

೩. ಅರ್ಜಿ ಮಾಡತಕ್ಕ ಅವಧಿ :– ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೫೫ ಆಗಸ್ಟ ೧ ನೆಯ ತಾರೀಖಿನೊಳಗಾಗಿ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರವನ್ನು ಕಳುಹಿಸತಕ್ಕದ್ದು.

೪. ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ :– ಧಾರವಾಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಈ ಪರೀಕ್ಷೆಯು ೧೯೫೫ ನೆಯ ಇಸವಿ ಆಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು, ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವುದು.

೫. ಪ್ರಶ್ನೆ ಕಾಗದಗಳು:– ಪ್ರತಿಯೊಂದು ಕಾಗದಕ್ಕೆ ೩ ಗಂಟೆ ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯ ಕಾಗದ : ಹಳಗನ್ನಡ ನಿಬಂಧ ೪೦ ಗುಣಗಳು. ಹೊಸಗನ್ನಡ ನಿಬಂಧ ೬೦ ಗುಣಗಳು.

ಎರಡನೆಯ ಕಾಗದ : ಕನ್ನಡ ಬಾವುಟದ ಕವಿತಾಭಾಗ ೫೦ ಗುಣಗಳು. ಹಳಗನ್ನಡದ ಗೊತ್ತಿದ್ದ ಗದ್ಯಸಂಗ್ರಹ ೫೦ ಗುಣಗಳು.

ಮೂರನೆಯ ಕಾಗದ : ವ್ಯಾಕರಣ ಮತ್ತು ಛಂದಸ್ಸು ೫೦ ಗುಣಗಳು. ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ೫೦ ಗುಣಗಳು.

ಕನ್ನಡಬಾವುಟದಲ್ಲಿಯ ಕವಿತಾ ವಿವರಣೆ : (೧) ರಾಷ್ಟ್ರಕೂಟ ರಾಜನ ಶಾಸನ (ಪುಟ ೫ (೨) ಕನ್ನಡನಾಡಿನ ಚೆಲವು (ಪುಟ ೧೬ ರಿಂದ ೨೦ ಪೂರ್ಣ) (೩) ಬಸವಣ್ಣನವರ ಗುಣ (ಪುಟ ೪೫) (೪) ಮಹಾದೇವಿಯಕ್ಕ (ಪುಟ ೪೬–೪೯ ಪೂರ್ಣ) (೫) ಕನಕಕದಾಸರು (ಪುಟ ೫೯-೬೧ ಪೂರ್ಣ) (೬ ಅರಣೋದಯ (೯೭) (೭) ಕರ್ಗಾಲದ ವೈಭವ (ಪುಟ ೧೦೦) (೮) ಕೊಡಗು (ಪುಟ ೧೦೨) (೯) ತೆಂಕ ಗಾಳಿಯಾಟ (ಪುಟ ೧೦೬) (೧೦) ಕುಮಾರವ್ಯಾಸ (ಪುಟ ೧೨೧) (೧೧) ಬೇಲೂರಿನ ಶಿಲಾಬಾಲಿಕೆಯ (ಪುಟ ೧೨೬).

ಹಳಗನ್ನಡದ ಗೊತ್ತಿದ ಗದ್ಯ : ಪಂಡಿತ ಮ. ಪ್ರ. ಪೂಜಾರರಿಂದ ಸಂಪಾದಿತ ದುರ್ಗಸಿಂಹ **ಪಂಚತಂತ್ರಸಾರವು.**

೧೨ ನೆಯ ಶತಮಾನದ ಸಾಹಿತ್ಯ : ಕನ್ನಡ ಕವಿಚರಿತೆಯ ೧ ನೆಯ ಭಾಗ ಮತ್ತು ಇದು ವರೆ ಅಚ್ಚಾದ ಕನ್ನಡ ಸಾಹಿತ್ಯ ಇತಿಹಾಸದ ಗ್ರಂಥಗಳು.

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,
ಧಾರವಾಡ
ತಾ. ೧-೭-೧೯೫೪

(Sd) S. P. Patil
Principal
Govt. Training College for Men, Dharwar.

ಸಂಪಾದಕೀಯ

ಹಾರ್ದಿಕ ಅಭಿನಂದನೆಗಳು :

ಕಳೆದ ತಿಂಗಳ ದಿನಾಂಕ ೨೬ ರಂದು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಇಲ್ಲಿಯ ವರೆಗೆ ಮುಂಬಯಿ ರಾಜ್ಯದ ಮುಖ್ಯ ಶಿಕ್ಷಣಾಧಿಕಾರಿಗಳಾಗಿದ್ದ ಶ್ರೀ ಡಿ. ಸಿ. ಪಾವಟೆಯವರು ಆಯ್ಕೆಹೊಂದಿರುವದು ಕನ್ನಡಿಗರಿಗೆಲ್ಲ ಹೆಮ್ಮೆಯ ಹಾಗೂ ಸಂತಸದ ವಿಷಯವಾಗಿದೆಯೆಂದು ಹೇಳಿದರೆ ಯಾವ ರೀತಿಯಿಂದಲೂ ಅತಿಶಯೋಕ್ತಿಯಾಗಲಾರದು. ಶ್ರೀ ಡಿ. ಸಿ. ಪಾವಟೆಯವರು ಕನ್ನಡದ ಗಂಡುಮೆಟ್ಟಾದ ಮುಮುದಾಪುರದಲ್ಲಿ ಜನಿಸಿ ಧಾರವಾಡದ ಕರ್ನಾಟಕ ಕಾಲೇಜದಿಂದ ಬಿ. ಎ. ಪರೀಕ್ಷೆಯಲ್ಲಿ ಗಣಿತ ವಿಷಯವನ್ನು ತೆಗೆದುಕೊಂಡು ೧ ನೆಯ ವರ್ಗದಲ್ಲಿ ಪಾಸಾಗಿ 'ದಕ್ಷಿಣಾಫೆಲೋ' ಎಂದು ಆರಿಸಲ್ಪಟ್ಟು, ಕೇಂಬ್ರಿಜ್ ವಿಶ್ವವಿದ್ಯಾಲಯಕ್ಕೆ ತೆರಳಿ 'ರ್‍ಯಾಂಗ್ಲರ'ರಾಗಿ ಸ್ವದೇಶಕ್ಕೆ ಮರಳಿ, ಕೆಲವು ವರ್ಷ ಬನಾರಸ ಹಿಂದೂ ವಿಶ್ವವಿದ್ಯಾಲಯದಲ್ಲಿ ಗಣಿತ ವಿಷಯದ ಪ್ರಧಾನ ಪ್ರಾಧ್ಯಾಪಕರಾಗಿ ಕೆಲಸ ಮಾಡಿ, ಮುಂದೆ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯಲ್ಲಿ ಸೇರಿ ಎಜ್ಯುಕೇಶನಲ್ ಇನಸ್ಪೆಕ್ಟರ, ಅಸಿಸ್ಟಂಟ ಡಾಯರೆಕ್ಟರ, ಹಾಗೂ ಡೆಪ್ಯುಟಿ ಡಾಯರೆಕ್ಟರ, ಕೊನೆಗೆ ೧೯೪೭ ನೆಯ ಜನೆವರಿಯಿಂದ ಇಲ್ಲಿಯವರೆಗೆ ನಮ್ಮ ರಾಜ್ಯದ ಶಿಕ್ಷಣ ಖಾತೆಯ ಡಾಯರೆಕ್ಟರರಾಗಿ ಹೋದ ತಿಂಗಳ ದಿನಾಂಕ ೨೧ ರಂದು ಸೇವಾನಿವೃತ್ತರಾದರು. ಇವರು ಡಾಯರೆಕ್ಟರರಾಗಿದ್ದ ಏಳು ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ಶಿಕ್ಷಣದ ಎಲ್ಲ ರಂಗಗಳಲ್ಲಿ ನಡೆದಷ್ಟು ಕ್ರಾಂತಿಕಾರಕ ಬದಲಾವಣೆಗಳು ಈ ಮೊದಲು ಆಗಿರಲಿಲ್ಲ.

ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯ ಶಿಕ್ಷಣ, ಮೂಲ ಶಿಕ್ಷಣದ ಮುನ್ನಡೆ, ಶಿಕ್ಷಕರ ವೇತನದ ಹೆಚ್ಚಳ, ಪ್ರಾಥಮಿಕ ಶಿಕ್ಷಣ ಕಾಯ್ದೆಯ ತಿದ್ದುಪಡೆ, ಕ್ರಮಿಕ ಪುಸ್ತಕಗಳ ರಚನೆ, ಸಮಾಜ ಶಿಕ್ಷಣದ ವಿಸ್ತಾರ; ಮಾಧ್ಯಮಿಕ ಶಿಕ್ಷಣದಲ್ಲಿ—ಅಭ್ಯಾಸಪತ್ರಿಕೆಯಲ್ಲಿ ಸುಧಾರಣೆ, ಎಸ್. ಎಸ್. ಸಿ. ಬೋರ್ಡಿನ ವ್ಯವಸ್ಥೆ, ಪ್ರಾದೇಶಿಕ ಭಾಷೆಯ ಮಾಧ್ಯಮ. ಖಾಸಗಿ ಮಾಧ್ಯಮಿಕ ಶಾಲೆಗಳ ಶಿಕ್ಷಕರ ಪಗಾರದ ಹಾಗೂ ನೌಕರಿಯ ಕರಾರುಗಳ ಪುನರ್ವಿಮರ್ಶೆ, ವಿಶ್ವವಿದ್ಯಾಲಯ ಶಿಕ್ಷಣ ಕ್ಷೇತ್ರದಲ್ಲಿ—ಅಭ್ಯಾಸ ಪತ್ರಿಕೆಯಲ್ಲಿ ಬದಲಾವಣೆ, ಹೊಸ ಪ್ರಾದೇಶಿಕ ವಿಶ್ವವಿದ್ಯಾಲಯಗಳ ಸ್ಥಾಪನೆ ಹಾಗೂ ಅವುಗಳ ಭದ್ರತೆಯ ವ್ಯವಸ್ಥೆ, ಆಡಳಿತದಲ್ಲಿ ಜಿಲ್ಲೆಯ ತಳಹದಿಯ ಮೇಲೆ ನಡೆದ ಪುನರ್ಘಟನೆಯಲ್ಲದೆ, ಇನ್ನೂ ಹಲವಾರು ದೀರ್ಘ ಕಾಲಾವಧಿಯ ಯೋಜನೆಗಳು ಇವರ ನೇತೃತ್ವದಲ್ಲಿಯೇ ಕಾರ್ಯರೂಪಕ್ಕೆ ಬಂದುದು ಇವರ ಆಳಿಕೆಯ ವೈಶಿಷ್ಟ್ಯ. ಭಾರತದ ವಿವಿಧ ರಾಜ್ಯಗಳ ಶೈಕ್ಷಣಿಕ ಡಾಯರೆಕ್ಟರರ ಸಭೆಗಳಲ್ಲಿ ಹಿರಿಯತನ ವಹಿಸಿ ಮಾರ್ಗದರ್ಶನ ಮಾಡುವದು ಇವರಿಗೇ ಮೀಸಲಾಗಿತ್ತು.

ಹೀಗೆ ಆದರ್ಶ ವಿದ್ಯಾರ್ಥಿಯೂ, ಪಾಶ್ಚಿಮಾತ್ಯ ದೇಶಗಳಲ್ಲಿಯೂ ಸಹ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿದವರೂ, ಉತ್ತಮ ಪ್ರಾಧ್ಯಾಪಕರೂ, ಗಣಿತ ಗ್ರಂಥಕಾರರೂ, ಸುಮಾರು ೨೪ ವರ್ಷಗಳವರೆಗೆ ದಕ್ಷ ಆಡಳಿತಗಾರರಾಗಿ ಜಟಿಲ ಸಮಸ್ಯೆಗಳನ್ನು ಸಹ ಕಠಿಣ ಪ್ರಸಂಗಗಳಲ್ಲಿ ಹಗುರಾಗಿ ಬಿಡಿಸುವ ಜಾಣ್ಮೆಯುಳ್ಳವರೂ, ಅಸಾಧಾರಣ ವ್ಯಕ್ತಿತ್ವವನ್ನು ಪಡೆದವರೂ ಆದ ಶ್ರೀ ಪಾವಟೆಯವರು ಉಪಕುಲಪತಿಯ ಸ್ಥಾನಕ್ಕೆ ಆರಿಸಿ ಬಂದುದಕ್ಕಾಗಿ ಅವರಿಗಿಂತಲೂ ಹೆಚ್ಚಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ನಮ್ಮ ಹಾರ್ದಿಕ ಅಭಿನಂದನೆಗಳು.

ಅಂದು ವಿದ್ಯಾರ್ಥಿಯಾಗಿ ನಡೆದಾಡಿದ ಕ್ಷೇತ್ರದಲ್ಲಿಯೇ ಇಂದು ಉಪಕುಲಪತಿಯಾಗಿ ಅಧಿಕಾರ ನಡೆಸುವದೂ, ಒಂದು ಕಾಲೇಜವನ್ನು ಸ್ಥಾಪಿಸುವ ಪ್ರಯುತ್ನದಲ್ಲಿ ಅಂದು ನಿರಾಶೆಗೊಂಡವರು ಇಂದು ಅನೇಕ ಕಾಲೇಜುಗಳ ಭವಿತವ್ಯವನ್ನು ನಿರ್ಣಯಿಸುವ ಸಂಸ್ಥೆಯ ಸಂಚಾಲಕರಾಗುವದೂ ರ್‍ಯಾಂಗ್ಲರ ಪಾವಟೆಯವರ ಭಾಗ್ಯ. ನಮ್ಮ ವಿಶ್ವವಿದ್ಯಾಲಯವು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದುದಕ್ಕಾಗಿ ಉಪಕುಲಪತಿಯ ಸ್ಥಾನಕ್ಕೆ ಯೋಗ್ಯವ್ಯಕ್ತಿಯನ್ನು ಹುಡುಕುವಾಗ ರ್‍ಯಾಂಗ್ಲರ ಪಾವಟೆಯವರು ದೊರೆತುದು ವಿಶ್ವವಿದ್ಯಾಲಯದ ಸೌಭಾಗ್ಯ. ಆದುದರಿಂದ ಡಾಯರೆಕ್ಟರ ಹುದ್ದೆಯಿಂದ ನಿವೃತ್ತರಾದ ಮರುದಿನವೇ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಆಯ್ಕೆಹೊಂದುವದು ಈಶ್ವರನ ಇಚ್ಛೆ, ಇದನ್ನು ತಪ್ಪಿಸುವರಾರು !

ಇಂಥ ಮಹನಿಯರ ದಕ್ಷ **ಆಡಳಿತೆಯಲ್ಲಿ** ನಮ್ಮ ವಿಶ್ವವಿದ್ಯಾಲಯವು ಬಿದಿಗೆಯ ಚಂದ್ರನಂತೆ ಬೆಳೆ ಶರತ್ಕಾಲದ ರಾಕಾಸುಧಾಕರನಂತೆ ಭಾರತದ ಇತರ ವಿಶ್ವವಿದ್ಯಾಲಯಗಳ ಶ್ರೇಣಿಯಲ್ಲಿ ಪರಿಶೋಭಿಸುವಂತ **ಲೆಂದು** ಸದಾ ಹಾರೈಸುವೆವು. ಉಪಕುಲಪತಿಗಳಾಗಿ ಚುನಾಯಿತರಾದ ರ್‍ಯಾಂಗ್ಲರ ಪಾವಟೆ ಅವರಿಗೆ 'ಪ್ರಾ ಮಿಕ ಶಿಕ್ಷಣ'ವು ಹಾರ್ದಿಕ ಅಭಿನಂದನೆಗಳನ್ನೂ ಹೃತ್ಪೂರ್ವಕ ಸ್ವಾಗತವನ್ನೂ ಕೋರುತ್ತದೆ.

ಸುಸ್ವಾಗತ : ಶ್ರೀ. ಡಿ. ಸಿ. ಪಾವಟೆಯವರ ನಿವೃತ್ತಿಯ ನಂತರ ಡಾ. ಎಸ್.ಎಸ್. ಭಾಂಡಾರ ಅವರು ರಾಜ್ಯದ ಪ್ರಧಾನ ಶಿಕ್ಷಣಾಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ. ಶ್ರೀಯುತರು ಶಿಕ್ಷಣ ಖಾತೆಯ ವಿ ರಂಗಗಳಲ್ಲಿ ಅತ್ಯಂತ ದಕ್ಷತೆಯಿಂದ ಕಾರ್ಯಮಾಡಿ ಕೀರ್ತಿವೆತ್ತ ಪ್ರತಿಭಾವಂತರಾಗಿದ್ದಾರೆ. ಇವರ ಆ ಯಲ್ಲಿ ಈಗಾಗಲೇ ಕಾರ್ಯರೂಪದಲ್ಲಿರುವ ವಿವಿಧ ಯೋಜನೆಗಳು ಹೂತು, ಕಾತು, ಫಲಕೊಡುವವೆಂಬುದ ಸಂದೇಹವಿಲ್ಲ. 'ಪ್ರಾಥಮಿಕ ಶಿಕ್ಷಣ'ವು ಇವರಿಗೆ ಹಾರ್ದಿಕ ಸ್ವಾಗತವನ್ನು ಬಯಸುತ್ತದೆ. ಪ್ರಾಥಮಿಕ ಶಿಕ್ಷ ಸಲುವಾಗಿ, ನಮ್ಮ ಹೊಸ ಡಾಯರೆಕ್ಟರರ ಬಗ್ಗೆ ಹೆಚ್ಚಿನ ಪರಿಚಯವನ್ನು ಮುಂದಿನ ಸಂಚಿಕೆಯಲ್ಲಿ ಮಾಡುವೆ

ಇಂಡೋನೇಶಿಯಾದ ಸಂದರ್ಶಕರು :

ಭಾರತದಲ್ಲಿಯ ಶಿಕ್ಷಣ ಪದ್ಧತಿಗಳನ್ನು ತಿಳಿದುಕೊಳ್ಳುವ ಉದ್ದಿಶ್ಯದಿಂದ ಇದೇ ೧೯೫೪ನೆಯ ಜ ೧೬, ೧೭, ೧೮ರಂದು ಧಾರವಾಡದಲ್ಲಿಯ ಮೂಲ ಶಿಕ್ಷಣ ಸಂಸ್ಥೆಗಳನ್ನೂ, ಧಾರವಾಡ ಬೇಸಿಕ್ ಹೊಂದಿಕೆ ಕ್ಷೇತ್ರದಲ್ಲಿಯ ಕೆಲವು ಮೂಲ ಶಿಕ್ಷಣ ಸಾಲೆಗಳನ್ನೂ ಇಂಡೋನೇಶಿಯಾದ ಶಿಕ್ಷಣ ತಜ್ಞರಾದ ಶ್ರೀ. ಸುಬ್ರೆಕ ಅವರು ಸಂದರ್ಶಿಸಿದರು. ಭಾರತದ ಅನೇಕ ಸಂಸ್ಥೆಗಳನ್ನು ನೋಡುತ್ತ, ಈ ಭಾಗಕ್ಕೂ ಸಂದರ್ಶನವಿತ್ತ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ ಹೆಮ್ಮೆಯ ವಿಷಯ. ಇಲ್ಲಿ ಪ್ರಚಲಿತದಲ್ಲಿರುವ ಮೂಲ ಶಿಕ್ಷ ಪದ್ಧತಿಯನ್ನು ಕಂಡುಂಡ ಅವರು **ತುಂಬ ಮೆಚ್ಚುಗೆಯನ್ನು** ವ್ಯಕ್ತಮಾಡಿದರು. ಪರದೇಶದ ಪ್ರವಾಸಿಗ **ಆಕರ್ಷಿಸಹತ್ತಿರುವದು ಭಾರತಕ್ಕೊಂದು ಸಹ ಹೆಮ್ಮೆಯ ಮಾತೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.**

ಅಪೂರ್ವ ಯಶಸ್ಸು

ಶ್ರೀ. ಎಲ್. ಎಸ್. ಮಠಪತಿ ಇವರು ಹಾವೇ ಕೇಂದ್ರದಿಂದ ಸನ್ ೧೯೫೪ನೆಯ ಇಸ್ವಿಯಲ್ಲಿ ಜರು ಎಸ್. ಎಸ್. ಸಿ. ಪರೀಕ್ಷೆಯಲ್ಲಿ ರಾಜ್ಯಘಟನೆ **ನೀತಿಯಲ್ಲಿ** ಮುಂಬಯಿ ರಾಜ್ಯಕ್ಕೆ ಮೊದಲನೆ ನಂಬರ ಪಡೆದು ಎಸ್. ಎಸ್. ಸಿ. ಬೋರ್ಡಿನ ೧೦೦ ರೂಪಾಯಿ ಬಹುಮಾನ ಪಡೆದಿರುತ್ತಾರೆ.

ಇವರು ಹಾವೇರಿ ತಾಲೂಕ, ನೆಗಳೂರ ಗ್ರಾಮ ರಿದ್ದು ದೇವೀಹೊಸೂರ ಶಾಲೆಯಿಂದ ಈಗ ಧಾರವ ದಲ್ಲಿ ಸರಕಾರಿ ಗಂಡುಮಕ್ಕಳ ಟ್ರೇನಿಂಗ ಕಾಲೇಜ ತೆರೆದ ಅಲ್ಪಾವಧಿ ನೇಯ್ಗೆಯ ತರಬೇತಿ ವರ್ಗದಲ್ಲಿ

ಶ್ರೀ. ಮಠಪತಿಯವರು ಪಡೆದ ಯಶಸ್ಸು ವೃಂದಕ್ಕೆ ಗೌರವ ತಂದಿದೆ.

****

ವಿದ್ಯಾರ್ಥಿಗಳಿಗೆ ವಿಚಾರ ಮಾಡುವ ರೀತಿಯ ಶಿಕ್ಷಣ

★

ಲೇಖಕರು :
ಶ್ರೀ. ತಟ್ಟಿ ಶ್ಯಾಮರಾಯರು, ಧಾರವಾಡ

****

[ಕಳೆದ ಸಂಚಿಕೆಯಿಂದ ಮುಂದುವರಿದಿದೆ]

ಇಂಥ ಪ್ರಸಂಗಗಳಲ್ಲಿ ಶಿಕ್ಷಕನು "ಕೋಲ್ ಗ್ಯಾಸ್
ುತ್ತು ಹವೆಯ ವಿಷಯವಾಗಿ ಹೇಳಿದ ಮಾತುಗಳು
ಲ್ಲ ಗ್ಯಾಸುಗಳಿಗೂ ಹತ್ತುವದು" ಎಂದು ಹುಡುಗರಿಗೆ
ಷ್ಟವಾಗಿ ಹೇಳಿ "ಆದರೆ ಹೆಚ್ಚು ಉಧಾಹರಣೆಗಳನ್ನು
ಚಾರಿಸಲಿಕ್ಕೆ ಅವಕಾಶವಿಲ್ಲ"ವೆಂದು ಪ್ರಾಂಜಲತನ-
ಂದ ಒಪ್ಪಿಕೊಳ್ಳಬೇಕು. ಸಾಮಾನ್ಯ ವಿಚಾರಕ್ಕೆ
ಾಕಷ್ಟು ಆಧಾರಗಳನ್ನು ಪರೀಕ್ಷಿಸಲಾಗಿದೆ ಎಂದು
ುಡುಗರು ತಿಳಿದುಕೊಳ್ಳುವಂತಾಗಬಾರದು. ಗುರುಗಳು
ೇಳಿದ್ದಾರೆಂದು ಆಗಿನಮಟ್ಟಿಗೆ ಅವರು ಅದನ್ನು ನಂಬ-
ೇಕು; ವಸ್ತುಸ್ಥಿತಿಗೆ ಅದು ಸರಿಹೋಗುವದಿಲ್ಲವೆಂದು
ಳಿದ ಕೂಡಲೆ ಅದನ್ನು ಬಿಟ್ಟುಬಿಡಬಹುದು.

ತನ್ನ ವರ್ಗದ ಮುಂದೆ ಇಟ್ಟ ಉದಾಹರಣೆಗಳಿಂದ
ಾವ ಸಾಮಾನ್ಯ ಹೇಳಿಕೆಯು ಸಿದ್ಧವಾಗುವದೆಂಬದರ
ಗೆಗೆ ಶಿಕ್ಷಕನಿಗೆ ಮೊದಲು ಸ್ಪಷ್ಟವಾದ ಕಲ್ಪನೆ ಇರ
ೇಕು. ಸ್ಪಷ್ಟವಾದ ಕಲ್ಪನೆ, ಸ್ಪಷ್ಟವಾದ ತಿಳುವಳಿಕೆ
ು ಒಳ್ಳೆಯ ಶಿಕ್ಷಣದ ಲಕ್ಷಣವಾಗಿವೆ; ನಮ್ಮ ವಿಚಾರ
ಲ್ಲಿಯೇ ಗೊಂದಲವಿದ್ದದ್ದಾದರೆ ವರ್ಗದ ಹುಡುಗರ
ನಸಿನಲ್ಲಿ ಸ್ಪಷ್ಟವಾದ ವಿಚಾರ ಮೂಡಿದೆ ಎಂದು
ಿದುಕೊಳ್ಳುವದಕ್ಕೆ ಅವಕಾಶವಿಲ್ಲ. ಅಷ್ಟೇನು ಸೂಕ್ಷ್ಮ
ತ್ಸೆ ಅವಶ್ಯವಿಲ್ಲವೆಂದೆನಿಸಿದರೂ ನಾವು ಅವರ ಮುಂದೆ
ಾತುಗಳನ್ನು ಮೂಡಿಸುವದರಲ್ಲಿ ಒಂದು ತೂಕ,
ದು ಯಥಾರ್ಥತೆಗೆ ಗಮನಕೊಡುವದವಶ್ಯವಿದೆ.
ದಾಹರಣೆಗಾಗಿ ಒಬ್ಬ ಶಿಕ್ಷಕನು ಕ್ರಿಯಾವಿಶೇಷಣಗಳ
ಗೆ ಒಂದು ಪ್ರಥಮ ಪಾಠವನ್ನು ಕೊಡುತ್ತಿದ್ದಾನೆಂದು
ಯೋಣ. "ಆವನು ಬರೆಯಬಲ್ಲನು," "ತಂದೆಯು-
ು ಮಾತನಾಡುತ್ತಿದ್ದಾರೆ" ಇಂತಹ ಹತ್ತಾರು ಸುಲಭ
ಳಿಕೆಗಳಿಂದ ಆರಂಭಮಾಡುವ ವಾಡಿಕೆಯ ಪದ್ಧತಿ
ನ್ನು ಆತನು ಇಟ್ಟುಕೊಂಡಿದ್ದಾನೆ. ಈ ವಾಕ್ಯಗಳನ್ನು
ಆತನು "ಅವನು ಚೆನ್ನಾಗಿ ಬರೆಯಬಲ್ಲನು" "ಅವನು ಬೇಗನೆ ಬರೆಯಬಲ್ಲನು" ಮುಂತಾದ ವಾಕ್ಯಗಳಿಗೆ ಸರಿ ಹಚ್ಚಿ ತೋರಿಸುವನು. ಈ ಹೋಲಿಕೆಯಿಂದ ಯಾವ ಸಿದ್ಧಾಂತವು ಹೊರಡಬಹುದು ? "ಕ್ರಿಯಾಪದದ ಅರ್ಥದಲ್ಲಿ ವಿಶೇಷಣವನ್ನು ಹೇಳುವ ಶಬ್ದಗಳು ಕ್ರಿಯಾವಿಶೇಷಣಗಳು" ಎಂಬದಲ್ಲ, ಆದರೆ "ನಮ್ಮ ಹೇಳಿಕೆಯಲ್ಲಿ ಇನ್ನೊಂದು ಶಬ್ದವನ್ನು ಸೇರಿಸುವದರಿಂದ ಕ್ರಿಯಾಪದದ ಅರ್ಥದಲ್ಲಿ ಹೆಚ್ಚುಕಡಿಮೆಯಾಗುತ್ತದೆ" ಎಂಬ ನಿರ್ಣ-ಯವಷ್ಟೆ. ಅದನ್ನೇ ಮುಂದುವರಿಸಿ "ಈ ರೀತಿಯಾಗಿ ಉಪಯೋಗಿಸಿದ ಶಬ್ದಗಳು ಕ್ರಿಯಾವಿಶೇಷಣಗಳು" ಎಂದು ಉಪಸಂಹಾರ ಮಾಡುತ್ತಾನೆ. ಮುಂದಿನ ಇನ್ನೊಂದು ಯಾವದೋ ಪಾಠದಲ್ಲಿ ವಿಶೇಷಣಗಳ ಅರ್ಥದಲ್ಲಿಯೂ ಹೀಗೆ ಹೆಚ್ಚುಕಡಿಮೆಯಾಗುವ ಉದಾ-ಹರಣೆಗಳನ್ನು ಕೊಟ್ಟು "ವಿಶೇಷಣಗಳ ಅರ್ಥವನ್ನು ಬದಲುಮಾಡುವ ಶಬ್ದಗಳಿಗೆ ಸಹ ಕ್ರಿಯಾವಿಶೇಷಣಗಳೆನ್ನುವೆವು" ಎಂದು ಮತ್ತೊಮ್ಮೆ ಹೇಳುವನು. ಕ್ರಿಯಾ ವಿಶೇಷಣಗಳ ಅರ್ಥದಲ್ಲಿಯೇ ಹೀಗೆ ಬದಲಾವಣೆ ಮಾಡುವ ವಿಷಯವು ಕೊನೆಗೆ ಬರುವದು. ಇಷ್ಟಾದ ಮೇಲೆ ಕಡೆಯ ಸಾಮಾನ್ಯ ವಿಚಾರಕ್ಕೆ ಆತನ ಸಿದ್ಧತೆ-ಯಾಯಿತು. ಅದು ಕ್ರಿಯಾವಿಶೇಷಣಾವ್ಯಯದ ವ್ಯಾಖ್ಯೆಯಲ್ಲಿ ಪರಿಣಮಿಸುವದು. ಎಲ್ಲೆಲ್ಲಿ ನಮ್ಮ ಪಾಠದ ಕ್ರಮವನ್ನು, ಪಾಠದ ಪದ್ಧತಿಯನ್ನು ಪೂರ್ತಿಯಾಗಿ ತರ್ಕಶುದ್ಧವಾಗುವಂತೆ ಮಾಡಲು ಸಾಧ್ಯವಿರುವದೋ ಮತ್ತು ನಮ್ಮ ವಿದ್ಯಾರ್ಥಿಗಳ ಶಕ್ತಿಯ ಅಳವಿನಲ್ಲಿ ಅದು ಬರುವದು ಸಾಧ್ಯವಿದೆಯೋ ಅಂತಹ ಕಡೆಗಳಲ್ಲಿ ಹಾಗೆ ನಾವು ಮಾಡತಕ್ಕದ್ದು. ಶಿಕ್ಷಕ ವಿದ್ಯಾರ್ಥಿಯು ಎಲ್ಲ ವಿಜ್ಞಾನದ ಪಾಠಗಳನ್ನು ಈ ದೃಷ್ಟಿಯಿಂದ ಲಕ್ಷಪೂರ್ವಕವಾಗಿ ನಿರೀಕ್ಷಿಸುವದವಶ್ಯವಿದೆ. ಹಾಗೆ ಮಾಡಿದ್ದಾದರೆ ಅನೇಕಕಡೆಗಳಲ್ಲಿ ನಾವು ಮಾಡುವ ಸಿದ್ಧಾಂತಗಳು.

ಸಾಮಾನ್ಯ ಹೇಳಿಕೆಗಳು, ತರ್ಕ ದೃಷ್ಟಿಯಿಂದ ದೋಷ-ಯುಕ್ತವಾಗಿವೆ ಎಂದು ಕಂಡು ಬರುವದು; ಯಾವ ಪ್ರಮಾಣಗಳ ಮೇಲೆ ಸಿದ್ಧಾಂತಗಳು ಆಧರಿಸಿರುವವೋ ಅವು ಆ ಸಿದ್ಧಾಂತಕ್ಕೆ ಅತ್ಯಲ್ಪವ ದುವೆಂದು ತಿಳಿಯು-ವದು. ತೆಗೆದ ಸಾಮಾನ್ಯನಿರ್ಣಯವೇನೋ ಸರಿಯಾಗಿರಬಹುದು, ಆದರೆ ಅದು ಕೊಟ್ಟ ಪ್ರಮಾಣಗಳ ಮೇಲಿಂದ ಹೊರಡಲಿಲ್ಲ. ಹುಡುಗರಿಗೆ ಈ ವಿಷಯ-ವನ್ನು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರೆ ಚೆನ್ನಾಗಿಬಹುದಾಗಿತ್ತು. ಇದರ ಅರ್ಥವು ಪಾಠವು ಸಾಮಾನ್ಯನಿರ್ಣಯದಿಂದಲೇ ಆರಂಭವಾಗಬೇಕೆಂದಲ್ಲ; ಮತ್ತು ಹಾಗೆ ಮಾಡಿ ಮುಂದೆ ಉದಾಹರಣೆಗಳನ್ನು ಕೊಡುತ್ತಹೋಗಬೇಕೆಂದಲ್ಲ. ಇಷ್ಟೇ, ವಿಶಿಷ್ಟ ಉದಾಹರಣೆಗಳಿಂದ ಪಾಠವನ್ನು ಆರಂಭಮಾಡಿದ ಮಾತ್ರಕ್ಕೆ ಅವುಗಳಿಂದ ಹೊರಟ ನಿರ್ಣಯವು ತೃಪ್ತಿಕರವಾದ ಉದ್ಗಾಮಿ ಅನುಮಾನದ ರೀತಿಯಾಗಲಾರದು.

ಒಂದೊಂದು ಸಾರೆ ನಾವು ಅನುಸರಿಸಿದ ಅನುಮಾನದ ರೀತಿಯು ತರ್ಕಶುದ್ಧವಾಗಿದ್ದರೂ ಅದು ಕಲಿಯುವ ಹುಡುಗರಮಟ್ಟಿಗೆ ಕಾರ್ಯಕಾರಿಯಾಗದೆ ಇರಬಹುದು. ಅದರಲ್ಲಿನ ಮೆಟ್ಟಿಗಳು ಹುಡುಗರು ಗ್ರಹಿಸಲಾರದಂತಹವುಗಳಾಗಿರಬಹುದು. 'ಪ್ರಾತಿನಿಧಿಕಸ್ವರೂಪದ' ಒಂದು ಉದಾಹರಣೆಯಿಂದ ಸಿದ್ಧಮಾಡುವ ಪದ್ಧತಿಯು ಇದಕ್ಕೆ ದೃಷ್ಟಾಂತವಾಗಿದೆ. "ನಾವು ಸಿದ್ಧಮಾಡಲಿಕ್ಕೆ ಹೊರಟ ಮಾತು ಈ ಒಂದು ವಿಶಿಷ್ಟ ಉದಾಹರಣೆಯಲ್ಲಿ ಸಿದ್ಧವಾಗಿದೆ; ಆದ್ದರಿಂದ ಇದು ಯಾವ ಉದಾಹರಣೆಗಳ ಒಂದು ಮಾದರಿಯಾಗಿರುವದೋ ಅಂತಹ ಎಲ್ಲ ಉದಾಹಣೆಗಳ ವಿಷಯದಲ್ಲಿಯೂ ನಮ್ಮ ಸಿದ್ಧಾಂತವು ಸತ್ಯವಾಗಿದೆ." ಯಾವದೊಂದು ತ್ರಿಕೋ-ಣದ ಎಲ್ಲ ಕೋನಗಳ ಒಟ್ಟು ಅಳತೆಯು ಎರಡು ಕಾಟಕೋನಗಳಿಗೆ ಸರಿಯಿರುವುದೆಂದು ನಾವು ಸಿದ್ಧಮಾಡಬೇಕಾಗಿದೆ. ಅದು ಈ ವಿಶಿಷ್ಟ ಒಂದು ಅಬಕ ತ್ರಿಕೋಣದಲ್ಲಿ ನಿಜವಾಗಿದೆ ಎಂದು ಹೇಳಿ, ಆದ್ದರಿಂದ ಅದು ಎಲ್ಲ ತ್ರಿಕೋಣಗಳ ವಿಷಯದಲ್ಲಿಯೂ ನಿಜವಿರುವದು ಎಂದು ಮುಗಿಸುವೆವು. ಈಗ ಸಾಲೆಗಳಲ್ಲಿ ಶಿಕ್ಷಕರು ಹುಡುಗರಿಂದ ಬೇರೆ ಬೇರೆ ಎಲ್ಲ ಬಗೆಯ ಅನೇಕ ತ್ರಿಕೋಣಗಳಲ್ಲಿ ಅಳತೆ ಮಾಡಿಸಿ "ತ್ರಿಕೋಣದ ಎಲ್ಲ ಕೋನಗಳು ಕೂಡಿ ಎರಡು ಕಾಟಕೋನಗಳಿಗೆ ಸರಿಯಿರುವವು" ಎಂದು ವ್ಯಾವಹಾರಿಕವಾಗಿ ಮನವರಿಯಾಗುವಂತೆ ಮಾಡುವರು. ಯುಕ್ಲಿಡನ "ಇ. ಸಾ ಬೇ" 'ಇದನ್ನೇ ಸ್ಥಾಪಿಸಬೇಕಾಗಿತ್ತು' ಎಂಬದರ ಅಂತರ್ಗತವಾದ ನ್ಯಾಯಘಟಿತತ್ವವು ಹೊಳೆಯುವಷ ಹುಡುಗರು ಪ್ರಬುದ್ಧರಾಗಿರುವದಿಲ್ಲೆಂದು ಅಪರ ತಿರುತ್ತಾರೆ.

ಲಕ್ಷಗೊಟ್ಟು ನೋಡಲಿಕ್ಕೆ ಮತ್ತು ಕಂಡಸಂ ಗಳನ್ನು ಸರಿಯಾಗಿ, ಸ್ಪಷ್ಟವಾಗಿ ನಮೂದಿಸಲಿ ಹುಡುಗರನ್ನು ತರಬೇತಿಗೊಳಿಸುವದು ತರ್ಕಬದ್ಧವಾ ನಿರ್ಣಯಕ್ಕೆ ಅಥವಾ ಅಥವಾ ಆಪಾತತಃ ಕಾಣುವ ನಿರ್ಣಯಕ್ಕೆ ಮುಟ್ಟುವದರ ಬಗೆಗೆ ವಿದ್ಯಾರ್ಥಿಗಳನ್ನು ಅವಸರಗೊಳಿಸುವದಕ್ಕಿಂತಲೂ ಹೆಚ್ಚು ತ್ವದ್ದೆಂದು ನಾವು ಒತ್ತಿ ಹೇಳುವೆವು. ನಮ್ಮ ಪಾಠಗ ಯಾವಾಗಲೂ ಒಂದು ಸಾಮಾನ್ಯ ಹೇಳಿಕೆಯ ಪರ್ಯವಸಾನ ಹೊಂದಬೇಕೆಂಬ ತತ್ವಕ್ಕಿಂತಲ "ಸಾಮಾನ್ಯ ಸಿದ್ಧಾಂತದ ಬಗೆಗೆ ಎಚ್ಚರವಾಗಿರುವುದು ಎಂಬ ತತ್ವವು ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಯದು. ಕೊನೆಯ ಘಟ್ಟದಲ್ಲಿ ನಾವು ಅಲ್ಲಿ ಮು ಬಹುದು, ಆದರೆ ಸಾಲೆಯಲ್ಲಿ ಹುಡುಗರು ತ ಸಾಮಾನ್ಯ ಸ್ವರೂಪದ ಸತ್ಯಸಿದ್ಧಾಂತಕ್ಕೆ ಬರುವ ಸಾಕಷ್ಟು ಅವಕಾಶ ಸಿಕ್ಕುವದು, ಸಂದರ್ಭ ಒದ ವದು ದುಸ್ತರವಾದದ್ದು. ಅವರಿಗೆ ನಾವು ಎಷ್ಟೋ ಸಾಮಾನ್ಯಸತ್ಯಸಂಗತಿಗಳನ್ನು ಹೇಳಬಹುದು ಮ ಹೇಳಬೇಕಾಗುವದು, ಆದರೆ ಇನ್ನೊಬ್ಬರ (ಹೆ ಕಡಿಮೆ ಆಧಾರಗಳಿಂದ ಕೂಡಿದ) ಹೇಳಿಕೆಯಿಂದ ತಿಳಿ ಕೊಂಡದ್ದನ್ನೂ ತನ್ನ ಸ್ವಂತ ಅನುಭವದಿಂದ ತಿಳಿ ಕೊಂಡದ್ದನ್ನೂ ಅವರು ನಿಧಾನವಾಗಿ, ಬರಬರು ಸ್ಪಷ್ಟ ವಿಂಗಡಿಸಲಿಕ್ಕೆ ಶಿಕ್ಷಣ ಪಡೆಯಬೇಕು. ಸಾಲೆ ಮೇಲ್ತರಗತಿಗಳಲ್ಲಿ ದೊಡ್ಡವರ 'ಹೇಳಿಕೆ, ಪ್ರಮಾ ಭೂತವಾದ ಹೇಳಿಕೆ ಎಂಬ ಮಾತಿನ ಬಗೆಗೆ ಚಿಕಿತ್ಸ ಮನೋವೃತ್ತಿಯನ್ನು ತಾಳುವಂತೆ ನಾವು ಯೋ ವಾಗಿ ಶಿಕ್ಷಣಕೊಡಬಹುದು. ಐತಿಹಾಸಿಕ ಅಭ್ಯಾಸ ಈ ತರಹದ ಉಪಯುಕ್ತವಾದ ಕಾರ್ಯಕ್ಕೆ ಸಂದ ಗಳನ್ನು ಪೂರಯಿಸುತ್ತದೆ; ಅವುಗಳನ್ನು ನಾವು ಉ ಕ್ಷಿಸಿಕೂಡದು.

(ಮುಂದುವರಿಯುವದ

ನೋಬೆಲ್ ಪಾರಿತೋಷಕ

ಲೇಖಕರು :
ಪ್ರೋ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ.
ನಿವೃತ್ತ ಎ. ಈ. ಆಯ್ ದಕ್ಷಿಣ ಭಾಗ, ಧಾರವಾಡ

ಪಾರಿತೋಷಕಗಳ ಆವಶ್ಯಕತೆ

ಪಾರಿತೋಷಕಗಳಿಗೆ ಶಿಕ್ಷಣ ಕ್ಷೇತ್ರದಲ್ಲಿರುವ ಮಹತ್ವವು ಅಷ್ಟಿಷ್ಟಲ್ಲ. ಇನಾಮನ್ನು ಪಡೆಯಲು ಮಕ್ಕಳು ವಿಶೇಷ ಸಾಹಸವನ್ನೂ ಶ್ರಮವನ್ನೂ ವಹಿಸಬೇಕಾಗುತ್ತಿದೆ. ಪ್ರತಿಯೊಂದು ಮಗುವಿಗೆ ವ್ಯಕ್ತಿತ್ವವಿದೆ. ತನ್ನ ವೈಯಕ್ತಿಕವಾದ ಯೋಗ್ಯತೆಯನ್ನು ಹೊರಹೊಮ್ಮಿಸಿ ಎಲ್ಲರನ್ನು ತಲೆದೂಗುವಂತೆ ಮಾಡಿ ಮೆಚ್ಚುಗೆಯನ್ನು ಪಡೆಯಲು ಹವಣಿಸುವದು ಸ್ವಾಭಾವಿಕವಿದೆ. ಉದಾಹರಣೆಗಾಗಿ, ಓಡುವ ಸ್ಪರ್ಧೆಯನ್ನು ತಕ್ಕೊಳ್ಳಿರಿ. ಅದರಲ್ಲಿ ಭಾಗವಹಿಸುವ ಮಕ್ಕಳೆಲ್ಲರು ಓಡುವ ರೂಢಿಗಾಗಿ ದಿನಾಲು ನಸುಕಿನಲ್ಲಿ ಏಳುವದುಂಟು. ಊರ ಹೊರಗೆ ಹೋಗಿ ಸ್ವಚ್ಛ ಹವೆಯಲ್ಲಿ ಓಡುವ ರೂಢಿಯನ್ನು ಮಾಡುವದುಂಟು. ಹೀಗೆ ಮಾಡುವದರಿಂದ ದೇಹಸಂಪತ್ತಿಯು ತನ್ನಷ್ಟಕ್ಕೆ ತಾನೇ ಬೆಳೆಯುತ್ತಿದೆ. "A sound mind in a sound body" ಎಂಬ ಆಂಗ್ಲ ನಾಣ್ಣುಡಿಯಂತೆ ದೇಹಸಂಪತ್ತಿಯಗೂಡ ಮನೋವಿಕಾಸವೂ ಬುದ್ಧಿವಿಕಾಸವೂ ಆಗುವದುಂಟು. ಇಂತಹ ಸರ್ವಾಂಗಸುಂದರವಾದ ವಿಕಾಸವು ಮಕ್ಕಳೆಲ್ಲರಲ್ಲಿ ಆಗಬೇಕೆಂಬ ಸದುದ್ದೇಶದಿಂದಲೇ ಬಸವಜಯಂತಿ, ಾಂಧಿ ಜಯಂತಿ, ಗಣೇಶ ಚವತಿ, ನಾಡಹಬ್ಬ, ಾಲೆಯ ಹುಟ್ಟುಹಬ್ಬ, ಪಾಲಕರ ದಿನ, ಮಕ್ಕಳ ದಿನ, ಾದಲಾದ ಸಾಮಾಜಿಕ ಹಾಗೂ ಶೈಕ್ಷಣಿಕ ಉತ್ಸವಳಲ್ಲಿ ನಮ್ಮ ಸಾಲೆಗಳಲ್ಲೆಲ್ಲ ಸ್ಪರ್ಧೆಗಳನ್ನೇರ್ಪಡಿಸಲಾಗುದೆಯಲ್ಲವೇ ? ಮಕ್ಕಳ ಈ ಸರ್ವಾಂಗಸುಂದರವಾದ ಕಾಸಕ್ಕೆ ಸ್ಪರ್ಧೆಯಲ್ಲಿಟ್ಟ ಪಾರಿತೋಷಕಗಳೇ ಮೂಲ ಾರಣವಲ್ಲವೇ ? ಪಾರಿತೋಷಕಗಳ ಮಹಿಮೆಯು ಕ್ಷಣ ಕ್ಷೇತ್ರದಲ್ಲಿ ಎಷ್ಟಿದೆಯೆಂಬುದನ್ನಳೆಯಲು ಯಾವ ಳತೆಗೋಲಿಗೂ ಶಕ್ಯವಿಲ್ಲದಾಗಿದೆ. ಪಾರಿತೋಷಕವು ರಾಟವನ್ನು ಹುಟ್ಟಿಸಿ ಮಾನವನ ಪ್ರಗತಿಯನ್ನು ಸಾಧಿತ್ತಿದೆಯೆಂಬುದರಲ್ಲಿ ಸಂದೇಹವೇನಿದೆ ? ಈ ಮಾತನ್ನು ಲ್ಲರೂ ಒಪ್ಪಲೇಬೇಕು. ಈ ತತ್ವವನ್ನೇ ಈಗ ನಾವು ಶಾಲವಾದ ದೃಷ್ಟಿಯನ್ನಿಟ್ಟುಕೊಂಡು ಆಲೋಚಿಸಬೇಕಾಗಿದೆ. ಈ ವಿಶ್ವವೇ ಪರಮಾತ್ಮನು ನಿರ್ಮಿಸಿದ್ದೊಂದು ೊಡ್ಡ ಸಾಲೆ. ಅವನೇ ಅದರ ಗುರೂಜಿಯು. ಮಾನರೆಲ್ಲರೂ ಆ ದೊಡ್ಡ ಸಾಲೆಯಲ್ಲಿ ಕಲಿಯುವ ಮಕ್ಕಳು. ಮಕ್ಕಳೆಲ್ಲರ ಸರ್ವಾಂಗಸುಂದರವಾದ ಉನ್ನತಿಗಾಯೂ ಜಗತ್ತಿನ ಕಲ್ಯಾಣಕ್ಕಾಗಿಯೂ ಹೊಸ ಹೊಸ ೋಧಗಳನ್ನು ಮಾಡುವ, ಉದ್‌ಗ್ರಂಥಗಳನ್ನು ಬರೆಯುವ ಹಾಗೂ ರಾಷ್ಟ್ರ-ರಾಷ್ಟ್ರಗಳಲ್ಲಿ ಶಾಂತಿಯನ್ನುಂಟು ಮಾಡುವ ಪ್ರಯತ್ನಗಳಲ್ಲಿ ಮಾನವರನ್ನೆಲ್ಲ ತೊಡಗಿಸುವ ಏರಾಟಗಳನ್ನು ಹೂಡುವಂತಹ ಪಾರಿತೋಷಕಗಳು ಅವಶ್ಯವಾಗಿ ಬೇಕಲ್ಲವೇ ? ಅಂತಹದೊಂದು ಪಾರಿತೋಷಕವನ್ನು ರಸಾಯನ ಶಾಸ್ತ್ರದ ವಿಜ್ಞಾನಿಗಳೂ, ಎಂಜಿನಿಯರರೂ, ಸಿಡಿಮದ್ದ (Dynamite)ನ್ನು ಶೋಧಿಸಿದವರೂ ಆದಂತಹ ಸ್ವೀಡನ್ ದೇಶದ ಗೃಹಸ್ಥರೊಬ್ಬರು ಇಟ್ಟಿದ್ದಾರೆ. ಅವರ ಪೂರ್ಣ ಹೆಸರು ಡಾಕ್ಟರ ಆಲ್‌ಫ್ರೆಡ್ ಬರ್ನಾರ್ಡ ನೋಬೆಲ್ (Dr. Alfred Bernard Nobel) ಎಂದು ಇದೆ. ಅವರಿಟ್ಟ ಪಾರಿತೋಷಕಕ್ಕೆ ನೋಬೆಲ್ (Nobel) ಪಾರಿತೋಷಕವೆಂಬ ಹೆಸರು.

ವೃತ್ತಾಂತ, ಉದ್ದೇಶ ಮತ್ತು ಯೋಜನೆ

ಈ ಪಾರಿತೋಷಕವು ಈಗ ಜಗತ್ತಿನ ಎಲ್ಲ ರಾಷ್ಟ್ರಗಳ ಜನರಿಗೆ ಗೊತ್ತಾಗಿದೆ. ನಮ್ಮಲ್ಲಿಯ ಸುಶಿಕ್ಷಿತರಲ್ಲನೇಕರಿಗೆ ಇದರ ಸರಿಯಾದ ಹೆಸರು ಗೊತ್ತಿಲ್ಲವೆಂಬಂತೆ ಕಂಡು ಬಂದಿದೆ. ನೋಬೆಲ್ (Nobel) ಎಂದು ಅನ್ನುವ ಬದಲು ನೋಬಲ್ (Noble) ಎಂದು ಹಲವರು ಉಚ್ಚರಿಸುವದು ಕಂಡು ಬಂದಿದೆ. ಆದುದರಿಂದ, ನಮ್ಮ

ಓದುಗರಿಗೆ ಇದರ ಸರಿಯಾದ ಹಾಗೂ ನಿಚ್ಚಳವಾದ ಕಲ್ಪನೆಯು ಇರಲೆಂಬ ಉದ್ದೇಶದಿಂದ ನಮಗೆ ದೊರೆತ ವಿವರಗಳನ್ನು ಕಲೆಹಾಕಿ ಅಚ್ಚುಕಟ್ಟುತನದಿಂದ ಹೊಂದಿಸಿ ಈ ಪುಟ್ಟ ಲೇಖವೊಂದನ್ನು ಬರೆಯಲಾಗಿದೆ. ನೋಬೆಲ್‌ರವರು ೧೮೩೩ನೆಯ ಇಸವಿಯಲ್ಲಿ ಜನಿಸಿದರು. ಇವರು ಸ್ವೀಡನ್ ದೇಶದವರು. ಆ ದೇಶದ ಹೆಸರಾದ ರಸಾಯನ ಶಾಸ್ತ್ರದ ವಿಜ್ಞಾನಿಗಳೂ ಎಂಜನಿಯರರೂ ಆಗಿದ್ದರು. ಸಿಡಿಮದ್ದನ್ನು ಅವರೇ ಶೋಧಿಸಿ ತೆಗೆದರು. ೧೮೯೬ನೆಯ ಇಸವಿ ಡಿಸೆಂಬರ ತಿಂಗಳ ೧೦ನೆಯ ದಿನಾಂಕದಲ್ಲಿ ಕ್ರಿಸ್ತವಾಸಿಗಳಾದರು. ತಮ್ಮ ಬಳಿಯಲ್ಲಿದ್ದ ೧೭,೫೦,೦೦೦ ಪೌಂಡುಗಳನ್ನು ವಿಶ್ವಸ್ಥನಿಧಿ (Trust Fund) ಯನ್ನಾಗಿಟ್ಟು ಅದರ ವಾರ್ಷಿಕ ಉತ್ಪನ್ನದಿಂದ ಬಹುಮಾನವನ್ನು ಕೊಡುವ ಏರ್ಪಾಡು ಮಾಡಿಟ್ಟಿದ್ದಾರೆ. ೧೯೩೬ನೆಯ ಇಸವಿಯಿಂದೀಚೆಗೆ ಅದರ ವಾರ್ಷಿಕ ಉತ್ಪನ್ನವು ಸುಮಾರು ಎಂಟು ಸಾವಿರ ಪೌಂಡಗಳಷ್ಟಾಗುತ್ತಲಿದೆ. ಪದಾರ್ಥವಿಜ್ಞಾನ, ರಸಾಯನಶಾಸ್ತ್ರ ವೈದ್ಯಕೀಯ ಮತ್ತು ಪ್ರಾಣಿಗುಣಧರ್ಮಶಾಸ್ತ್ರ, ಸಾಹಿತ್ಯ ಅಂತರ್ರಾಷ್ಟ್ರೀಯ ಶಾಂತಿಸ್ಥಾಪನೆ, ಮೊದಲಾದವುಗಳ ಬಗೆಗೆ ಮಾಡಿದ ಹೊಸ ಹೊಸ ಶೋಧಗಳಿಗೂ ಉದ್‌ಗ್ರಂಥಗಳಿಗೂ ಈ ಬಹುಮಾನವನ್ನು ವರುಷಕ್ಕೊಮ್ಮೆ ಅವರ ಪುಣ್ಯತಿಥಿಯ ದಿವಸ (ಅವರು ಕ್ರಿಸ್ತವಾಸಿಯಾದ ದಿನ) ಕೊಡಲಾಗುತ್ತಿದೆ. ಅವರು ಬರೆದಿಟ್ಟ ಮೃತ್ಯುಪತ್ರ (Will)ದ ಆಶಯವಾದರೂ ಹೀಗೆಯೇ ಇದೆಯೆಂದು ತೋರುತ್ತಿದೆ. ಈ ಯೋಜನೆಯ ಪ್ರಕಾರ ಮೊದಲನೆಯ ಸಲ ಇನಾಮು ೧೦-೧೨-೧೯೦೧ ರಂದು ಕೊಡಲ್ಪಟ್ಟಿತು. ಅಂದಿನಿಂದ ಅದು ಒಂದೇಸವನೆ ಸಾಗುತ್ತ ಬಂದಿದೆ, ಮುಂದಾದರೂ ಸಾಗುವದು. ಅದು ಯಾವದಾದರೊಂದು ರಾಷ್ಟ್ರಕ್ಕೆ ಸಂಬಂಧಿಸದೆ, ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಸಂಬಂಧಿಸಿದೆ. ಅದೊಂದು ಅಂತರ್ರಾಷ್ಟ್ರೀಯ ಮೆಚ್ಚುಗೆಯಾದುದರಿಂದ ಆದಕ್ಕೆ ಅಷ್ಟೊಂದು ಮಹತ್ವ ಬಂದಿದೆಯೆಂಬುದನ್ನು ಓದುಗರ ಗಮನಕ್ಕೆ ತರಬಯಸುತ್ತೇವೆ. ಅದರ ವಿಶ್ವಸ್ಥನಿಧಿಯ ಕಚೇರಿಯು ಸ್ವೀಡನ್ ದೇಶದ ರಾಜಧಾನಿಯಾದ ಸ್ಟಾಕ್‌ಹೋಮ್ ಪಟ್ಟಣದಲ್ಲಿ ಭವ್ಯವಾದೊಂದು ಇಮಾರತಿಯಲ್ಲಿದೆ. ವಿಶ್ವಸ್ಥನಿಧಿಮಂಡಲವು ತನ್ನ ಕಾರ್ಯಕಲಾಪಗಳಿಗಾಗಿ ಆ

ಇಮಾರತಿಯಲ್ಲಿಯೇ ಕಲೆಯುತ್ತಿದ. ಆ ವಿಶ್ವವಿದ್ಯಾ
ಲಯದ ತಜ್ಞರಾದ ವಿಜ್ಞಾನಿಗಳ ಸಂಸ್ಥೆ (Academ
of Science)ಯು ಪದಾರ್ಥವಿಜ್ಞಾನದ ಮತ್ತು ರಸ
ಯನಶಾಸ್ತ್ರದ ಪಾರಿತೋಷಕವನ್ನು ನಿರ್ಣಯಿಸುತ್ತಿ
ನುರಿತ ವೈದ್ಯರ ಸಂಸ್ಥೆ (Faculty of Medicine
ಯು ವೈದ್ಯಕೀಯ ಹಾಗೂ ಪ್ರಾಣಿಗುಣಧರ್ಮಶಾಸ್ತ್ರ
ಬಹುಮಾನವನ್ನು ಗೊತ್ತುಪಡಿಸುತ್ತಿದೆ; ಹೆಸರಾ
ಸಾಹಿತಿಗಳ ಸಂಸ್ಥೆ (Faculty of Arts)ಯ
ಸಾಹಿತ್ಯದ ಮೆಚ್ಚುಗೆಯನ್ನು ನಿಶ್ಚಯಿಸುತ್ತಿದೆ; ಅಂ
ರಾಷ್ಟ್ರೀಯ ಶಾಂತಿಸ್ಥಾಪನೆಯ ಇನಾಮನ್ನು ನಾ
ದೇಶದ ಶಾಸನಸಭೆ (Legislature)ಯಿಂದ ಚು
ಸಲ್ಪಟ್ಟ ನಾಲ್ಕು ಜನ ಸದಸ್ಯರ ಸಮಿತಿಯೊಂ
ಠರಾಯಿಸುತ್ತಿದೆ. ಈ ವಿವರಗಳೆಲ್ಲ ಡಾಕ್ಟರ ನೋಬೆ
ರವರು ಬರೆದಿಟ್ಟ ಮೃತ್ಯುಪತ್ರದಲ್ಲಿ ನಮೂದಿಸಲ್ಪಟ್ಟ
ಮೇಲೆ ಹೇಳಿದ ಸಮಿತಿ-ಸಂಸ್ಥೆಗಳು ೧೯೦
ರಿಂದ ೧೯೫೬ನೆಯ ಇಸವಿಯ ಕೊನೆಯ ವ
ಕೊಟ್ಟ ನೋಬೆಲ್ ಮೆಚ್ಚುಗೆಗಳು ಒ
೨೩೯ ಆಗಿವೆ. ಅವುಗಳಲ್ಲಿ ೫೧ ಬಹುಮಾನಗ
ಪದಾರ್ಥವಿಜ್ಞಾನಿಗಳಿಗೆ, ೪೬ ರಸಾಯನಶಾಸ್ತ್ರಜ್ಞರಿ
೫೩ ವೈದ್ಯಕೀಯ ಹಾಗೂ ಪ್ರಾಣಿಗುಣಧರ್ಮಶಾಸ್ತ್ರ
ರಿಗೆ, ೪೨ ಸಾಹಿತಿಗಳಿಗೆ ಮತ್ತು ೪೭ ಜಾಗತಿಕ ಶಾಂ
ಸಾಧಕರಿಗೆ ಕೊಡಲ್ಪಟ್ಟಿವೆ. ಈ ಪ್ರಕಾರ ಕೊಡಲ್ಪ
೨೩೯ ಬಹುಮಾನಗಳಲ್ಲಿ ಸುಮಾರು ಎಂಟು ಪಾ
ತೋಷಕಗಳು ಸ್ತ್ರೀಯರಿಗೆ ಸಂದಿವೆ. ಈ ಅವಧಿಯ
ನಮ್ಮ ದೇಶಕ್ಕೆ ಎರಡು ಮೆಚ್ಚುಗೆಗಳು ಸಿಕ್ಕದ
ಹೆಮ್ಮೆಯ ವಿಷಯವಾಗಿದ್ದರೂ ಇನ್ನೂ ಹೆಚ್ಚಿಗೆ ಪ
ಯಲು ಭಾರತೀಯರು ಪ್ರಯತ್ನಿಸುವದೊಳಿತೆಂ
ನಮ್ಮ ಪ್ರಾಂಜಲ ಮತ. ೧೯೧೩ ರಲ್ಲಿ ಗೀತಾಂಜ
ಯನ್ನು ಬರೆದ್ದಕ್ಕಾಗಿ ಕವಿಪುಂಗವರಾದ ರವೀಂದ್ರನಾ
ಟಾಗೋರರವರಿಗೆ ಹಾಗೂ ೧೯೩೦ ರಲ್ಲಿ ಪ್ರಕಾ
ವಿಸ್ತರಣ (Diffusion of light) ವನ್ನು ಮತ್ತ
ರಾಮನ್ ಪರಿಣಾಮ (Raman Effect) ವನ
ಪರಿಶ್ರಮಬಟ್ಟು ಶೋಧಿಸಿ ಪ್ರಯೋಗ ಮಾಡಿ ತೋರಿ
ಉದ್‌ಗ್ರಂಥವನ್ನು ಬರೆದುದಕ್ಕಾಗಿ ಪ್ರಸಿದ್ಧ ಪದಾ
ವಿಜ್ಞಾನಿಗಳಾದ ಶ್ರೀ. ಚಂದ್ರಶೇಖರ ವ್ಹಿ. ರಾಮ

ನೋಬೆಲ್ ಪಾರಿತೋಷಕ

ಈ ಬಹುಮಾನವು ದೊರೆತಿದೆ. ಜಗತ್ತಿನಲ್ಲಿ ಕಾಲಕ್ಕೆ ಉದಯವಾಗುತ್ತಲಿರುವ ಪಂಡಿತರಿಗೆಲ್ಲ ಪಾಂಡಿತ್ಯವನ್ನು ತೋರ್ಪಡಿಸಿ ಜಗತ್ತಿನ ಭಂಡಾರವನ್ನು ಹೆಚ್ಚಿಸಲು ಈ ಪಾರಿತೋಷಕವು ಸಹಾಯವನ್ನೀಯುತ್ತದೆಂಬುದು ಎಲ್ಲರೂ ಅಭಿಪಡತಕ್ಕ ಮಾತಾಗಿದೆ. ಜಗತ್ತಿನ ಕಲ್ಯಾಣವನ್ನೇ ಸಿ ಡಾಕ್ಟರ ಆಲ್‌ಫ್ರೆಡ್ ಬರ್ನಾರ್ಡ ನೋಬೆಲ್ ತಮ್ಮ ಜೀವಮಾನದಲ್ಲಿ ಸಂಪಾದಿಸಿದ ಹಣ ವಿಶ್ವಸ್ಥನಿಧಿಯನ್ನಾಗಿಟ್ಟು ಆದರ ನಿರ್ವಹಣಕ್ಕೆ ಗ್ಯ ಹಾಗೂ ಸುವ್ಯವಸ್ಥಿತವಾದೊಂದು ಯೋಜನೆ ರೂಪುಗೊಳಿಸಿಟ್ಟುದುದರ ಉದ್ದೇಶವು ಈಡೇರಿಯಿತು! ಅವರ ಹೆಸರು ಅಜರಾಮರವಾಗಿ ಉಳಿ ll. ವಿಶ್ವಬಂಧುತ್ವವೇ ಅವರ ಹೆಗ್ಗುರಿಯಾಗಿ -ಅವರ ಉದಾರ ಸ್ವಭಾವವನ್ನೂ ಹೃದಯ ವೈಶಾಲ್ಯವನ್ನೂ ಎಷ್ಟು ಬಣ್ಣಿಸಿದರೂ ಕಡಿಮೆಯೇ ಸೈ. ಅವರು ದಯಪಾಲಿಸಿದ ಈ ಅಮೌಲ್ಯವಾದ ದೇಣಿಗೆಯು ನಮಗೊಂದು ಗಾದೆಯ ಮಾತನ್ನು ನೆನಪಿಗೆ ತಂದು ಕೊಟ್ಟಿದೆ:- "ಕೊಟ್ಟಿದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ" ರಾಷ್ಟ್ರ—ರಾಷ್ಟ್ರಗಳಲ್ಲಿಯ ಧನಿಕರು ಆ ಕೊಡುಗೈ ಧೊರೆಯು ಹಾಕಿ ಕೊಟ್ಟ ಆದರ್ಶದತ್ತ ಕಣ್ತೆರೆದು ನೋಡುವದು ಲೇಸು. ಈ ದೇಣಿಗೆಯಿಂದ ಜಗತ್ತಿನ ಕಲ್ಯಾಣವನ್ನುಂಟು ಮಾಡಲು ಹಾಗೂ ವಿಶ್ವದ ಜ್ಞಾನ ಕೋಶವನ್ನು ಹೆಚ್ಚಿಸಲು ಕಾರಣವಾದ ಪುಣ್ಯವನ್ನು ತಮ್ಮ ಉಡಿಯ ತುಂಬ ಕಟ್ಟಿಕೊಂಡು ಪುಣ್ಯಶ್ಲೋಕಿಗಳಾಗಿದ್ದಾರೆ! ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ!

: ಸಿರಿಗನ್ನಡಂ ಗೆಲ್ಗೆ :

ತ್ವರೆ ಮಾಡಿರಿ! ಹೊಸ ಪುಸ್ತಕ. ತ್ವರೆ ಮಾಡಿರಿ!!

ಹೊಸ ಶಿಕ್ಷಣ

ಮೂಲ ಲೇಖಕರು :
ಆಚಾರ್ಯ ವಿನೋಬಾಜಿಯವರು

ಅನುವಾದಕರು :
ಶ್ರೀ. ಕಲಹಾಳ ಮಡಿವಾಳಪ್ಪ

ಈ ಪುಸ್ತಕದಲ್ಲಿ ಹೊಸ ಶಿಕ್ಷಣದ ಬಗೆಗೆ ವಿನೋಬಾಜಿಯವರ ಅಮೌಲ್ಯ ವಿಚಾರ ತರಂಗಗಳನ್ನು ಅನುವಾದಿಸಿ ಕೊಡಲಾಗಿದೆ. ಅನುಭವದ ಆಳದಿಂದ ಹೊರಬಿದ್ದ ಪೂಜ್ಯ ವಿನೋಬಾರ ಹೊಸ ಶಿಕ್ಷಣ ವಿಚಾರಗಳು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ ಉಪಯುಕ್ತವಾಗುವದರಲ್ಲಿ ಸಂದೇಹವಿಲ್ಲ. ಇಂದೇ ಕೆಳಗಿನವರಿಗೆ ಬರೆದು ತರಿಸಿ ವಿಚಾರದ ಮಾಧುರ್ಯವನ್ನು ಸವಿಯಿರಿ.

ಲೋಕಾಶ್ರಯ ಬುಕ್ ಡಿಪೋ, ಧಾರವಾಡ

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ವಯಸ್ಕರ ಸುರಸ ಕತೆಗಳು.

ಬರೆದವರು :
ಶ್ರೀ. ಪಾವಟೆ ಚೆನ್ನಪ್ಪನವರು
ಆ. ಡೆ. ಎ. ಇ., ವಿಜಾಪುರ

ಲೇಖಕರು ತಮ್ಮ ಅನುಭವದಿಂದ ವಯಸ್ಕರಿಗೆ ಓದುವ ರೀತಿಯಲ್ಲಿ ಅವರಿಗೆ ಉಪಯುಕ್ತವಿರುವ ಕತೆಗಳನ್ನು ಬರೆದಿದ್ದಾರೆ. ಸಮಾಜ ಶಿಕ್ಷಣ ಕಾರ್ಯಕರ್ತರಿಗೆ ಬಹಳ ಉಪಯುಕ್ತವಿದೆ. ಪ್ರಕಾಶಕರಿಗೆ ಬರೆದು ಇಂದೇ ತರಿಸಿಕೊಳ್ಳಿರಿ.

ಪುಸ್ತಕದ ಬೆಲೆ: ಕೇವಲ ಹತ್ತು ಆಣೆಗಳು

ಪ್ರಕಾಶಕರು :
ಶ್ರೀ. ಮ. ವಿ. ಐಹೊಳ್ಳಿ,
ಕನ್ನಡ ಶಾಲಾ ಮಾಸ್ತರರು, ವಿಜಾಪುರ

ಓದುಗರಿಗೆ ಇದರ ಸರಿಯಾದ ಹಾಗೂ ನಿಚ್ಚಳವಾದ ಕಲ್ಪನೆಯು ಇರಲೆಂಬ ಉದ್ದೇಶದಿಂದ ನಮಗೆ ದೊರೆತ ವಿವರಗಳನ್ನು ಕಲೆಹಾಕಿ ಅಚ್ಚುಕಟ್ಟಿನಿಂದ ಹೊಂದಿಸಿ ಈ ಪುಟ್ಟ ಲೇಖವೊಂದನ್ನು ಬರೆಯಲಾಗಿದೆ. ನೋಬೆಲ್‌ರವರು ೧೮೩೩ನೆಯ ಇಸವಿಯಲ್ಲಿ ಜನಿಸಿದರು. ಇವರು ಸ್ವೀಡನ್ ದೇಶದವರು. ಆ ದೇಶದ ಹೆಸರಾದ ರಸಾಯನ ಶಾಸ್ತ್ರದ ವಿಜ್ಞಾನಿಗಳೂ ಎಂಜನಿಯರರೂ ಆಗಿದ್ದರು. ಸಿಡಿಮದ್ದನ್ನು ಅವರೇ ಶೋಧಿಸಿ ತೆಗೆದರು. ೧೮೯೬ನೆಯ ಇಸವಿ ಡಿಸೆಂಬರ ತಿಂಗಳ ೧೦ನೆಯ ದಿನಾಂಕದಲ್ಲಿ ಕ್ರಿಸ್ತವಾಸಿಗಳಾದರು. ತಮ್ಮ ಬಳಿಯಲ್ಲಿದ್ದ ೧೭,೫೦,೦೦೦ ಪೌಂಡುಗಳನ್ನು ವಿಶ್ವಸ್ಥನಿಧಿ (Trust Fund) ಯನ್ನಾಗಿಟ್ಟು ಅದರ ವಾರ್ಷಿಕ ಉತ್ಪನ್ನದಿಂದ ಬಹುಮಾನವನ್ನು ಕೊಡುವ ಏರ್ಪಾಡು ಮಾಡಿಟ್ಟಿದ್ದಾರೆ. ೧೯೩೬ನೆಯ ಇಸವಿಯಿಂದೀಚೆಗೆ ಅದರ ವಾರ್ಷಿಕ ಉತ್ಪನ್ನವು ಸುಮಾರು ಎಂಟು ಸಾವಿರ ಪೌಂಡಗಳಷ್ಟಾಗುತ್ತಲಿದೆ. ಪದಾರ್ಥವಿಜ್ಞಾನ, ರಸಾಯನಶಾಸ್ತ್ರ ವೈದ್ಯಕೀಯ ಮತ್ತು ಪ್ರಾಣಿಗುಣಧರ್ಮಶಾಸ್ತ್ರ, ಸಾಹಿತ್ಯ ಅಂತರ್ರಾಷ್ಟ್ರೀಯ ಶಾಂತಿಸ್ಥಾಪನೆ, ಮೊದಲಾದವುಗಳ ಬಗೆಗೆ ಮಾಡಿದ ಹೊಸ ಹೊಸ ಶೋಧಗಳಿಗೂ ಉದ್‌ಗ್ರಂಥಗಳಿಗೂ ಈ ಬಹುಮಾನವನ್ನು ವರುಷಕ್ಕೊಮ್ಮೆ ಅವರ ಪುಣ್ಯತಿಥಿಯ ದಿವಸ (ಅವರು ಕ್ರಿಸ್ತವಾಸಿಯಾದ ದಿನ) ಕೊಡಲಾಗುತ್ತಿದೆ. ಅವರು ಬರೆದಿಟ್ಟ ಮೃತ್ಯುಪತ್ರ (Will)ದ ಆಶಯವಾದರೂ ಹೀಗೆಯೇ ಇದೆಯೆಂದು ತೋರುತ್ತಿದೆ. ಈ ಯೋಜನೆಯ ಪ್ರಕಾರ ಮೊದಲನೆಯ ಸಲ ಇನಾಮು ೧೦-೧೨-೧೯೦೧ ರಂದು ಕೊಡಲ್ಪಟ್ಟಿತು. ಅಂದಿನಿಂದ ಅದು ಒಂದೇಸವನೆ ಸಾಗುತ್ತ ಬಂದಿದೆ, ಮುಂದಾದರೂ ಸಾಗುವದು. ಅದು ಯಾವದಾದರೊಂದು ರಾಷ್ಟ್ರಕ್ಕೆ ಸಂಬಂಧಿಸದೆ, ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಸಂಬಂಧಿಸಿದೆ. ಅದೊಂದು ಅಂತರ್ರಾಷ್ಟ್ರೀಯ ಮೆಚ್ಚುಗೆಯಾದುದರಿಂದ ಅದಕ್ಕೆ ಅಷ್ಟೊಂದು ಮಹತ್ವ ಬಂದಿದೆಯೆಂಬುದನ್ನು ಓದುಗರ ಗಮನಕ್ಕೆ ತರಬಯಸುತ್ತೇವೆ. ಅದರ ವಿಶ್ವಸ್ಥನಿಧಿಯ ಕಚೇರಿಯು ಸ್ವೀಡನ್ ದೇಶದ ರಾಜಧಾನಿಯಾದ ಸ್ಟಾಕ್‌ಹೋಮ್ ಪಟ್ಟಣದಲ್ಲಿ ಭವ್ಯವಾದೊಂದು ಇಮಾರತಿಯಲ್ಲಿದೆ. ವಿಶ್ವಸ್ಥನಿಧಿಮಂಡಲವು ತನ್ನ ಕಾರ್ಯಕಲಾಪಗಳಿಗಾಗಿ ಆ ಇಮಾರತಿಯಲ್ಲಿಯೇ ಕಲೆಯುತ್ತಿದೆ. ಆ ವಿಶ್ವವಿದ್ಯಾಲಯದ ತಜ್ಞರಾದ ವಿಜ್ಞಾನಿಗಳ ಸಂಸ್ಥೆ (Academ[y] of Science)ಯು ಪದಾರ್ಥವಿಜ್ಞಾನದ ಮತ್ತು ರಸಾಯನಶಾಸ್ತ್ರದ ಪಾರಿತೋಷಕವನ್ನು ನಿರ್ಣಯಿಸುತ್ತಿ[ದೆ;] ನುರಿತ ವೈದ್ಯರ ಸಂಸ್ಥೆ (Faculty of Medicine)ಯು ವೈದ್ಯಕೀಯ ಹಾಗೂ ಪ್ರಾಣಿಗುಣಧರ್ಮಶಾಸ್ತ್ರಗ[ಳ] ಬಹುಮಾನವನ್ನು ಗೊತ್ತುಪಡಿಸುತ್ತಿದೆ; ಹೆಸರಾ[ದ] ಸಾಹಿತಿಗಳ ಸಂಸ್ಥೆ (Faculty of Arts)ಯ[ು] ಸಾಹಿತ್ಯದ ಮೆಚ್ಚುಗೆಯನ್ನು ನಿಶ್ಚಯಿಸುತ್ತಿದೆ; ಅಂ[ತರ್]ರಾಷ್ಟ್ರೀಯ ಶಾಂತಿಸ್ಥಾಪನೆಯ ಇನಾಮನ್ನು ನಾ[...] ದೇಶದ ಶಾಸನಸಭೆ (Legislature) ಯಿಂದ ಚು[ನಾಯಿ]ಸಲ್ಪಟ್ಟ ನಾಲ್ಕು ಜನ ಸದಸ್ಯರ ಸಮಿತಿಯೊಂ[...] ತರಾಯಿಸುತ್ತಿದೆ. ಈ ವಿವರಗಳೆಲ್ಲ ಡಾಕ್ಟರ ನೋಬೆ[ಲ್]ರವರು ಬರೆದಿಟ್ಟ ಮೃತ್ಯುಪತ್ರದಲ್ಲಿ ನಮೂದಿಸಲ್ಪಟ್ಟಿ[ವೆ.] ಮೇಲೆ ಹೇಳಿದ ಸಮಿತಿ-ಸಂಸ್ಥೆಗಳು ೧೯೦[೧]ರಿಂದ ೧೯೪೭ನೆಯ ಇಸವಿಯ ಕೊನೆಯ ವರೆ[ಗೆ] ಕೊಟ್ಟ ನೋಬೆಲ್ ಮೆಚ್ಚುಗೆಗಳು ಒಟ್ಟು ೨೩೯ ಆಗಿವೆ. ಅವುಗಳಲ್ಲಿ ೫೧ ಬಹುಮಾನಗ[ಳು] ಪದಾರ್ಥವಿಜ್ಞಾನಿಗಳಿಗೆ, ೪೬ ರಸಾಯನಶಾಸ್ತ್ರಜ್ಞರಿಗೆ ೫೩ ವೈದ್ಯಕೀಯ ಹಾಗೂ ಪ್ರಾಣಿಗುಣಧರ್ಮಶಾಸ್ತ್ರಜ್ಞರಿಗೆ, ೪೨ ಸಾಹಿತಿಗಳಿಗೆ ಮತ್ತು ೪೭ ಜಾಗತಿಕ ಶಾಂ[ತಿ] ಸಾಧಕರಿಗೆ ಕೊಡಲ್ಪಟ್ಟಿವೆ. ಈ ಪ್ರಕಾರ ಕೊಡಲ್ಪಟ್ಟ ೨೩೯ ಬಹುಮಾನಗಳಲ್ಲಿ ಸುಮಾರು ಎಂಟು ಪಾ[ರಿ]ತೋಷಕಗಳು ಸ್ತ್ರೀಯರಿಗೆ ಸಂದಿವೆ. ಈ ಅವಧಿಯಲ್ಲಿ ನಮ್ಮ ದೇಶಕ್ಕೆ ಎರಡು ಮೆಚ್ಚುಗೆಗಳು ಸಿಕ್ಕದ್ದು ಹೆಮ್ಮೆಯ ವಿಷಯವಾಗಿದ್ದರೂ ಇನ್ನೂ ಹೆಚ್ಚಿಗೆ ಪಡೆಯಲು ಭಾರತೀಯರು ಪ್ರಯತ್ನಿಸುವದೊಳಿತೆಂದ ನಮ್ಮ ಪ್ರಾಂಜಲ ಮತ. ೧೯೧೩ ರಲ್ಲಿ ಗೀತಾಂಜಲಿಯನ್ನು ಬರೆದದ್ದಕ್ಕಾಗಿ ಕವಿಪುಂಗವರಾದ ರವೀಂದ್ರನಾಥ ಟಾಗೋರರವರಿಗೆ ಹಾಗೂ ೧೯೩೦ ರಲ್ಲಿ ಪ್ರಕಾ[ಶ] ವಿಸ್ತರಣ (Diffusion of light) ವನ್ನು ಮತ್ತು ರಾಮನ್ ಪರಿಣಾಮ (Raman Effect) ವನ್ನು ಪರಿಶ್ರಮಬಟ್ಟು ಶೋಧಿಸಿ ಪ್ರಯೋಗ ಮಾಡಿ ತೋರಿ[ಸಿ] ಉದ್‌ಗ್ರಂಥವನ್ನು ಬರೆದುದಕ್ಕಾಗಿ ಪ್ರಸಿದ್ಧ ಪದಾರ್ಥವಿಜ್ಞಾನಿಗಳಾದ ಶ್ರೀ. ಚಂದ್ರಶೇಖರ ವ್ಹಿ. ರಾಮನ್

ಗೆ ಈ ಬಹುಮಾನವು ದೊರೆಶಿದೆ. ಜಗತ್ತಿನಲ್ಲಿ ಕಾಲಕ್ಕೆ ಉದಯವಾಗುತ್ತಲಿರುವ ಪಂಡಿತರಿಗೆಲ್ಲ ಪಾಂಡಿತ್ಯವನ್ನು ತೋರ್ಪಡಿಸಿ ಜಗತ್ತಿನ ನಭಂಡಾರವನ್ನು ಹೆಚ್ಚಿಸಲು ಈ ಪಾರಿತೋಷಕವು ಸಹಾಯವನ್ನೀಯುತ್ತದೆಂಬುದು ಎಲ್ಲರೂ ಅಭಿನ ಪಡತಕ್ಕ ಮಾತಾಗಿದೆ. ಜಗತ್ತಿನ ಕಲ್ಯಾಣವನ್ನೇ ಸಿ ಡಾಕ್ಟರ ಆಲ್‌ಫ್ರೆಡ್ ಬರ್ನಾರ್ಡ ನೋಬೆಲ್ ತಮ್ಮ ಜೀವಮಾನದಲ್ಲಿ ಸಂಪಾದಿಸಿದ ಹಣ ಲ್ಲ ವಿಶ್ವಸ್ಥನಿಧಿಯನ್ನಾಗಿಟ್ಟು ಅದರ ನಿರ್ವಹಣಕ್ಕೆ ಗ್ಯ ಹಾಗೂ ಸುವ್ಯವಸ್ಥಿತವಾದೊಂದು ಯೋಜನೆ ನ್ನು ರೂಪುಗೊಳಿಸಿಟ್ಟುದುವರ ಉದ್ದೇಶವು ಈಡೇರಿ ಯಿತು! ಅವರ ಹೆಸರು ಅಜರಾಮರವಾಗಿ ಉಳಿ !! ವಿಶ್ವಬಂಧುತ್ವವೇ ಅವರ ಹೆಗ್ಗುರಿಯಾಗಿ . ಅವರ ಉದಾರ ಸ್ವಭಾವನ್ನೂ ಹೃದಯ ವೈಶಾಲ್ಯವನ್ನೂ ಎಷ್ಟು ಬಣ್ಣಿಸಿದರೂ ಕಡಿಮೆಯೇ ಸೈ. ಅವರು ದಯಪಾಲಿಸಿದ ಈ ಅಮೌಲ್ಯವಾದ ದೇಣಿಗೆಯು ನಮಗೊಂದು ಗಾದೆಯ ಮಾತನ್ನು ನೆನಪಿಗೆ ತಂದು ಕೊಟ್ಟಿದೆ:- "ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ" ರಾಷ್ಟ್ರ—ರಾಷ್ಟ್ರಗಳಲ್ಲಿಯ ಧನಿಕರು ಆ ಕೊಡುಗೈ ಧೊರೆಯು ಹಾಕಿ ಕೊಟ್ಟ ಆದರ್ಶದತ್ತ ಕಣ್ಣೆರೆದು ನೋಡುವದು ಲೇಸು. ಈ ದೇಣಿಗೆಯಿಂದ ಜಗತ್ತಿನ ಕಲ್ಯಾಣವನ್ನುಂಟು ಮಾಡಲು ಹಾಗೂ ವಿಶ್ವದ ಜ್ಞಾನ ಕೋಶವನ್ನು ಹೆಚ್ಚಿಸಲು ಕಾರಣವಾದ ಪುಣ್ಯವನ್ನು ತಮ್ಮ ಉಡಿಯ ತುಂಬ ಕಟ್ಟಿಕೊಂಡು ಪುಣ್ಯಶ್ಲೋಕಿ-ಗಳಾಗಿದ್ದಾರೆ! ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ!

: ಸಿರಿಗನ್ನಡಂ ಗೆಲ್ಗೆ :

ರೆ ಮಾಡಿರಿ! ಹೊಸ ಪುಸ್ತಕ. ತ್ವರೆ ಮಾಡಿರಿ!!

ಹೊಸ ಶಿಕ್ಷಣ

ಮೂಲ ಲೇಖಕರು :
ಆಚಾರ್ಯ ವಿನೋಬಾಜಿಯವರು

ಅನುವಾದಕರು :
ಶ್ರೀ. ಕಲಹಾಳ ಮಡಿವಾಳಪ್ಪ

ಈ ಪುಸ್ತಕದಲ್ಲಿ ಹೊಸ ಶಿಕ್ಷಣದ ಬಗೆಗೆ ನೋಬಾಜಿಯವರ ಅಮೌಲ್ಯ ವಿಚಾರ ತರಂಗ ನ್ನು ಅನುವಾದಿಸಿ ಕೊಡಲಾಗಿದೆ. ಅನುಭವದ ದಿಂದ ಹೊರಬಿದ್ದ ಪೂಜ್ಯ ವಿನೋಬಾರ ಸ ಶಿಕ್ಷಣ ವಿಚಾರಗಳು ಶಿಕ್ಷಣ ಕ್ಷೇತ್ರದಲ್ಲಿ ಡಿಯುವವರೆಲ್ಲರಿಗೆ ಉಪಯುಕ್ತವಾಗುವದ ಸಂದೇಹವಿಲ್ಲ ಇಂದೇ ಕೆಳಗಿನವರಿಗೆ ದು ತರಿಸಿ ವಿಚಾರದ ಮಾಧುರ್ಯವನ್ನು ಯಿರಿ.

ಮಾಶ್ರಯ ಬುಕ್ ಡಿಪೋ, ಧಾರವಾಡ

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ವಯಸ್ಕರ ಸುರಸ ಕತೆಗಳು.

ಬರೆದವರು :
ಶ್ರೀ. ಪಾವಟೆ ಚೆನ್ನಪ್ಪನವರು
ಅ. ಡೆ. ಎ. ಇ., ವಿಜಾಪುರ

ಲೇಖಕರು ತಮ್ಮ ಅನುಭವದಿಂದ ವಯಸ್ಕರಿಗೆ ಳಿಯುವ ರೀತಿಯಲ್ಲಿ ಅವರಿಗೆ ಉಪಯುಕ್ತವಿರುವ ಕತೆಗಳನ್ನು ಬರೆದಿದ್ದಾರೆ. ಸಮಾಜ ಶಿಕ್ಷಣ ಕಾರ್ಯಕರ್ತರಿಗೆ ಬಹಳ ಉಪಯುಕ್ತವಿದೆ. ಪ್ರಕಾಶಕರಿಗೆ ಬರೆದು ಇಂದೇ ತರಿಸಿ ಕೊಳ್ಳಿರಿ.

ಪುಸ್ತಕದ ಬೆಲೆ: ಕೇವಲ ಹತ್ತು ಆಣೆಗಳು

ಪ್ರಕಾಶಕರು :
ಶ್ರೀ ಮ. ವಿ. ಐಹೊಳ್ಳಿ,
ಕನ್ನಡ ಶಾಲಾ ಮಾಸ್ತರರು, ವಿಜಾಪುರ

ಇಂಡೋನೇಶಿಯಾದ ಶಿಕ್ಷಣಕ್ರಮ

ಲೇಖಕರು : ಶ್ರೀ. ಎಸ್. ಎಂ. ಹಳ್ಳಿಕೇರಿ, ಬಿ. ಎ. ಡಿ. ಬಿ. ಇ.
ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಇಂಡೋನೇಶಿಯಾ ದೇಶವು ಉಷ್ಣಕಟಿಬಂಧದಲ್ಲಿ ವಿಷುವೃತ್ತಕ್ಕೆ ತೀರ ಸಮೀಪದಲ್ಲಿದೆ. ಅಲ್ಲಿಯ ಹವಾಮಾನವು ಆರೋಗ್ಯದ ದೃಷ್ಟಿಯಿಂದ ಅಷ್ಟೊಂದು ಹಿತಕಾರಿಯಲ್ಲ. ಅಲ್ಲಿಯ ಜನರು ಆಧುನಿಕ ಸುಧಾರಣೆಯ ಮಟ್ಟಕ್ಕೆ ಇನ್ನೂ ಬಂದಿರುವದಿಲ್ಲ. ಅವರ ಮುಖ್ಯ ಆಹಾರ ಅಕ್ಕಿ ಹಾಗು ಮೀನ. ದೇಶದ ಮುಖ್ಯ ಧರ್ಮ ಕ್ರೈಸ್ತ ಹಾಗು ಇಸ್ಲಾಮ ಮತಗಳಾಗಿವೆ. ಆದರೂ ಅಲ್ಲಿ ಜಾತೀಯ ವೈಷಮ್ಯವಿರುವದಿಲ್ಲ.

ಇಂಡೋನೇಶಿಯಾ ದೇಶವೆಂದರೆ ಅದೊಂದು ಅಸಂಖ್ಯಾತ ಚಿಕ್ಕ ಚಿಕ್ಕ ದ್ವೀಪಗಳ ಸಮೂಹವೇ ಆಗಿದೆ. ಅಲ್ಲಿ ಮಾರ್ಗಗಳ ಅನುಕೂಲತೆ ಅಷ್ಟೊಂದು ಚೆನ್ನಾಗಿರುವದಿಲ್ಲವೆಂದೇ ಹೇಳಬಹುದು. ಈ ದೇಶವು ಮೊನ್ನೆ ಮೊನ್ನೆ ಡಚ್ಚ ಜನರ ಸಾಮ್ರಾಜ್ಯಾಧಿಕಾರವನ್ನು ಕಿತ್ತೊಗೆದು ಸ್ವಾತಂತ್ರ್ಯವನ್ನು ಪಡೆದಿದೆ. ಸ್ವಾತಂತ್ರ್ಯಾನಂತರವೂ ಡಚ್ಚರ ಸಾಂಸ್ಕೃತಿಕ, ಶೈಕ್ಷಣಿಕ, ರಾಜ್ಯಕೀಯ ವಿಚಾರಗಳ ಪ್ರಭಾವವು ನಡೆದೇ ಇದೆ. ಇಲ್ಲಿಯ ಮೂಲ ಇಲ್ಲವೆ ರಾಷ್ಟ್ರೀಯ ಭಾಷೆ ಇಂಡೋನೇಶಿಯಾ ಭಾಷೆ, ಹಾಗು ರೋಮನ್ ಲಿಪಿ. ಉಚ್ಚ ಶಿಕ್ಷಣ ಪಡೆದವರು ಸಾಮಾನ್ಯವಾಗಿ ಇಂಗ್ಲೀಷ ಭಾಷೆಯನ್ನು ಮಾತನಾಡುವದು ಕಂಡುಬರುವದು.

ಡಚ್ಚ ಜನರ ಆಳಿಕೆಯಲ್ಲಿ ಇಂಡೋನೇಶಿಯಾದ ಜನರು ಶೈಕ್ಷಣಿಕ ದೃಷ್ಟಿಯಿಂದ ಬಹಳೇ ಹಿಂದುಳಿದವರಾಗಿದ್ದರು. ಆಗ್ಗೆ ಅಲ್ಲಿಯ ಸಾಕ್ಷರತೆಯ ಪ್ರಮಾಣ ನೂರಕ್ಕೆ ೩ ರಷ್ಟು ಮಾತ್ರ ಇದ್ದಿತು. ಸ್ವಾತಂತ್ರ್ಯ ದೊರೆತ ಕೆಲವೇ ವರ್ಷಗಳಲ್ಲಿ ಅದು ೪೦ ರಷ್ಟು ಆಗಿದೆ. ಇದೊಂದು ಸೋಜಿಗದ ಮಾತೆಂದು ಹೇಳಬಹು ಸಾಕ್ಷರತೆಯಲ್ಲಿ ಕೇವಲ ಓದು, ಬರೆಹ ಹಾಗೂ ಮಟ್ಟಿಗೆ ವ್ಯಾವಹಾರಿಕ ಲೆಕ್ಕಗಳು ಸಮಾವೇಶ ತ್ತವೆ. ಹಿಂದುಸ್ಥಾನದಲ್ಲಿಯಂತೆ ಸಾಮಾಜಿಕ ಶಿ ವಿರದೆ ಕೇವಲ ಪ್ರೌಢ ಶಿಕ್ಷಣವಿದೆಯೆಂದು ಬಹುದು. ಇಂಡೋನೇಶಿಯಾದಲ್ಲಿ ಮೂಲೋದ್ ಶಾಲೆಗಳಿಗೆ ಯೋಗ್ಯಸ್ಥಾನಮಾನ ಕೊಡಲಾಗಿದೆ. ಶಿಕ್ಷಣದ ಪ್ರಮಾಣವು ಕಡಿಮೆಯೆಂದೇ ಹೇಳಬಹು

ಇಂಡೋನೇಶಿಯಾದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯದ ಕ್ರಮವನ್ನು ಇನ್ನೂವರೆಗೂ ಬಳಕೆ ತಂದಿಲ್ಲ. ಅಲ್ಲಿಯ ಸರಕಾರವು ಶೀಘ್ರದಲ್ಲಿ ಕಡ್ಡಾ ಪ್ರಾಥಮಿಕ ಶಿಕ್ಷಣವನ್ನು ಬಳಕೆಯಲ್ಲಿ ತರಲು ಯ ಸಿದೆ. ಅಲ್ಲಿಯ ಪ್ರಾಥಮಿಕ ಶಾಲೆಗಳು ಒಬ್ಬರೇ ಶಿ ಶಾಲೆಗಳು. ಪಟ್ಟವಾದ ಜನವಸತಿ ಇಲ್ಲದಿರು ಇದರ ಕಾರಣವು. ಅಲ್ಲಿ ಹಿಂದುಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿಯು ಅಷ್ಟೊಂದು ಪ್ರಮಾಣದಿಂದ ಆಗಿರುವದಿಲ್ಲ. ಆದರೂ ಇತ್ತೀ ಅಲ್ಲಿಯ ಸರಕಾರವು ಈ ವಿಷಯಕ್ಕೆ ಹೆಚ್ಚಿನ ವನ್ನು ಕೊಟ್ಟಿದೆ. ಅಲ್ಲಿಯ ಪ್ರಾಥಮಿಕ ಶಿಕ್ಷಕರ ಬೇತಿಯ ಅವಧಿಯು ಆರು ವರ್ಷಗಳ ವರೆಗೆ ಕನಿಷ್ಟ ನಾಲ್ಕು ವರುಷಗಳ ವರೆಗೆ ನಡೆಯುವದು.

ಇಂಡೋನೇಶಿಯಾದಲ್ಲಿ ಈಗ ಪ್ರಜಾಪ್ರಭುತ್ವ ಪದ್ಧತಿಯು ನೆಲೆಗೊಂಡಿದೆ. ಅಲ್ಲಿಯ ಸರಕಾ ದೇಶದ ಅಭಿವೃದ್ಧಿಗಾಗಿ ಅನೇಕ ಯೋಜನೆಗ ಜಾರಿಯಲ್ಲಿ ತರಲು ಹವಣಿಸುತ್ತಿದೆ— ಬೇರೆ ಬೇರೆ

ಗಳಲ್ಲಿ ಇಂಡೋನೇಶಿಯಾದ ರಾಯಭಾರಿ ಕಚೇರಿಗಳಿವೆ. ಇಂಡೋನೇಶಿಯವು ಎಚ್ಚತ್ತ ಏಶಿಯಾ ಖಂಡದ ಮುಖ್ಯ ರಾಷ್ಟ್ರಗಳಲ್ಲೊಂದು. ಅದು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವನ್ನು ಹೊಂದಿ ಅಂತರ್ರಾಷ್ಟ್ರೀಯ ಮನ್ನಣೆಯನ್ನು ಪಡೆದಿರುವದರಿಂದ, ವಿಶ್ವವಿಚಾರಗಳಲ್ಲಿ ಅದು ನಿರಾಂತಕವಾಗಿ ಭಾಗವಹಿಸಬಹುದಾಗಿದೆ. ಆದಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಎಲ್ಲ ನಿಧಿಗಳ ಸಹಾಯವೂ ದೊರೆಯುವದು. ಇಂಡೋನೇಶಿಯಾದ ಜನರಲ್ಲನೇಕರು ವಿಶ್ವನಿಧಿಯ ಸಹಾಯದಿಂದ ಪರರಾಷ್ಟ್ರಗಳಲ್ಲಿ ಸಂಚರಿಸಿ ಅಲ್ಲಿಯ ಅಭ್ಯಾಸ ಮಾಡುತ್ತಿದ್ದಾರೆ ಹಾಗು ತಮ್ಮ ದೇಶದ ಏಗ್ಗೆಗಾಗಿ ಹೆಣಗಾಡುತ್ತಿದ್ದಾರೆ.

ಇಂಡೋನೇಶಿಯಾ ದೇಶವು ಒಳ್ಳೇ ಭದ್ರವಾದ ಕೇಂದ್ರ ಸರಕಾರವನ್ನು ಹಾಗು ಪ್ರಾಂತೀಯ ಸರಕಾರಗಳನ್ನು ರಚಿಸಿಕೊಂಡಿದೆ. ಅದು ತನ್ನ ಸರ್ವಾಂಗೀಣ ಉನ್ನತಿಗಾಗಿ ಹೊಸ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳಬಹುದಾಗಿ ನಿರೀಕ್ಷಿಸಲಾಗಿದೆ.

ಮೂಲ ಶಿಕ್ಷಣ

ಮೂಲಶಿಕ್ಷಣದ ಕಾರ್ಯವನ್ನು ಒತ್ತಟ್ಟಿಗೆ ಗುಂಪು ಮಾಡಿದ ಕ್ಷೇತ್ರದಲ್ಲಿ ಸಂಘಟಿಸಬೇಕೆಂದೂ ಆದರ ಮಧ್ಯವರ್ತಿಯಾಗಿ ತರಬೇತಿಯ ಶಿಕ್ಷಣಾಲಯವಿರಬೇಕೆಂದೂ ಝುಕಿರ್‌ಹುಸೇನ್ ಕಮೀಟಿಯವರು ಸೂಚಿಸಿದ್ದರು. ಶಿಕ್ಷಣಾಲಯದ ಪ್ರಿನ್ಸಿಪಾಲರೂ ಅವರ ಸಹಾಯಕರೂ ಈ ಸಂಘಟಿತ ಕ್ಷೇತ್ರದಲ್ಲಿಯ ಸಾಲೆಗಳ ಮೇಲ್ವಿಚಾರಕರಂತೆಯೂ ಪರೀಕ್ಷಕರಂತೆಯೂ ಕೆಲಸ ಮಾಡಬೇಕೆಂದೂ ಅವರು ಸೂಚಿಸಿದರು.

ಮನಃಪೂರ್ವಕ ದುಡಿಯುವ ಕಾರ್ಯಕರ್ತರಿಂದ ಎಲ್ಲಿ ಈ ಪದ್ಧತಿಯನ್ನು ಜಾರಿಯಲ್ಲಿ ತರಲಾಗಿದೆಯೋ ಅಲ್ಲಿ ಅದು ಸಂಪೂರ್ಣ ಯಶಸ್ವಿಯಾಗಿದೆ. ಸಾಲೆಗಳಲ್ಲಿ ತಮ್ಮ ಕೆಲಸವನ್ನು ಆರಂಭಿಸಿದಾಗ ಶಿಕ್ಷಕರು ಶಿಕ್ಷಣಾಲಯದೊಡನೆ ತಮ್ಮ ಸಂಪರ್ಕವನ್ನು ಉಳಿಸಿಕೊಂಡಿದ್ದಾರೆ; ಹೀಗಾಗಿ ಅಲ್ಲಿ ಅವರು ಮೈಗೂಡಿಸಿಕೊಂಡ ಭಾವನೆ ಮತ್ತು ಕಾರ್ಯಕ್ಷಮತೆಗಳನ್ನು ಇಟ್ಟುಕೊಂಡಿರುವದಲ್ಲದೆ ಅದನ್ನು ಅನೇಕ ರೀತಿಯಿಂದ ಹೆಚ್ಚಿಸಿಯೂ ಇದ್ದಾರೆ. ತಮ್ಮ ಸಹಪಾಠಿಗಳ ಕ್ಷೇತ್ರದಲ್ಲಿ ಸದಾ ಉಳಿದವರಾಗಿ ಅವರೊಡನೆ ಸಹಕಾರದ ಭಾವನೆಯನ್ನೂ ಪ್ರಯೋಗ ಮಾಡಿನೋಡುವ ಪ್ರವೃತ್ತಿಯನ್ನೂ ಕಾಯ್ದುಕೊಂಡು ಬಂದಿದ್ದಾರೆ. ಈ ಸನ್ನಿವೇಶದಲ್ಲಿ, ಈ ಆವರಣದಲ್ಲಿ ಆವರ ಆರಂಭದ ಹಲವು ವರ್ಷಗಳ ಪ್ರತ್ಯಕ್ಷ ಶಿಕ್ಷಣದ ಕಾರ್ಯವು ವಿಸ್ತರಣ ತರಬೇತಿ ಅಥವಾ ತರಬೇತಿಯ ವಿಸ್ತರಣದಂತೆ ಉಪಯುಕ್ತವಾಗುವದಲ್ಲದೆ ಅದೇ ಅಡಿಗಲ್ಲಿನ ಮೇಲೆ ನಾವು ಒಂದು ಫಲಕಾರಿಯೂ ಪ್ರಾಮಾಣಿಕವೂ ಸಮರ್ಪಕವೂ ಆದ ಶಿಕ್ಷಕವೃತ್ತಿಯ ಜೀವನದ ಕಟ್ಟಡವನ್ನು ಕ್ರಮವಾಗಿ ಒಂದೊಂದೇ ಇಟ್ಟಿಗೆಯನ್ನು ಏರಿಸುತ್ತ ಕಟ್ಟಬಹುದು. ಒಂದು ಗುಂಪು ತಮ್ಮ ತರಬೇತಿಯನ್ನು ಮುಗಿಸಿದ ಮೇಲೆ ಅದರಲ್ಲಿ ಅತ್ಯುತ್ತಮವಾಗಿರುವವನ್ನು ಬೇರೆ ತರಬೇತಿ ಶಿಕ್ಷಣಾಲಯಗಳಲ್ಲಿ ಕೆಲಸ ಮಾಡುವದಕ್ಕೆ ಆರಿಸಬಹುದು, ಇಲ್ಲವೆ ಒಕ್ಕೂಟಕ್ಷೇತ್ರದ ಹೊರಗೆ ಪ್ರಾಥಮಿಕ ಶಾಲೆಗಳನ್ನು ತೆಗೆಯಲಿಕ್ಕೆ ತಕ್ಕವರಾಗಿರುವಂತೆ ಅವರಿಗೆ ಪುನರಭ್ಯಾಸದ ಕೋರ್ಸಿಗೆ ಕರೆ ಬರಬಹುದು. ಇದು ಮೂಲ ಶಿಕ್ಷಣದ ತಂತ್ರವೊಂದನ್ನೆ ಅಲ್ಲದೆ ಆದರ ಆತ್ಮವನ್ನೂ ವ್ಯಾಪಕಗೊಳಿಸುವ ಒಂದು ಸುಲಭವೂ ವ್ಯವ-

ಸ್ಥಿತವೂ, ಮಿತಿಯುಳ್ಳ ಖರ್ಚಿನದೂ ಫಲಕಾರಿಯೂ ಆದ ರೀತಿಯಾಗಿದೆ.

ಇದು ಮಿತವ್ಯಯದಿಂದ ಕೂಡಿದ ಫಲಕಾರಿಯಾದ ಪದ್ಧತಿಯಂತೂ ಆಗಿರುವದು; ಅಲ್ಲದೆ, ಕೂಟಕ್ಷೇತ್ರದಲ್ಲಿ ಹರಡಿದ ಶಿಕ್ಷಣಾಲಯದ ಸಮೀಚೀನ ವಾತಾವರಣದಿಂದ ಎಲ್ಲೆಲ್ಲಿ ಪದ್ಧತಿಯು ಪ್ರಯೋಗದಲ್ಲಿರುವದೋ ಅಲ್ಲಲ್ಲಿನ ಹಳ್ಳಿಗರು ಅದನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಮಾಡಿದ್ದಾರೆ. ಈ ಶೈಕ್ಷಣಿಕ ಸಂಘಟನೆಯು ಇದ್ದುದರಿಂದ ನೆರೆಹಾವಳಿ ಅಥವಾ ಬರಗಾಲದಲ್ಲಿ ಪರಿಹಾರ ಕಾರ್ಯವನ್ನು ಕೈಕೊಳ್ಳಲಿಕ್ಕೆ ಉಪಯುಕ್ತವಾಗಿರುವಂತೆಯೇ ಹಳ್ಳಿಗಳ ಆರೋಗ್ಯ. ಒಕ್ಕಲತನದ ಸುಧಾರಣೆ ಮುಂತಾದ ತೀವ್ರವಾದ ವ್ಯಾವಹಾರಿಕ ಪ್ರಚಾರವನ್ನೂ ಮಾಡಲಿಕ್ಕೂ ಸಹಾಯಕಾರಿಯಾಗಿದೆ.

ಜಾನಪದಗೀತ ನೃತ್ಯ ಮುಂತಾದವುಗಳ ಸಹಾಯದಿಂದ ಗ್ರಾಮಗಳ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿ ಐಕ್ಯ ಮತ್ತು ಸಹಿಷ್ಣುತೆಯ ಭಾವವನ್ನು ಉಂಟುಮಾಡುವದಕ್ಕೆ ಅದು ಸಮರ್ಥವಾಗಿದೆ. ಈ ರೀತಿಯಾಗಿ ಅದು ಕೇವಲ ಸಂಕುಚಿತ ಸಾಕ್ಷರತೆಯ ಸಾಧನವಲ್ಲ, ಆದರೆ ನಿಜವಾದ ಅರ್ಥದಲ್ಲಿ ರಚನಾತ್ಮಕ ಸಮಾಜ ಶಿಕ್ಷಣದ ಸಾಧನವಾಗಿ ಪರಿಣಮಿಸಿದೆ.

ಪ್ರಾಥಮಿಕ ಶಾಲೆಯು ಕೆಲಸವನ್ನು ಮಾಡುವಾಗ ಶಿಕ್ಷಕನು ಕೇವಲ ಮಕ್ಕಳ ಶಿಕ್ಷಕನಾಗಿ ದುಡಿದಂತಾಗಿರುವದಲ್ಲದೆ ಕೃಷಿ, ಸಾಮೂಹಿಕ ಆರೋಗ್ಯ ಸಂಸ್ಕೃತಿ ಈ ವಿಷಯಗಳಲ್ಲಿ ಸಾಮಾನ್ಯ ಗ್ರಾಮಸೇವಕನಂತೆ ಅವನ ಸೇವೆಯು ಸಲ್ಲುತ್ತಿದೆ. ಒಂದಕ್ಕೊಂದು ಸಂಬಂಧವಿಲ್ಲದ ವಿಶಿಷ್ಟ ಖಾತೆಗಳ ಈ ದಿನಗಳಲ್ಲಿ ಇದು ನಿಜವಾಗಿಯೂ ಗ್ರಾಮೋದ್ಧಾರದ ಸಮಸ್ಯೆಯ ಪರಿಣಾಮಕಾರಿಯಾದ ಮತ್ತು ಮಿತವಾದ ಪರಿಹಾರವಾಗಿದೆ; ಇದಕ್ಕೆ ಹಳ್ಳಿಗರು ಮೆಚ್ಚಿದ್ದಾರೆ. ಅವರ ಮಕ್ಕಳು ಶಾಲೆಯನ್ನು ಯಾವ ಘಟ್ಟದಲ್ಲಿ ಮುಗಿಸಿ ಹೊರಬಿದ್ದಾಗಲೂ ಅವರು ಸಮಾಜದಲ್ಲಿ ಉಪಯುಕ್ತ ಉತ್ಪಾದಕ ನಾಗರಿಕರಾಗುವರು.

ಪ್ರಾಥಮಿಕ ಶಿಕ್ಷಕರ ತರಬೇತಿಗೆಂದು ಪ್ರತಿವರ್ಷ ಅರ್ಜಿ ಹಾಕಿದವರಲ್ಲಿ ಉತ್ತಮರಾದವರನ್ನು ಆರಿಸುವ ವಿಧಾನದಿಂದ ಈ ಫಲ ದೊರೆತಿದೆ.

ಇನ್ನು ಕೆಲಸದ ಉತ್ಪಾದಕ ಅಂಶದ ವಿಷಯವನ್ನು ತೆಕ್ಕೊಂಡರೆ ಮಕ್ಕಳು ತಮ್ಮ ಶಿಕ್ಷಣದ ಖರ್ಚನ್ನು ಬಹುಮಟ್ಟಿಗೆ ತಾವೇ ಹುಟ್ಟಿಸುವರೆಂದು ಕಂಡುಬಂದಿದೆ. ಎಲ್ಲಿ ಯೋಜನೆಯು ದೊಡ್ಡ ಪ್ರಮಾಣದಿಂದ ನಡೆದಿದೆಯೋ ಅಲ್ಲಿ ಉತ್ಪಾದನೆಯ ಮಾರಾಟದ ಹೊಣೆಯನ್ನು ಸರಕಾರವು ಹೊತ್ತುಕೊಳ್ಳುವದು.

ಸರಕಾರೀ ಶಾಖೆಗಳೇ ನೌಕರರ ಸಮವಸ್ತ್ರಕ್ಕಾಗಿ ಬಟ್ಟೆ, ಕಚೇರಿಗಳ ಸಾಧನ ಸಲಕರಣೆಗಳು ಸ್ಟೇಶನರಿ, ಒಕ್ಕಲತನದ ಸಾಮಾನುಗಳು, ಶಾಲೆಯಲ್ಲಿ ಬೇಕಾಗುವ ಉಪಕರಣಗಳು ಇತ್ಯಾದಿ ಬಹುಭಾಗ ಉತ್ಪನ್ನವಾದ ಸರಕನ್ನು ಬಳಸಬಲ್ಲವು. ಈ ವಾರ್ಷಿಕ ಉಳಿತಾಯವು ಕೆಲವು ವರ್ಷ ಹೀಗೆಯೇ ಆಗುತ್ತ ಬಂದರೆ ಶಾಲೆಗಳ ಆರಂಭದ ಸಾಧನ ಸಲಕರಣೆಗಳ ಮೇಲೆ ಆಗುವ ಅನಾವರ್ತ ಖರ್ಚಿಗೆ ಮೇಳವಾಗುವದು. ಈಗಲೂ ಎಷ್ಟೋ ಶಾಲೆಗಳ ಮುಂದಿರುವ ಆವಾರವು ಕೆಲಸಕ್ಕೆ ಬಾರದೆ ಹಾಗೆಯೇ ಬಿದ್ದಿದೆ; ಅದನ್ನು ಉತ್ಪಾದಕ ತೋಟದ ಕೆಲಸಕ್ಕೆ ಉಪಯೋಗಿಸಬೇಕು.

ಶಿಕ್ಷಣಾಲಯದ ಪ್ರಾಧ್ಯಾಪಕರಿಂದ ಶಾಲೆಗಳ ಇನ್‌ಸ್ಪೆಕ್ಶನ್ ನಡೆಸುವದರಿಂದ ಸಂಬಳದಲ್ಲಿಯೂ ಭತ್ತೆಯಲ್ಲಿಯೂ ಬಹಳ ಖರ್ಚು ಕಡಿಮೆಯಾಗುವದು.

ಅಂತೂ ನಮ್ಮ ಶಿಕ್ಷಣ ವ್ಯವಸ್ಥೆಯ ಯೋಗ್ಯ ಸುಧಾರಣೆಯು ಸಾಧನಗಳ ಕೊರತೆಯಿಂದ ನಿಂತಿರದೆ ಮನಸ್ಸಿನ ನಿರ್ಧಾರವಿಲ್ಲದುದರಿಂದಲೇ ಮುಂದರಿಯಲೊಲ್ಲದು. ಶಿಕ್ಷಣಾಧಿಕಾರಿಗಳ ತಲೆಯಲ್ಲಿ ತಮ್ಮ ಶಿಕ್ಷಣವನ್ನು, ತಮ್ಮ ಜೀವನವನ್ನು ಬೇರೆ ಮಾದರಿಯ ಮೇಲೆ ಕಟ್ಟಬೇಕಾಗಿದೆ ಇಲ್ಲವೆ ಅಸಮರ್ಥರೆನಿಸಿಕೊಂಡು ಹೊರಬೀಳಬೇಕಾಗಿದೆ—ಎರಡರಲ್ಲೊಂದು—ಎಂಬ ತಿಳಿವು ಉಂಟಾದರೆ ಅವರಲ್ಲಿ ಬಹುಶಃ ಯಾರೂ ಹೊರಗುಳಿಯುವದಿಲ್ಲ.

ಮೇಲಿನ ಮಾರ್ಗದರ್ಶಕರು ಸರಿಯಾದವರಿದ್ದ ಪಕ್ಷದಲ್ಲಿ ಅವರು ಹೆಚ್ಚು ಕಡಿಮೆ ವಿನಯಶೀಲರಾಗಿ, ವಿಧೇಯರಾಗಿ ಅವರ ಮಾರ್ಗದರ್ಶನದಂತೆ ನಡೆದು ಕ್ರಮವಾಗಿ ಪರಿಸ್ಥಿತಿಗೆ ಹೊಂದಿಕೊಳ್ಳುವರು. ನಾವು ನೋಡುವ ರೀತಿಯೇ ಸರಿಯಾದದ್ದಿದ್ದರೆ ಶ್ರದ್ಧೆಯು ಕಡಿಮೆಯಾದ ನಮ್ಮ ತರುಣರ ಮುಂದೆ ಒಂದು ವ್ಯವ-

ಾರ್ಯವಾದ ಮತ್ತು ಸಾಧಿಸಬಹುದಾದ ಆದರ್ಶ ನ್ನು ಇಟ್ಟು ಅವರಲ್ಲಿ ಉತ್ಸಾಹವನ್ನು ತುಂಬಬಲ್ಲೆವು. ನ್ನು ಖರ್ಚಿನ ಪ್ರಶ್ನೆಯನ್ನು ವಿಚಾರಿಸಿದರೆ, ರಾಷ್ಟ್ರಕ್ಕೆ ತಿಫಲದ ದೃಷ್ಟಿಯಿಂದೊಂದೇ ಅಲ್ಲ, ನಡೆಸುವ ರ್ಚಿನ ಮಿತವ್ಯಯದ ದೃಷ್ಟಿಯಿಂದಲೂ ಮೊದಲಿನ ುಪಯುಕ್ತವಾದ ಹಾಳು ಶಿಕ್ಷಣಕ್ಕಿಂತ ಮೂಲ ಕ್ಷಣವು ಎಷ್ಟೋ ಹಿತಮಿತವಾದ ಪದ್ಧತಿಯೆಂದು ಾಡುಬರದಿರದು. [(೧೯೫೪) ಇದೇ ಫೆಬ್ರುವರಿ ಮಾಡರ್ನ್ ರಿವ್ಯೂದಲ್ಲಿಯ 'ಶೈಕ್ಷಣಿಕ ಸಂಕಟ' ಎಂಬ ಲೇಖನದ ಕೆಲವೊಂದು ಭಾಗದ ಸಂಗ್ರಹವಿದು. ಲೇಖಿಕೆಯರು ಸರಲಾದೇವಿ ಎಂಬ ಮಹಾತ್ಮಾ ಗಾಂಧೀಜಿಯವರ ಶಿಷ್ಯರಾಗಿದ್ದಾರೆ. ಕುಮಾಯುನ್ ಬೆಟ್ಟದ ಬಳಿಯಲ್ಲಿ ಕೌಶನಿ ಎಂಬ ಒಂದು ಆಶ್ರಮವನ್ನು ಸ್ಥಾಪಿಸಿ ಅವರು ಅಲ್ಲಿ ಅಪ್ರತಿಮವಾದ ವಿಧಾಯಕ ಕಾರ್ಯವನ್ನು ಮಾಡುತ್ತಿದ್ದಾರೆ.]

—ತಟ್ಟಿ ಶ್ಯಾಮರಾಯರು

ಸಮಾಜದಲ್ಲಿ ಶಿಕ್ಷಕನ ಸ್ಥಾನಮಾನ

ಲೇಖಕರು : ಶ್ರೀ. ಈಶ್ವರಚಂದ್ರ ಚಿಂತಾಮಣಿ, ೨ನೆಯ ವರ್ಷ, ಟ್ರೇ. ಕಾ. ಜಮಖಂಡಿ

"ನಂಬಿ ಕರೆದಡೆ 'ಓ' ಎಂಬನು ಶಿವನು"

—ಶ್ರೀ. ಬಸವಣ್ಣನವರು,

ಎಂದಿನಿಂದಲೂ ಗುರುವಿಗೆ ಹಿರಿಯಸ್ಥಾನ, ಗೌರವ ಲ್ಲುತ್ತ ಬಂದಿದೆ. ಜ್ಞಾನದಾನಿಯಾದ ಗುರುವು ಸಕಲರಿಗೂ ಲೇಸನ್ನೆ ಬಯಸುವವನಾದ ಮೂಲಕ, ಸಮಾಜ ಯನಾದ ಕಾರಣ ಅವನ ಪವಿತ್ರ ಕಾರ್ಯಕ್ಕೆ ಕ್ಕ ಸ್ಥಾನಮಾನಗಳು ತಾವಾಗಿಯೇ ದೊರೆಯುತ್ತ ಂದಿವೆ. ಯೋಗ್ಯಸ್ಥಾನ, ತಕ್ಕ ಮರ್ಯಾದೆ ಗಳಿಸಿದರೆ-ಯಸಿದರೆ ದೊರೆಯಬಹುದೆ? ಸಾಧ್ಯವಿಲ್ಲ. ಈ ್ಥಾನ, ಬಯಕೆಯಿಂದ ಬರದೆ ಪವಿತ್ರ ಆಚರಣೆಯಿಂದ, ನ್ನವರ್ತನೆಯಿಂದ ದೊರೆಯಬಲ್ಲುದೆಂದು ಧಾರಾಳವಾಗಿ ೀಳಬಹುದು.

ಹಿಂದಿನ ಗುರುಪರಂಪರೆ ಪವಿತ್ರತನವನ್ನು ಕಾಯ್ದು ಕೊಂಡು ಬಂದುದು ಸತ್ಯ. ಅಂದು ಹಳ್ಳಿಯಲ್ಲಿ ಸುಶಿಕ್ಷಿತ ಂದರೆ, ಮಾರ್ಗದರ್ಶಿ ಎಂದರೆ ಗುರುವೊಬ್ಬನೇ ಆಗಿದ್ದ. ವನನ್ನು ಆಶ್ರಯಿಸದೆ ಇತರರಿಗೆ ಗತ್ಯಂತರವಿರಲಿಲ್ಲ. ಂದಿನ ಸ್ಥಿತಿಗೂ ಇಂದಿನ ಪರಿಸ್ಥಿತಿಗೂ ದೊಡ್ಡ ತ್ಯಾಸವಿದ್ದರೂ ಇಂದಿನ ಗುರುವಿನ ಮೇಲೆ ಹಳ್ಳಿಯ ಸಮಗ್ರ ಜೀವನದ–ಸರ್ವತೋಮುಖವಾದ ಏಳಿಗೆಯ ಬಹುದೊಡ್ಡ ಹೊಣೆಗಾರಿಕೆ ಬಿದ್ದಿದೆ. ಅಂದಿನ ಗುರುವು ಅನುಕೂಲವಂತರ ಹಿತೈಷಿಯಾಗಿದ್ದರೆ ಇಂದಿನ ಗುರುವು ಸಕಲರ ಹಿತಚಿಂತಕನಾಗಿದ್ದಾನೆ. ಅಂದಿನ ಜೀವನದಲ್ಲಿ ಮೇಲು ಕೀಳೆಂಬ ಭಾವನೆ, ಭಾವನೆಗೆ ತಕ್ಕ ಸಮಾಜ ಸ್ಥಿತಿ ಇದ್ದ ಮೂಲಕ ಅದಕ್ಕೆ ಹೊಂದಿಕೊಂಡು ಅಂದಿನ ಗುರುವು ಅನಿವಾರ್ಯವಾಗಿ ಎಲ್ಲವನ್ನು ಸಹಿಸುತ್ತ ನಡೆದಿದ್ದ. ಆದರೆ ಇಂದು ಮೇಲು–ಕೀಳು ಕಲ್ಪನೆ ಕೂಡ ಇಲ್ಲದೆ, ಸಕಲರೂ ಒಂದು ಮನೆತದವರೆಂಬುದನ್ನು ಸಾರಿ, ಸಾಧಿಸುವ ಜೀವಿ ಗುರುವಾಗಿದ್ದಾನೆ.

ಸ್ವತಂತ್ರ ಭಾರತದಲ್ಲಿ ಹಳ್ಳಿಗಳ ಉನ್ನತಿ ಸಾಧಿಸಲು ಸಣ್ಣದೊಡ್ಡವರೆಲ್ಲ ನಡೆಸಿರುವ ಹೋರಾಟ ಹಾಗೂ ಯೋಜನೆಗಳು ಹೇರಳವಾಗಿವೆ. ಈ ಯೋಜನೆ ಹಾಗೂ ಹೋರಾಟಗಳು ದೂರನಿಂತು ನಡೆಸಿದರೆ, ಬಾನುಲಿಯಲ್ಲಿ ಬಿತ್ತರಣೆಯಾದರೆ, ಪಟ್ಟಣಗಳಲ್ಲಿ ಪ್ರಸಾರವಾದರೆ ಹಳ್ಳಿಗರಿಗೆ ಹೇಗೆ ತಾನೇ ಅರಿವಾದೀತೆಂದು ವಾದಿಸುವ ಜನ ಬಹಳ. ಈ ವಾದ ಸತ್ಯ. ಈ ಬಗೆಯ ಹಳ್ಳಿಯ ಏಳಿಗೆಗೆ ಹಳ್ಳಿಗರ ಮಧ್ಯದಲ್ಲಿರುವ ಹಳ್ಳಿಯ ಜೀವಿ ಗುರುವು (ಶಿಕ್ಷಕ) ಟೊಂಕಕಟ್ಟಿ ನಿಂತರೆ ಸಾವಿ-

ರಾರು ಜನರು ಸಾಧಿಸುವ ಕಾರ್ಯವನ್ನು ಅವನೊಬ್ಬನೇ ಮಾಡಿದಂತಾಗುತ್ತದೆ.

ಅಶಿಕ್ಷಿತತನ ತಾಂಡವವಾಡುತ್ತಿರುವ ನಮ್ಮ ದೇಶದ ಹಳ್ಳಿಗಳಲ್ಲಿ ಜ್ಞಾನಜೀವಿಯಾದ ಶಿಕ್ಷಕನು ಸಕಲರಿಗೂ ಮಾರ್ಗದರ್ಶನ ಮಾಡದೆ ಗತ್ಯಂತರವಿಲ್ಲ. ಜ್ಞಾನ ಪ್ರಸಾರದ ಕಾರ್ಯ ಹಳ್ಳಿಯಲ್ಲೇ ನಿಂತು, ಹಳ್ಳಿಗರೊಂದಿಗೆ ಒಂದಾಗಿ ಹೊಂದಿಕೊಂಡು, ಅವರ ಹಿತ ಚಿಂತಕನಾಗಿ ಜೀವಿಸುವವನಿಂದಲೇ ಸಾಧ್ಯವೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. ಈ ಕೆಲಸವನ್ನು ಹೊತ್ತುನಿಂತವನು ಸ್ವತಂತ್ರ ಭಾರತದ ಪ್ರಾಥಮಿಕ ಶಿಕ್ಷಕನು. ಇದರ ಮೇಲಿಂದ ಅವನ ಸ್ಥಾನವೆಂಥದು ಎಂಬುದು ಸ್ಪಷ್ಟವಾಗುತ್ತದೆ.

ಹಳ್ಳಿಗರಲ್ಲಿ ಎಲ್ಲಿಯ ವರೆಗೆ ಅಶಿಕ್ಷಿತತನ ಉಳಿಯುವದೋ ಅಲ್ಲಿಯ ವರೆಗೆ ಅವರಲ್ಲಿ ತಿಳುವಳಿಕೆ ಸರಿಯಾಗಿ ಮಾಡಲು ಸಾಧ್ಯವಿಲ್ಲ. ರಾಷ್ಟ್ರಜೀವಿಗಳಾದ ಹಳ್ಳಿಗರು ಯೋಗ್ಯ ತಿಳುವಳಿಕೆಯುಳ್ಳವರಾಗಬೇಕಾದರೆ ಮೊದಲು ಅವರು ಸಾಕ್ಷರಗಳಾಗಬೇಕಾಗುವದು. ಅವರನ್ನು ಓದುಬಲ್ಲವರನ್ನಾಗಿ ಮಾಡುವವನು ಹಳ್ಳಿಯ ಶಿಕ್ಷಕನು. ಸಾಲೆಯಲ್ಲಿ ಮಕ್ಕಳಿಗೆ ಪ್ರಿಯನಾದ ಶಿಕ್ಷಕನು ಸಮಾಜದಲ್ಲಿಯ ಜನರೆಲ್ಲರಿಗೂ ಪ್ರಿಯನಾಗಬೇಕಾಗುತ್ತದೆ. ಸಮಾಜ ಶಿಕ್ಷಣದ ಮಹತ್ವವನ್ನು ಅರಿತ ಶಿಕ್ಷಕನು ಸಮಾಜದಲ್ಲಿ ಸಾಮೂಹಿಕ ಸಂಘಟನೆಯನ್ನುಂಟು ಮಾಡಿ ಓದು ಕಲಿಸಬೇಕು. ಓದು ಕಲಿಸುವದಷ್ಟೇ ಸಮಾಜ ಶಿಕ್ಷಣದ ಗುರಿಯಾಗಿರದೆ, ಹಳ್ಳಿಗರಲ್ಲಿ ನಾಗರಿಕತೆಯ ಬೀಜಬಿತ್ತಿ, ಮೇಲುಕೀಳು ಭಾವನೆಯನ್ನು ಹೋಗಲಾಡಿಸಿ, ಸಂಘಶಕ್ತಿಯನ್ನು ಬೆಳೆಸುವದಾಗಿದೆ. ಇಂತಹ ಮಹತ್ವದ ಕೆಲಸವನ್ನು ಇತರರು ಸಾಧಿಸಲು ಹೊರಟರೆ ಪ್ರಗತಿ ಸಾಧ್ಯವಿಲ್ಲ; ಶಿಕ್ಷಕನೇ ನಿರ್ವಹಿಸಬಲ್ಲ; ಪ್ರಗತಿ ಸಾಧಿಸಬಲ್ಲ.

ಇನ್ನು ಈ ಪ್ರಗತಿಗೆ ಮೂಲಕಾರಣ ನಂಬಿಗೆ, ವಿಶ್ವಾಸ, ಹಾಗೂ ತಾಳ್ಮೆ. 'ನಂಬಿಕರೆದಡೆ 'ಓ' ಎಂಬನು ಶಿವನು' ಎಂಬ ಬಸವಣ್ಣನವರ ನುಡಿಯಂತೆ ಶಿಕ್ಷಕನು ಮೊದಲು ಎಲ್ಲರಲ್ಲಿ ನಂಬಿಗೆಯುಳ್ಳವನಾಗಿ, ವಿಶ್ವಾಸ ಗಳಿಸಬೇಕು. ಯಾರ ದ್ವೇಷಕ್ಕೂ ಕಾರಣನಾಗದೆ, ಯಾರ ಮುರನತ್ತಿಗೂ ಒಳಗಾಗದೆ, ಪಕ್ಷ-ಪಂಗಡ
ಅವಲಂಬಿಸದೆ ತಾಳ್ಮೆಯಿಂದ ಕಾರ್ಯಸಾಧಿಸಬೇಕ
ತಾಳ್ಮೆ-ವಿಶ್ವಾಸಗಳಿಲ್ಲದ ಶಿಕ್ಷಕನು ಸಮಾಜದಲ್ಲಿ ಪ್ರಿ
ನಾಗಲಾರ. ಅವನು ಸಮಾಜದ ಮೇಲೆ ಪ್ರಭುತ್ವ ನ
ಸದೆ, ಸವಿನಯದಿಂದ 'ನಾನೂ ನಿಮ್ಮವ' ನೆಂದು ನಡೆ
ನುಡಿಯಲ್ಲಿ ತೋರಿಸಿಕೊಟ್ಟರೆ ಸಮಾಜವೇ ಅ
ಸೇವೆಗೆ ಸಿದ್ಧವಾಗುವದೆಂದು ನಡೆದು-ಅನುಭವದಿ
ಕಂಡುಕೊಳ್ಳಬಹುದು.

ಹಳ್ಳಿಯ ಜನರನ್ನು ತನ್ನೆಡೆಗೆ ಆಕರ್ಷಿಸಲೇಕಾ
ಅವರನ್ನು ಒಂದು ಕಡೆಗೆ-ಒಂದು ಸಂಘಟನೆಗೆ ತರ
ಕಾದರೆ ಶಿಕ್ಷಕನು ಮನರಂಜನೆಯ ಮೂರ್ತಿಯಾ
ಬೇಕಾಗುವದು. ಹಳ್ಳಿಯಲ್ಲಿ ಪಾಠ-ಪ್ರವಚನ, ಪುರಾ
ಪುಣ್ಯ-ಕತೆ ಕೇಳಲು ಜನ ತಂಡತಂಡವಾಗಿ ನೆರೆ
ವದನ್ನು ನಾವು ನಿತ್ಯವೂ ನೋಡುತ್ತೇವೆ. ಅವ
ಮನರಂಜನೆ ಬೇಕು; ಸತ್ಯ ಕತೆ ಬೇಕು. ಪುಣ್ಯ ಜ
ಗಳನ್ನು ಕೇಳುವ ಹಂಬಲ ಅವರಿಗೆ ಇರುವಷ್ಟು ಪ
ರಿಗೂ ಇರುವದಿಲ್ಲ. ಒಳ್ಳೆಯದೆನ್ನುವದನ್ನೆಲ್ಲ ತಿಳ
ಕೊಳ್ಳುವ ಉತ್ಕಟ ಹಂಬಲ ಅವರಿಗೆ ಸದಾ ಇ
ಇರುತ್ತದೆ.

ಬಿಡುವಿದ್ದಾಗ ಓಣಿ ಓಣಿಗಳಲ್ಲಿ, ಕಟ್ಟೆಯ ಮೇ
ಕುಳಿತು, ಚಾವಡಿಗಳನ್ನು ನಿರ್ಮಿಸಿ, ಹರಟೆಯಲ್ಲಿ ಕಾ
ಕಳೆಯುತ್ತಿರುತ್ತಾರೆ. ಅವರ ಹರಟೆ ನಡೆದಾಗ,
ತೇಲುವಾಗ ಅವರೆದುರು ಶಿಕ್ಷಕನು ಹಾಯ್ದರೆ, 'ಬಲ್ಲ
ನು ಕಂಡರೆ ಅವರ ನಗೆ ನಿಲ್ಲುತ್ತದೆ. ಹರಟೆ ಕಡಿ
ಯಾಗುತ್ತದೆ. ಒಮ್ಮೊಮ್ಮೆ ಹೆಚ್ಚಾಗುತ್ತದೆ. ಅವರಿ
ದೂರವಿದ್ದರೆ--- ಅಪರಿಚಿತನಾಗಿದ್ದರೆ ಅವರು ನಗುತ್ತಾ
'ಅಪರಿಚಿತತನ' 'ದೂರವಿರುವಿಕೆ' ಅವರಲ್ಲಿ ತಿರಸ್ಕಾ
ಜಿಗುಪ್ಸೆಯನ್ನುಂಟು ಮಾಡುತ್ತದೆ. ಅವರ ಹರಟೆಯ
ಪಾಲುಗಾರನಾಗಿ ಅವರ ನಗೆಯಲ್ಲಿ ಒಂದಾಗಿ ನಿಂ
ಆಗ ಅವರು ತಮಗೆ ತಿಳಿಯದ ಪ್ರಶ್ನೆ ಕೇಳಿಯೇ ಜ
ತ್ತಾರೆ. ಎಲ್ಲಿಂದಲೋ ಹೊರಟ ಹರಟೆ ಎತ್ತ ಕಡೆಗೆ
ಸಾಗುತ್ತದೆ. ಮಾತು ರುಚಿಯಾದರೆ, ವಿಷಯ ಮಹ
ದ್ದಾದರೆ, ಹೇಳುವ ಶೈಲಿ ಹಿತಕರವಾಗಿದ್ದರೆ ಹತ್ತ
ನೂರಾರು ಜನರು ನೆರೆಯುತ್ತಾರೆ. ಜಗತ್ತನ್ನೇ ಅರ
ಕೊಂಡು ಬಿಡುವ ಹಂಬಲ ಅವರ ಪ್ರಶ್ನೆಗಳಲ್ಲಿರುತ್ತ
ಇಂಥ ಸದವಕಾಶಗಳನ್ನು ಶಿಕ್ಷಕನು ಎಂದೂ ಕ

ಕೊಳ್ಳಬಾರದು. ಅವರ ಮನೋಗತವನ್ನು ಅರಿತು ಕೊಂಡು, ನೇರವಾದ ಉತ್ತರಗಳಿಂದ ಸಂಶಯ ಪರಿ-ಹಾರ ಮಾಡಿ ಅವರನ್ನು 'ಸಮಾಜ ಶಿಕ್ಷಣ'ದತ್ತ ಸುಲಭವಾಗಿ ಎಳೆದು ತರಬೇಕು. ಹೀಗಾದರೆ ಅವರು ಶಿಕ್ಷಕನನ್ನು ಗೌರವದಿಂದ ಕಾಣುತ್ತಾರೆ; ಪೂಜಿಸುತ್ತಾರೆ. ತಮ್ಮವನೆಂದು ತಿಳಿಯುತ್ತಾರೆ, ಅವನ ಅನುವು ಆಪತ್ತುಗಳಲ್ಲಿ ಸಹಾಯಕರಾಗಿ ನಿಲ್ಲುತ್ತಾರೆ. ಅವರು ಒಲಿದರೆ ಕರೆಯದೆ 'ದನಕಾಯುವ ಬಾಲಕರು' ಸಹ ಶಾಲೆಯಲ್ಲಿ ಕಾಲಿಡುತ್ತಾರೆ. ಒಂದು ಸಾಧಿಸ ಹೊರಟರೆ ಎರಡು ದೊರೆಯುತ್ತವೆ.

ಹಳ್ಳಿಯಲ್ಲಿ, ಶರಣರ ವಚನ, ದಾಸರ ಪದ, ಗೀಗೀ ಪದ, ಜನಪದಗೀತಗಳೆಂದರೆ ತೀರಿತು, ಜನರೆಲ್ಲ ಮುಗಿ ಬೀಳುತ್ತಾರೆ; ಅಕ್ಕರೆಯಿಂದ ಕೇಳುತ್ತಾರೆ. ಅನುಭವ ಪದಗಳು, ಅವರಿಗೆ ಎಲ್ಲಕ್ಕಿಂತಲೂ ಹೆಚ್ಚು ಸೇರುತ್ತವೆ. ಶಿಕ್ಷಕನು ಸರಾಗವಾಗಿ ಅಲ್ಲದಿದ್ದರೂ ಅರ್ಥವತ್ತಾಗಿ ಜನಪದ ಹಾಗೂ ಅನುಭವದ ಪದಗಳನ್ನು ಮಾತು ಮಾತಿಗೆ, ತಕ್ಕ ಸಂದರ್ಭಗಳಲ್ಲಿ ಹೇಳುತ್ತ ಹಳ್ಳಿಗರನ್ನು ಒಲಿಸ ಬಹುದು. ಅವರ ಒಲುಮೆ ನಮ್ಮ ಕಾರ್ಯ-ಸಾಧನೆಯ ತಳಹದಿಯಾಗಿದೆ.

ಈ ರೀತಿ ಶಿಕ್ಷಕನು ಹಳ್ಳಿಗರೊಂದಿಗೆ ಹಳ್ಳಿಗನಾಗಿ, ಅವರ ಸ್ಥಿತಿಗತಿಗಳನ್ನು ಅರಿತುಕೊಂಡು ಅವರ ಪಾಲಿನ ಮಾರ್ಗದರ್ಶಿಯಾಗಿ ಬಾಳುವ ಸುಯೋಗ ಇಂದಿನ ದಾಗಿದೆ. ಇದೇ ಅವನ ಬಲವಾದ ಹೊಣೆಗಾರಿಕೆಯಾಗಿದೆ. ಇದಕ್ಕೆಲ್ಲ ಮನಸ್ಸು ಬೇಕು; ಒಲವು ಅಗತ್ಯ. ಶಿಕ್ಷಕನು ತಾಳ್ಮೆಯ ಮೂರ್ತಿಯಾಗಿ, ಪ್ರೇಮಜೀವಿಯಾಗಿ, ಸಕಲರಿಗೂ ಸುಖಬಯಸುವವನಾಗಿ ಹಳ್ಳಿಯ ಏಳ್ಗೆಯನ್ನು ಸಾಧಿಸಿದರೆ ಸಮಾಜದಲ್ಲಿ ಅವನ ಸ್ಥಾನ ಮಾನಗಳು ತಾವಾಗಿಯೇ ಗೌರವದ ಗದ್ದುಗೆಯನ್ನೇರುತ್ತವೆ ಎಂದು ಧಾರಾಳವಾಗಿ ಹೇಳಬಹುದು.

ಹೊರಬಿದ್ದಿದೆ ! ಬೆಳಕು ಕಂಡಿದೆ !!

೫ನೆಯ ಆವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | ಪುಟ ೩೦೦

ಬರೆದವರು : **ಡಾ॥ ವಿ. ಕೊ. ಜವಳಿ**, M. Ed. Ph. D. M. A. (ಕೋಲಂಬಿಯಾ)

ಬೆಲೆ ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟ-ಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ

ಶ್ರೀ ಮಿರ್ಜಿ ಅಣ್ಣಾರಾಯರು

ಲೇ : ಶ್ರೀ ದಿನಕರ ರಾಮಚಂದ್ರ ಘೋರಪಡೆ, ಬಿ. ಎ. ಬಿ. ಟಿ.

[ಧಾರವಾಡದ ಕನ್ನಡ–ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜು ಕನ್ನಡನುಡಿಗೆ ಅಷ್ಟೊಂದು ಬೆಲೆ, ಪೋಷಣೆ ಇಲ್ಲದ ಕಾಲದಲ್ಲಿ ಸ್ಮರಣೀಯರಾದ ರೊದ್ದ ಶ್ರೀನಿವಾಸರಾಯರು, ಅರಟಾಳ ರುದ್ರಗೌಡರು, ಆಲೂರ ವೆಂಕಟರಾಯರು, ಹೊನ್ನಾಪುರಮಠ ಗದಿಗೆಯ್ಯನವರು, 'ಗೌರೀಶಂ' ಅವರು ಮೊದಲಾದ ಮಹನೀಯರ ಸತತ ಪರಿಶ್ರಮದಿಂದ ಸ್ಥಾಪಿತವಾದುದು ಮತ್ತು ಉಜ್ವಲ ಪರಂಪರೆಯುಳ್ಳ, ಕನ್ನಡ ನುಡಿಯ ಅಭಿಮಾನವುಳ್ಳ ಅಧ್ಯಾಪಕರ ಶಿಕ್ಷಣದಾನದಿಂದ ಬೆಳಗುತ್ತಿರುವ ಶಿಕ್ಷಣ ಸಂಸ್ಥೆಯೆಂದು ಕರ್ನಾಟಕದಲ್ಲಿ ಹೆಸರುವಾಸಿಯಾದುದು. ಈ ಸಂಸ್ಥೆಯು ಕನ್ನಡನಾಡಿನ ಶಿಕ್ಷಣದ ಏಳ್ಗೆಗೂ ಕನ್ನಡಸಾಹಿತ್ಯಕ್ಕೂ ಅಪೂರ್ವವಾದ ಕಾಣಿಕೆಯನ್ನು ಕೊಡುತ್ತ ಬಂದಿದೆ, ಕೊಡುತ್ತಲೂ ಇದೆ, ಕೊಡುತ್ತಲೂ ಇರುವದೆಂಬ ಭರವಸೆಯೂ ಇದೆ. 'ಕನ್ನಡ ಪ್ರಾಥಮಿಕ ಶಿಕ್ಷಣ'ದ ಪತ್ರಿಕೆಯನ್ನು ಸುಮಾರು ೪೦–೪೫ ವರುಷಗಳಿಂದ ಸತತವಾಗಿ ನಡೆಸುತ್ತಿರುವ ಸಂಸ್ಥೆಯು ಇದಾಗಿದೆ. ಈ ಸಂಸ್ಥೆಯು ತಾನು ಕನ್ನಡನಾಡಿಗೆ ಒದಗಿಸಿದ ಸುಪ್ರಸಿದ್ಧ ಸಾಹಿತಿಗಳ ಪರಿಚಯವನ್ನು 'ಕನ್ನಡ ಪ್ರಾಥಮಿಕ ಶಿಕ್ಷಣ'ದಲ್ಲಿ ಕೊಟ್ಟು ಕನ್ನಡದ ಉಜ್ವಲ ಸಾಹಿತ್ಯಕ್ಕೆ ಉತ್ತಮ ಕಾಣಿಕೆಯನ್ನು ಸಲ್ಲಿಸಲು ಈ ಸಂಚಿಕೆಯಿಂದ ಅಣಿಯಾಗಿದೆ. ಈ ಯೋಜನೆಯನ್ನು ಕನ್ನಡ ಬಂಧುಗಳು ಸ್ವಾಗತಿಸುವರೆಂದು ಸಂಪಾದಕ ಮಂಡಳವು ನಂಬಿದೆ; ಇದೂ ಅಲ್ಲದೆ ಕನ್ನಡ ಶಿಕ್ಷಕ ಬಳಗವು ಕನ್ನಡನಾಡಿನ, ಭಾರತದ ಯಾವುದೇ ಕ್ಷೇತ್ರದಲ್ಲಿ ಬೆಳಗುತ್ತಿರುವ, ಬೆಳಗಿದ ಕನ್ನಡ–ಪ್ರಾಥಮಿಕ–ಶಿಕ್ಷಕರ ಪರಿಚಯವನ್ನು ಬರೆದು ನಮಗೆ ಕಳುಹಬೇಕೆಂದು ಬಯಸುತ್ತದೆ. — ಪ್ರ. ಸಂ.]

ಕೆಲವು ದಿವಸಗಳ ಹಿಂದಿನ ಸಂಗತಿ. ನಾನು ರೇಲ್ವೆಯಿಂದ ಪ್ರವಾಸ ಮಾಡುತ್ತಿದ್ದೆ. ಡಬ್ಬಿಯಲ್ಲಿ ಒಬ್ಬ ದಪ್ಪ, ಹೆಚ್ಚು ಎತ್ತರವೂ ಅಲ್ಲ, ಗಿಡ್ಡೂ ಅಲ್ಲದಂಥ, ತುಸು ಕಪ್ಪು ವರ್ಣದ ವ್ಯಕ್ತಿಯು ಕುಳಿತಿದ್ದಿತ್ತು. ಉಡಿಗೆ ತೊಡಿಗೆ, ಹತ್ತಿರ ಇರುವ ಎರಡು ಕೈ ಚೀಲಗಳು, ಅವುಗಳಲ್ಲಿಯ ಸಾಮಾನು ಇವುಗಳನ್ನು ನೋಡಿ ಈ ಗೃಹಸ್ಥ ಯಾರಿರಬೇಕು ? – ಎಂದು ನಾನು ಮನದಲ್ಲಿಯೇ ವಿಚಾರಿಸುತ್ತ ಇದ್ದೆ. ಅಷ್ಟರಲ್ಲಿ, ಅವರು ಸಾವಿರ ಪುಟಗಳ ಒಂದು ದೊಡ್ಡ ಗ್ರಂಥವನ್ನು ಕೈ ಚೀಲದಿಂದ ತೆಗೆದರು. ನನ್ನ ಕುತೂಹಲವು ಇನ್ನಿಷ್ಟು ಜಾಗೃತವಾಯಿತು. ಈ ಮನುಷ್ಯನು ಯಾರಾದರೂ ಪ್ರಾಥಮಿಕ ಶಿಕ್ಷಕನಾಗಿರಬೇಕು, ಎಂದು ನನ್ನ ಕಲ್ಪನೆಯು ಅವರ ವಿಷಯಕ್ಕೆ ಆಗಿತ್ತು. ಅದರಿಂದ ಅವರ ಕಡೆಗೆ ಇಷ್ಟು ದೊಡ್ಡ ಪುಸ್ತಕ ಇದ್ದದ್ದನ್ನು ಕಂಡು, ನನಗೆ ಆಶ್ಚರ್ಯವೆನಿಸಿತು. ನನ್ನ ಕಲ್ಪನೆಯನ್ನು ಒರೆಗೆ ಹಚ್ಚುವದಕ್ಕಾಗಿ ನಾನು ಅವರಿಗೆ ಕೇಳಿದೆ : 'ತಾವು ಪ್ರಾಥಮಿಕ ಶಿಕ್ಷಕರಿರುವಿರೇನು ?'

"ಹೌದು" ಎಂದು ಅವರು ಉತ್ತರವಿತ್ತರು.

"ಅಂದ ಮೇಲೆ ಈ ದೊಡ್ಡ ಪುಸ್ತಕ ಯಾವದು ?" ನಾನು ಕೇಳಿದೆ.

"ಜೈನ ಧರ್ಮದ ವಿಷಯಕ್ಕೆ ತುಲನಾತ್ಮಕ ಅಭ್ಯಾಸ ಮಾಡಿ ಬರೆದ ಗ್ರಂಥವಿದು" ಅವರು ಹೇಳಿದರು.

"ಈ ಕನ್ನಡ ಭಾಷೆಯೊಳಗಿನ ಗ್ರಂಥವನ್ನು ಯಾರು ಬರೆದರು?"



ಶ್ರೀ ಮಿರ್ಜಿ ಅಣ್ಣಾರಾಯರು

ಶ್ರೀ ಮಿರ್ಜಿ ಅಣ್ಣಾರಾಯರು

ಲೇ : ಶ್ರೀ ದಿನಕರ ರಾಮಚಂದ್ರ ಘೋರಪಡೆ, ಬಿ. ಎ. ಬಿ. ಟಿ.

[ಧಾರವಾಡದ ಕನ್ನಡ–ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜು ಕನ್ನಡನುಡಿಗೆ ಅಷ್ಟೊಂದು ಬೆಲೆ, ಪೋಷಣೆ ಇಲ್ಲದ ಕಾಲದಲ್ಲಿ ಸ್ಮರಣೀಯರಾದ ರೊದ್ದ ಶ್ರೀನಿವಾಸರಾಯರು, ಅರಟಾಳ ರುದ್ರಗೌಡರು, ಆಲೂರ ವೆಂಕಟರಾಯರು, ಹೊನ್ನಾಪುರಮಠ ಗದಿಗೆಯ್ಯನವರು, 'ಗೌರೀಶಂ' ಅವರು ಮುಂತಾದ ಮಹನೀಯರ ಸತತ ಪರಿಶ್ರಮದಿಂದ ಸ್ಥಾಪಿತವಾದುದು ಮತ್ತು ಉಜ್ವಲ ಪರಂಪರೆಯುಳ್ಳ ಕನ್ನಡ ನುಡಿಯ ಅಭಿಮಾನವುಳ್ಳ ಅಧ್ಯಾಪಕರ ಶಿಕ್ಷಣದಾನದಿಂದ ಬೆಳಗುತ್ತಿರುವ ಶಿಕ್ಷಣ ಸಂಸ್ಥೆಯೆಂದು ಕರ್ನಾಟಕದಲ್ಲಿ ಹೆಸರುವಾಸಿಯಾದುದು. ಈ ಸಂಸ್ಥೆಯು ಕನ್ನಡನಾಡಿನ ಶಿಕ್ಷಣದ ಏಳ್ಗೆಗೂ ಕನ್ನಡಸಾಹಿತ್ಯಕ್ಕೂ ಅಪೂರ್ವವಾದ ಕಾಣಿಕೆಯನ್ನು ಕೊಡುತ್ತ ಬಂದಿದೆ, ಕೊಡುತ್ತಲೂ ಇದೆ, ಕೊಡುತ್ತಲೂ ಇರುವದೆಂಬ ಭರವಸೆಯೂ ಇದೆ. 'ಕನ್ನಡ ಪ್ರಾಥಮಿಕ ಶಿಕ್ಷಣ'ದ ಪತ್ರಿಕೆಯನ್ನು ಸುಮಾರು ೪೦–೪೫ ವರುಷಗಳಿಂದ ಸತತವಾಗಿ ನಡೆಸುತ್ತಿರುವ ಸಂಸ್ಥೆಯು ಇದಾಗಿದೆ. ಈ ಸಂಸ್ಥೆಯು ತಾನು ಕನ್ನಡನಾಡಿಗೆ ಒದಗಿಸಿದ ಸುಪ್ರಸಿದ್ಧ ಸಾಹಿತಿಗಳ ಪರಿಚಯವನ್ನು 'ಕನ್ನಡ ಪ್ರಾಥಮಿಕ ಶಿಕ್ಷಣ'ದಲ್ಲಿ ಕೊಟ್ಟು, ಕನ್ನಡದ ಉಜ್ವಲ ಸಾಹಿತ್ಯಕ್ಕೆ ಉತ್ತಮ ಕಾಣಿಕೆಯನ್ನು ಸಲ್ಲಿಸಲು ಈ ಸಂಚಿಕೆಯಿಂದ ಅಣಿಯಾಗಿದೆ. ಈ ಯೋಜನೆಯನ್ನು ಕನ್ನಡ ಬಂಧುಗಳು ಸ್ವಾಗತಿಸುವರೆಂದು ಸಂಪಾದಕ ಮಂಡಳವು ನಂಬಿದೆ; ಇದೂ ಅಲ್ಲದೆ ಕನ್ನಡ ಶಿಕ್ಷಕ ಬಳಗವು ಕನ್ನಡನಾಡಿನ, ಭಾರತದ ಯಾವುದೇ ಕ್ಷೇತ್ರದಲ್ಲಿ ಬೆಳಗುತ್ತಿರುವ, ಬೆಳಗಿದ ಕನ್ನಡ–ಪ್ರಾಥಮಿಕ–ಶಿಕ್ಷಕರ ಪರಿಚಯವನ್ನು ಬರೆದು ನಮಗೆ ಕಳುಹಬೇಕೆಂದು ಬಯಸುತ್ತದೆ. — ಪ್ರ. ಸಂ.]

ಕೆಲವು ದಿವಸಗಳ ಹಿಂದಿನ ಸಂಗತಿ. ನಾನು ರೇಲ್ವೆಯಿಂದ ಪ್ರವಾಸ ಮಾಡುತ್ತಿದ್ದೆ. ಡಬ್ಬಿಯಲ್ಲಿ ಒಬ್ಬ ದಪ್ಪ, ಹೆಚ್ಚು ಎತ್ತರವೂ ಅಲ್ಲ, ಗಿಡ್ಡೂ ಅಲ್ಲದಂಥ, ತುಸು ಕಪ್ಪು ವರ್ಣದ ವ್ಯಕ್ತಿಯು ಕುಳಿತಿದ್ದಿತ್ತು. ಉಡಿಗೆ ತೊಡಿಗೆ, ಹತ್ತಿರ ಇರುವ ಎರಡು ಕೈ ಚೀಲಗಳು, ಅವುಗಳಲ್ಲಿಯ ಸಾಮಾನು ಇವುಗಳನ್ನು ನೋಡಿ ಈ ಗ್ರಹಸ್ಥ ಯಾರಿರಬೇಕು? – ಎಂದು ನಾನು ಮನದಲ್ಲಿಯೇ ವಿಚಾರಿಸುತ್ತ ಇದ್ದೆ. ಅಷ್ಟರಲ್ಲಿ, ಅವರು ಸಾವಿರ ಪುಟಗಳ ಒಂದು ದೊಡ್ಡ ಗ್ರಂಥವನ್ನು ಕೈ ಚೀಲದಿಂದ ತೆಗೆದರು. ನನ್ನ ಕುತೂಹಲವು ಇನ್ನಿಷ್ಟು ಜಾಗೃತವಾಯಿತು. ಈ ಮನುಷ್ಯನು ಯಾರಾದರೂ ಪ್ರಾಥಮಿಕ ಶಿಕ್ಷಕನಾಗಿರಬೇಕು, ಎಂದು ನನ್ನ ಕಲ್ಪನೆಯು ಅವರ ವಿಷಯಕ್ಕೆ ಆಗಿತ್ತು. ಅದರಿಂದ ಅವರ ಕಡೆಗೆ ಇಷ್ಟು ದೊಡ್ಡ ಪುಸ್ತಕ ಇದ್ದದ್ದನ್ನು ಕಂಡು, ನನಗೆ ಆಶ್ಚರ್ಯವೆನಿಸಿತು. ನನ್ನ ಕಲ್ಪನೆಯನ್ನು ಒರೆಗೆ ಹಚ್ಚುವದಕ್ಕಾಗಿ ನಾನು ಅವರಿಗೆ ಕೇಳಿದೆ: 'ತಾವು ಪ್ರಾಥಮಿಕ ಶಿಕ್ಷಕರಿರುವಿರೇನು?'

ಶ್ರೀ ಮಿರ್ಜಿ ಅಣ್ಣಾರಾಯರು

"ಹೌದು" ಎಂದು ಅವರು ಉತ್ತರವಿತ್ತರು.

"ಅಂದ ಮೇಲೆ ಈ ದೊಡ್ಡ ಪುಸ್ತಕ ಯಾವದು?" ನಾನು ಕೇಳಿದೆ.

"ಜೈನ ಧರ್ಮದ ವಿಷಯಕ್ಕೆ ತುಲನಾತ್ಮಕ ಅಭ್ಯಾಸ ಮಾಡಿ ಬರೆದ ಗ್ರಂಥವಿದು" ಅವರು ಹೇಳಿದರು.

"ಈ ಕನ್ನಡ ಭಾಷೆಯೊಳಗಿನ ಗ್ರಂಥವನ್ನು ಯಾರು ಬರೆದರು?"

" ನಾನೇ. "

ಎಂದು ಪ್ರಾಥಮಿಕ ಶಿಕ್ಷಕರು ಎನ್ನಲು, ಚಕಿತನಾದೆ. ...ತ್ತು ತುಸು ಸುಮ್ಮನೆ ಕುಳಿತು ಯಾಕಂದರೆ ಒಬ್ಬ ...ಾಥಮಿಕ ಶಿಕ್ಷಕ ಇಂಥ ದೊಡ್ಡ ಗ್ರಂಥ ಬರೆದಾನು ...ನ್ನುವ ಮಾತು ನನಗೆ ನಿಜವೆನಿಸದಾಯಿತು. ಆದರೆ ...ಲ್ಪ ಹೊತ್ತಿನಲ್ಲಿ ಅವರೇ ಆ ಗ್ರಂಥ ಬರೆದ ಬಗ್ಗೆ ನನಗೆ ...ಶ್ಚಿತವೆನಿಸಿತು.

ಈ ಪ್ರಾಥಮಿಕ ಶಿಕ್ಷಕ ಯಾರು ? ಎಲ್ಲಿಯವರು ? ...ೇಖಕರಾದುದು ಹೇಗೆ ? ಈ ವಿಷಯದಲ್ಲಿ ನನ್ನ ...ತ್ಸುಕತೆಯು ಅಧಿಕ ತೀವ್ರವಾಯಿತು. ತಾವೇ 'ಜೈನ ...ರ್ಮ' ಈ ಸಾವಿರ ಪುಟದ ಕನ್ನಡ ಗ್ರಂಥದ ಲೇಖಕ ...ದ್ದು ಬಗ್ಗೆ ತಿಳಿಸುವುದಕ್ಕಾಗಿ ಅವರು ನನಗೆ ವಿಖ್ಯಾತ ...ನ್ನಡ ಸಾಹಿತ್ಯಿಕ, ತತ್ತ್ವಜ್ಞ, ಮತ್ತು ಬಿಹಾರದ ...ದ್ಯದ ರಾಜ್ಯಪಾಲರಾದ ನಾಮದಾರ ರಂಗನಾಥ ...ವಾಕರರು ಅವರಿಗೆ ಬರೆದ ಪತ್ರವನ್ನು ತೋರಿಸಿದರು. ...ೀ ದಿವಾಕರರು ಈ ಪತ್ರದಲ್ಲಿ ಹೇಳುವರು " ತಮ್ಮ ...ಹಾಗ್ರಂಥವು ಕೈಸೇರಿತು. ಪ್ರಯತ್ನವು ಅತ್ಯಂತ ...ತ್ಯವಾಗಿದೆ, ಇಷ್ಟು ಶ್ರಮಮಾಡಿ, ಕನ್ನಡ ಭಾಷೆಯಲ್ಲಿ ... ಮಹತ್ವದ ವಿಷಯದ ಮೇಲೆ ವಿದ್ವತ್ ಪ್ರಚುರವಾದ ...ಂಥ ಬರೆದುದಕ್ಕೆ ಹೃತ್ಪೂರ್ವಕವಾಗಿ ಅಭಿನಂದಿ ...ವೆ. ಸರ್ವ ಕನ್ನಡಿಗರಿಗೆ ಇದರ ಬಗ್ಗೆ ಅಭಿಮಾನ ...ಸಿಸಲಿಕ್ಕೆ ಬೇಕು ಮತ್ತು ಅವರು ತಮಗೆ ಎಲ್ಲ ...ೀತಿಯಿಂದ ಪ್ರೋತ್ಸಾಹಿಸಬೇಕು. "

ಈ ರೀತಿ ಗ್ರಂಥಗಳನ್ನು ಬರೆಯುವ ಗೃಹಸ್ಥರೆಂದರೆ ...ಪ್ರಸಿದ್ಧ ಕನ್ನಡ ಸಾಹಿತ್ಯಿಕ, ಟೀಕಾಕಾರ, ಲಘುಕಥಾ ...ೇಖಕ ಮತ್ತು ಕಾದಂಬರಿಕಾರ ಶ್ರೀ ಮಿರ್ಜಿ ಅಣ್ಣಾ ...ರಾಯರು. ತಮ್ಮ ಮಾಹಿತಿಯನ್ನು ಹೇಳುವಾಗ ಅಣ್ಣಾ ...ರಾಯರೆಂದರು ' ನನ್ನ ಮನೆತನವು ಮೊದಲು ಮಿರ್ಜಿ ...ಯದು. ಮಿರಜಿಯಲ್ಲಿ ನನ್ನದೊಂದು ಚಿಕ್ಕ ಮನೆಯಿದೆ. ...ನೂರು ವರುಷಗಳ ಮೊದಲು ನಮ್ಮ ಅಜ್ಜ, ಶ್ರೀ ...ಣ್ಣಪ್ಪ ಮಿರಜಿ ಇವರು ಮಿರಜಿಯಿಂದ ಹತ್ತು ...ನ್ನೆರಡು ಮೈಲಿನ ಮೇಲಿರುವ ಶೇಡಬಾಳದಲ್ಲಿ ನಿಲ್ಲ ...ಕ್ಕೆ ಹೋದರು. ತಂದೆತಾಯಿಂದಿರು ಅಕ್ಷರಕಲಿತವರಲ್ಲ'

...ಮನೆಯ ಆರ್ಥಿಕ ಪರಿಸ್ಥಿತಿಯು ಪ್ರತಿಕೂಲವಿದ್ದರೂ ...ಹ ಸರ್ವ ಕಷ್ಟಗಳಿಗೆ ಮುಖ ಕೊಟ್ಟು, ಮಿರಜಿ ಅಣ್ಣಾ ರಾಯರು ಎರಡನೆಯ ವರ್ಷದ ಟ್ರೇಂಡ ಶಿಕ್ಷಕರಾದರು. ಪ್ರಾಥಮಿಕ ಶಾಲೆಯಲ್ಲಿ ಅವರು ಕಲಿಯುತ್ತಿದ್ದಾಗಿನಿಂದಲೂ ಕವಿತೆ, ಕಥೆ ಮೊದಲಾದವುಗಳನ್ನು ಬರೆಯುತ್ತಿದ್ದರು. ಟ್ರೇನಿಂಗ ಕಾಲೇಜಕ್ಕೆ ಹೋಗುವ ಮೊದಲು ಅವರು ಕೆಲವು ಕಾದಂಬರಿಗಳನ್ನು ಪ್ರಸಿದ್ಧಿಸಿದರು. " ಜಯಂತಿ " ' ಜಯಕರ್ನಾಟಕ ' " ಜೀವನ " ಈ ಪತ್ರಿಕೆಗಳಲ್ಲಿ ವಿವಿಧ ವಿಷಯಗಳ ಮೇಲೆ ಲೇಖನ ಬರೆಯುತ್ತಿದ್ದರು. ವಯಸ್ಸಿನ ಕೇವಲ ಮೂತ್ತನಾಲ್ಕು ವರ್ಷಗಳಲ್ಲಿ–ಇಷ್ಟು ಸ್ವಲ್ಪ ಅವಧಿಯಲ್ಲಯೇ–' ಜೈನ ಧರ್ಮ,' 'ನಿಸರ್ಗ,' 'ರಾಷ್ಟ್ರಪುರುಷ' ' ಅಶೋಕ ಚಕ್ರ' 'ಪ್ರತಿಸರಕಾರ' 'ರಾಮಣ್ಣ ಮಾಸ್ತರ' 'ಭಸ್ಮಾಸುರ.' "ಲೇಖನ ಕಲೆ" 'ಜತ್ತವಾಣಿ' 'ಮೂಲಶಿಕ್ಷಣದ ಮೌಲ್ಯಮಾಪಣ' ಭರತೇಶನ ನಾಲ್ಕು ಚಿತ್ರಗಳು' ಇವೇ ಮೊದಲಾದ ಹದಿನೈದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆದರಿಂದ ಅವರು ನವಜಾಗೃತ ಕರ್ನಾಟಕದ ಅತ್ಯಂತ ಅಭಿಮಾನದ ಮತ್ತು ಪ್ರಿಯ ಲೇಖಕರಾಗಿದ್ದಾರೆ.

" ನಿಸರ್ಗ " ಎಂಬ ಇವರ ಕಾದಂಬರಿಗೆ ಐದುನೂರು ರೂಪಾಯಿಗಳ ಬಹುಮಾನ ಸಿಕ್ಕಿತು. ೧೯೪೬ನೆಯ ವರ್ಷದ ಕನ್ನಡ ಸಾಹಿತ್ಯದಲ್ಲಿ ಅದು ಸರ್ವೋತ್ಕೃಷ್ಟ ಕಾದಂಬರಿ ಎನಿಸಿದೆ. ಮೈಸೂರ ಸರಕಾರದ ದೇವರಾಜ ಬಹುಮಾನ ಇದಕ್ಕೆ ದೊರೆತಿದೆ. ಧಾರವಾಡದ ವಿದ್ಯಾವರ್ಧಕ ಸಂಘವು ಇವರನ್ನು ವಿಶೇಷವಾಗಿ ಸತ್ಕರಿಸಿತು. 'ನಿಸರ್ಗ' ಈ ಕಾದಂಬರಿಯನ್ನು ಬಿ. ಎ. ಗೆ ಪಠ್ಯವೆಂದು ಹಚ್ಚಲಾಗಿತ್ತು. ಇದರಂತೆ ಪ್ರೊಫೆಸರ ನಾ. ಸಿ. ಫಡಕೆಯವರ "ಪ್ರತಿಭಾಸಾಧನ"ದ ಮಾದರಿಯಲ್ಲಿ ಇವರ " ಲೇಖನ ಕಲೆ " ಎಂಬ ಗ್ರಂಥವಿದೆ.

ಈ ರೀತಿಯ ವಿವಿಧ ಮತ್ತು ಮೌಲಿಕ ಗ್ರಂಥ ರಚಿಸುವದಕ್ಕಾಗಿ ಶ್ರೀ ಅಣ್ಣಾರಾಯರು ಸತತ ಕನ್ನಡ, ಹಿಂದೀ. ಮರಾಠಿ, ಸಂಸ್ಕೃತ, ಪ್ರಾಕೃತ ಗ್ರಂಥಗಳ ವ್ಯಾಸಂಗ ಮಾಡುತ್ತಾರೆ. ಅವರಲ್ಲಿ ಗ್ರಂಥ ಸಂಗ್ರಹವು ವಿವಿಧ ಹಾಗೂ ವಿಪುಲವಾಗಿದೆ. "ನಾನು ಒಳ್ಳೇ ಲೇಖಕನಾದೇನು ಎಂಬ ಅಪೇಕ್ಷೆಯಿಂದ ವಿಖ್ಯಾತ ಕನ್ನಡ ಸಾಹಿತ್ಯಿಕ ಪ್ರಿನ್ಸಿಪಾಲ ವಿನಾಯಕರಾವ ಗೋಕಾಕ, ಮತ್ತು ಪ್ರೊ. ರಂಗನಾಥ ಮುಗಳಿ ಇವರು ನನಗೆ ಮಾಡಿದ ಮಾರ್ಗದರ್ಶನವನ್ನು ನಾನೆಂದೂ ಮರೆಯ

ಲಾರೆ. ಧ್ಯೇಯ ದೃಷ್ಟಿ ಮತ್ತು ಲೇಖನಕಲೆಯ ತಂತ್ರಗಳನ್ನು ಅವರು ನನಗೆ ಕೊಟ್ಟರು.'' ಎಂದು ಮಿರ್ಜಿಯವರು ಹೇಳಿದರು.

ಶ್ರೀಯುತ ಅಣ್ಣಾರಾಯ ದಕ್ಷಿಣ ಹಿಂದುಸ್ತಾನದ ಪ್ರವಾಸವನ್ನೆಲ್ಲ ಮಾಡಿದ್ದಾರೆ. ಮತ್ತು ಉತ್ತರದಲ್ಲಿ ಕವಿವರ್ಯ ಟಾಗೋರರ ಶಾಂತಿನಿಕೇತನ, ಪಂಡಿತ ಮಾಲವೀಯವರ ಬನಾರಸ ಹಿಂದು ವಿದ್ಯಾಪೀಠಗಳನ್ನು ನೋಡಿದ್ದಾರೆ. ಅಲ್ಲದೆ ಕಲಕತ್ತಾ, ಆಗ್ರಾ, ದಿಲ್ಲಿ ಮೊದಲಾದ ಕಡೆಗೆ ಹೋಗಿ ಬಂದವರಿದ್ದಾರೆ.

ಶ್ರೀ ಮಿರ್ಜಿಯವರು ವೃತ್ತಿಯಿಂದ ರಾಷ್ಟ್ರೀಯ ಹಾಗೂ ಅಜಾತಿಯರಿದ್ದಾರೆ. ಸ್ವತಂತ್ರ ಭಾರತದ ಚಳವಳಿಯಲ್ಲಿ ಇವರು ಅಪ್ರತ್ಯಕ್ಷ ರೀತಿಯಿಂದ ಬಹಳಷ್ಟು ಭಾಗ ತಕ್ಕೊಂಡಿದ್ದಾರೆ. ಕರ್ನಾಟಕದ ನೇತೃಗಳಾದ ಶ್ರೀ ರಂಗರಾವ ದಿವಾಕರರ ಆದೇಶದಂತೆ ಶ್ರೀ ಮಿರಜಿಯವರು ಮೊಡನಾಳ ಎಂಬ ಹಳ್ಳಿಯಲ್ಲಿ ೧೯೪೨ ರ ಚಳುವಳಿಯಲ್ಲಿ ''ಬುಲೆಟಿನ್'' ಮುದ್ರಿಸಿಕೊಳ್ಳುವ ಕೆಲಸ ಮಾಡುತ್ತಿದ್ದರು.

''ಜೈನಧರ್ಮ'' ಇದೀಗ ಪ್ರಕಟವಾದ ಅವರ ಗ್ರಂಥಕ್ಕೆ ಕರ್ನಾಟಕ ವಿದ್ಯಾಪೀಠದವರು ೨೫೦ ರೂಪಾಯಿಗಳ ಪಾರಿತೋಷಕ ಕೊಟ್ಟಿದ್ದಾರೆ. ಮೈಸೂರಿನ ದೇವರಾಜ ಬಹುಮಾನವೆಂದು ೩೦೦ ರೂ. ದೊರೆತಿದೆ. ಈ ಗ್ರಂಥದಲ್ಲಿ ಇವರು ವೈದಿಕ, ಲಿಂಗಾಯತ, ಕ್ರಿಸ್ತ, ಇಸ್ಲಾಂ ಮೊದಲಾದ ಧರ್ಮಗಳ ತುಲನಾತ್ಮಕ ವಿವೇಚನೆ ಮಾಡಿದ್ದಾರೆ. ಈ ಗ್ರಂಥದ ಬಗ್ಗೆ ಡಾ. ಎ. ಎನ್. ಉಪಾಧ್ಯೇಯವರು ಹೀಗೆ ಬರೆಯುವರು ''ಈ ಮಾದರಿಯ ಕೆಲವು ಗ್ರಂಥಗಳು ಜರ್ಮನ, ಫ್ರೆಂಚ, ಇಂಗ್ಲೀಷ ಮತ್ತು ಹಿಂದೀ ಭಾಷೆಗಳಲ್ಲಿ ಗ್ಲಾಸನಾಫ್, ಗಿರನಾ, ಜೈನಿ ಮತ್ತು ಕೈಲಾಸಚಂದ್ರ ಶಾಸ್ತ್ರಿಗಳು ಬರೆದದ್ದು ಇವೆ. ಈ ದೃಷ್ಟಿಯಿಂದ ವಿಚಾರ ಮಾಡಲಾಗಿ ಶ್ರೀ ಮಿರಜಿಯವರ ''ಜೈನಧರ್ಮ'' ಈ ಗ್ರಂಥವು ಕನ್ನಡ ಭಾಷೆಯಲ್ಲಿ ಮೊದಲನೆಯದಾಗಿದೆ. ಅದು ಕನ್ನಡ ಸಾಹಿತ್ಯದಲ್ಲಿ ಅಭಿಮಾನದ ಸ್ಥಾನವನ್ನು ಪಡೆಯುವುದು. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ. ಈ ಗ್ರಂಥದ ವಿಷಯ ವ್ಯಾಪ್ತಿಯನ್ನು ನೆನೆದರೆ ಶ್ರೀ. ಮಿರ್ಜಿಯವರ ವಿವಿಧ ವಾಚನ, ದೀರ್ಘ ಪ್ರಯತ್ನ, ಯಾರಿಗೂ ಮೆಚ್ಚಿಸುವಂಥವಿವೆ. ಗ್ರಂಥದಲ್ಲಿ ಎಲ್ಲೆಡೆಗೂ ಪರಿಷ... ತುಲನಾತ್ಮಕ ವಿಚಾರ, ಮತ್ತು ಸಮನ್ವಯ ಬುದ್ಧಿ... ದೃಷ್ಟಿಗೆ ಬೀಳುವವು. ಈ ಗ್ರಂಥ ಪ್ರಕಾಶನದಿಂದ ... ಧರ್ಮದ ವಿಷಯಕ್ಕೆ ಒಂದು ಶ್ರೇಷ್ಠ ಗ್ರಂಥವು ಅಭ್... ಗಳಿಗೆ ಸಿಕ್ಕಂತಾಗಿದೆ. ಈ ಗ್ರಂಥದ ಸಹಾಯ... ಕನ್ನಡ ಪಂಡಿತರಿಗೆ ಹಳೆಯ ಹಾಗೂ ಹೊಸಗ... ಜೈನ ವಾಙ್ಮಯದ ಅರ್ಥ ತಿಳಿದುಕೊಳ್ಳಲಿಕ್ಕೆ ಸಹಾ... ವಾಗುವುದು.

ಮದ್ರಾಸ ಇಲಾಖೆಯಲ್ಲಿ 'ಧರ್ಮಸ್ಥಳ'ದಲ್ಲಿ ... ದಿನಗಳ ಹಿಂದೆ ಈ ವರ್ಷದ ಸರ್ವಧರ್ಮ ಪರಿಷ... ಸೇರಿತ್ತು. ಈ ಸಭೆಗೆ ಶ್ರೀ. ಅಣ್ಣಾರಾಯರನ್ನು ... ದ್ದರು. ಅಲ್ಲಿ 'ಜೈನಧರ್ಮ'ದ ವಿಷಯಕ್ಕೆ ... ಪ್ರವಚನವಾಯಿತು. ಸರ್ವಧರ್ಮ ಸಮನ್ವಯ ... ಪಾದಿಸುವ 'ಜೈನಧರ್ಮ'ದಂಥ ಗ್ರಂಥವನ್ನು ... ಬಗ್ಗೆ ಆ ಪರಿಷತ್ತಿನಲ್ಲಿ ಒಂದು ಬಂಗಾರದ ಉಂ... ಹಾಗೂ ಐದುನೂರು ರೂಪಾಯಿಗಳನ್ನು ಕೊಟ್ಟು ಅಣ್ಣಾರಾಯರನ್ನು ಸತ್ಕರಿಸಲಾಯಿತು.

ಜೈನಧರ್ಮದ ಬಗ್ಗೆ ಮಾತಾಡುತ್ತ ಅವರು ಅಂದ... ಇಂದಿನ ಜಗತ್ತಿನೊಳಗಿನ ಅಶಾಂತಿಯು ಮಾನ... ಪ್ರತಿನಿತ್ಯ ಬೆಳೆಯುತ್ತಿರುವ ಅವಶ್ಯಕತೆ ಹಾಗೂ ... ಭಿನ್ನ ವಿಚಾಸರಣಿ ಇವುಗಳಿಂದ ಉಂಟಾಗಿದೆ. ಅದಕ... ಪ್ರತಿಯೊಬ್ಬ ಮನುಷ್ಯನು ಅವಶ್ಯಕತೆಗಿಂತ ಹೆ... ವಸ್ತುಗಳ ಸಂಗ್ರಹ ಮಾಡಬಾರದು. ಇದಕ್ಕೆ ಜೈನ... ಭಾಷೆಯಲ್ಲಿ 'ಪರಿಗ್ರಹ ಪರಿಮಾಣ' ಎನ್ನುವ... ಇದರರ್ಥ ತನ್ನ ಅವಶ್ಯಕತೆಗಳನ್ನು ಶಕ್ಯವಿದ್ದಷ್ಟು ಕಡಿ... ಮಾಡಬೇಕು.

ಎಷ್ಟೋ ಭಿನ್ನ ವಿಚಾರ ಸರಣಿಗಳಿದ್ದರೂ ಸಹ ... ಯೊಂದು ವಿಚಾರದಲ್ಲಿಯೂ ಸ್ವಲ್ಪ ಭಾಗ ಸತ್ಯಾಂಶ... ವುದು. ಆ ಸತ್ಯಾಂಶವನ್ನು ಪ್ರತಿಯೊಬ್ಬರು ಗ... ದಲ್ಲಿಟ್ಟುಕೊಂಡು, ಜಗತ್ತಿನೊಳಗಿನ ನಿಜವಾದ ... ವನ್ನು ತಿಳಿಯಲಿಕ್ಕೆ ಯತ್ನಿಸಬೇಕು. ಈ ದೃಷ್ಟಿಕೋನ... ಸ್ಯಾದ್ವಾದ ದೃಷ್ಟಿ ಅಥವಾ ಅನೇಕಾಂತವಾದ ... ವರು. ಇಂದಿನ ಜಗತ್ತಿಗೆ ಜೈನಧರ್ಮದ ತತ್ತ್ವಜ್ಞ... ಚಾರಿತ್ರಗಳ ಅವಶ್ಯಕತೆಯು ಬಹಳವಾಗಿದೆ.

"ಭಸ್ಮಾಸುರ" ಈ ಕಾದಂಬರಿಯಲ್ಲಿ ೧೯೪೮ರ ಚಳವಳಿಯ ತರುವಾಯ ಪುಂಡರ ತಂಡವು ಹೇಗೆ ಬೆಳೆಯಿತು. ಮತ್ತು ೧೯೪೮ರಲ್ಲಿ ಮನೆಗಳನ್ನು ಸುಡುವ ಉದ್ಯೋಗ ಹೇಗೆ ಆಯಿತು ಇದರ ವಿವೇಚನೆಯನ್ನು ಶ್ರೀ ಅಣ್ಣಾರಾಯರು ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ಮಾಡಿದ್ದಾರೆ. 'ಜಾಳಪೋಳ' (ಸುಡುವಿಕೆ) ಮತ್ತು ಜಾತೀಯತೆಗಳ ಬಗ್ಗೆ ಅಣ್ಣಾರಾಯರು ಹೀಗೆನ್ನುವರು– 'ಗಾಂಧಿಯವರ ಕೊಲೆಯ ತರುವಾಯ ಕೆಲವು ಗುಂಡರಿಗೆ ಸಂಧಿಯು ಸಿಕ್ಕಿತು. ಸ್ವಾರ್ಥಕ್ಕಾಗಿ ಈ ಪ್ರಸಂಗದ ಉಪಯೋಗವನ್ನು ಅವರು ಮಾಡಿಕೊಂಡರು. ಸುಡುವುದಕ್ಕೆ ಹಾಗೂ ಸುಲಿಗೆಗಳಿಗೆ ಬಹು ಜನರ ಬೆಂಬಲ ಸಿಗಬೇಕೆಂದು ಅವರು ಬ್ರಾಹ್ಮಣ ದ್ವೇಷವನ್ನು ಹೊತ್ತಿಸಿದರು ಮತ್ತು ಅದನ್ನು ಉಪಯೋಗಿಸಿಕೊಂಡರು

ಹಳ್ಳಿಗಳಲ್ಲಿ, ಅಶಿಕ್ಷಿತರಲ್ಲಿ ಜಾತೀಯತೆ ಇಲ್ಲ. ಸುಶಿಕ್ಷಿತರಲ್ಲಿ ಮಾತ್ರ ಅದು ಬೆಳೆಯುತ್ತಿದೆ. ಸುಶಿಕ್ಷಿತರಲ್ಲಿ ಈಗೀಗ ಅತ್ಯಂತ ಸ್ವಾರ್ಥ ವೃತ್ತಿಯು ಸೇರಿಕೊಂಡಿದೆ. ಎಲ್ಲ ಧರ್ಮಗಳಲ್ಲಿಯ ಸುಶಿಕ್ಷಿತರು ತಮ್ಮ ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ಜಾತೀಯತೆಯನ್ನು ಹಬ್ಬಿಸಿ ತಮ್ಮ ಲಾಭವನ್ನು ಮಾಡಿಕೊಳ್ಳುತ್ತಾರೆ.

ಈ ಪ್ರಕಾರ ವಿವಿಧ ಕ್ಷೇತ್ರಗಳಲ್ಲಿ ಲೇಖನ ಕಾರ್ಯ ಮಾಡುತ್ತಿರುವ ಶ್ರೀ.ಮಿರಜಿ ಅಣ್ಣಾರಾಯರು ಹೊಟ್ಟೆಯ ಸಲುವಾಗಿ ಉಗಾರ ಬುದ್ರುಕದಲ್ಲಿ ಪ್ರಾಥಮಿಕ ಶಿಕ್ಷಕನ ಕಾರ್ಯ ಕೈಕೊಂಡಿದ್ದಾರೆ. ಇಷ್ಟು ವಿವಿಧ ರೀತಿಯಲ್ಲಿ ಬರಹ ಶಕ್ತಿಯುಳ್ಳ ವ್ಯಕ್ತಿಯ ಬುದ್ಧಿ ಮತ್ತು ಶಕ್ತಿ ಮತ್ತು ವೇಳೆಗಳನ್ನು ಹೆಚ್ಚು ಚೆನ್ನಾಗಿ ಉಪಯೋಗವಾಗುವಂತೆ ಯೋಜನೆಯಾಗಬೇಕೆಂಬ ಇಚ್ಛೆಯಿಂದ ನಾನು ಅವರಿಗೆ ಅಂದೆ.

"ನೀವು ಶಿಕ್ಷಕವೃತ್ತಿಯನ್ನು ಯಾಕೆ ಸ್ವೀಕರಿಸಿದ್ದೀರಿ? ನಿಮ್ಮ ಎಲ್ಲ ವೇಳೆಯನ್ನು ಲೇಖನ ಕಾರ್ಯದಲ್ಲಿಯೇ ಏಕೆ ಕಳೆಯುವದಿಲ್ಲ ?''

ಜೀಡವಾದ ಪ್ರಶ್ನೆಯನ್ನು ನಾನು ಅವರಿಗೆ ಕೇಳಿದಂತೆ ಆಯಿತು; ಇದು ಅವರ ಮುಖಚರ್ಯೆಯಿಂದ ತಿಳಿಯಿತು. ನೀವು ಕೇಳುತ್ತೀರೆಂದು ಹೇಳುತ್ತೇನೆ. "ನನಗೆ ಏಳು ಜನರನ್ನು ಸಂರಕ್ಷಿಸಬೇಕಾಗಿದೆ. ಹಿರಿಯರು ಸ್ವಂತ ಕಷ್ಟದಿಂದ ಸಂಪಾದಿಸಿದ ಭೂಮಿಯಿಂದ ನಮ್ಮ ಸಂಸಾರ ಸಾಗದು. ಅದರಿಂದ ಶಿಕ್ಷಕನಾಗಿದ್ದೇನೆ. ಈ ಶಿಕ್ಷಕ ವೃತ್ತಿಯಲ್ಲಿ ಸಂಬಳ ಹೆಚ್ಚಾಗಬೇಕೆಂದು ಶಾಲಾಂತ (ಮ್ಯಾಟ್ರಿಕ್) ಪರೀಕ್ಷೆಗೆ ಕುಳಿತಿರುವೆ. " *

"ಕಳೆದ ಹತ್ತು ವರ್ಷಗಳಲ್ಲಿ ನನ್ನ ಒಂದು ಲಕ್ಷ ರೂಪಾಯಿ ಬೆಲೆಯ ಗ್ರಂಥಗಳು ಮಾರಾಟವಾಗಿವೆ. ಅದರಲ್ಲಿ ಹತ್ತುಸಾವಿರ ರೂಪಾಯಿಗಳ ಲಾಭವಾಗಿದೆ. ಆದರೆ ನಾನದನ್ನು ಕುಟುಂಬದ ವೆಚ್ಚಕ್ಕಾಗಿ ಉಪಯೋಗಿಸಬಾರದೆಂದು ನಿಶ್ಚಯಿಸಿರುವೆ. ಶೇಡಬಾಳದಂಥ ಹಳ್ಳಿಯಲ್ಲಿ 'ಶಾಂತಿ ಸೇವಾಸದನ' ಎಂಬ ಗ್ರಂಥ ಪ್ರಕಾಶನ ಸಂಸ್ಥೆಯನ್ನು ಆರಂಭಿಸುವೆ. ಅದಕ್ಕೆ ಇದರ ಲಾಭವನ್ನು ಉಪಯೋಗಿಸುವೆ. ಈ ಸಂಸ್ಥೆಯು ಸಲಹೆಗಾರ ಮಂಡಲದಲ್ಲಿ ಪ್ರಾ. ಮುಗಳಿ, ಪ್ರೊ. ಮಾಳವಾಡ, ಕವಿಭೂಷಣ ಶ್ರೀ. ಬೆಟಗೇರಿ ಕೃಷ್ಣಶರ್ಮರು, ಶ್ರೀ. ಕೆ. ಎಫ್. ಪಾಟೀಲರಂಥವರು ನಮಗೆ ದೊರೆಯುತ್ತಿದ್ದಾರೆ. ಇಲ್ಲಿಯ ವರೆಗೆ ಈ ಸಂಸ್ಥೆಯಿಂದ ಹನ್ನೊಂದು ಗ್ರಂಥಗಳು ಪ್ರಕಟವಾಗಿವೆ. "

ತಾವು ಶಿಕ್ಷಕ ನೌಕರಿಯನ್ನು ಯಾಕೆ ಬಿಡುವದಿಲ್ಲ? ಇದನ್ನು ಹೆಚ್ಚಿಗೆ ಸ್ಪಷ್ಟಪಡಿಸುತ್ತ ಅಣ್ಣಾರಾಯರು ಮಂಡಿಸಿದ ವಿಚಾರಗಳು ಹೆಚ್ಚು ವಿಚಾರಣೀಯವಾಗಿವೆ. ಅವರು ಹೇಳಿದರು: "ಹೊಟ್ಟೆ ಮತ್ತು ಲೇಖನ ವ್ಯವಸಾಯಗಳನ್ನು ಜೊತೆಗೂಡಿಸಿದರೆ ದುಡ್ಡಿಗಾಗಿ ನಿತ್ಯ ಇಂತಿಷ್ಟು ಲೇಖನ ಬರೆಯಬೇಕೆಂದಾಗುವುದು ಮತ್ತು ಅವುಗಳನ್ನು ಪ್ರಕಟಿಸಲೇಬೇಕೆಂದು ಸಂಸಾರದ ಅಗತ್ಯದಿಂದ ಎನಿಸುವುದು. ಆದರಿಂದ ಲೇಖನದ ಮೌಲಿಕತೆಯು ಕಡಿಮೆಯಾಗುತ್ತದೆ. ಅದರಲ್ಲಿ ಔದ್ಯೋಗಿಕತೆಯು ಸಮಾವೇಶವಾಗುತ್ತದೆ. ಮೌಲಿಕತೆ ಮತ್ತು ವೈಶಿಷ್ಟ್ಯಗಳು ನಷ್ಟವಾಗುತ್ತವೆ. ಪಾತ್ರಗಳ ಹೆಸರನ್ನು ಬದಲಿಸುವುದು, ಸಂವಿಧಾನ ಸ್ವಲ್ಪ ಬದಲಿಸುವುದು, ಕಾದಂಬರಿಯ ಹೆಸರನ್ನು ಬೇರೆ ಇಟ್ಟು, ಹೊಸ ಹೆಸರಿನಲ್ಲಿ ಹಳೆಯ ಕಾದಂಬರಿಯ ಹೆಸರನ್ನು ಬೇರೆ ಇಟ್ಟು, ಹೊಸ ಹೆಸರಿನಲ್ಲಿ ಹಳೆಯ ಕಾದಂಬರಿಯನ್ನು ಜನತೆಗೆ

* ಈ ಪೋರಪಡೆ ಅವರ ಜೊತೆಗೆ ಅಣ್ಣಾರಾಯರ ಭೆಟ್ಟಿಯಾದಾಗ ಅಣ್ಣಾರಾಯರು ಮ್ಯಾಟ್ರಿಕ್ ಪರೀಕ್ಷೆ ಕುಳಿತಿದ್ದರು. (೧೯೫೩ ಮಾರ್ಚ) ಈಗ ಪಾಸ್ ಆಗಿದ್ದಾರೆ. —ಸಂ.

ಕೊಡಬೇಕಾಗುವುದು. ಹೀಗೆ ಇಂದು ವ್ಯವಸಾಯದ ದೃಷ್ಟಿಯಿಂದ ನಡೆಯುತ್ತಿದೆ, ಹೀಗೆಂದು ನನಗೆ ತೋರುತ್ತಿದೆ. ನನ್ನ ಮತದಿಂದ ಲೇಖನದ ಪುಟಗಳು ಹೆಚ್ಚಾಗುವದಕ್ಕಿಂತ, ಹೊಸ ವಿಚಾರಗಳನ್ನು ಹೇಳುವ ಪ್ರಸಂಗ ಬಂದಾಗ-ಪ್ರೇರಣೆಯಾದಗಲೇ–ಬರೆಯಬೇಕು. ಲೇಖನ ಕಡಿಮೆಯಾದರೂ ಅಡ್ಡಿಯಿಲ್ಲ."

ಕೇವಲ ಮೂವತ್ತು ವರುಷದ ಶ್ರೀ. ಅಣ್ಣಾರಾಯರ ಈ ವಿಚಾರ ಮತ್ತು ಅವರ ಕಾರ್ಯ ನೋಡಿ, ಅವರ ವಿಷಯಕ್ಕಿರುವ ನನ್ನ ಆದರವು ನೂರರಷ್ಟು ಬೆಳೆಯಿತು.

ಇವರಂಥ ಹಿರಿಯ ಲೇಖಕರಿಗೆ ತಿಂಗಳಿಗೆ ಹತ್ತು ರೂಪಾಯಿ ಸಂಬಳ ಹೆಚ್ಚಾಗಲೆಂದು ಪರೀಕ್ಷೆಗೆ ಕೂಡು ಪ್ರಸಂಗ ಬರಬೇಕು ! ಇದರ ಬಗ್ಗೆ ಸಂತಾಪ ಉತ್ಪ ವಾಯಿತು ! ಶಾಸನ ಸಂಸ್ಥೆ ಹಾಗೂ ಸಮಾಜಗ ಇಂಥ ವ್ಯಕ್ತಿಗಳ ಬಗ್ಗೆ ವಿಚಾರಮಾಡಬಾರದೆ ?–ಎಂ ಮನದಲ್ಲಿ ವಿಚಾರಿಸುತ್ತಲೇ ನಾನು ಶ್ರೀ. ಅಣ್ಣಾರಾಂ ರನ್ನು ಬೀಳ್ಕೊಂಡೆ ಶ್ರೀ. ಮಿರಜಿಯವರಂಥ ಶಕ್ತಿಯು ಜನರ ಉಪಯೋಗವು ಇಂದು ದೇಶದಲ್ಲಿ ಆಗದಂ ಗಿದೆ. ಸ್ವತಂತ್ರ ಭಾರತದಲ್ಲಿಯ ಇಂಥ ಕಾರ್ಯಕು ನಾಗರಿಗರ ಬುದ್ಧಿಯನ್ನು ವ್ಯರ್ಥ ಕಳೆಯುವುದೇ ಎಂಬುದೇ ಇಂದಿನ ಪ್ರಶ್ನೆಯಾಗಿದೆ.

ಮುಂದಿನ ಸಂಚಿಕೆಯಲ್ಲಿ

ಶ್ರೀ. ಸಿಂಪಿ ಲಿಂಗಣ್ಣನವರ ಚರಿತ್ರ ಬರಲಿದೆ.

ಪುಟ ೨೮೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು : **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆದರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಕೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಬುದ್ಧಿಮಾಪನ ಪರೀಕ್ಷೆಗಳು

ಲೇಖಕರು : ಶ್ರೀ. ಎಸ್. ಎಂ. ಹಳ್ಳಿಕೇರಿ, ಬಿ. ಎ., ಡಿ. ಬಿ. ಇ.,
ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

[ಇಂಗ್ಲಂಡದಲ್ಲಿಯ ಔದ್ಯೋಗಿಕ ಹಾಗೂ ವಾಣಿಜ್ಯ ಸಂಸ್ಥೆಗಳು ತಮ್ಮ ಆಯ್ಕೆ ಹಾಗು ಬಢತಿಯ ವಿಧಾನಗಳ ಅಂಗವಾಗಿ ಬುದ್ಧಿಮಾಪನ ಪರೀಕ್ಷೆ ಹಾಗು ವಿಶೇಷ ಒಲವುಗಳ ಪರೀಕ್ಷೆಗಳನ್ನು ಹೆಚ್ಚಿಚ್ಚಾಗಿ ಬಳಸುತ್ತಿರುವವು. ನಾಗರಿಕ ಸೇವಾ ಹುದ್ದೆಗಳಿಗೆ ಮೂಲಭೂತ ಶಕ್ತಿಗಳ ಪರೀಕ್ಷೆಗಳನ್ನು ತೆಗೆದುಕೊಳ್ಳುವದುಂಟು. ರಾಷ್ಟ್ರೀಯ ಮಾನಸಶಾಸ್ತ್ರದ ಔದ್ಯೋಗಿಕ ಸಂಸ್ಥೆಯವರು ಬುದ್ಧಿ ಹಾಗು ವಿಶೇಷ ಒಲವುಗಳ ಪರೀಕ್ಷೆಗಳನ್ನು ಕಂಡು ಹಿಡಿದಿದ್ದಾರೆ. ಇಂಜಿನಿಯರಿಂಗ ಉಮೇದವಾರರ ಆಯ್ಕೆಯಲ್ಲಿ ಇಂಥ ಪರೀಕ್ಷೆಗಳನ್ನು ತೆಗೆದುಕೊಳ್ಳಲಾಗುವದು. ತಮ್ಮ ಜೀವನೋಪಾಯವನ್ನು ದೊರಕಿಸುವ ಅನೇಕ ಯುವಕರಿಗೆ ಔದ್ಯೋಗಿಕ ಸಲಹೆಯನ್ನು ಕೊಡುವದಕ್ಕೋಸ್ಕರ ಈ ಸಂಸ್ಥೆಯು ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿದೆ.] .

ಬುದ್ಧಿಮಾಪನ ಪರೀಕ್ಷೆಯು ಮೊದಲನೆಯ ಸಲ ೧೯೦೪ ನೆಯ ಇಸ್ವಿಯಲ್ಲಿ ಪ್ಯಾರಿಸ ನಗರದಲ್ಲಿ ನಡೆಯಿತು ಪ್ರತಿ ವರ್ಷ ಕೆಳಮಟ್ಟದ ಬುದ್ಧಿಯ ವಿದ್ಯಾರ್ಥಿಗಳು ಶಾಲೆಗಳಿಗೆ ಬರುತ್ತಿರುವದು ಶಿಕ್ಷಣಾಧಿಕಾರಿಗಳಿಗೆ ಒಂದು ದೊಡ್ಡ ಸಮಸ್ಯೆಯಾಯಿತು. ಯಾಕಂದರೆ ಇಂಥ ಹುಡುಗರು ವರ್ಗದ ಬೇರೆ ವಿದ್ಯಾರ್ಥಿಗಳ ಪ್ರಗತಿಯ ಮಟ್ಟಕ್ಕೆ ನಿಲುಕದಾದರು ಹಾಗು ಇವರನ್ನು ಬೇರ್ಪಡಿಸಲು ಕೆಲವು ವೇಳೆ ತಗಲಿತಲ್ಲದೆ, ಶಿಕ್ಷಕರ ಶ್ರಮ ಹಾಗು ವೇಳೆಗಳ ಅಪವ್ಯಯವೂ ಆಯಿತು. ಈ ಸಮಸ್ಯೆಯ ಪರಿಹಾರಕ್ಕಾಗಿ ನಿಯಮಿತವಾದ ಸಮಿತಿಯು ಶ್ರೇಷ್ಠ ಮನೋವಿಜ್ಞಾನಿ ಎಂದೂ ಹಾಗು ಮಕ್ಕಳ ಬುದ್ಧಿಪರೀಕ್ಷೆಯಲ್ಲಿ ಹೆಸರು ಗಳಿಸಿದ ಮನೋವಿಜ್ಞಾನ ಪ್ರಯೋಗಾಲಯದ ಡೈರೆಕ್ಟರರಾದ ಆಲ್ಫ್ರೇಡ್ ಬೀನೇ ಅವರನ್ನು ವಿಚಾರಿಸಿತು.

ಆಲ್ಫ್ರೆಡ್ ಬೀನೇ ಅವರು ಬಹಳೇ ಆಶಾವಾದಿಗಳು. ಆರು ವರ್ಷದ ಸಾಮಾನ್ಯ ಬಾಲಕನು ಬಿಡಿಸುವ ಕೆಲವು ಸಂಗತಿಗಳಿದ್ದರೆ, ನಾಲ್ಕು ವರ್ಷದವನು ಬಿಡಿಸುವ ಬೇರೆ ಕೆಲವು ಸಂಗತಿಗಳುಂಟು. ಮೂರು, ನಾಲ್ಕು, ಐದು ವರ್ಷಗಳ ವಯೋಮಾನದ ಮಗು ಬಿಡಿಸಬಲ್ಲ ಸಂಗತಿಗಳನ್ನು ಆರುವರ್ಷ ವಯೋಮಾನವುಳ್ಳ ಕುಂಠಿತ ಶಕ್ತಿಯ ಮಗು ಬಿಡಿಸಲಾರನೆಂಬುದು ನಮ್ಮ ಅನುಭವದ ಮಾತಾಗಿದೆ. ಪ್ರತಿಯೊಂದು ವಯೋಮಾನದ ಸಾಮಾನ್ಯ ಮಗುವಿನ ಪ್ರಮಾಣವನ್ನು ನಿರ್ಧರಿಸಿದಲ್ಲಿ, ಯಾವದೊಂದು ಮಗುವಿನ ವೈಯಕ್ತಿಕ ಯೋಗ್ಯತೆಯನ್ನು ಕಂಡುಹಿಡಿಯಲು ಅನುಕೂಲವಾಗುವದು.

ತಮ್ಮ ಸಹೋದ್ಯೋಗಿಯಾದ ಪ್ಯಾರಿಸದ ವೈದ್ಯ ಸೈಮನ್‌ರೊಂದಿಗೆ ಬೀನೇ ಅವರು ಪ್ರಾಥಮಿಕ ಶಾಲೆಗಳಿಗೆ ಹೋಗಿ ಮಕ್ಕಳನ್ನು ಪರೀಕ್ಷಿಸಿದರು. ಮಕ್ಕಳು ಓದುವರೋ? ಒಂದೆರಡು ಪರಿಚ್ಛೇದಗಳನ್ನು ಓದಬಲ್ಲರೋ? ಅವರು ಎಲ್ಲಿಯ ವರೆಗೆ ಎಣಿಕೆ ಮಾಡುವರು? ಮಗು ಚೌರಸವನ್ನು ತೆಗೆಯಬಲ್ಲದೋ? ಮಕ್ಕಳು ಕವನಗಳನ್ನು ಬಲ್ಲರೋ? ಸಂದರ್ಶಕರು ಅವರ ಕವನಗಳನ್ನು ಕೇಳಿ ನಲಿದಾಡಬಹುದೇ? ಇವೇ ಮೊದಲಾದವುಗಳ ಬಗ್ಗೆ ಮಕ್ಕಳ ಪರೀಕ್ಷಣ ಮಾಡಿದರು.

ಮಕ್ಕಳಿಂದ ದೊರೆತ ಎಲ್ಲ ಉತ್ತರಗಳನ್ನು ಒಳ್ಳೇ ಕಾಳಜಿಪೂರ್ವಕವಾಗಿ ವಿಂಗಡಿಸಿ ವರ್ಗೀಕರಿಸಲಾಯಿತು–ಅಲ್ಲದೆ ಪರೀಕ್ಷಾ ಪ್ರಶ್ನೆ ಮಾಲಿಕೆಯನ್ನು ಸಿದ್ಧಗೊಳಿಸಲಾಯಿತು. ಶಾಲೆಗೆ ಹೊಸದಾಗಿ ಬರುವ ಎಲ್ಲ ಮಕ್ಕಳನ್ನು ಪರೀಕ್ಷಿಸುವದು ಈ ಮಾಲಿಕೆಯ ನಿರ್ಮಾಣದ ಉದ್ದೇಶ್ಯವಾಗಿತ್ತು. ಸ್ವಲ್ಪೇ ಕಾಲದಲ್ಲಿ ಈ ಪರೀಕ್ಷಾ ಪ್ರಶ್ನೆಗಳ ಯಶಸ್ಸು ಗೋಚರವಾಗದಿರಲಿಲ್ಲ.

ಹೀಗೆ ವಿಶ್ವದಲ್ಲಿ ಹೊಸದೊಂದು ಕ್ರಾಂತಿಕಾರಕ

ವಿಚಾರವು ಪ್ರಾರಂಭವಾಯಿತು. ಎಲ್ಲ ಜನರ ಮೂಲ ಜ್ಞಾನವು ಒಂದೇ ತೆರನಾಗಿ ಇರುವದಿಲ್ಲ ಹಾಗು ಈ ಅಂತರವು ಜೀವನಾಂತ್ಯದ ವರೆಗೂ ಸಾಗುವದು. ತಮ್ಮ ಮಾನಸಿಕ–ಯೋಗ್ಯತೆಗೆ ಮೀರಿದ ಕಾರ್ಯಗಳನ್ನು ಮಾಡಲು ಯಾರಿಗೂ ಹೇಳದಿರುವದು ಸಾಧ್ಯವಾದುದು. ಮೇಲ್ತರಗತಿಯ ಬುದ್ಧಿಯುಳ್ಳವರ ದೇವದತ್ತ ದೇಣಿಗೆಗಳನ್ನು ಸಮಾಜದ ಉನ್ನತಿಗಾಗಿ ಸಮಗ್ರವಾಗಿ ಉಪಯೋಗಿಸುವದು ಅಷ್ಟೇ ಮಹತ್ವವಾದುದು.

ಕಾಲಾನುಕ್ರಮದಿಂದ 'ಬೀನೇ' ಪ್ರಶ್ನೆಗಳು ಪುನರ್ವಿಮರ್ಶಿತವಾದುವಲ್ಲದೆ, ಬೇರೆ ದೇಶಗಳ ಪರಿಸ್ಥಿತಿ ಹಾಗು ಅವಶ್ಯಕತೆಗಳಂತೆ ಹೊಸ ಪರೀಕ್ಷೆ ಪ್ರಶ್ನೆಮಾಲಿಕೆಗಳು ಮುಂಬಂದವು.

ಬುದ್ಧಿಮಾನ ಪರೀಕ್ಷೆಗಳು ನಿಜವಾಗಿಯೂ ಬುದ್ಧಿಯನ್ನು ಅಳೆಯುವವೇ? ಪಂಡಿತರು ಅಂತ್ಯವಿಲ್ಲದೆ ವಾದಿಸುವ 'ಬುದ್ಧಿ'ಯ ಅರ್ಥದ ಮೇಲೆ ಈ ಪ್ರಶ್ನೆಯ ಉತ್ತರವಿದೆ. ಆದಾಗ್ಯೂ ಬುದ್ಧಿಮಾನದ ಪ್ರಶ್ನೆಗಳಲ್ಲಿ ಪಡೆದ ಯಶಸ್ಸು ಹಾಗು ಬುದ್ಧಿಶಕ್ತಿಯ ಮೇಲೆ ಅವಲಂಬಿತವಾದ ಭಾವೀ ಉದ್ಯೋಗಗಳಲ್ಲಿಯ ಯಶಸ್ಸು ಇವುಗಳಲ್ಲಿ ಪರಸ್ಪರ ಸಂಬಂಧವಿದೆ. ಸ್ಮರಣಶಕ್ತಿ,, ಶಬ್ದಸಂಗ್ರಹ, ತರ್ಕಶಕ್ತಿ ಹಾಗು ಗಣಿತದಲ್ಲಿಯ ಯೋಗ್ಯತೆ ಇವೆಲ್ಲವುಗಳನ್ನು ಈ ಪರೀಕ್ಷೆಗಳಿಂದ ಕಂಡುಹಿಡಿಯುತ್ತೇವೆ.

ಬುದ್ಧಿಮಾನವನ್ನು ಹೇಗೆ ನಿರ್ಧರಿಸಬೇಕು ? ದೈಹಿಕ ವಯಸ್ಸು ಹಾಗು ಮಾನಸಿಕ ವಯಸ್ಸು ಇವುಗಳ ಪರಿಮಾಣವೇ ಬುದ್ಧಿಮಾನವು. ೧೨ ವರ್ಷದ ಸಾಮಾನ್ಯ ಬಾಲಕನು ಉತ್ತರಿಸುವ ಪ್ರಶ್ನೆಗಳನ್ನು ೮ ವರ್ಷದ ಬಾಲಕನು ಉತ್ತರಿಸುವಲ್ಲಿ, ಇಂಥ ಹುಡುಗನ ಮಾನಸಿಕ ವಯಸ್ಸು ಆತನ ದೈಹಿಕ ವಯಸ್ಸಿಗಿಂತ ಶೇಕಡಾ ೫೦ ರಂತೆ ಹೆಚ್ಚಾಯಿತು. ಅಂದರೆ, ಆತನ ಬುದ್ಧಿಮಾನವು ೧೫೦ ಎಂದು ತಿಳಿಯಬೇಕು.

ಕಾಲಾನುಕ್ರಮದಿಂದ ಬುದ್ಧಿಯಲ್ಲಿ ಬದಲಾವಣೆಯಾಗುವದೇ ? ಬುದ್ಧಿಯು ಬಹಳವಾಗಿ ಬದಲವಾಗದೆಂದು ತಜ್ಞರ ಮತವಾಗಿದೆ–ಒಂದು ವೇಳೆ ಸ್ವಲ್ಪ ಬದಲಾವಣೆಯಾಗುವದೆಂದು ಕಂಡುಬಂದಲ್ಲಿ, ಪ್ರಕೃತ : ಷನು ತನ್ನಲ್ಲಿಯ ಉತ್ತಮಾಂಶವನ್ನು ಹಿಂದಿನ ಪ್ರಕಟಿಸಲಿಲ್ಲವೆಂದು ಅರ್ಥವಾಗುವದು. ಬಡತನ ಹ ಅಭದ್ರತೆಯಲ್ಲಿರುವ ಬಾಲಕರು ಉತ್ತಮ ಸ್ಥಿತಿಂ ಬಂದಾಗ್ಗೆ ಒಳ್ಳೇ ಚನ್ನಾಗಿ ತಮ್ಮ ನೈಪುಣ್ಯ ಪ್ರಕಟಿಸುವರು.

ಬುದ್ಧಿಮಾನದ ಪ್ರಮಾಣದನ್ವಯ ಜನರ ಸಂ ಪ್ರಮಾಣವನ್ನು ನಿರ್ಧರಿಸಬಹುದೇ ? ಸ್ವಾಭಾವಿಕ ೧೦೦ ಇಲ್ಲವೆ "ಸಾಮಾನ್ಯ" ಬುದ್ಧಿಮಾನವುಳ್ಳ ಸಂಖ್ಯೆಯೇ ಅತ್ಯಧಿಕವಾದುದು. ೯೦ ರಿಂದ ೧೦ ವರೆಗಿನ (ಸಾಮಾನ್ಯ) ಬುದ್ಧಿಮಾನವುಳ್ಳವರು ೧೦೦ ೪೬·೫ ರಂತೆ ಸಂಖ್ಯೆಯುಳ್ಳವರಾಗಿದ್ದಾರೆ. ೧೧೦ ರಿ ೧೧೯ರ ವರೆಗೆ ಬುದ್ಧಿಮಾನವುಳ್ಳವರು ಇಲ್ಲವೆ 'ಶ್ರೇಷ್ಠ ಇವರ ಶೇಕಡಾ ಸಂಖ್ಯೆ ೧೮·೧ ಇದೆ. ೧೨೦ ರಿ ೧೨೯ ರ ವರೆಗಿನವರ ಸಂಖ್ಯೆ ೮·೨ ಹಾಗು ೧೩೦ ರಿ ೧೩೯ ರ ವರೆಗಿನವರ ಸಂಖ್ಯೆ ೩·೧ ಹೀಗೆ ಇವೆ. ಇವ "ಶ್ರೇಷ್ಠತರರು". ೧೪೦ ರಿಂದ ೧೪೯ ರ ವರೆಗಿನವ ಅಂದರೆ "ಮೇಧಾವಿ ಸನ್ನಿಹಿತರು" ಶೇಕಡಾ ೧·೧ ರ ಮಾತ್ರ ಇದ್ದಾರೆ.

ಬುದ್ಧಿಮಾನ ಪರೀಕ್ಷಣದಲ್ಲಿ ಅಭ್ಯಸನಗಳಾವವ ಕ್ಯಾಲಿಫೋರ್ನಿಯಾದ ಸ್ಟಾನ್‌ಫರ್ಡ ವಿಶ್ವವಿದ್ಯಾಲ ದಲ್ಲಿ ಬಳಸಲಾಗುವ ಕೆಲವು ಮಾದರಿಯ ಅಭ್ಯಸನಗ ಹೀಗಿವೆ. ಅವುಗಳಲ್ಲಿ 'ಬೀನೆ' ಪ್ರಶ್ನೆಗಳೇ ಹೆಚ್ಚಾಗಿ

ಅದೇ ಆಕಾರಗಳ ತೂತುಗಳಲ್ಲಿ ಅದೇ ಆಕಾರಗ ಕಟ್ಟಿಗೆಯ ತುಂಡುಗಳನ್ನು ಸರಿಯಾಗಿ ಸೇರಿಸುವ ೨-೩ ವರ್ಷಗಳ ಮಗುವಿಗೆ ಗೊತ್ತಿರಬೇಕು. ೪-ವಯೋಮಾನದ ಮಗುವಿಗೆ ೩–೪ ಬೇರೆ ಬೇರೆ ವಸ ಗಳನ್ನು ತೋರಿಸಬೇಕು—ಅವುಗಳಲ್ಲಾವುದೊಂದನ ಹೊರಗೆ ತೆಗೆದು ಇಲ್ಲವೆ ಮುಚ್ಚಿ ಮತ್ತೊಮ್ಮೆ ತೋರಿ ದಲ್ಲಿ, ಯಾವ ವಸ್ತುವು ಇಲ್ಲದಾಗಿದೆಂಬದನ್ನು ಆತನ ಹೇಳಲು ಬರಬೇಕು. ಕೊಟ್ಟ ಚಕ್ರವ್ಯೂಹದಿಂದ ಪಾ ಗುವ ದಾರಿಯನ್ನು ಪೆನ್ಸಿಲ್‌ದಿಂದ ತೋರಿಸು ಜಾಣ್ಮೆಯು ೬ ನೆಯ ವರ್ಷದ ಬಾಲಕನಿಗೆ ಗೊತ್ತಿ ಬೇಕು.

ತನ್ನ ಮನೆಗೆ ಬೆಂಕಿ ಹತ್ತಿದಾಗ್ಗೆ ಒಬ್ಬ ಮನುಷ್ಯನು ಊಟ ಮಾಡುತ್ತಿರುವ ಚಿತ್ರವನ್ನು ೭ನೇ ವರ್ಷದ ಬಾಲಕನಿಗೆ ತೋರಿಸಿದಲ್ಲಿ, ಆತನು ಅದರಲ್ಲಿಯ ದೋಷವನ್ನು ಕಂಡುಹಿಡಿಯಲು ಸಮರ್ಥನಾಗಬೇಕು. ಒಂದೇ ನಾದವನ್ನುಂಟು ಮಾಡುವ ಬೇರೆ ಬೇರೆ ಶಬ್ದಗಳನ್ನು ಒಂದೇ ನಿಮಿಷದಲ್ಲಿ ಹೇಳುವ ಸಾಮರ್ಥ್ಯವು ೯ನೆಯ ವರ್ಷದ ಹುಡುಗನಲ್ಲಿರಬೇಕು.

ತನಗೆ ಹೇಳಿದ ಚಿಕ್ಕ ಕಥೆಯ ಅರ್ಥವನ್ನು ಹೇಳುವ ಜಾಣ್ಮೆಯು ೧೨ ವರ್ಷಗಳ ಬಾಲಕನಲ್ಲಿ ಇರಬೇಕು. ಅಲ್ಲದೆ ೫ ಸ್ಥಾನಗಳುಳ್ಳ ಅಂಕಿಗಳನ್ನು ಆತನು ತಿರುವು ಮುರುವಾಗಿ ಹೇಳಲು ಬರಬೇಕು.

ಹಿಂದುಸ್ತಾನದಲ್ಲಿ ಬುದ್ಧಿಮಾಪನ ಪರೀಕ್ಷೆಗಳನ್ನು ಬಳಸುವದು ರಾಷ್ಟ್ರದ ಹಿತದ ದೃಷ್ಟಿಯಿಂದ ಅತ್ಯಂತ ಅವಶ್ಯವಿದೆ. ಈ ದಿಶೆಯಲ್ಲಿ ಶಿಕ್ಷಣ ತಜ್ಞರು ಮುಂದಾಗಲೆಂದು ಆಶಿಸುತ್ತೇವೆ.

[ಬ್ರೂಸ್ ಬ್ಲಿವೆನ್‌ರ ಲೇಖನದ ಆಧಾರದಿಂದ]

★

ಅಪೂರ್ವ ಯಶಸ್ಸು

ಶಿವನಗೌಡ ಜಾಯನಗೌಡ ಪಾಟೀಲ

ಧಾರವಾಡ ೧-೭-೧೯೫೪

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟೀಸಿಂಗ ಸ್ಕೂಲಿನ ವಿದ್ಯಾರ್ಥಿಯಾದ ಕುಮಾರ **ಶಿವನಗೌಡ ಜಾಯನಗೌಡ ಪಾಟೀಲ** ಈತನು ಈ ಸಲದ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ (ಜೀವನ-ಶಿಕ್ಷಣ ವಿಭಾಗ) ಹೆಚ್ಚು ಗುಣಗಳನ್ನು ಪಡೆದು ಉತ್ತೀರ್ಣನಾಗಿದ್ದಾನೆ; ಅಲ್ಲದೆ ಧಾರವಾಡ ಕೇಂದ್ರಕ್ಕೆ ಮೊದಲನೇ ನಂಬರು ನಿಂತು, ಅಪೂರ್ವ ಯಶಸ್ಸಿಗೆ ಪಾತ್ರನಾಗಿದ್ದಾನೆ. ಈ ಸಲದ ಹಾಯಸ್ಕೂಲ ಸ್ಕಾಲರಶಿಪ್ಪನ್ನೂ ಪಡೆದಿದ್ದಾನೆ. ಈತನು ಇವೇ ಶಾಲೆಯಿಂದ ಮಿಡಲ್‌ಸ್ಕೂಲ ಸ್ಕಾಲರಶಿಪ್ಪನ್ನೂ ಪಡೆದಿದ್ದನು.

ಕು. ಶಿವನಗೌಡನ ಪ್ರಾ. ಶಿಕ್ಷಣದ ಬಹು ಭಾಗವೆಲ್ಲ ಈ ಶಾಲೆಯಲ್ಲಿ ಸಾಗಿ, ಇದೀಗ ಅದ್ವಿತೀಯ ವಿಷಯದೊಂದಿಗೆ ಕೊನೆಗೊಂಡಿತೆಂಬುವದು ಆದರ್ಶದ ಸಂಗತಿಯಾಗಿದೆ. ಈತನು ಇಡೀ ಶಾಲೆಯ ಮುಖ್ಯ ಮಂತ್ರಿಯಾಗಿದ್ದನಲ್ಲದೆ, ಗೆಳೆಯರಿಗೆ ತುಂಬಾ ಪ್ರೀತಿಯುವನಾಗಿ, ಗುರುಗಳ ಹೊಗಳಿಕೆಗೆ ಪಾತ್ರನಾಗಿ ನಚ್ಚುಮೆಚ್ಚಿನವನಾಗಿದ್ದನು.

ಸತತ ಪರಿಶ್ರಮ, ಸಾಹಸ ಮತ್ತು ಪವಿತ್ರಶ್ರದ್ಧೆಗಳುಳ್ಳವರಿಗೆ ವಾಗ್ದೇವಿಯ ವರವು ಹಾಲಿನಲ್ಲಿಯ ಬೆಣ್ಣೆಯಂತೆ ಸತ್ಯಸಿದ್ಧಿಯಾಗಿದೆಯೆಂಬ ಮಾತನ್ನು ಕು. ಶಿವನಗೌಡನು ವಿದ್ಯಾರ್ಥಿವೃಂದಕ್ಕೆ ಬೀರಿದ್ದಾನೆ. ಆತನ ಭಾವೀ ವಿದ್ಯಾಭ್ಯಾಸವೆಲ್ಲ ಇದೇ ರೀತಿಯಿಂದ ಸಾಗಲೆಂದು ಹಾರೈಕೆ!

—ಮುಖ್ಯ ಗುರುಗಳು

ನೇಯ್ಗೆಯ ತರಬೇತಿ ವರ್ಗದ ಜೂನ ತಿಂಗಳ ವರದಿ

ಧಾರವಾಡ — ಜುಲೈ-೨.

ಇಲ್ಲಿ ನಡೆಯುತ್ತಲಿರುವ ನೇಯ್ಗೆಯ ತರಬೇತಿ ವರ್ಗವು ಸಂಚಾಲಕರ ನೇತೃತ್ವದಲ್ಲಿ ಉತ್ತಮೋತ್ತಮ ರೀತಿಯಿಂದ ನಡೆಯುತ್ತಿದ್ದು ಪ್ರಗತಿದೆಶೆಯಲ್ಲಿ ಸಾಗಹತ್ತಿದೆ. ಪ್ರತಿಯೊಬ್ಬ ಶಿಕ್ಷಕ ಶಿಕ್ಷಕಿಯರು ಪ್ರಾತಃಕಾಲದಿಂದ ಕೌಟುಂಬಿಕ ಕೆಲಸಗಳೊಂದಿಗೆ ಕಾರ್ಯ ಪ್ರಾರಂಭಿಸಿ ಪ್ರಾರ್ಥನೆ ಹಾಗು ನೂಲುವ ನೇಯುವ ಕ್ರಿಯೆಗಳೆಲ್ಲವನ್ನು ಅಸ್ಥೆಯಿಂದಲೂ ಹುರುಪು ಹುಮ್ಮಸಿನಿಂದಲೂ ಮಾಡುತ್ತಿದ್ದಾರೆ. ಇದಲ್ಲದೆ ತಾತ್ವಿಕ ವಿವೇಚನೆಯು ತನ್ನದೇ ಆದ ರೀತಿಯಲ್ಲಿ ಸರಿಯಾಗಿ ಸಾಗುತ್ತಲಿದೆ.

ಕೆಳಗಿನ ಮಹನೀಯರು ನಮ್ಮ ವರ್ಗಕ್ಕೆ ಭೆಟ್ಟಿ ಕೊಟ್ಟು ಉಪದೇಶಪರ ಉಪನ್ಯಾಸವನ್ನಿತ್ತರು.

ತಾರಿಖು	ಹೆಸರು	ವಿಷಯ
೧-೬-೫೪	ಶ್ರೀ. ವ್ಹಿ. ಆರ್. ಮುಧೋಳಕರ, ಮಾಳಮಡ್ಡಿ ಹಾಯಸ್ಕೂಲ ಧಾರವಾಡ	ಜ್ಞಾನ
೫-೬-೫೪	ಶ್ರೀ. ಬಿ. ಎಮ್. ಮಿಮಾಂಸಿ, ಡೆಪುಟಿ ಡಾಯರೆಕ್ಟರ ಅಫ್ ಎಜ್ಯುಕೇಶನ್ ಪುಣೆ	ನಾವು ಪಡೆಯುತ್ತಿರುವ ಶಿಕ್ಷಣ ಹಾಗು ಹೊಣೆಗಾರಿಕೆ.
೯-೬-೫೪	ಶ್ರೀ. ಬಿ. ಎ. ದೇಶಪಾಂಡೆ, ಗ್ರಾಮಾಭಿವೃದ್ಧಿ ಗೌರವ ಸದಸ್ಯರು ಧಾರವಾಡ	ಗ್ರಾಮಾಭಿವೃದ್ಧಿ,ಅದರಲ್ಲಿ ಶಿಕ್ಷಕರ ಹೊಣೆ
೧೨-೬-೫೪	**ಶ್ರೀ. ಎಮ್. ರಮಾನಂದ, ಸ್ಕೂಲಬೋರ್ಡ ಸದಸ್ಯರು ಧಾರವಾಡ**	ಖಾದಿ ಹಾಗು ಸ್ವಾವಲಂಬನ
೧೭-೬-೫೪	ಶ್ರೀ. ಕೆ. ಎಚ್. ಹುಚ್ಚಣ್ಣನವರ, **ಸಮಾಜ ಕಾರ್ಯಕರ್ತರು ಅಗಡಿ**	ಪ್ರಾರ್ಥನೆ ಅದರ ಮಹತ್ವ
೨೮-೬-೫೪	ಶ್ರೀ. ಎಸ್. ಸಿ. ಗೋಕಾವಿ, **ಬಾಸೆಲ್ ಮಿಶನ್‌ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲ ಧಾರವಾಡ**	ಮೂಲೋದ್ಯೋಗ
೨೯-೬-೫೪	ಶ್ರೀ. ನಗೀನದಾಸ ಪರೀಖ, ಗ್ರಾಮೋದ್ಯೋಗ ಸಮಿತಿ ಇನಸ್ಪೆಕ್ಟರ, ಧಾರವಾಡ	ನೂಲುವ ನೇಯುವ ಕ್ರಿಯೆಗಳು ಮತ್ತು ನವೀನ ರಾಟಿ ಪ್ರದರ್ಶನ.

ಈ ರೀತಿ ನೋಲ್ಯಾಣಿಸಿದ ಮಹನೀಯರ ಉಪನ್ಯಾಸಗಳಲ್ಲದೆ ಶ್ರೀ. ಎಸ್. ಬಿ. ಪಾಟೀಲ ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಹಾಸ್ಟೆಲ್ ಸುಪರಿಂಟೆಂಡೆಂಟರು ಪದಾರ್ಥಗಳ ರೂಪಾಂತರ, ಹಿಮ ಪ್ರದೇಶದ ಜನಜೀವನ, ಅಮೇರಿಕಾ ಸರಕಾರವು ಸುಶಿಕ್ಷಿತರಿಗೆ ಮಾಡುವ ಸಹಾಯ ಇತ್ಯಾದಿಗಳ ಬಗೆಗೆ ಮಾಯಾ ಲಾಂದ್ರವನ್ನು ತೋರಿಸಿದರು.

ಈ ತಿಂಗಳಲ್ಲಿ ನಮ್ಮ ವರ್ಗವು ಇಲ್ಲಿಯ ರೇಡಿಯೋ ಕೇಂದ್ರವನ್ನು ಸಂದರ್ಶಿಸಿತು.

ಪ್ರಾಥಮಿಕ ಶಿಕ್ಷಣ ಪ್ರಪಂಚ

(ಸುದ್ದಿ-ಸಾರ-ಸಂಗ್ರಹ)

(೧೯೫೪ ಜೂನದಿಂದ ೧೯೫೪ ಜುಲೈ ೮ರ ವರೆಗೆ)

ಮುಂಬಯಿ ೧. ಶ್ರೀ. ಎಂ. ಸಿ. ತಂಬದ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ, ಶ್ರೀ. ಎನ್. ಜಿ. ಮುತ್ತಗೇಕರ, ಕರ್ನಾಟಕ ಕಾಲೇಜ ಧಾರವಾಡ, ಶ್ರೀ. ಎಲ್. ಎ. ಕಲಬುರ್ಗಿ, ಕರ್ನಾಟಕ ಹೈಸ್ಕೂಲ, ಧಾರವಾಡ ಇವರು ಆರ್ಟ ಮಾಸ್ತರ ಪರೀಕ್ಷೆಯಲ್ಲಿ ಮತ್ತು ಶ್ರೀ. ವ್ಹಿ. ಸಿ. ನಾಲಗತ್ತಿ, ಕೆ.ಎಲ್.ಇ ಸೊಸಾಯಟಿ ಟ್ರೇನಿಂಗ ಕಾಲೇಜ, ಬೆಳಗಾಂವಿ ಇವರು ಧಾರವಾಡ ಭಾಗದಿಂದ ೧೯೫೪ರಲ್ಲಿ ಜರುಗಿದ ಡ್ರಾಯಿಂಗ ಮಾಸ್ತರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಡಂಬಳ ೨೪. ಶ್ರೀ. ವ್ಹಿ. ಆರ್. ಸೊರಟೂರ ಅವರ ಅಧ್ಯಕ್ಷತೆಯಲ್ಲಿ ಮೆ|| ಗಜೇಂದ್ರಗಡಕರ, ಡಿ.ಸಿ.ಸಿ. ಅವರಿಂದ ವಾಗವಿವಾದ ಮಂಡಳ, '**ನೇಗಿಲಯೋಗಿ**' ಕೈಬರೆಹದ ಸಾಪ್ತಾಹಿಕ ಪತ್ರಿಕೆಯು ಉದ್ಘಾಟನೆಯಾಯಿತು ಅನೇಕ ಮಹನೀಯರು ಮನನೀಯ ಭಾಷಣಗಳನ್ನು ಮಾಡಿದರು. ಸರ್ವ ಶ್ರೀ. ಸೊರಟೂರ ೧೧ ರೂ. ಜಂದೀಸಾಹೇಬ ಅತ್ತಾರ ೫ ರೂ. ಬಸಪ್ಪ ಕೊಂತಿಕಲ್ಲ ೫ ರೂ. ಶ್ರೀ. ಬಸಪ್ಪ ಹತಪದ ೫ ರೂ. ಶ್ರೀ. ವೆಂಕಪ್ಪ ಗಡಿಗಿ ೪ ರೂ. ಅನಂತಗೌಡ ಪಾಟೀಲ ೫ ರೂ. ರಹಿಮಾನಸಾಬ ಆಳವುಂಡಿ ೫ ರೂ. ಪದ್ಮಗೌಡ ಪಾಟೀಲ ೫ ರೂ. ಮೆ|| ಗಜೇಂದ್ರಗಡಕರ ೫ ರೂ. ಹುಚ್ಚುಸಾಹೇಬ ೨ ರೂ. ವೀರಪ್ಪ ಬುಗುಟಿ ೨ರೂ. ಸಹಾಯ ಧನವನ್ನು ಶಾಲೆಗೆ ಅರ್ಪಿಸಿದರು.

ಮುಂಡಗೋಡ ೬. ಶ್ರೀ. ಧರ್ಮಪ್ಪ ಚಿವಟೆ, ಚೇರಮನ್ ವಿವಿಧೋದ್ದೇಶ ಸಂಘ, ಅವರ ಹಸ್ತದಿಂದ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸ್ಥಾನಪಡೆದು ಉತ್ತೀರ್ಣರಾದ ಚಾಡಳ್ಳಿ, ನ್ಯಾಸರ್ಗಿ, ಕೆಳಗಿನಕೊಪ್ಪದ ಶಾಲೆಗಳ ಮೂವರು ವಿದ್ಯಾರ್ಥಿಗಳಿಗೆ ಬಹುಮಾನ ಕೊಡಬೇಕೆಂದು ೮೫ ರೂಪಾಯಿಗಳನ್ನು, ಮುಂಡಗೋಡ ಶಾಲೆಗೆ ೨೫ ರೂ. ಬೆಲೆಯ ಗ್ಲೋಬನ್ನು ಕೊಡುವ ಆಶ್ವಾಸನವಿತ್ತರು. ಈ ವರ್ಷ ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಕುಳಿತ ೧೪ ವಿದ್ಯಾರ್ಥಿಗಳಲ್ಲಿ ೯ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ತೇರಗಾಂವ ೧೪. ಕಳೆದ ವರ್ಷ ಪಾಸಾದ ವಿದ್ಯಾರ್ಥಿಗಳಿಗೆ ಶ್ರೀ. ಕೆ. ಆರ್. ಪ್ರಭು ಅವರಿಂದ ಪ್ರಮಾಣ ಪತ್ರ ವಿತರಣವಾಯಿತು. ಈ ವರ್ಷ ಮುಲ್ಕೀ ಪರೀಕ್ಷೆಯಲ್ಲಿ ಹತ್ತು ವಿದ್ಯಾರ್ಥಿಗಳಲ್ಲಿ ಐವರು ಪಾಸಾಗಿದ್ದಾರೆ.

ಕೋಟಮಚಗಿ ೧೪. ಈ ವರ್ಷ ಮುಲ್ಕೀ ಪರೀಕ್ಷೆಯಲ್ಲಿ ೧೨ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ.

ಬನವಾಸಿ ೨೩. ಇದೇ ೨೨ನೆಯ ತಾರೀಖಿನ ದಿನ ಸಂಸ್ಕಾರ ಕೇಂದ್ರವನ್ನು ಸ್ಥಾಪಿಸಲಾಯಿತು. ಅಂಬೇಹರಿಜನ ಕೇರಿಯಲ್ಲಿ ಸಭೆಯಾಯಿತು. ಶ್ರೀ. ಮಳಗಿ, ಅ| ಡೆ| ಎ| ಇ| ಅವರು ಸಂಸ್ಕಾರ ಕೇಂದ್ರದ ಉದ್ದೇಶವನ್ನು ತಿಳಿಸಿ ಹೇಳಿದರು.

ಪ್ರಾಥಮಿಕ ಶಿಕ್ಷಣ

ಸಂಪಗಾಂವ ೨. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ಐವರಲ್ಲಿ ನಾಲ್ವರು ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಹೆರಕಲ್ಲ ೨೫. ಈ ವರುಷ ಮುಲ್ಕೀ ಪರೀಕ್ಷೆಗೆ ಕುಳಿತ ೧೨ ವಿದ್ಯಾರ್ಥಿಗಳಲ್ಲಿ ೮ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಬಾಗಲಕೋಟೆ ೧. ಉರ್ದು ಗರ್ಲ್ಸ ಸ್ಕೂಲ ನಂ. ೧ ರಿಂದ ಈ ವರ್ಷ ಮುಲ್ಕೀ ಪರೀಕ್ಷೆಗೆ ಕುಳಿತ ಇಬ್ಬರೂ ವಿದ್ಯಾರ್ಥಿನಿಯರು ಹೆಚ್ಚು ಗುಣ ಪಡೆದು ಪಾಸಾಗಿದ್ದಾರೆ.

ಮುಗಳಖೋಡ ೩. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ೧೧ ವಿದ್ಯಾರ್ಥಿಗಳಲ್ಲಿ ಐವರು ಪಾಸಾಗಿದ್ದಾರೆ. ಶ್ರೀ, ಜೋತೆಪ್ಪ ಶಿವಪ್ಪ ಹೊಸೂರ ಎಂಬವನು ಇಡೀ ಗೋಕಾಕ ಕೇಂದ್ರಕ್ಕೆ ೧ನೆಯ ಸ್ಥಾನ ಪಡೆದು ಉತ್ತೀರ್ಣನಾಗಿದ್ದಾನೆ.

ನಿಂಬಾಳ ೭. ಈ ಸಲದ ಮುಲ್ಕೀ ಪರೀಕ್ಷೆಯಲ್ಲಿ ೮ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಗದಗ ೭. ಸೆಂಟ್ರಲ್ ಸ್ಕೂಲಿನಿಂದ ಮುಲ್ಕೀ ಪರೀಕ್ಷೆಗೆ ಕುಳಿತ ೫೦ ವಿದ್ಯಾರ್ಥಿಗಳು ಶೇಗಡೆ ಹೊಂದಿದ್ದಾರೆ. ಕುಮಾರ ಬಸವಯ್ಯ ಗೂಳಯ್ಯ ಪೂಜಾರ ಎಂಬ ವಿದ್ಯಾರ್ಥಿಯು ಗದಗ ಕೇಂದ್ರಕ್ಕೇ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾಗಿದ್ದಾನೆ. ಶ್ರೀ. ರಾ. ವೆಂ. ಕುಲಕರ್ಣಿಯು ದ್ವಿತೀಯ ಸ್ಥಾನ ಪಡೆದು ಪಾಸಾಗಿದ್ದಾನೆ

ಮಂಗಳವಾಡ ೨೧. ಈ ವರ್ಷದ ಮುಲ್ಕೀ ಪರೀಕ್ಷೆಗೆ ಕುಳಿತ ೧೪ ವಿದ್ಯಾರ್ಥಿಗಳಲ್ಲಿ ೭ ವಿದ್ಯಾರ್ಥಿಗಳು ಯಶಸ್ವಿಯಾಗಿದ್ದಾರೆ.

ಅಲ್ನಾವರ ೧೦. ವಾರ್ಷಿಕ ಪರೀಕ್ಷೆಯಲ್ಲಿ ಹಾಗೂ ವಿವಿಧ ವಿನೋದಾವಳಿಯಲ್ಲಿ ಮೇಲು ನಂಬರು ಬಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಮೆ। ರೆವರಂಡ—ಬಿಶಪ್ ಆಫ್ ಬೆಳಗಾಂವ ಅವರ ಹಸ್ತದಿಂದ ೫೦ ರೂ ಗಳನ್ನು ಹಂಚಲಾಯಿತು. ಮಕ್ಕಳಿಗೆ ದಿನಾಲು ಹಾಲು ಪೂರೈಸಲು ೨೦೦೦ ರೂ. ಬೆಲೆಯ ೫೦೦ ಪೌಂಡು ಹಾಲಿನ ಡಬ್ಬಿಗಳನ್ನು ಮೆ। ಬಿಶಪ್ ಬೆಳಗಾಂವ ಅವರು ಕೊಟ್ಟಿದ್ದಾರೆ.

ಶಂಕರಹಟ್ಟಿ ೮. ಈ ವರ್ಷದ ಮುಲ್ಕೀ ಪರೀಕ್ಷೆಗೆ ಕುಳಿತ ಏಳು ವಿದ್ಯಾರ್ಥಿಗಳಲ್ಲಿ ಐವರು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಕೆರೂರ ೧. ಗಂಡು ಮಕ್ಕಳ ಶಾಲೆಯಲ್ಲಿ ೨೧-೫-೫೪ ರಿಂದ ೨೮-೫-೫೪ ರ ವರೆಗೆ ಜಿಲ್ಹಾ ಗಾಂವಠೀ ಶಾಲಾ ಶಿಕ್ಷಕರ ಅಲ್ಪಾವಧಿ ತರಬೇತಿ ವರ್ಗವು ನಡೆಯಿತು. ಇದರ ಸಮಾರೋಪ ಸಮಾರಂಭವು ಜಿಲ್ಹಾ ಶಿಕ್ಷಣಾಧಿಕಾರಿಗಳಾದ ಶ್ರೀ. ರಾ. ರು. ಕುಪ್ಪಸದ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ವರ್ಷದ ಮುಲ್ಕೀ ಪರೀಕ್ಷೆಗೆ ಕುಳಿತ ೨೩ ರಲ್ಲಿ ೨೨ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಕೊಟಬಾಗಿ ೨೦. ಬೇಸಿಕ್ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಗೆ ಕುಳಿತ ೨೩ ವಿದ್ಯಾರ್ಥಿಗಳಲ್ಲಿ ೨೦ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಕು. ಸೋಮನಗೌಡ ಕ. ಪಾಟೀಲ ಈತನು ಹೆಚ್ಚು ಗುಣಗಳನ್ನು ದೊರಕಿಸಿದ್ದರಿಂದ ಶ್ರೀ. ಕ. ಪಾಟೀಲ ಹಾಗು ರಾಮಚಂದ್ರ ಕೊಪ್ಪದ ಇವರಿಟ್ಟ ೭ ರೂ. ಬಹುಮಾನ ಹೊಂದಿದ್ದಾನೆ.

ಪ್ರಾಥಮಿಕ ಶಿಕ್ಷಣ ಪ್ರಪಂಚ

ಸೋರಗಾಂವ ೨೫. ಸಹಕಾರಿ ಸುವರ್ಣ ಮಹೋತ್ಸವದ ಅಂಗವಾಗಿ ಕೊನೆಯ ದಿನ ನಿವೃತ್ತ ಕಾಟನ್ ಸುಪರಿಂಟೆಂಡೆಂಟ ಶ್ರೀ. ಎ. ಎಸ್. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿತ್ತು. ಶ್ರೀ ಬಲಭೀಮ ಸ್ಟೋರ ಎಂಬ ಬಾಲಕರ ಸಹಕಾರಿ ಅಂಗಡಿಯ ಉದ್ಘಾಟನೆಯಾಯಿತು.

ರಾಮಪೂರ ೨೫. ಈ ಸಲದ ಮುಲ್ಕೀ ಪರೀಕ್ಷೆಗೆ ಕುಳಿತ ಶ್ರೀ. ನಿಂ. ಅ. ಭಸ್ಮೆ, ಎಂಬ ವಿದ್ಯಾರ್ಥಿಯು ಜಮಖಂಡಿ ಕೇಂದ್ರಕ್ಕೆ ಪ್ರಥಮ ಸ್ಥಾನ ಮತ್ತು ಜಿಲ್ಹೆಗೆ ೩ನೆಯ ಸ್ಥಾನ ಪಡೆದು ಉತ್ತೀರ್ಣನಾಗಿದ್ದಾನೆ.

ಧಾರವಾಡ ೨೯. ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ಜರುಗುತ್ತಿರುವ ಪ್ರಾಥಮಿಕ ಶಿಕ್ಷಕರ ಮೂಲೋದ್ಯೋಗದ (ನೆಯ್ಗೆ) ತರಬೇತಿ ವರ್ಗದ ಹಾಗು ಶಿಕ್ಷಕ ವಿದ್ಯಾರ್ಥಿಗಳ ಸಭೆಯಲ್ಲಿ ಶ್ರೀ. ಎಸ್. ಬಿ. ಪಾಟೀಲ ಅವರ ಹಿರಿಯತನದಲ್ಲಿ ಧಾರವಾಡ ಗ್ರಾಮೋದ್ಯೋಗ ಸಮಿತಿಯ ಇನಸ್ಪೆಕ್ಟರರಾದ ಶ್ರೀ. ನಗೀನದಾಸ ಪರೀಖ ಅವರು ನೆಯ್ಗೆಯ ವರೆಗಿನ ಕ್ರಿಯೆಗಳನ್ನು ಕುರಿತು ವಿವೇಚನಾತ್ಮಕವಾಗಿ ಭಾಷಣ ಮಾಡಿದರು. ಈ ಕ್ರಿಯೆಗಳಲ್ಲಿ ಹಂಜುವ ಕ್ರಿಯೆಯು ಮುಖ್ಯವಾದದ್ದು, ನೂಲುವಾಗ ಹುರಿಯನ್ನು ಹೆಚ್ಚಾಗಿಯೂ ಕಡಿಮೆಯಾಗಿಯೂ ಹಾಕದೆ ಮಧ್ಯಮ ಹುರಿಯನ್ನು ಹಾಕಬಾರದು. ಎಳೆಗಳು ಹರಿದಾಗ ಜೋಡಿಸುವ ಕ್ರಿಯೆಯೂ ಮುಖ್ಯವಾದುದು, ನೇಯುವ ಮುನ್ನ ಗಂಜಿ ಹಚ್ಚುವ ಕ್ರಿಯೆಯೂ ಪ್ರಾಮುಖ್ಯವಾದುದು, ಎಂದು ಹೇಳಿದರು ಮತ್ತು ತಾವೇ ರಚಿಸಿದ ಮತ್ತು ಅಲ್ಪಾವಧಿಯಲ್ಲಿ ಹೆಚ್ಚು ನೂಲು ನೂಲಲು ಯೋಗ್ಯವಾಗಿರುವ ಕಡಿಮೆ ವೆಚ್ಚದ ರಾಟೆಯ ಪ್ರಯೋಗವನ್ನು ಮಾಡಿ ತೋರಿಸಿದರು. ಶಿಕ್ಷಕ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರವನ್ನು ಕೊಟ್ಟರು. ಉತ್ತರವನ್ನು ಕೊಡುವಾಗ ಅವಶ್ಯಕತೆಗಳು ಬೆಳೆದ ಇಂದಿನ ಯುಗದಲ್ಲಿ ಅನೇಕ ಬಟ್ಟೆಗಳ ತೊಡವುಗಳ ಆವಶ್ಯಕತೆಯೂ ಬೆಳೆದಿದೆ. ಈ ಆವಶ್ಯಕತೆಯನ್ನು ಪೂರೈಸಬೇಕಾದರೆ ತಕಲಿ, ಸದ್ಯದ ನೂಲುವ ರಾಟೆಗಳು ನಮಗೆ ಉಪಯುಕ್ತವಾಗಲಾರವು. ಅಲ್ಪ ಆವಧಿಯಲ್ಲಿ ಹೆಚ್ಚು ನೂಲನ್ನು ಹೊರಡಿಸಲು ಯೋಗ್ಯವಾದ ರಾಟೆಯು ಬೇಕು, ಆದರೆ ಅದು ದೊಡ್ಡ ಯಂತ್ರವಾಗಿ ಪರಿಣಮಿಸುವಂತೆ ಇರಬಾರದು. ಎಂಬುದಾಗಿಯೂ ಹೇಳಿದರು.

ಕಾರವಾರ ೧. ಇಲ್ಲಿಯ ಸರಕಾರೀ ಟ್ರೇನಿಂಗ ಕಾಲೇಜದ ಪರವಾಗಿ ಸಮಾಜ ಶಿಕ್ಷಣ ಕಾರ್ಯಕರ್ತರ ಅಲ್ಪಾವಧಿ ತರಬೇತಿ ವರ್ಗವನ್ನು ತೆರೆಯಲು ನಿಶ್ಚಯಿಸಿದಂತೆ ದಿನಾಂಕ ೧೭—೫—೫೪ ನೇ ದಿನ ಕಾರವಾರದ್ದ ನಗರ ಸಭೆಯ ಅಧ್ಯಕ್ಷರೂ ಸುಪ್ರಸಿದ್ಧ ವಕೀಲರೂ ಆದ ಶ್ರೀ. ಎಸ್. ಡಿ. ಗಾಂವಕರ ಇವರಿಂದ ಉದ್ಘಾಟಿಸಲಟ್ಟಿತು. ಈ ಸಲದ ವರ್ಗಕ್ಕೆ ಜಿಲ್ಹೆಯ ಬೇರೆ ಬೇರೆ ಸ್ಥಳಗಳಿಂದ ಒಟ್ಟು ೩೭ ಕಾರ್ಯಕರ್ತರು ಆಗಮಿಸಿದ್ದರು. ಅವರಲ್ಲಿ ಈರ್ವರು ಮಹಿಳೆಯರಿದ್ದರು. ಕಾರ್ಯಕರ್ತರು ಒಳ್ಳೇ ಉತ್ಸಾಹದಿಂದ ತರಬೇತಿಯನ್ನು ಪಡೆದರು. ಟ್ರೇನಿಂಗ ಕಾಲೇಜದ ಪರವಾಗಿ ಶ್ರೀಮಾನ್ ಶ್ರೀ. ನ. ಕೊಳಗಲ್‌ರವರೂ ಡೆಪ್ಯೂಡಿ ಆಫೀಸಿನ ಪರವಾಗಿ ಶ್ರೀ. ಕೃ. ವು. ಅಂಕ್ಲೇಕರರವರೂ ಈ ವರ್ಗದ ಚಾಲಕರಾಗಿದ್ದರು.

ಬೇರೆ ಬೇರೆ ಖಾತೆಗಳಿಂದ ೧೪ ಜನ 'ಅಧಿಕಾರಿಗಳು ಬಂದು ತಮ್ಮ ತಮ್ಮ ಖಾತೆಗಳ ಬಗ್ಗೆ ಸಮಾಜ ಶಿಕ್ಷಣ ಕಾರ್ಯ ಕರ್ತರಿಗೆ ಬೇಕಾಗುವ ಜ್ಞಾನವನ್ನು ಮಾಡಿಕೊಟ್ಟರು. ತಾ. ೨೧ನೇ ದಿನಾಂಕ ಈ ಜಿಲ್ಹೆಯ ವಿದ್ಯಾಧಿಕಾರಿಗಳಾದ ಶ್ರೀ. ರಾ. ರು. ಕುಪ್ಪಸದರವರು ಈ ವರ್ಗಕ್ಕೆ ಸಂದರ್ಶನವಿತ್ತರು ಹಾಗು ತಾ. ೨೭ನೇ ದಿನಾಂಕ ಕರ್ನಾಟಕ ಪ್ರದೇಶದ ಸಮಾಜ ಶಿಕ್ಷಣ ಸಮಿತಿಯ ಚೇರಮನ್ನರಾದ ಶ್ರೀ. ಆರ್. ಕೆ. ಮೆಣಶಿಯವರೂ ಸಂದರ್ಶನವಿತ್ತರು.

ಪ್ರಾಥಮಿಕ ಶಿಕ್ಷಣ

ಈ ೧೫ ದಿನಗಳ ಅವಧಿಯಲ್ಲಿ ಸಮಾಜ ಶಿಕ್ಷಣ ಕಾರ್ಯಕರ್ತರು "ಸರಸ್ವತಿ"ಯೆಂಬ ಕೈಬರಹದ ಪತ್ರಿಕೆಯನ್ನು ಸಿದ್ಧಗೊಳಿಸಿದರು. ಈ ಅವಧಿಯಲ್ಲಿ ೨ ಶಿಬಿರಾಗ್ನಿಗಳು ನಡೆದವು. ಮೊದಲನೆಯದು ೨೨ನೇ ದಿನಾಂಕ ಸ್ಕೂಲ ಬೋರ್ಡಿನ ವ್ಹಾಯಿಸ ಚೇರಮನ್ನರಾದ ಶ್ರೀ. ಕೆ. ಎನ್. ನಾಯಿಕ ಹೆಡ್‌ಮಾಸ್ತರ ನ್ಯೂ ಇಂಗ್ಲೀಷ ಸ್ಕೂಲ, ಬಾಡ ಇವರ ಅಧ್ಯಕ್ಷತೆಯಲ್ಲಿಯೂ ಎರಡನೆಯದು ೨೯—೫—೫೪ನೇ ದಿನ ಫಿಶರೀಜ ಸುಪರಿಂಟೆಂಡೆಂಟರಾದ ಶ್ರೀ. ಕಲ್ಯಾಣಿ ಇವರ ಅಧ್ಯಕ್ಷತೆಯಲ್ಲಿಯೂ ನಡೆದವು.

೩೦—೫—೫೪ನೇ ದಿನ ಜಿಲ್ಲೆಯ ವಿದ್ಯಾಧಿಕಾರಿಗಳಾದ ಶ್ರೀ. ರಾ. ರು. ಕುಪ್ಪಸದರವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭವು ಜರುಗಿತು. ಆ ದಿನ ಪ್ರಾರ್ಥನೆ ಭಜನೆಗಳಾದ ನಂತರ ಪ್ರಿನ್ಸಿಪಾಲರಾದ ಶ್ರೀ. ಎಮ್. ಎಚ್. ನಾಯಕರವರು ಪ್ರಾಸ್ತಾವಿಕವಾಗಿ ಮಾತನಾಡಿ ಅಲ್ಪಾವಧಿ ತರಬೇತಿ ವರ್ಗದವರು ಮಾಡಿದ ಕೆಲಸದ ಪರಿಚಯ ಮಾಡಿಕೊಟ್ಟರು. ನಂತರ ವರದಿ ವಾಚನ ಹಾಗೂ ಕಾರ್ಯಕರ್ತರ ಭಾಷಣಗಳಾದವು. ಆ ವೇಳೆ ಅಧ್ಯಕ್ಷರು 'ಸರಸ್ವತಿ' ಎಂಬ ಕೈಬರಹ ಪತ್ರಿಕೆಯನ್ನೂ ಕಾರ್ಯಕರ್ತರು ಬರೆದ ಪಟಗಳ ಪ್ರದರ್ಶನವನ್ನೂ ಉದ್ಘಾಟಿಸಿದರು. ಅವರು ತಮ್ಮ ಸಮಾರೋಪ ಭಾಷಣದಲ್ಲಿ ಕಾರ್ಯಕರ್ತರಲ್ಲಿ ಕಂಡುಬರುವ ವೈವಿಧ್ಯತೆಯನ್ನೂ ಉತ್ಸಾಹವನ್ನೂ ಹೊಗಳಿ ಸಾಕ್ಷರರ ಸಂಖ್ಯೆಯನ್ನೂ ಬೆಳಸಿ ಸಮಾಜ ಸೇವೆಯನ್ನು ಮಾಡಿರೆಂದು ಉಪದೇಶಿಸಿದರು. ಈ ಸಲದ ವರ್ಗವು ಒಳ್ಳೇ ಉತ್ಸಾಹದಿಂದಲೂ ಉತ್ತಮ ರೀತಿಯಿಂದಲೂ ಸಾಗಿದ ಬಗ್ಗೆ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಆ ನಂತರ ಆಭಾರಮನ್ನಣೆ, ವಂದೇ ಮಾತರಂ ಗಳೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಈ ಸಭೆಗೆ ಎ. ಓ. ಸಾಹೇಬರೂ ಡಿ. ಇ. ಆಯ್. ಸಾಹೇಬರೂ ಹಾಗೂ ಬೇರೆ ಬೇರೆ ಅಧಿಕಾರಿಗಳೂ ಸಭ್ಯಗೃಹಸ್ಥರೂ ಆಗಮಿಸಿದ್ದರು.

ಮುಂಬಯಿ ಸರಕಾರದ ಕನ್ನಡ ಸ್ಕೂಲ್ ಬುಕ್ ಕಮೀಟಿಯಿಂದ ಸುಬೋಧ ಬೀಜಗಣಿತ-ಭಾಗ ೩ ಎಂಬ ಪುಸ್ತಕವು ೧೦ನೆಯ ವರ್ಗಕ್ಕೆ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಇದನ್ನು ಬರೆದವರು ಶ್ರೀ. ಪಿ. ಎಸ್. ಕಟ್ಟಿ ಮತ್ತು ಶ್ರೀ. ಸಿ. ವ್ಹಿ. ಖಾನೋಳಕರ, ಪ್ರಕಾಶಕರು : ಓರಿಎಂಟ ಲಾಂಗಮನ್ಸ ಲಿಮಿಟೆಡ್ ಮುಂಬಯಿ. ಬೆಲೆ ೨ ರೂಪಾಯಿ ೪ ಆಣೆ.

ಹಿರೇಕೆರೂರ ೨೭-೬-೧೯೫೪ರ ಇಂದು ಇಲ್ಲಿಯ ಕ. ಗಂ. ಸಾಲೆಯಲ್ಲಿ ಗುರ್ರುಪ್ ಶಿಕ್ಷಕ ಶಿಕ್ಷಿಕೆಯರ ಸಮ್ಮೇಲನವು :ಶ್ರೀ. ಎಸ್. ಬಿ. ಹಳಕಟ್ಟಿ, ಅ. ಡೆ. ಎ. ಇ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಅಲ್ಲಿಯ ಶಿಕ್ಷಕರಾದ ಶ್ರೀ. ಕುಲಕರ್ಣಿಯವರು ೧ನೆಯ ಇಯತ್ತೆಗೆ ಮಾದರಿ ಪಾಠ ಕೊಟ್ಟರು.

ಧಾರವಾಡ ೨ ಜುಲೈ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ಚರ್ಚಾಕೂಟದ ಉದ್ಘಾಟನೆಯು 'ಪ್ರಪಂಚ'ದ ಸಂಪಾದಕರಾದ ಶ್ರೀ. ಪಾಟೀಲ ಪುಟ್ಟಪ್ಪನವರಿಂದ ಜರುಗಿತು. ಆಂದು ಶ್ರೀ. ಪುಟ್ಟಪ್ಪನವರು ಶಿಕ್ಷಕರ ಹೊಣೆಯನ್ನು ಕುರಿತು ಮನನೀಯ ಭಾಷಣ ಮಾಡಿದರು.